ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು
ಬಾಳೆಹೊನ್ನೂರು ದತ್ತಿ ಪ್ರಕಟಣೆ

# ಸಿದ್ಧಾಂತ ಶಿಖಾಮಣಿ

## ಸುಪ್ರಬೋಧಿನೀಟೀಕು

ಪರಿಷ್ಕರಣಕಾರರು
**ಜಿ. ಜಿ. ಮಂಜುನಾಥನ್**

ಶುಭವಾಗಲಿ
**ಕನ್ನಡ ಸಾಹಿತ್ಯ ಪರಿಷತ್ತು**
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

**SIDDHANTA SHIKHAMANI : Suprabodhinitiku**
Edited by : **G.G. Manjunathan**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 356+xxvi Price : Rs. 100=**00**

| | | |
|---|---|---|
| ಪ್ರಥಮ ಮುದ್ರಣ | : | ೨೦೦೪ |
| ಪ್ರತಿಗಳು | : | ೧೦೦೦ |
| ಬೆಲೆ | : | ಒಂದು ನೂರು ರೂಪಾಯಿಗಳು |

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣ ಸಮಿತಿ

ಅಧ್ಯಕ್ಷರು
ಧರ್ಮದರ್ಶಿ ಹರಿಕೃಷ್ಣ ಪುನರೂರು

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಪ್ರೊ. ಎಲ್.ಎಸ್. ಶೇಷಗಿರಿರಾವ್
ಡಾ.ಬಿ.ಆರ್. ಹಿರೇಮಠ
ಆಜ್ಜಂಪುರ ಜಿ. ಸೂರಿ

ಸಮ್ಮೇಳನಾಧ್ಯಕ್ಷರು
೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮
ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ
ಭಗವತ್ಪಾದರು ಬಾಳೆಹೊನ್ನೂರು-೫೭೭ ೧೧೨



## ಶುಭಾಶೀರ್ವಾದ ಸಂದೇಶ

ಮಾನವ ಜೀವನದ ವಿಕಾಸಕ್ಕೆ ಧರ್ಮ ಭದ್ರಬುನಾದಿ. ಧರ್ಮದ ತಳಹದಿಯ ಮೇಲೆ ನಿರ್ಮಾಣಗೊಂಡ ಸಮಾಜ ಉನ್ನತಿಗೆ ಕಾರಣವಾಗುತ್ತದೆ. ಸಾಹಿತ್ಯ ಮತ್ತು ಸಂಸ್ಕೃತಿ ಧರ್ಮದ ಎರಡು ಕಣ್ಣುಗಳು ಇದ್ದಂತೆ.

ಆಚಾರ್ಯರ ಸಾಹಿತ್ಯ ಬೆಟ್ಟದಷ್ಟು ಇದ್ದರೂ ಕೃಷಿ ಇಲ್ಲದೇ ಜನಮನಮುಟ್ಟಲಿಲ್ಲ. ಶ್ರೀ ಜಗದ್ಗುರು ರೇಣುಕಾದಿ ಪಂಚಾ ಚಾರ್ಯರು ಇಡೀ ಮಾನವ ಬದುಕಿಗೆ ಅನ್ವಯವಾಗುವ ವಿಶಾಲ ಸಂದೇಶವನ್ನು ಕೊಟ್ಟಿದ್ದಾರೆ. ಅಹಿಂಸಾದಿ ಧ್ಯಾನ ಪರ್ಯಂತರ ದಶಧರ್ಮ ಸೂತ್ರ ನಿರೂಪಿಸಿ ಮನುಕುಲದ ಏಳಿಗೆಗೆ ಅವಿರತ ಶ್ರಮಿಸಿದ್ದಾರೆ. ಅವರ ಆ ಒಲವು-ನಿಲವು
ಎಂದೆಂದೂ ಮರೆಯಲಾಗದು.

ಆಚಾರ್ಯರು ಧಾರ್ಮಿಕ ಸತ್ಕ್ರಾಂತಿಯ ಜೊತೆಗೆ ಸಾಮಾಜಿಕ ಕ್ರಾಂತಿಯನ್ನು ಸಹ ಮಾಡಿದ್ದು ಉಲ್ಲೇಖನೀಯ. ಕಾಲಗರ್ಭದಲ್ಲಿ ಕೆಲವು ಸತ್ಯಸಂಗತಿಗಳು ಪ್ರಸಾರಗೊಳ್ಳದೇ ಇರುವುದರಿಂದ ನಾವಿಂದು ಆತಂಕಪಡಬೇಕಾಗಿದೆ. ಆಚಾರ್ಯರ ಸಾಹಿತ್ಯವನ್ನು ಸಂಶೋಧಿಸಿದಷ್ಟು ಹೊಸಹೊಸ ವಿಚಾರಗಳು ಕಂಡುಬರುತ್ತವೆ.

ಅಜ್ಞಾತ ವಿರಚಿತ ಸಿದ್ಧಾಂತಶಿಖಾಮಣಿವ್ಯಾಖ್ಯೆ ನಂತರ ಮತ್ತೊಂದು ಸಂಶೋಧಿತ ಕೃತಿ ಹೊರಬರುತ್ತಿದೆ. ಅದುವೆ ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು. ಇದೊಂದು ಅಮೂಲ್ಯ ಕೃತಿ. ಶ್ರೀ ಜಗದ್ಗುರು ರೇಣುಕರು ಅಗಸ್ತ್ಯರಿಗೆ ನಿರೂಪಿಸಿದ ಪಾವನ ಕೃತಿ. ಈ ಕೃತಿಯನ್ನು ಕುರಿತು ಅಜ್ಞಾತ ವ್ಯಾಖ್ಯಾನಕಾರ ೧೬ನೆಯ ಶತಮಾನದಲ್ಲಿ ಅಮೂಲ್ಯವಾದ ಹಾಗೂ ಅರ್ಥಪೂರ್ಣವಾದ ವ್ಯಾಖ್ಯೆಯನ್ನು ಬರೆದಿದ್ದು ಸ್ಮರಣೀಯ. ಇದರಲ್ಲಿ ಉತ್ತಮವಾದ ಅಂಶಗಳು ಇರುವುದನ್ನು ಕಣ್ಣಾರೆ ಕಾಣಬಹುದು. ಶ್ರೀ ಜಗದ್ಗುರು ರಂಭಾಪುರಿ ಪೀಠದಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಈ ಹಿಂದೆ ಒಂದು ಲಕ್ಷ ರೂಪಾಯಿ ನಿಧಿ ಇಟ್ಟಿದ್ದರ

ಪ್ರತಿಫಲವೇ ಈ ಕೃತಿಯಾಗಿದೆ. ಮೈಸೂರಿನ ಶ್ರೀ ಜಿ. ಜಿ. ಮಂಜುನಾಥನ್ ಇವರು ಸಂಶೋಧಿಸಿ ಆಚಾರ್ಯ ಸಾಹಿತ್ಯ ಬೆಳವಣಿಗೆಗೆ ಪ್ರೇರಕಶಕ್ತಿಯಾಗಿ ಶ್ರಮಿಸಿದ್ದಾರೆ. ಅವರನ್ನು ಎಂದಿಗೂ ಪೀಠ ಮರೆಯುವಂತಿಲ್ಲ. ಈ ಅತ್ಯುತ್ತಮ ಕೃತಿ ಪ್ರಕಟನೆಗಾಗಿ ನಿರಂತರ ಶ್ರಮಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಸೇವೆ ಸ್ಮರಣೀಯ. ಅವರ ಅಧಿಕಾರಾವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಳೆದು ಬಲಗೊಳ್ಳಲಿ. ನಮ್ಮ ಈ ದತ್ತಿ ನಿಧಿಯಿಂದ ಪ್ರತಿ ವರ್ಷವೂ ಒಂದೊಂದು ಆಚಾರ್ಯ ಕೃತಿ ರತ್ನಗಳು ಸಂಶೋಧನೆಗೊಂಡು ಹೊರಬರುವಂತಾಗಲಿ. ಇದೊಂದು ಸಂಶೋಧನ ಕೃತಿ. ಇದನ್ನು ಸಂಪೂರ್ಣವಾಗಿ ಓದಿ ಜನತೆ ಆಚಾರ್ಯರ ಚಿಂತನ ಮತ್ತು ಪ್ರಾಚೀನತೆಯನ್ನು ತಿಳಿಯಲಿ. ಇದನ್ನು ವಿಹಂಗಮದೃಷ್ಟಿಯಿಂದ ಅವಲೋಕನ ಮಾಡಿದ ಪೀಠ ಈ ಸಂದೇಶವನ್ನು ದಯಪಾಲಿಸಿದೆ.

ಪರಮದಯಾಳು ಶ್ರೀಪಾರ್ವತಿ ಪರಮೇಶ್ವರರು ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಸಂಪಾದಕರಿಗೂ ಪರಿಷತ್ತಿನ ಅಧ್ಯಕ್ಷರಿಗೂ ಹಾಗೂ ಓದುಗ ಎಲ್ಲಾ ಧರ್ಮಾಭಿಮಾನಿಗಳಿಗೂ ಮಂಗಲಪರಂಪರೆಯನ್ನು ಅನುಗ್ರಹಿಸಲಿ.

**ಇತ್ಯನಂತಶಿವಾಶಿಷಃ**

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾಡು, ಭಾಷೆ, ಸಾಹಿತ್ಯ, ಸಂಸ್ಕೃತಿ ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆಯಾಗಿದೆ. ೮೯ ವರ್ಷಗಳ ದೀರ್ಘಕಾಲದ ಇತಿಹಾಸವನ್ನು ಪಡೆದಿರುವ ಪರಿಷತ್ತು ತನ್ನ ಕಾರ್ಯಕ್ಷೇತ್ರವನ್ನು ಅನೇಕ ರೀತಿಯಲ್ಲಿ ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಕನ್ನಡದ ಶ್ರೇಷ್ಠ ಸಾಹಿತ್ಯ ಗ್ರಂಥಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಒಂದು ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಪರಿಷತ್ತು ಹೊರತಂದಿದೆ. ಈ ಗ್ರಂಥಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸೇರಿವೆ. ಕನ್ನಡ ಜನತೆಗೆ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ನೀಡುವುದಕ್ಕೋಸ್ಕರ ಸುಲಭ ಬೆಲೆ ಇರಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮುಖಾಂತರ ಜ್ಞಾನ ಪ್ರಸಾರ ಮಾಡುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಬಾಳೆಹೊನ್ನೂರು ಅವರು ನೀಡಿದ ಒಂದುಲಕ್ಷರೂಪಾಯಿ ದತ್ತಿ ಪ್ರಕಟಣೆಯ ಮೂರನೆಯ ಕೃತಿಯಾಗಿ ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು ಪ್ರಕಟವಾಗುತ್ತಿದೆ. ಈ ಮಾಲೆಯಲ್ಲಿ ಈಗಾಗಲೆ ಪ್ರಕಟವಾಗಿರುವ ಉಜ್ಜನೀಶರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆ ಮತ್ತು ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಗಳನ್ನು ಪರಿಷ್ಕರಿಸಿರುವ ಶ್ರೀ ಜಿ. ಜಿ. ಮಂಜುನಾಥನ್ ಅವರು ಈ ಕೃತಿಯನ್ನು ಪರಿಷ್ಕರಿಸಿದ್ದಾರೆ. ಆ ಮೂಲಕ ಪರಿಷತ್ತಿನ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಅವರಿಗೆ ಅಭಿನಂದನೆಗಳು.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ ಅಚ್ಚುಕೂಟಕ್ಕೆ ಅಭಿನಂದನೆಗಳು.

**ಧರ್ಮದರ್ಶಿ ಹರಿಕೃಷ್ಣ ಪುನರೂರು**

**ಅಧ್ಯಕ್ಷರು**

# ಪೀಠಿಕೆ

"ಅಲ್ಪ ಕ್ರಿಯಾ ಬಹುಫಲಂ ವೀರಶೈವಂ ಮಾಹೇಶ್ವರೀ" (ಸುಪ್ರಬೋಧಿನೀಟೀಕು ೧೬-೫) ಎಂಬ ವಾತುಲೋತ್ತರ ಆಗಮದ ಮಾತುಗಮನಾರ್ಹ. ಇಂತಹ ವೀರಶೈವಧರ್ಮವನ್ನು ಕುರಿತು ಶಿವಯೋಗಿ ಶಿವಾಚಾರ್ಯ ರಚಿಸಿದ ಸಿದ್ಧಾಂತ ಶಿಖಾಮಣಿ ತುಂಬ ಪ್ರಸಿದ್ಧವಾಗಿದೆ. ರೇಣುಕಾಗಸ್ತ್ಯ ಸಂವಾದ ರೂಪದಲ್ಲಿರುವ ಈ ಕೃತಿಗೆ ರೇಣುಕ ಗೀತೆ, ರೇಣುಕಾಗಮ ಎನ್ನುವ ಹೆಸರುಗಳೂ ಇವೆ.

"ವೀರಶೈವಮಹಾತಂತ್ರಮೇಕೋತ್ತರಶತಸ್ಥಲ"ಪ್ರತಿಪಾದಿಸುವ ಸಿದ್ಧಾಂತ ಶಿಖಾಮಣಿ ಕಾಮಿಕಾದಿವಾತುಲಾಂತ ಶಿವಾಗಮಗಳನ್ನು ಸಕಲಪುರಾಣಗಳನ್ನು ನೋಡಿ ಅಸನ್ಮಾರ್ಗವನ್ನು ನಿರಸನಗೊಳಿಸಲು, ವಿವೇಕಿಗಳಿಗೆ ಮುದವನ್ನುಂಟುಮಾಡಲು, ವೈದಿಕ ಮಾರ್ಗಕ್ಕೆ ವಿರೋಧವಲ್ಲದಂತೆ ರಚಿಸಿದ ಕೃತಿಯಾಗಿದೆ.

ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳ ಉತ್ತರಭಾಗದಲ್ಲಿ ವೀರಶೈವಸಿದ್ಧಾಂತ ಪ್ರತಿಪಾದಿತವಾಗಿದೆ. ಈ ವಿಚಾರ-

**ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ**
**ನಿರ್ದಿಷ್ಟಮುತ್ತರೇಭಾಗೇ ವೀರಶೈವಮತಂ ಪರಮ್ ॥**

(ಸಿದ್ಧಾಂತ ಶಿಖಾಮಣಿ ೫-೧೪)

ಎನ್ನುವ ಮಾತುಗಳಿಂದ ತಿಳಿದುಬರುತ್ತದೆ.

ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎನ್ನುವ ಷಟ್ಸ್ಥಲಗಳನ್ನು ಪಿಂಡಾದಿಜ್ಞಾನಶೂನ್ಯಾಂತಗಳಾದ ಅಂಗಸ್ಥಲ ೪೪ ಲಿಂಗಸ್ಥಲ ೫೭ ಒಟ್ಟು ೧೦೧ ಸ್ಥಲಗಳಾಗಿ ವಿಂಗಡಿಸಲಾಗಿದೆ. ಭಕ್ತಸ್ಥಲದಿಂದ ಐಕ್ಯ ಸ್ಥಲದವರೆಗೆ ಕ್ರಮೇಣ ವಿಕಾಸಗೊಳ್ಳುವ ವೀರಶೈವದ ಪರಿಯನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಕಾಣಬಹುದಾಗಿದೆ. ಆದುದರಿಂದಲೆ ಶಿವಯೋಗಿಯು ಈ ಕೃತಿಯನ್ನು ಕುರಿತು-

ಸರ್ವೇಷಾಂ ಶೈವತಂತ್ರಾಣಾಮುತ್ತರತ್ವಾನ್ನಿರುತ್ತರಮ್
ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತ ಶಿಖಾಮಣಿಃ ॥

(ಸಿದ್ಧಾಂತ ಶಿಖಾಮಣಿ ೧-೩೦)

ಎಂದಿದ್ದಾನೆ. ಹೀಗಾಗಿ ಸಿದ್ಧಾಂತ ಶಿಖಾಮಣಿ ಶ್ರೀವೇದಾಗಮ ವೀರಶೈವ ಸರಣಿ, ಶ್ರೀಷಟ್ಸ್ಥಲೋದ್ಯನ್ಮಣಿ, ಶ್ರೀಜೀವೇಶ್ವರ ಯೋಗಪದ್ಮತರಣಿ, ಶ್ರೀಗೋಪ್ಯಚಿಂತಾಮಣಿ ಶ್ರೀಸಿದ್ಧಾಂತ ಶಿಖಾಮಣಿಯೆನ್ನುವ ಖ್ಯಾತಿಗೆ ಒಳಗಾಗಿದೆ.

ಸಿದ್ಧಾಂತ ಶಿಖಾಮಣಿ ಕೃತಿಯ ಕರ್ತೃ ಶಿವಯೋಗಿಯ ವಂಶಾವಳಿವಿವರಗಳು ಹೀಗಿವೆ-

**ಕಶ್ಚಿದಾಚಾರಸಿದ್ಧಾನಾಂ ಅಗ್ರಣೀಃ ಶಿವಯೋಗಿನಾಮ್**
**ಶಿವಯೋಗೀತಿ ವಿಖ್ಯಾತಃ ಶಿವಜ್ಞಾನಮಹೋದಧಿಃ (೧-೨೧)**

**ತಸ್ಯವಂಶೇ ಸಮುತ್ಪನ್ನಃ ಮುಕ್ತಾಮಣಿವಾಮಲಃ**
**ಮುದ್ದ ದೇವಾಭಿದಾಚಾರ್ಯಃ ಮೂರ್ಧನ್ಯಃ ಶಿವಯೋಗಿನಾಮ್ (೧-೨೩)**

**ತಸ್ಯಾಸೀನ್ನಂದನಃ ಶಾಂತಃ ಸಿದ್ಧನಾಥಾಭಿದಃ ಶುಚಿಃ (೧-೨೪)**

**ತಸ್ಯ ವೀರಶಿವಾಚಾರ್ಯಶಿಖಾರತ್ನಸ್ಯನಂದನಃ**
**ಅಭವಚ್ಛಿವಯೋಗೀತಿ ಸಿಂಧೋರಿವಸುಧಾಕರಃ (೧-೨೮)**

ಇದರ ಪ್ರಕಾರ ಶಿವಯೋಗಿ ಆತನ ವಂಶದ ಮುದ್ದದೇವ, ಆತನ ನಂದನಸಿದ್ಧನಾಥ ಆತನ ನಂದನ ಶಿವಯೋಗಿ ಶಿವಾಚಾರ್ಯ ಎಂದು ಆಗುತ್ತದೆ. ಈ ಭಾಗಕ್ಕೆ ಸೋಸಲೆ ರೇವಣಾರಾಧ್ಯನು "ಕಲಿಕಾಲಪ್ರವೇಶಾನಂತರದಲ್ಲಿ ರೇಣುಕಗಣೇಶ್ವರನೆಂದು ಪ್ರಸಿದ್ಧನಾದ ರೇವಣಸಿದ್ಧೇಶ್ವರನು ಕುಂಭಸಂಭವನಿಗೆ ಬೋಧಿಸಿದ ವೀರಶೈವಶಾಸ್ತ್ರದ ಬೋಧನಾನಂತರದಲ್ಲಿ ಆ ರೇವಣಸಿದ್ಧೇಶ್ವರನ ದೃಷ್ಟಿಗರ್ಭಸಂಭವನಾದ ಸಿದ್ಧರಾಮೇಶ್ವರನ ಸಾಂಪ್ರದಾಯಪ್ರಸಿದ್ಧನಾದ ಸಕಲ ನಿಗಮಾಗಮ ಪಾರಂಗತನಾದ ಶಿವಯೋಗೀಶ್ವರನೆಂಬಾಚಾರ್ಯನು ಆ ರೇಣುಕಾಗಸ್ತ್ಯ ಸಂವಾದವನು ತನ್ನ ಶಿಷ್ಯರುಗಳಿಗೆ ಬೋಧಿಸಲೋಸುಗವಾಗಿ ಸಪ್ತ ಶ್ಲೋಕಂಗಳಿಂದೆ ಸಮಸ್ತಸಮಯಶಾಸ್ತ್ರಂಗಳಿಗುತ್ತರವಾದ ನಿಗಮಾಗಮವಾಕ್ಯವನು ಗರ್ಭೀಕರಿಸಿ ಇಷ್ಟದೇವತಾ ನಮಸ್ಕಾರಮಂ ಮಾಡುತ್ತಿರ್ದಪಂ" ಎಂದು ವ್ಯಾಖ್ಯಾನಮಾಡಿದ್ದಾನೆ.

ಮರಿತೋಂಟಾದಾರ್ಯನು "ಅತ್ರಕಲಿಕಾಲಪ್ರವೇಶಾನಂತರಂ ಲೋಕಹಿತಾರ್ಥ ರೇಣುಕಗಣೇಶ್ವರಃ ಇತಿ ಪ್ರಸಿದ್ಧಃ ರೇವಣಸಿದ್ಧೇಶ್ವರಃ ಕುಂಭಸಂಭವಾಯ ವೀರಶೈವ ಶಾಸ್ತ್ರ ಉಪದೇಷ್ಟವಾನ್. ತದನಂತರಂ ರೇವಣಸಿದ್ಧೇಶ್ವರದೃಷ್ಟಿಗರ್ಭಸಂಭೂತ ಸಿದ್ಧರಾಮೇಶ್ವರ ಸಾಂಪ್ರದಾಯ ಪ್ರಸಿದ್ಧಃ ಸಕಲನಿಗಮಾಗಮ ಪಾರಗಃ ಶಿವಯೋಗೀಶ್ವರ ಇತ್ಯಭಿಧಾನವಾನ್ ಕಶ್ಚಿತ್ ಮಾಹೇಶ್ವರಃ ತದ್ರೇಣುಕಾಗಸ್ತ್ಯ ಸಂವಾದಂ ನಿರ್ವಿಘ್ನೇನ ಸ್ವಶಿಷ್ಯಾನ್ ಬೋಧಯಿತುಂ ಸ್ವಮನಸಿ ಕೃತಸಕಲಸಿದ್ಧಾಂತಶ್ರೇಷ್ಠನಿಗಮಾಗ ಮೈಕ್ಯಗರ್ಭೀಕಾರಲಕ್ಷಣಸ್ವೇಷ್ಟದೇವತಾ ನಮಸ್ಕಾರ ರೂಪಂ ಮಂಗಲಂ ಶಿಷ್ಯಶಿಕ್ಷಾರ್ಥಂ ಸಪ್ತಭಿಃ ಶ್ಲೋಕೈಃ ನಿಬಧ್ನಾತಿ" ಎಂದು ವ್ಯಾಖ್ಯಾನಮಾಡಿದ್ದಾನೆ (ಪುಟ ೪)

ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕಾಕಾರನು "ಈ ಜಗತ್ತಿನೊಳ್ ಕಲಿಗಾಲ ಪ್ರವೇಶಾನಂತರದಲ್ಲಿ ಲೋಕಹಿತಾರ್ಥಮಾಗಿ ಶ್ರೀ ರೇಣುಕಗಣೇಶ್ವರನೆಂದು ಪ್ರಸಿದ್ಧನಾದ ರೇವಣಸಿದ್ಧೇಶ್ವರಂ ಕುಂಭಸಂಭವಂಗೋಸ್ಕರ ಶ್ರೀವೀರಶೈವಮಹಾಶಾಸ್ತ್ರವನು ಪದೇಶಂಗೈದನು. ಆ ಮೇಲೆ ರೇವಣಸಿದ್ಧೇಶ್ವರನ ದೃಷ್ಟಿಗರ್ಭಸಂಭವನಾದ ಸಿದ್ಧರಾಮೇಶ್ವರನ ಸಂಪ್ರದಾಯದಲ್ಲಿ ಪ್ರಸಿದ್ಧನಾಗಿ ಸಕಲನಿಗಮಾಗಪಾರಂಗತನಾದ ಶಿವಯೋಗಿಯೆಂಬೊರ್ವ ಮಾಹೇಶ್ವರಂ ತದ್ರೇಣುಕಾಗಸ್ತ್ಯಸಂವಾದಮಂ ನಿರ್ವಿಘ್ನದಿಂ ತನ್ನ ಶಿಷ್ಯರಂ ತಿಳುಹಲೋಸುಗ ತನ್ನ ಮನಸ್ಸಿನಲ್ಲೆ ಮಾಡಲ್ಪಟ್ಟ ಸಕಲಸಿದ್ಧಾಂತಶ್ರೇಷ್ಠನಿಗಮಾಗಮೈಕ್ಯಗರ್ಭೀಕಾರಲಕ್ಷಣ ಸ್ವೇಷ್ಟದೇವತಾ ನಮಸ್ಕಾರ ರೂಪ ಮಂಗಲಂ ಶಿಷ್ಯಶಿಕ್ಷಾರ್ಥಮಾಗಿ ಸಪ್ತ ಶ್ಲೋಕಂಗಳಿಂ ಪ್ರಕಾಶಿಸುತಿರ್ದಪಂ" ಎಂದು ಪ್ರವೇಶಿಕೆಯಲ್ಲಿ ತಿಳಿಸಿದ್ದಾನೆ.

ಈ ಮೂರು ಉಲ್ಲೇಖಗಳಲ್ಲಿ ಸಮಾನವಾದ ಅಂಶವೆಂದರೆ ಸಿದ್ಧಾಥ ಎಂಬುದನ್ನು ಸಿದ್ಧರಾಮೇಶ್ವರ ಎಂದು ಅರ್ಥೈಸಿರುವುದು ಈ ಬಗ್ಗೆ ವಿದ್ವದ್ವೃಂದದಲ್ಲಿ ಭಿನ್ನಾಭಿಪ್ರಾಯಗಳಿವೆ. ಸೋಸಲೆ ರೇವಣಾರಾಧ್ಯನು ಸಿದ್ಧಾಥ ಎಂಬ ಶಬ್ದಕ್ಕೆ ಸಿದ್ಧರಾಮೇಶ್ವರ ಎಂದು ಅರ್ಥೈಸುವಲ್ಲಿ ಬಸವಸಮಕಾಲೀನನಾದ ಸಿದ್ಧರಾಮನು ರಚಿಸಿದ ಬಸವಸ್ತೋತ್ರದ ತ್ರಿವಿಧಿ, ಮಿಶ್ರಸ್ತೋತ್ರದ ತ್ರಿವಿಧಿ, ಅಷ್ಟಾವರಣಸ್ತೋತ್ರದ ತ್ರಿವಿಧಿಗಳಲ್ಲಿ ಬರುವ ಯೋಗಿನಾಥ ಎನ್ನುವ ಅಂಕಿತ ಕಾರಣವಿರಬಹುದು. ಹರಿಹರನ ರೇವಣ ಸಿದ್ಧೇಶ್ವರ ರಗಳೆ, ರಾಘವಾಂಕನ ಸಿದ್ಧರಾಮ ಚಾರಿತ್ರಗಳಲ್ಲಿ ಈ ಮಾತಿನ ಪ್ರೇರಣೆಯಿರಬಹುದು. ಸದ್ಯದಲ್ಲಿ ಇದಮಿತ್ಥಂ ಎಂದು ಹೇಳಲಾಗುವುದಿಲ್ಲ.

ವೀರಶೈವ ವಿದ್ವದ್ವಲಯದಲ್ಲಿ ಪ್ರಸಿದ್ಧವಾದ ಸಿದ್ಧಾಂತ ಶಿಖಾಮಣಿಗೆ ಸಂಸ್ಕೃತದಲ್ಲಿ ಒಂದು, ಕನ್ನಡದಲ್ಲಿ ನಾಲ್ಕು ಟೀಕುಗಳು ರಚಿತವಾಗಿದ್ದು ಅವುಗಳ ವಿವರಗಳು ಹೀಗಿವೆ-

ಕೆಳದಿಯ ಅರಸ ಎರಡನೆಯ ಬಸವಪ್ಪನಾಯಕನಿಂದ ಪೋಷಣೆ ಪಡೆದಿದ್ದ ಕ್ರಿ.ಶ.ಸು. ೧೬೬೭ ರಲ್ಲಿದ್ದ ಮರಿತೋಂಟದಾರ್ಯನು ತತ್ತ್ವ ಪ್ರದೀಪಿಕಾವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಈ ಕೃತಿಗೆ ಸೋಸಲೆ ರೇವಣಾರಾಧ್ಯನು ಸಿದ್ಧಾಂತ ಶಿಖಾಮಣಿಗೆ ಬರೆದ ಸಿದ್ಧಾರ್ಥ ಸಂಬೋಧಿನೀ ಎನ್ನುವ ಟೀಕು ಆಕರ ಎನ್ನುವ ಮಾತಿದೆ.

ಕ್ರಿ. ಶ. ಸು. ೧೪೬೦ರಲ್ಲಿದ್ದ ಗೊರಕೋಡು ಉಜ್ಜನೀಶನು ಕರ್ನಾಟ ಭಾಷಾ ಟೀಕಾವನ್ನು ರಚಿಸಿದ್ದಾನೆ. ಇದೇ ಸಂದರ್ಭದಲ್ಲಿ ಹೇಳಬಹುದಾದ ಮಾತೆಂದರೆ ಪ್ರಾಚ್ಯವಿದ್ಯಾ ಸಂಶೋಧನಾಲಯದ ತಾಳೆಗರಿಸಂಖ್ಯೆ ೭೩೬೨/೧ರ ಪುಷ್ಪಿಕೆಯಲ್ಲಿ- "ಇತಿ ವೀರಶೈವಧರ್ಮ ನಿರ್ಣಯೆ ಸಿದ್ಧಾಂತ ಶಿಖಾಮಣೌ ಐಕ್ಯಸ್ಥಲವಿಷಯ ನವಲಿಂಗಸ್ಥಲಪ್ರಸಂಗೋನಾಮ ವಿಂಶತಿ ಪರಿಚ್ಛೇದಃ ಶ್ರೀ ಶ್ರೀ ಶ್ರೀ ಬಸವಾರಾಧ್ಯದೇವೇನ ಶ್ರೀ ಸಿದ್ಧಾಂತ ಶಿಖಾಮಣೌ ಐಕ್ಯಸ್ಥಲಸ್ಯ ಸಾಟೀಕಾ ರಚಿತಾ ವಿಬುಧ ಸಂಮತಾ" ಎನ್ನುವ ಮಾತಿದೆ. ಇದರಿಂದ ಸಿದ್ಧಾಂತ ಶಿಖಾಮಣಿಗೆ ಬಸವಾರಾಧ್ಯ ಎನ್ನುವವನು ರಚಿಸಿದ ಟೀಕು ಒಂದಿದೆ ಎನ್ನುವ ಅಭಿಪ್ರಾಯ ಮೂಡುತ್ತದೆ. ಆದರೆ ಆ ಹಸ್ತಪ್ರತಿಯನ್ನು ಪರಿಶೀಲಿಸಿದಾಗ ಆತ ಗೊರಕೋಡು ಉಜ್ಜನೀಶನ ಸಿದ್ಧಾಂತ ಶಿಖಾಮಣಿ ಕರ್ನಾಟ ಭಾಷಾಟೀಕಾವನ್ನು ಪ್ರತಿ ಮಾಡಿರುವುದು ಕಂಡು ಬರುತ್ತದೆ.

ಕ್ರಿ.ಶ. ೧೬೨೩ರಲ್ಲಿದ್ದು ಮುದಿಗೆರೆ ರಘುವಪ್ಪನಾಯಕನಿಂದ ಪೋಷಿತನಾಗಿದ್ದ ಸೋಸಲೆ ರೇವಣಾರಾಧ್ಯನು ಭೋಗ ಮಲ್ಲೇಶನ ಶಿಷ್ಯ ಸಿದ್ಧವೃಷೇಶ್ವರನ ಆಜ್ಞಾನುಸಾರ ಸಿದ್ಧಾಂತ ಶಿಖಾಮಣಿಗೆ 'ಸಿದ್ಧಾರ್ಥಸಂಬೋಧಿನೀ' ಎನ್ನುವ ಟೀಕನ್ನು ರಚಿಸಿದ್ದಾನೆ.

ಸು.೧೭ನೆಯ ಶತಮಾನಕ್ಕೆ ಸೇರಿದ ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆ ದೊರೆತಿದೆ.

ಪ್ರಸ್ತುತ ಪ್ರಕಟವಾಗುತ್ತಿರುವ 'ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು'ವಿನ ಕರ್ತೃ ಕಾಲ ದೇಶಾದಿಗಳು ಲಭ್ಯವಿಲ್ಲ. ಆದರೆ ಗ್ರಂಥಭಾಗದಲ್ಲಿ ಬರುವ "ನಾವು ಮಾಡಿದ

ಸಂಸ್ಕೃತ ವ್ಯಾಖ್ಯಾನದಲ್ಲಿ ವಿಸ್ತರಿಸಿ ಬರೆದಿದೆ. ಇಲ್ಲಿ ಗ್ರಂಥವಿಸ್ತಾರ ಭಯದಿಂದ ಬರೆಯಲಿಲ್ಲ. ಶಾಸ್ತ್ರಜ್ಞರಾದವರಲ್ಲಿ ನೋಡಿಕೊಂಬುದು" ಎನ್ನುವ ಮಾತುಗಳನ್ನು ಅನುಸರಿಸಿ ಅವು ಪರಸ್ಪರ ತಾಳೆಯಾಗುವುದನ್ನು ಗಮನಿಸಿ ಸುಪ್ರಬೋಧಿನೀಟೀಕುವಿನ ಕರ್ತೃ ಮರಿತೋಂಟದಾರ್ಯ ಎಂದು ನಿರ್ಧರಿಸಲಾಗಿದೆ. ಮರಿತೋಂಟದಾರ್ಯನು ಕೆಳದಿಯ ಎರಡನೆ ಬಸವ ಭೂಪನಿಂದ ಪೋಷಿತನಾಗಿದ್ದನು ಎನ್ನುವ ವಿಚಾರ ತಿಳಿದಿದೆ. ಅಂತೆಯೇ ಸುಪ್ರಬೋಧಿನೀಟೀಕುವಿನ ಎರಡು ಹಸ್ತ ಪ್ರತಿಗಳಲ್ಲಿ "ಶ್ರೀ ವರದಾತೀರ" (ಕೆ.೧೧೫೦) "ಅಡಿಕೆ ಪರಗಣೆಯ ಮೈಲಾರ ಮಠ' (೭೩೬೨) 'ಎನ್ನುವ ಮಾತುಗಳು ಲಭ್ಯವಾಗಿದ್ದು ಅವು ಕೆಳದಿಯ ಸುತ್ತಮುತ್ತಲ ಪ್ರದೇಶಕ್ಕೆ ಸೇರಿದುವಾಗಿವೆ. ಆ ಕಾರಣದಿಂದ 'ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು' ವಿನ ಕರ್ತೃ ಮರಿತೋಂಟದಾರ್ಯ ಎನ್ನುವ ನಿರ್ಧಾರಕ್ಕೆ ಬಲ ಬಂದಂತಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇಲ್ಲಿ ಕೊಟ್ಟಿರುವ ಸಂವಾದಿ ಭಾಗಗಳನ್ನು ನೋಡಬಹುದು.

ಗೊರಕೋಡು ಉಜ್ಜನೀಶನ ಟೀಕು, ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಗಳಲ್ಲಿ ಪ್ರಥಮ ಪರಿಚ್ಛೇದ ಮಂಗಳಾಚರಣೆ-ವಂಶಾವಳಿ, ದ್ವಿತೀಯ ಪರಿಚ್ಛೇದ ರೇಣುಕ ದಾರುಕ ಅವತರಣ, ತೃತೀಯ ಪರಿಚ್ಛೇದ ರೇಣುಕ ಭೂಲೋಕಾಗಮನ, ಚತುರ್ಥ ಪರಿಚ್ಛೇದ ರೇಣುಕಾಗಸ್ತ್ಯ ಸಂಭಾಷಣ, ಏಕವಿಂಶತೀಯ ಪರಿಚ್ಛೇದ ವಿಭೀಷಣಾ ಭೀಷ್ಟದಾನಮ್ ಎನ್ನುವ ವಿಚಾರಗಳಿಲ್ಲ ಪಂಚಮಪರಿಚ್ಛೇದ ಸಿದ್ಧಾಂತಶಾಸ್ತ್ರಕಥನ ಪ್ರಥಮ ಪೀಠಿಕೆಯಿಂದ ಪ್ರಾರಂಭವಾಗಿ ವಿಂಶತಿತಮ ಪರಿಚ್ಛೇದ ಐಕ್ಯಸ್ಥಲವಿಷಯದವರೆಗೆ ಎಂದರೆ ಅಂಗಸ್ಥಲ ೪೪-ಪಿಂಡಸ್ಥಲದಿಂದ ಲಿಂಗಸ್ಥಲ ೫೭ ಐಕ್ಯಸ್ಥಲದವರೆಗೆ ೧೦೧ ಸ್ಥಲಗಳಿಗೆ ಟೀಕೆಯನ್ನು ರಚಿಸಲಾಗಿದೆ.

ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕನ್ನು ಪರಿಷ್ಕರಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಎನ್. ಬಸವರಾಧ್ಯರು ನಿಯೋಜಿಸಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದ ಕೆ. ೧೧೫೦ ಹಸ್ತಪ್ರತಿಯನ್ನು ಬಳಸಿಕೊಳ್ಳಲು ಅಂದಿನ ನಿರ್ದೇಶಕರಾಗಿದ್ದ ಡಾ. ಡಿ. ಕೆ. ರಾಜೇಂದ್ರ ಅವರು ಮತ್ತು ಸಂಪಾದನ ವಿಭಾಗದ ಉಪನಿರ್ದೇಶಕರಾದ ಡಾ. ಮೈಲಹಳ್ಳಿ ರೇವಣ್ಣ ಅವರು ಅನುಮತಿಕೊಟ್ಟರು. ಅವರಿಗೆ ಕೃತಜ್ಞತೆಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು ಮುಂದುವರಿದು ಈ ಕೃತಿಯನ್ನು ಪ್ರಕಟಿಸಿದ್ದಾರೆ. ಅವರಿಗೂ ಪ್ರಕಟಣಸಮಿತಿಯ ಸದಸ್ಯರಿಗೂ ವಂದನೆಗಳು. ಪ್ರಕಟಣವಿಭಾಗದ ಕೆ. ನಾಗವೇಣಿ ಅವರು ಹಲವು ಬಗೆಯಲ್ಲಿ ನೆರವು ನೀಡಿದ್ದಾರೆ. ಎ. ಪರಿಮಳ ಅವರು ತುಂಬು ಪರಿಶ್ರಮದಿಂದ ಡಿ.ಟಿ.ಪಿ ಮಾಡಿದ್ದಾರೆ. ಬಿ. ಎಂ. ಶ್ರೀ ಅಚ್ಚುಕೂಟದ ವ್ಯವಸ್ಥಾಪಕರಾದ ಎನ್. ಚಕ್ರಪಾಣಿ ಅವರು ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ. ಇವರೆಲ್ಲರಿಗು ಕೃತಜ್ಞತೆಗಳು.

ಮಠದ ಪೀಠಾಧಿಪತಿಗಳಾದ ವಿದ್ವಾನ್ ಡಾ. ಇಮ್ಮಡಿ ಶಿವಬಸವಸ್ವಾಮಿಗಳು ನೀಡಿದ ನೆರವು ದೊಡ್ಡದು ಅವರಿಗೆ ಶರಣಾರ್ಥಿಗಳು. ವಿದ್ವಾನ್. ಡಾ. ಟಿ. ವಿ. ಸತ್ಯನಾರಾಯಣ ಅವರು ಉದ್ಧೃತಗಳ ಆಕರಗಳನ್ನು ಗುರುತಿಸುವಲ್ಲಿ ಮತ್ತು ನ್ಯಾಯಗಳ ಬಗ್ಗೆ ವಿವರ ನೀಡುವಲ್ಲಿ ಸಹಕರಿಸಿದ್ದಾರೆ. ಅವರಿಗೆ ಕೃತಜ್ಞತೆಗಳು.

ಕೆ. ಆರ್. ಶೇಷಗಿರಿ ಅವರು ಇಂದು ದಿವಂಗತರಾಗಿದ್ದಾರೆ. ಕರಡುತಿದ್ದುವಲ್ಲಿ ಅವರು ನನ್ನೊಡನೆ ಹಗಲಿರುಳು ದುಡಿದಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಬಿ. ಎಂ. ಗೀತಾ ಮಲ್ಲಾರಾಧ್ಯ ಪ್ರಸನ್ನ ಅವರು ಗ್ರಂಥಪರಿಷ್ಕರಣ ಸಂದರ್ಭದಲ್ಲಿ ಮಾಡಿದ ಉಪಕಾರ ದೊಡ್ಡದು. ಡಿ. ಸಿದ್ಧಗಂಗಯ್ಯನವರು ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಇವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಸಹೃದಯರು ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕುವನ್ನು ತುಂಬು ಹೃದಯದಿಂದ ಸ್ವೀಕರಿಸಬೇಕಾಗಿ ವಿನಂತಿ.

## ಹಸ್ತಪ್ರತಿವಿವರ

'ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು' ಇದರ ಮೂರು ಹಸ್ತಪ್ರತಿಗಳನ್ನು ಗುರುತಿಸಲಾಗಿದೆ.

ಕೆ. ೧೧೫೦ ಹಸ್ತಪ್ರತಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಸ್ತಪ್ರತಿ ಭಂಡಾರದಲ್ಲಿದೆ.

೭೩೬೨/೧ ಹಸ್ತಪ್ರತಿ ಅರಮನೆ ಸರಸ್ವತೀ ಭಂಡಾರ ಮೈಸೂರಿನಲ್ಲಿದೆ. ಈ ಹಸ್ತಪ್ರತಿಯ ಪುಷ್ಪಿಕೆಯಲ್ಲಿ- "ರವುದ್ರಿ ಸಂವತ್ಸರದ ಆಷಾಢ ಶುದ್ಧ ೧ ಸೋಮವಾರದಲ್ಲು ಅಡಿಕೆ ಪರಗಣೆಯ ಮೈಲಾರಮಠದಲ್ಲಿ ಪರಿಸಮಾಪ್ತಿಯಾದ ಸಿದ್ಧಾಂತ ಶಿಖಾಮಣಿ" ಎನ್ನುವ ಮಾತಿದ್ದು ಈ ಹಸ್ತಪ್ರತಿ ಶಿವಮೊಗ್ಗ ಜಿಲ್ಲೆಯಲ್ಲಿ ಸಿದ್ಧವಾಗಿರಬಹುದು.

ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರಿನಲ್ಲಿ ಒಂದು ಹಸ್ತಪ್ರತಿ ಇರುವುದೆಂದು ತಿಳಿದು ಬಂದಿದೆ.

ಪ್ರಸ್ತುತ ಪರಿಷ್ಕರಣ ಕಾರ್ಯಕ್ಕೆ ಕೆ.೧೧೫೦ ತಾಳೆಗರಿ ಹಸ್ತಪ್ರತಿಯನ್ನು ಬಳಸಿಕೊಂಡಿದೆ. ಇದರಲ್ಲಿ ೧೭೧ ಪತ್ರಗಳಿವೆ. ಅವುಗಳ ಉದ್ದ ೧೨.೩" ಅಗಲ ೩". ಪತ್ರದ ಎರಡು ಕಡೆಗಳಲ್ಲಿ ೧೦ ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿ ಸುಮಾರು ೬೧ ಅಕ್ಷರಗಳಿವೆ. ಹಸ್ತಪ್ರತಿಯಲ್ಲಿ ಸಿದ್ಧಾಂತಶಿಖಾಮಣಿಕಾರ ಶಿವಯೋಗಿಯ ವಂಶವಿವರಗಳಿವೆ. ಸುಪ್ರಬೋಧಿನೀಟೀಕಾಕಾರನ ಹೆಸರಿಲ್ಲ.

ಹಸ್ತ ಪ್ರತಿಯ ಆದಿ : ಶ್ರೀ ಶಿವಾಯನಮಃ।

ಉದ್ಧೃತಶ್ಲೋಕಗಳ ಮೂಲವನ್ನು ಗುರುತಿಸುವಲ್ಲಿ ಮೈಸೂರು ನಗರದ ಕುಂದೂರು

**ಚಿಲ್ಲಿಂಗಂ ಚೇತಸಿಧ್ಯಾತ್ವಾ ಶ್ರೀ ಸಿದ್ಧಾಂತ ಶಿಖಾಮಣೇಃ**

**ಕರ್ಣಾಟ ಭಾಷಯಾ ಟೀಕಾ ಲಿಖ್ಯತೇ ಸುಪ್ರಬೋಧಿನೀ ॥**

ಈ ಜಗತ್ತಿನೊಳ್ ಕಲಿಗಾಲಪ್ರವೇಶಾನಂತರದಲ್ಲಿ ಲೋಕಹಿತಾರ್ಥಮಾಗಿ ಶ್ರೀರೇಣುಕಗಣೇಶ್ವರನೆಂದು ಪ್ರಸಿದ್ಧನಾದ ರೇವಣಸಿದ್ಧೇಶ್ವರಂ ಕುಂಭಸಂಭವಂಗೋಸ್ಕರ ಶ್ರೀವೀರಶೈವಮಹಾಶಾಸ್ತ್ರವನುಪದೇಶಂಗೈದನು.

ಅಂತ್ಯ : ಶ್ರೀಯಿತಿ ಶ್ರೀವರದಾತೀರ ವಿಲಸದ್ವೇದಸೇ ಹರಿಃ ಶಿವನಿಷ್ಠಾನಾಂ ಸಿದ್ಧಾಂತ ಶಿಖಾಮಣೇಃ ಕರ್ನಾಟಭಾಷಾಟೀಕಾಂ ಕೃತವಾನ್ಸುಪ್ರಬೋಧಿನೀ ಆ ಸೋಮಾರ್ಕ ವರ್ಷತಾಂ ಸಾಮುದ್ವೃದ್ವೈ ಶಿವಯೋಗಿನಾಂ ಅಸ್ಯ ಮೂಲ ಗ್ರಂಥ ಪೀಟಿಕಾಯಾಂ ೨೦ XXX ೬೪೦ ಲಿಂಗಸ್ಥಲೇ ॥೫೦೫॥ ತೂಯಿ ॥೫೬॥ ಅಂತು ಮೂಲಗ್ರಂಥ ॥೪೧೪॥ ಶ್ರೀ ಎಂದಿದೆ.

ಹಸ್ತಪ್ರತಿ ಸುದೃಢವಾಗಿದೆ. ಅಕ್ಷರಗಳು ಸುಂದರವಾಗಿವೆ. ಶ್ರೀ ವರದಾತೀರ ಎನ್ನುವ ಮಾತಿನಿಂದ ಈ ಹಸ್ತಪ್ರತಿ ಶಿವಮೊಗ್ಗ ಜಿಲ್ಲೆಯ ಸೊರಬ ಅಥವಾ ಸಾಗರ ತಾಲ್ಲೂಕಿನಲ್ಲಿ ಹರಿಯುವ ವರದಾನದಿಯ ತೀರದಲ್ಲಿ ಪ್ರತಿಯಾಗಿದೆ ಎನ್ನಬಹುದು.

**ಜಿ. ಜಿ. ಮಂಜುನಾಥನ್**

# ಸಂವಾದಿ ಭಾಗಗಳು

ಮರಿತೋಂಟದಾರ್ಯನು ಸಿದ್ಧಾಂತಶಿಖಾಮಣಿಗೆ ಸಂಸ್ಕೃತದಲ್ಲಿ ಬರೆದಿರುವ ತತ್ತ್ವಪ್ರದೀಪಿಕಾ ಟೀಕಿಗೂ ಈಗ ಪ್ರಕಟವಾಗುತ್ತಿರುವ ಸಿದ್ಧಾಂತಶಿಖಾಮಣಿ-ಸುಪ್ರಬೋಧಿನೀಟೀಕಿಗೂ ಇರುವ ಸಂವಾದಿ ಭಾಗಗಳು ಹೀಗಿವೆ. ಇದರಿಂದ ಸುಪ್ರಬೋನೀಟೀಕಾಕಾರನನ್ನು ಮರಿತೋಂಟದಾರ್ಯ ಎಂದು ನಿರ್ಧರಿಸಲಾಗಿದೆ.

೧. ಈ ಜಗತ್ತಿನೊಳ್ ಕಲಿಗಾಲ ಪ್ರವೇಶಾನಂತರದಲ್ಲಿ ಲೋಕಹಿತಾರ್ಥವಾಗಿ ರೇಣುಕ ಗಣೇಶ್ವರನೆಂದು ಪ್ರಸಿದ್ಧನಾದ ರೇವಣಸಿದ್ಧೇಶ್ವರಂ ಕುಂಭಸಂಭವಂಗೋಸ್ಕರ ಶ್ರೀ ವೀರಶೈವ ಮಹಾಶಾಸ್ತ್ರವನುಪದೇಶಂಗೈದನು. ಆ ಮೇಲೆ ರೇವಣಸಿದ್ಧೇಶ್ವರನ ದೃಷ್ಟಿಗರ್ಭಸಂಭವನಾದ ಸಿದ್ಧರಾಮೇಶ್ವರನ ಸಂಪ್ರದಾಯದಲ್ಲಿ ಪ್ರಸಿದ್ಧನಾಗಿ ಸಕಲನಿಗಮಾಗಮಪಾರಂಗತನಾದ ಶಿವಯೋಗಿಯೆಂಬೊರ್ವ ಮಾಹೇಶ್ವರಂ ತದ್ರೇಣುಕಾಗಸ್ತ್ಯ ಸಂವಾದಮಂ ನಿರ್ವಿಘ್ನದಿಂ ತನ್ನ ಶಿಷ್ಯರಂ ತಿಳುಹಲೋಸುಗ ತನ್ನ ಮನಸ್ಸಿನಲ್ಲೆ ಮಾಡಲ್ಪಟ್ಟ ಸಕಲಸಿದ್ಧಾಂತ ಶ್ರೇಷ್ಠನಿಗಮಾಗಮೈಕ್ಯಗರ್ಭೀಕಾರಲಕ್ಷಣ ಸ್ವೇಷ್ಟದೇವತಾ ನಮಸ್ಕಾರರೂಪಮಂಗಲಂ ಶಿಷ್ಯಶಿಕ್ಷಾರ್ಥಮಾಗಿ ಸಪ್ತಶ್ಲೋಕಗಳಿಂ ಪ್ರಕಾಶಿಸುತಿರ್ದಪಂ.

(ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು ಪುಟ-೧)

ಅತ್ರ ಕಲಿಕಾಲ ಪ್ರವೇಶಾನಂತರಂ ಲೋಕಹಿತಾರ್ಥಂ ರೇಣುಕಗಣೇಶ್ವರಃ ಇತಿ ಪ್ರಸಿದ್ಧಃ ರೇವಣಸಿದ್ಧೇಶ್ವರಃ ಕುಂಭಸಂಭವಾಯ ವೀರಶೈವಶಾಸ್ತ್ರಂ ಉಪದೇಷ್ಟವಾನ್ ತದನಂತರಂ ರೇವಣಸಿದ್ಧೇಶ್ವರದೃಷ್ಟಿಗರ್ಭಸಂಭೂತಸಿದ್ಧರಾಮೇಶ್ವರಸಂಪ್ರದಾಯ ಪ್ರಸಿದ್ಧಃ ಸಕಲನಿಗಮಾಗಮ ಪಾರಗಃ ಶಿವಯೋಗೀಶ್ವರ ಇತ್ಯಭಿಧಾನವಾನ್ ಕಶ್ಚಿತ್ ಮಾಹೇಶ್ವರಃ ತದ್ರೇಣುಕಾಗಸ್ತ್ಯಸಂವಾದಂ ನಿರ್ವಿಘ್ನೇನ ಸ್ವಶಿಷ್ಯಾನ್ ಬೋಧಯಿತುಂ ಸ್ವಮನಸಿ ಕೃತಸಕಲ ಸಿದ್ಧಾಂತ ಶ್ರೇಷ್ಠನಿಗಮಾಗಮೈಕ್ಯಗರ್ಭೀಕಾರಲಕ್ಷಣಸ್ವೇಷ್ಟ ದೇವತಾ ನಮಸ್ಕಾರ ರೂಪಂ ಮಂಗಲಂ ಶಿಷ್ಯಶಿಕ್ಷಾರ್ಥಂ ಸಪ್ತಭಿಃ ಶ್ಲೋಕೈಃ ನಿಬಧ್ನಾತಿ.

(ಸಿದ್ಧಾಂತ ಶಿಖಾಮಣಿ-ತತ್ತ್ವಪ್ರದೀಪಿಕಾಟೀಕು-ಪುಟ-೪)

೨. ಸನಾತನೀ-ಅನಿತ್ಯವಲ್ಲದ ಬ್ರಹ್ಮನಿಷ್ಠಾಸಂಯೋಗವೆಂಬುದು ಕ್ರಿಯಾ ಪೂರ್ವ ಮಾದುದರಿಂ ಭಿನ್ನದೇಶಸ್ಥಿತಪದಾರ್ಥಂಗಳಿಗೆ ಘಟಿಸುವುದಾದ ಕಾರಣ ಬ್ರಹ್ಮ ಬಾಹ್ಯದೇಶಮಿಲ್ಲ ಸಂಬಂಧ ಕೂಡದೆ ಹೋಗಲಾಗಿ ಶುಕ್ಲ ಪಟನ್ಯಾಯದಿಂ ಬ್ರಹ್ಮದಲ್ಲಿ ಸಮವೇತಮಾದ ಶಕ್ತಿಃ ಸ್ವತಂತ್ರ ಸ್ವಪ್ರಕಾಶ ಶಕ್ತಿಯು ಅಸ್ತಿ ಉಂಟೆಂಬುದು ಉಳ್ಳುಮೆಯು ತದ್ವೈಷಮ್ಯಾತ್-ಆ ಸ್ವತಂತ್ರತೆ ಸ್ವಪ್ರಕಾಶತೆಗಳ ವ್ಯತ್ಯಾಸದತ್ತಣಿಂ, ತಸ್ಮಿನ್-ಆ ಸ್ವಚ್ಛಚಿದ್ರೂಪ ಬ್ರಹ್ಮದಲ್ಲಿ ಗುಣತ್ಯಾತ್ಮಿಕ ಪ್ರತಿಪತ್ತಿ ರಜಸ್ತಮೋಗುಣಂಗಳುಳ್ಳದಾಗಿ ವಸ್ತುತ್ರಯಾಭಿಧಾ ಭೋಕ್ತೃ ಭೋಜ್ಯ ಅದ್ವೈತಕ್ಕೆ ಹಾನಿ ಬರುವುದು. ಬ್ರಹ್ಮಭಿನ್ನವಾಗಿ ಒಂದು ಪದಾರ್ಥ

---

ಸಿದ್ಧಾಂತ ಶಿಖಾಮಣಿ-ಮರಿತೋಂಟದಾರ್ಯ ವಿರಚಿತ ತತ್ತ್ವಪ್ರದೀಪಿಕಾಟೀಕು ಸಹಿತ- ಸಂಪಾದಕರು ಡಾ. ಎಚ್. ಪಿ. ಮಲ್ಲೇದೇವರು ಎಂ. ಎ. ಪಿ ಎಚ್.ಡಿ., ಪ್ರಾಚ್ಯವಿದ್ಯಾ ಸಂಶೋಧನಾಲಯ ಮಾಲೆ-೧೮೨, ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು. ೧೯೯೫.

ವುಂಟೆಂದಗೀಕರಿಸುವುದಕ್ಕೂ ಕೂಡದು ಘಟದಿಂಭಿನ್ನವಾದ ಪಟವು ಘಟಕೆ ಹಾರಾಗದಂತೆ ಬ್ರಹ್ಮಭಿನ್ನವಾದ ವಸ್ತು ಬ್ರಹ್ಮಕ್ಕೆ ಹಾರಾಗಬೇಕಾಗಿ ಅದಕ್ಕೆ ಸ್ಥಿತಿ ಇಲ್ಲದೆ ಹೋಗೂದೆಂಬ ಕಾರಣದಿಂ ಇಲ್ಲಿ ಘಟಗತರೂಪಾದಿದೃಷ್ಟಾಂತವು ಕೂಡದು-ಅದರಂತೆ ಆ ಸಮವೇತಮಾದ ಕಾರಣದಿಂ ಘಟಾಕಾಶ ದೃಷ್ಟಾಂತವು ಕೂಡದು. ಪೂರ್ವ ಪರಿಭಾವಮಿಲ್ಲದ ಕಾರಣಂ ಕ್ಷೀರನೀರದೃಷ್ಟಾಂತವೂ ಕೂಡದು. ಅವೆರಡು ಪರಿಚ್ಛಿನ್ನಮಾಗಿ ಪರಸ್ಪರ ಬಾಹ್ಯಮಾಗಿ ಸಜಾತೀಯುವಮಾಗಿ ಪುರುಷಪ್ರಯುತ್ನದಿಂ ಕೂಡಿರುವವಾದ ಕಾರಣದಿಂ ಬ್ರಹ್ಮಭಿನ್ನಪದಾರ್ಥವಸತ್ಕಲ್ಪವು ಶೃತ್ಯಾದಿಪ್ರಮಾಣ ಬಲದಿಂ ಅಂಗೀಕರಿಸುತ್ತೇವೆ ಎಂದರೆ ಘಟಾದಿಗಳಂ ಕುರಿತು ತದ್ವಿಜಾತೀಯಮಾದ ಚಕ್ಷುರಾದಿಗಳಂತೆ ತದ್ವಿಜಾತೀಯ ಪ್ರಮಾಣಮಿಲ್ಲಂ ಅಂಗೀಕರಿಸಿದರೂ ಜೀವೇಶ್ವರ ವಿಭಾಗಮುಂತಾದ್ದು ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ವಿಸ್ತರಿಸಿ ಬರೆದಿದೆ ಇಲ್ಲಿ ಗ್ರಂಥ ವಿಸ್ತಾರ ಭಯದಿಂದ ಬರೆಯಲಿಲ್ಲ ಶಾಸ್ತ್ರಜ್ಞರಾದವರಲ್ಲಿ ನೋಡಿಕೊಂಬುದು.

(ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು ಪುಟ ೪೯-೫೦)

ನ ಚ ಅಪ್ರಯೋಜಕೋಽಯಂ ಹೇತುಃ । ಯದಿ ಸತ್ಯತ್ವಂ ನ ಸ್ಯಾತ್, ತರ್ಹಿ ಅನಾದಿ ಭಾವತ್ವಂ ಚ ನ ಸ್ಯಾತ್, ಘಟವತ್ ಇತಿ ವ್ಯತಿರೇಕದೃಷ್ಟಾಂತಸ್ಯಾಪಿ ವಿದ್ಯಾಮಾನತ್ವಾತ್॥ ಬ್ರಹ್ಮಾತಿರಿಕ್ತತ್ವೇನಾಂಗೀಕೃತತ್ವಾತ್ ಅಸತ್ಕಲ್ಪತಾಪತಿಶ್ಚ । ತದ್ಭಿನ್ನಸ್ಯ ತದ್ಬಾಹ್ಯತಾ ನಿಯಮೇನ ಅಸ್ತೀತ್ಯತ್ರಮಾನಾಭಾವತ್ । ಸಕಲ ಪ್ರಮಾಣಶೇಷಿಮಹಾಪ್ರಕಾಶ ಬಾಹ್ಯತ್ವಾತ್

ನ ಚ ಘಟಗತರೂಪಾದಿದೃಷ್ಟಾಂತಃ । ತದ್ವದಸಮವೇತತ್ವಾತ್
ನಾಪಿ ಘಟಾಕಾಶದೃಷ್ಟಾಂತಃ
"ಆತ್ಮನ ಆಕಾಶಃ ಸಮ್ಭೂತಃ"

ಇತ್ಯಾದಿಶ್ರುತೇಃ ಪವನಾದೀನಾಂ ಸಾಕ್ಷಾತ್ ಪರಮ್ಪರಯಾ ವಾ ತತ್ಕಾರ್ಯತ್ವೇನ ತದಂತರ್ಗತತ್ವ ಸಮ್ಭವಾತ್। ನೇಹ ತಥಾ । ದ್ವಯೋರಪ್ಯಾನಾದಿತ್ವಾತ್ । ನಾಪಿ ಕ್ಷೀರನೀರನ್ಯಾಯಃ । ಕ್ಷೀರಸ್ಯ ನೀರಾಂತರ್ಗತತ್ವಾತ್ ಸ್ವಭಾವಾತ್। ನೇಹ ತಥಾ। ಆದ್ಯಂತ ಕೋಟ್ಯೋಃ ಪರಸ್ಪರ ಬಾಹ್ಯಯೋಃ ಮಧ್ಯ ಕೋಟಾ ಪ್ರಮಾತ್ರಾ ಸಂಯೋಜಿತತ್ವೇನ ಚೈತನ್ಯಸ್ಯ ಅಸಂಗತ್ವಾತ್ ತದ್ವತ್ ಸಜಾತೀಯತ್ವಾಭಾವಾಚ್ಚ ।

ಯಥಾಕಥಚಿದಂಗೀಕಾರೋಽಪಿ ತಸ್ಯಾಃ ಪ್ರಮೇಯತ್ವಾತ್। ಪ್ರಮೇಯಸ್ಯ ಪ್ರಮಾದ್ವಾರಾ ಪ್ರಮಾತೃವಿಶ್ರಾಂತಿರಂಗೀಕರಣೀಯೇತಿ, ಸಾವಿದ್ಯೈವ ಭವೇತ್, ಅವಿದ್ಯೇತಿ ವಾರ್ತೈವ ನ ಸ್ಯಾತ್ । ಅನ್ಯಥಾ ನಷ್ಟಘಟವಿಷಯಿಣೀ ಸ್ಮೃತಿರ್ನಸ್ಯಾತ್ ।

ನ ಚ ಸಂಸ್ಕಾರಾತ್ ಸಂಭವತೀತಿ ವಾಚ್ಯಮ್
ತಸ್ಯಾಪಿ ಸವಿಷಯತ್ವೇನೈವ ಆತ್ಮಸಮವೇತತ್ವಾತ್ ।

ಏವಂ ಚ ಭವದಭಿಮತಾವಿದ್ಯಾಯಾಂ ಮಾನಾಭಾವಾತ್ । ಅಂಗೀಕಾರೇಽಪಿ

ನಿರ್ವಾಹಾಭಾವಾತ್, ಬಾಧಕಾವಿರ್ಭಾವಾಚ್ಚ ಅನುಪಪನ್ನತ್ವೇನ ಬ್ರಹ್ಮಣೋ ಜಡತಾ ನಿವೃತ್ತ್ಯರ್ಥಂ ಬಲಾತ್ ತತ್ಸ್ವಭಾವಭೂತವಿಮರ್ಶಶಕ್ತೇಃ ಅಂಗೀಕರಣೀಯತ್ವೇನ ತಸ್ಯಾಃ ವಿಶ್ವೋಪಾದನಕರಣೀಭೂತಮಾಯಾರೂಪತ್ವಮುಪಪಾದಯಿತುಂ ಪ್ರಯಾಸೋಽಯಂ ಸಾರ್ಥಕಃ ಇತಿ

(ಸಿದ್ಧಾಂತ ಶಿಖಾಮಣಿ-ತತ್ತ್ವ ಪ್ರದೀಪಿಕಾಟೀಕು ಪುಟ ೧೦೧-೧೦೨)

೩. ಇಂದ್ರಿಯಗಳಿಗೂ ದೇಹಕ್ಕೂ ಬುದ್ಧಿಗೂ ಹಾನಾದಾನಾದಿ ಸಕಲ ಲೋಕವ್ಯವಹಾರಕ್ಕೆ ಕಾರಣಮಾದ ಅನುಭೂತಾರ್ಥಪ್ರಕಾಶಮಾದ ಸ್ಮೃತಿಗೂ ಆತ್ಮತ್ವ ಕೂಡದು. ಅದೇಕೆಂದರೆ ಅಹಂಪ್ರತ್ಯಯವೇದತ್ವಾತ್ ಹೀಗೆಂಬುದೊಂದೆ ಉತ್ತರಂ ಅದೆಂತೆಂದರೆ ನನ್ನ ಶರೀರ ಬಡವಾಗಿ ಅದೆ ದೊಡ್ಡನಾಗಿ ಅದೆ ನನ್ನ ಕಣ್ಣು ಕಾಣುತ್ತದೆ ನನ್ನ ಕಣ್ಣು ಕಾಂಬುದಿಲ್ಲ ನನ್ನ ಬುದ್ಧಿಗಿದು ಒಳಿತಾಗಿರುತ್ತದೆ. ಇದು ಒಳಿತಾಗಿ ತೋರುವುದಿಲ್ಲ ಅದು ನನಗೆ ನೆನಪಾಗಿ ಅದೆ. ಅದು ನನಗೆ ಮರತೀತೆಂದು ಶರೀರೇಂದ್ರಿಯ ಬುದ್ಧಿಸ್ಮೃತಿಗಳಿಂ ಮೀರಿದ ನಾನೆಂಬ ಅಖಂಡಪ್ರಕಾಶದಿಂದಿವಿಷ್ಟುಗೋಚರಿಸಲಾವಕಾರಣದತ್ತಣಿಂದೆಂಬುದು ತಾತ್ಪರ್ಯಂ ॥೬೨॥ ಅದು ಕಾರಣಮಾಗಿ ಶರೀರೇಂದ್ರಿಯ ಬುದ್ಧಿಗಳತ್ತಣಿಂ ಭಿನ್ನಮಾಗಿ ಯಾವ ನಾನೊಬ್ಬ ನಾನು ಚಿಕ್ಕಂದು ತಂದೆ ತಾಯಿಗಳ ಕಂಡಿಪ್ಪೆನು. ಆ ನಾನೆ ಈಗ ಮೊಮ್ಮಕ್ಕಳು ಮರಿ ಮಕ್ಕಳು ಕಂಡೆನೆಂಬ ಅನುಭವ ಬಲದಿಂ ಕ್ಷಣಿಕಜ್ಞಾನಮಲ್ಲದ ನಿತ್ಯಜ್ಞಾನಸ್ವರೂಪನಾದ ಆತ್ಮನುಂಟೆಂಬ ವಿವೇಕವುಳ್ಳವನಾತನುಂಟು ಆತನು ಪಿಂಡಜ್ಞಾನೀಯೆಂದು ಶಿವಶಾಸ್ತ್ರ ಪ್ರವೀಣರಿಂ ಪೇಳಲ್ಪಡುತ್ತಿಹನೆಂಬುದರ್ಥಂ ಇಲ್ಲಿ ಪೂರ್ವಾಪೂರ್ವಮತಖಂಡನ ಪ್ರಕಾರ ಬೌದ್ಧಮತೋಪಪಾದನವು ಪರಿವಾಚಾರ ಸಹ ಗ್ರಂಥವಿಸ್ತಾರಭಯದಿಂ ಬರೆಯಲಿಲ್ಲ. ನಾವು ಮಾಡಿದ ಸಂಸ್ಕೃತವ್ಯಾಖ್ಯಾನದಲ್ಲಿ ಬರದುದೆ ವಿದ್ವಾಂಸರಲ್ಲಿ ನೋಡಿಕೊಂಬುದು.

(ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು ಪುಟ-೫೫)

ಅಯಂ ಭಾವಃ-

ಗೃಹಕ್ಷೇತ್ರಾದಿನಾಶೆ ಸತಿ ದುಃಖದರ್ಶನಾತ್, ತದಭಿವೃದ್ಧೌ ಸುಖಾತಿಶಯಾತ್ ಗೃಹಕ್ಷೇತ್ರಾದಿಕಮೇವಾತ್ಮಾ ಇತಿ ವಿಷಯಾತ್ಮವದಿನೊ ಲೌಕಿಕಾಃ ಮನ್ಯಂತೇ

ತಥೋಽಪಿ ಸಮಾಧಿಕ ವಿವೇಕಭಾಜಃ ಗೃಹಕ್ಷೇತ್ರಾದೀನಾಂ ಮೃಗಪಕ್ಷಿ ಸರಿದ್ಗಿರಿಗ್ರಾಮಾದಿ ವಿವೇಕಾಭಾವಾತ್ ಶರೀರಸ್ಯ ತಾದೃಗ್ವಿವೇಕಸದ್ಭಾವಾತ್ ಶರೀರಮೇವಾತ್ಮಾ ಇತಿ ಚಾರ್ವಾಕಾಃ ಮನ್ಯಂತೇ

ಶರೀರೇ ಪ್ರಾಣವಾಯುಪರಿಸ್ಪಂದಾಭಾವೇ ಜ್ಞಾನಾನುದಯಾತ್ ನ ಶರೀರಮ್, ಪ್ರಾಣ ಏವಾತ್ಮಾ ಇತಿ ಕೇಚಿತ್ ವದಂತಿ ।

ಸುಪ್ತಿಕಾಲೇ ಪ್ರಾಣಸ್ಪಂದಸ್ಯ ವಿದ್ಯಮಾನತ್ವೇಽಪಿ ಇಂದ್ರಿಯವ್ಯಾಪಾರಾಭಾವೇನ ಜ್ಞಾನಶೂನ್ಯತ್ವಾತ್ ಇಂದ್ರಿಯಮೇವಾತ್ಮೇತ್ಯಪರೇ ।

ಅತ್ರ ಇಂದ್ರಿಯಾಣಾಂ ಬಾಹುಲ್ಯಾತ್ ಇಂದ್ರಿಯಸಮೂಹಃ ಆತ್ಮೇತ್ಯುಚ್ಯತೇ ವಾ? ವ್ಯಷ್ಟಿರೂಪಸ್ಯಾತ್ಮತ್ವಮುಚ್ಯತೇ ವಾ ? ಇತಿ ವಿಕಲ್ಪೇ ನಾದ್ಯಃ । ತತ್ರ ಏಕಸ್ಯ ದ್ವಯೋರ್ವಾ ನಾಶೇ ಸಮುದಾಯನಾಶೇನ ಜ್ಞಾನಾನುದಯ ಪ್ರಸಂಗಾತ್ ।। ನ ದ್ವಿತೀಯಃ

"ಜಲಮಿದಂ ಮಧುರಂ ಸ್ವಚ್ಛಂ ಚ"

ಇತಿ ಪ್ರತೀತಿರ್ನ ಸ್ಯಾದಿತಿ । ಏಕೈಕಾರ್ಥಪ್ರಕಾಶಕತ್ವಾದ್ವ್ಯಯೇಷ್ಟಿರಿತಿ।।

ಏವಂ ಶರೀರಾದೇಃ ಜ್ಞಾನಶೂನ್ಯತ್ವೇನ ಜಡತ್ವಾತ್ ಆತ್ಮತ್ವಂ ನ ಸಮ್ಭವತೀತಿ ಬುದ್ಧಿರೇವಾತ್ಮಾ । ಅತ್ರ ಬುದ್ಧೇಃ ಚಕ್ಷುರಾದಿಕರಣಸಾಧ್ಯತ್ವಾತ್ ಕರಣಾನಾಂ ಕುಠಾರಾದಿವತ್ ಕರ್ತ್ರಧೀನತ್ವಾತ್ ಬುದ್ಧ್ಯುತ್ತೀರ್ಣಃ ಕಶ್ಚಿತ್ ಕರ್ತಾ ಅಂಗೀಕರಣೀಯಃ ಇತಿ ನಾಶಂಕನೀಯಮ್। ಕರಣಜನ್ಯಸ್ಯ ಜಡತ್ವನಿಯಮೇನ ಬುದ್ಧೇರ್ಜಡತಾಪತ್ತ್ಯಾ ಅರ್ಥಗ್ರಹಣಾ ಪಟುತ್ವಾತ್। ನ ಚೇಷ್ಟಾಪತ್ತಿಃ। ಜಡಬುದ್ಧೇಃ ಆತ್ಮನೋऽಪಿ ಜಡತ್ವಾಪತ್ತ್ಯೈರನಿವಾರ್ಯತ್ವಾತ್ ಲೋಕವ್ಯವಹಾರೋ ವಿಲುಪ್ಯೇತೇತಿ, ಭವದಭಿಮತಾತ್ಮವತ್ ಬುದ್ಧಿಃ ಸ್ವತಸ್ಸಿದ್ಧೈವೇತ್ಯಂಗೀಕರಣೀಯತಯಾ; ಪ್ರಥಮಂ ಘಟಾನುಭವಃ ತತೋ ಘಟವಿಕಲ್ಪಃ, ತದನನ್ತರಂ ತಜ್ಜನಿತಸಂಸ್ಕಾರಾತ್ ಭಾವಿಕೋಟಿನಿಷ್ಠಾ ಸ್ಮೃತಿಃ, ಸ್ಮೃತ್ಯಾ ಚ ಲೋಕವ್ಯವಹಾರಃ ಇತಿ ಭಿನ್ನಕಾಲಭಿನ್ನಾಕಾರಭಿನ್ನವಿಷಯಿಣೀ ಕ್ಷಣಿಕಜ್ಞಾನಸಂತತಿರೇವ ಆತ್ಮಾ ಇತಿ ಬುದ್ಧಿಪ್ರಾಧಾನ್ಯವಾದಿನಃ ಬೌದ್ಧಾಃ ವದಂತಿ ।

ಅತ್ರೋತ್ತರಮ್-ಅಹಂ ಪ್ರತ್ಯಯೇತ್ಯಾದಿ 'ಆತ್ಮಾऽಸ್ತೀತಿ' ಮಮ ಶರೀರಮ್ 'ಮಮೇನ್ದ್ರಿಯಮ್' 'ಮಮ ಬುದ್ಧಿಃ' 'ಮಮಸ್ಮೃತಿಃ', 'ಶರೀರೀ ಅಹಮ್' 'ಸ್ಫುಟೇಂದ್ರಿಯೋಹಮ್' 'ಜಾನಾಮಿ' 'ಸ್ಮರಾಮಿ' ಇತಿ ಶರೀರೇಂದ್ರಿಯಬುದ್ಧ್ಯುತ್ತೀರ್ಣಃ ಅಹಂ ಪ್ರತ್ಯಯಾಧೀನತಯಾ ಸ್ಮೃತ್ಯಾದೀನಾಮಪಿ ಭಾಸಮಾನತ್ವಾತ್ ತದ್ವ್ಯತಿರಿಕ್ತಃ ಕಶ್ಚಿದಾತ್ಮಾ ಅಂಗೀಕರಣೀಯಃ ಇತ್ಯರ್ಥಃ ।

ನನು- ಅಹಂಪ್ರತ್ಯಯಸ್ಯ ಅಸ್ಮಾಭಿಃ ನಿರ್ವಿಕಲ್ಪಕಸವಿಕಲ್ಪಕ ಲಕ್ಷಣಜ್ಞಾನದ್ವಯಾನ್ತರ್ಗತತ್ವೇನಾಂಗೀಕೃತತ್ವಾತ್ ನ ತದ್ವ್ಯತಿರಿಕ್ತಃ । ನ ಚ ತರ್ಹಿ ಅಯಂ ಆತ್ಮವ್ಯತಿರಿಕ್ತಂ ನ ಕಿಂಚಿದ್ವಿಕಲ್ಪಯತೀತಿ ಆತ್ಮಾ ಸಿದ್ಧ ಏವ ಇತಿ ವಾಚ್ಯಮ್ । 'ಸ್ಥೂಲೋಹಮ್' 'ಕೃಶೋಹಮ್' 'ಸುಖ್ಯಹಮ್' 'ದುಃಖ್ಯಹಮ್' ಇತಿ ರೂಪವೇದನಾಸಂತಾನಸಂಸ್ಪರ್ಶಿತ್ವೇನ ಶರೀರಾದೀನ್ ವಿಕಲ್ಪಯತೀತಿ।। ತಸ್ಮಾತ್ ಅಸ್ಮದಂಗೀಕೃತರೂಪವಿಜ್ಞಾನವೇದನಾಸಂಜ್ಞಾ ಸಂಸ್ಕಾರ ಲಕ್ಷಣ ಪಂಚಸಂತಾನೋತ್ತೀರ್ಣಃ ಶರೀರಾದಿಸಂತಾನಮೂರ್ಧನ್ಯೋऽಪಿ ಅಹಂಪ್ರತ್ಯಯಃ ನಾತ್ಮಾ ಭವಿತುಮರ್ಹತಿ । ರೂಪವೇದನಾಸಂತಾನಸಂಸ್ಪರ್ಶಿತ್ವೇನ ಅನಿತ್ಯವಾತ್। ಸುಷುಪ್ತಿಮೂರ್ಛಾದೌ ಅಭಾವಾಚ್ಚ । ನಚ 'ಘಟಮಹಂ ಜಾನಾಮಿ' ಇತ್ಯತ್ರ ವೇದ್ಯ ರೂಪಕರ್ಮಪ್ರಕಾಶಾತ್ ವೇದನಾರೂಪಜ್ಞಾನಪ್ರಕಾಶಾಚ್ಚ ಉತ್ತೀರ್ಣತ್ವೇನ ಭಾಸಮಾನತ್ವಾತ್ ಅಹಂಪ್ರತ್ಯಯಃ ಆತ್ಮಾನಮೇವ ವಿಕಲ್ಪಯತೀತಿ ವಾಚ್ಯಮ್ । ತಸ್ಯ ಅಹಂಪ್ರತ್ಯಯವ್ಯತಿರೇಕೇಣ ಅದೃಶ್ಯತ್ವಾನ್ । ಅಹಂಪ್ರತ್ಯಯಸ್ಯ ಚ ಅನಿತ್ಯತ್ವಾತ್ ।

ಯದಿ ಪ್ರತ್ಯಯಸ್ಯ ಸವಿಷಯತ್ವಾನ್ಯಥಾನುಪಪತ್ತ್ಯಾಃ ತದ್ವ್ಯತಿರಿಕ್ತಃ ಆತ್ಮಾ ಅನುಮೀಯತೇ ತರ್ಹಿ ಕೋಽಯಮನುಮಾತಾ? ಅಹಂಪ್ರತ್ಯಯೋ ವಾ? ತದ್ವ್ಯತಿರಿಕ್ತೋ ವಾ ? ನಾದ್ಯಃ ಅನಿತ್ಯೇ ಅಹಂಪ್ರತ್ಯಯಸ್ಯ ಅನುಮಾತೃತಾಂಗೀಕಾರೇಣ ಅಸ್ಮನ್ಮತ ಪ್ರವೇಶಾಪತ್ತೇಃ । ನ ದ್ವಿತೀಯಃ । ತದ್ವ್ಯತಿರಕ್ತಸ್ಯಾನುಮಾತುರದೃಶ್ಯತ್ವಾತ್ । ಯದಿ ದೃಶ್ಯಃ - ತರ್ಹಿ ತಸ್ಯ ಬುದ್ಧಿ ತುಲ್ಯತ್ವಪ್ರಸಂಗಾತ್ । ತಸ್ಮಾತ್ ಬುದ್ಧಿರೇವ ಆತ್ಮಾ- ಇತಿ- ಚೇತ್-

ಮೈವಮ್ ॥ ಬುದ್ಧೇಃ ಕ್ಷಣಿಕತ್ವೇನ, ಭಿನ್ನಕಾಲಭಿನ್ನ ವಿಷಯ- ಭಿನ್ನಾಕಾರತ್ವೇನ ಅಂಗೀಕೃತತ್ವಾತ್ ।

"ನೀಲಂ ಪೀತಾದ್ಭಿನ್ನಮ್" "ಪೀತ ನೀಲಾದ್ಭಿನ್ನಮ್"

"ನೀಲಮಹಂ ಜಾನಾಮಿ" "ಪೀತಮಹಂಜಾನಾಮಿ"

"ಯೋಽಹಂ ಬಾಲ್ಯೇ ಪಿತರಾವನ್ವಭೂವಮ್, ಸ ಏವಾಹ ಇದಾನೀಂ ಪುತ್ರದಾರಾನನುಭವಾಮಿ" ಇತಿ ಏಕಸಂವಿಲಗ್ನತಯಾ ಬಾಹ್ಯಾಭ್ಯಂತರಾನುಸಂಧಾನಾ ಸಮ್ಭವಾತ್ ಕ್ಷಣದ್ವಯಾವಗಾಹಿಸಂವಿದಂತರಾನಂಗೀಕಾರಾತ್, ಸ್ಮೃತೇಃ ಸ್ವಸಮಾನ ವಿಷಯತಾವ್ಯವಸ್ಥಾಪಕತ್ವೇನ ಸಂಸ್ಕಾರಸ್ಯ ಕೃತಾರ್ಥತ್ವಾತ್, ಸ್ಮೃತಿಜನಕಂ ನ ಕಶ್ಚಿತ್ವಶ್ಯಾಮಃ ಇತಿ ಸ್ಮೃತೇಃ ಗಗನಕುಸುಮಾಯಮಾನತ್ವೇನ ತನ್ಮೂಲಕಸ್ಯ ಸರ್ವಸ್ಯಾಪಿ ಲೋಕವ್ಯಹಾರಸ್ಯೋಉಚ್ಛಿತ್ತಿಪ್ರಸಂಗಾಚ್ಚ ॥

ತಸ್ಮಾತ್ ನಿತ್ಯಃ ಕಶ್ಚಿದಾತ್ಮಾ ಅನುಸನ್ಧಾತಾ ಜ್ಞಾನ ಸ್ಮೃತ್ಯಪೋಹನ ಶಕ್ತಿಮಾನ್ ಅಂಗೀಕರಣೀಯಃ ।

"ಮತ್ತಃ ಸ್ಮೃತಿಃ ಜ್ಞಾನಮಪೋಹನಂ ಚ "
ಇತಿ ಏತದಭಿಪ್ರಾಯೇಣೈವ ಭಗವತಾಽಪಿ ಗೀತವಾತ್ ।

ಸ ಚ ಅಹಂ ಪ್ರತ್ಯಯಸ್ವರೂಪ ಏವ । ತದ್ಭಿನ್ನಸ್ಯ ಅದೃಶ್ಯತ್ವಾದಿತಿ ಸೂಕ್ತತ್ವಾತ್। ತಸ್ಯ ಸುಷುಪ್ತಿಮೂರ್ಛಾದೌ ಅಭಾವಾನ್ನಾನಿತ್ಯತ್ವಮಾಶಂಕನೀಯಮ್ । ತದಾ ತಸ್ಯ ಶೂನ್ಯಸ್ಥಾನ ನಿಮಗ್ನತ್ವೇನ ತದೀಯಸ್ವಪ್ರಕಾಶಸ್ಯ ತಿರೋಹಿತತ್ವಾತ್ । ಅನ್ಯಥಾ-ಉತ್ಥಿತಸ್ಯ "ಸುಖಮಹಮಸ್ವಾಪ್ಸಮ್" ಇತಿ ಸುಖಸ್ಮೃತ್ಯನುದಯಪ್ರಸಂಗಃ ಸ್ಮೃತೇಃ ಅನುಭವ ಮೂಲತ್ವಾತ್, ಸ್ವತಂತ್ರಾಶೀಭೂತ ಪ್ರಾಣವಾಯು ಪರಿಸ್ಪಂದಸ್ಯ ವಿದ್ಯಮಾನತ್ವೇನ ತಸ್ಯ ಹಾನಾದಾನಾದಿರೂಪತಯಾ ಕರ್ತೃನಿರೂಪಿತತ್ವಾತ್, ಕರ್ತುಃ ಜ್ಞಾನಪುರಸ್ಸರತ್ವಾತ್ ಇತಿ ಸಂಕ್ಷೇಪಃ ।

(ಸಿದ್ಧಾಂತ ಶಿಖಾಮಣಿ-ತತ್ತ್ವಪ್ರದೀಪಿಕಾಟೀಕು ಪುಟ ೧೧೨-೧೧೭)

೪. ವೃಕ್ಷಮೆಂತು ಕಾಲಶಕ್ತಿಯಿಂ ವಿಕಾರವಿಲ್ಲದೆ ತನ್ನೊಳಡಗಿರ್ದ ಸ್ವಜಾತಿಯ ಪತ್ರ ಪುಷ್ಪಾದಿಭೇದ ವಿಶಿಷ್ಟವಾಗಿ ತೋರುತ್ತಿಹುದು ಹಾಗೆ ಶಿವಂ ಸ್ವಸಮೇತ ಶಕ್ತಿಯಲ್ಲಿ

ತಾದಾತ್ಮ್ಯದಿಂದಿರುವ ಭೂಮ್ಯಾದಿಭೇದ ವಿಶಿಷ್ಟವಾಗಿ ಪ್ರತಿಸ್ಫುರಣಾಗತಿಯಿಂ ತೋರುತ್ತಿಹನು ಇಲ್ಲಿ ಧೃತಿಶಕ್ತಿಯಿಂ ಧರಣಿಯು ಕರುಣಶಕ್ತಿಯಿಂ ಜಲವು ಉಜ್ವಲತೆಯಿಂ ತೇಜಸ್ಸು ಪರಮಾನಂದಸ್ಪಂದನವೆ ವಾಯು ಚಿದ್ವ್ಯಾಪ್ತಿಯೆ ವ್ಯೋಮವು ಚಿಚ್ಛಕ್ತಿಯ ಸಂಕೋಚದಿಂ ಚಿತ್ರವಿಶಿಷ್ಟವಾದ ಜೀವನೆಂಬುದು ವಿವೇಕಂ. ಬಳಿಕಿಲ್ಲಿ ವೃಕ್ಷ ಸಾಂಶಮಾದ ಕಾರಣದಿಂ ಫಲಪುಷ್ಪಾದಿ ರೂಪದಿಂ ನಿರಂಶವೆ ಆಗಲಾಗಲಿ ಸಾವಯವ ಪ್ರಪಂಚರೂಪದಿಂದೆಂತು ತೋರುವುದೆಂದು ಶಂಕಿಸಲಾಗದು ಶಕ್ತಿಶಿವಾಭಿನ್ನಮಾದರೂ ಅತಿ ದುರ್ಘಟನಕಾರಿಯಾದ ಕಾರಣದಿಂ ಸರ್ಪಕುಂಡಲನ್ಯಾಯದಿಂ ತನ್ನ ಸ್ವತಂತ್ರತೆಯಿಂ ಕಲ್ಪಿಸಲ್ಪಟ್ಟ ಭೇದವು ಉಂಟೆ ಇದರಿಂ ಪರಮಾಣುಕಾರ್ಯಮಾದ ದ್ವ್ಯಣುಕದಲ್ಲಿ ನಿರಂಶಮಾದ ಪರಮಾಣುದ್ವಯ ಸಂಯೋಗದಿಂ ಸಾಂಶತ್ವಮುಂಟಾಗುವಂತೆ ಅಸಮವೇತ ಶಕ್ತಿಯ ಕಾರ್ಯರೂಪಮಾದ ಮಾಯಾಶಕ್ತಿಗೆ ಸಾಂಶತ್ವ ಸಂಭವಿಸೂದೆಂದು ಪೂರ್ವದಲ್ಲಿ ಪ್ರತಿಪಾದಿಸಿಹ ಕಾರಣದಿಂ ವಿಷ್ಟಭ್ಯಾಹ್ಯಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ಹೀಗೆಂಬ ಭಗವದ್ವಾಕ್ಯವು ಈ ಅರ್ಥದಲ್ಲಿ ಪ್ರಮಾಣವಾಗಿರುವುದು. ಶುಕ್ತಿರಜತಾದಿಗಳಲ್ಲಿ ಅರ್ಥಕ್ರಿಯಾಶೂನ್ಯತೆಯು ಉತ್ತರಲಕ್ಷಣಬಾಧ್ಯಮಾನತೆಯು ತನ್ನ ಸ್ವತಂತ್ರ ಕ್ರಿಯೆಯಿಂದುಂಟಾದ ಶಕ್ತಿ ಶೂನ್ಯ ನಿರ್ಭಾವಕೃತವೆಂದು ಭಾವಿಸೂದುಪರಿವಿಚಾರವನ್ನಿಲ್ಲಿ ಗ್ರಂಥವಿಸ್ತಾರಭಯದಿಂ ಬರೆಯಲಿಲ್ಲ. ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ಬರದಿದೆ ವಿದ್ವಾಂಸರಾದವರಲ್ಲಿ ನೋಡಿ ಕೊಂಬುದು ॥೭೨॥

(ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು ಪುಟ ೧೩೩-೧೩೪)

ನನು ಏಭಿಃ ದೃಷ್ಟಾಂತೈಃ ವಿಶ್ವಂ ಪ್ರಾತೀತಿಕಂ ಸ್ಯಾತ್ ಇತ್ಯತ್ರದೃಷ್ಟಾಂತರಮಾಹ-

ವೃಕ್ಷೋ ಯಥಾ ಕಾಲಶಕ್ತ್ಯಾ ವಿಕಾರರಾಹಿತ್ಯೇನ ಸ್ವಾಂತರ್ಲೀನಸ್ವವಿಜಾತೀಯ ಪತ್ರಪುಷ್ಪಾದಿಭೇದವಿಶಿಷ್ಟತ್ವೇನ ಭಾತಿ, ತಥಾ ಶಿವ ಏವ ಸ್ವಸಮವೇತ ಶಕ್ತಿತಾದಾತ್ಮ್ಯ ಕ್ರೋಡೀಕೃತಭೂಮ್ಯಾದಿರೂಪೇಣ ಪ್ರತಿಸ್ಫುರಣತಯಾ ಭಾತೀತ್ಯರ್ಥಃ

ತತ್ರ ಧೃತ್ಯಾ ಧರಣಿಃ, ಕರುಣಯಾ ಜಲಮ್, ಉಜ್ಜ್ವಲತಯಾ ತೇಜಃ, ಪರಮಾನಂದಸ್ಪನ್ದನೇನ ವಾಯುಃ, ಚಿದ್ವ್ಯಾಪ್ತ್ಯಾ ವ್ಯೋಮ, ಚಿತಿಸಂಕೋಚಚಿತ್ತವಿಶಿಷ್ಟೋ ಜೀವಃ ಇತಿ ವಿವೇಕಃ ।

ನನು ವೃಕ್ಷಸ್ಯ ಸಾವಯವತ್ವಾತ್, ತದಾಭಾಸಸಂಯುಕ್ತ ಶಿವಸ್ಯ ನಿರವಯತ್ವಾತ್ ತತ್ಸಮವೇತ ಶಕ್ತೇರಪಿ ತದಭಿನ್ನತ್ವೇನ ತಥಾತ್ವಾತ್, ಕಥಂ ಸಾವಯವಪ್ರಪಂಚರೂಪೇಣ ಭಾಸನಂ ಸಮ್ಭವತೀತಿ ನಾಶಂಕನೀಯಮ್ । ಶಕ್ತೇಃ ಶಿವಾಭಿನ್ನತ್ವೇ ಸತಿ ದುರ್ಘಟಕಾರಿತ್ವೇನ "ಅಹಿಕುಣ್ಡಲನ್ಯಾಯೇನ ಸ್ವಸ್ವಾತಂತ್ರ್ಯಪರಿಕಲ್ಪಿತಭೇಧೋಪಸ್ಥಿತಿಃ ಪರಮಾಣು ಕಾರ್ಯಭೂತ ದ್ವ್ಯಣುಕಾದಾವಿವ ತತ್ಕಾರ್ಯರೂಪಮಾಯಾಶಕ್ತೇಃ ಸಾಂಶತ್ವೇ ಸಂಭವತೀತ್ಯುಕ್ತತ್ವಾತ್ ।

"ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತಂ ಜಗತ್" ಇತಿ ಭಗವದುಕ್ತೇಶ್ಚ ॥

ಪ್ರಾತೀತಿಕಪ್ರಪಂಚರೂಪೇಣಾಪಿ ಸ್ವಶಕ್ತಿನ್ಯೂನೀಭಾವೇನ ಶಿವ ಏವ ಭಾಸತೇ ।

ಶುಕ್ತಿರಜತಯೋಃ ಪರಸ್ಪರಭೇದ ಸತ್ವಾತ್ ಮೇಲಕಾಂಶೋ ನಾಸ್ತೀತಿ ವದತಾ ನಿಷೇಧ ಪ್ರತಿಯೋಗಿತ್ವೇನ ಸಮಾನಯೋಗೇನ ಚ ಸೋಽಪ್ಯಂಗೀಕರಣೀಯ ಏವ । ಸಾ ಚ ಉತ್ತರಕ್ಷಣಬಾಧ್ಯಮಾನತ್ವಾತ್ ಶಕ್ತಿನ್ಯೂನೀಭಾವನಿಬಂಧನೇತಿ । ಸರ್ವಂವಿಶ್ವಂ ಶಿವಮಯಮೇವೇತಿ ಸಂಕ್ಷೇಪಃ

(ಸಿದ್ಧಾಂತ ಶಿಖಾಮಣಿ-ತತ್ತ್ವಪ್ರದೀಪಿಕಾಟೀಕು ಪುಟ ೨೯೪-೨೯೫)

೫. ದ್ವಿತೀಯಾದ್ಭಯಮೇವ ಪಶ್ಯಂತಿ ಎಂಬ ಬೃಹದಾರಣ್ಯಕಶ್ರುತಿಯಿಂದಲೂ ಯುಕ್ತಿಯಿಂದಲೂ ನಿರಾಕರಿಸಲ್ಪಟ್ಟದ್ವೈತವಾಕ್ಯವುಳ್ಳ ರಾಗದ್ವೇಷರಹಿತನಾಗಿ ತನ್ನ ವಿಮರ್ಶದಲ್ಲಿಯೆ ವಿಶ್ರಾಂತಿಯುಳ್ಳ ವಿರಕ್ತನಾದ ಶಿವಯೋಗಿಗೆ ತಿಳಿಯಲ್ತಕ್ಕ ಮತ್ತೊಂದು ವಸ್ತುವಾವುದುಂಟು ಯಾವುದೂ ಇಲ್ಲವೆಂಬುದರ್ಥಂ. ಇಲ್ಲಿ ಯುಕ್ತಿ ಯಾವುದೆಂದಡೆ ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ಭೇದವನಾರು ಪ್ರಕಾರದಿಂ ವಿಕಲ್ಪಿಸಿ ಖಂಡಿಸಿ ಅದೇ ಅದು ವಿದ್ವಾಂಸರಿಗೆ ಗಮ್ಯವೆಂಬುದರಿಂದಿಲ್ಲಿ ಕಿಂಚಿನ್ಮಾತ್ರಂ ಕೇಳಲ್ಪಡುತ್ತದೆ ಭೇದವೆಂಬುದು ಸ್ವತಃ ಸಿದ್ಧವೊ ಪರತಸಿದ್ಧವೊ ಎಂಬಲ್ಲಿ ಸ್ವತಃ ಸಿದ್ಧವಾದಡೆ ಬ್ರಹ್ಮದಂತೆ ಸ್ವತಂತ್ರಸ್ವಪ್ರಕಾಶವಾಗಬೇಕು ಬಳಿಕ ಬ್ರಹ್ಮವೂ ಮಾನಾಂತರಸಿದ್ಧವಾದುದರಿಂ ಸ್ವತಃ ಸಿದ್ಧವಲ್ಲವೆಂದಡೆ ಮಾನಾಂತರದಿಂದುಂಟಾದ ಸಿದ್ಧಿಯು ಉತ್ಪತ್ತಿಸಿದ್ಧಿಯೋ ಜ್ಞಾಪ್ತಿಸಿದ್ಧಿಯೋ ಎಂಬ ವಿಕಲ್ಪದಲ್ಲಿ ಬ್ರಹ್ಮ ನಿತ್ಯವಾದುದರಿಂದುತ್ಪತ್ತಿಸಿದ್ಧಿ ಕೂಡದು. ಸ್ವಪ್ರಕಾಶವಾದುದರಿಂ ಜ್ಞಾಪ್ತಿಸಿದ್ಧಿಯೂ ಕೂಡದು. ಅನ್ಯಥಾ ಘಟದಂತೆ ಬ್ರಹ್ಮವು ಮಾನಾಂತರವೇದ್ಯವಾಗಿ ಜಡವಪ್ಪುದು ಅದು ಕಾರಣದಿಂ ಬ್ರಹ್ಮ ಪರತಸಿದ್ಧವಾದ ಸ್ವರೂಪವುಳ್ಳದಲ್ಲ ಇನ್ನು ಭೇದಂ ಪರತಸಿದ್ಧವಾದಡೆ ಘಟದಂತಾಂತರಾಳಿಕವಾಗಿ ಅಭೇದ ಸ್ಥಿರವುಹುದೆಂಬುದು ರಹಸ್ಯ ||೫೮|| ಬಳಿಕ ಪೂರ್ವೋಕ್ತ ಸೂತ್ರತ್ರಯಾರ್ಥವನೆ ವಿಶೇಷಿಸುತಿರ್ದಪಂ.

(ಸಿದ್ಧಾಂತ ಶಿಖಾಮಣಿ-ಸುಪ್ರಬೋಧಿನೀಟೀಕು ಪುಟ -೨೪೮)

"ದ್ವಿತೀಯಾತ್ ಭಯಮೇವ ಪಶ್ಯಂತಿ"

ಇತಿ ಬೃಹದಾರಣ್ಯಕಶ್ರುತೇಃ, ಯುಕ್ತ್ಯಾ ಚ ನಿರಾಕೃತದ್ವೈತವಾಕ್ಯಸ್ಯ ಪ್ರಶಾಮ್ಯತಃ ರಾಗದ್ವೇಷರಹಿತಸ್ಯ ಸ್ವೇ ಮಹಿಮ್ನಿ ಸ್ವವಿಮರ್ಶೇ ವಿಲೀನಸ್ಯ ತದೇಕನಿಷ್ಠಸ್ಯ ನಿರೀಹಸ್ಯ ವಿರಕ್ತಸ್ಯ ಶಿವಯೋಗಿನಃ ಜ್ಞೇಯಂ ಜ್ಞಾತುಂ ಯೋಗ್ಯಂ ಅನ್ಯತ್ ಕಿಮ್? ನ ಕಿಮಪೀತ್ಯರ್ಥಃ

ನನು ಅತ್ರ ಯುಕ್ತಿಃ ಕಿಮ್? ಇತಿ ಚೇತ್-ಉಚ್ಯತೇ-

ಭೇದೋ ನಾಮ ಕಿಮನ್ಯೋನ್ಯಾಭಾವೋ ವಾ ? ವೈಧರ್ಮ್ಯಂ ವಾ? ವಸ್ತುಸ್ವರೂಪಂ ವಾ ? ಇತಿ ತ್ರೇಧಾ ವಿಕಲ್ಪಃ।

ಆದ್ಯೇಽ ಪಿ ತತ್ರ ಅನ್ಯತ್ವಂ ಭಾವಸ್ವಭಾವೋ ವಾ? ಭೇದನಿಬಂಧನಃ ಕುಶ್ಚಿದು ಪಾಧಿರ್ವಾ? ಇತಿ ದ್ವಿಧಾ ವಿಕಲ್ಪಃ । ತತ್ರ ನಾದ್ಯಃ । ಭಾವಸ್ಯ ಅಭಾವತ್ವಪ್ರಸಂಗಾತ್। ಅನ್ಯತ್ವಸ್ಯ ಭಾವಸ್ವಭಾವತ್ವಾತ್ ? "ಭಾವಾದನ್ಯೋಭಾವಃ" ಇತಿ ಪ್ರಸಿದ್ಧತ್ವಾತ್ "ನನು

ಭಾಘಾನಾಂ ಬಾಹುಲ್ಯಾತ್। ಭಾವಸ್ಯ ಭಾವಾಂತರನ್ಯತ್ವಂ ಸ್ವಭಾವಃ ಇತಿ ಚೇತ್ ಅಸ್ತು ತಸ್ಯ ವಿಶೇಷಘಟಿತತ್ವಾತ್। ಇಹ ತು ಭೇದಸಾಮಾನ್ಯಲಕ್ಷಣಪ್ರವಿಷ್ಟಸ್ಯ ಅನ್ಯತ್ವಸ್ಯ ಪ್ರಶ್ನವಿಷಯತ್ವೇನ ನ ತದುತ್ತರಂ ಭವಿತುರ್ಮರ್ಹತಿ । ತಸ್ಯಂ ಭೇದಸಿದ್ಧ್ಯನನ್ತರ ಭಾವಿತ್ವಾತ್। ಕಿಂಚ "ಭಾವಸ್ಯ ಭಾವಾಂತರಾನ್ಯತ್ವಂ ಸ್ವಭಾವಃ ಇತಿ ಚೇತ್ ಅಸ್ತು ತಸ್ಯ ವಿಶೇಷ ಘಟಿತತ್ವಾತ್। ಇಹ ತು ಭೇದಸಾಮಾನ್ಯಲಕ್ಷಣಪ್ರವಿಷ್ಟಸ್ಯ ಅನ್ಯತ್ವಸ್ಯ ಪ್ರಶ್ನವಿಷಯತ್ವೇನ ನ ತದುತ್ತರಂ ಭವಿತುರ್ಮರ್ಹತಿ । ತಸ್ಯಂ ಭೇದಸಿದ್ಧ್ಯನನ್ತರ ಭಾವಿತ್ವಾತ್। ಕಿಂಚ "ಭಾವಸ್ಯ ಭಾವಾಂತರಾಯನ್ಯತ್ವಂ ಸ್ವಭಾವಃ" ಇತಿ ನಿಯಮಃ ತತ್ತದ್ಭಾವಕೃತೋ ವಾ ? ತದ್ವ್ಯತಿರಿಕ್ತ ಮಹಾಪುರುಷಕೃತೋ ವಾ ? ನಾದ್ಯಃ ಘಟಾದಿಭಾವಸ್ಯ ಜಡತ್ವೇನ ಕರ್ತೃತ್ವಾಭಾವಾತ್ । ನ ದ್ವಿತೀಯಃ । ಕಲ್ಪನಾಯಾಃ ಪ್ರಾಕ್ ಅನನ್ಯತ್ವೇನ ಆಂತರಾಲಿಕತಯಾ ಅನ್ಯತ್ವಸ್ಯ ತತ್ಸ್ವಭಾವತ್ವಾಸಮ್ಭವಾತ್। ನಮ ನ ಕೇನಾಪಿ ಕೃತಃ, ಕಿಂತು ಸ್ವತಃಸಿದ್ಧಃ ಇತಿ ಚೇತ್-ತರ್ಹಿ ಸ್ವಪ್ರಕಾಶೋಽಪಿ ಭವೇತ್। ಬ್ರಹ್ಮವತ್ ಸ್ವತಃ ಸಿದ್ಧತ್ವಾತ್। ನನು ಬ್ರಹ್ಮಾಪಿ ಮಾನಾಂತರಸಿದ್ಧಮಿತಿ ನ ಸ್ವತಸ್ಸಿದ್ಧಮಿತಿ ವಾಚ್ಯಮ್ । ನಿತ್ಯತ್ವೇನ ಕಾರಕವ್ಯಾಪಾರ ಸಮ್ಭವಾತ್। ಸ್ವಪ್ರಕಾಶತ್ವೇನ ಜ್ಞಾಪಕವ್ಯಾಪಾರಸಮ್ಭವಾತ್। ಅನ್ಯಥಾ ಜಡತ್ವ ಪ್ರಸಂಗಾತ್ ॥ ನಾಪಿ ಅನ್ಯತ್ವಂ ಭೇದನಿಬಂಧನಃ ಕಶ್ಚಿದುಪಾಧಿಃ ಅನ್ಯಥಾ ಜಡತ್ವಪ್ರಸಂಗಾತ್॥ ನಾಪಿ ಅನ್ಯತ್ವಂ ಭೇದನಿಬಂಧನಃ ಕಶ್ಚಿದುಪಾಧಿಃ ॥ ಆತ್ಮಾಶ್ರಯತ್ವಾದಿ ದೋಷಪ್ರಸಂಗಾತ್॥

ನಾಪಿ ದ್ವಿತೀಯಃ "ಘಟೇ ಪಟತ್ವಂ ನಾಸ್ತಿ" "ಪಟೇ ಘಟತ್ವಂ ನಾಸ್ತಿ!" ವೈಧರ್ಮ್ಯಾತ್। ಏವಂವಿಧನಿಶ್ಚಯಸ್ಯ ಘಟಪಟಭೇದಸಿದ್ಧ್ಯನನ್ತರ ಭಾವಿತ್ವಾತ್। ನ ಚ ಘಟಪಟಯೋಃ ತಂತುಮಯತ್ವಮೃಣ್ಮಯತ್ವಾಭ್ಯಾಂ ಭೇದಃ ಸಿದ್ಧ ಏವೇತಿ ವಾಚ್ಯಮ್। ಘಟೇ ಏವ ಮೃಣ್ಮಯತ್ವಮ್। ಪಟೇ ಏವ ತಂತುಮಯತ್ವಮ್ ಇತಿ ಅಸಾಧಾರಣ ಪ್ರತೀತೇಃ ಘಟಪಟಭೇದಸಿದ್ಧ್ಯಧೀನತ್ವಾತ್। ತಸ್ಯಾಃ ಅದ್ಯಾಪಿ ಸಾಧ್ಯಕೋಟಿಪ್ರವಿಷ್ಟತ್ವಾತ್। ಕಿಂಚ ತಂತುಮಯತ್ವಮೃಣ್ಮಯತ್ವಯೋಃ ಭೇದಃ ತತ್ರ ತದವಯವಭೇದಾದಿತಿ ಪರಮಾಣುಪರ್ಯಾಲೋಚನಾಯಾಂ, ನಿರವಯವತ್ವೇನ ಭೇದಾಗ್ರಹಾತ್ ಮೂಲಕ್ಷಯಕಾರಿಣೀ ಅನವಸ್ಥಾ ಸ್ಯಾತ್ ಇತಿ॥

ನಾಪಿ ದ್ವಿತೀಯಃ । ವಸ್ತುಸ್ವರೂಪಂ ಹಿ ವಸ್ತ್ವಂತರಸ್ವರೂಪಾ ನನುಗಾಮಿತ್ಯಂಗೀಕರಣೀಯಮ್। ಅನ್ಯಥಾ ಸ್ವರೂಪಸಾಂಕರ್ಯಾಪತ್ತೇಃ।

ಏವಂ ಚ- 'ಇದಂ ರಜತಮ್' ಇತ್ಯತ್ರ ಶುಕ್ತಿರೇವ ರಜತಾಕಾರೇಣ ನಿಶ್ಚೀಯತೇ ಇತಿ ಭ್ರಾಂತಿಜ್ಞಾನೋಚ್ಛೇದಪ್ರಸಂಗಾತ್॥ ದೂರತ್ವಾದಿದೋಷವಶಾತ್ ತಥಾ ನಿಶ್ಚೀಯತೇ ಇತಿ ಚೇತ್-ತರ್ಹಿ ಇಂಗಾಲಾದಿಕಮಪಿ ರಜತತ್ವೇನ ಕುತೋ ನ ನಿಶ್ಚೀಯತೇ ? ನ ಚ ವಿಶೇಷದರ್ಶನಸಾಮಗ್ರೀ ಪ್ರತಿಬಂಧಿಕೇತಿ ವಾಚ್ಯಮ್ ಶುಕ್ತಿಕಾಯಾಮಪಿ ವಿಶೇಷದರ್ಶನ ಸಾಮಗ್ರೀಸತ್ತ್ವೇನ ಅನಾರೋಪಪ್ರಸಂಗಾತ್ । ಅವಿಶೇಷದರ್ಶನಸಾಮಗ್ರೀಪ್ರಾಬಲ್ಯಾತ್

ಆರೋಪಃ ಸಂಭವತೀತಿ ಚೇನ್ನ। ವಸ್ತ್ವಂತರೇ ವಸ್ತ್ವಂತರರೂಪಂ ಅನುಪ್ರವಿಷ್ಟಮಿತಿ ಅಂಗೀಕಾರಣೀಯತ್ವೇನ ಅನನುಪ್ರವಿಷ್ಟಮಿತಿ ವಕ್ತುಮಶಕ್ಯತ್ವೇನ ಸ್ವರೂಪಸಾಂಕರ್ಯಾಪತ್ತೇರನಿವಾರ್ಯತ್ವೇನ ಭೇದವಾದೋಚ್ಛೇದಪ್ರಸಂಗಾತ್ । ಪೂರ್ವೋಕ್ತದೋಷ ಪ್ರಸಂಗಾಚ್ಚ ॥

ಕಿಂಚ-ವಸ್ತುನಿ ಭಾಸಮಾನೋ ಭೇದಃ ತತ್ತದ್ವಸ್ತು ಸ್ವರೂಪಾಭಿನ್ನೋ ವಾ? ಭಿನ್ನೋ ವಾ ಸ್ಯಾತ್ ?

ನಾದ್ಯಃ । ಅತ್ಯಂತವಿರೋಧಾತ್। ಭೇದಸ್ಯ ಅಭೇದತ್ವಾಸಮ್ಭವಾತ್।

ನ ದ್ವಿತೀಯಃ । ಸೋಽಪಿ ಭೇದಃ ಕೀದೃಶಃ? ಇತಿ ಉಪರ್ಯುಪರಿ ವಿಚಾರ್ಯಮಾಣೇ ಅನವಸ್ಥಾಮೇವ ಉಪಸ್ಥಾಪ್ಯತೀತಿ ವಿಶ್ರಾಂತ್ಯಭಾವಾತ್ ।

ನಾಪ್ಯನ್ಯತಾಭಾವೋ ಭೇದಃ, ಆತ್ಮಾಶ್ರಯಪ್ರಸಂಗಾತ್। ನಾಸ್ತ್ಯೈಕ್ಯಪ್ರತಿಯೋಗೀ, ಏಕತ್ವಸ್ಯ ಪ್ರತಿಯೋಗ್ಯಭಾವಾತ್। ದ್ವಿತ್ವಾದೀನಾಂ ತನ್ಮೂಲಕತ್ವಾತ್। ನಾಪಿ ವಿಭಾಗಃ। ತಸ್ಯ ಸಂಯೋಗಪೂರ್ವಕತ್ವೇನ ಪೂರ್ವಾಪರಂ ದಿಶೋಃ ಪೂರ್ವಪಶ್ಚಿಮಾಲಯೋಶ್ಚ ಕದಾಽಪಿ ಸಂಯೋಗಭಾವೇನ ಭೇದಾಭಾವಪ್ರಸಂಗಾತ್ ॥

ತಸ್ಮಾತ್ ಗತ್ಯಂತರಾಭಾವೇನ ಭೇದವ್ಯವಹಾರಸಿದ್ಧ್ಯರ್ಥಂ ಸಕಲಸಾಮರಸ್ಯಾತ್ಮನಃ ಮಹೇಶ್ವರಸ್ಯ ಇಚ್ಛಾವಶಾತ್ ಸಾಗರತರಂಗನ್ಯಾಯೇನ ಅಭೇದಪರ್ಯವಸಾಯಿತ್ವೇನ ಕಲ್ಪಿತವಿಭಾಗೋ ಭೇದ ಏವತ್ಯಂಗೀಕಾರಣೀಯತ್ವೇನ ಅಭೇದ ಏವ ಸಿದ್ಧ್ಯತೀತಿ ಶಿವಾದ್ವೈತಸಿದ್ಧಾಂತಾನಾಂ ಯುಕ್ತಿರೀದೃಶೀತಿ ವಿಚಕ್ಷಣೈಃ ವಿಮರ್ಶನೀಯಾ ಇತಿ॥

(ಸಿದ್ಧಾಂತ ಶಿಖಾಮಣಿ ತತ್ತ್ವ ಪ್ರದೀಪಿಕಾಟೀಕು ಪುಟ ೫೬೯-೫೭೩)

# ಪರಿವಿಡಿ


ಪೀಠಿಕೆ V

ಪ್ರಥಮ ಪರಿಚ್ಛೇದ
ಮಂಗಳಾಚರಣೆ-ವಂಶಾವಳಿ ೧

ದ್ವಿತೀಯ ಪರಿಚ್ಛೇದ
ರೇಣುಕ ದಾರುಕ ಅವತರಣ ೯

ತೃತೀಯ ಪರಿಚ್ಛೇದ
ರೇಣುಕ ಭೂಲೋಕಾಗಮನ ೧೭

ಚತುರ್ಥ ಪರಿಚ್ಛೇದ
ರೇಣುಕಾಗಸ್ತ್ಯಸಂಭಾಷಣ ೩೧

ಪಂಚಮ ಪರಿಚ್ಛೇದ
ಸಿದ್ಧಾಂತ ಶಾಸ್ತ್ರ ಕಥನಂ ಪ್ರಥಮ ಪೀಠಿಕೆ ೪೦

ಷಟ್ಸ್ಥಲ ನಿರೂಪಣ ೪೫

ಭಕ್ತಸ್ಥಲ ಭೇದ ವಿವರಣ
(ಅಂಗಸ್ಥಲ -೪೪) ೪೬

೧. ಪಿಂಡಸ್ಥಲ ೪೭
೨. ಪಿಂಡಜ್ಞಾನಸ್ಥಲ ೫೫
೩. ಸಂಸಾರ ಹೇಯಸ್ಥಲ ೫೬

ಷಷ್ಠಪರಿಚ್ಛೇದ

೪. ಗುರುಕಾರುಣ್ಯ ಸ್ಥಲ ೬೧
೫. ಲಿಂಗಧಾರಣಸ್ಥಲ ೬೫

ಸಪ್ತಮಪರಿಚ್ಛೇದ

೬. ವಿಭೂತಿಧಾರಣ ಸ್ಥಲ ೭೪
೭. ರುದ್ರಾಕ್ಷಧಾರಣಸ್ಥಲ ೮೨

ಅಷ್ಟಮಪರಿಚ್ಛೇದ

೮. ಪಂಚಾಕ್ಷರೀಜಪಸ್ಥಲ ೮೭

**ನವಮಪರಿಚ್ಛೇದ**


೯. ಭಕ್ತಮಾರ್ಗ ಕ್ರಿಯಾಸ್ಥಲ ೯೯

೧೦. ಉಭಯಸ್ಥಲ ೧೦೮

೧೧. ತ್ರಿವಿಧ ಸಂಪತ್ತಿಸ್ಥಲ ೧೧೦

೧೨. ಚತುರ್ವಿಧ ಸಾರಾಯಸ್ಥಲ ೧೧೧

೧೩. ಸೋಪಾಧಿಕ ಮಾಟಸ್ಥಲ ೧೧೪

೧೪. ನಿರುಪಾಧಿಕ ಮಾಟಸ್ಥಲ ೧೧೫

೧೫. ಸಹಜಮಾಟಸ್ಥಲ ೧೧೫


**ದಶಮಪರಿಚ್ಛೇದ**


ಮಾಹೇಶ್ವರಸ್ಥಲ ೧೧೮

೧೬. ಮಾಹೇಶ್ವರಸ್ಥಲ ೧೧೯

೧೭. ಲಿಂಗನಿಷ್ಠಾಸ್ಥಲ ೧೨೧

೧೮. ಪೂರ್ವಾಶ್ರಯ ನಿರಸನಸ್ಥಲ ೧೨೩

೧೯. ಸರ್ವಾದ್ವೈತ ನಿರಸನಸ್ಥಲ ೧೨೬

೨೦. ಆಹ್ವಾನ ನಿರಸನಸ್ಥಲ ೧೨೭

೨೧. ಅಷ್ಟತನುಮೂರ್ತಿ ನಿರಸನಸ್ಥಲ ೧೨೮

೨೨. ಸರ್ವಗತ್ವ ನಿರಸನಸ್ಥಲ ೧೩೦

೨೩. ಶಿವಜಗನ್ಮಯಸ್ಥಲ ೧೩೧

೨೪. ಭಕ್ತದೇಹಿಕ ಲಿಂಗಸ್ಥಲ ೧೩೪


**ಏಕಾದಶಪರಿಚ್ಛೇದ**


ಪ್ರಸಾದಿಸ್ಥಲ

೨೫. ಪ್ರಸಾದಿಸ್ಥಲ ೧೩೬

೨೬. ಗುರುಮಾಹಾತ್ಮ್ಯಸ್ಥಲ ೧೩೯

೨೭. ಲಿಂಗಮಾಹಾತ್ಮ್ಯಸ್ಥಲ ೧೪೦

೨೮. ಜಂಗಮಮಾಹಾತ್ಮ್ಯಸ್ಥಲ ೧೪೨

| | |
|---|---|
| ೨೯. ಭಕ್ತಮಾಹಾತ್ಮ್ಯಸ್ಥಲ | ೧೪೪ |
| ೩೦. ಶರಣಮಹತ್ವಸ್ಥಲ | ೧೪೭ |
| ೩೧. ಪ್ರಸಾದಮಹತ್ವಸ್ಥಲ | |


**ದ್ವಾದಶಪರಿಚ್ಛೇದ**


| | |
|---|---|
| ಪ್ರಾಣಲಿಂಗಿಸ್ಥಲ | ೧೫೨ |
| ೩೨. ಪ್ರಾಣಲಿಂಗಿಸ್ಥಲ | ೧೫೩ |
| ೩೩. ಪ್ರಾಣಲಿಂಗಾರ್ಚನಸ್ಥಲ | ೧೫೪ |
| ೩೪. ಶಿವಯೋಗಸಮಾಧಿಸ್ಥಲ | ೧೫೬ |
| ೩೫. ನಿಜಲಿಂಗಸ್ಥಲ | ೧೫೯ |
| ೩೬. ಅಂಗಲಿಂಗಸ್ಥಲ | ೧೬೧ |


**ತ್ರಯೋದಶಾಶ್ವಾಸ**


| | |
|---|---|
| ಶರಣಸ್ಥಲ | ೧೬೪ |
| ೩೭. ಶರಣಸ್ಥಲ | ೧೬೪ |
| ೩೮. ತಾಮಸನಿರಸನಸ್ಥಲ | ೧೬೬ |
| ೩೯. ನಿರ್ದೇಶಸ್ಥಲ | ೧೬೮ |
| ೪೦. ಶೀಲಸಂಪಾದನಸ್ಥಲ | ೧೬೯ |


**ಚತುರ್ದಶಪರಿಚ್ಛೇದ**


| | |
|---|---|
| ಐಕ್ಯಸ್ಥಲ | ೧೭೨ |
| ೪೧. ಐಕ್ಯಸ್ಥಲ | ೧೭೩ |
| ೪೨. ಸರ್ವಾಚಾರಸಂಪತ್ತಿಸ್ಥಲ | ೧೭೫ |
| ೪೩. ಏಕಭಾಜನಸ್ಥಲ | ೧೭೮ |
| ೪೪. ಸಹಭೋಜನಸ್ಥಲ | ೧೭೯ |


**ಪಂಚದಶ ಪರಿಚ್ಛೇದ**


| | |
|---|---|
| (ಲಿಂಗಸ್ಥಲ-೫೭) | ೧೮೪ |

೧. ದೀಕ್ಷಾಗುರುಸ್ಥಲ ೧೮೪
೨. ಶಿಕ್ಷಾಗುರುಸ್ಥಲ ೧೮೫
೩. ಜ್ಞಾನಗುರುಸ್ಥಲ ೧೮೭
೪. ಕ್ರಿಯಾಲಿಂಗಸ್ಥಲ ೧೮೯
೫. ಭಾವಲಿಂಗಸ್ಥಲ ೧೯೦
೬. ಜ್ಞಾನಲಿಂಗಸ್ಥಲ ೧೯೨
೭. ಸ್ವಯಲಿಂಗಸ್ಥಲ ೧೯೪
೮. ಚರಲಿಂಗಸ್ಥಲ ೧೯೫
೯. ಪರಲಿಂಗಸ್ಥಲ ೧೯೬

**ಷೋಡಶಪರಿಚ್ಛೇದ**

ಮಾಹೇಶ್ವರಸ್ಥಲ ೧೯೯
೧೦. ಕ್ರಿಯಾಗಮಸ್ಥಲ ೧೯೯
೧೧. ಭಾವಾಗಮಸ್ಥಲ ೨೦೧
೧೨. ಜ್ಞಾನಾಗಮಸ್ಥಲ ೨೦೩
೧೩. ಸಕಾಯಸ್ಥಲ ೨೦೬
೧೪. ಅಕಾಯಸ್ಥಲ ೨೦೭
೧೫. ಪರಕಾಯಸ್ಥಲ ೨೦೯
೧೬. ಧರ್ಮಾಚಾರಸ್ಥಲ ೨೧೧
೧೭. ಭಾವಾಚಾರಸ್ಥಲ ೨೧೩
೧೮. ಜ್ಞಾನಾಚಾರಸ್ಥಲ ೨೧೪

**ಸಪ್ತದಶಪರಿಚ್ಛೇದ**

ಪ್ರಸಾದಿಯ ನವಲಿಂಗಸ್ಥಲ ೨೧೭
೧೯. ಕಾಯಾನುಗ್ರಹಸ್ಥಲ ೨೧೭
೨೦. ಇಂದ್ರಿಯಾನುಗ್ರಹಸ್ಥಲ ೨೧೯
೨೧. ಪ್ರಾಣಾನುಗ್ರಹಸ್ಥಲ ೨೨೧
೨೨. ಕಾಯಾರ್ಪಿತಸ್ಥಲ ೨೨೩

೧೩. ಕರಣಾರ್ಪಿತಸ್ಥಲ ೧೧೪
೧೪. ಭಾವಾರ್ಪಿತಸ್ಥಲ ೧೧೭
೧೫. ಶಿಷ್ಯಸ್ಥಲ ೧೧೯
೧೬. ಶುಶ್ರೂಷಾಸ್ಥಲ ೧೩೧
೧೭. ಸೇವ್ಯಸ್ಥಲ ೧೩೩

## ಅಷ್ಟಾದಶಪರಿಚ್ಛೇದ

ಪ್ರಾಣಲಿಂಗಸ್ಥಲ ೧೩೬
೧೮. ಆತ್ಮಸ್ಥಲ ೧೩೬
೧೯. ಅಂತರಾತ್ಮಸ್ಥಲ ೧೪೦
೨೦. ಪರಮಾತ್ಮಸ್ಥಲ ೧೪೨
೨೧. ನಿರ್ದೇಹಾಗಮಸ್ಥಲ ೧೪೪
೨೨. ನಿರ್ಭಾವಾಗಮಸ್ಥಲ ೧೪೫
೨೩. ನಷ್ಟಾಗಮಸ್ಥಲ ೧೪೭
೨೪. ಆದಿಪ್ರಸಾದಿಸ್ಥಲ ೧೪೯
೨೫. ಅಂತ್ಯಪ್ರಸಾದಿಸ್ಥಲ ೧೫೧
೨೬. ಸೇವ್ಯಪ್ರಸಾದಿಸ್ಥಲ ೧೫೨

## ಏಕೋನವಿಂಶತಿ ಪರಿಚ್ಛೇದ

ಶರಣಸ್ಥಲ ೧೫೫
೨೭. ದೀಕ್ಷಾಪಾದೋದಕಸ್ಥಲ ೧೫೬
೨೮. ಶಿಕ್ಷಾಪಾದೋದಕಸ್ಥಲ ೧೫೭
೨೯. ಜ್ಞಾನಪಾದೋದಕಸ್ಥಲ ೧೫೮
೪೦. ಕ್ರಿಯಾನಿಷ್ಪತ್ತಿಸ್ಥಲ ೧೬೧
೪೧. ಭಾವನಿಷ್ಪತ್ತಿಸ್ಥಲ ೧೬೩
೪೨. ಜ್ಞಾನನಿಷ್ಪತ್ತಿಸ್ಥಲ ೧೬೪
೪೩. ಪಿಂಡಜ್ಞಾನಸ್ಥಲ ೧೬೬

೪೪. ಬಿಂದ್ವಾಕಾಶಸ್ಥಲ ೨೬೭

೪೫. ಮಹಾಕಾಶಸ್ಥಲ ೨೬೯

೪೬. ಕ್ರಿಯಾಪ್ರಕಾಶಸ್ಥಲ ೨೭೦

೪೭. ಭಾವಪ್ರಕಾಶಸ್ಥಲ ೨೭೨

೪೮. ಜ್ಞಾನಪ್ರಕಾಶಸ್ಥಲ ೨೭೪

**ವಿಂಶತಿತಮಪರಿಚ್ಛೇದ**

ಐಕ್ಯಸ್ಥಲ ೨೭೬

೪೯. ಸ್ವೀಕೃತಪ್ರಸಾದಿಸ್ಥಲ ೨೭೬

೫೦. ಶಿಷ್ಟೌದನಸ್ಥಲ ೨೭೮

೫೧. ಚರಾಚರಲಯಸ್ಥಲ ೨೮೦

೫೨. ಭಾಂಡಸ್ಥಲ ೨೮೨

೫೩. ಭಾಜನಸ್ಥಲ ೨೮೩

೫೪. ಅಂಗಾಲೇಪಸ್ಥಲ ೨೮೫

೫೫. ಸ್ವಪರಾಜ್ಞಸ್ಥಲ ೨೮೭

೫೬. ಭಾವಾಭಾವಲಯಸ್ಥಲ ೨೮೮

೫೭. ಜ್ಞಾನಶೂನ್ಯಸ್ಥಲ ೨೮೯

**ಏಕವಿಂಶತೀಯ ಪರಿಚ್ಛೇದ**

ವಿಭೀಷಣಾಭೀಷ್ಟದಾನಂ ೨೯೬

**ಅನುಬಂಧ**

೧. ಉದ್ಧರಣೆಗಳು ೩೦೬

೨. ನ್ಯಾಯಗಳು ೩೨೬

೩. ಶ್ಲೋಕಗಳ ಅಕಾರಾದಿ ೩೩೧

# ಪ್ರಥಮಪರಿಚ್ಛೇದ

## ಮಂಗಳಾಚರಣೆ - ವಂಶಾವಳಿ

ಚಿಲ್ಲಿಂಗಂ ಚೇತಸಿ ಧ್ಯಾತ್ವಾ ಶ್ರೀ ಸಿದ್ಧಾಂತಶಿಖಾಮಣೇಃ
ಕರ್ಣಾಟಭಾಷಯಾ ಟೀಕಾ ಲಿಖ್ಯತೇ ಸುಪ್ರಬೋಧಿನೀ ॥

ಈ ಜಗತ್ತಿನೊಳ್ ಕಲಿಗಾಲ ಪ್ರವೇಶಾನಂತರದಲ್ಲಿ ಲೋಕಹಿತಾರ್ಥಮಾಗಿ ಶ್ರೀ ರೇಣುಕ ಗಣೇಶ್ವರನೆಂದು ಪ್ರಸಿದ್ಧನಾದ ರೇವಣಸಿದ್ಧೇಶ್ವರಂ ಕುಂಭಸಂಭವಂಗೋಸ್ಕರ ಶ್ರೀ ವೀರಶೈವಮಹಾಶಾಸ್ತ್ರವನುಪದೇಶಂಗೈದನು. ಆಮೇಲೆ ರೇವಣಸಿದ್ಧೇಶ್ವರನ ದೃಷ್ಟಿಗರ್ಭ ಸಂಭವನಾದ ಸಿದ್ಧರಾಮೇಶ್ವರನ ಸಂಪ್ರದಾಯದಲ್ಲಿ ಪ್ರಸಿದ್ಧನಾಗಿ ಸಕಲನಿಗಮಾಗಮ ಪಾರಂಗತನಾದ ಶಿವಯೋಗಿಯೆಂಬೊರ್ವ ಮಾಹೇಶ್ವರಂ ತದ್ರೇಣುಕಾಗಸ್ತ್ಯ ಸಂವಾದಮಂ ನಿರ್ವಿಘ್ನದಿಂ ತನ್ನ ಶಿಷ್ಯರಂ ತಿಳುಹಲೋಸುಗ ತನ್ನ ಮನಸ್ಸಿನಲ್ಲಿ ಮಾಡಲ್ಪಟ್ಟ ಸಕಲ ಸಿದ್ಧಾಂತಶ್ರೇಷ್ಠ ನಿಗಮಾಗಮೈಕ್ಯಗರ್ಭೀಕಾರಲಕ್ಷಣ ಸ್ವೇಷ್ಟದೇವತಾ ನಮಸ್ಕಾರರೂಪ ಮಂಗಲಂ ಶಿಷ್ಯಶಿಕ್ಷಾರ್ಥಮಾಗಿ ಸಪ್ತಶ್ಲೋಕಗಳಿಂ ಪ್ರಕಾಶಿಸುತಿರ್ದಪಂ.

ತ್ರೈಲೋಕ್ಯಸಂಪದಾಲೇಖ್ಯಸಮುಲ್ಲೇಖನಭಿತ್ತಯೇ
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ॥

ತ್ರೈಲೋಕ್ಯವೆಂಬುದು ಪ್ರತೀಕಂ. ಜಗದ್ರೂಪಮಾದ ಮಾಯಾಸಂಪತ್ತಿನ ಚಿತ್ರವ ಬರೆವುದಕ್ಕಾಶ್ರಯನಾದಂಥಾ ಸಚ್ಚಿದಾನಂದಸ್ವರೂಪನಾದಂಥಾ ಬ್ರಹ್ಮಣೇ- ವೇದಾಂತ ಪ್ರತಿಪಾದ್ಯನಾದಂಥಾ, ಶಿವಾಯ–ಶಿವಸಿದ್ಧಾಂತಪ್ರಸಿದ್ಧನಾದ ಪರಶಿವಂಗೋಸ್ಕರ, ನಮಃ–ನಮಸ್ಕಾರವೆಂಬುದರ್ಥಂ ॥೧॥

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ
ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಮ್ ॥

ವೇದಾಂತಿನಃ– ವೇದಾಂತಿಗಳಾದವರೂ, ಬ್ರಹ್ಮೇತಿವ್ಯಪದೇಶಸ್ಯ–ಬ್ರಹ್ಮವೆಂಬ ಶಬ್ದಕ್ಕೆ, ಯಂ–ಯಾವ, ಪರಮಾತ್ಮನಂ, ವಿಷಯಂ– ಅರ್ಥವನಾಗಿ, ಪ್ರಚಕ್ಷತೇ– ಹೇಳುತ್ತಿಹರು, ಜಗನ್ಮೂಲಂ–ವಿಶ್ವಕಾರಣನಾದ, ತಂ ಪರಂ ಶಿವಂ–ಆ ಶಿವಸಿದ್ಧಾಂತ ಪ್ರಸಿದ್ಧನಾದ ಪರಶಿವನಂ, ನಮಾಮಿ– ನಮಸ್ಕರಿಸುತಿರ್ದಪನೆಂಬುದರ್ಥಂ ॥೨॥

ಯಸ್ಯೋರ್ಮಿಬುದ್ಬುದಾಭಾಸಃ ಷಟ್ತ್ರಿಂಶತ್ತತ್ತ್ವಸಂಚಯಃ
ನಿರ್ಮಲಂ ಶಿವನಾಮಾನಂ ತಂ ವಂದೇ ಚಿನ್ಮಹೋದಧಿಮ್ ॥

ಷಟ್ತ್ರಿಂಶತ್ತತ್ತ್ವ ಸಂಚಯಃ– ಶಿವಾದೀಕ್ಷಿತ್ಯಂತಮಾದ ಮೂವತ್ತಾರು ತತ್ತ್ವಂಗಳ ಸಮೂಹವು, ಯಸ್ಯ–ಯಾವನಾನೊರ್ವ ಪರಶಿವನೆಂಬ ಚಿತ್ಸಮುದ್ರದ, ಊರ್ಮಿಬುದ್ಬುದಾಭಾಸಃ– ಘೃತಕೀಟನ್ಯಾಯದಿಂದೇಕದೇಶದೊಳುದ್ಭವಿಪ ತರಂಗಾದಿಗಳಂತೆ ಒಪ್ಪುತ್ತಿಹುದು, ನಿರ್ಮಲಂ–ಮಲತ್ರಯರಹಿತನಾದ, ಶಿವನಾಮಾನಂ–ಶಿವನೆಂಬ ಪೆಸರುನ್ನುಳ್ಳಂಥಾ, ಚಿನ್ಮಹೋದಧಿಂ–ಆ ಚಿತ್ಸಮುದ್ರಮಂ, ವಂದೇ–ನಮಸ್ಕರಿಸುತಿರ್ದಪನೆಂಬುದರ್ಥಂ ॥೩॥

ಯದ್ಭಾಸಾ ಭಾಸತೇ ವಿಶ್ವಂ ಯತ್ಸುಖೇನಾನುಮೋದತೇ
ನಮಸ್ತಸ್ಮೈ ಗುಣಾತೀತವಿಭವಾಯ ಪರಾತ್ಮನೇ ॥

ತಸ್ಯಭಾಸಾ ಸರ್ವಮಿದಂ ವಿಭಾತಿಯೆಂಬ ಶ್ರುತಿಪ್ರಮಾಣದಿಂ, ವಿಶ್ವಂ–ಜಗತ್ತು, ಯದ್ಭಾಸಂ– ಯಾವ ಪರಬ್ರಹ್ಮದ ಪ್ರಕಾಶದಿಂದ, ಭಾಸತೇ– ಪ್ರಕಾಶಿಸುತ್ತಿಹುದು, ಆಸ್ಯೈವಾನಂದಸ್ಯಾನ್ಯಾನಿಭೂತಾನಿಮಾತ್ರಮುಪಜೀವಂತಿ ಎಂಬ ಶ್ರುತಿಯುಂಟಾಗಿ, ಯತ್ಸುಖೇನ– ಯಾವ ಪರಬ್ರಹ್ಮದ ಸುಖದಿಂದ, ಅನುಮೋದತೇ–ಸುಖಿಸುತ್ತಿಹುದು, ಗುಣಾತೀತ ವಿಭವಾಯ–ಮಾಯಿಕಸತ್ವರಜಸ್ತಮೋಗುಣಂಗಳಂ ಮೀರಿದ ವಿಭವವುಳ್ಳ, ಪರಾತ್ಮನೇ–ಸರ್ವೋತ್ಕೃಷ್ಟನಾದ, ತಸ್ಮೈ– ಆ ಪರಶಿವಂಗೋಸ್ಕರ, ನಮಃ – ನಮಸ್ಕಾರವೆಂಬುದರ್ಥಂ ॥೪॥

ಸದಾಶಿವಮುಖಾಶೇಷತತ್ತ್ವೋನ್ಮೇಷವಿಧಾಯಿನೇ
ನಿಷ್ಕಲಂಕಸ್ವಭಾವಾಯ ನಮಃ ಶಾಂತಾಯ ಶಂಭವೇ ॥

ಅಂಡರಸ ನ್ಯಾಯದಿಂ ತನ್ನ ವಿಮರ್ಶಾಶಕ್ತಿಯಲ್ಲಿ ಸಾಮರಸ್ಯದಿಂ ಕ್ರೋಡೀಕರಿಸಲ್ಪಟ್ಟ ಸದಾಶಿವಾದಿಭೂಮ್ಯಂತರಮಾದ ಷಟ್ತ್ರಿಂಶತತ್ತ್ವಗಳ ಪ್ರಕಾಶಮಂ ಮಾಡುವಂಥಾ, ನಿಷ್ಕಂಳಕ ಸ್ವಭಾವಾಯ – ಸಕಲ ದೋಷರಹಿತಮಾದ ಸ್ವರೂಪಮುಳ್ಳ, ಶಾಂತಾಯ– ರಾಗದ್ವೇಷ ರಹಿತನಾದ, ಶಂಭವೇ– ಸುಖಭೋಂಕ್ತೃವಾಗಿ ಸುಖದಾತೃವಾದ ಶಿವನಿಗೋಸ್ಕರ, ನಮಃ– ನಮಸ್ಕಾರವೆಂಬುದರ್ಥಂ ॥೫॥

ಸ್ವೇಚ್ಛಾವಿಗ್ರಹಯುಕ್ತಾಯ ಸ್ವೇಚ್ಛಾವರ್ತನವರ್ತಿನೇ
ಸ್ವೇಚ್ಛಾಕೃತ ತ್ರಿಲೋಕಾಯ ನಮಃ ಸಾಂಬಾಯ ಶಂಭವೇ ॥

ಸ್ಥಿರೇಭಿರಂಗೈಃ ಪುರುರೂಪಮುಗ್ರಃ ಹೀಗೆಂಬ ಶ್ರುತಿಯಿಂ, ಸ್ವೇಚ್ಛಾವಿಗ್ರಹಯುಕ್ತಾಯ– ಭಕ್ತಾನುಗ್ರಹಾರ್ಥಮಾಗಿ, ಸ್ವೇಚ್ಛಾಕಲ್ಪಿತ–ದಿವ್ಯಮಂಗಳ ಮೂರ್ತಿಯುಳ್ಳ, ಸ್ವೇಚ್ಛಾವರ್ತನ ವರ್ತಿನೇ–ಸ್ವೈರಚಾರಿಯಾದ, ಸ್ವೇಚ್ಛಾಕೃತತ್ರಿಲೋಕಾಯ–ತನ್ನಿಚ್ಛಾಶಕ್ತಿಯಿಂದ ನಿರ್ಮಿಸಲ್ಪಟ್ಟ ತ್ರಿಪುಟಿಮಯ ಪ್ರಪಂಚಮುಳ್ಳ, ಸಾಂಬಾಯ–ಪಾರ್ವತೀ ಸಹಿತನಾದ, ಶಂಭವೇ– ಶಿವನಿಗೋಸ್ಕರ, ನಮಃ – ನಮಸ್ಕಾರವೆಂಬುದರ್ಥಂ ॥೬॥

ಯತ್ರ ವಿಶ್ರಾಮ್ಯತೀಶತ್ವಂ ಸ್ವಾಭಾವಿಕಮನುತ್ತಮಮ್
ನಮಸ್ತಸ್ಮೈ ಮಹೇಶಾಯ ಮಹಾದೇವಾಯ ಶೂಲಿನೇ ॥

ಯತ್ರ–ವೇದಾಗಮ ಪ್ರಸಿದ್ಧವಾದ ಪರಬ್ರಹ್ಮವೆಂಬ ಪರಶಿವನಲ್ಲಿ, ಅನುತ್ತಮಂ–ಸರ್ವತಃ ಶ್ರೇಷ್ಠಮಾದ, ಸ್ವಾಭಾವಿಕಂ–ಮಾಯಿಕಮಲ್ಲದ, ಈಶತ್ವಂ– ಉಮಾಮಹೇಶ್ವರತ್ವವು, ವಿಶ್ರಾಮ್ಯತಿ–ಭೃತಕಾರಿನ್ಯವನ್ಮೂರ್ತಿಃ ಸಚ್ಚಿದಾನಂದ ಲಕ್ಷಣಮ್, ಶಿವಾಭಿಧೇನ ಸೈವಾಸ್ತಿ ಶಿವ ಏವಹಿಸದಾಯೆಂಬ ಸೂತಗೀತೋಕ್ತಿಯಿಂ ತಾದಾತ್ಮ್ಯವಂ ಭಜಿಸುತ್ತಿಹನು. ತಸ್ಮೈ ಮಹೇಶ್ವರಾಯ ತಮೀಶ್ವರಾಣಾಂ ಪರಮಂ ಮಹೇಶ್ವರಂ ಹೀಗೆಂಬ ಶ್ರುತಿಪ್ರಮಾಣದಿಂ ಬ್ರಹ್ಮಾದಿಕಾರಣೇಶರಿಗೂ ನಿಯಾಮಕನಾದಂಥಾ,

ಮಹಾದೇವಾಯ– ಅಪರಿಮಿತ ಪ್ರಕಾಶರೂಪನಾದ, ಶೂಲಿನೇ–ಇಚ್ಛಾಜ್ಞಾನ ಕ್ರಿಯಾಶಕ್ತಿ ಮಯವಾದ ತ್ರಿಶೂಲವುಳ್ಳ, ತಸ್ಮೈ– ಆ ಪರಶಿವಂಗೋಸ್ಕರ, ನಮಃ– ನಮಸ್ಕಾರ ವೆಂಬುದರ್ಥಂ. ।।೭।। ಇದರಿಂದೆ ಶಿವಸಿದ್ಧಾಂತವು ನಿರ್ವಿಶೇಷ ಬ್ರಹ್ಮಾದ್ವೈತದತ್ತಣಿಂ ವಿಲಕ್ಷಣಮೆಂದು ತಿಳಿಯಲ್ತಕ್ಕದು.

ಈ ಪ್ರಕಾರವಾದ ಸಪ್ತಶ್ಲೋಕಂಗಳಿಂ ಪ್ರತಿಪಾದಿಸಲ್ಪಟ್ಟ ವಸ್ತು ತತ್ಪರಂ ಬ್ರಹ್ಮ ಸ ಏಕಃ ಸ ಏಕೋ ರುದ್ರಃ ಸ ಈಶಾನಃ ಸ ಭಗವಾನ್ ಸ ಮಹೇಶ್ವರಃ ಸ ಮಹಾದೇವಃ ಹೀಗೆಂಬಾಥರ್ವಶಿರೋಪನಿಷದುಕ್ತ ಪ್ರಕಾರದಿಂದೊಂದೆಯೆಂದು ಶಿವಾದ್ವೈತಶಾಸ್ತ್ರ ಪ್ರವೀಣನಿಂದ ನುಸಂಧಾನಿಸೂದು. ಈ ಪ್ರಕಾರದಿಂ ವೇದಾಗಮ ಸಮ್ಮತವಾದ ಸಪ್ತಶ್ಲೋಕಂಗಳಿಂ ಶಿವನಂ ನಮಸ್ಕರಿಸಿ ಅದೇ ಪ್ರಕಾರದಿಂ ವೇದಾಗಮ ಪ್ರಸಿದ್ಧಮಾಗಿ ನಿತ್ಯಸಮವೇತವಾದ ಶಿವಶಕ್ತಿಯಂ ಪಂಚಶ್ಲೋಕಗಳಿಂ ಸ್ತುತಿ ಮಾಡುತಿರ್ದಪಂ.

ಯಾಮಾಹುಸ್ಸರ್ವಲೋಕಾನಾಂ ಪ್ರಕೃತಿಂ ಶಾಸ್ತ್ರಪಾರಗಾಃ
ತಾಂ ಧರ್ಮಚಾರಿಣೀಂ ಶಂಭೋಃ ಪ್ರಣಮಾಮಿ ಪರಾಂ ಶಿವಾಮ್ ।।

ಶಾಸ್ತ್ರಪಾರಗಾಃ – ವೇದಾಗಮಾದಿ ಶಾಸ್ತ್ರ ಪಾರಂಗತರಾದ ಶಿವಜ್ಞಾನಿಗಳು, ಯಾಂ–ಯಾವುದಾನೊಂದು, ಪರಶಿವಸಮವೇತ್–ಶಕ್ತಿಯಂ, ಸರ್ವಲೋಕಾನಾಂ ಪ್ರಕೃತಿಂ– ಸಕಲ ಪ್ರಪಂಚಕ್ಕೂ ಮೂಲಕಾರಣಮಾದ ಜ್ಞಾನಕ್ರಿಯಾಸಾಮರಸ್ಯಾತ್ಮಿಕೆ ಯಾದಂಥಾದನಾಗಿ, ಆಹುಃ – ಪೇಳುತ್ತಿಹರು. ಶಂಭೋಧರ್ಮಚಾರಿಣೀಂ – ಶಿವನ ಧರ್ಮ ಸ್ವರೂಪಮಾದಂಥಾ, ಪರಾಂ– ಸರ್ವೋತ್ಕೃಷ್ಟಮಾದಂಥ, ತಾಂಶಿವಾಂ–ಆ ಭವಾನಿಯಂ, ಪ್ರಣಮಾಮಿ–ನಮಸ್ಕರಿಸುತಿರ್ದಪನೆಂಬುದರ್ಥಂ ।।೮।।

ಯಯಾ ಮಹೇಶ್ವರಶ್ಶಂಭುಃ ನಾಮರೂಪಾದಿಸಂಯುತಃ
ತಸ್ಮೈ ಮಾಯಾಸ್ವರೂಪಾಯೈ ನಮಃ ಪರಮಶಕ್ತಯೇ ।।

ಯಯಾ – ಯಾವುದಾನೊಂದು ಸ್ವಸಮವೇತ ಶಕ್ತಿಯಿಂದ, ಮಹೇಶ್ವರಃ– ಬ್ರಹ್ಮಾದಿ ಸರ್ವಕಾರಣೇಶನಾದ, ಶಂಭುಃ – ಶಿವನು, ಶಕ್ತ್ಯೋ ಯಯಾ ಸಃ ಶಂಭುಃಭುಕ್ತೌ ಮುಕ್ತೌ ಚ ಪಶುಗಣಸ್ಯಾಸ್ಯ ಎಂಬ ತತ್ತ್ವಪ್ರಕಾಶವಚನದಿಂ, ನಾಮರೂಪಾದಿ ಸಂಯುತಃ ನಾಮರೂಪ ಕ್ರಿಯಾವಿಶಿಷ್ಟನು ಜೀವರಿಗೆ ಮುಕ್ತಿಪ್ರದನು, ಮಾಯಾಸ್ವರೂಪಾಯೈ ಮಾಯಾಂತು ಪ್ರಕೃತಿಂ ವಿಂದ್ಯಾನ್ಮಾಯಿನಂ ತು ಮಹೇಶ್ವರಮ್ – ಹೀಗೆಂಬ ಶ್ರುತಿಯಿಂ ಪರಿಸ್ಫುರಣ ಗತಿಯಿಂ ಜಗದುಪಪ್ರದಾನ ಕಾರಣಮಾಗಿ ಸತ್ತ್ವರಜೋಸ್ತಮಗುಣಮಯವಾದ ಮಾಯೆಯೆಂಬ ಪೆಸರುನ್ನುಳ್ಳ ಮೂಲಪ್ರಕೃತಿ ಎನಿಸಿಕೊಂಬ, ತಸ್ಮೈ ಪರಮಶಕ್ತಯೇ– ಆ ಪರಮಶಕ್ತಿಯೆ, ಆ ಪರಶಿವಸಮಾವೇತಮಾದ ನಿತ್ಯಶಕ್ತಿಗೋಸ್ಕರ, ನಮಃ – ನಮಸ್ಕಾರವೆಂಬುದರ್ಥಂ ।।೯।।

ಶಿವಾದ್ಯಾದಿಸಮುತ್ಪನ್ನ ಶಾಂತ್ಯತೀತಪರೋತ್ತರಾಂ
ಮಾತರಂ ತಾಂ ಸಮಸ್ತಾನಾಂ ವಂದೇ ಶಿವಕರೀಂ ಶಿವಾಮ್ ॥

ಶಿವಾದ್ಯಾದಿ–ಶಿವಾತ್–ಪರಶಿವನತ್ತಣಿಂ, ಆದ್ಯಾದಿ–ಪಟಗತ ಶುಕ್ಲದಂತೆ, ಪೂರ್ವ–ಪೂರ್ವೋತ್ಪನ್ನ ನಿವೃತ್ತಿ ಪ್ರತಿಷ್ಠೆ, ಶಾಂತಿ ಶಾಂತ್ಯತೀತ–ಕಲಾ ಪರಾಕುಂಡಲ ನಿಶಕ್ಯಪೇಕ್ಷೆಯಿಂ, ಉತ್ತರಾಂ–ಶ್ರೇಷ್ಠಮಾದ, ಸಮಸ್ತಾನಾಂ ಮಾತರಂ– ಜಗಜ್ಜನನಿ ಯಾದಂಥಾ, ಶಿವಕರೀಂ– ಮಂಗಲಪ್ರದೆಯಾದಂಥಾ, ತಾಂ ಶಿವಾಮ್– ಆ ಸರ್ವಮಂಗ ಲೆಯಂ, ನಮಾಮಿ – ನಮಸ್ಕರಿಸುತಿರ್ದಪನೆಂಬುದರ್ಥಂ ॥೧೦॥

ಇಚ್ಛಾಜ್ಞಾನಾದಿರೂಪೇಣ ಯಾ ಶಂಭೋರ್ವಿಶ್ವಭಾವಿನೀ
ವಂದೇ ತಾಂ ಪರಮಾನಂದಪ್ರಬೋಧಲಹರೀಂ ಶಿವಾಮ್ ॥

ಶಂಭುಃ – ಪರಶಿವನ, ಯಾ– ಯಾವುದಾನೊಂದು ಸಮವೇತ ಶಕ್ತಿಯು, ಇಚ್ಛಾಜ್ಞಾನಾದಿ ರೂಪೇಣ– ಪರಾಸ್ಯಶಕ್ತಿರ್ವಿಮಲಾ ವಿತರ್ಕಾ ಸ್ವಾಭಾವಿಕೀ ರುದ್ರ ಸಮಾನಧರ್ಮಿಣೀ ಜ್ಞಾನಕ್ರಿಯೇಚ್ಛಾದಿಸಹಸ್ರರೂಪಾ ತನ್ಮೇ ಮನಃ ಶಿವಃ ಸಂಕಲ್ಪಮಸ್ತು ಎಂಬ ಶ್ರುತಿಯಿಂದಿಚ್ಛಾದಿ ನಾನಾರೂಪದಿಂ, ವಿಶ್ವಭಾವಿನೀ– ವಿಶ್ವಪ್ರಕಾಶಿನಿಯಾ ದಾಯಕನು, ಪರಮಾನಂದಪ್ರಬೋಧಲಹರೀಂ– ಚಿದಾನಂದಗಳ ಏಳಿಗೆಯಾದಂಥಾ, ತಾಂಶಿವಾಂ– ಆ ಸರ್ವಮಂಗಲೆಯಂ, ನಮಾಮಿ– ನಮಸ್ಕರಿಸುತಿರ್ದಪನೆಂಬುದರ್ಥಂ ॥೧೧॥

ಅಮೃತಾರ್ಥಂ ಪ್ರಪನ್ನಾನಾಂ ಯಾ ಸುವಿದ್ಯಾಪ್ರದಾಯಿನೀ
ಅಹರ್ನಿಶಮಹಂ ವಂದೇ ತಾಮಿಶಾನಮನೋರಮಾಮ್ ॥

ಅಮೃತಾರ್ಥಂ – ಮುಕ್ತಿಗೋಸ್ಕರ, ಪ್ರಪನ್ನಾನಾಂ – ಶರಣಾಗತರಾದವರಿಗೆ, ಯಾ–ಯಾವುದಾನೊಂದು ಶಿವಸಮವೇತ ಶಕ್ತಿಯು, ಸುವಿದ್ಯಾಪ್ರದಾಯಿನೀ – ವೇದಾಂತ ವಾಕ್ಯಜಾ ವಿದ್ಯಾಯೆಂಬ ಸೂತಗೀತೋಕ್ತಿಯಿಂ, ತತ್ತ್ವಮಸ್ಯಾದಿವೇತ್ತಾಂ – ಮಹಾವಾಕ್ಯಂಗಳಿಂ ಪ್ರಕಾಶಿಸಲ್ಪಟ್ಟ ಶಿವಜೀವೈಕ್ಯಜ್ಞಾನಮಂ ಕೊಡುವಂತಾಯಕನು, ತಾಮೀಶಾನಮನೋರಮಾಂ –ಆ ಶಿವನ ಪ್ರಾಣಕಾಂತೆಯಂ, ಅಹರ್ನಿಶಂ – ದಿವಾರಾತ್ರೆಯಲ್ಲಿಯು, ವಂದೇ–ನಮಸ್ಕರಿಸುತಿರ್ದಪನೆಂಬುದರ್ಥಂ ॥೧೨॥ ಅನನ್ಯಾಸ್ಯಚ್ಛಿ ವಾತ್ಮೈಕ್ಯವ ವಸ್ತುತೋ ಮೂರ್ತಿರೈಶ್ವರೀ ಎಂಬ ಪೌಷ್ಕರವಚನದಿಂದೀ ಪಂಚಸೂತ್ರ ಪ್ರತಿಪಾದಿತಮಾದ ಶಕ್ತಿಯಂ ಶಿವಾಭೇದದಿಂದಲೆ ಪರಮಾರ್ಥಗೈವುದು. ಈ ಪ್ರಕಾರದಿಂ ಸಂಗ್ರಹಮಾಗಿ ಪಾರ್ವತೀಪರಮೇಶ್ವರರಂ ನಮಸ್ಕರಿಸಿ ಆಮೇಲೆ ಶಿವಯೋಗಿಯೆಂಬ ಮಾಹೇಶ್ವರರ ವಂಶಾನುಗತರಾದಾಚಾರ್ಯರನೆಂಟುಶ್ಲೋಕಂಗಳಿಂ ಪ್ರಕಟಿಸುತಿರ್ದಪಂ.

ಆಸೀದಾಚಾರಸಿದ್ಧಾನಾಮಗ್ರಣೀಃ ಶಿವಯೋಗಿನಾಮ್
ಶಿವಯೋಗೀತಿ ವಿಖ್ಯಾತಃ ಶಿವಜ್ಞಾನ ಮಹೋದಧಿಃ ॥

ಶಿವಯೋಗಿನಾಮ್ – ಶಿವಯೋಗಿಗಳ ಮಧ್ಯದಲ್ಲಿ, ಅಗ್ರಣೀಃ – ಶ್ರೇಷ್ಠನಾದ,

ಶಿವಜ್ಞಾನ ಮಹೋದಧಿಃ – ಶಿವಜ್ಞಾನಕ್ಕೆ ಸಮುದ್ರನಾದ, ಕಶ್ಚಿತ್ ರೇವಣಸಿದ್ಧೇಶ್ವರನ ದೃಷ್ಟಿಗರ್ಭ ಸಂಭೂತನಾದ ಸಿದ್ಧರಾಮೇಶ್ವರನೆಂಬೊರ್ವನು, ಆಸೀದಾಚಾರಸಿದ್ಧಾನಾಂ – ಸದಾಚಾರ ಸಂಪನ್ನರಾದವರ ವಂಶದಲ್ಲಿ, ಶಿವಯೋಗೀತಿ – ಶಿವಯೋಗಿಯೆಂದು, ವಿಖ್ಯಾತಃ– ಪ್ರಸಿದ್ಧನಾದಾತನು, ಆಸೀತ್–ಆದನೆಂಬುದರ್ಥಂ ॥೧೩॥ ಆಮೇಲೆ ತನ್ನ ಸ್ವರೂಪಮಂ ಪೇಳುತಿರ್ದಪಂ.

ಶಿವಭಕ್ತಿಸುಧಾಸಿಂಧುಜೃಂಭಣಾಮಲಚಂದ್ರಿಕಾ
ಭಾರತೀ ಯಸ್ಯ ವಿದಧೇ ಪ್ರಾಯಃ ಕುವಲಯೋತ್ಸವಮ್ ॥

ಯಸ್ಯ – ಶಿವಯೋಗಿಯೆಂದು ಪ್ರಸಿದ್ಧನಾದ ಯಾವನಾನೊಬ್ಬ ಸಿದ್ಧರಾಮೇಶ್ವರನ, ಭಾರತೀ– ವಾಕ್ಯವು, ಶಿವಭಕ್ತಿಸುಧಾಸಿಂಧುಜೃಂಭಣಾಮಲಚಂದ್ರಿಕಾ ಸತಿ– ಶಿವಭಕ್ತಿಯೆಂಬ ಸುಧಾಸಮುದ್ರವ ವರ್ಧಿಸುವುದಕ್ಕೆ ನಿರ್ಮಲವಾದ ಬೆಳದಿಂಗಳಂಥಾ, ದಾನಿ ಪ್ರಾಯಃ– ವೆಗ್ಗಳವಾಗಿ, ಕುವಲಯೋತ್ಸವಮ್ – ಭೂಮಂಡಲವೆಂಬ ಕನ್ನೈದಿಲೆಗೆ ಸಂತೋಷಮಂ ವಿದಧೇ – ಮಾಡಿದಂತಾಗುತ್ತಿತ್ತೆಂಬುದರ್ಥಂ ॥೧೪॥ ಆಮೇಲೆ

ತಸ್ಯ ವಂಶೇ ಸಮುತ್ಪನ್ನೋ ಮುಕ್ತಾಮಣಿರಿವಾಮಲಃ
ಮುದ್ದದೇವಾಭಿದಾಚಾರ್ಯೋ ಮೂರ್ಧನ್ಯಶ್ಶಿವವೇದಿನಾಮ್ ॥

ತಸ್ಯ ವಂಶೇ – ಆ ಸಿದ್ಧರಾಮೇಶ್ವರನ ವಂಶದಲ್ಲಿ, ಶಿವವೇದಿನಾಂ – ಶಿವಜ್ಞಾನಿಗಳಾದವರ ಮಧ್ಯದಲ್ಲಿ, ಮೂರ್ಧನ್ಯಃ – ಶ್ರೇಷ್ಠರಾದ, ಮುದ್ದದೇವಾಭಿದಾಚಾರ್ಯಃ – ಮುದ್ದದೇವನೆಂಬ ಪೆಸರುಳ್ಳಾಚಾರ್ಯನು, ವಂಶೇ– ವೇಣುವಿನಲ್ಲಿ, ಅಮಲಃ – ನಿರ್ಮಲವಾದ, ಮುಕ್ತಾಮಣಿರಿವ – ಮುತ್ತಿನಮಣಿಯಂತೆ, ಸಮುತ್ಪನ್ನಃ – ಉದ್ಭವಿಸಿದನೆಂಬುದರ್ಥಂ ॥೧೫॥ ಆಮೇಲೆ ಮುದ್ದದೇವನೆಂಬ ಪೆಸರಂ ವಿವರಿಸುತಿರ್ದಪಂ.

ಮುದ್ದಾನಾತ್ಸರ್ವಜಂತೂನಾಂ ಪ್ರಣತಾನಾಂ ಪ್ರಬೋಧತಃ
ಮುದ್ದದೇವೇತಿ ವಿಖ್ಯಾತಾ ಸಮಾಖ್ಯಾ ಯಸ್ಯ ವಿಶ್ರುತಾ ॥

ಸರ್ವಜಂತೂನಾಂ – ಸಮಸ್ತ ಪ್ರಾಣಿಗಳಿಗೆ, ಮುದ್ದಾನಾತ್– ಸಂತೋಷವ ಕೊಡುವವದರಿಂ, ಪ್ರಣತಾನಾಂ – ಆನತರಾದವರಿಗೆ, ಪ್ರಬೋಧತಃ – ಸುಜ್ಞಾನವನೀವದರಿಂ, ಮುದ್ದದೇವೇತಿ ವಿಖ್ಯಾತ ಸಮಾಖ್ಯಾ ಯಸ್ಯ ವಿಶ್ರುತಾದವರಿಂ, ಮುದ್ದದೇವೇತಿ – ಮುದ್ದದೇವನೆಂದು, ಯಸ್ಯ – ಯಾವನಾನೊಬ್ಬಾಚಾರ್ಯನಂಗೆ, ಅನ್ವರ್ಥ – ರೂಢಿಗಳಂ, ವಿಖ್ಯಾತಾ ಸಮಾಖ್ಯಾ – ಪ್ರಸಿದ್ಧಮಾದ ಪೆಸರು, ವಿಶ್ರುತಾ– ಲೋಕಪ್ರಸಿದ್ಧಮಾಗಿ ಕೇಳಲ್ಪಟ್ಟಿತೆಂಬುದರ್ಥಂ ॥೧೬॥

ತಸ್ಯಾಸೀನ್ನಂದನಶ್ಶಾಂತಸ್ಸಿದ್ಧನಾಥಾಭಿಧಃ ಶುಚಿಃ
ಶಿವಸಿದ್ಧಾಂತನಿರ್ಣೇತಾ ಶಿವಾಚಾರ್ಯಶ್ಶಿವಾತ್ಮಕಃ ॥

ತಸ್ಯ – ಆ ಮುದ್ದದೇವಂಗೆ, ಶುಚಿಃ – ಪವಿತ್ರನಾದ, ಶಾಂತಃ – ರಾಗದ್ವೇಷ ರಹಿತನಾದ, ಶಿವಾತ್ಮಕಃ – ಶಿವಸ್ವರೂಪನಾದ, ಶಿವಸಿದ್ಧಾಂತನಿರ್ಣೇತಾ – ತ್ರಿಪದಾರ್ಥ

ಚತುಷ್ಪಾದಯುಕ್ತಮಾದ ಶಿವಾಗಮಾರ್ಥಮಂ ನಿರ್ಣೈಸುಮಥಾ, ಶಿವಾಚಾರ್ಯಃ – ಶಿವಸಮಯ ಸ್ಥಾಪನಾಚಾರ್ಯನಾದಂಥಾ, ಸಿದ್ಧನಾಥಾಭಿಧಃ – ಸಿದ್ಧರಾಮೇಶ್ವರನೆಂಬ ನಾಮವುಳ್ಳ ಸಿದ್ಧನಾಥಾಚಾರ್ಯನು, ನಂದನಃ – ಕುಮಾರನು, ಆಸೀತ್ – ಆದನೆಂಬುದರ್ಥ॥೧೭॥ ಆಮೇಲಾತನ ಮಹತ್ವಮಂ ಪ್ರಕಾಶಿಸುತಿರ್ದಪಂ.

ವೀರಶೈವಶಿಖಾರತ್ನಂ ವಿಶಿಷ್ಟಾಚಾರಸಂಪದಂ
ಶಿವಜ್ಞಾನಮಹಾಸಿಂಧುಂ ಯಂ ಪ್ರಶಂಸಂತಿ ದೇಶಿಕಾಃ ॥

ವಿಶಿಷ್ಟಾಚಾರ ಸಂಪದಂ – ಸದಾಚಾರ ಸಂಪನ್ನನಾದ, ಶಿವಜ್ಞಾನಮಹಾಸಿಂಧುಂ – ಶಿವಜ್ಞಾನಕ್ಕೆ ಸಮುದ್ರನಾದ,ಯಂ–ಯಾವನಾನೊಬ್ಬ ಸಿದ್ಧನಾಥಾಚಾರ್ಯನಂ, ದೇಶಿಕಾಃ– ಆಚಾರ್ಯರಾದವರು, ವೀರಶೈವಶಿಖಾರತ್ನಂ –ವೀರಶೈವರಿಗೆ ಶ್ರೇಷ್ಠನಾದಂಥವನಾಗಿ, ಪ್ರಶಂಸಂತಿ–ಕೊಂಡಾಡುತ್ತಿಹರೆಂಬುದರ್ಥಂ ॥೧೮॥ ಆಮೇಲೆ ಮತ್ತೂ ಆತನ ಮಹತ್ವವನೆ ಪೇಳುತಿರ್ದಪಂ.

ಯಸ್ಯಾಚಾರ್ಯಕುಲಾಜ್ಞಾತಸ್ಸತಾಮಾಚಾರಮಾತೃಕಾ
ಶಿವಭಕ್ತಿಃ ಸ್ಥಿರಾ ಯಸ್ಮಿನ್ ಜಜ್ಞೇ ವಿಗತವಿಪ್ಲವಾ ॥

ಸತಾಂ – ಸತ್ಪುರುಷರ, ಸದಾಚಾರ ಮಾತೃಕಾ – ಸದಾಚಾರ ಮಾತೃಕೆಗಳು, ಯಸ್ಯ– ಯಾವನಾನೊಬ್ಬ ಸಿದ್ಧನಾಥಾಚಾರ್ಯನ, ಆಚಾರ್ಯಕುಲಾತ್ – ಆಚಾರ್ಯವಂಶದತ್ತಣಿಂ, ವಿಗತ ವಿಪ್ಲವಾಃ – ಹೋಗಲ್ಪಟ್ಟ ದೋಷಂಗಳುಳ್ಳವು, ಜಾತಾಃ – ಆದವು, ಯಸ್ಮಿನ್ – ಆವನಾನೊಬ್ಬ ಸಿದ್ಧನಾಥಾಚಾರ್ಯನಲ್ಲಿ, ಶಿವಭಕ್ತಿಃ– ಎಂಟು ಪ್ರಕಾರಮಾದ ಶಿವಭಕ್ತಿಯು, ಸ್ಥಿರಾ – ನಿಶ್ಚಲಮಾದಂಥಾದು, ಜಜ್ಞೇ– ಆಯಿತ್ತೆಂಬುದರ್ಥಂ ॥೧೯॥

ತಸ್ಯ ವೀರಶೈವಾಚಾರ್ಯಶಿಖಾರತ್ನಸ್ಯ ನಂದನಃ
ಅಭವಚ್ಛಿವಯೋಗೀತಿ ಸಿಂಧೂರಿವ ಸುಧಾಕರಃ ॥

ವೀರಶೈವಾಚಾರ್ಯಶಿಖಾರತ್ನಸ್ಯ – ವೀರಶೈವಶಿಖಾಮಣಿಯಾದ, ತಸ್ಯ – ಆ ಸಿದ್ಧನಾಥಾಚಾರ್ಯಂಗೆ, ನಂದನಃ–ಕುಮಾರನು, ಸಿಂಧೂಃ – ಸಮುದ್ರನಿಗೆ, ಸುಧಾಕರಯಿವ– ಚಂದ್ರನಂತೆ. ಶಿವಯೋಗೀತಿ – ಶಿವಯೋಗಿಯೆಂದು, ಆಸೀತ್– ಪ್ರಸಿದ್ಧನಾದನೆಂಬುದರ್ಥಂ ॥೨೦॥ ಆಮೇಲೆ ಶಾಸ್ತ್ರಸಂಗ್ರಹಕರ್ತನಾದ ಶಿವಯೋಗಿಯು ದ್ವಾದಶಸೂತ್ರಂಗಳಿಂ ಸ್ವನಾಮ ಪ್ರಶಂಸಾಪೂರ್ವಕಮಾಗಿ ಶಾಸ್ತ್ರಾವತರಣ ಕ್ರಮವಂ ನಿರೂಪಿಸುತಿರ್ದಪಂ.

ಚಿದಾನಂದಪರಾಕಾಶಶಿವಾನುಭವಯೋಗತಃ
ಶಿವಯೋಗೀತಿ ನಾಮೋಕ್ತಿರ್ಯಸ್ಯ ಯಾಥಾರ್ಥ್ಯಯೋಗಿನೀ ॥

ಯಸ್ಯ – ಯಾವನಾನೊಬ್ಬಾಚಾರ್ಯಂಗೆ, ಸತ್ಯಜ್ಞಾನಮನಂತಂ ಬ್ರಹ್ಮ – ಆಕಾಶ ಶರೀರಂ ಬ್ರಹ್ಮ ಎಂಬಿವು ಮೊದಲಾದ ಶ್ರುತಿಪ್ರಮಾಣಂಗಳಿಂ, ಚಿದಾನಂದ ಪ್ರಕಾಶ ಶಿವಾನುಭವಯೋಗಮುಂಟಾಗಿರುವುದರತ್ತಣಿಂ, ಶಿವಯೋಗೀತಿ ನಾಮೋಕ್ತಿಃ ಶಿವಯೋಗಿ

ಯೆಂಬ ನಾಮೋಚ್ಚಾರಣೆಯು, ಯಥಾರ್ಥ್ಯಯೋಗಿನೀ – ಯಥಾರ್ಥದೊಡನೆ ಕೂಡಿದಂಥಾದೆಂಬುದರ್ಥಂ ॥೨೧॥

ಶಿವಾಗಮಪರಿಜ್ಞಾನಪರಿಪಾಕಸುಗಂಧಿನಾ
ಯದೀಯಕೀರ್ತಿಪುಷ್ಪೇಣ ವಾಸಿತಂ ಹರಿತಾಂ ಮುಖಮ್ ॥

ತ್ರಿಪದಾರ್ಥಚತುಷ್ಪಾದಯುಕ್ತಮಾದ ಶಿವಾಗಮಪ್ರಬೋಧ ಪರಿಪಾಕದಿಂದುಂಟಾದ ಸುಗಂಧಮುಳ್ಳ ಯಾವನಾನೊಬ್ಬಾಚಾರ್ಯನ ಕೀರ್ತಿಕುಸುಮದಿಂದ, ಹರಿತಾಂ ಮುಖಮ್– ದಿಕ್ಕುಗಳ ಮುಖವು, ವಾಸಿತಂ–ಪೋಷಿಸಲ್ಪಟ್ಟಿತೆಂಬುದರ್ಥಂ ॥೨೨॥

ಯೇನ ರಕ್ಷಾವತೀ ಜಾತಾ ಶಿವಭಕ್ತಿಸ್ಸನಾತನೀ
ಬೌದ್ಧಾದಿಪ್ರತಿಸಿದ್ಧಾಂತಮಹಾಧ್ವಾಂತಾಂಶುಮಾಲಿನಾ ॥

ಬುದ್ಧರಬಗೆಯದು ಮೊದಲಾಗಿ ಶಿವಸಮಯಪ್ರತಿಕೂಲವಾದ ಸಿದ್ಧಾಂತವೆಂಬ ಗಾಢಾಂಧಕಾರಕ್ಕೆ ಸೂರ್ಯನಾದ, ಯೇನ– ಆವನಾನೊಬ್ಬ ಆಚಾರ್ಯನಿಂದ, ಸನಾತನೀ– ಕೇಡಿಲ್ಲದ, ಶಿವಭಕ್ತಿಃ–ಶಿವಭಕ್ತಿಯು, ರಕ್ಷಾವತೀ–ರಕ್ಷಿಸಲ್ಪಟ್ಟದು, ಜಾತಾ – ಆಯಿತೆಂಬುದರ್ಥಂ ॥೨೩॥

ಸ ಮಹಾವೀರಶೈವಾನಾಂ ಧರ್ಮಮಾರ್ಗಪ್ರವರ್ತಕಃ
ಶಿವತತ್ತ್ವಪರಿಜ್ಞಾನಚಂದ್ರಿಕಾವೃತಚಂದ್ರಮಾಃ ॥

ಶಿವತತ್ವದ ಪರಿಜ್ಞಾನವೆಂಬ ಬೆಳದಿಂಗಳಿಂ ವ್ಯಾಪಿಸಲ್ಪಟ್ಟುದು, ಚಂದ್ರನೆಂಬುದರ್ಥಂ. ಸಃ– ಆ ಶಿವಯೋಗಿಯು ವೀರಶೈವಧರ್ಮಮಾರ್ಗಕ್ಕೆ ಪ್ರವರ್ತಕನು. ಅವರುಗಳ ಧರ್ಮಾಚರಣೆಯಲ್ಲಿಯೆ ಪ್ರವರ್ತನೆಯುಳ್ಳವನೆಂಬುದರ್ಥಂ ॥೨೪॥

ಆಲೋಕ್ಯ ಶೈವತಂತ್ರಾಣಿ ಕಾಮಿಕಾದ್ಯಾನಿ ಸಾದರಮ್
ವಾತುಲಾಂತಾನಿ ಶೈವಾನಿ ಪುರಾಣಾನ್ಯಖಿಲಾನಿ ತು॥

ವೇದಮಾರ್ಗಾವಿರೋಧೇನ ವಿಶಿಷ್ಟಾಚಾರ. ಸಿದ್ಧಯೇ
ಅಸ್ಮನ್ಮಾರ್ಗನಿರಾಸಾಯ ಪ್ರಮೋದಾಯ ವಿವೇಕಿನಾಮ್ ॥

ಸರ್ವಸ್ವಂ ವೀರಶೈವಾನಾಂ ಸಕಲಾರ್ಥಪ್ರಕಾಶನಮ್
ಅಸ್ಪೃಷ್ಟಮಖಿಲೈರ್ದೋಷೈರಾದೃತಂ ಶುದ್ಧಮಾನಸೈಃ ॥

ತೇಷ್ವಾಗಮೇಷು ಸರ್ವೇಷು ಪುರಾಣೇಷ್ವಖಿಲೇಷು ಚ
ಪುರಾ ದೇವೇನ ಕಥಿತಂ ದೇವ್ಯೈ ತನ್ನಂದನಾಯ ಚ

ತತ್ಸಂಪ್ರದಾಯಸಿದ್ಧೇನ ರೇಣುಕೇನ ಮಹಾತ್ಮನಾ
ಗಣೇಶ್ವರೇಣ ಕಥಿತಮಗಸ್ತ್ಯಾಯ ಪುನಃ ಕ್ಷಿತೌ ॥

ವೀರಶೈವಮಹಾತಂತ್ರಮೇಕೋತ್ತರಶತಸ್ಥಲಮ್
ಅನುಗ್ರಹಾಯ ಲೋಕಾನಾಮಭ್ಯದಾತ್ಸುಧಿಯಾಂ ವರಃ ॥

ಕಾಮಿಕಾದಿ ವಾತುಳಾಂತವಾದ ಶೈವತಂತ್ರಂಗಳಂ, ಸಮಸ್ತವಾದ ಶೈವಪುರಾಣಂಗಳಂ, ಸಾದರಂ – ಪ್ರೀತಿಯುಕ್ತಮಾದಂಥಾದು ಹೇಗಹುದು. ಹಾಗೆ,

ಆಲೋಕ್ಯ – ನೋಡಿ, ವೇದಮಾರ್ಗ ವಿರೋಧವಿಲ್ಲದ ಹಾಗೆ ಸದಾಚಾರಸಿದ್ಧಿಗೋಸ್ಕರ ದುರ್ಜನರಾದ ಜೈನಬೌದ್ಧರ ಶಾಸ್ತ್ರಮಾರ್ಗವ ನಿರಾಕರಿಸಲೋಸುಗ ವೇದಾಗಮ ವಿವೇಕಿಗಳಾದವರ ಸಂತೋಷಕ್ಕೋಸ್ಕರ ವೀರಶೈವಸರ್ವಸ್ವವಾದ ಸಕಲಾರ್ಥಪ್ರಕಾಶಕಮಾದ ಸಕಲ ದೋಷಂಗಳಿಂದಲೂ ಮುಟ್ಟದ ನಿಗಮಾಗಮ ಜ್ಞಾನಿಗಳಿಂ ಸಂತೋಷಿಸಲ್ಪಟ್ಟ ಪೂರ್ವೋಕ್ತಾಗಮ ಪುರಾಣಂಗಳಲ್ಲಿ ಶಿವನಿಂದ ದೇವಿಯರಿಗೂ ತತ್ಕುಮಾರನಾದ ಷಣ್ಮುಖಸ್ವಾಮಿಗೂ ಅನುಗ್ರಹಿಸಿ ಪೇಳಿದ ತತ್ಸಂಪ್ರದಾಯಸಿದ್ಧನಾದ ರೇಣುಕ ಗಣೇಶ್ವರನೆಂಬ ಮಹಾಪುರುಷನಿಂದ ಮರಳಿ ಭೂಮಿಯಲ್ಲಿ ಅಗಸ್ತ್ಯಂಗುಪದಿಷ್ಟಮಾದ ಪಿಂಡಾದಿಜ್ಞಾನ ಶೂನ್ಯಾಂತ ನೂರೊಂದುಸ್ಥಲರೂಪಮಾದ ವೀರಶೈವಸಿದ್ಧಾಂತಮಂ ಲೋಕಹಿತಾರ್ಥಮಾಗಿ ನಿರ್ಮಲಜ್ಞಾನಿಗಳ ಮಧ್ಯದಲ್ಲಿ ಶ್ರೇಷ್ಠನಾದ ಶಿವಯೋಗಿಯೆಂಬ ನಾಮದಿಂ ಪ್ರಖ್ಯಾತನಾದಾ ಚಾರ್ಯನು, ಅಭ್ಯದಾತ್– ಸಂಗ್ರಹದಿಂ ಪ್ರಕಟಿಸಿದನೆಂಬುದರ್ಥಂ ॥೩೦॥ ಈ ಸಂಗ್ರಹ ಗ್ರಂಥದ ಮಹತ್ವಮಂ ನಾಮಧೇಯಮಂ ಪ್ರಕಟಿಸುತಿರ್ದಪಂ.

ಸರ್ವೇಷಾಂ ಶೈವತಂತ್ರಾಣಮುತ್ತರತ್ವಾನ್ನಿರುತ್ತರಂ
ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತಶಿಖಾಮಣಿಃ ॥

ಯತ್–ಆವುದಾನೊಂದು ವೀರಶೈವತಂತ್ರವು ಸಮಸ್ತವಾದ ಶೈವತಂತ್ರಂಗಳಿಗೂ, ಉತ್ತರತ್ವಾತ್– ಶ್ರೇಷ್ಠಮಾದ ಕಾರಣದತ್ತಣಿಂ, ನಿರುತ್ತರಂ – ತನ್ನತ್ತಣಿಂದಧಿಕ ವಿಲ್ಲದಂಥಾಗಿ, ಸಿದ್ಧಾಂತಶಿಖಾಮಣಿರಿತಿನಾಮ್ನಾ – ಸಿದ್ಧಾಂತಶಿಖಾಮಣಿಯೆಂಬ ಪೆಸರಿನಿಂ, ಲೋಕೇ– ಲೋಕದಲ್ಲಿ , ಪ್ರತೀಯತೇ– ಪ್ರಕಾಶಿಸುತ್ತಿಹುದೆಂಬುದರ್ಥಂ ॥೩೧॥ ಆಮೇಲೆ ತನ್ನಿಂ ನಿರ್ಮಿತಮಾದೀ ಸಿದ್ಧಾಂತಶಿಖಾಮಣಿಯೆಂಬ ಗ್ರಂಥದಲ್ಲಿ ವೀರಶೈವರಾದ ವಿದ್ವಾಂಸರು ಮತಿಯ ಮಾಡಲೆಂದು ಬೇಡಿಕೊಳ್ಳುತ್ತಿರ್ದಪಂ

ಅನುಗತಸಕಲಾರ್ಥೇ ಶೈವತಂತ್ರೈಸ್ಸಮಸ್ತೈಃ
ಪ್ರಕಟಿತ ಶಿವಬೋಧಾದ್ವೈತಭಾವಪ್ರಸಾದೇ
ವಿದಧತು ಮತಿಮಸ್ಮಿನ್ವೀರಶೈವಾ ವಿಶಿಷ್ಟಾಃ
ಪಶುಪತಿಮತಸಾರೇ ಪಂಡಿತ ಶ್ಲಾಘನೀಯೇ ॥

ಸಮಸ್ತೈಃ ಶೈವತಂತ್ರೈಃ – ಸಮಸ್ತವಾದ ಶೈವತಂತ್ರಗಳಿಂದ, ಅನುಗತ ಸಕಲಾರ್ಥೇ– ಅನುವೃತ್ತ ಮಾದ ಸಕಲ ರಹಸ್ಯಾರ್ಥವುಳ್ಳ ಪ್ರಕಟಿತ ಶಿವಬೋಧಾದ್ವೈತ ಭಾವಪ್ರಸಾದೇ– ಪ್ರಕಟಿಸಲ್ಪಟ್ಟ ಶಿವಾದ್ವೈತಜ್ಞಾನದ ಸಮರಸಭಾವ ಪ್ರಸನ್ನತೆಯುಳ್ಳ, ಪಶುಪತಿಮತ ಸಾರೇ–ಶಿವಸಿದ್ಧಾಂತದಲ್ಲಿ ಸಾರಮಾದ ವಿದ್ವದ್ವಸ್ತು, ಲಯಮಾಗೆ– ವಿದ್ವಾಂಸರಿಂ ಕೊಂಡಾಡುವ, ಅಸ್ಮಿನ್–ಈ ಸಿದ್ಧಾಂತಶಿಖಾಮಣಿಯೆಂಬ ಗ್ರಂಥದಲ್ಲಿ, ವಿಶಿಷ್ಟಾಃ– ಶ್ರೇಷ್ಠರಾದ, ವೀರಶೈವಾಃ–ವೀರಶೈವಾಚಾರ್ಯರು, ಮತಿಂ–ಬುದ್ಧಿಯಂ, ವಿದಧತು– ಮಾಡಲಿ ಎಂಬುದು ವಿಜ್ಞಾಪನೆ ॥೩೨॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮಪುರಾಣಾದಿಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ವನುಕ್ರಮಪ್ರಸಂಗೋನಾಮ ಪ್ರಥಮಃ ಪರಿಚ್ಛೇದಃ

## ದ್ವಿತೀಯಪರಿಚ್ಛೇದ

### ರೇಣುಕ ದಾರುಕ ಅವತರಣ

ಆಮೇಲೆ ಗ್ರಂಥಕರ್ತನಾದ ಶಿವಯೋಗೀಶ್ವರಂ ನಿಗಮಾಗಮ ಸಮ್ಮತಿಯಿಂ ಸೂತ್ರದ್ವಯದಿಂದ ಪಾರ್ವತೀ ಪರಮೇಶ್ವರರಂ ನಮಸ್ಕರಿಸುತಿರ್ದಪಂ.

ಸಚ್ಚಿದಾನಂದರೂಪಾಯ ಸದಸದ್ವ್ಯಕ್ತಿಹೇತವೇ
ನಮಶ್ಶಿವಾಯ ಸಾಂಬಾಯ ಸಗಣಾಯ ಸ್ವಯಂಭುವೇ ॥

ಸದಸದ್ವ್ಯಕ್ತಿ ಹೇತವೇ – ಭಾವಾಭಾವರೂಪಮಾದ ಪ್ರಪಂಚಿನಾವಿರ್ಭಾವಕ್ಕೆ ಕಾರಣಮಾದ ಭವಾನಿಯಿಂ ಸಮೇತನಾದ ಪ್ರಮಥಗಣಯುಕ್ತನಾದ, ಸ್ವಯಂಭುವೇ – ಅಯೋನಿಜನಾದ ಸಚ್ಚಿದಾನಂದರೂಪನಾದ, ಶಿವಾಯ – ಶಿವಂಗೋಸ್ಕರ, ನಮಃ – ನಮಸ್ಕಾರಯೆಂಬುದರ್ಥಂ ॥೧॥

ಸದಾಶಿವಮುಖಾಶೇಷ ತತ್ತ್ವಮೌಕ್ತಿಕಶುಕ್ತಿಕಾಂ
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿರೂಪಿಣೀಂ॥

ಸದಾಶಿವಾದಿ ಭೂಮ್ಯಂತಮಾದ ಸಕಲ ತತ್ತ್ವಂಗಳೆಂಬ ಮುತ್ತಿನ ಮಣಿಗಳುತ್ಪತ್ತಿಗಾಶ್ರಯ ನಾದಂಥಾ ಮಹಾಮಾಯೆ ಶುದ್ಧವಿದ್ಯೆ ಪರಾಬಿಂದು ಪ್ರಕೃತಿರೂಪಮಾದಂಥಾ, ಶಕ್ತಿಂ – ಶಿವಸಮವೇತ ಶಕ್ತಿಸ್ವರೂಪಮಾದ, ಮಾಹೇಶ್ವರೀಂ – ಭವಾನಿಯಂ, ವಂದೇ– ನಮಸ್ಕರಿಸು ತಿರ್ದಪನೆಂಬುದರ್ಥಂ ॥೨॥ ಆಮೇಲೆ ವಿಶ್ವಸೃಷ್ಟಿಯಂ ಪ್ರತಿಪಾದಿಸಲೋಸುಗ ನಾಲ್ಕು ಸೂತ್ರಂಗಳಿಂ ನಿರ್ದೇಶಮಂ ಮಾಡುತಿರ್ದಪಂ

ಅಸ್ತಿ ಸಚ್ಚಿತ್ಸುಖಾಕಾರಮಲಕ್ಷಣಪದಾಸ್ಪದಂ
ನಿರ್ವಿಕಲ್ಪಂ ನಿರಾಕಾರಂ ನಿರಸ್ತಾಶೇಷವಿಪ್ಲವಮ್ ॥

ಪರಿಚ್ಛೇದಕಥಾಶೂನ್ಯಂ ಪ್ರಪಂಚಾತೀತವೈಭವಂ
ಪ್ರತ್ಯಕ್ಷಾದಿ ಪ್ರಮಾಣಾನಾಮಗೋಚರಪದೇ ಸ್ಥಿತಮ್ ॥

ಸ್ವಪ್ರಕಾಶವಿರಾಜಂತಮನಾಮಯಮನೌಪಮಂ
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿನಿರಂಕುಶಮ್ ॥

ಶಿವರುದ್ರ ಮಹಾದೇವ ಭವಾದಿಪದಸಂಯುತಂ
ಅದ್ವಿತೀಯಮನಿರ್ದೇಶ್ಯಂ ಪರಂ ಬ್ರಹ್ಮ ಸನಾತನಮ್ ॥

ಸಚ್ಚಿದಾನಂದ ಸ್ವರೂಪಮಾದ ಚಿಹ್ನ ಶೂನ್ಯಸ್ಥಾನಕ್ಕಾಶ್ರಯಮಾದ ಭೇದರಹಿತಮಾದ ಆಕಾರಶೂನ್ಯಮಾದ ನಿವಾರಿಸಲ್ಪಟ್ಟ ಸಕಲ ಬೋಧೆಯನ್ನುಳ್ಳ ಹರಿಹಂಚಿನ ಪ್ರಸಂಗವಿಲ್ಲದ ಪ್ರಕೃತಿವಿಕಾರಮಲ್ಲದ ವಿಭವವುಳ್ಳ ರೂಪರಸಾದಿಗಳಿಲ್ಲದ ಕಾರಣದಿಂ ಪ್ರತ್ಯಕ್ಷಪ್ರಮಾಣಕ್ಕೆ ಗೋಚರಮಲ್ಲದ ಅದರಿಂದಲೆ ತನ್ಮೂಲಕಮಾದ ಅನುಮಾನಾದಿಗಳಿಗೂ ಗೋಚರಮಲ್ಲದ ಆ ಕಾರಣದಿಂ ತನ್ನ ಪ್ರಕಾಶದಿಂದಲೆ ಪ್ರಕಾಶಿಸುತ್ತಿರ್ಪ ಜನನ ಮರಣಾದಿಗಳಿಲ್ಲದ ಉಪಮಾತೀತಮಾದ ಸರ್ವವನೂ ಬಲ್ಲ ಸರ್ವಾನುಸ್ಯೂತಮಾದ ರಾಗದ್ವೇಷ ರಹಿತಮಾದ

ಸಕಲ ಸಾಮರ್ಥ್ಯಮುಳ್ಳ ತಡೆಯಿಲ್ಲದ ಶಿವರುದ್ರಾದ್ಯನೇಕ ಪದಸಂಜ್ಞೆಯುಳ್ಳ ದ್ವಿತೀಯ ಶೂನ್ಯಮಾದ ಅವಾಚ್ಯಮಾದ ನಿತ್ಯಮಾದ, ಪರಂಬ್ರಹ್ಮ–ಪರಬ್ರಹ್ಮವು, ಅಸ್ತಿ– ಉಂಟೆಂದಂಗೀಕರಿಸಲ್ತಕ್ಕದು. ಅಂಗೀಕರಿಸದಿರ್ದಡೆ ಅಸನ್ನೇವಸಭವತಿ ಅಸದ್ಬ್ರಹ್ಮೇತಿ ವೇದ ಚೇತ್ ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ ಹೀಗೆಂಬ ಶ್ರುತಿ ಪ್ರಮಾಣದಿಂ ಸ್ವಸತ್ತಾಹನಿಯಾಹವೆಂಬುದು ತಾತ್ಪರ್ಯಂ ॥೬॥ ಆಮೇಲೀ ಪ್ರಕಾರಮಾದ ಭವನಕ್ರಿಯಾಶಕ್ತಿ ಸಾಮರಸ್ಯಾತ್ಮಕಮಾದ ಪರಬ್ರಹ್ಮದತ್ತಣಿಂ ಸದೇವ ಸೌಮ್ಯೇದಮಗ್ರ ಆಸೀತ್– ಹೀಗೆಂಬ ಶ್ರುತಿಯಿಂ ಬೀಜಾಂಕುರನ್ಯಾಯದಿಂ ವಿಶ್ವಸೃಷ್ಟಿಕಾರಮಂ ನಿರೂಪಿಸುತಿರ್ದಪಂ

ತತ್ರ ಲೀನಮಭೂತ್ಪೂರ್ವಂ ಚೇತನಾಚೇತನಂ ಜಗತ್
ಸ್ವಾತ್ಮಲೀನಂ ಜಗತ್ಕಾರ್ಯಂ ಸ್ವಪ್ರಕಾಶ್ಯಂ ತದದ್ಭುತಮ್ ॥

ತತ್ರ – ಉಕ್ತರೂಪಮುಳ್ಳ ಆ ಪರಬ್ರಹ್ಮದಲ್ಲಿ, ಚೇತನಾಚೇತನಂ ಜಗತ್– ಚರಾಚರಮಯವಾದ ವಿಶ್ವವು, ಪೂರ್ವಂ – ಸೃಷ್ಟಿನಿಂದಾ ಮೊದಲುವಿನಂ ಉಭಯೇಂದ್ರಿಯಂಗಳಿಗೆ ಗೋಚರಮಾಗಿ, ತಾದಾತ್ಮ್ಯಸಂಬಂಧದಿಂದಿರುವುದು. ತದದ್ಭುತಂ – ಆ ಆಶ್ಚರ್ಯವು ಅನಂತಮೆಂಬುದುಳುಮೆ ಆಮೇಲೆ, ಸ್ವಾತ್ಮವಿನಂ– ಸ್ವಾತ್ಮಶಕ್ತಿಯೆಂಬ ಬೀಜದಲ್ಲಿ ಅಡಗಿರ್ದ, ಜಗತ್ – ವಿಶ್ವವು ಯೋಗಿಯಂತೆ, ಜೇಡನ ಹುಳುವಿನಂತೆ ಕಾರಣಾಂತರಪೇಕ್ಷೆಯಿಲ್ಲದೆ, ಸ್ವಪ್ರಕಾಶ್ಯಂ– ದ್ವಿತೀಯಪದಾರ್ಥಮಿಲ್ಲದ ಕಾರಣದಿಂದಲೆ ಪ್ರಕಾಶಿಸಲು ಯೋಗ್ಯಮಾದುದಾಗಿ ಕಾರ್ಯಂ ಉಭಯೇಂದ್ರಿಯ ಗೋಚರಮಪ್ಪಂತೆ ಮಾಡಲ್ತಕ್ಕದು, ಅಭೂತ್ – ಆಯಿತ್ತೆಂಬುದರ್ಥ ॥೭॥ ಆಮೇಲೆ ಘೃತಕೀಟನ್ಯಾಯದಿಂದ ವಿಶ್ವಸ್ವಪ್ರಕಾಶಾನ್ಮುಖವಾದ ಶಿವಭಕ್ತಿಸ್ವರೂಪಮಂ ಸೂತ್ರಂಗಳಾರರಿಂ ಪ್ರಕಾಶಿಸುತಿರ್ದಪಂ.

ಶಿವಾಭಿದಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ
ಸ್ವರೂಪಮಾದಧೇ ಕಿಂಚಿತ್ಸುಖಸ್ಫೂರ್ತಿವಿಜೃಂಭಿತಮ್ ॥

ಶಿವನೆಂಬ ಪೆಸರುಳ್ಳ ಪರಬ್ರಹ್ಮವು ವಿಶ್ವ ನಿರ್ಮಾಣವ ಮಾಡಲೋಸ್ಕರ, ಇಚ್ಛಯಾ– ತನ್ನಿಚ್ಛೆಯಿಂದ, ಸುಖಸ್ಫೂರ್ತಿ ವಿಜೃಂಭಿತಂ – ಸುಖಾತಿಶಯದಿಂದುಬ್ಬಿರ್ದ, ಕಿಂಚಿತ್ಸ್ವರೂಪಂ– ಒಂದಿಷ್ಟು ಸ್ವರೂಪಮಂ, ಆದಧೇ– ಅಂಗೀಕರಿಸಿತ್ತೆಂಬುದರ್ಥಂ. ॥೮॥ ಆ ಸ್ವರೂಪಮಂ ಪೇಳುತಿರ್ದಪಂ.

ನಿರಸ್ತದೋಷಸಂಬಂಧಂ ನಿರುಪಾಧಿಕಮವ್ಯಯಂ
ದಿವ್ಯಮಪ್ರಾಕೃತಂ ನಿತ್ಯಂ ನೀಲಕಂಠಂ ತ್ರಿಲೋಚನಮ್ ॥

ಚಂದ್ರಾರ್ಧಶೇಖರಂ ಶುದ್ಧಂ ಶುದ್ಧಸ್ಫಟಿಕಸನ್ನಿಭಂ
ಶುದ್ಧಮುಕ್ತಾಫಲಾಭಾಸಮುಪಾಸ್ಯಂ ಗುಣಮೂರ್ತಿಭಿಃ ॥

ವಿಶುದ್ಧಜ್ಞಾನಕರಣಂ ವಿಷಯಂ ಸರ್ವಯೋಗಿನಾಂ
ಕೋಟಿಸೂರ್ಯಪ್ರತೀಕಾಶಂ ಚಂದ್ರಕೋಟಿಸಮಪ್ರಭಮ್ ॥

ಅಪ್ರಾಕೃತಗುಣಾಧಾರಮನಂತಮಹಿಮಾಸ್ಪದಮ್

ನಿವಾರಿಸಲ್ಪಟ್ಟ ಜರಾ ಮರಣಾದಿ ದೋಷಂ ಸಕಲದೋಷಂ ಸಂಬಂಧಮುಳ್ಳ ಸ್ವಾತಿರಿಕ್ತಾ ವಿದ್ಯಾದ್ಯುಪಾಧಿ ಶೂನ್ಯಮಾದ ನಾಶರಹಿತಮಾದ ಅದರಿಂದಲೆ ನಿತ್ಯಮಾದ ಸ್ತುತಿಸಲು ಯೋಗ್ಯಮಾದ ಪ್ರಕೃತಿಸ್ಪರ್ಶಮಿಲ್ಲದ ನೀಲಗಳ ಮುಕ್ಕಣ್ಣುಗಳುಳ್ಳ ಖಂಡಚಂದ್ರನೆ ಆಭರಣಮಾಗಿ ಉಳ್ಳ ಪವಿತ್ರಮಾದ ಶುದ್ಧ ಸ್ಫಟಿಕದಂತೆ ಕಾಂತಿಯುಳ್ಳ ಸುಪ್ಪಾಣಿಮುತ್ತಿನಂತೆ ಪ್ರಕಾಶಿಸುವ ಬ್ರಹ್ಮಾದಿಗಣಮೂರ್ತಿಗಳಿಂದುಪಾಸ್ಯಮಾದ ನಿರ್ಮಲಜ್ಞಾನರೂಪಮಾದ ಚಕ್ಷುರಾದಿಕರಣಪ್ರಪಂಚವುಳ್ಳ ದಿವ್ಯಯೋಗಿಗಳಿಗೆ ಗೋಚರಮಾದ ಕೋಟಿಸೂರ್ಯ ಪ್ರಭೆಯನ್ನುಳ್ಳ ಚಂದ್ರಕೋಟಿ ಕಾಂತಿಯುಳ್ಳ ಆ ಪ್ರಾಕೃತಾನಂತ ಗುಣಗಳಿಗಾಧಾರಮಾದ ಅತಿದುರ್ಘಟಿಕಾರಿಕೆ ಮೊದಲಾದ ಬಹು ಮಹಿಮೆಗಾಸ್ಪದಮಾದ ಕಿಂಚಿತ್ಸುಚಿರೂಪಂ ಆದದೆ ಅಂಗೀಕರಿಸಿತೆಂದು ಪೂರ್ವಕ್ರಿಯೆಯೊಡನೆ ಸಂಬಂಧವು ॥೧೧॥ ಆಮೇಲೆ ಶಿವನ ಭಕ್ತಿಸ್ವರೂಪಮಂ ಪ್ರಕಟಿಸುತಿರ್ದಪಂ

ತದೀಯಾ ಪರಮಾಶಕ್ತಿಸ್ಸಚ್ಚಿದಾನಂದಲಕ್ಷಣಾ ॥

ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ
ತದಿಚ್ಛಯ್ಯಾಭವತ್ಸಾಕ್ಷಾತ್ತತ್ಸ್ವರೂಪಾನುಕಾರಿಣೀ ॥

ತದೀಯ – ಆ ಶಿವನೊಡನೆ ಸಂಬಂಧಮುಳ್ಳ, ಪರಮಾಶಕ್ತಿಃ – ಉತ್ಕೃಷ್ಟಮಾದ ಶಕ್ತಿಯು, ಸಚ್ಚಿದಾನಂದ ಲಕ್ಷಣಾ – ಸಚ್ಚಿದಾನಂದಂಗಳೆ ಕುರುಹುಳ್ಳವಾಗಿ, ಅಸ್ತಿ– ಇರುವುದೆಂಬುದು ಶೇಷಾರ್ಥಂ. ಆ ಶಕ್ತಿಯೆ, ಸಮಸ್ತ ಲೋಕ ನಿರ್ಮಾಣೆ – ಭಾವಾಭಾವ ಪ್ರಪಂಚಮಂ ಸೃಜಿಸುವಲ್ಲಿ, ನಾ ಸತೊ ವಿದ್ಯತೇಭಾವಃ ಹೀಗೆಂಬ ಭಗವದ್ವಚನಕ್ಕನು ಸಾರವಾಗಿ ಪೂರ್ವೋಕ್ತ ಪ್ರಕಾರದಿಂ ತನ್ನಲ್ಲಿ ಶಿಖಂಡ್ಯಂಡರಸ ನ್ಯಾಯದಿಂದ ಅಹಮೆಂದ ವಿಭಾಗ ಪರಾಮರ್ಶ ರೂಪದಿಂದಮುಭಯೇಂದ್ರಿಯ ಗೋಚರಮಪ್ಪಂತೆ ಇರುತ್ತಿದ್ದ ವಿಶ್ವಮಂ ಜ್ಞಾನಕರ್ಮೇಂದ್ರಿಯ ರೂಪವಾದ ಉಭಯೇಂದ್ರಿಯಂಗಳಿಗೆ ಗೋಚರಮಪ್ಪಂತೆ ಇದ್ದಂತಾ ರೂಪಮಾಟದಿಂ ಸೃಜಿಸಬೇಕೆಂದು ವಿಭಾಗ ಪರಾಮರ್ಶ ಲೀಲೆಯಂಟಾದಲ್ಲಿ ತನ್ನ ತನ್ನ ಸ್ವತಂತ್ರತೆಯಿಂ ಭೇದಾಭೇದವನ್ನೈದಿ ವೃಕ್ಷಗತ ಫಲಪುಷ್ಪಾದಿ ನ್ಯಾಯದಿಂ ವಿಕಾರವಿಲ್ಲದೆ ಸಮವಾಯ ಸ್ವರೂಪಿಣೀ– ಉಪಾದಾನ ಕಾರಣಮಾದಂಥಾದು, ಭವತಿ–ಆಗುತ್ತಿಹದೆಂಬು ದುಳ್ಳಮೆಯರ್ಥಂ. ಪುನಃ– ಮರಳಿ ಸ್ವಾಂತರಾಕರ್ಷಣರೂಪಮಾದ ಸಂಹಾರದ ಲೀಲೆಯುಂಟಾದಲ್ಲಿ, ತದಿಚ್ಛಯಾ – ಆ ಶಿವನ ಇಚ್ಛೆಯಿಂದ, ಕರ್ಮಾಂಗ ಭಂಗಿ ನ್ಯಾಯದಿಂ ತನ್ನ ಕಿರಣರೂಪಮಾದ ಸಂಹಾರಲೀಲೆಯುಂಟಾದಲ್ಲಿ ಜ್ಞಾನಕ್ರಿಯಾಶಕ್ತಿದ್ವಾರದಿಂ ಕ್ಷರಾಕ್ಷರಮಯಮಾದ ವಿಶ್ವಮಂ ತನ್ನೊಳಗೆಳದುಕೊಂಡು, ಸಾಕ್ಷಾತ್ ಆಹಮೆಂದು ಪ್ರತ್ಯಕ್ಷವಾದ, ತತ್ಸ್ವರೂಪಾನುಕಾರಣೀ – ಆ ಶಿವನೊಡನೆ ಅಭಿನ್ನವಾದ ಸ್ವರೂಪವನನುಕರಿಸಿದಾಯಕನು, ಅಭವತ್ – ಆಗುತ್ತಿಹನೆಂಬುದರ್ಥಂ. ಇಲ್ಲಿ ಭೇದಾಭೇದಂಗಳಿಗೆ ವಿರೋಧಮೆಂದು ಶಂಕಿಸಲಾಗದು. ಆ ಭೇದಮೆಂಬುದು ಅಹಿಕುಂಡಲ ನ್ಯಾಯದಿಂ ಸ್ವತಂತ್ರ ಪರಿಕಲ್ಪಿತಮಾದ ಕಾರಣದಿಂ ಭಗವಂತನಾದ ಪರಶಿವನ

ಶಕ್ತಿಯೆಂಬುದತಿದುರ್ಘಟಕಾರಿಯಾದಂಥಾದೆಂದು ಪ್ರಸಿದ್ಧಂ ॥೧೩॥ ಈ ಪ್ರಕಾರದಿಂದ ಶಿವಶಕ್ತಿ ಸ್ವರೂಪಮಂ ನಿರೂಪಿಸಿ ಆಮೇಲೆ ಸ–ಆ,ಐಕ್ಷತ ಲೋಕಾನ ಸೃಜತ ಯಥಾಪೂರ್ವಮಕಲ್ಪಯತ್ ಎಂಬೀ ಮೊದಲಾದ ಶ್ರುತ್ಯುಕ್ತ ಪ್ರಕಾರದಿಂ ಸೃಷ್ಟಿ ಕ್ರಮವಂ ನಿರೂಪಿಸುತಿರ್ದಪಂ.

ಸ ಶಂಭುರ್ಭಗವಾನ್ ದೇವಃ ಸರ್ವಜ್ಞಃ ಸರ್ವಶಕ್ತಿಮಾನ್
ಜಗತ್ಸಿಸೃಕ್ಷುಃ ಪ್ರಥಮಂ ಬ್ರಹ್ಮಾಣಂ ಸರ್ವದೇಹಿನಾಮ್ ॥

ಕರ್ತಾರಂ ಸರ್ವಲೋಕಾನಾಂ ವಿದಧೇ ವಿಶ್ವನಾಯಕಃ

ದೇವಃ – ಕ್ರೀಡಾಶೀಲನಾದ, ಭಗವಾನ್– ಷಡ್ಗುಣೈಶ್ವರ್ಯ ಸಂಪನ್ನನಾದ ಸರ್ವಜ್ಞನಾದ ಸರ್ವಶಕ್ತ್ಯೋತನಾದ ಜಗನ್ನಾಯಕನಾದ, ಸಶಂಭುಃ – ಆ ಶಿವನು, ಸಿಸೃಕ್ಷುತ್ವನ್ – ವಿಶ್ವತ್ವ ನಿರ್ಮಾಣಂ ಮಾಡಲಿದೆಯುಳ್ಳನವನಾಗಿ, ಪ್ರಥಮಂ – ಮೊದಲು, ಸರ್ವಲೋಕಾನಾಂ – ಚತುರ್ದಶ ಭುವನಂಗಳಿಗೂ, ಸರ್ವದೇಹಿನಾಂ – ಆ ಭುವನಂಗಳನಾಶ್ರಯಿಸಿಕೊಂಡಿರುವಂಥಾ ಪ್ರಾಣಿಗಳಿಗೂ, ಕರ್ತಾರಂ – ಸೃಷ್ಟಿಕರ್ತನಾದಂಥಾ, ಬ್ರಹ್ಮಾಣಂ – ಬ್ರಹ್ಮದೇವನು, ವಿದಧೇ – ಸೃಷ್ಟಿಮಾಡಿದನೆಂಬುದರ್ಥಂ. ಇಲ್ಲಿ ವಿಶ್ವಾಧಿಕೋರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಜನಯಾಮಾಸ ಪೂರ್ವಮೆಂದು ಯಾಜುಷ ಶ್ರುತಿಯುಂಟಾಗಿರುವುದು ॥೧೪॥ ಆಮೇಲೆ ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ಎಂಬ ಶ್ವೇತಾಶ್ವತರ ಶ್ರುತ್ಯರ್ಥಮಂ ಪ್ರಕಟಿಸುತಿರ್ದಪಂ.

ತಸ್ಮೈ ಪ್ರಥಮಪುತ್ರಾಯ ಶಂಕರಃ ಶಕ್ತಿಮಾನ್ವಿಭುಃ
ಸರ್ವಜ್ಞಸ್ಸಕಲಾಃವಿದ್ಯಾಸ್ಸಾನುಗ್ರಹಮುಪಾದಿಶತ್ ॥

ಶುಕ್ಲಪಟ ನ್ಯಾಯದಿಂ ಸ್ವಸಮೇತಮಾದ ಶಕ್ತಿಯುಳ್ಳ ವ್ಯಾಪಕನಾದ ಸರ್ವಜ್ಞನಾದ ಶಿವನು, ಪ್ರಥಮಪುತ್ರಾಯ – ಮೊದಲ ಮಗನಾದ, ತಸ್ಮೈ– ಆ ಬ್ರಹ್ಮದೇವಂಗೋಸ್ಕರ, ಸಾನುಗ್ರಹಂ– ಅನುಗ್ರಹದಿಂ ಸಹಿತಮಾದಂಥಾದು ಹೇಗಹದು ಹಾಗೆ, ಸಕಲ ವಿದ್ಯಾಃ – ವೇದಾದಿ ಸಕಲ ಶಾಸ್ತ್ರಂಗಳಂ, ಉಪಾದಿಶತ್ – ಉಪದೇಶವಂ ಮಾಡಿದನೆಂಬುದರ್ಥಂ ॥೧೫॥ ಆಮೇಲೆ

ಪ್ರಾಪ್ತವಿದ್ಯೋ ಮಹಾದೇವಾದ್ಬ್ರಹ್ಮಾ ವಿಶ್ವನಿಯಾಮಕಾತ್
ಸಮಸ್ತಲೋಕಾನ್ನಿರ್ಮಾತುಮುದ್ಯೋಗಮಪರೋಽಭವತ್ ॥

ವಿಶ್ವನಿಯಾಮಕಾತ್ – ಜಗತ್ತಿನ ಶಿಕ್ಷೆ ರಕ್ಷೆಗೆ ಕಾರಣನಾದ ಮಹಾದೇವನತ್ತಣಿಂ ಪಡೆಯಲ್ಪಟ್ಟ ಸಕಲ ವಿದ್ಯಂಗಳುಳ್ಳ ಬ್ರಹ್ಮದೇವನು ಸಕಲ ಲೋಕಂಗಳಂ ಸೃಷ್ಟಿಸಲೋಸ್ಕರ ಉದ್ಯೋಗವುಳ್ಳವನಾದನೆಂಬುದರ್ಥಂ ॥೧೬॥

ಕೃತೋದ್ಯೋಗೋಽಪಿ ನಿರ್ಮಾಣೇ ಜಗತಾಂ ಶಂಕರಾಜ್ಞಯಾ
ಅಜ್ಞಾತೋಪಾಯಸಂಪತ್ತಿರಭವನ್ಮಾಯಯಾವೃತಃ ॥

ಶಂಕರಾಜ್ಞಯಾ – ಶಿವನ ಅಪ್ಪಣೆಯಿಂ ಭುವನಂಗಳಂ ಸೃಜಿಸುವಲ್ಲಿ ಬ್ರಹ್ಮದೇವನು ಮಾಡಲ್ಪಟ್ಟ ಉದ್ಯೋಗವುಳ್ಳವನಾದರೂ ಶಿವನ ಮಾಯಾಶಕ್ತಿಯಿಂದಾವೃತನಾಗಿ ತಿಳಿಯಲ್ಪಡದೆಯಿದ್ದ ಉಪಾಯಸಂಪತ್ತಿಯುಳ್ಳವನೆಂಬುದರ್ಥಂ ॥೧೭॥ ಆಮೇಲೆ

> ವಿಧಾತುಮಖಿಲಾನ್ ಲೋಕಾನ್ ಉಪಾಯಂ ಪ್ರಾಪ್ತುಮಿಚ್ಛಯಾ
> ಪುನಸ್ತಂ ಪ್ರಾರ್ಥಯಾಮಾಸ ದೇವದೇವಂ ತ್ರಿಯಂಬಕಮ್ ॥

ಅಖಿಲಾನ್ಲೋಕಾನ್ – ಅಖಿಲ ಭುವನ ಕಾರಣಮಾದುವಂ ಸೃಜಿಸಲೋಸ್ಕರ ಉಪಾಯಮಂ ಪಡೆಯಬೇಕೆಂಬ ಇಚ್ಛೆಯಿಂದ ಬ್ರಹ್ಮದೇವನು ಮರಳಿ ವಿಷ್ಣ್ವಾದಿ ದೇವರ್ಕಳಿಗೂ ದೇವನಾಗಿ ಸೃಷ್ಟಿ ಸ್ಥಿತಿ ಸಂಹಾರಂಗಳಿಗೆ ಕಾರಣಮಾದ ಮೂರು ನೇತ್ರಂಗಳುಳ್ಳ ಆ ಶಿವನಂ ಪ್ರಾರ್ಥಿಸಿದನೆಂಬುದರ್ಥಂ ॥೧೮॥ ಆಮೇಲೆ ಪ್ರಾರ್ಥನಾಪ್ರಕಾರಮಂ ಪ್ರತಿಪಾದಿಸುತ್ತಿರ್ದಪಂ

> ನಮಸ್ತೇ ದೇವದೇವೇಶ ನಮಸ್ತೇ ಕರುಣಾಕರ
> ಅಸ್ಮದಾದಿಜಗತ್ಸರ್ವನಿರ್ಮಾಣನವಿಧಿಕ್ಷಮ ॥

> ಉಪಾಯಂ ವದ ಮೇ ಶಂಭೋ ಜಗತ್ಸೃಷ್ಟೌ ಜಗತ್ಪತೇ
> ಸರ್ವಜ್ಞಃ ಸರ್ವಶಕ್ತಿಸ್ತ್ವಂ ಸರ್ವಕರ್ತಾ ಸನಾತನಃ ॥

ಭೋ ದೇವೇಶ – ವಿಷ್ಣ್ವಾದಿ ದೇವತೆಗಳಿಗೂ ಅಧಿಪತಿಯಾದ ದೇವಸ್ಮುತ್ತ್ಯನಾದ ಕೃಪೆಗೆ ಮೂಲಸ್ಥಾನನಾದ, ಜಗನ್ನಿರ್ಮಾಣಕ್ರಿಯೆಯಲ್ಲಿ ಸಮರ್ಥನಾದ, ಜಗನ್ನಾಯಕನಾದ, ಶಂಭೋ–ಶಿವನೆ, ತೇ–ನಿನಗೋಸ್ಕರ, ನಮೋನಮಃ – ನಮಸ್ಕಾರಂ. ಜಗತ್ಸೃಷ್ಟ್ಯಾ– ಜಗತ್ತನ್ನು ಸೃಜಿಸುವಲ್ಲಿ, ಉಪಾಯಂವದ– ಉಪಾಯಮಂ ಪೇಳು, ನಾನೇನ ಬಲ್ಲೆನೆಂಬೆಯಾ, ತ್ವಂ–ನೀನು, ಸರ್ವಜ್ಞಃ – ಭೂತಭವಿಷ್ಯದ್ವರ್ತಮಾನಪರ ಸತ್ಸಕಲ ಪದಾರ್ಥಜ್ಞಾನವುಳ್ಳವನು. ಅಘಟನಘಟನಾದಿ ಸಕಲಶಕ್ತಿ ಸಂಪನ್ನನು ಕಾಲತ್ರಯಬಾಧ್ಯನು ವಂಚಿಸಬೇಡ ಕೃಪೆಮಾಡೆಂಬುದರ್ಥಂ ॥೨೦॥

> ಇತಿ ಸಂಪ್ರಾರ್ಥಿತಃ ಶಂಭುಃ ಬ್ರಹ್ಮಣಾ ವಿಶ್ವನಾಯಕಃ
> ಉಪಾಯಮುವದತ್ತಸ್ಮೈ ಲೋಕಸೃಷ್ಟಿಪ್ರವರ್ತನಂ ॥

ಇತಿ – ಈ ಪ್ರಕಾರದಿಂದ ಜಗನ್ನಾಯಕನಾದ ಶಿವನು ಬ್ರಹ್ಮದೇವನಿಂ ಪ್ರಾರ್ಥಿಸಲು ಪಟ್ಟಾತನಾಗಿ ಲೋಕಸೃಷ್ಟಿ ಪ್ರವರ್ತನಮಾದ ಉಪಾಯಮಂ, ತಸ್ಮೈ – ಆ ಬ್ರಹ್ಮ ದೇವಂಗೋಸ್ಕರ, ಅವದತ್ – ನಿರೂಪಿಸಿದನೆಂಬುದರ್ಥಂ ॥೨೧॥ ಆಮೇಲೆ

> ಉಪಾಯಮೀಶ್ವರೇಣೋಕ್ತಂ ಲಬ್ಧ್ವಾಪಿ ಚತುರಾನನಃ
> ನ ಸಮರ್ಥೋಽಭವತ್ಕರ್ತುಂ ನಾನಾರೂಪಮಿದಂ ಜಗತ್ ॥

2.11 ಪುನಸ್ತಂ ಪ್ರಾರ್ಥಯಾಮಾಸ ಬ್ರಹ್ಮಾ ವಿಹ್ವಲಮಾನಸಃ

ಚತುರಾನನಃ – ಬ್ರಹ್ಮದೇವನು, ವಿಶ್ವನಿರ್ಮಾಣವ ಮಾಡಲೋಸ್ಕರ ಈಶ್ವರನಿಂ ಪೇಳಲ್ಪಟ್ಟ ಉಪಾಯಮಂ, ಲಬ್ಧ್ವಾಪಿ– ಪಡೆದು ನಾನಾರೂಪಮಾದ ಈ ಜಗತ್ತನ್ನು, ಕರ್ಮ೦– ಮಾಡಲೋಸ್ಕರ ಸಮರ್ಥನಾದುದಿಲ್ಲ ಅದು ಕಾರಣದಿಂ, ವಿಹ್ವಲಮಾನಸಃ – ಭೀತಿಗ್ರಸ್ತಮಾದ ಚಿತ್ತವುಳ್ಳವನಾಗಿ, ಬ್ರಹ್ಮಾ–ಬ್ರಹ್ಮದೇವನು, ಪುನಃ– ಮರಳಿ, ತಂ– ಆ ಪರಮೇಶ್ವರನಂ, ಪ್ರಾರ್ಥಯಾಮಾಸ – ಬೇಡಿಕೊಂಡನೆಂಬುದರ್ಥಂ ॥೨೨॥ ಆಮೇಲೆ ತತ್ಪ್ರಕಾರಮಂ ವರ್ಣಿಸುತಿರ್ದಪಂ

ದೇವದೇವ ಮಹಾದೇವ ಜಗತ್ಪ್ರಥಮಕಾರಣ
ನಮಸ್ತೇ ಸಚ್ಚಿದಾನಂದ ಸ್ವೇಚ್ಛಾವಿಗ್ರಹರಾಜಿತ ॥

ಭವ ಶರ್ವ ಮಹೇಶಾನ ಸರ್ವಕಾರಣಕಾರಣ
ಭವದುಕ್ತೋಪ್ಯುಪಾಯೋ ಮೇ ನ ಕಿಂಚಿತ್ ಜ್ಞಾಯತೇsಧುನಾ ॥

ಭವ – ಸರ್ವಲೋಕೋತ್ಪಾದಕನೆ, ಶರ್ವ – ಸರ್ವ ಸಂಹಾರಕನೆ, ಸರ್ವಕಾರಣ ಕಾರಣ – ಬಿಂದು ಮಾಯೆ ಮೊದಲಾದ ಸರ್ವಕಾರಣಂಗಳಿಗೂ ಕಾರಣನಾದವನೆ ಅದರಿಂದಲೆ, ಜಗತ್ಪ್ರಥಮಕಾರಣ–ವಿಶ್ವಕ್ಕಾಗಿ ಕಾರಣನಾದವನೆ, ಅದಕ್ಕೋಸ್ಕರವೆ, ಸ್ವೇಚ್ಛಾವಿಗ್ರಹ ರಾಜಿತ – ಸ್ವೇಚ್ಛಾದಂಗೀಕರಿಸಲ್ಪಟ್ಟ ದಿವ್ಯಮಂಗಲಮೂರ್ತಿಯುಳ್ಳವನೆ, ದೇವ ದೇವ – ವಿಷ್ಣ್ವಾದಿ ದೇವರ್ಕಳಿಗೂ ದೇವನಾದವನೆ ಅದರಿಂದಲೆ ಮಹಾದೇವನೆ, ಸಚ್ಚಿದಾನಂದ ಸ್ವರೂಪನೆ, ತೇ–ನಿನಗೋಸ್ಕರ, ನಮಃ – ನಮಸ್ಕಾರವು, ಮೇ–ಎನಗೆ, ಭವದುಕ್ತೋಪ್ಯುಪಾಯಃ – ವಿಶ್ವನಿರ್ಮಾಣವ ಮಾಡುವಲ್ಲಿ ನಿನ್ನಿಂ ಪೇಳಲ್ಪಟ್ಟ ಉಪಾಯವು ಅಧುನಾ– ಈಗ, ಮಯಾ–ಎನ್ನಿಂದ, ನ ಕಿಂಚಿಜ್ಞಾಯತೆ – ಒಂದಿಷ್ಟೂ ತಿಳಿವುದಿಲ್ಲ ವೆಂಬುದರ್ಥಂ, ಹಾಗಾದಡೇನ ಮಾಡಬೇಕೆಂಬಲ್ಲಿ ಬ್ರಹ್ಮದೇವಂ ಪೇಳುತಿರ್ದಪಂ ॥೨೪॥

ಸೃಷ್ಟಿಂ ವಿಧೇಹಿ ಭಗವನ್ ಪ್ರಥಮಂ ಪರಮೇಶ್ವರಾ
ಜ್ಞಾತೋಪಾಯಸ್ತತಃ ಕುರ್ಯಾಂ ಜಗತ್ಸೃಷ್ಟಿಮುಮಾಪತೇ ॥

ಭಗವಾನ್– ಷಡ್ಗುಣೈಶ್ವರ್ಯ ಸಂಪನ್ನನಾದ ಉಮಾಪತಿಯಾದ ಪರಮೇಶ್ವರನೆ ಮುಂಚೆ ನೀನು ಸೃಷ್ಟಿಯ ಮಾಡು. ಆ ಉಪಾಯವ ನಾ ತಿಳಿದವನಾಗಿ ಆಮೇಲೆ ವಿಶ್ವಸೃಷ್ಟಿಯಾ ಮಾಡೇನೆಂದು ಬಿನ್ನೈಸಿದನೆಂಬುದರ್ಥಂ ॥೨೫॥ ಆಮೇಲೆ ಪ್ರಜಾಸೃಜೇ ನಿರ್ದಿಷ್ಟಶ್ಚಂದ್ರಮೌಲಿರ್ವಿರಿಂಚಿನಾ ಸಸರ್ಜ ಮನಸಾ ರುದ್ರಾತ್ಮನಾತುಲ್ಯಾನ್ಮಹೇಶ್ವರಾನ್ ನೀಲಕಂಠಾನ್ ತ್ರಿಣೇತ್ರಾಂಶ ಜಟಾಮುಕುಟ ಮಂಡಿತಾನ್ ಹೀಗೆಂಬ ಆದಿತ್ಯಪುರಾಣ ವಚನಾನುಸಾರದಿಂ ಸೃಷ್ಟಿಯ ಮಾಡಿದನೆಂದು ಪೇಳುತಿರ್ದಪಂ ॥೨೬॥

ಇತ್ಯೇವಂ ಪ್ರಾರ್ಥಿತಃ ಶಂಭುರ್ಬ್ರಹ್ಮಣಾ ವಿಶ್ವಯೋನಿನಾ
ಸಸರ್ಜಾತ್ಮಸಮಪ್ರಖ್ಯಾನ್ಸರ್ವಗಾನ್ ಸರ್ವಶಕ್ತಿಮಾನ್ ॥

ಪ್ರಬೋಧಪರಮಾನಂದ ಪರಿವಾಹಿತಮಾನಸಾನ್

ಪ್ರಮಥಾನ್ವಿಶ್ವನಿರ್ಮಾಣ ಪ್ರಳಯಾಪಾದನಕ್ಷಮಾನ್ ॥

ತೇಷು ಪ್ರಮಥವರ್ಗೇಷು ಸೃಷ್ಟೇಷು ಪರಮಾತ್ಮನಾ
ರೇಣುಕೋ ದಾರುಕಶ್ಚೇತಿ ದ್ವಾವಭೂತಾಂ ಶಿವಪ್ರಿಯೌ ॥

ಇತ್ಯೇವಂ – ಈ ಪ್ರಕಾರದಿಂದ ತನ್ನಿಂದುಂಟಾಗುವ ವಿಶ್ವಕ್ಕೆ ಕಾರಣನಾದ ಬ್ರಹ್ಮದೇವನಿಂದ ಪ್ರಾರ್ಥಿಸಲ್ಪಟ್ಟ ಶಿವನು ತನಗೆ ಸಮಾನವಾದ ಕಾಂತಿಯನ್ನುಳ್ಳ ಸರ್ವಜ್ಞರಾದ ಸರ್ವಶಕ್ತಿಕರಾದ ಚಿದಾನಂದಂಗಳಿಂ ತುಂಬಲ್ಪಟ್ಟ ಚಿತ್ತವರ್ತನೆಯುಳ್ಳ ವಿಶ್ವೋತ್ಪತ್ತಿ ವಿಪತ್ತಿಕರಣದಲ್ಲಿ ಸಮರ್ಥರಾದ ಪ್ರಮಥಗಣಂಗಳಂ ಸೃಷ್ಟಿಸಿದನು. ಸರ್ವೋತ್ಕೃಷ್ಟನಾದ ಶಿವನಿಂ ಸೃಜಿಸಲ್ಪಟ್ಟ ಪ್ರಮಥವರ್ಗಂಗಳಲ್ಲಿ ರೇಣುಕನೆಂದು, ದಾರುಕನೆಂದೀರ್ವರು ಶಿವನಿಗೆ ಪ್ರಿಯರಾದವರಾದರೆಂಬುದರ್ಥಂ ॥೨೯॥ ಆಮೇಲೆ ಗಣೇಶ್ವರರ ಮಹತ್ವವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತ್ತಿರ್ದಪಂ

ಸರ್ವವಿದ್ಯಾವಿಶೇಷಜ್ಞೌ ಸರ್ವಕಾರ್ಯವಿಚಕ್ಷಣೌ
ಮಾಯಾಮಲವಿನಿರ್ಮುಕ್ತೌ ಮಹಿಮಾತಿಶಯೋಜ್ವಲೌ ॥

ಆತ್ಮಾನಂದಪರಿಸ್ಫೂರ್ತಿರಸಾಸ್ವಾದನಲಂಪಟೌ
ಶಿವತತ್ತ್ವಪರಿಜ್ಞಾನ ತಿರಸ್ಕೃತಭವಾಮಯೌ ॥

ನಾನಾಪಥಮಹಾಶೈವತಂತ್ರ ನಿರ್ವಾಹತತ್ಪರೌ
ವೇದಾಂತಸಾರಸರ್ವಸ್ವವಿವೇಚನವಿಚಕ್ಷಣೌ ॥

ನಿತ್ಯಸಿದ್ಧೌ ನಿರಾತಂಕೌ ನಿರಂಕುಶಪರಾಕ್ರಮೌ
ತಾದೃಶೌ ತೌ ಮಹಾಭಾಗೌ ಸಂವೀಕ್ಷ್ಯ ಪರಮೇಶ್ವರಃ ॥

ಸಮರ್ಥೌ ಸರ್ವಕಾರ್ಯೇಷು ವಿಶ್ವಾಸಂ ಪರಮಾಶ್ರಿತೌ
ಅಂತಃಪುರದ್ವಾರಪಾಲೌ ನಿರ್ಮಮೇ ನಿಯತೌ ವಿಭುಃ ॥

ಸರ್ವವಿದ್ಯಾ ವಿಶೇಷಜ್ಞಾ ಚತುಷ್ಷಷ್ಟಿ ಕಲಾವಿದ್ಯಂಗಳೆಂಬ ಸರ್ವಕಾರ್ಯಂಗಳಲ್ಲಿ ಕುಶಲರಾದ ಮಾಯಾಕಲ್ಪಿತಾಣವಾದಿ ಮಲವಿಯುಕ್ತರಾದ ಉತ್ಕೃಷ್ಟವಾದ ಮಹಿಮೆಯಿಂ ಪ್ರಕಾಶಿಸುತ್ತಿರ್ದ ಚಿದಾನಂದರಸಾಸ್ವಾದನದಲ್ಲಿ ತತ್ಪರರಾದ ಶಿವತತ್ತ್ವಪರಿಜ್ಞಾನದಿಂ ತಿರಸ್ಕರಿಸಲ್ಪಟ್ಟ ಭವರೋಗಮುಳ್ಳ ನಾನಾಮಾರ್ಗವುಳ್ಳ ಮಹಾವೀರಶೈವಶಾಸ್ತ್ರವ ನಿರ್ವಹಿಸುವಲ್ಲಿ ಆಸಕ್ತರಾದ ವೇದಾಂತಸಾರಸರ್ವಸ್ವವ ವಿಭಾಗಿಸುವಲ್ಲಿ ಕುಶಲರಾದ ನಿತ್ಯವಾದ ಸಿದ್ಧಿಗಳುಳ್ಳ ಶುದ್ಧಾತ್ಮರಾದ ಆತಂಕವಿಲ್ಲದ ಕಡೆಯಿಲ್ಲದ ಪರಾಕ್ರಮವುಳ್ಳ ಮಹಾಶ್ರೇಷ್ಠರಾದ, ತೌ – ಆ ರೇಣುಕ ದಾರುಕರನು, ವಿಭುಃ – ಸ್ವತಂತ್ರನಾದ ಪರಮೇಶ್ವರನು ಸಕಲಕಾರ್ಯಂಗಳಲ್ಲಿಯೂ ಅಂಥ ಸಮರ್ಥರು ತನ್ನಲ್ಲಿ ಸರ್ವೋತ್ಕೃಷ್ಟವಾದ

ವಿಶ್ವಾಸವುಳ್ಳವರೆಂದು, ಸಂವೀಕ್ಷ್ಯ – ಚೆನ್ನಾಗಿ ತಿಳಿದು, ದ್ವಾರಪಾಲೌ – ಅಂತಃಪುರದ ಬಾಗಿಲ ಕಾಪಿನವರನ್ನಾಗಿ, ನಿರ್ಮಮೇ – ನಿಯಮಿಸಿದನೆಂಬುದರ್ಥಂ ||೩೪|| ಆಮೇಲೆ ರೇಣುಕ ದಾರುಕರು ಶಿವನ ಸೇವೆಯಂ ಮಾಡುತಿರ್ದಪರೆಂದು ಪೇಳುತಿರ್ದಪಂ

ಗಣೇಶ್ವರೌ ರೇಣುಕ ದಾರುಕೋಭೌ
ವಿಶ್ವಾಸಭೂತೌ ನವಚಂದ್ರಮೌಲೇಃ
ಅಂತಃಪುರದ್ವಾರಗತೌ ಸದಾ ತೌ
ವಿತೇನತುರ್ವಿಶ್ವಪತೇಸ್ತು ಸೇವಾಂ ||

ರೇಣುಕ ದಾರುಕರೆಂಬ ಪೆಸರನ್ನುಳ್ಳ ಗಣೇಶ್ವರರುಂ ಭಾಲೇಂದುಶೇಖರನಿಗೆ ವಿಶ್ವಾಸವುಳ್ಳವರಾಗಿ ನಿರಂತರವು ಅಂತಃಪುರದ ಬಾಗಿಲನೈದಿದವರಾಗಿ ಜಗತ್ಪತಿಯಾದ ಶಿವನ ಸೇವೆಯಂ ಮಾಡುತಿರ್ದಪರೆಂಬುದರ್ಥಂ ||೩೫||

ಇತಿ ಶ್ರೀವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತ ಶಿಖಾಮಣೌ ರೇಣುಕ ದಾರುಕಾವತರಣ ಪ್ರಸಂಗೋನಾಮ ದ್ವಿತೀಯಃ ಪರಿಚ್ಛೇದಃ

# ತೃತೀಯಪರಿಚ್ಛೇದ

## ರೇಣುಕ ಭೂಲೋಕಾಗಮನ

ಆಮೇಲೀ ಗ್ರಂಥಕರ್ತನಾದ ಶಿವಯೋಗಿಯು ರೇಣುಕನಿಗೆ ಭೂಲೋಕಾಗಮನ ಪ್ರಸಂಗಮಂ ಪೇಳಲೋಸ್ಕರ ಮೊದಲು ಎಂಟು ಶ್ಲೋಕಂಗಳಿಂ ಕೈಲಾಸವರ್ಣನೆಯಂ ಮಾಡುತಿರ್ದಪಂ

ಕದಾಚಿದಥ ಕೈಲಾಸೇ ಕಲಧೌತಶಿಲಾಮಯೇ
ಗಂಧರ್ವವಾಮನಯನಾಕ್ರೀಡಾಮೌಕ್ತಿಕದರ್ಪಣೇ ॥

ಮಂದಾರಬಕುಲಾಶೋಕಮಾಕಂದಪ್ರಾಯಭೂರುಹೇ
ಮಲ್ಲೀಮರಂದನಿಷ್ಯಂದಪಾನಪೀನಮಧುವ್ರತೇ ॥

ಕುಂಕುಮಸ್ತಬಕಾಮೋದಕೂಲಂಕಷಹರಿನ್ಮುಖೇ
ಕಲಕಂಠಕುಲಾಲಾಪ ಕಂದಲದ್ರಾಗ ಬಂಧುರೇ ॥

ಕಿನ್ನರೀಗೀತಮಾಧುರ್ಯಪರಿವಾಹಿತಗಹ್ವರೇ
ಸಾನಂದವರಯೋಗೀಂದ್ರಬೃಂದಾಲಂಕೃತಕಂದರೇ ॥

ಹೇಮಾರವಿಂದಕಲಿಕಾಸುಗಂಧಿರಸಮಾನಸೇ
ಶಾತಕುಂಭಮಯಸ್ತಂಭಶತೋತ್ತುಂಗವಿರಾಜಿತೇ ॥

ಮಾಣಿಕ್ಯದೀಪಾಕಲಿಕಾಮರೀಚಿದ್ಯೋತಿತಾಂತರೇ
ದ್ವಾರತೋರಣಸಂರೂಢಶಂಖಪದ್ಮನಿಧಿದ್ವಯೇ ॥

ಮುಕ್ತಾತಾರಕಿತೋದಾರವಿತಾನಾಂಬರಮಂಡಿತೇ
ಸ್ಪರ್ಶಲಕ್ಷಿತವೈಡೂರ್ಯಮಯಭಿತ್ತಿಪರಂಪರೇ ॥

ಸಂಚರತ್ಪ್ರಮಥಶ್ರೇಣಿಪದವಾಚಾಲನೂಪುರೇ
ಪ್ರವಾಲವಲಭೀ ಶೃಂಗ ಶೃಂಗಾರಮಣಿಮಂಟಪೇ ॥

ಅಥ, ರೇಣುಕನವತರಿಸಿದ ತರುವಾಯದಲ್ಲಿ, ಕದಾಚಿತ್–ಒಂದಾನೊಂದು ಸಮಯದಲ್ಲಿ, ಕಲಧೌತಶಿಲಾಮಯೇ – ರಜತಶಿಲಾಮಯವಾದ ಗಂಧರ್ವ ಸ್ತ್ರೀಯರ ಕ್ರೀಡೆಗೆ ಮುತ್ತಿನ ಮುಕುರವಾದ ಮಂದಾರು ಬಕುಲಾಶೋಕಮಾಕಂದಪ್ರಾಯಭೋರುಹೇ – ಮಾವು ಮೊದಲಾದ ನಾನಾ ವೃಕ್ಷಂಗಳುಳ್ಳ ಮಲ್ಲಿಕಾ ಕುಸುಮರಸಪ್ರವಾಹ ಪಾನದಿಂ ಪರಿಪುಷ್ಟವಾದ ಭ್ರಮರಂಗಳುಳ್ಳ ಕುಂಕುಮಕುಸುಮದ ಗೊಂಚಲಿನ ಪರಿಮಳದಿಂ ತುಂಬಲ್ಪಟ್ಟ ದಡ ಸೂಸಿ ಹೋಗುವ ನದಿಪ್ರವಾಹವುಳ್ಳ ಕೋಕಿಲಸಮೂಹದ ಧ್ವನಿಯಿಂದ ಉಂಟಾದ ಪಂಚಮಸ್ವರದಿಂ ಮನೋಹರವಾದ ಕಿನ್ನರ ಸ್ತ್ರೀಯರ ಸಂಗೀತ ಮಾಧುರ್ಯದಿಂ ತುಂಬಿದ ಗುಹೆಗಳುಳ್ಳ ಸಾನಂದಗಣೇಶ್ವರ ಮುಖ್ಯವಾದ ಶಿವಯೋಗಿ ಸಮೂಹದಿಂದ ಲಂಕರಿಸಲ್ಪಟ್ಟ ಉನ್ನತಪ್ರದೇಶಂಗಳುಳ್ಳ ಸುವರ್ಣಮಯವಾದ ಕಮಲಂಗಳ ಬಿರಿ ಮುಗುಳ್ಗಳ ಪರಿಮಳ ರಸದಿಂ ಭರಿತವಾದ ಮಾನಸಸರೋವರಂಗಳುಳ್ಳ ಕನಕಮಯವಾದ ಕಂಭ ಬಹುತ್ವದು ನ್ನತತ್ವದಿಂ ಪ್ರಕಾಶಿಸುವ ಮಣಿಪ್ರದೀಪದ ಮುಗುಳಿನಾಕಾರಮಾದ ಶಿಖಾಮಯೂಖದಿಂ

ಪ್ರಕಾಶಿಸಲ್ಪಟ್ಟ ಅಂತಃಪುರವುಳ್ಳ ಬಾಗಿಲ ತೋರಣಗುಂಬಕ್ಕೆ ಹತ್ತಿಕೊಂಡಿರುವ ಸುಜ್ಞಾನೈಶ್ವರ್ಯ ಪ್ರದವಾದ ಶಂಖಪದ್ಮನಿಧಿಗಳೆರಡನ್ನುಳ್ಳ ಮುಕ್ತಾಮಣಿಗಳಿಂ ನಿರ್ಮಿಸಲ್ಪಟ್ಟ ನಕ್ಷತ್ರಂಗಳುಳ್ಳ ಮಹಾ ಮೇಲುಕಟ್ಟಿನ ಫಲಕದಿಂದಲಂಕೃತವಾದ ಸ್ಪರ್ಶವೇಧೆಯಿಂದುಪಲಕ್ಷಿತವಾದ ವೈಡೂರ್ಯ ರತ್ನಗಳ ಗೋಡೆಸಾಲುಗಳುಳ್ಳ ಸಂಚರಿಸುತ್ತಿಪ್ಪ ಪ್ರಮಥ ಗಣಂಗಳ ಸಮೂಹದ ಪಾದ ಪ್ರದೇಶದಲ್ಲಿ ಧ್ವನಿಮಾಡುತ್ತಿದ್ದ ಕಟಕಂಗಳುಳ್ಳ ಹವಳದ ಲೋವೆಯೆ ಮುಖ್ಯವಾದ ಶೃಂಗಾರ ಮಣಿಮಂಟಪವುಳ್ಳ, ಕೈಲಾಸೇ – ಕೈಲಾಸ ಪರ್ವತದಲ್ಲಿ ಎಂಬುದರ್ಥಂ॥೮॥ ಅಂಥ ಕೈಲಾಸ ಪರ್ವತದೊಳೊಪ್ಪುತಿಹ ಮಣಿಮಂಟಪದಲ್ಲಿ ಸಿಂಹಾಸನ ಮಧ್ಯಗತನಾದ ಪರಮೇಶ್ವರನಂ ಪದಿನ್ಯೈದು ಸೂತ್ರಂಗಳಿಂ ವರ್ಣಿಸುತ್ತಿರ್ದಪಂ.

ವಂದಾರುದೇವಮುಕುಟಮಂದಾರರಸವಾಸಿತಂ
ರತ್ನಸಿಂಹಾಸನಂ ದಿವ್ಯ ಮಧ್ಯಸ್ಥಂ ಪರಮೇಶ್ವರಮ್ ॥

ತಮಾಸ್ಥಾನಗತಂ ದೇವಂ ಸರ್ವಲೋಕ ಮಹೇಶ್ವರಂ
ತ್ರ್ಯಂಬಕಮಲಾರಣ್ಯವಿಹಾರಕಲಹಂಸಕಮ್ ॥

ಉದಾರಗುಣಮೋಂಕಾರಶುಕ್ತಿಕಾಪುಟಮೌಕ್ತಿಕಂ
ಸರ್ವಮಂಗಲಸೌಭಾಗ್ಯಸಮುದಾಯನಿಕೇತನಮ್ ॥

ಸಂಸಾರವಿಷಮೂರ್ಛಾಲು ಜೀವಸಂಜೀವನೌಷಧಂ
ನಿತ್ಯಪ್ರಕಾಶ ನೈರ್ಮಲ್ಯಂ ಕೈವಲ್ಯಸುರಪಾದಪಮ್ ॥

ಅನಂತಪರಮಾನಂದಮಕರಂದಮಧುವ್ರತಂ
ಆತ್ಮಶಕ್ತಿಲತಾಪುಷ್ಪತ್ರಿಲೋಕೀಪುಷ್ಪಕೋರಕಮ್ ॥

ಬ್ರಹ್ಮಾಂಡಕುಂಡಿಕಾಷಂಡಪಿಂಡೀಕರಣಪಂಡಿತಂ
ಸಮಸ್ತದೇವತಾಚಕ್ರಚಕ್ರವರ್ತಿಪದೇ ಸ್ಥಿತಮ್ ॥

ಚಂದ್ರಬಿಂಬಾಯುತಚ್ಛಾಯಾದಾಯಾದದ್ಯುತಿವಿಗ್ರಹಂ
ಮಾಣಿಕ್ಯಮುಕುಟಜ್ಯೋತಿರ್ಮಂಜರೀಪಿಂಜರಾಂಬರಂ ॥

ಚೂಡಾಲಂ ಸೋಮಕಲಯಾ ಸುಕುಮಾರಬಿಸಾಭಯಾ
ಕಲ್ಯಾಣಪುಷ್ಪಕಲಿಕಾಕರ್ಣಪೂರಮನೋಹರಮ್ ॥

ಮುಕ್ತಾವಲಯಸಂಬದ್ಧರುಂಡಮಾಲಾ ವಿರಾಜಿತಂ
ಪರ್ಯಾಪ್ತಚಂದ್ರಸೌಂದರ್ಯಪರಿಪಂಥಿಮುಖಶ್ರಿಯಮ್ ॥

ಪ್ರಾತಸ್ಸಂಫುಲ್ಲಕಮಲಪ್ರತೀಕಾಶತ್ರಿಲೋಚನಂ
ಮಂದಸ್ಮಿತಮಿತಾಲಾಪಮಧುರಾಧರಪಲ್ಲವಮ್ ॥

ಗಂಡಮಂಡಲಪರ್ಯಂತ ಕ್ರೀಡನ್ಮಕರಕುಂಡಲಂ
ಕಾಲಿಮ್ನಾ ಕಾಲಕೂಟಸ್ಯ ಕಂಠನಾಲೇ ಕಲಂಕಿತಮ್ ॥

ಮಣಿಕಂಕಣಕೇಯೂರಮರೀಚಿಕರಪಲ್ಲವೈಃ
ಚತುರ್ಭಿಸ್ಸಂವಿರಾಜಂ ತಂ ಬಾಹುಮಂದಾರಶಾಖಿಭಿಃ ॥

ಗೌರೀಪಯೋಧರಾಶ್ಲೇಷ ಕೃತಾರ್ಥಭುಜಮಧ್ಯಮಂ
ಸುವರ್ಣಬ್ರಹ್ಮಸೂತ್ರಾಂಕಸೂಕ್ಷ್ಮಕೌಶೇಯವಾಸಸಮ್ ॥

ನಾಭಿಸ್ಥಾನಾವಲಂಬಿನ್ಯಾ ನವಮೌಕ್ತಿಕಮಾಲಯಾ
ಗಂಗಯೇವಕೃತಾಶ್ಲೇಷಂ ಮೌಲಿಭಾಗಾವತೀರ್ಣಯಾ ॥

ಪದೇನ ಮಣಿಮಂಜೀರ ಪ್ರಭಾಪಲ್ಲವಿತ ಶ್ರಿಯಾ
ಚಂದ್ರವತ್ ಸ್ಫಾಟಿಕಂಪೀಠಂಸಮಾವೃತ್ಯ ಸ್ಥಿತಂ ಪುರಃ ॥

ವಂದಾರು ದೇವ ಮುಕುಟ ಮಂದಾರ ವಾಸಿತಂ – ನಮಸ್ಕಾರನಿಷ್ಠರಾದ ತೆತ್ತೀಸ ಕೋಟಿ ದೇವರ್ಕಳ ಮುಕುಟವನ್ನೈದಿದ ಮಂದಾರಕುಸುಮ ರಸದಿಂ ಮನೋಹರವಾದ ನವರತ್ನಮಯ ದಿವ್ಯಸಿಂಹಾಸನವಾ ಮಂಟಪಮಧ್ಯದಲ್ಲಿ ಒಪ್ಪುತ್ತಿಹುದು. ಆ ಸಿಂಹಾಸನದಲ್ಲಿ ಓಲಗವಾಗಿರುವ ಪರಮೇಶ್ವರನೆಂಥವನೆಂದಡೆ ದೇವ ಇತ್ಯಾದಿ ವಾಕ್ಯಂಗಳಿಂ ವಿವರಿಸುತ್ತಿದ್ದಾನು. ದೇವ ಕ್ರೀಡಾಶೀಲನು ಸರ್ವಲೋಕೇಶ್ವರನು ವೇದಾಂತಮಯಮಾದ ಕಮಲ ಸಮೂಹಕ್ಕಾಧಾರವಾದವನು. ಸಂಸಾರವೆಂಬ ವಿಷದಿಂ ಮೂರ್ಛಿತರಾದ ಜೀವರಿಗೆ ಸಂಜೀವನದ ಮೂಲಿಕೆಯಾದವನು. ತನ್ನ ಪ್ರಕಾಶದಿಂದಲೆ ಪ್ರಕಾಶಿಸುತ್ತಾ ನಿರ್ಮಲ ನಾದವನು. ಪರಮಮುಕ್ತಿಯನೀವಲ್ಲಿ ಕಲ್ಪದ್ರುಮನಾದವನು. ಅಪರಿಮಿತವಾದ ಪರಮಾನಂದ ರಸವನಾಸ್ವಾದಿಸುವಲ್ಲಿ ಭ್ರಮರಸ್ವರೂಪನು. ತನ್ನ ಸಮವೇತ ಶಕ್ತಿಯೆಂಬ ಕಲ್ಪಲತೆ ಯಿಂದಿಳಿಸಲ್ಪಟ್ಟ ಲೋಕತ್ರಯವೆಂಬ ಕುಸುಮದ ಮೊಗೆಯುಳ್ಳವನು. ಬ್ರಹ್ಮಾಂಡ ಸಮೂಹವನೊಂದು ಮಾಡುವಲ್ಲಿ ಪ್ರವೀಣನಾದವನು. ನಾರಾಯಣಾದಿ ಸಕಲ ದೇವತಾ ಸಮೂಹಕ್ಕೆ ಚಕ್ರವರ್ತಿಯಾದವನು. ಹತ್ತುಸಾವಿರ ಚಂದ್ರಕಾಂತಿಯ ತಿರಸ್ಕರಿಸುವ ತೇಜೋಮಯ ಮುಕುಟದಲ್ಲಿರುವ ನವರತ್ನಜ್ಯೋತಿಸಮುದಾಯದಿಂ ವಿಚಿತ್ರಮಾದ ಮಸ್ತುವುಳ್ಳವನು ಕೋಮಲ ಕಂದದ ಕಾಂತಿಯನ್ನುಳ್ಳ ಸೋಮಕಲೆಯು ಶಿರೋಭೂಷಣವಾಗಿ ಉಳ್ಳವನು. ದಿವ್ಯಮಂಗಲ ಕುಸುಮದ ಮೊಗ್ಗೆಯ ಕರ್ಣಾಭರಣದಿಂ ಮನೋಹರ ವಾದವನು. ಮುತ್ತಿನ ಕಡಗದಿಂದ ಸಂಬಂಧಮಾದ ರುಂಡಮಾಲೆಯಿಂ ಶೋಭಿಸುವವನು. ಪೂರ್ಣಚಂದ್ರನ ಸೌಂದರ್ಯವ ಜರೆವ ಮುಖಕಾಂತಿಯುಳ್ಳವನು. ಪ್ರಾತಃಕಾಲದಲ್ಲಿ ಅರಳಿದ ಕಮಲದೋಪಾದಿಯಲ್ಲಿರುವ ಮುಕ್ಕಣ್ಣುಳ್ಳವನು. ಮುಗುಳುನಗೆಯಿಂ ಪರಿಮಿತಮಾದ ವಚೋವಿಲಾಸದಿಂ ಮನೋಹರಮಾದ ಅಧರಪಲ್ಲವವುಳ್ಳವನು. ಕಪೋಲಸ್ಥಲ ಪರ್ಯಂತಮಾಗಿ ಚಲಿಸುತ್ತಿದ್ದ ಮಕರಕುಂಡಲವುಳ್ಳವನು. ಕಾಳಕೂಟದ ಕಪ್ಪಿನಿಂ ಕಪ್ಪಾದ ಕೊರಳುಳ್ಳವನು, ಮಣಿಮಯವಾದ ಕಂಕಣ ಬಾಹುಪುರಿಗಳಿಂ ಪ್ರಕಾಶಿಸುತಿರ್ದ ನಾಲ್ಕು ತೋಳುಗಳುಳ್ಳವನು. ಬಾಹುಗಳೆಂಬ ಕಲ್ಪವೃಕ್ಷಂಗಳಿಂ ಪ್ರಕಾಶಿಸುವವನು. ಉಮಾದೇವಿಯರ ಕುಚಪ್ರದೇಶಾಲಿಂಗನದಿಂ ಕೃತಾರ್ಥವಾದ ವಕ್ಷಸ್ಥಲವುಳ್ಳವನು. ಕನಕಮಯವಾದ ಯಜ್ಞೋಪವೀತದಿಂದಂಕಿತನು. ಅತಿ ಸೂಕ್ಷ್ಮವಾದ ದುಕೂಲವಸ್ತ್ರಾಲಂಕೃತನು. ನಾಭಿಪರ್ಯಂತವನ್ನೈದಿದ ಮುತ್ತಿನ ಮಾಲಿಕೆಯಿಂ ಮಸ್ತಕದಿಂದಿಳಿದು ಬಂದ ಗಂಗೆಯಿಂದಲೆ ಮಾಡಲ್ಪಟ್ಟ ಆಲಿಂಗನವುಳ್ಳವನ ಕೈಯೆಂಬ ಹಾಗೆ ಇದ್ದವನು. ಮಣಿಮಯವಾದ ಪಾದಪೆಂಡೆಯದ ಪ್ರಕಾಶ ಪದಿಮೂರು ಸೂತ್ರಂಗಳಿಂ ಆಚರಿಸುವ ಕಾಂತಿಯುಳ್ಳ ಪಾದದಿಂದ ಸಿಂಹಾಸನದ ಮುಂದುಗಡೆಯಲ್ಲಿ ಚಂದ್ರಕಾಂತಮಯವಾದ ಹಲಗೆಯನ್ನಾಕ್ರಮಿಸಿ ಕೊಂಡಿರುವನೆಂಬುದರ್ಥಂ ॥೨೩॥ ಈ ಪ್ರಕಾರದಿಂ ಮಹೇಶ್ವರನ ವರ್ಣಿಸಿ, ತರುವಾಯದಲ್ಲಿ ಆ ಶಿವನ ವಾಮಾಂಕವನ್ನೈದಿದ ಭವಾನಿಯಂ ವರ್ಣಿಸುತಿರ್ದಪಂ.

ವಾಮಪಾರ್ಶ್ವನಿವಾಸಿನ್ಯಾ ಮಂಗಲಪ್ರಿಯವೇಷಯಾ

ಸಮಸ್ತಲೋಕನಿರ್ಮಾಣಸಮವಾಯಸ್ವರೂಪಯಾ ॥

ಇಚ್ಛಾಜ್ಞಾನಕ್ರಿಯಾರೂಪಬಹುಶಕ್ತಿವಿಲಾಸಯಾ
ವಿದ್ಯಾತತ್ತ್ವಪ್ರಕಾಶಿನ್ಯಾ ವಿನಾಭಾವವಿಹೀನಯಾ ॥

ಸಂಸಾರವಿಷಕಾಂತಾರದಾಹದಾವಾಗ್ನಿಲೇಖಯಾ
ಧಮ್ಮಿಲ್ಲಮಲ್ಲಿಕಾಮೋದ ಝುಂಕುರ್ವದ್ಭೃಂಗಮಾಲಯಾ ॥

ಸಂಪೂರ್ಣಚಂದ್ರಸೌಭಾಗ್ಯಸಂವಾದಿಮುಖಪದ್ಮಯಾ
ನಾಸಾಮೌಕ್ತಿಕಲಾವಣ್ಯಾ ನಾಸೀರ ಸ್ಮಿತಶೋಭಯಾ ॥

ಮಣಿತಾಟಂಕರಂಗಾಂತರ್ವಲಿತಾಪಾಂಗಲೀಲಯಾ
ನೇತ್ರದ್ವಿತಯಸೌಂದರ್ಯನಿಂದಿತೇಂದೀವರತ್ವಿಷಾ ॥

ಕುಸುಮಾಯುಧಕೋದಂಡಕುಟಿಲಭ್ರೂವಿಲಾಸಯಾ
ಬಂಧೂಕಕುಸುಮಚ್ಛಾಯಾಬಂಧುಭೂತಾಧರಶ್ರಿಯಾ ॥

ಕಂಠನಾಲಜಿತಾನಂಗಕಂಬುಬಿಬ್ಬೋಕಸಂಪದಾ
ಬಾಹುದ್ವಿತಯಸೌಭಾಗ್ಯವಂಚಿತೋತ್ಪಲಮಾಲಯಾ ॥

ಸ್ಥಿರಯೌವನಲಾವಣ್ಯಶೃಂಗಾರಿತಶರೀರಯಾ
ಅತ್ಯಂತ ಕಠಿನೋತ್ತುಂಗಪೀವರಸ್ತನಭಾರಯಾ ॥

ಮೃಣಾಲವಲ್ಲರೀತಂತುಬಂಧುಭೂತಾವಲಗ್ನಯಾ
ಶೃಂಗಾರತಟನೀತುಂಗಪುಲಿನಶ್ರೋಣಿಭಾರಯಾ॥

ಕುಸುಂಭಕುಸುಮಚ್ಛಾಯಾ ಕೋಮಲಾಂಬರಶೋಭಯಾ
ಶೃಂಗಾರೋದ್ಯಾನಸಂರಂಭರಂಭಾಸ್ತಂಭೋರುಕಾಂಡಯಾ ॥

ಚೂತಪ್ರವಾಲಸುಷುಮಾಸುಕುಮಾರಪದಾಬ್ಜಯಾ
ಸ್ಥಿರಮಂಗಲಶೃಂಗಾರಭೂಷಣಾಲಂಕೃತಾಂಗಯಾ ॥

ಹಾರನೂಪುರಕೇಯೂರಚಮತ್ಕೃತಶರೀರಯಾ
ಚಕ್ಷುರಾನಂದಲತಯಾ ಸೌಭಾಗ್ಯಕುಲವಿದ್ಯಯಾ ॥

ಉಮಯಾ ಸಮಮಾಸೀನಂ ಲೋಕಜಾಲಕುಟುಂಬಯಾ
ಅಪೂರ್ವರೂಪಮುಭಜನ್ಪರಿವಾರಸ್ಸಮಂತತಃ ॥

ಆ ಶಿವನ ವಾಮಪಾರ್ಶ್ವದಲ್ಲಿರುವ ಭವಾನಿಯಂಥಾ ಸ್ವರೂಪವುಳ್ಳಾಯಕನೆಂದಡೆ ಮಾಂಗಲ್ಯದಿಂ ಕೂಡಿದ ನಾನಾರೂಪವುಳ್ಳಾಯಕನು ಸಕಲಲೋಕ ಸೃಷ್ಟಿವಿಧಿಯಲ್ಲಿ ಉಪಾದಾನ ಕಾರಣಮಾದಾಯಕನು ಇಚ್ಛಾಜ್ಞಾನಕ್ರಿಯೆ ಮೊದಲಾದ ಬಾಹುಶಕ್ತಿಗಳ ವಿಳಿಗೆಯುಳ್ಳಾಯಕನು ಆತ್ಮಜ್ಞಾನಮಂ ಪ್ರಕಾಶಿಸುವಾಯಕನು ಶಿವನೊಡನೆ ನಿರಂತರ ಸಂಬಂಧಮುಳ್ಳಾಯಕನು ಸಂಸಾರವೆಂಬ ವಿಷಾಟವಿ ದಹಿಸುವಲ್ಲಿ ದಾವಾಗ್ನಿಶಿಖಾ ಸಮೂಹವಾದಾಯಕನು ಮುಡಿಯ ಮೇಲಿರುವ ಮಲ್ಲಿಕಾಕುಸುಮಂಗಳ ಪರಿಮಳಕ್ಕೋಸ್ಕರ ಬಂದು ಝೇಂಕರಿಸುತ್ತಿರ್ದ ಭ್ರಮರಂಗಳ ಮಾಲೆಯುಳ್ಳಾಯಕನು ಪೂರ್ಣಚಂದ್ರನ ಕಾಂತಿಯಂ ಜರೆವ

ಮುಖಕಮಲಮುಳ್ಳಾಯಕನು ನಾನಾಮಣಿಯ ಲಾವಣ್ಯಾಬಾಹುಲ್ಯದಿಂ ಬೆರಸಿದ ಮುಗುಳುನಗೆಯ ಶೋಭೆಯುಳ್ಳಾಯಕನು ರತ್ನಂಗಳಿಂ ಚರ್ಚಿತಮಾದ ತಾಟಂಕವೆಂಬ ರತ್ನಮಂಟಪದಲ್ಲಿ ಕುಣಿವುತ್ತಿದ್ದ ಕಡೆಗಣ್ಣಲೀಲೆಯುಳ್ಳಾಯಕನು ನಯನವೆರಡರ ಚೆಲ್ವಿನಿಂ ನಿಂದಿಸಲ್ಪಟ್ಟ ಕನ್ನೈದಿಲ ಶೋಭೆಯುಳ್ಳಾಯಕನು ಮದನಕಾರ್ಮುಕದಂತೆ ಬಾಗಿದ ಭ್ರೂಲತಾ ವಿಲಾಸವುಳ್ಳಾಯಕನು ಬಂಧೂಕಕುಸುಮದ ಕೆಂಪಿನಂತೆ ಕೆಂಪನ್ನುಳ್ಳ ತುಟಿಯ ಶೋಭೆಯುಳ್ಳಾಯಕನು ಮದನಕಾರ್ಮುಕದ ಕಂಠನಾಳದಿಂ ಜೈಸಲ್ಪಟ್ಟ ಮನ್ಮಥನ ಜಯಶಂಖಧ್ವಾನವುಳ್ಳಾಯಕನು ಭುಜವೆರಡರ ಸೌಂದರ್ಯದಿಂ ವಂಚಿಸಲ್ಪಟ್ಟ ನೀಲೋತ್ಪಲದ ಮಾಲೆಯುಳ್ಳಾಯಕನು ಸ್ಥಿರಮಾದ ಯೌವ್ವನದ ಲಾವಣ್ಯದಿಂದಲಂಕೃತಮಾದ ಮೂರ್ತಿಯುಳ್ಳಾಯಕನು ಅತ್ಯಂತ ಕಠಿನಮಾಗಿ ಉನ್ನತಮಾದ ಕುಚಭಾರವುಳ್ಳಾಯಕನು ಕಮಲನಾಳದ ತಂತುವಿನಂತೆ ಸೂಕ್ಷ್ಮಮಾದ ಮಧ್ಯಪ್ರದೇಶವುಳ್ಳಾಯಕನು ಶೃಂಗಾರವೆಂಬ ತರಂಗಿಣಿಯಲ್ಲಿ ಉನ್ನತವಾಗಿರುವ ಮಳಲೊಟ್ಟಿಗೆ ಸಮಾನಮಾದ ಪೊರವಾರ ಭಾರದಿಂದೊಪ್ಪುವಾಯಕನು ಕುಸುಬೆಹೂವಿನ ಕಾಂತಿಯುಳ್ಳ ಸಾಲಿವಸ್ತ್ರದಿಂ ಶೋಭಿಸುವಾಯಕನು ಶೃಂಗಾರವೆಂಬ ಉಪವನಕ್ಕೆ ಸಡಗರವಾದ ಬಾಳೆಕಂಬದೋಪಾದಿ ಯಲ್ಲಿರುವ ತೊಡೆಗಳುಳ್ಳಾಯಕನು ಮಾವಿನ ತಳಿರು ಹವಳದ ಕುಡಿಯೋಪಾದಿಯಲ್ಲಿ ಶೋಭಿಸುವ್ಯೆದು ಪದಕಮಲಗಳುಳ್ಳಾಯಕನು ಸ್ಥಿರಮಾದ ಮಾಂಗಲ್ಯ ಭೂಷಣದಿಂದ ಲಂಕರಿಸಲ್ಪಟ್ಟ ಅಂಗವುಳ್ಳಾಯಕನು ಮುತ್ತಿನಹಾರ ಕಾಲಂದಿಗೆ ಬಾಹುಪುರಿಗಳಿಂದ ಚಮತ್ಕರಿಸಲ್ಪಟ್ಟ ಕಳೇವರವುಳ್ಳಾಯಕನು ನೇತ್ರಂಗಳಿಂಗಾನಂದವಲ್ಲಿಯಾದಾಯಕನು ಸೌಭಾಗ್ಯಕ್ಕೆ ಕುಲವಿದ್ಯೆಯಾದಾಯಕನು ಲೋಕಸಮೂಹವೆ ಕುಟುಂಬವಾಗಿವುಳ್ಳಾಯಕನು ಈ ಪ್ರಕಾರಮಾದ ಉಮಾದೇವಿಯರಿಂ ಸಹಿತಮಾಗಿ ದಿವ್ಯ ಸಿಂಹಾಸನದಲ್ಲಿ ಕುಳಿತಿದ್ದ ಪರಮೇಶ್ವರನಂ ಅಪೂರ್ವಮಾದ ರೂಪವನ್ನೈದಿದ ಪರಮೇಶ್ವರಿಯನ್ನು ಸುತ್ತಮುತ್ತಲು ನಾರಾಯಣಾದಿ ತೆತ್ತೀಸಕೋಟಿ ದೇವರ್ಕಳೂ ಭಜಿಸಿದರೆಂಬುದರ್ಥಂ ॥೩೬॥ ಈ ಪ್ರಕಾರದಿಂ ಪಾರ್ವತಿ ಪರಮೇಶ್ವರರಂ ವರ್ಣಿಸಿ ಆಮೇಲೆ ಆ ದೇವತೆಗಳಿಂ ಮಾಡುವಂಥಾ ಸೇವೆಯನಿಪ್ಪತ್ತು ಸೂತ್ರಂಗಳಿಂ ವಿವರಿಸುತ್ತಿರ್ದಪಂ.

ಪುಂಡರೀಕಾಕೃತಿಸ್ವಚ್ಛಂ ಪೂರ್ಣಚಂದ್ರಸಹೋದರಂ
ದಧೌ ತಸ್ಯ ಮಹಾಲಕ್ಷ್ಮೀಃ ಸಿತಮಾತಪವಾರಣಮ್ ॥

ವಿಷ್ಣುಪತ್ನಿಯಾದ ಮಹಾಲಕ್ಷ್ಮಿಯು, ತಸ್ಯ – ಆ ಪಾರ್ವತಿಸಮೇತನಾದ ಶಿವನಿಗೆ ಕಮಲದಾಕಾರಮುಳ್ಳ ನಿರ್ಮಲಮಾದ ಪೂರ್ಣಚಂದ್ರನಿಗೆ ಒಡಹುಟ್ಟಿದನಾದ, ಸಿತಂ – ಶುಭ್ರಮಾದ, ಆತಪವಾರಣಂ – ಛತ್ರಮಂ, ದಧೌ – ಹಿಡಿದಳೆಂಬುದರ್ಥಂ ॥೩೭॥

ತಂತ್ರೀರ್ಝುಂಕಾರಶಾಲಿನ್ಯಾ ಸಂಗೀತಾಮೃತವಿದ್ಯಯಾ
ಉಪತಸ್ಥೇ ಮಹಾದೇವಮುಪಾಂತೇ ಚ ಸರಸ್ವತೀ ॥

ಸ್ವರಮಂಡಲ ತಂತ್ರೀರ್ಝುಂಕಾರದಿಂ ಶೋಭಿಸುವ ಸಂಗೀತರಸವಿದ್ಯೆಯಿಂ ಸರಸ್ವತಿಯು ಸಮೀಪದಲ್ಲಿ ಶಿವನಂ ಸೇವಿಸಿದಳೆಂಬುದರ್ಥಂ ॥೩೮॥

ಝಣತ್ಕಂಕಣಜಾತೇನ ಹಸ್ತೇನೋಪನಿಷದ್ವಧೂಃ
ಓಂಕಾರತಾಲವೃಂತೇನ ವೀಜಯಾಮಾಸ ಶಂಕರಮ್ ॥

ಧ್ವನಿ ಮಾಡುತ್ತಿದ್ದ ನವರತ್ನಮಯಮಾದ ಕಂಕಣಯುಕ್ತಮಾದ ಹಸ್ತದಿಂದ-ಓಂಕಾರ ವೆಂಬ ಬೀಸಣಿಗೆಯಿಂದ ಉಪನಿಷತ್ತೆಂಬ ಕಾಂತೆಯು ಶಿವನಂ ಬೀಸಿದಳೆಂಬದರ್ಥಂ॥೩೯॥

ಚಲಚ್ಚಾಮರಿಕಾಹಸ್ತಾಃ ಝುಂಕುರ್ವನ್ಮಣಿಕಂಕಣಾಃ
ಆಸೇವಂತ ತಮೀಶಾನಮಭಿತೋ ದಿವ್ಯಕನ್ಯಕಾಃ ॥

ಝುಂಕರಿಸುತ್ತಿಹ ಮಣಿಮಯಮಾದ ಕಂಕಣಂಗಳುಳ್ಳ ಇಂದ್ರಾಣಿ ಮೊದಲಾದ ದೇವಸ್ತ್ರೀಯರು ಚರಿಸುತ್ತಿರುವ ಚಾಮರಯುಕ್ತಮಾದ ಹಸ್ತಂಗಳುಳ್ಳವರಾಗಿ ಆ ಶಿವನಂ ಸೇವಿಸಿದರೆಂಬುದರ್ಥಂ ॥೪೦॥

ಚಾಮರಾಣಾಂ ವಿಲೋಲಾನಾಂ ಮಧ್ಯೇ ತನ್ಮುಖಮಂಡಲಂ
ರರಾಜ ರಾಜಹಂಸಾನಾಂ ಭ್ರಮತಾಮಿವ ಪಂಕಜಮ್ ॥

ಚಲಿಸುತ್ತಿದ್ದ ಚಾಮರಂಗಳ ಮಧ್ಯದಲ್ಲಿ ಆ ಶಿವನ ಮುಖಮಂಡಲವು ಸಂಚರಿಸುವ ರಾಜಹಂಸಗಳ ಮಧ್ಯದಲ್ಲಿ ಕಮಲದಂತೆ ಒಪ್ಪಿತೆಂಬುದರ್ಥಂ ॥೪೧॥

ಮಂತ್ರೇಣ ತಮಸೇವಂತ ವೇದಾಸ್ಸಾಂಗವಿಭೂತಯಃ
ಭಕ್ತ್ಯಾ ಚೂಡಾಮಣಿಂ ಕಾಂತಂ ವಹಂತ ಇವ ಮೌಲಿಭಿಃ ॥

ಸಾಂಗವಿಭೂತಯಃ–ಶಿಕ್ಷಾದ್ಯಂಗಯುಕ್ತಮಾದ, ವೇದಾಃ – ಯುಗಾದಿ ವೇದಪುರುಷರು, ಮೌಲಿಭಿಃ–ಉಪನಿಷದ್ಭಾಗ ರೂಪಮಾದ ಮಸ್ತಕಂಗಳಿಂದ, ತಂ ಪರಮೇಶ್ವರಂ–ಆ ಶಿವನಂ, ಕಾಂತಂ ಚೂಡಾರತ್ನಮಿವ – ಮನೋಹರಮಾದ ಚೂಡಾರತ್ನದಂತೆ, ವಹಂತಸ್ಸಂತಃ – ವಹಿಂಸುವಂಥವರಾಗಿ ಭಕ್ತಿಯಿಂ ಪ್ರಣವಮಂತ್ರದಿಂದ ಸೇವಿಸಿದರೆಂಬುದರ್ಥಂ ॥೪೨॥

ತದೀಯಾಯುಧಧಾರಿಣ್ಯಸ್ತತ್ಸಮಾನವಿಭೂಷಣಾಃ
ಅಂಗಭೂತಾಃ ಸ್ತ್ರಿಯಃ ಕಾಶ್ಚಿದಾಸೇವಂತ ತಮೀಶ್ವರಮ್ ॥

ಆ ವೇದಪುರುಷರಾಯುಧಂಗಳ ಹಿಡಿವಂಥಾ ಅವರೊಡನೆ ಸಮಾನವಾದ ಅಲಂಕಾರಗಳುಳ್ಳಂಥಾ ಅಂಗದೇವತಾರೂಪಮಾದ ಕೆಲವು ಸ್ತ್ರೀಯರು ಆ ಶಿವನಂ ಸೇವಿಸಿದ ರೆಂಬುದರ್ಥಂ ॥೪೩॥

ಆಪ್ತಾಧಿಕಾರಿಣಃ ಕೇಚಿದನಂತಪ್ರಮುಖಾ ಅಪಿ
ಅಷ್ಟೌ ವಿದ್ಯೇಶ್ವರಾ ದೇವಮಭಜಂತ ಸಮಂತತಃ ॥

ಅತ್ಯಾಪ್ತಾಧಿಕಾರಿಗಳಾದ ಅನಂತಸೂಕ್ಷ್ಮಶಿವೋತ್ತಮೈಕನೇತ್ರೈಕ ರುದ್ರ ತ್ರಿಮೂರ್ತಿ ಶ್ರೀಕಂಠ ಶಿಖಂಡಿಗಳೆಂಬ ಪೆಸರುಳ್ಳ ಕೆಲರಾದ ಅಷ್ಟವಿದ್ಯೇಶ್ವರರು ಮಹಾದೇವನಾದ ಶಿವನಂ ಸುತ್ತಲೂ ಸೇವಿಸಿದರೆಂಬುದರ್ಥಂ ॥೪೪॥

ತತೋ ನಂದೀ ಮಹಾಕಾಲಶ್ಚಂಡೋ ಭೃಂಗಿರಿಟಿಸ್ತತಃ
ಸೇನಾನಿಗಜವಕ್ತ್ರಶ್ಚ ರೇಣುಕೋದಾರುಕಸ್ತಥಾ ॥

ಘಂಟಾಕರ್ಣಃ ಪುಷ್ಪದಂತಃ ಕಪಾಲೀ ವೀರಭದ್ರಕಃ
ಏವಮಾದ್ಯಾ ಮಹಾಭಾಗಾಃ ಮಹಾಬಲಪರಾಕ್ರಮಾಃ ॥

ನಿರಂಕುಶಮಹಾಸತ್ತ್ವಾ ಭೇಜಿರೇ ತಂ ಮಹೇಶ್ವರಮ್

ಆಮೇಲೆ ನಂದಿ, ಚಂಡ, ಮಹಾಕಾಲ, ಭೃಂಗಿರಿಟಿ, ಷಣ್ಮುಖ, ವಿನಾಯಕ, ರೇಣುಕ, ದಾರುಕ, ಘಂಟಾಕರ್ಣ, ಪುಷ್ಪದಂತ, ಕಪಾಲಿ, ವೀರಭದ್ರ ಮೊದಲಾದ ಮಹಾಬಲಪರಾಕ್ರಮವುಳ್ಳ ತಡೆಯಿಲ್ಲದ ಮಹಾಸಾಮರ್ಥ್ಯವುಳ್ಳ ಮಹಾಶ್ರೇಷ್ಠರು ಆ ಮಹೇಶ್ವರನಾದ ಶಿವನು ಸೇವಿಸಿದರೆಂಬುದರ್ಥಂ ॥೪೬॥ ಆಮೇಲೆ ಪ್ರಮಥಗಣಂಗಳನ್ನೈದು ಸೂತ್ರಂಗಳಿಂದ ವರ್ಣಿಸುತಿರ್ದಪಂ

ಅಣಿಮಾದಿಕಮೈಶ್ವರ್ಯಂ ಯೇಷಾಂ ಸಿದ್ಧೇರಪೋಹನಂ
ಬ್ರಹ್ಮಾದಯಸ್ಸುರಾಯೇಷಾಮಾಜ್ಞಾಲಂಘನಭೀರವಃ ॥

ಅಣಿಮಾದ್ಯಷ್ಟೈಶ್ವರ್ಯಗಳೂ ಯಾವ ಪ್ರಮಥಗಣಂಗಳಂ ಸಿದ್ಧಿಯತ್ತಣಿಂ, ಆಪೋಹನಂ– ತುಚ್ಛಮಾದಾಂಥದು, ಬ್ರಹ್ಮ ಮೊದಲಾದ ದೇವತೆಗಳೂ ಮಾನವರ ಆಜ್ಞೆ ಮೀರುವಲ್ಲಿ ಭಯಸ್ಥರಾಗಿರುವರೆಂಬುದರ್ಥಂ ॥೪೭॥

ಮೋಕ್ಷಲಕ್ಷ್ಮೀಪರಿಷ್ವಂಗ ಮುದಿತಾಯೇಽಂತರಾತ್ಮನಾ
ಯೇಷಾಮೀಷತ್ಕರಂ ವಿಶ್ವಸರ್ಗಸಂಹಾರಕಲ್ಪನಮ್ ॥

ಯೇ – ದಾವ ಪ್ರಮಥರು, ಅಂತರಾತ್ಮನಾ – ಅಂತರ್ಮುಖಮಾದ ಬುದ್ಧಿಯಿಂದ ಮೋಕ್ಷಲಕ್ಷ್ಮಿಯನಾಲಿಂಗಿಸುವಲ್ಲಿ ಸಂತೋಷಬಡುವರು, ಯೇಷಾಂ – ದಾವ ಪ್ರಮಥರಿಗೆ, ವಿಶ್ವಸೃಷ್ಟಿಸ್ಥಿತ್ಯಾದಿ ಕಲ್ಪನೆಯು, ಈಷತ್ಕರಂ – ತುಚ್ಛಮಾದಂಥಾದೆಂಬುದರ್ಥಂ ॥೪೮॥

ಜ್ಞಾನಶಕ್ತಿಃ ಪರಾ ಯೇಷಾಂ ಸರ್ವವಸ್ತುಪ್ರಕಾಶಿನೀ
ಆನಂದಕಣಿಕಾಃ ಯೇಷಾಂಹರಿಬ್ರಹ್ಮಾದಿಸಂಪದಃ ॥

ಯೇಷಾಂ – ದಾವ ಪ್ರಮಥರ ಜ್ಞಾನಶಕ್ತಿಯು ಸಕಲ ಪದಾರ್ಥಂಗಳನು ಪ್ರಕಾಶಿಸುವಂಥಾದು, ಶ್ರೇಷ್ಠಮಾದಂಥಾದು. ಬ್ರಹ್ಮಾದಿಗಳ ಸಂಪದಂಗಳೂ ಯಾವ ಪ್ರಮಥರ ಸುಖಲೇಶಂಗಳೆಂಬುದರ್ಥಂ ॥೪೯॥

ಆಕಾಂಕ್ಷತೇ ಪದಂ ಯೇಷಾಂ ಯೋಗಿನೋ ಯೋಗತತ್ಪರಾಃ
ಕಾಂಕ್ಷಣೀಯಫಲೋ ಯೇಷಾಂ ಸಂಕಲ್ಪಃ ಕಲ್ಪಪಾದಪಃ ॥

ಯೋಗ ತತ್ಪರಾಃ – ಶಿವಯೋಗನಿಷ್ಠರಾದ, ಯೋಗಿನಃ – ಯೋಗಿಗಳು, ಏಷಾಂಪದಂ– ದಾವ ಪ್ರಮಥರಸ್ಥಾನವನು, ಆಕಾಂಕ್ಷತೇ – ಬಯಸುತ್ತಿಹರು. ಏಷಾಂ

ಸಂಕಲ್ಪಃ – ಯಾವ ಪ್ರಮಥರ ಸಂಕಲ್ಪವು, ಕಾಂಕ್ಷಣೀಯ ಫಲಃ – ಬಯಸಲ್ತಕ್ಕ ಫಲವುಳ್ಳ, ಕಲ್ಪಪಾದಪಃ– ಕಲ್ಪವೃಕ್ಷವೆಂಬುದರ್ಥಂ ॥೫೦॥

ಕರ್ಮಕಾಲಾದಿ ಕಾರ್ಪಣ್ಯಚಿಂತಾ ಯೇಷಾಂ ನ ವಿದ್ಯತೇ
ಯೇಷಾಂ ವಿಕ್ರಮಸನ್ನಾಹಾಃ ಮೃತ್ಯೋರಪಿ ಚ ಮೃತ್ಯವಃ

ತೇ ಸಾರೂಪ್ಯಪದಂ ಪ್ರಾಪ್ತಾಃ ಪ್ರಮಥಾಃ ಭೇಜಿರೇ ಶಿವಮ್ ॥

ಸಂಚಿತಾದಿಕರ್ಮ ಭೂತಾದಿಕಾಲ ಮೊದಲಾದವರಿಂ ಉದ್ಭೂತ ಕಾರ್ಪಣ್ಯ ಚಿಂತೆಯು ಯಾವ ಪ್ರಮಥರಿಗಿಲ್ಲಂ, ಯಾವ ಪ್ರಮಥರ ಪರಾಕ್ರಮ ಪ್ರಸಂಗಗಳು ಮೃತ್ಯುವಿಗೂ ಮೃತ್ಯುವಾದಂಥಾವು. ಶಿವನ ಸಾ ರೂಪ್ಯಪದವ ಪಡೆದ ಆ ಪ್ರಮಥರು ಹರನಂ ಸೇವಿಸಿದರೆಂಬುದರ್ಥಂ ॥೫೨॥

ಬ್ರಹ್ಮೋಪೇಂದ್ರಮಹೇಂದ್ರಾದ್ಯಾ ವಿಶ್ವತಂತ್ರಾಧಿಕಾರಿಣಂ
ಆಯುಧಾಲಂಕೃತ ಪ್ರಾಂತಾಃ ಪರಿತಸ್ಥಂ ಸಿಷೇವಿರೇ ॥

ಬ್ರಹ್ಮ, ವಿಷ್ಣು ಸುರೇಂದ್ರ ಮೊದಲಾದ ಮೂವತ್ಮೂರು ಕೋಟಿ ದೇವರ್ಕಳೂ ತಮ್ಮ ತಮ್ಮ ಆಯುಧಂಗಳಿಂದಲಂಕರಿಸಲ್ಪಟ್ಟ ಸಾಲುಗಳೆರಡುಳ್ಳವರಾಗಿ ವಿಶ್ವಸೃಷ್ಟ್ಯಾದಿ ಪಂಚಕೃತ್ಯಾಧಿಕಾರಿಯಾದ ಆ ಶಿವನಂ ಬಳಸಿ ಸೇವಿಸಿದರೆಂಬುದರ್ಥಂ ॥೫೩॥

ಆದಿತ್ಯಾವಸವೋ ರುದ್ರಾಃ ಯಕ್ಷಗಂಧರ್ವಕಿನ್ನರಾಃ
ದಾನವಾ ರಾಕ್ಷಸಾ ದೈತ್ಯಾಃ ಸಿದ್ಧಾ ವಿದ್ಯಾಧರೋರಗಾಃ ॥

ಅಭಜಂತ ಮಹಾದೇವಮಪರಿಚ್ಛಿನ್ನಸೈನಿಕಾಃ ॥

ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರು, ಕುಬೇರ ಮೊದಲಾದ ಯಕ್ಷರು, ಹಾಹಾ ಹೂಹೂ ಮೊದಲಾದ ಗಂಧರ್ವರು, ಅಶ್ವಮುಖಾದಿ ಕಿನ್ನರರು, ಬಾಣಾದಿ ದಾನವರು, ರಾವಣ ಮೊದಲಾದ ರಾಕ್ಷಸರು, ತಾರಕಾದಿ ದೈತ್ಯರು, ಆದಿನಾಥಾದಿ ಸಿದ್ಧರು, ಮಣಿಭದ್ರ ಮೊದಲಾದ ವಿದ್ಯಾಧರರು, ಶೇಷ ಮೊದಲಾದ ಸರ್ಪಗಳು, ಪರಿಮಿತ ವಿಲ್ಲದ ಪರಿವಾರವುಳ್ಳವರಾಗಿ ಮಹಾದೇವನಾದ ಶಿವನಂ ಭಜಿಸಿದರೆಂಬುದರ್ಥಂ ॥೫೪॥

ವಸಿಷ್ಠೋ ವಾಮದೇವಶ್ಚ ಪುಲಸ್ತ್ಯಾಗಸ್ತ್ಯ ಶೌನಕಾಃ
ದಧೀಚಿಗೌತಮಶ್ಚೈವ ಸಾನಂದ ಶುಕ ನಾರದಾಃ ॥

ಉಪಮನ್ಯು ಭೃಗು ವ್ಯಾಸ ಪಾರಾಶರ ಮರೀಚಯಃ
ಇತ್ಯಾದ್ಯಾ ಮುನಯಸ್ಸರ್ವೇ ನೀಲಕಂಠಂ ಸಿಷೇವಿರೇ ॥

ಈ ಹೇಳಿದ ವಸಿಷ್ಠಾದಿ ಋಷಿಗಳು ಸಾನಂದ ಮೊದಲಾದ ಯೋಗಿಗಳೆಲ್ಲರೂ ಶಿವನಂ ಸೇವಿಸಿದರೆಂಬುದರ್ಥಂ ॥೫೬॥ ಆಮೇಲೆ ಪರಮೇಶ್ವರನ ರಾಜವ್ಯಾಪಾರಮಂ ದಶಸೂತ್ರಂಗಳಿಂ ಪ್ರಕಾಶಿಸುತ್ತಿರ್ದಪಂ.

ಪಾರ್ಶ್ವಸ್ಥಪರಿವಾರಾಣಾಂ ವಿಮಲಾಂಗೇಷು ಬಿಂಬಿತಃ
ಸರ್ವಾಂತರ್ಗತಮಾತ್ಮಾನಂ ಸ ರೇಜೇ ದರ್ಶಯನ್ನಿವ ॥

ಆ ಶಿವನೂ ತನ್ನೆಡಬಲದ ಪಾರ್ಶ್ವಂಗಳಲ್ಲಿದ್ದ ಪರಿವಾರ ದೇವತೆಗಳ ನಿರ್ಮಲಾಂಗದಲ್ಲಿ ಪ್ರತಿಬಿಂಬಿಸಿದಾತನಾಗಿ ತನ್ನಂ ಸರ್ವಾಂತರ್ಗತನಾಗಿ ತೋರಿಸುವಂಥಾತನೇಕ್ಕೈಯೆಂಬ ಹಾಗೆ ಒಪ್ಪಿದನೆಂಬುದರ್ಥಂ ॥೫೭॥

ಕ್ಷಣಂ ಸ ಶಂಭುರ್ದೇವಾನಾಂ ಕಾರ್ಯಭಾಗಂ ನಿರೂಪಯನ್
ಕ್ಷಣಂ ಗಂಧರ್ವರಾಜಾನಾಂ ಗಾನವಿದ್ಯಾಂ ವಿಭಾವಯನ್ ॥

ಬ್ರಹ್ಮವಿಷ್ಣ್ವಾದಿಭಿರ್ದೇವೈಃ ಕ್ಷಣಮಾಲಾಪಮಾಚರನ್
ಕ್ಷಣಂ ದೇವಮೃಗಾಕ್ಷೀಣಾಂ ಲಾಲಯನ್ ನೃತ್ಯವಿಭ್ರಮಮ್ ॥

ವ್ಯಾಸಾದೀನಾಂ ಕ್ಷಣಂ ಕುರ್ವನ್ವೇದೋಚ್ಚಾರೇಷು ಗೌರವಂ
ವಿದಧಾನಃ ಕ್ಷಣಂ ದೇವ್ಯಾಃ ಮುಖೇ ಬಿಂಬಾಧರೇ ದೃಶಃ ॥

ಹಾಸ್ಯನೃತ್ಯಂ ಕ್ಷಣಂ ಪಶ್ಯನ್ ಭೃಂಗಿನಾ ಪರಿಕಲ್ಪಿತಂ
ನಂದಿನಾ ವೇತ್ರಹಸ್ತೇನ ಸರ್ವತಂತ್ರಾಧಿಕಾರಿಣಾ ॥

ಅಮುಂಚತಾ ಸದಾ ಪಾರ್ಶ್ವಮಾತ್ಮಾಭಿಪ್ರಾಯವೇದಿನಾ ॥
ಚೋದಿತಾನ್ವಾಸಯನ್ ಕಾಂಶ್ಚಿದ್ವಿಸೃಜನ್ ಭ್ರೂವಿಲಾಸತಃ
ಸಂಭಾವಯಂಸ್ತಥಾ ಚಾನ್ಯಾನನ್ಯಾನಪಿ ನಿಯಾಮಯನ್ ॥

ಸಮಸ್ತಭುವನಾಧೀಶಮೌಲಿಲಾಲಿತಶಾಸನಃ
ಅಕುಂಠಶಕ್ತಿರವ್ಯಾಜಲಾವಣ್ಯಲಲಿತಾಕೃತಿಃ ॥

ಸ್ಥಿರಯೌವನಸೌರಭ್ಯಶೃಂಗಾರಿತ ಕಲೇವರಃ
ಆತ್ಮಶಕ್ತ್ಯಮೃತಾಸ್ವಾದರಸೋಲ್ಲಾಸಿತಮಾನಸಃ ॥

ಸ್ವಾಭಾವಿಕಮಹೈಶ್ವರ್ಯವಿಶ್ರಾಮಪರಮಾವಧಿಃ
ನಿಷ್ಕಲಂಕಮಹಾಸತ್ವನಿರ್ಮಿತಾನೇಕವಿಗ್ರಹಃ ॥

ಅಖಂಡಾರಾತಿದೋರ್ದಂಡಕಂಡೂಖಂಡನಪಂಡಿತಃ
ಚಿಂತಾಮಣಿಃ ಪ್ರಸನ್ನಾನಾಂ ಶ್ರೀಕಂಠಃ ಪರಮೇಶ್ವರಃ ॥

ಸ ಶಂಭುಃ – ಆ ಶಿವನು ದೇವತೆಗಳಂ ಕುರಿತು ಒಂದು ಕ್ಷಣದಲ್ಲಿ ಕಾರ್ಯಭಾಗಮಂ ನಿರೂಪಿಸುವಾತನಾಗಿ ಒಂದು ಕ್ಷಣದಲ್ಲಿ ಗಂಧರ್ವಶ್ರೇಷ್ಠರಾದವರ ಸಂಗೀತವಿದ್ಯೆಯಂ ಕೇಳುವಾತನಾಗಿ ಕ್ಷಣಮಾತ್ರದಲ್ಲಿ ಬ್ರಹ್ಮವಿಷ್ಣ್ವಾದಿಗಳೊಡನೆ ಸಂಭಾಷಣೆಯಂ ಮಾಡುವಂಥವನಾಗಿ ಒಂದು ಕ್ಷಣದಲ್ಲಿ ದೇವಸ್ತ್ರೀಯರ ನರ್ತನಸಂಭ್ರಮವ ಲಾಲಿಸುವಾತನಾಗಿ ಒಂದು ಕ್ಷಣದಲ್ಲಿ ವ್ಯಾಸಾದಿ ಮುನಿಗಳ ವೇದೇಷು ಪಾರಾಯಣದಲ್ಲಿ ಗುರುತ್ವ ಬುದ್ಧಿಯ ಮಾಡುವಾತನಾಗಿ ಒಂದು ಕ್ಷಣದಲ್ಲಿ ದೇವಿಯರ ಮುಖದಲ್ಲಿಯೂ ಬಿಂಬಾಧರದಲ್ಲಿಯೂ ದೃಷ್ಟಿಯನಿಡುವಾತನಾಗಿ ಒಂದು ಕ್ಷಣದಲ್ಲಿ ಭೃಂಗೀಶ್ವರನಿಂ ನಿರ್ಮಿಸಲ್ಪಟ್ಟ ಹಾಸ್ಯನೃತ್ಯವ ನೋಡುವಾತನಾಗಿ ಸರ್ವತಂತ್ರಾಧಿಕಾರಿಯಾಗಿ ಸದಾ ಸಮೀಪ ವರ್ತಿಯಾಗಿ ಶಿವನ ಅಭಿಪ್ರಾಯಮಂ ತಿಳಿವಾತನಾಗಿ ಸ್ವರ್ಣಮಯಮಾದ ಬೆತ್ತಮಂ

ಪಿಡಿದಿರುವ ನಂದಿಕೇಶ್ವರನಿಂದ ಕೆಲರಂ ಪ್ರೇರಿಸುತ್ತಾ ಕೆಲರಂ ಕುಳ್ಳಿರಿಸುತ್ತಾ ಕೆಲರಂ ಭ್ರೂಸಂಜ್ಞೆಯಿಂ ಕಳುಹುತ್ತಾ ಹಾಗೆ ಕೆಲರಂ ಕುರಿತು ಪ್ರಿಯೋಕ್ತಿಯಂ ಪೇಳುತ್ತಾ ಕೆಲರು ಶಿಕ್ಷಿಸುತ್ತಾ ಸಕಲ ಲೋಕೇಶನಾದ ಬ್ರಹ್ಮದೇವನ ಮಸ್ತಕದಲ್ಲಿ ಇರಿಸಲ್ಪಟ್ಟ ಸಕಲ ಜ್ಞಾನಶಕ್ತಿಯುಳ್ಳಾತನಾಗಿ ಅಪ್ರತಿಹತಮಾದ ಶಕ್ತಿಯುಳ್ಳ ಸಹಜವಾದ ಸೌಂದರ್ಯದಿಂ ಮನೋಹರಮಾದ ಆಕಾರವನ್ನುಳ್ಳ ವೃದ್ಧಿ ಕ್ಷಯ ರಹಿತಮಾದ ನಿಜಯೌವನೋದ್ರೇಕದಿಂದಲಂಕರಿಸಲ್ಪಟ್ಟ ಶರೀರಮುಳ್ಳ ಸ್ವಸಮವೇತ ಶಕ್ತಿರೂಪಮಾದ ಪರಮಾನಂದ ರಸಾಸ್ವಾದನದಿಂದುಬ್ಬುತ್ತಿದ್ದಂತ ರಂಗಮುಳ್ಳ ಔಪಾಧಿಕಮಲ್ಲದ ಸರ್ವಜ್ಞತ್ವಾದಿ ಮಹೈಶ್ವರ್ಯದ ವಿಶ್ರಮಣಕ್ಕೆ ಪರ್ಯಂಕ ಭೂಮಿಯಾದ ದೋಷರಹಿತಮಾದ ಮಹಾಶಕ್ತಿಯಿಂ ನಿರ್ಮಿಸಲ್ಪಟ್ಟಾನೇಕ ದಿವ್ಯಮಂಗಳ ಮೂರ್ತಿಯುಳ್ಳ ಸಜ್ಜನರಿಗೆ ಪ್ರಬಲರಾದ ಶತ್ರುಗಳ ತೋಳುಗಳ ತುರಿಕೆಯ ಖಂಡಿಸುವಲ್ಲಿ ಸಮರ್ಥರಾದ ಮರೆಯೊಕ್ಕವರಿಗೆ ಚಿಂತಾಮಣಿಯಾದ ಕಪ್ಪುಗೊರಳನಾದ ಪರಮೇಶ್ವರಂ ಒಪ್ಪುತಿರ್ದನೆಂಬುದರ್ಥಂ ॥೬೭॥ ಈ ಪ್ರಕಾರದಿಂ ಶಿವನ ವೈಭವವ ವರ್ಣಿಸಿ ತರುವಾಯದಲ್ಲಿ ಹನ್ನೊಂದು ಸೂತ್ರಂಗಳಿಂ ರೇಣುಕಗಣೇಶ್ವರನಿಗೆ ಶಿವನಭಕ್ತಮಹತ್ವಮಂ ಸೂಚಿಸುತಿರ್ದಪಂ

ಸಭಾಂತರಗತಂ ತಂತ್ರಂ ರೇಣುಕಂ ಗಣನಾಯಕಂ
ಪ್ರಸಾದಂ ಸುಲಭಂ ದಾತುಂ ತಾಂಬೂಲಂ ಸ ತಮಾಹ್ವಯತ್ ॥

ಸ – ಆ ಶಿವನು ಸಭಾಮಧ್ಯಗತನಾದ, ತಂತ್ರಂ – ಮುಖ್ಯನಾದ, ತಂ – ಪ್ರಸಿದ್ಧನಾದ ಗಣೇಶ್ವರನಾದ ರೇಣುಕನಂ ಕುರಿತು ಸುಲಭವಾದ ತಾಂಬೂಲ ಪ್ರಸಾದಮಂ ಕೊಡಲೋಸ್ಕರ ಶಿರಸ್ಸಿನಿಂದ ಸನ್ನೆ ಮಾಡಿ ಕರೆದನೆಂಬುದರ್ಥಂ ॥೬೮॥

ಶಂಭೋರಾಹ್ವಾನಸಂತೋಷಸಂಭ್ರಮೇಣೈವ ದಾರುಕಂ
ಉಲ್ಲಂಘ್ಯ ಪಾರ್ಶ್ವಮಗಮಲ್ಲೋಕನಾಥಸ್ಯ ರೇಣುಕಃ ॥

ಶಿವನ ಸಂಬಂಧಮಾದ ಕರುಣದ ಸಂತೋಷ ಸಂಭ್ರಮದಿಂದ ದಾರುಕನಂ ದಾಟಿ ಲೋಕನಾಥನಾದ ಶಿವನ ವಾಮಭಾಗಮಂ ರೇಣುಕನೈದಿದನೆಂಬುದರ್ಥಂ ॥೬೯॥

ತಮಾಲೋಕ್ಯ ವಿಭುಸ್ತತ್ರ ಸಮುಲ್ಲಂಘಿತದಾರುಕಂ
ಮಾಹಾತ್ಮ್ಯಂ ನಿಜಭಕ್ತಾನಾಂ ದ್ಯೋತಯನ್ನಿದಮಬ್ರವೀತ್ ॥

ವಿಭುಃ – ಸ್ವತಂತ್ರನಾದ ಶಿವನು ದಾಟಲ್ಪಟ್ಟ ದಾರುಕನನ್ನುಳ್ಳ ಆ ರೇಣುಕನಂನೋಡಿ ತನ್ನ ಭಕ್ತರ ಮಹಾತ್ಮ್ಯವ ಪ್ರಕಾಶಿಸುವನಾಗಿ ಈ ವಾಕ್ಯವ ನುಡಿದನೆಂಬುದರ್ಥಂ ॥೭೦॥

ರೇ ರೇ ರೇಣುಕ ನಿರ್ಬುದ್ಧೇ ಕಥಮೇಷತ್ತ್ವಯ್ಯಾಧುನಾ
ಉಲ್ಲಂಘಿತಃ ಸಭಾಮಧ್ಯೇ ಮಮ ಭಕ್ತೋ ಹಿ ದಾರುಕಃ ॥

ಲಂಘನಂ ಮಮ ಭಕ್ತಾನಾಂ ಪರಮಾನರ್ಥಕಾರಣಂ
ಆಯುಃ ಕುಲಂ ಶ್ರಿಯಂ ಕೀರ್ತಿಂ ನಿಹಂತಿ ಹಿ ಶರೀರಿಣಾಮ್ ॥

ರೇ ರೇ ನಿರ್ಬುದ್ಧೇರೇಣುಕ – ಎಲೋ ಶೂನ್ಯನಾದ ರೇಣುಕನೆ, ಸಭಾಮಧ್ಯದಲ್ಲೀಗ ನಿನ್ನಿಂದೆನ್ನ ಭಕ್ತನಾದೀ ದಾರುಕನು ಹೇಗೆ ದಾಟಲ್ಪಟ್ಟನು. ನನ್ನ ಭಕ್ತರ ದಾಟುಹವೆಂಬುದು ದೊಡ್ಡ ಅನರ್ಥಕ್ಕೆ ಕಾರಣಮಾದಂಥಾದು. ಅದೇನು ಎಂದೆಯಾ ಶರೀರಿಗಳಾದವರ ಆಯುಷ್ಯವನು ಕುಲವನು ಐಶ್ವರ್ಯವನು ಕೀರ್ತಿಯನು ಕೆಡಿಸುವದೆಂಬುದರ್ಥಂ ॥೭೨॥ ಈ ಅರ್ಥದಲ್ಲಿ ಬಹು ದೃಷ್ಟಾಂತಮಂ ಪೇಳುತಿರ್ದಪಂ.

ಮಮ ಭಕ್ತಮವಜ್ಞಾಯ ಮಾರ್ಕಂಡೇಯಂ ಪುರಾ ಯಮಃ
ಮತ್ಪಾದತಾಡನಾದಾಸೀತ್ಸ್ಮರಣೀಯಕಲೇವರಃ ॥

ಪುರಾ– ಪೂರ್ವದಲ್ಲಿ ಯಮನು ನನ್ನ ಭಕ್ತನಾದ ಮಾರ್ಕಂಡೇಯನ ಉದಾಸೀನವ ಮಾಡಿ ನನ್ನ ಪಾದಾಘಾತದಿಂದ ನಷ್ಟಕಳೇವರನಾಗಿ ಸ್ಮರಿಸಲ್ತಕ್ಕ ಶರೀರವುಳ್ಳವನಾದ ನೆಂಬುದರ್ಥಂ ॥೭೩॥

ಭೃಗೋಶ್ಚ ಶಂಕುಕರ್ಣಸ್ಯ ಮಮ ಭಕ್ತಿಮತೋಸ್ತಯೋಃ
ಕೃತ್ವಾನಿಷ್ಟಮಭೂದ್ವಿಷ್ಣುಃ ವಿಕೇಶೋ ದಶಯೋನಿಭಾಕ್ ॥

ವಿಷ್ಣುಃ – ನಾರಾಯಣನು ಭೃಗುವಿಗೂ ಶಂಕುಕರ್ಣನಿಗೂ ನನ್ನಲ್ಲಿ ಭಕ್ತಿಯುಳ್ಳಂಥಾ ಆವ್ರೊಬ್ಬರಿಗೂ ಅನಿಷ್ಟವ ಮಾಡಿ ಮುಂದಲೆ ಕೂದಲ ಕೀಳಿಸಿಕೊಂಡವನಾಗಿ ಮೀನು ಮೊದಲಾದ ಹತ್ತು ಯೋನಿಗಳಲ್ಲಿ ಬಂದನೆಂಬುದರ್ಥಂ ॥೭೪॥

ಮದ್ಭಕ್ತೇನ ದಧೀಚೇನ ಕೃತ್ವಾ ಯುದ್ಧಂ ಜನಾರ್ದನಃ
ಭಗ್ನಚಕ್ರಾಯುಧಃ ಪೂರ್ವಂ ಪರಾಭವಮುಪಾಗಮತ್ ॥

ಜನಾರ್ದನಃ – ನಾರಾಯಣನು ಪೂರ್ವದಲ್ಲಿ ನನ್ನ ಭಕ್ತನಾದ ದಧೀಚಮುನಿಯೊಡನೆ ಯುದ್ಧಮಂ ಮಾಡಿ ಮುರಿದು ಹೋದ ಚಕ್ರಾಯುಧವುಳ್ಳವನಾಗಿ ಪರಾಭವವನೈದಿದ ನೆಂಬುದರ್ಥಂ ॥೭೫॥

ಕೃತಾಶ್ವಮೇಧೋ ದಕ್ಷೋಽಪಿ ಮದ್ಭಕ್ತಾಂಶ್ಚ ಗಣೇಶ್ವರಾನ್
ಅವಮತ್ಯ ಸಭಾಮಧ್ಯೇ ಮೇಷವಕ್ತ್ರೋಽಭವತ್ಪುರಾ ॥

ಪೂರ್ವದಲ್ಲಿ ಮಾಡಲ್ಪಟ್ಟ ಅಶ್ವಮೇಧಯಾಗಮುಳ್ಳ ದಕ್ಷನು ಸಭಾಮಧ್ಯದಲ್ಲಿ ನನ್ನ ಭಕ್ತನಾದ ಗಣೇಶ್ವರನ ಉದಾಸೀನವ ಮಾಡಿ ಕುರಿಯ ಮೋರೆಯುಳ್ಳವನಾದನೆಂಬುದರ್ಥಂ ॥೭೬॥

ಶ್ವೇತಸ್ಯ ಮಮ ಭಕ್ತಸ್ಯ ದುರತಿಕ್ರಮತೇಜಸಃ
ಔದಾಸೀನ್ಯೇನ ಕಾಲೋಽಪಿ ಮಯಾ ದಗ್ಧಃ ಪುರಾಽಭವತ್ ॥

ಪೂರ್ವದಲ್ಲಿ ಯಮನು ಅನಿಂದಿತಮಾದ ತೇಜಸ್ಸನ್ನುಳ್ಳ ಎನ್ನ ಭಕ್ತನಾದ ಶ್ವೇತನ ಉದಾಸೀನವ ಮಾಡಿದರಿಂದ ಎನ್ನಿಂದ ದಹಿಸಲ್ಪಟ್ಟವನಾದನೆಂಬುದರ್ಥಂ ॥೭೭॥

ಏವಮನ್ಯೇsಪಿ ಬಹವೋ ಮದ್ಭಕ್ತಾನಾಮತಿಕ್ರಮಾತ್
ಪರಿಭೂತಾಃ ಹತಶ್ಚಾಸನ್ ಭಕ್ತಾ ಮೇ ದುರತಿಕ್ರಮಾಃ ॥

ಏವಂ– ಈ ಪ್ರಕಾರದಿಂದ ಮತ್ತು ಇವರಿಂದನ್ಯರಾದ ಬಹುಜನರು ನನ್ನ ಭಕ್ತರನತಿಕ್ರಮಿಸಿದ ಕಾರಣದತ್ತಣಿಂ ಪರಾಜಿತರೂ ಮೃತರೂ ಆದರು. ಆ ಕಾರಣದಿಂದೆನ್ನ ಭಕ್ತರು ಅತಿಕ್ರಮಿಸಲ್ತಕ್ಕವರಲ್ಲವೆಂಬುದರ್ಥಂ ॥೭೮॥ ಈ ಪ್ರಕಾರದಿಂದ ಭಕ್ತಮಹತ್ವಮಂ ಪೇಳಿ ಭಕ್ತೋಲ್ಲಂಘನ ದೋಷಕ್ಕೆ ಫಲಮಂ ನಿರೂಪಿಸುತಿರ್ದಪಂ

ಅವಿಚಾರೇಣ ಮದ್ಭಕ್ತಃ ಲಂಘಿತೋ ದಾರುಕಸ್ತ್ವಯಾ
ಏಷ ತ್ವಂ ರೇಣುಕಾನೇನ ಜನ್ಮವಾನ್ಭವ ಭೂತಲೇ ॥

ಎಲೋ ರೇಣುಕನೆ ವಿಚಾರಶೂನ್ಯನಾದ ನಿನ್ನಿಂದ ಎನ್ನ ಭಕ್ತನಾದ ಈ ದಾರುಕನು ದಾಟಲ್ಪಟ್ಟನು. ಈ ದೋಷದಿಂದ ನೀನು ಭೂಲೋಕದಲ್ಲಿ ಜನ್ಮವುಳ್ಳವನಾಗೆಂದು ಶಾಪಮಂ ಕೊಟ್ಟನೆಂಬುದರ್ಥಂ ॥೭೯॥ ಆಮೇಲೆ ರೇಣುಕನು ಜನ್ಮಭಯಗ್ರಸ್ತನಾಗಿ ಪಂಚಸೂತ್ರಂಗಳಿಂ ಶಿವನಂ ಬೇಡಿಕೊಳ್ಳುತ್ತಿರ್ದಪಂ

ಇತ್ಯುಕ್ತಃ ಪರಮೇಶೇನ ಭಕ್ತಮಹಾತ್ಮ್ಯಶಂಸಿನಾ
ಪ್ರಾರ್ಥಯಾಮಾಸ ದೇವೇಶಂ ಪ್ರಣಿಪತ್ಯ ಸ ರೇಣುಕಃ ॥

ಈ ಪ್ರಕಾರದಿಂದ ಲೋಕಹಿತಾರ್ಥಮಾಗಿ ಭಕ್ತರ ಮಹತ್ವಮಂ ಪೇಳುತಿರ್ದ ಪರಮೇಶ್ವರನಿಂ ಪೇಳಲ್ಪಟ್ಟ ಆ ರೇಣುಕನು ಬ್ರಹ್ಮಾದಿ ದೇವರುಗಳಿಗೆ ಒಡೆಯನಾದ ಶಿವನ ನಮಸ್ಕರಿಸಿ ಬೇಡಿಕೊಂಡನೆಂಬುದರ್ಥಂ ॥೮೦॥ ಆಮೇಲೆ ತತ್ಪ್ರಕಾರವಮಂ ಪ್ರತಿಪಾದಿಸುತಿರ್ದಪಂ

ಭವದಾಹ್ವಾನಸಂಭ್ರಾಂತ್ಯಾ ಮಯ್ಯಾsಜ್ಞಾನಾದ್ವಿಲಂಘಿತಃ
ದಾರುಕೋsಯಂ ತತಶ್ಶಂಭೋ ಪಾಹಿ ಮಾಂ ಭಕ್ತವತ್ಸಲ ॥

ನೀನು ನನ್ನ ಕರೆವುತ್ತಾನೆಂಬ ಸಂಭ್ರಮದಿಂದ ಅಜ್ಞಾನಬಿಂದು ಪ್ರಾಪ್ತಮಾದ ಕಾರಣದತ್ತಣಿಂ ನನ್ನಿಂದೀ ದಾರುಕನು ದಾಟಲ್ಪಟ್ಟನು. ಆಹಾ ಶಿವನೆ ನೀನು ಭಕ್ತವತ್ಸಲನು ಆ ಕಾರಣದಿಂ ಎನ್ನಂ ರಕ್ಷಿಸೆಂಬುದರ್ಥಂ ॥೮೧॥

ಮಾನುಷೀಂ ಯೋನಿಮಾಸಾದ್ಯ ಮಹಾದುಃಖವಿವರ್ಧಿನೀಂ
ಜಾತ್ಯಾಯುರ್ಭೋಗವೈಷಮ್ಯಹೇತುಕರ್ಮೋಪಪಾದಿನೀಮ್ ॥

ಸಮಸ್ತದೇವಕೈಂಕರ್ಯಕಾರ್ಪಣ್ಯಪ್ರಸವಸ್ಥಲೀಂ
ಮಹಾತಾಪತ್ರಯೋಪೇತಾಂ ವರ್ಣಾಶ್ರಮ ನಿಯಂತ್ರಿತಾಮ್ ॥

ವಿಹಾಯ ತ್ವತ್ಪದಾಂಭೋಜಸೇವಾಂ ಕಿಂ ವಾ ವಸಾಮ್ಯಹಮ್ ॥

ನಿನ್ನ ಪಾದಕಮಲ ಸೇವೆಯಂ ಬಿಟ್ಟು ಇಂದ್ರಾದಿ ಸಕಲ ದೇವರ ಕಿಂಕರತ್ವದ ಕಾರ್ಪಣ್ಯಕ್ಕೆ ಉತ್ಪತ್ಯಸ್ಥಾನವಾದಂಥಾ ದೊಡ್ಡಿತಾದ ದುಃಖವನು ಹೆಚ್ಚಿಸುವಂಥಾ ಮಹಾ

ತಾಪತ್ರಯದೊಡನೆ ಕೂಡಿದಂಥಾ ಮನುಷ್ಯಯೋನಿಯನ್ನೈದಿ ಜಾತ್ಯಾಯುಸ್ಸುಖ ದುಃಖಂಗಳ ವಿಚಿತ್ರತೆಗೆ ಕಾರಣಕಾರಣಮಾದ ಕರ್ಮವನು ಪ್ರತಿಪಾದಿಸುವಂಥಾ ಬ್ರಾಹ್ಮಣಾದಿ ವರ್ಣಾಶ್ರಮದಿಂ ನಿಯಮಿಸಲ್ಪಟ್ಟಂಥಾ ಮನುಷ್ಯಯೋನಿಯನ್ನೈದಿ ನಾನು ಇರಲ್ತಕ್ಕವನೆ ಏನೆಂಬುದರ್ಥಂ ॥೮೪॥

ಯಥಾ ಮೇ ಮಾನುಷೋ ಭಾವೋ ನ ಭವೇತ್ ಕ್ಷಿತಿಮಂಡಲೇ
ತಥಾ ಪ್ರಸಾದಂ ದೇವೇಶ ವಿಧೇಹಿ ಕರುಣಾನಿಧೇ ॥

ಅಹೋ ಬ್ರಹ್ಮಾದಿ ದೇವರಿಗೊಡೆಯನಾದ ಶಿವನೆ ಎನಗೆ ಭೂಮಂಡಲದಲ್ಲಿ ಮನುಷ್ಯತ್ವ ಹೇಗೆ ಬಾರದು ಹಾಗೆ ಅನುಗ್ರಹವ ಮಾಡು. ಅದೆಂತೆಂದೊಡೆ ನಿಮ್ಮ ಕರುಣಾಕರನೆಂಬ ಕಾರಣದಿಂದೆಂಬುದು ತಾತ್ಪರ್ಯಂ ॥೮೫॥ ಆಮೇಲೀ ಪ್ರಕಾರದಿಂದ ಪ್ರಾರ್ಥಿಸಲ್ಪಟ್ಟ ರೇಣುಕನು ಸ್ವಾತ್ಮನಾಹತನದಿಂ ನಿಶ್ಚೈಸಿ ಅಭಯವ ಕೊಟ್ಟು ಆರುಸೂತ್ರಂಗಳಿಂ ಪ್ರಯೋಜನಮಂ ಪೇಳುತ್ತಿರ್ದಪಂ

ಇತಿ ಸಂಪ್ರಾರ್ಥಿತೋ ದೇವೋ ರೇಣುಕೇನ ಮಹೇಶ್ವರಃ
ಮಾ ಭೈಷೀರ್ಮಮಭಕ್ತಾನಾಂ ಕುತೋ ಭೀತಿರಿಹೇಷ್ಯತಿ ॥

ಈ ಪ್ರಕಾರದಿಂ ರೇಣುಕನಿಂದ ಚೆನ್ನಾಗಿ ಪ್ರಾರ್ಥಿಸಲ್ಪಟ್ಟ ಕ್ರೀಡಾಶೀಲನಾದ ಮಹೇಶ್ವರನು ಬೆದರಬೇಡ ನನ್ನ ಭಕ್ತ ನೀನೀ ಲೋಕದಲ್ಲಿ ಯಾವ ಕಾರಣದಿಂ ಭೀತಿಯಂ ಇಚ್ಚೈಸಲ್ಪಡುವುದು ಇಲ್ಲವೆಂದು ಬುದ್ಧಿ ಕಲಿಸಿದನೆಂಬುದು ತಾತ್ಪರ್ಯಂ ॥೮೬॥

ಶ್ರೀಶೈಲಸ್ಯೋತ್ತರೇಭಾಗೇ ತ್ರಿಲಿಂಗವಿಷಯೇ ಶುಭೇ
ಕೊಲ್ಲಿಪಾಕ್ಯಾಭಿಧಾನೋsಸ್ತಿ ಕೋsಪಿ ಗ್ರಾಮೋ ಮಹತ್ತರಃ ॥

ಸೋಮೇಶ್ವರಾಭಿಧಾನಸ್ಯ ತತ್ರ ವಾಸವತೋ ಮಮ
ಅಸ್ಪೃಶನ್ಮಾನುಷಂ ಭಾವಂ ಲಿಂಗಾತ್ಪ್ರಾದುರ್ಭವಿಷ್ಯಸಿ ॥

ಶ್ರೀಶೈಲಕ್ಕುತ್ತರ ಭಾಗದಲ್ಲಿ ಮಂಗಲಾತ್ಮಕಮಾದ ಮೂರು ಲಿಂಗಂಗಳಿಗಾಶ್ರಯಮಾದ ಆಂಧ್ರ ದೇಶದಲ್ಲಿ ಕೊಲ್ಲಿಪಾಕವೆಂಬ ಪೆಸರುಳ್ಳ ಮಹಾಗ್ರಾಮವಲ್ಲಿರುತ್ತದೆ. ಅಲ್ಲಿ ವಾಸವನ್ನುಳ್ಳ ಸೋಮೇಶ್ವರನೆಂಬ ಪೆಸರುಳ್ಳ ಎನ್ನ ಲಿಂಗದತ್ತಣಿಂ ಮಾನುಷಭಾವವ ಹೊದ್ದದವನಾಗಿ ಆವಿರ್ಭವಿಸು ಎಂಬುದರ್ಥಂ ॥೮೮॥

ಮದೀಯಲಿಂಗಸಂಭೂತಂ ಮದ್ಭಕ್ತಪರಿಪಾಲಕಂ
ವಿಸ್ಮಿತಾಃ ಮಾನುಷಾಸ್ಸರ್ವೇ ತ್ವಾಂ ಭಜಂತು ಮದಾಜ್ಞಯಾ ॥

ಮದದ್ವೈತಪರಂ ಶಾಸ್ತ್ರಂ ವೇದವೇದಾಂತ ಸಮ್ಮತಂ
ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಮ್ ॥

ಮಮ ಪ್ರತಾಪಮತುಲಂ ಮದ್ಭಕ್ತಾನಾಂ ವಿಶೇಷತಃ
ಪ್ರಕಾಶಯ ಮಹೀಭಾಗೇ ವೇದಮಾರ್ಗಾನುಸಾರತಃ ॥

ಎನ್ನ ಲಿಂಗದಿಂದುದ್ಭವಿಸಿದಂಥಾ ಎನ್ನ ಭಕ್ತರಿಂ ಪರಿಪಾಲಿಸುವಂಥಾ ನಿನ್ನಂ ಕಂಡು ಸಕಲ ಮನುಷ್ಯರು ಆಶ್ಚರ್ಯಯುಕ್ತರಾಗಿ ಭಜಿಸಲಿ. ಎನ್ನಪ್ಪಣೆಯಿಂ ವೇದವೇದಾಂತ ಸಮ್ಮತವಾದ ಎನ್ನ ಅದ್ವೈತಪರಮಾದ ಸಕಲರಿಗೂ ಹಿತಕರಮಾದ ಶಾಸ್ತ್ರಮಂ ಭೂಲೋಕದಲ್ಲಿ ಸ್ಥಾಪಿಸು. ಪಡಿಯಿಲ್ಲದ ಎನ್ನ ಪ್ರಭಾವಮಂ ನನ್ನ ಭಕ್ತರಾದವರಿಗೆ ಭೂಭಾಗದಲ್ಲಿ ವಿಶೇಷವಾಗಿ ವೇದಮಾರ್ಗಕ್ಕನುಸಾರವಾಗಿ ಪ್ರಕಾಶಿಸು ಎಂದು ಆಜ್ಞಾಪಿಸಿದನೆಂಬುದರ್ಥಂ ॥೯೧॥ ಆಮೇಲೆ ಶಿವಯೋಗಿ ನುಡಿವುತ್ತಿರ್ದಪಂ

ಇತ್ಯುಕ್ತ್ವಾ ಪರಮೇಶ್ವರಸ್ಸಭಗವಾನ್ಭದ್ರಾಸನಾದುತ್ಥಿತಃ
ಬ್ರಹ್ಮೋಪೇಂದ್ರಮುಖಾನ್ವಿಸೃಜ್ಯ ವಿಬುಧಾನ್ಭ್ರೂ ಸಂಜ್ಞಯಾ ಕೇವಲಂ
ಪಾರ್ವತ್ಯಾಸಹಿತೋ ಗಣೈರಭಿಮತೈಃಪ್ರಾಪ ಸ್ವಮಂತಃಪುರಂ
ಕ್ಷೋಣೀಭಾಗಮವಾತರತ್ಪಶುಪತೇರಾಜ್ಞಾವಶಾದ್ರೇಣುಕಃ ॥

ಹೀಗೆಂದು ನಿರೂಪಿಸಿ ಷಡ್ಗುಣೈಶ್ವರ್ಯ ಸಂಪನ್ನನಾದ ಆ ಪರಮೇಶ್ವರನು ಬಾಯ ಭ್ರೂ ಸಂಜ್ಞೆಯಿಂ ಬ್ರಹ್ಮ ವಿಷ್ಣು ಮೊದಲಾದ ದೇವರ್ಕಳಂ ಕಳುಪಿ ಅತ್ಯಾಪ್ತರಾದ ನಂದ್ಯಾದಿ ಗಣರೊಡನೆ ಪಾರ್ವತಿಯಿಂ ಸಹಿತನಾಗಿ ತನ್ನದಾದ ಅಂತಃಪುರಮಂ ಪ್ರವೇಶಿಸಿದನು. ಶಿವನ ಅಪ್ಪಣೆಯತ್ತಣಿಂ ರೇಣುಕನು ಭೂಭಾಗವನ್ನೈದಿದನೆಂಬುದರ್ಥಂ ॥೯೨॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ರೇಣುಕಸ್ಯ ಭೂಲೋಕಾವಗತಿರ್ನಾಮ ತೃತೀಯ ಪರಿಚ್ಛೇದಃ.

# ಚತುರ್ಥಪರಿಚ್ಛೇದ

## ರೇಣುಕಾಗಸ್ತ್ಯಸಂಭಾಷಣ

ಆಮೇಲೆ ಎಂಟುಸೂತ್ರಂಗಳಿಂ ಶಿವಯೋಗಿಯು ರೇಣುಕಗಣೇಶ್ವರನ ಸ್ವರೂಪಮಂ ವರ್ಣಿಸುತಿರ್ದಪಂ

ಅಥ ತ್ರಿಲಿಂಗವಿಷಯೇ ಕೊಲ್ಲಿಪಾಕ್ಯಭಿಧೇ ಪುರೇ
ಸೋಮೇಶ್ವರಮಹಾಲಿಂಗಾತ್ಪ್ರಾದುರಾಸೀತ್ಸ ರೇಣುಕಃ ॥

ಆಮೇಲೆ ಆಂಧ್ರದೇಶದಲ್ಲಿ ಕೊಲ್ಲಿಪಾಕಪುರದಲ್ಲಿ ಆ ರೇಣುಕಗಣೇಶ್ವರಂ ಸೋಮೇಶ್ವರನೆಂಬ ಮಹಾಲಿಂಗದತ್ತಣಿಂ ಪ್ರಾದುರ್ಭವಿಸಿದನೆಂಬುದರ್ಥಂ ॥೧॥ ಹೇಗೆ ಪ್ರಾದುರ್ಭವಿಪನೆಂಬುದ ಪೇಳುತಿರ್ದಪಂ

ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ತ್ರಿಲಿಂಗಜಾಃ
ವಿಸ್ಮಿತಾಃ ಪ್ರಾಣಿನಸ್ಸರ್ವೇ ಬಭೂವುರತಿತೇಜಸಮ್ ॥

ಭಸ್ಮೋದ್ಧೂಳಿತಸರ್ವಾಂಗಂ ಸಾರ ರುದ್ರಾಕ್ಷಭೂಷಣಂ
ಜಟಾಮುಕುಟಸಂಯುಕ್ತಂ ತ್ರಿಪುಂಡ್ರಾಂಕಿತಮಸ್ತಕಮ್ ॥

ಕಟೀತಟಪಟೀಭೂತಕಂಥಾಪಟಲಬಂಧುರಂ
ದಧಾನಂ ಯೋಗದಂಡಂ ಚ ಭಸ್ಮಾಧಾರಂ ಕಮಂಡಲುಮ್ ॥

ಶಿವಾದ್ವೈತಪರಿಜ್ಞಾನಪರಮಾನಂದಮೋದಿತಂ
ನಿರ್ಧೂತಸರ್ವಸಂಸಾರವಾಸನಾದೋಷಪಂಜರಮ್ ॥

ಶಿವಾಗಮಸುಧಾಸಿಂಧುಸಮುನ್ಮೇಷಸುಧಾಕರಂ
ಚಿತ್ತಾರವಿಂದಸಂಗೂಢಶಿವಪಾದಾಂಬುಜದ್ವಯಮ್ ॥

ಯಮಾದಿಯೋಗತಂತ್ರಜ್ಞಂ ಸ್ವತಂತ್ರಂ ಸರ್ವಕರ್ಮಸು
ಸಮಸ್ತಸಿದ್ಧಸಂತಾನಸಮುದಾಯಶಿಖಾಮಣಿಮ್ ॥

ವೀರಸಿದ್ಧಾಂತನಿರ್ವಾಹಕೃತ ಪಟ್ಟನಿಬಂಧನಂ
ಆಲೋಕಮಾತ್ರನಿರ್ಭಿನ್ನಸಮಸ್ತಪ್ರಾಣಿಪಾತಕಮ್ ॥

ಅತ್ಯಂತ ತೇಜಸ್ವಿಯಾಗಿ ಭಸ್ಮದಿಂದ ಧೂಳಿಸಲ್ಪಟ್ಟ ಸರ್ವಾಂಗಮುಳ್ಳವನಾಗಿ ಬಹು ರುದ್ರಾಕ್ಷಿಗಳ ಭೂಷಣವುಳ್ಳವನಾಗಿ ಜಟಾಮುಕುಟದಿಂ ಸಂಯುಕ್ತನಾಗಿ ತ್ರಿಪುಂಡ್ರದಿಂ ಚಿಹ್ನಿತಮಾದ ಮಸ್ತಕಮುಳ್ಳವನಾಗಿ ಕಟಿಪ್ರದೇಶದಲ್ಲಿ ಪಟವಾದ ಕಂಥಾ ಸಮೂಹದಿಂ ಮನೋಹರನಾಗಿ ಯೋಗದಂಡವನೂ ಭಸ್ಮಘುಟಿಕೆಯನೂ ಕಮಂಡಲವನೂ ಧರಿಸಿದವನಾಗಿ ಶಿವಾದ್ವೈತ ಪರಿಜ್ಞಾನದಿಂದುಂಟಾದ ಪರಮಾನಂದದಿಂ ಸುಖಿಸುವಾತನಾಗಿ ಹಾರಿಸಲ್ಪಟ್ಟ ಸಂಸಾರವಾಸನೆಯೆಂಬ ದೋಷಸಮೂಹವುಳ್ಳವನಾಗಿ ಶಿವಾಗಮವೆಂಬ ಅಮೃತಸಮುದ್ರವನುಬ್ಬಿಸುವ ಚಂದ್ರನಾಗಿ ಚಿತ್ತವೆಂಬ ಕಮಲದಲ್ಲಿ ಚೆನ್ನಾಗಿ ಗೋಪನೆ

ಮಾಡಿದ ಶಿವಪಾದಾಂಬುಜಯುಗ್ಮವುಳ್ಳವನಾಗಿ ಯಮನಿಯಮಾದಿ ಯೋಗಶಾಸ್ತ್ರವ ಬಲ್ಲಾತನಾಗಿ ಸಕಲ ಕರ್ಮಾಂಗಳಲ್ಲಿಯೂ ಸ್ವತಂತ್ರನಾಗಿ ಸಮಸ್ತವಾದ ಸಿದ್ಧಸಂತಾನ ಸಮೂಹಕ್ಕೆ ಶಿಖಾಮಣಿಯಾಗಿ ವೀರಶೈವಸಿದ್ಧಾಂತವ ನಿರ್ವಹಿಸಬೇಕೆಂದು ಅಂಗೀಕರಿಸಲ್ಪಟ್ಟ ಬಂಧವುಳ್ಳವನಾಗಿ ದರ್ಶನಮಾತ್ರದಿಂದ ಹೋಗಾಡಿಸಲ್ಪಟ್ಟ ಸಕಲ ಜನರ ಪಾಪವುಳ್ಳವ ನಾಗಿ ಶಿವಲಿಂಗದತ್ತಣಿಂದಾವಿರ್ಭವಿಸಿದ ಆ ರೇಣುಕಗಣೇಶ್ವರನಂ ಆಂಧ್ರದೇಶದಲ್ಲಿ ಜನಿಸಿರ್ದ ಸಮಸ್ತಪ್ರಾಣಿಗಳು ನೋಡಿ ಆಶ್ಚರ್ಯಯುಕ್ತರಾದರೆಂಬುದರ್ಥಂ ॥೮॥ ಆಮೇಲೆ ಮರ್ತ್ಯಲೋಕಕ್ಕೆ ಬಂದ ರೇಣುಕಗಣೇಶ್ವರಂ ಜನರಿಂ ನಮಸ್ಕರಿಸಿ ಕೇಳಲ್ಪಟ್ಟಾತನಾಗಿ ಉತ್ತರಮಂ ಕೊಟ್ಟು ತೆರಳಿದನೆಂದು ಪೇಳುತಿರ್ದಪಂ

ತಮಪೃಚ್ಛನ್ ಜನಾಸ್ಸರ್ವೇನಮಂತಃ ಕೋ ಭವಾನಿತಿ
ಇತಿ ಪೃಷ್ಟೋ ಮಹಾಯೋಗೀ ಜನೈರ್ವಿಸ್ಮಿತಮಾನಸೈಃ ॥

ಪ್ರತ್ಯುವಾಚ ಶಿವಾದ್ವೈತಮಹಾನಂದಪರಾಯಣಃ
ಪಿನಾಕಿನಃ ಪಾರ್ಶ್ವವರ್ತೀ ರೇಣುಕಾಖ್ಯಗಣೇಶ್ವರಃ ॥

ಕೇನಚಿತ್ಕಾರಣೇನಾಹಂ ಶಿವಲಿಂಗಾದಿಹಾಭವಂ
ನಾಮ್ನಾ ರೇಣುಕಸಿದ್ಧೋsಹಂ ಸಿದ್ಧಸಂತಾನನಾಯಕಃ ॥

ಸ್ವಚ್ಛಂದಚಾರೀ ಲೋಕೇsಸ್ಮಿನ್ ಶಿವಸಿದ್ಧಾಂತಪಾಲಕಃ
ಖಂಡಯನ್ ಜೈನಚಾರ್ವಾಕಬೌದ್ಧಾದೀನಾಂ ದುರಾಗಮಾನ್ ॥

ಇತ್ಯುಕ್ತ್ವಾ ಪಶ್ಯತಾಂ ತೇಷಾಂ ವಿಸ್ಮಯಸ್ಥಿರಚಕ್ಷುಷಾಂ
ಉತ್ಥಾಯ ವ್ಯೋಮಮಾರ್ಗೇಣ ಮಲಯಾದ್ರಿಮುಪಾಗಮತ್ ॥

ಶಿವಲಿಂಗದತ್ತಣಿಂದುದ್ಭವಿಸಿದ ರೇಣುಕಾಚಾರ್ಯನಂ ಸಕಲಜನರೂ ನೀನಾರಯ್ಯ ಎಂದು ಕೇಳಿದರು. ಇತಿ– ಹೀಗೆಂದು ಆಶ್ಚರ್ಯಯುಕ್ತಮಾದ ಮನಸ್ಸುಳ್ಳ ಜನರಿಂ ಕೇಳಲ್ಪಟ್ಟ ಶಿವಾದ್ವೈತಜ್ಞಾನದಿಂದುಂಟಾದ ಪರಮಾನಂದ ಪರಾಯಣನಾದ ಮಹಾಯೋಗೀಶ್ವರನು ತಾನು ಶಿವನ ದಕ್ಷಿಣಭಾಗದಲ್ಲಿರುವ ರೇಣುಕನೆಂಬ ಗಣೇಶ್ವರನು. ಈ ಲೋಕದಲ್ಲಿ ಈ ಹೆಸರಿನಿಂದ ಸಿದ್ಧ ಸಂತಾನಕ್ಕೆ ನಾಯಕನಾದ ರೇಣುಕಸಿದ್ಧನು ತಡೆಯಿಲ್ಲದೆ ಸಂಚರಿಸುವಾತನು. ಜೈನ ಚಾರ್ವಾಕ ಬೌದ್ಧಾದಿಗಳ ಕುಶಾಸ್ತ್ರಂಗಳಂ ಖಂಡಿಸುವಾತನಾಗಿ ಶಿವಸಿದ್ಧಾಂತವ ಸ್ಥಾಪಿಸುವಾತನು. ಒಂದಾನೊಂದು ಕಾರಣದಿಂದ ಶಿವಲಿಂಗದಿಂದುದ್ಭವಿಸಿದೆನೆಂದು ಪ್ರತ್ಯುತ್ತರಮಂ ಕೊಟ್ಟನು. ಈ ಪ್ರಕಾರದಿಂ ಉತ್ತರಮಂ ಕೊಟ್ಟು ಆಶ್ಚರ್ಯದಿಂ ಸ್ಥಿರವಾದ ನೇತ್ರಂಗಳುಳ್ಳವರಾಗಿ ನೋಡುವಂಥಾ ಆ ಜನರ ಮುಂದಣಿಂದೆದ್ದು ಆಕಾಶಮಾರ್ಗದಿಂದ ಮಲಯಾಚಲವನ್ನೈದಿದನೆಂಬುದರ್ಥಂ ॥೧೩॥ ಆಮೇಲೆ ಮೂರು ಸೂತ್ರಂಗಳಿಂ ಮಲಯಾದ್ರಿಯಂ ವರ್ಣಿಸುತಿರ್ದಪಂ

ನವಚಂದನಕಾಂತಾರಕಂದಲನ್ಮಂದಮಾರುತಂ
ಅಭಂಗುರಭುಜಂಗಸ್ತ್ರೀಸಂಗೀತರಸಸಂಕುಲಮ್ ॥

ಕರಿಪೋತಕರಾಕೃಷ್ಟಸ್ಫುರದೇಲಾತಿವಾಸಿತಂ
ವರಾಹದಂಷ್ಟ್ರಿಕಾಧ್ವಸ್ತಮುಸ್ತಾಸುರಭಿಕಂದರಮ್ ॥

ಪಟೀರದಲಪರ್ಯಂಕಪ್ರಸುಪ್ತವ್ಯಾಧದಂಪತಿಂ
ಮಾಧವೀಮಲ್ಲಿಕಾಜಾತಿಮಂಜರೀ ರೇಣುರಂಜಿತಮ್ ॥

ನೂತನವಾದ ಶ್ರೀಚಂದನವನವ ಭೇದಿಸುವಲ್ಲಿ ಸಮರ್ಥನಾದ ಮಂದಮಾರುತನುಳ್ಳ ಅವಿರಳಮಾದ ನಾಗಕನ್ನಿಕೆಯರ ಸಂಗೀತ ರಸದಿಂ ವ್ಯಾಪ್ತಮಾದ ಆನೆಮರಿಗಳ ಸೊಂಡಿಲಂ ಸೆಳೆದು ಹರಿಯಲ್ಪಟ್ಟ ಏಲಕ್ಕಿ ಬಳ್ಳಿಗಳ ಸುಗಂಧದಿಂ ಪರಿಮಳಿಸುತ್ತಿದ್ದ ಕಾಡಹಂದಿಗಳ ಕೋರದಾಡೆಯಿಂ ಕೀಳಲ್ಪಟ್ಟ ಭದ್ರಮುಸ್ತೆಯಿಂ ಪರಿಮಳಿಸುತ್ತಿದ್ದ ಗುಹೆಗಳುಳ್ಳ ಕಪ್ಪುರ ವಾಳೆಯ ಎಲೆಯೆಂಬ ಮಂಚದಲ್ಲಿ ಮಲಗಿದ್ದ ಕಿರಾತಸ್ತ್ರೀಪುರುಷರುಳ್ಳ ಸೇವಂತಿಗೆ, ಜಾಜಿ, ಮಲ್ಲಿಗೆ ಮುಂತಾದ ಕುಸುಮಂಗಳ ಗೊಂಚಲಿನ ಪರಾಗದಿಂದೊಪ್ಪಲ್ಪಟ್ಟಾ ಮಲಯಾಚಲವನ್ನೈದಿದನೆಂಬುದು ಪೂರ್ವೋಕ್ತ ಕ್ರಿಯೆಯೊಡನೆ ಸಂಬಂಧವು ॥೧೬॥ ಆಮೇಲಾ ಮಲಯಾಚಲದಲ್ಲಿ ಅಗಸ್ತ್ಯಾಶ್ರಮವನೆಂಟು ಸೂತ್ರಂಗಳಿಂ ವರ್ಣಿಸುತಿರ್ದಪಂ.

ತತ್ರ ಕುತ್ರಚಿದಾಭೋಗಸರ್ವರ್ತುಕುಸುಮದ್ರುಮೇ
ಅಪಶ್ಯದಾಶ್ರಮಂ ದಿವ್ಯಮಗಸ್ತ್ಯಸ್ಯಮಹಾಮುನೇಃ ॥

ಆ ಭೋಗಸರ್ವರ್ತುಸಂಪೂರ್ಣಮಾಗಿ ವಸಂತಾದಿ ಸಕಲಋತುಗಳಲ್ಲಿಯೂ ಕುಸುಮಿಸುವ ವೃಕ್ಷಂಗಳುಳ್ಳ, ತತ್ರ – ಆ ಮಲಯಾಚಲದಲ್ಲಿ ಒಂದಾನೊಂದು ಪ್ರದೇಶದಲ್ಲಿ ದಿವ್ಯಂ – ಮನೋಹರಮಾದ ಮಹಾಮುನಿಯಾದ ಅಗಸ್ತ್ಯ ನಾಶ್ರಮವಂ ಕಂಡನೆಂಬುದರ್ಥಂ ॥೧೭॥ ಅದೆಂಥಾದೆಂದಡೆ

ಮಂದಾರಚಂದನಪ್ರಾಯೈರ್ಮಂಡಿತಂ ತರುಮಂಡಲೈಃ
ಶಾಖಾಶಿಖರಸಂಲೀನತಾರಕಾಗಣಕೋರಕೈಃ ॥

ಕೊಂಬೆಗಳ ತುದಿಯ ಮುಟ್ಟುತ್ತಿರುವ ನಕ್ಷತ್ರಂಗಳ ಸಮೂಹವೆಂಬ ಹೂವಿನ ಮೊಗ್ಗೆಗಳುಳ್ಳ ಕಲ್ಪವೃಕ್ಷ ಶ್ರೀ ಚಂದನ ಮೊದಲಾದ ವೃಕ್ಷಗಳಿಂ ಶೋಭಿಸುವದೆಂಬುದರ್ಥಂ ॥೧೮॥ ಆಮೇಲೆ ಮತ್ತೆಯಂಥಾದೆಂದರೆ ಪೇಳುತಿರ್ದಪಂ

ಮುನಿಕನ್ಯಾಕರಾನೀತಕಲಶಾಂಬುವಿವರ್ಧಿತೈಃ
ಆಲವಾಲಜಲಾಸ್ವಾದಮೋದಮಾನಮೃಗೀಗಣೈಃ ॥

ಹೇಮಾರವಿಂದನಿಷ್ಯಂದಮಕರಂದಸುಗಂಧಿಭಿಃ
ಮರಾಲಾಲಾಪವಾಚಾಲವೀಚೀಮಾಲಾಮನೋಹರೈಃ ॥

ಇಂದೀವರಜ್ಯೋತಿರಂಧೀಕೃತಹರಿನ್ಮುಖೈಃ
ಲೋಪಾಮುದ್ರಾಪದನ್ಯಾಸಚರಿತಾರ್ಥತಟಾಂಕಿತೈಃ ॥

ಹಾರನೀಹಾರಕರ್ಪೂರಹರಹಾಸಾಮಲೋದಕೈಃ
ನಿತ್ಯನೈಮಿತ್ತಿಕಸ್ನಾನನಿಯಾಮಾರ್ಥೈಸ್ತಪಸ್ವಿನಾಮ್

ಪ್ರಕೃಷ್ಟಮಣಿಸೋಪಾನೈಃ ಪರಿವೀತಂ ಸರೋವರೈಃ
ವಿಮುಕ್ತಸತ್ವವೈರಸ್ಯಂ ಬ್ರಹ್ಮಲೋಕಮಿವಾಪರಮ್

ಹೂಯಮಾನಾಗ್ನಿಸಂತಾನಧೂಮ ಗಂಧಿಮಹಾಸ್ಥಲಂ
ಶುಕಸಂಸತ್ಸಮಾರಬ್ಧಶ್ರುತಿಶಾಸ್ತ್ರೋಪಬೃಹ್ಮಣಮ್ ॥

ಮುನಿಕನ್ನಿಕೆಯರ ಕರಗಳಿಂ ತರಲುಪಟ್ಟ ಕಲಶೋದಕ ಪೇಚಲ್ಪಟ್ಟ ಮೂಲದ ಕಟ್ಟೆಯೊಳಗಣ ಜಲಾಸ್ವಾದನದಿಂ ಸಂತೋಷಿಸುತ್ತಿದ್ದ ಮೃಗಸಮೂಹಮುಳ್ಳ ಸುವರ್ಣಮಯಮಾದ ಕಮಲಂಗಳಿಂ ಸ್ರವಿಸುವ ಕುಸುಮರಸದ ಪರಿಮಳಮುಳ್ಳ ಹಂಸಪಕ್ಷಿಗಳ ಧ್ವನಿಯಿಂ ದನಿ ಮಾಡುವಂತಿರುವ ತರಂಗಮಾಲೆಗಳಿಂ ಮನೋಹರಮಾದ ಕನ್ನೈದಿಲೆಗಳ ಕಾಂತಿಯಿಂ ಕಪ್ಪಾಗಿ ಮಾಡಲ್ಪಟ್ಟ ದಿಙ್ಮುಖಂಗಳುಳ್ಳ ಲೋಪಾಮುದ್ರಪದ ಸ್ಥಾಪನದಿಂ ತಿರಿದ ಪ್ರಯೋಜನಮುಳ್ಳ ತೀರದಿಂ ಚಿಹ್ನಿತಮಾದ ತಪಸ್ವಿಗಳಾದವರ ನಿತ್ಯನೈಮಿತ್ತಿಕಸ್ನಾನವೆ ನಿಯಮದಿಂ ಪ್ರಯೋಜನವಾಗಿ ಉಳ್ಳ ಮುತ್ತಿನಹಾರ ಮಂಜು ಕರ್ಪೂರ ಹರನನಗೆಗಳಂತೆ ನಿರ್ಮಲಮಾದ ಉದಕಂಗಳುಳ್ಳ ಉತ್ಕೃಷ್ಟಮಣಿಮಯವಾದ ಪಾವಟಿಗೆಗಳುಳ್ಳ ಸರೋವರಗಳಿಂದಾವೃತಮಾದ ಬಿಡಲುಪಟ್ಟ ಗೋ ವ್ಯಾಘ್ರಾದಿ ಪ್ರಾಣಿಗಳ ವಿರೋಧಮುಳ್ಳ ಎರಡನೇ ಬ್ರಹ್ಮಲೋಕದಂತಿರುವ ಪವನಾಧಾರಮಾದ ಅಗ್ನಿಸಂತಾನ ದಿಂದುಂಟಾದ ಧೂಮಗಂಧವುಳ್ಳ ಶುಕನ ಸಭೆಯಂತೆ ಆರಂಭಿಸಲ್ಪಟ್ಟ ಶ್ರುತಿಶಾಸ್ತ್ರ ವ್ಯಾಖ್ಯಾನವುಳ್ಳ, ಮಹಾಸ್ಥಲಂ – ಶ್ರೇಷ್ಠಮಾದ ಸ್ಥಲಮುಳ್ಳ ಅಗಸ್ತ್ಯಾಶ್ರಮಮಂ ಕಂಡಪನೆಂದು ಪೂರ್ವಕ್ರಿಯೆಯೊಡನೆ ಸಂಬಂಧವು ॥೨೪॥ ಆಮೇಲೆ ಒಂಬತ್ತು ಸೂತ್ರಂಗಳಿಂದ ಅಗಸ್ತ್ಯ ಮುನಿಯಂ ಕಂಡು ಪೇಳುತಿರ್ದಪಂ

ತಸ್ಯ ಮಧ್ಯೇ ಸಮಾಸೀನಂ ಮೂಲೇ ಚಂದನಭೂರುಹಃ
ಸುಕುಮಾರದಲಚ್ಛಾಯಾದೂರಿತಾದಿತ್ಯತೇಜಸಃ ॥

ತಟಿತ್ಪಿಂಗಜಟಾಭಾರೈಸ್ತ್ರಿಪುಂಡ್ರಾಂಕಿತಮಸ್ತಕಃ
ಭಸ್ಮೋದ್ಧೂಳಿತಸರ್ವಾಂಗೈಃ ಸ್ಫುರದ್ರುದ್ರಾಕ್ಷಭೂಷಣೈಃ ॥

ನವವಲ್ಕಲವಾಸೋಭಿರ್ನಾನಾನಿಯಮಧಾರಿಭಿಃ
ಪರಿವೀತಂ ಮುನಿಗಣೈಃ ಪ್ರಮಥೈರಿವ ಶಂಕರಮ್ ॥

ಸಮುಜ್ವಲಜಟಾಜಾಲೈಃ ತಪಃ ಪಾದಪಪಲ್ಲವೈಃ
ಸ್ಫುರತ್ಸೌದಾಮಿನೀಕಲ್ಪೈರ್ಜ್ವಾಲಾಂಜಾಲೈರಿವಾನಲಮ್ ॥

ವಿಶುದ್ಧಭಸ್ಮಕೃತಯಾ ತ್ರಿಪುಂಡ್ರಾಂಕಿತರೇಖಯಾ
ತ್ರಿಸ್ರೋತಸೇವ ಸಂಬದ್ಧಶಿಲಾಭಾಗಂ ಹಿಮಾಚಲಮ್ ॥

ಭಸ್ಮಾಲಂಕೃತಸರ್ವಾಂಗಂ ಶಶಾಂಕಮಿವ ಭೂಗತಂ
ವಸಾನಂ ವಲ್ಕಲಂ ನವ್ಯಂ ಬಾಲಾತಪಸಮಪ್ರಭಮ್ ॥

ಬಡಬಾಗ್ನಿಶಿಖಾಜಾಲಸಮಾಲೀಢಮಿವಾರ್ಣವಂ
ಸರ್ವಾಸಾಮಪಿ ವಿದ್ಯಾನಾಂ ಸಮುದಾಯನಿಕೇತನಮ್ ॥

ನ್ಯಕ್ಕೃತಪ್ರಾಕೃತಾಹಂತಂ ನಿರೂಢಶಿವಭಾವನಂ
ತೃಣೀಕೃತಜಗಜ್ಜಾಲಂ ಸಿದ್ಧೀನಾಮುದಯಸ್ಥಲಮ್ ॥

ಮೋಹಾಂಧಕಾರತಪನಂ ಮೂಲಬೋಧಮಹೀರುಹಂ
ದದರ್ಶ ಸ ಮಹಾಯೋಗೀ ಮುನಿಂ ಕಲಶಸಂಭವಮ್ ॥

ತಸ್ಯ ಮಧ್ಯೇ – ಆ ಆಶ್ರಮದ ಮಧ್ಯದಲ್ಲಿ ಕೋಮಲವಾದ ಎಲೆಗಳ ನೆಳಲಿನಿಂದ ದೂರೀಕರಿಸಲ್ಪಟ್ಟ ಸೂರ್ಯನ ತೇಜಸ್ಸುಳ್ಳ ಶ್ರೀಚಂದನವೃಕ್ಷದ ಮೂಲದಲ್ಲಿ ಮಿಂಚಿನಂತೆ ಪಿಂಗಳವರ್ಣಮಾದ ಜಟಾಭಾಗಗಳುಳ್ಳ ತ್ರಿಪುಂಡ್ರದಿಂ ಚಿಹ್ನಿತಮಾದ ಮಸ್ತಕಂಗಳುಳ್ಳ ಭಸ್ಮದಿಂ ಧೂಳಿಸಲ್ಪಟ್ಟ ಸರ್ವಾಂಗಮುಳ್ಳ ಪ್ರಕಾಶಿಸುತಿರ್ದ ರುದ್ರಾಕ್ಷಾಭರಣಮುಳ್ಳ ನೂತನಮಾದ ನಾರುವಸ್ತ್ರಂಗಳುಳ್ಳ ನಾನಾ ನಿಯಮಧಾರಿಗಳಾದ ಮುನಿಸಮೂಹಗಳಿಂದ ಪ್ರಮಥರಿಂ ಶಂಕರನಂತೆ ಆವರಿಸಲ್ಪಟ್ಟ ಶಿವನಿಗೆ ಸಮರ್ಪಿಸಿದ ತಪಸಿವೃಕ್ಷಗಳ ಚಿಗುರುಗಳಿಂದ ಪ್ರಕಾಶಿಸುತ್ತಿದ್ದ ಮಿಂಚಿಗೆ ಸಮಾನವಾದ ಜಡೆಗಳ ಭಾರದಿಂದ ಜ್ವಾಲಾಸಮೂಹದಿಂ ವಹ್ನಿಯಂತೆ ಪ್ರಕಾಶಿಸುತ್ತಿದ್ದ ಸಿತಭಸ್ಮದಿಂ ಮಾಡಲ್ಪಟ್ಟ ತ್ರಿಪುಂಡ್ರದಿಂ ಚಿಹ್ನಿತಮಾದ ರೇಖೆಗಳಿಂ ಮೂರುಭಾಗವಾಗಿ ಪ್ರವಹಿಸುವ ಗಂಗೆಯಿಂ ರಚಿತಮಾದ ಶಿಲಾಭಾಗಮುಳ್ಳ ಹಿಮಾಚಲದಂತೆ ಒಪ್ಪುತ್ತಿರುವ ಭೂಲೋಕವನ್ನೈದಿದ ಚಂದ್ರನಂತೆ ಭಸ್ಮದಿಂದ ಧೂಳಿಸಲ್ಪಟ್ಟ ಸರ್ವಾಂಗಮುಳ್ಳ ಬಾಲಸೂರ್ಯನ ಕಾಂತಿಗೆ ಸಮಾನವಾದ ನೂತನ ನಾರುವಸ್ತ್ರ ಧರಿಸಿದ ಕಾರಣದಿಂ ವಡಬಾಗ್ನಿಶಿಖಾಸಮೂಹದಿಂ ವ್ಯಾಪಿಸಲ್ಪಟ್ಟ ಸಮೂಹನಂತೆ ಶೋಭಿಸುವ ಸಕಲ ವಿದ್ಯೆಗಳಿಗೂ ಸಮುದಾಯಸ್ಥಾನಮಾದ ನೆಗ್ಗೊತ್ತಲ್ಪಟ್ಟ ಪ್ರಕೃತಿವಿಕಾರಮಾದ ಶರೀರಾದ್ಯಹಂಕಾರಮುಳ್ಳ ದೃಢವಾದ ಶಿವೋಹಂಭಾವವುಳ್ಳ ತೃಣೀಕರಿಸಲ್ಪಟ್ಟ ವಿಶ್ವಸಮೂಹಮುಳ್ಳ ಅಣಿಮಾದಿಸಿದ್ಧಿಗಳಿಗೆ ಆವಿರ್ಭಾವ ಸ್ಥಾನಮಾದ ಅಜ್ಞಾನವೆಂಬ ಅಂಧಕಾರಕ್ಕೆ ಸೂರ್ಯನಾದ ಸ್ವಸ್ವರೂಪಜ್ಞಾನಕ್ಕೆ ಕಲ್ಪವೃಕ್ಷಮಾದ ಅಗಸ್ತ್ಯ ಮುನಿಯಂ ಮಹಾಶಿವಯೋಗಿಯಾದ ರೇಣುಕಾಚಾರ್ಯಂ ಕಂಡನೆಂಬುದರ್ಥಂ ॥೩೩॥ ಆಮೇಲೆ ತನ್ನ ಆಶ್ರಮಕ್ಕೆ ಬಂದ ರೇಣುಕಾಚಾರ್ಯನ ಅಗಸ್ತ್ಯಮುನಿ ಪೂಜಿಸಿದನೆಂದು ನಾಲ್ಕು ಸೂತ್ರಂಗಳಿಂ ಪೇಳುತಿರ್ದಪಂ

ತಮಾಗತಂ ಮಹಾಸಿದ್ಧಂ ಸಮೀಕ್ಷ್ಯ ಕಲಶೋದ್ಭವಃ
ಗಣೇಂದ್ರಂ ರೇಣುಕಾಭಿಖ್ಯಂ ವಿವೇದ ಜ್ಞಾನಚಕ್ಷುಷಾ ॥

ತಸ್ಯಾನುಭಾವಂ ವಿಜ್ಞಾಯ ಸಹಸೈವ ಸಮುತ್ಥಿತಃ
ಸಂಪ್ರಣಮ್ಯ ಸಮಾನೀಯ ಸ್ವಾಸನೇ ತಂ ನ್ಯವೇಶಯತ್ ॥

ಕಲಶೋದ್ಭವಃ – ಅಗಸ್ತ್ಯನೂ ಆ ಬಂದಂಥ ಮಹಾಸಿದ್ಧನಂ ನೋಡಿ ಜ್ಞಾನದೃಷ್ಟಿಯಿಂದ ರೇಣುಕನೆಂಬ ಪೆಸರನುಳ್ಳ ಗಣೇಶ್ವರನನಾಗಿ ತಿಳಿದನು. ಆಮೇಲೆ, ಸಃ – ಆ ಮುನೀಶ್ವರನು ಆತನ ಸಾಮರ್ಥ್ಯಮಂ ತಿಳಿದು ಶೀಘ್ರದಿಂದೆದ್ದಾತನಾಗಿ ನಮಸ್ಕರಿಸಿ ಕರೆತಂದು ತನ್ನ ಆಸನದಲ್ಲಿ ಕುಳ್ಳಿರಿಸಿದನೆಂಬುದರ್ಥಂ ॥೩೫॥ ಆಮೇಲೆ

ಲೋಪಾಮುದ್ರಾಕರಾನೀತೈರುದಕೈರತಿಪಾವನೈಃ
ಪಾದೌ ಪ್ರಕ್ಷಾಲಯಾಮಾಸ ಸ ತಸ್ಯ ಶಿವಯೋಗಿನಃ ॥

ಸಂಪೂಜ್ಯ ತಂ ಯಥಾಶಾಸ್ತ್ರಂ ತನ್ನಿಯೋಗಪುರಸ್ಸರಂ
ಮುನಿರ್ವಿನಯಸಂಪನ್ನೋನಿಷಸಾದಾಸನಾಂತರೇ ॥

ಆ ಮುನೀಶ್ವರನು ಲೋಪಾಮುದ್ರ ಹಸ್ತದಿಂ ತರಲ್ಪಟ್ಟ ಪವಿತ್ರವಾದ ಜಲಗಳಿಂದ ಆ ಶಿವಯೋಗೀಶ್ವರನ ಪಾದಗಳ ತೊಳೆದನು. ಆಮೇಲೆ ಶಾಸ್ತ್ರೋಕ್ತ ಪ್ರಕಾರದಿಂದ ಸಿದ್ಧನಂ ಪೂಜಿಸಿ ಆತನ ಅಪ್ಪಣೆಯಿಂದ ವಿನಯವುಳ್ಳ ಮುನೀಶ್ವರನು ಮತ್ತೊಂದಾಸನದಲ್ಲಿ ಕುಳಿತನೆಂಬುದರ್ಥಂ ॥೩೭॥ ಆಮೇಲೆ ಎಂಟುಸೂತ್ರಂಗಳಿಂದ ರೇಣುಕಾಚಾರ್ಯನಾ ಮುನೀಶ್ವರನಂ ಕುಶಲಪ್ರಶ್ನ ಪೂರ್ವಕವಾಗಿ ಸ್ತುತಿ ಮಾಡುತಿರ್ದಪಂ

ಸಮಾಸೀನಂ ಮುನಿವರಂ ಸರ್ವತೇಜಸ್ವಿನಾಂ ವಿಭುಂ
ಉವಾಚ ಶಾಂತಯಾ ವಾಚಾ ರೇವಣಸ್ಸಿದ್ಧಶೇಖರಃ ॥

ಸಿದ್ಧರಿಗೆ ಶ್ರೇಷ್ಠನಾದ ರೇವಣಾಚಾರ್ಯನು ಮೃದುವಾದ ವಾಕ್ಯದಿಂದ ಸರ್ವ ತೇಜಸ್ವಿಗಳಿಗೂ ವ್ಯಾಪಕನಾಗಿ ಪೀಠಾಂತರದಲ್ಲಿ ಕುಳ್ಳಿರ್ದ ಮುನಿಶ್ರೇಷ್ಠನಂ ಕುರಿತು ನುಡಿದ ನೆಂಬುದರ್ಥಂ॥೩೮॥

ನಿರ್ವಿಘ್ನಂ ವರ್ತಸೇ ಕಿಂ ನು ನಿತ್ಯಾ ತೇ ನಿಯಮಕ್ರಿಯಾ
ಅಥವ್ಯಾಗಸ್ತ್ಯ ತೇಜಸ್ವಿನ್ ಕುತಸ್ಸ್ಯುಸ್ತೇಂತರಾಯಕಾಃ ॥

ತೇಜಸ್ವಿಯಾದ ಭೋ ಅಗಸ್ತ್ಯನೇ, ಅಥ – ಮಾಂಗಲ್ಯದಿಂದ ವಿಘ್ನವಿಲ್ಲದೆ ಇರುತ್ತಿದ್ದೀಯಾ ಏನು. ನಿನ್ನ ನಿಯಮಕ್ರಿಯೆಗಳು ವಿಚ್ಛೇದವಿಲ್ಲವಲ್ಲ. ನಿನಗೆ ವಿಘ್ನಕಾರಿಗಳು ಯಾವ ಕಾರಣದಿಂದುಟಾದಾರು ಉಂಟಾಗರೆಂಬುದರ್ಥಂ ॥೩೯॥ ಆಮೇಲೀತನ ಸಾಮರ್ಥ್ಯಮಂ ವರ್ಣಿಸುತಿರ್ದಪಂ.

ವಿಂಧ್ಯೋ ನಿರುದ್ಧ್ಯೋ ಭವತಾ ವಿಶ್ವೋಲ್ಲಂಘನವಿಭ್ರಮಃ
ನಹುಷೋ ರೋಷಲೇಶಾತ್ತೇ ಸದ್ಯಸ್ಸರ್ಪತ್ವಮಾಗತಃ ॥

ಮಹಾಮೇರು ಮೊದಲಾದ ಪರ್ವತಂಗಳ ಮೀರಿದ ವಿಲಾಸವುಳ್ಳ ವಿಂಧ್ಯಾದ್ರಿಯು ನಿನ್ನಿಂದ ಭೂಮಿಯಲ್ಲಿ ಕೆಡಹಲ್ಪಟ್ಟನು. ನಿನ್ನ ಕ್ರೋಧಲೇಶದಿಂದ ನಹುಷಮಹಾರಾಯನು ಆ ಕ್ಷಣದಲ್ಲಿಯೆ ಸರ್ಪತ್ವವನ್ನೈದಿದನೆಂಬುದರ್ಥಂ ॥೪೦॥

ಆಚಾಂತೇ ಭವತಾ ಪೂರ್ವಂ ಪಂಕಶೇಷಾಃ ಪಯೋದಯಃ
ಜೀರ್ಣಸ್ತೇ ಜಾಠರೇ ವಹ್ನೌ ದೃಪ್ತೋ ವಾತಾಪಿದಾನವಃ ॥

ಪೂರ್ವದಲ್ಲಿ ನಿನ್ನಿಂದ ಆಚಮನವು ಮಾಡುತ್ತಿರಲಾಗಿ ಸಮುದ್ರಂಗಳು ಕೆಸರು ಮಾತ್ರದಿಂದ ಉಳಿದಂಥಾದವು. ನಿನ್ನ ಜಠರಾಗ್ನಿಯಲ್ಲಿ ಕೊಬ್ಬಿದಂಥಾ ಒಬ್ಬಾನೊಬ್ಬ ವಾತಾಪಿ ಎಂಬ ದೈತ್ಯನು ಜೀರ್ಣನಾಗಿ ಹೋದನೆಂಬುದರ್ಥಂ ॥೪೧॥

ಏವಂ ವಿಧಾನಾಂ ಚಿತ್ರಾಣಾಂ ಸರ್ವಲೋಕಾತಿಶಾಯಿನಾಂ
ಕೃತ್ಯಾನಾಂ ತು ಭವಾನ್ಕರ್ತಾ ಕಸ್ತೇSಗಸ್ತ್ಯ ಸಮಪ್ರಭಃ ॥

ಸಕಲರಿಗೂ ಆಶ್ಚರ್ಯಕರಮಾದ ಈ ಪ್ರಕಾರಮಾದ ವಿಚಿತ್ರಕರ್ಮಂಗಳಿಗೆ ನೀನು ಕರ್ತೃವಾದವನು. ಅದು ಕಾರಣಮಾಗಿ ಭೋ ಅಗಸ್ತ್ಯನೆ ನಿನಗೆ ಸಮಾನವಾದ ಪ್ರಭಾವವುಳ್ಳವನಾರು ಯಾವವರೂ ಇಲ್ಲವೆಂಬುದರ್ಥಂ ॥೪೨॥ ಆಮೇಲೆ ಪ್ರಕೃತಮಾದ ಅರ್ಥಕ್ಕನುಸಾರಮಾಗಿ ಸ್ತುತಿ ಮಾಡುತಿರ್ದಪಂ.

ಶಿವಾದ್ವೈತಪರಾನಂದಪ್ರಕಾಶನಪರಾಯಣಂ
ಭವಂತಮೇಕಂ ಶಂಸಂತಿ ಪ್ರಕೃತ್ಯಾಸಂಗವರ್ಜಿತಮ್ ॥

ಈ ಲೋಕದಲ್ಲಿ ಜನರು ನಿನ್ನನೊರ್ವರನೆ ಶಿವಾದ್ವೈತ ಜ್ಞಾನದಿಂದುಂಟಾದ ಪರಮಾನಂದ ಪ್ರಕಾಶನ ತತ್ಪರನಾಗಿ ಅಜ್ಞಾನಸಂಗದೋಷರಹಿತನಾದವನಾಗಿ ನುಡಿಯುತ್ತಿರ್ದನೆಂಬುದರ್ಥಂ ॥೪೩॥ ಅದೆಂತೆಂದಡೆ ಪೇಳುತಿರ್ದಪಂ

ಪುರಾ ಹೈಮವತೀಸೂನುರವದತ್ತೇ ಷಡಾನನಃ
ಶಿವಧರ್ಮೋತ್ತರಂ ನಾಮ ಶಾಸ್ತ್ರಮೀಶ್ವರಭಾಷಿತಮ್ ॥

ಪೂರ್ವದಲ್ಲಿ ಪಾರ್ವತಿಕುಮಾರನಾದ ಷಣ್ಮುಖಸ್ವಾಮಿಯು ನಿನಗೋಸ್ಕರ ತನಗೆ ಶಿವನಿಂದುಪದಿಷ್ಟಿತಮಾದ ಶಿವಧರ್ಮೋತ್ತರವೆಂಬ ಪೆಸರುಳ್ಳ ಶಾಸ್ತ್ರಮಂ ಪೇಳಿದನೆಂಬುದರ್ಥಂ ॥೪೪॥

ಭಕ್ತಿಃ ಶೈವೀ ಮಹಾಘೋರಸಂಸಾರಭಯಹಾರಿಣೀ
ತ್ವಯಾ ರಾಜನ್ವತೀ ಲೋಕೇ ಜಾತಾಗಸ್ತ್ಯ ಮಹಾಮುನೇ ॥

ಅಹೋ ಮಹಾಮುನಿಯಾದ ಅಗಸ್ತ್ಯನೆ ಸ್ಕಂದೋಪದೇಶ ಮಹಿಮೆಯಿಂದ ಅತಿ ಕ್ರೂರವಾದ ಸಂಸಾರಭಯವನಪಹರಿಸುವಂಥಾ ಶಿವಭಕ್ತಿಯು ನಿನ್ನಿಂದ ಲೋಕದಲ್ಲಿ ಪ್ರಕಾಶಮುಳ್ಳದಾಯಿತೆಂಬುದರ್ಥಂ ॥೪೫॥ ಆಮೇಲೆ ಶಿವಯೋಗಿ ನುಡಿಯುತಿರ್ದಪಂ.

ಇತಿ ತಸ್ಯ ವಚಶ್ಶ್ರುತ್ವಾ ಸಿದ್ಧಸ್ಯ ಮುನಿಪುಂಗವಃ
ಗಂಭೀರಗುಣಯಾ ವಾಚಾ ಬಭಾಷೇ ಭಕ್ತಿಪೂರ್ವಕಮ್ ॥

ಮುನಿಶ್ರೇಷ್ಠನಾದ ಭೋ ಅಗಸ್ತ್ಯನು ಹೀಗೆಂಬ ರೇವಣಸಿದ್ಧೇಶ್ವರನ ವಾಕ್ಯಮಂ ಕೇಳಿ ಭಕ್ತಿ ಪೂರ್ವಕನಾಗಿ ಗಂಭೀರಗುಣಯುಕ್ತಮಾದ ವಾಕ್ಯದಿಂದ ನುಡಿದನೆಂಬುದರ್ಥಂ. ಅನಂತರದಲ್ಲಿ ಅಗಸ್ತ್ಯಂ ತನಗೆ ರೇವಣಸಿದ್ಧನ ದರ್ಶನದಿಂದಾದ ಸೌಭಾಗ್ಯವ ಹತ್ತು ಸೂತ್ರಂಗಳಿಂದ ಪ್ರಕಾಶಿಸುತಿರ್ದಪಂ ॥೪೬॥

ಅಹಮೇವ ಮುನೀಂದ್ರಾಣಾಂ ಲಾಲನೀಯೋSಸ್ಮಿ ಸರ್ವದಾ
ಭವದಾಗಮಸಂಪತ್ತಿರ್ಮಾಂ ವಿನಾ ಕಸ್ಯ ಸಂಭವೇತ್ ॥

ನಿನ್ನ ಆಗಮನವುಂಟಹಣವು ನನ್ನ ಹೊರತಾಗಿ ಯಾರಿಗೂ ಉಂಟಾಗದೆಂಬುದರಿಂದ ಎಲ್ಲಾಗಳು ಮುನೀಂದ್ರರ ಮಧ್ಯದಲ್ಲಿ ನಾನೆ ಕೊಂಡಾಡಲು ಯೋಗ್ಯನಹನೆಂಬುದರ್ಥಂ ॥೪೭॥

ಸ್ಥಿರಮದ್ಯ ಶಿವಜ್ಞಾನಂ ಸ್ಥಿರಾ ಮೇ ತಾಪಸಕ್ರಿಯಾ
ಭವದ್ದರ್ಶನಪುಣ್ಯೇನ ಸ್ಥಿರಾ ಮೇ ಮುನಿರಾಜತಾ ॥

ನನ್ನ ಶಿವಜ್ಞಾನ ತಪಃಕ್ರಿಯೆಯು ಮುನಿರಾಜತ್ವ ಇವು ಮೂರು ಈ ಹೊತ್ತು ನಿಮ್ಮ ದರ್ಶನದಿಂದುಂಟಾದ ಪುಣ್ಯದಿಂ ಸ್ಥಿರವಾಯಿತ್ತೆಂಬುದರ್ಥಂ ॥೪೮॥

ಸಂಸಾರಸರ್ಪದಷ್ಟಾನಾಂ ಮೂರ್ಛಿತಾನಾಂ ಶರೀರಿಣಾಂ
ಕಟಾಕ್ಷಸ್ತವ ಕಲ್ಯಾಣಂ ಸಮುಜ್ಜೀವನಭೇಷಜಮ್ ॥

ಸಂಸಾರವೆಂಬ ಸರ್ಪ ಕಚ್ಚಿ ಮೂರ್ಛಿತರಾದ ಪ್ರಾಣಿಗಳಿಗೆ ನಿನ್ನ ಕಟಾಕ್ಷವು ಮಂಗಲಮಾದ ಸಂಜೀವನೌಷಧವೆಂಬುದರ್ಥಂ ॥೪೯॥

ಸಮಸ್ತಲೋಕಸಂದಾಹ ತಾಪತ್ರಯಮಹಾನಲಃ
ತ್ವತ್ಪದಾಂಬುಕಣಾಸ್ವಾದಾದುಪಶಾಮ್ಯತಿ ದೇಹಿನಾಮ್ ॥

ಸಕಲ ಲೋಕವನು ಸುಡುವಂಥಾ ತಾಪತ್ರಯವೆಂಬ ಮಹಾವಹ್ನಿಯು ಪ್ರಾಣಿಗಳಾದವರಿಗೆ ನಿನ್ನ ಪಾದೋದಕದ ಬಿಂದುಪಾನದಿಂದ ಶಾಂತವಾಗುತ್ತಿಹುದೆಂಬುದರ್ಥಂ ॥೫೦॥ ಹಾಗಾದರೆ ನಾನಾರೆಂಬಲ್ಲಿ ಪೇಳುತಿರ್ದಪಂ

ರೇಣುಕಂ ತ್ವಾಂ ವಿಜಾನಾಮಿ ಗಣನಾಥಂ ಶಿವಪ್ರಿಯಂ
ಅವತೀರ್ಣಮಿಮಾಂ ಭೂಮಿಂ ಮದನುಗ್ರಹಕಾಂಕ್ಷಯಾ ॥

ಎನಗನುಗ್ರಹವ ಮಾಡಬೇಕೆಂಬಿಚ್ಛೆಯಿಂದೀ ಭೂಲೋಕವ ಕುರಿತು ಬಂದ ಶಿವನಿಗೆ ಪ್ರಿಯನಾದ ರೇಣುಕನೆಂಬ ಗಣನಾಯಕನನಾಗಿ ನಿನ್ನ ಬಲ್ಲೆನೆಂಬುದರ್ಥಂ ॥೫೧॥ ನಿನಗೋಸ್ಕರ ನಾವೇಕೆ ಬರಬೇಕೆಂಬಲ್ಲಿ ಪೇಳುತಿರ್ದಪಂ

ಭವಾದೃಶಾನಾಂ ಸಿದ್ಧಾನಾಂ ಪ್ರಬೋಧಧ್ವಸ್ತಜನ್ಮನಾಂ
ಪ್ರವೃತ್ತಿರೀದೃಶೀ ಲೋಕೇ ಪರಾನುಗ್ರಹಕಾರಿಣೀ ॥

ಸುಜ್ಞಾನದಿಂ ಕೆಡಲ್ಪಟ್ಟ ಪಶ್ಚಿಮಜನ್ಮವುಳ್ಳ ನಿಮ್ಮಂಥಾ ಸಿದ್ಧರಿಗೆ ಈ ಲೋಕದಲ್ಲಿ ಸಂಚಾರವು ಈ ರೀತಿ ಪರೋಪಕಾರರೂಪಮಾದಂಥಾದೆ ಸರಿಯೆಂಬುದರ್ಥಂ ॥೫೨॥ ನಮ್ಮಿಂದ ನಿನಗೆ ಏನು ಉಪಕಾರವೆಂಬಲ್ಲಿ ಪೇಳುತಿರ್ದಪಂ.

ತ್ವನ್ಮುಖಾತ್ ಶ್ರೋತುಮಿಚ್ಛಾಮಿ ಸಿದ್ಧಾಂತಂ ಶ್ರುತಿಸಮ್ಮತಂ
ಸರ್ವಜ್ಞ ವದ ಮೇ ಸಾಕ್ಷಾಚ್ಛೈವಂ ಸರ್ವಾರ್ಥಸಾಧಕಮ್ ॥

ಸದ್ಯಸ್ಸಿದ್ಧಿಕರಂ ಪುಂಸಾಂ ಸರ್ವಯೋಗೀಂದ್ರಸೇವಿತಂ
ದುರಾಚಾರೈರನಾಘ್ರಾತಂ ಸ್ವೀಕೃತಂ ವೇದವೇದಿಭಿಃ ॥

ಶಿವಾತ್ಮೈಕ್ಯಮಹಾಬೋಧಸಂಪ್ರದಾಯಪ್ರವರ್ತಕಂ ॥

ದುರಾಚಾರರಾದ ಜೈನ ಬೌದ್ಧಾದಿಗಳಿಂದ ಅಂಗೀಕರಿಸದ ವೇದವಾದಿಗಳಿಂದ ಅಂಗೀಕರಿಸಿದರಿಂದಲೆ ವೇದಸಮ್ಮತಮಾದ ಪ್ರತ್ಯಕ್ಷಮಾದ ಶಿವಾತ್ಮೈಕ್ಯ ಜ್ಞಾನ ಸಂಪ್ರದಾಯ ಪ್ರವರ್ಧಕಮಾದ ಸಕಲ ಯೋಗಿಗಳಿಂದಲೂ ಸೇವಿತಮಾದ ತತ್‌ಕ್ಷಣದಲ್ಲಿಯೆ ಪುರುಷರಿಗೆ ಸರ್ವಾರ್ಥ ಸಾಧಕಮಾದ ಜೀವನ್ಮುಕ್ತಿಸಿದ್ಧಿಯನೀವ ಶಿವಸಿದ್ಧಾಂತಮಂ ನಿನ್ನ ಮುಖದಿಂ ಕೇಳಲಿಚ್ಛೈಸುತ್ತಿದ್ದೇನೆ. ಭೋ ಸರ್ವಜ್ಞನೆ ಎನಗೋಸ್ಕರ ಕೃಪೆಯಿಂ ನಿರೂಪಿಸೆಂಬುದರ್ಥಂ ॥೫೫॥ ಆಮೇಲೆ ನೀನು ಸಕಲ ಸಿದ್ಧಾಂತವನು ತಿಳಿದವನಷ್ಟೆ ನೂತನವಾಗಿ ನಾವು ಪೇಳುವುದೇನದೆ ಎಂಬಲ್ಲಿ ಪೇಳುತಿರ್ದಪಂ

ಉಕ್ತ್ವಾ ಭವಾನ್ ಸಕಲಲೋಕಮಹೋಪಕಾರಂ
ಸಿದ್ಧಾಂತಸಂಗ್ರಹಮನಾದೃತಬಾಹ್ಯತಂತ್ರಂ
ಸದ್ಯಃ ಕೃತಾರ್ಥಯಿತುಮರ್ಹತಿ ದಿವ್ಯಯೊಗಿನ್
ನಾನಾಗಮಶ್ರವಣವರ್ತಿತಸಂಶಯಂ ಮಾಮ್ ॥

ಭೋ ದಿವ್ಯಯೋಗೀಶ್ವರನೆ ಖಂಡಿಸಲ್ಪಟ್ಟ ಜೈನ ಬೌದ್ಧಾದಿ ಶಾಸ್ತ್ರಂಗಳುಳ್ಳ ಅದು ಕಾರಣದಿಂದಲೆ ಸಕಲ ಜನರಿಗೂ ಉಪಕಾರಮಾದ ವೇದಸಮ್ಮತಮಾದ ಸಿದ್ಧಾಂತ ಸಾರಮಂ ನಿರೂಪಿಸಿ ಶೈವಾದಿ ಸಕಲಾಗಮ ಶ್ರವಣದಿಂದುಂಟಾದ ಸಂದೇಹಮುಳ್ಳ ಎನ್ನಂ ಆ ಕ್ಷಣದಲ್ಲಿಯೆ ಕೃತಾರ್ಥನಂ ಮಾಡಲು ಯೋಗ್ಯನಾಗುತ್ತಿದ್ದೆ. ಕೃತಾರ್ಥನಂ ಮಾಡೂದೆಂಬುದರ್ಥಂ ॥೫೬॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ರೇಣುಕಾಗಸ್ತ್ಯ ಸಂದರ್ಶನಪ್ರಸಂಗೋನಾಮ ಚತುರ್ಥಃ ಪರಿಚ್ಛೇದಃ.

# ಪಂಚಮಪರಿಚ್ಛೇದ

## ಸಿದ್ಧಾಂತಶಾಸ್ತ್ರ ಕಥನಂ ಪ್ರಥಮ ಪೀಠಿಕೆ

ಈ ಪ್ರಕಾರದಿಂ ಕುಂಭಸಂಭವನ ಬಿನ್ನಹವಾಕ್ಯ ಶ್ರವಣಾನಂತರದಲ್ಲಿ ಶಿವಶಾಸ್ತ್ರ ಪ್ರಚಾರಾರ್ಥವಾಗಿ ಈ ಭೂಲೋಕಕ್ಕೆ ಬಂದ ರೇವಣಸಿದ್ಧೇಶ್ವರಂ ಕ್ಷಣಮಾತ್ರ ನಿಶ್ಚಲಚಿತ್ತನಾಗಿದ್ದು ಈ ಪ್ರಾರಂಭಿಸುವ ಶಿವಶಾಸ್ತ್ರದ ಪರಿಸಮಾಪ್ತಿಗೆ ಪ್ರತಿಬಂಧಕಮಾಗಲುಳ್ಳ ವಿಘ್ನದೇವತಾಸಮೂಹವ ಸಮಾಧಾನವ ಮಾಡುವಲ್ಲಿ ಶಕ್ತಮಾದ ಶಿವಧ್ಯಾನರೂಪ ಮಂಗಲಮಂ ಮನಸ್ಸಿನಲ್ಲಿ ಮಾಡಿ ಅಗಸ್ತ್ಯನ ವಾಕ್ಯಕ್ಕೆ ಉತ್ತರಮಂ ಕೊಡುತ್ತಿದ್ದಾನೆಂದು ಶಿವಯೋಗೀಶ್ವರಂ ಪೇಳುತಿರ್ದಪಂ

ಅಥಾಗಸ್ತ್ಯವಚಶ್ಶ್ರುತ್ವಾ ರೇಣುಕೋ ಗಣನಾಯಕಃ
ಧ್ಯಾತ್ವಾ ಕ್ಷಣಂ ಮಹಾದೇವಂ ಸಾಂಬಮಾಹಸಮಾಹಿತಃ ॥

ಅಗಸ್ತ್ಯನ ವಾಕ್ಯವ ಕೇಳಿದ ತರುವಾಯದಲ್ಲಿ ಶಿವಗಣಾಧೀಶ್ವರನಾದ ರೇಣುಕಾ ಚಾರ್ಯಂ ಭವಾನಿಯಿಂ ಸಹಿತಮಾದ ಮಹಾದೇವನಂ ಕ್ಷಣಂ ನಿಶ್ಚಲಚಿತ್ತನಾಗಿ ಧ್ಯಾನಿಸಿ ಆ ವಾಕ್ಯಕ್ಕೆ ಉತ್ತರಮಂ ಪೇಳುತಿರ್ದಪನೆಂಬುದರ್ಥಂ ॥೧॥ ಶ್ರೀ ರೇಣುಕ ಉವಾಚ

ಅಗಸ್ತ್ಯ ಮುನಿಶಾರ್ದೂಲ ಸಮಸ್ತಾಗಮಪಾರಗ
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತಂ ಶೃಣು ಸಾದರಮ್ ॥

ಸಮಸ್ತ ನಿಗಮಾಗಮಂಗಳ ಕಡೆಗಂಡ ಮುನಿಶ್ರೇಷ್ಠನಾದ ಅಹೋ ಅಗಸ್ತ್ಯನೆ ಶಿವಜ್ಞಾನ ಪ್ರದಮಾದ ಸಿದ್ಧಾಂತಮಂ ಪೇಳ್ವೆನು ಪ್ರೀತಿಯುಕ್ತನಾಗಿ ಕೇಳೆಂಬುದರ್ಥಂ ॥೨॥ ಆಮೇಲಾ ಸಿದ್ಧಾಂತಕ್ಕೆ ಆಧಿಕ್ಯಮಂ ಪೇಳಲೋಸ್ಕರ ಸಿದ್ಧಾಂತಗಳು ಬಹಳುಂಟೆಂದು ಪೇಳಿತಿರ್ದಪಂ.

ಅಗಸ್ತ್ಯ ಖಲುಸಿದ್ಧಾಂತಾಃ ವಿಖ್ಯಾತಾಃ ರುಚಿಭೇದತಃ
ಭಿನ್ನಾಚಾರಸಮಾಯುಕ್ತಾಃ ಭಿನ್ನಾರ್ಥಪ್ರತಿಪಾದಕಾಃ ॥

ಆಹೋ ಅಗಸ್ತ್ಯನೆ ಕಪಿಲ ಪತಂಜಲಿ ಮೊದಲಾದ ಋಷಿಗಳ ಪ್ರೀತಿ ವಿಚಿತ್ರತೆಯುತ್ತಣಿಂ ಭಿನ್ನಾಚಾರ ಭಿನ್ನಾರ್ಥ ಪ್ರತಿಪಾದಕಮಾದ ಬಹು ಸಿದ್ಧಾಂತ ಪ್ರಸಿದ್ಧವಾಗಿಹವಲಾ ಎಂಬುದರ್ಥಂ ॥೩॥ ಬಳಿಕಾ ಸಿದ್ಧಾಂತಗಳಾವವೆಂಬಲ್ಲಿ ಪೇಳುತಿರ್ದಪಂ.

ಸಾಂಖ್ಯಂ ಯೋಗಃ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ
ಏತಾನಿ ಮಾನಭೂತಾನಿ ನೋಪಹನ್ಯಾನಿ ಯುಕ್ತಿಭಿಃ ॥

ಕಪಿಲ ಮುನಿಯಿಂ ಪ್ರಣೀತಮಾಗಿ ಪ್ರಕೃತಿ ಪುರುಷರೆಂಬೆರಡು ಪದಾರ್ಥ ಪ್ರತಿಪಾದಕಮಾದುದು ಸಾಂಖ್ಯವು. ಅಲ್ಲಿ ಈಶ್ವರನು ಅಂಗೀಕರಿಸಲಿಲ್ಲ, ಪತಂಜಲಿಯಿಂ ನಿರ್ಮಿತಮಾಗಿ ಕಷ್ಟಕರಮಾದ ಯಮ ನಿಯಮಾದ್ಯಷ್ಟಾಂಗ ಯೋಗಪ್ರತಿಪಾದಕಮಾದುದು ಯೋಗಶಾಸ್ತ್ರವು ಅಲ್ಲಿ ಈಶ್ವರನಂಗೀಕಾರಮುಂಟು. ವಾಸುದೇವ ವಿರಚಿತಮಾಗಿ

ವಿಷ್ಣುದೀಕ್ಷಾಂಗಮಾದ ತಪ್ತಮುದ್ರಾಧಾರಣಾದಿಗಳಂ ವಿಧಿಸುತ್ತ ಚಿದಚಿದೀಶ್ವರೆಂಬ ತ್ರಿಪದಾರ್ಥ ಪ್ರತಿಪಾದಕಮಾದ ಪಾಂಚರಾತ್ರವು ಶಿವನಿಂದುಕ್ತಮಾಗಿ ಪತಿ ಪಾಶ ಪಶುಗಳೆಂಬ ತ್ರಿಪದಾರ್ಥ ಪ್ರತಿಪಾದಕಮಾಗಿರುವುದು. ಪಾಶುಪತವು ಯಸ್ಯ ವಿಶ್ವಸಿತ ವೇದಾ ಎಂಬ ಶ್ರುತಿಪ್ರಮಾಣದಿಂ ಶಿವನ ಅಪ್ರಯತ್ನಸಿದ್ಧ ನಿಶ್ವಾಸರೂಪಮಾದ ಋಗ್ಯಜುಸ್ಸಾಮವೇದಂಗಳ ಪೂರ್ವಕಾಂಡಾನುಸಾರವಾಗಿ ಜೈಮಿನಿಯಿಂ ಮಾಡಲ್ಪಟ್ಟುದಾಗಿ ಯಾಗಾದಿ ಕರ್ಮ ಪ್ರಾಧಾನ್ಯ ಪ್ರತಿಪಾದಕಮಾದಂಥಾದು. ಪೂರ್ವಮೀಮಾಂಸೆಯು ಅದು ನಿರೀಶ್ವರವು. ಈ ಶಾಸ್ತ್ರಂಗಳಿಷ್ಟು ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ ಪ್ರಭಿನ್ನೇ ಪ್ರಸ್ಥಾನೇ ಎಂಬ ಮಹಿಮ್ನ ಸ್ತೋತ್ರದಲ್ಲಿ ಪ್ರಸಿದ್ಧಮಾಗಿ ಪ್ರಮಾಣಮಾದಂಥಾವು ತರ್ಕಯುಕ್ತಿಗಳಿಂದ ಖಂಡಿಸಲ್ತಕ್ಕವಲ್ಲವೆಂಬುದರ್ಥಂ ॥೪॥ ಆಮೇಲೀ ಶಾಸ್ತ್ರಂಗಳಿಗೆಲ್ಲಾ ಪ್ರಾಮಾಣ್ಯಮೆಂತೆನೆ ಪೇಳುತಿರ್ದಪಂ.

ವೇದಃ ಪ್ರಧಾನಂ ಸರ್ವೇಷಾಂ ಸಾಂಖ್ಯಾದೀನಾಂ ಮಹಾಮುನೇ
ವೇದಾನುಸರಣಾದೇಷಾಂ ಪ್ರಾಮಾಣ್ಯಮಿತಿ ನಿಶ್ಚಿತಮ್ ॥

ಭೋ ಅಗಸ್ತ್ಯನೆ ಪೇಳಲ್ಪಟ್ಟ ರೂಪವುಳ್ಳ ಸಾಂಖ್ಯಾದಿ ಸಕಲ ಶಾಸ್ತ್ರಂಗಳ ಮಧ್ಯದಲ್ಲಿ ಅಪೌರುಷೇಯಮಾದ ಕಾರಣದಿಂ ವೇದವೆ ಮುಖ್ಯಪ್ರಮಾಣಮಾದಂಥಾದು. ಈ ಸಾಂಖ್ಯಾದಿಶಾಸ್ತ್ರಂಗಳಿಗೆ ವೇದಾನುಸರಣದತ್ತಣಿಂ ಪ್ರಾಮಾಣ್ಯವೆಂದು ಶಾಸ್ತ್ರಜ್ಞರಿಂ ನಿಶ್ಚೈಸಲ್ಪಟ್ಟಿತೆಂಬುದರ್ಥಂ ॥೫॥ ಹಾಗಾದಡೆ ಸಾಂಖ್ಯಾದಿಶಾಸ್ತ್ರಂಗಳತ್ತಣಿಂ ಶೈವಶಾಸ್ತ್ರಕ್ಕೆ ವಿಶೇಷವೇನೆಂಬಲ್ಲಿ ಪೇಳುತಿರ್ದಪಂ.

ಪಾಂಚರಾತ್ರಸ್ಯ ಸಾಂಖ್ಯಸ್ಯ ಯೋಗಸ್ಯ ಚ ತಥಾ ಮುನೇ
ವೇದೈಕದೇಶವರ್ತಿತ್ವಂ ಶೈವಂ ವೇದಮಯಂ ಮತಮ್ ॥

ಇಲ್ಲಿ ಚಕಾರದಿಂ ಪಾಶುಪತವು ಪೂರ್ವಮೀಮಾಂಸೆಯೆಂಬುದು ಸಂಗ್ರಹಿಸಲ್ಪಟ್ಟವು. ಹೀಗಿದ್ದಲ್ಲಿ ಅಹೋ ಅಗಸ್ತ್ಯನೆ ಪಾಂಚರಾತ್ರ ಸಾಂಖ್ಯ ಯೋಗ ಪಾಶುಪತ ಪೂರ್ವಮೀಮಾಂಸೆ ಎಂಬೈದುಶಾಸ್ತ್ರಕ್ಕೂ ವೇದದೊಳಗೇಕದೇಶ ಹಿಡಿದಿಹತನವೆ ಸರಿ. ಶಿವಶಾಸ್ತ್ರವಾಯಿತಾದಡೆ ವೇದಸ್ವರೂಪವೆಂದು ನಿಗಮಾಗಮಜ್ಞರಿಂದಂಗೀಕರಿಸಲ್ಪಟ್ಟಿತೆಂಬುದರ್ಥಂ ॥೬॥ ಈ ಸ್ಥಿತಿಯಲ್ಲಿ ಸರ್ವವೇದಮಯವಾದ ಕಾರಣದತ್ತಣಿಂ ಶೈವಶಾಸ್ತ್ರಂ ಸಾಂಖ್ಯಾದಿಶಾಸ್ತ್ರಂಗಳಿಂ ಶ್ರೇಷ್ಠಮೆಂದು ನಿರೂಪಿಸುತಿರ್ದಪಂ.

ವೇದೈಕದೇಶವರ್ತಿಭ್ಯಸ್ಸಾಂಖ್ಯಾದಿಭ್ಯೋ ಮಹಾಮುನೇ
ಸರ್ವವೇದಾನುಸಾರಿತ್ವಾತ್ ಶೈವತಂತ್ರಂ ವಿಶಿಷ್ಯತೇ ॥

ಭೋ ಮಹಾಮುನಿಯಾದ ಅಗಸ್ತ್ಯನೆ ವೇದೈಕದೇಶವನು ಅನುಕರಿಸಿಕೊಂಡಿರುವ ಸಾಂಖ್ಯಾದಿಶಾಸ್ತ್ರಗಳತ್ತಣಿಂ ಶೈವತಂತ್ರವು ಸರ್ವವೇದಾನುಸಾರಿಯಾದ ಕಾರಣದಿಂ ಶ್ರೇಷ್ಠಮಾದಂಥಾದೆಂಬುದರ್ಥಂ. ॥೭॥ ಹಾಗಾದರೆ ಶೈವಶಾಸ್ತ್ರವು ಯಾರಿಂದಲೊ ಕಲ್ಪಿತಮೆಂದು ತೋರುವ ಕಾರಣದಿಂದಿದಕೆ ಪ್ರಾಮಾಣ್ಯಮೆಂತೆನೆ ಪೇಳುತಿರ್ದಪಂ.

ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಂ
ಸರ್ವವೇದಾರ್ಥರೂಪತ್ವಾತ್ಪ್ರಾಮಾಣ್ಯಂ ವೇದವತ್ಸದಾ ॥

ಶೈವಶಾಸ್ತ್ರವು ಸರ್ವಜ್ಞನಾದ ಶಿವನಿಂ ಪೇಳಲ್ಪಟ್ಟದು. ಅದು ಕಾರಣದಿಂ ಸಿದ್ಧಾಂತಮೆಂದು ಉತ್ಕರ್ಷದಿಂ ಪೇಳಲ್ಪಟ್ಟಿತ್ತು. ಸಕಲೋಪನಿಷದರ್ಥರೂಪಮಾದ ಕಾರಣದತ್ತಣಿಂ ಒಂದರಂತೆ ಕಾಲಭೇದವಿಲ್ಲದೆ ಎಲ್ಲಾಗಳೂ ಪ್ರಮಾಣಮಾದಂಥಾ ದೆಂಬುದರ್ಥಂ ॥೮॥ ಹಾಗಾದರೆ ಶಿವನಿಂ ನಿರೂಪಿತಮಾದ ತಂತ್ರಂಗಳು ಬಹಳವುಂಟು. ಅವೆಲ್ಲವೂ ವೇದದಂತೆ ಪ್ರಮಾಣಂಗಳೋ ಏನೋ ಎಂಬಲ್ಲಿ ಪೇಳುತಿರ್ದಪಂ.

ಆಗಮಾಃ ಬಹುಧಾ ಪ್ರೋಕ್ತಾಶ್ಶಿವೇನ ಪರಮಾತ್ಮನಾ
ಶೈವಂ ಪಾಶುಪತಂ ಸೋಮಂ ಲಾಕುಲಂ ಚೇತಿ ಭೇದತಃ ॥

ತೇಷು ಶೈವಂ ಚತುರ್ಭೇದಂ ತಂತ್ರಂ ಸರ್ವವಿನಿಶ್ಚಿತಮ್
ವಾಮಂ ಚ ದಕ್ಷಿಣಂ ಚೈವ ಮಿಶ್ರಂ ಸಿದ್ಧಾಂತಸಂಜ್ಞಕಮ್ ॥

ಶಕ್ತಿಪ್ರಧಾನಂ ವಾಮಾಖ್ಯಂ ದಕ್ಷಿಣಂ ಭೈರವಾತ್ಮಕಮ್
ಸಪ್ತಮಾತೃಪರಂ ಮಿಶ್ರಂ ಸಿದ್ಧಾಂತಂ ವೇದಸಮ್ಮತಮ್ ॥

ಪರಮಾತ್ಮನಾದ ಶಿವನಿಂದ ಶೈವವೆಂದು, ಪಾಶುಪತವೆಂದು, ಸೋಮವೆಂದು, ಲಾಕುಳವೆಂದು ಆಗಮಂಗಳು ಬಹು ಭೇದವುಳ್ಳವಾಗಿ ಪೇಳಲ್ಪಟ್ಟವು. ಅವರಲ್ಲಿ ಶೈವತಂತ್ರವು ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತವೆಂಬ ಪೆಸರನ್ನುಳ್ಳ ನಾಲ್ಕು ಭೇದವುಳ್ಳದ್ದೆಂದು ಸಮಸ್ತಮಾದ ಆಗಮಜ್ಞರಿಂದಲೂ ನಿಶ್ಚೈಸಲ್ಪಟ್ಟಿತ್ತು. ಆಗಮಾದಿ ನಾಲ್ಕು ಭೇದಂಗಳೊಳಗೆ ವಾಮವೆಂಬುದು ಶಕ್ತಿಪರವು, ದಕ್ಷಿಣವೆಂಬುದು ಭೈರವಪರವು, ಮಿಶ್ರವೆಂಬುದು ಬ್ರಹ್ಮಾದಿ ಸಪ್ತಮಾತೃಕಾ ಪರವು, ಸಿದ್ಧಾಂತವೆಂಬ ಶೈವತಂತ್ರವು ವೇದಸಮ್ಮತವಾದವು. ಆ ಕಾರಣದಿಂ ಸಿದ್ಧಾಂತವೆಂಬ ಶೈವತಂತ್ರವೆ ವೇದದಂತೆ ಪ್ರಮಾಣವು. ಮೇಲಾದ ತಂತ್ರಂಗಳು ಹಾಗೆ ಪ್ರಮಾಣವಲ್ಲವೆಂಬುದರ್ಥಂ ॥೧೧॥ ಇಲ್ಲಿ ಸಿದ್ಧಾಂತವೆಂಬ ಶೈವತಂತ್ರಮದೆಂತು ವೇದ ಸಮ್ಮತವೆಂಬಲ್ಲಿ ಪೇಳುತಿರ್ದಪಂ.

ವೇದಧರ್ಮಾಭಿಧಾಯಿತ್ವಾತ್ ಸಿದ್ಧಾಂತಾಖ್ಯಶ್ಶಿವಾಗಮಃ
ವೇದಬಾಹ್ಯ ವಿರೋಧಿತ್ವಾದ್ವೇದಸಮ್ಮತ ಉಚ್ಯತೇ ॥

ವೇದೋಕ್ತಮಾದ ಭಸ್ಮಲಿಂಗಧಾರಣಾದಿ ಧರ್ಮಂಗಳ ಪ್ರತಿಪಾದಿಸುವದರತ್ತಣಿಂ ವೇದಬಾಹ್ಯರಾದ ಜೈನ ಚಾರ್ವಾಕಾದಿ ಮತಗಳಿಗೆ ವಿರೋಧವುಳ್ಳದಾಹತನದಿಂದಲೂ ವೇದಸಮ್ಮತವೆಂದು ಪೇಳಲ್ಪಡುತ್ತದೆಯೆಂಬುದರ್ಥಂ ॥೧೨॥ ಬಳಿಕೀ ರೀತಿಯಿಂ ವೇದ ಸಮ್ಮತವಾದ ಕಾರಣದಿಂ ಸಿದ್ಧಾಂತವೆಂಬ ಶಿವಾಗಮವು ವೇದದಂತೆ ಪ್ರಮಾಣವೆಂದು ನಿರೂಪಿಸುತಿರ್ದಪಂ

ವೇದಸಿದ್ಧಾಂತಯೋರೈಕ್ಯಮೇಕಾರ್ಥಪ್ರತಿಪಾದನಾತ್
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಸ್ಸದಾ ॥

ಸರ್ವ ವೇದೇಷು ಯದ್ದೃಷ್ಟಂ ತತ್ಸರ್ವಂ ತು ಶಿವಾಗಮೇಃಯೆಂಬ ವೀರಾಗ ಮೋಕ್ತಿಯಿಂ ವೇದಸಿದ್ಧಾಂತಗಳಿಗೆ ಕರ್ತೃಕತ್ವ ಉಂಟಾಗಲಾಗಿ ಅಭೇದವೆ ಸರಿ. ಆ ಕಾರಣದಿಂ ವಿದ್ವಾಂಸರಿಂದ ವೇದಸಿದ್ಧಾಂತಗಳಿಗೆ ಪ್ರಾಮಾಣ್ಯವು ಸಮಾನವಾಗಿಯೆ ತಿಳಿಯಲ್ತಕ್ಕ ದೆಂಬುದರ್ಥಂ ॥೧೩॥ ಬಳಿಕ ಸಿದ್ಧಾಂತವೆಂಬ ಶಿವಾಗಮದಲ್ಲಿ ಏನು ಪ್ರತಿಪಾದಿಸಲ್ಪಡುತ್ತದೆ ಎಂಬಲ್ಲಿ ಪೇಳುತಿರ್ದಪಂ

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ
ನಿರ್ದಿಷ್ಟಮುತ್ತರೇಭಾಗೇ ವೀರಶೈವಮತಂ ಪರಮ್ ॥

ಶಿವನಿಂದುಕ್ತಮಾದ ಸಿದ್ಧಾಂತವೆಂಬೀ ಪೆಸರುಳ್ಳ ಕಾಮಿಕಾಗಮ ಮೊದಲಾದ ಮಹಾತಂತ್ರದಲ್ಲಿ ಉತ್ತರಭಾಗದಲ್ಲಿ ಸರ್ವೋತ್ಕೃಷ್ಟಮಾದ ವೀರಶೈವಮತವು ನಿರೂಪಿಸಲ್ಪಟ್ಟಿತ್ತೆಂಬುದರ್ಥಂ. ॥೧೪॥ ಇದರಿಂದ ಪೂರ್ವಭಾಗದಲ್ಲಿ ಕರ್ಷಣಾದಿ ಪ್ರತಿಷ್ಠಾಂತಮಾದ ಶೈವಂ ಪೇಳಲ್ಪಟ್ಟಿತ್ತೆಂಬುದು ಸೂಚಿತಮಾಯಿತು. ಆಮೇಲೀ ವೀರಶೈವವೆಂಬುದಾಗಮಿಕವೆ ಸರಿಯೆಂದು ಶಂಕೆ ಪ್ರಾಪ್ತಮಾದಲ್ಲಿ ವೇದಶಿರಸ್ಸಿನಲ್ಲಿಯೂ ವೀರಶೈವ ಶಬ್ದ ಪ್ರಸಿದ್ಧವೆಂದು ಪ್ರತಿಪಾದಿಸುತ್ತಿರ್ದಪಂ

ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ
ತಸ್ಮಾದೇತೇ ಮಹಾಭಾಗಾಃ ವೀರಶೈವಾ ಇತಿ ಸ್ಮೃತಾಃ ॥

ವೇದಾಂತ ವಾಕ್ಯಜಾ ವಿದ್ಯಾಯೆಂಬ ಸೂತಗೀತೋಕ್ತಿಯಿಂ ವೇದಾಂತವೇದ್ಯನಾದ ಪರಶಿವರೂಪ ಪರಬ್ರಹ್ಮವಿದ್ಯೆಯಲ್ಲಿ ಯಾವ ಕಾರಣದಿಂ ವೀರಶೈವ ನಿರುಕ್ತಿಯುಂಟು ಆ ಕಾರಣದಿಂದೀ ರತಿಯುಳ್ಳ ಇವರುಗಳ ಪರಮಶ್ರೇಷ್ಠರಾದ ವೀರಶೈವರೆಂದು ನೆನೆಯಲ್ತಕ್ಕ ರೆಂಬುದರ್ಥಂ. ॥೧೫॥ ಆಮೇಲೆ ವೇದಾಗಮ ಪುಸ್ತಕಂಗಳಲ್ಲಿಯೂ ವೀರಶೈವ ಶಬ್ದ ನಿರ್ವಚನಮಂ ತೋರಿಸುತಿರ್ದಪಂ

ವೀ ಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತು ತೇ ಮತಾಃ ॥

ವಿ ಗತಿ ಪ್ರಜನ ವ್ಯಾಪ್ತಿ ಕಾಂತ್ಯಶನ ಖಾದನೇಷು ಎಂಬ ಧಾತುಗತಿಯಿಂ ಲಿಂಗಾಂಗ ರೂಪಮಾದ, ಶಿವಜೀವರುಗಳಿಗೆ ಐಕ್ಯಮಂ ಪ್ರಕಾಶಿಸುವ ವಿದ್ಯೆಯು ವೀಶಬ್ದದಿಂ ನುಡಿಯಲ್ಪಡುತ್ತಿಹುದು. ಆ ವಿದ್ಯೆಯಲ್ಲಿ ಯಾವ ಶಿವಭಕ್ತರು ರಮಿಸುತ್ತಿಹುದು ಅವರುಗಳು ವೀರಶೈವರೆಂದು ಸಮ್ಮತರಾದವರೆಂಬುದರ್ಥಂ ॥೧೬॥ ಆಮೇಲೆ ವೀರಮಾಹೇಶ್ವರ ಸ್ವರೂಪವನು ನಿರ್ವಚಿಸುತ್ತಿರ್ದಪಂ

ವಿದ್ಯಾಯಾಂ ರಮತೇ ಯಸ್ಮಾತ್ ಮಾಯಾಂ ಹೇಯಾಂ ಶ್ವವದ್ರಹೇತ್
ಅನೇನೈವ ನಿರುಕ್ತೇನ ವೀರಮಾಹೇಶ್ವರಃ ಸ್ಮೃತಃ ॥

ಯಸ್ಮಾತ್ – ಯಾವುದಾನೊಂದು ಲಿಂಗಾಂಗಸಂಬಂಧ ಕಾರಣಾರ್ಥಮಾಗಿ ಶಿವಜೀವೈಕ್ಯ ಪ್ರಕಾಶಮಾದ ವಿದ್ಯೆಯಲ್ಲಿ ಯಾವಾತ ರಮಿಸುತ್ತಿಹನು, ಬಂಧಕ್ಕೆ ಹೇತುವಾದ

ಕಾರಣದಿಂ ಹೇಯಮಾದ ಮಾಯೆಯಂ ಶ್ವಾನನಂ ಕಂಡಂತೆ ನಿವಾರಿಸುತ್ತಿಹನು, ಆತನು ಈ ವಿದ್ಯಾದಿ ಪದಗಳ ಆದ್ಯಕ್ಷರ ಸಂಗ್ರಹರೂಪಮಾದ ನಿರುಕ್ತದಿಂ ವೀರಮಾಹೇಶ್ವರನೆಂದು ನೆನೆಯಲ್ತಕ್ಕನೆಂಬುದರ್ಥಂ ॥೧೭॥ ಈ ಪ್ರಕಾರದಿಂ ವೇದಾಂತಸಿದ್ಧಮಾದ ವೀರಶಬ್ದ ಸಿದ್ಧಾಂತ ಪ್ರಸಿದ್ಧಮಾದ ಶೈವಶಬ್ದ ಮಾಹೇಶ್ವರ ಶಬ್ದಂಗಳಂ ವಿವರಿಸಿದ ತರುವಾಯದಲ್ಲಿ ವೇದಾಗಮಶಿರಸಿದ್ಧಾಂತಮಾದ ವೀರಶೈವ ವೀರಮಾಹೇಶ್ವರ ಸ್ವರೂಪವನಾರು ಸೂತ್ರಂಗಳಿಂ ವಿವರಿಸುತಿರ್ದಪಂ. ಅಲ್ಲಿ ಮೊದಲು ವೀರಶಬ್ದಮೆಂತು ವೇದಾಂತಪ್ರಸಿದ್ಧಮೆಂಬಲ್ಲಿ ಪೇಳುತಿರ್ದಪಂ

ವೇದಾಂತಜನ್ಯಂ ಯದ್ ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ
ವಿದ್ಯಾಯಾಂ ರಮತೇ ತಸ್ಯಾಂ ವೀರ ಯಿತ್ಯಭಿಧೀಯತೇ ॥

ವೇದಾಂತ ವಾಕ್ಯಜಾ ವಿದ್ಯಾ ಎಂದು ಉದಾಹರಿಸಲ್ಪಟ್ಟ ಸೂತಗೀತೋಕ್ತಿಯಿಂ ವೇದಾಂತವಾಕ್ಯಂಗಳಿಂ ಪ್ರಕಾಶಿಸಲ್ಪಟ್ಟ ಯಾವುದಾನೊಂದು ಜ್ಞಾನಮುಂಟು ಆ ಜ್ಞಾನವು ವಿದ್ಯೆಯೆಂದು ಪೇಳಲ್ಪಡುವುದು. ಆ ವಿದ್ಯೆಯಲ್ಲಿ ಯಾವಾತ ರಮಿಸುತ್ತಿಹನು ಆತನು ವೀರನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೧೮॥ ಈ ಪ್ರಕಾರದಿಂ ವೇದಾಂತ ಪ್ರಸಿದ್ಧಮಾದ ವೀರಶಬ್ದ ಪೂರ್ವಕವಾಗಿ ಸಿದ್ಧಾಂತಪ್ರಸಿದ್ಧಮಾದ ಶಿವತತ್ತ್ವಜ್ಞಾನ ನಿಷ್ಠರಾದ ಶೈವರಂ ಮಾಹೇಶ್ವರತತ್ತ್ವವಿಷಯಕ ಕರ್ಮನಿಷ್ಠರಾದ ಮಾಹೇಶ್ವರರಂ ಸಾರ್ಧ ಸೂತ್ರದಿಂ ಸ್ಫುಟೀಕರಿಸುತ್ತಿರ್ದಪಂ.

ಶೈವೈರ್ಮಾಹೇಶ್ವರಶ್ಚೈವ ಕಾರ್ಯಮಂತರ್ಬಹಿಃ ಕ್ರಮಾತ್
ಶಿವೋ ಮಹೇಶ್ವರಶ್ಚೇತಿ ನಾತ್ಯಂತಮಿಹ ಭಿದ್ಯತೇ ॥

ಯಥಾ ತಥಾ ನ ಭಿದ್ಯಂತೇ ಶೈವಾಃ ಮಾಹೇಶ್ವರಾಃ ಅಪಿ

ವೀರಶಬ್ದಪೂರ್ವಕಮಾದ ಶೈವರಿಂ ಮಾಹೇಶ್ವರರಿಂ ಕ್ರಮದಿಂ ಒಳಗೆ ಹೊರಗೆ ಲಿಂಗಾರ್ಚನೆಯು ಮಾಡಲು ಯೋಗ್ಯಮಾದುದು. ಹೀಗಿರಲಾಗಿ ಶಿವನು ನಿಷ್ಕಲನು, ಮಹೇಶ್ವರನು ಸಕಲನು. ಈ ಪ್ರಕಾರಮಾದ ವಿವೇಕದಲ್ಲಿ ಶಿವಃ ಶೂಲಿ ಮಹೇಶ್ವರಃ ಹೀಗೆಂಬ ಅಭಿದಾನ ಗುಣಪಟದಲ್ಲಿ ಅವರಿವರು ಹೇಗೆ ಅಭಿನ್ನವಾಗಿ ತೋರುತ್ತಿಹರು ಹಾಗೆ ಶಿವಸಂಬಂಧಿಗಳಾದ ವೀರಶೈವರು ಮಾಹೇಶ್ವರಸಂಬಂಧಿಗಳಾದ ವೀರಮಾಹೇಶ್ವರರು ಭಿನ್ನರಲ್ಲ. ಅಲ್ಲಿ ಮಾಹೇಶ್ವರನು ಸೋಪಾಧಿಕನಾದರೂ ಆ ಉಪಾಧಿಯು ಮುಂದೆ ಪೇಳುವ ಪ್ರಕಾರದಿಂ ಸತ್ವಗುಣಪ್ರಧಾನವಾಗಿ ಆವರಕಮಲ್ಲದ ಕಾರಣದಿಂದಾತ್ಯಂತಿಕ ಭೇದಮಿಲ್ಲವೆಂದು ತಾತ್ಪರ್ಯಂ ॥೧೯॥ ಆಮೇಲೆ ಶೈವಮಾಹೇಶ್ವರರಿಂ ಮಾಡಲ್ತಕ್ಕ ಅಂತರ್ಬಾಹ್ಯ ಶಿವಪೂಜಾ ಸ್ವರೂಪಮೆಂತೆನೆ ಪೇಳುತ್ತಿರ್ದಪಂ.

ಶಿವಾಶ್ರಿತೇಷು ತೇ ಶೈವಾಃ ಜ್ಞಾನಯಜ್ಞರತಾಃ ನರಾಃ

ಮಾಹೇಶ್ವರಾಸ್ಸಮಾಖ್ಯಾತಾಃ ಕರ್ಮಯಜ್ಞ ರತಾಃ ಭುವಿ
ತಸ್ಮಾದಭ್ಯಂತರೇ ಕುರ್ಯುಃ ಶೈವಾಃ ಮಾಹೇಶ್ವರಾ ಬಹಿಃ ॥

ಶಿವನಾಶ್ರಯಿಸಿದ ಭಕ್ತರಲ್ಲಿ ಯಾರು ಕೆಲರು ಹೃತ್ಕಮಲದಲ್ಲಿ ರುಚಿಲಿಂಗಪೂಜೆಯಲ್ಲಿ

ಪ್ರೀತಿಯುಕ್ತರಾಗಿರುವರು ಅವರುಗಳು ವೀರಶೈವರ ಕರಕಮಲಪೀಠದಲ್ಲಿರುವ ಕ್ರಿಯಾಲಿಂಗ ಪೂಜೆಯಲ್ಲಿರುವವರು ಯಾರುಂಟು ಅವರುಗಳೀ ಭೂಲೋಕದಲ್ಲಿ ವೀರಮಾಹೇಶ್ವರರೆಂದು ಪ್ರಸಿದ್ಧವಾಗಿರುವರು. ಅದು ಕಾರಣವಾಗಿ ವೀರಶೈವರು ಹೃತ್ಕಮಲದಲ್ಲಿ ಜ್ಞಾನಕಾಂಡ ಪ್ರತಿಪಾದಿತಮಾದ ಪ್ರಾಣಲಿಂಗಿ ಶರಣ ಶಿವೈಕ್ಯಸ್ಥಲೋಕ್ತ ಧರ್ಮಾಚಾರಣೆಯಂ ಮಾಡುವರು. ವೀರಮಾಹೇಶ್ವರರು ಕಾರ್ಯಕಾಂಡಗತಮಾದ ಭಕ್ತ ಮಾಹೇಶ್ವರ ಪ್ರಸಾದಿಸ್ಥಲೋಕ್ತ ಧರ್ಮಾಚರಣೆಯಂ ಮಾಡುವದೆಂಬುದಕ್ಷರಾರ್ಥಂ. ನಹ್ಯೇಕ ಪಕ್ಷೋವಿಹಗಃ ಪ್ರಯಾತಿ ಎಂಬ ನ್ಯಾಯದಿಂದಿರ್ವರಿಗೂ ಜ್ಞಾನಕ್ರಿಯೆ ಸಮಾನ ಸರಿ. ಹಾಗಾದರೂ ಬಾಹ್ಯಾಭ್ಯಾಂತರ ಪ್ರತಿಮಾತ್ರ ವಿಶೇಷವೆಂಬುದು ತಾತ್ಪರ್ಯಂ ॥೨೧॥ ಆಮೇಲೆ ವೀರಮಾಹೇಶ್ವರರೆಂದು ಪ್ರಸಿದ್ಧರಾದ ವೀರಶೈವ ಭೇದಮಂ ನಿರೂಪಿಸುತ್ತಿರ್ದಪಂ

ವೀರಶೈವಾಸ್ತು ಷಡ್ಭೇದಾಃ ಸ್ಥಲಧರ್ಮವಿಭೇದತಃ
ಭಕ್ತಾದಿವ್ಯವಹಾರೇಣ ಪ್ರೋಚ್ಯಂತೇ ಶಾಸ್ತ್ರಪಾರಗೈಃ ॥

ವೀರಮಾಹೇಶ್ವರರೆಂದು ಪ್ರಸಿದ್ಧರಾದ ವೀರಶೈವರಾಯಿತ್ತಾದೊಡೆ ಭಕ್ತ ಮೊದಲಾಗಿ ಶಿವೈಕ್ಯ ಕಡೆಯಾದ ವ್ಯವಹಾರದಿಂದಲೂ ಪಿಂಡಾದಿ ವೃತ್ತಿ ಜ್ಞಾನ ಶೂನ್ಯಾಂತಮಾದ ಸ್ಥಲಾಚಾರ ಭೇದದತ್ತಣಿಂದಲೂ ಆರು ವಿಧಮಾದ ಭೇದವುಳ್ಳವರೆಂದು ಶಿವಾಗಮಶಾಸ್ತ್ರ ಪಾರಂಗತರಾದವರಿಂದ ಪೇಳಲ್ಪಡುತ್ತಿಹದೆಂಬುದರ್ಥಂ ॥೨೨॥ ಆಮೇಲಾ ಶಾಸ್ತ್ರಭೇದಮಂ ತೋರಿಸುತಿರ್ದಪಂ.

## ಷಟ್ಸ್ಥಲನಿರೂಪಣ

ಶಾಸ್ತ್ರಂ ತು ವೀರಶೈವಾನಾಂ ಷಡ್ವಿಧಂ ಸ್ಥಲಭೇದತಃ
ಧರ್ಮಭೇದಸಮಾಯೋಗಾದಧಿಕಾರಿವಿಭೇದತಃ ॥

ವೀರಶೈವಶಾಸ್ತ್ರ ಮಾಯಿತ್ತಾದಡೆ ಸ್ಥಲಭೇದದತ್ತಣಿಂ ಸ್ಥಲೋಕ್ತಮಾದ ಸದಾಚಾರಂ ಭೇದಸಂಬಂಧದತ್ತಣಿಂ ಸ್ಥಲನಿಷ್ಠರಾದ ಭಕ್ತಾದ್ಯಧಿಕಾರಭೇದದತ್ತಣಿಂದಲೂ ಆರು ಪ್ರಕಾರಮುಳ್ಳದೆಂಬುದರ್ಥಂ. ಈ ಶಾಸ್ತ್ರಕ್ಕೆ ವೀರಶೈವಧರ್ಮನಿಷ್ಠರಾಗಿ ಮುಮುಕ್ಷುವಾದಾತನಧಿಕಾರಿ. ಶಿವಭಕ್ತಿಯಿಂ ಲಭ್ಯಮಾದ ಶಿವೈಕ್ಯರೂಪಪರಮುಕ್ತಿಯೆ ಪ್ರಯೋಜನವು. ಏಕೋತ್ತರಶತಸ್ಥಲಜ್ಞಾನವೆ ವಿಷಯವು. ಆ ಜ್ಞಾನಕ್ಕೂ ಶಾಸ್ತ್ರಕ್ಕೂ ಪ್ರಕಾಶ್ಯ ಪ್ರಕಾಶಕ ಭಾವವೆ ಸಂಬಂಧವು. ಈ ಪ್ರಕಾರಮಾದ ಅನುಬಂಧಚತುಷ್ಟಯಮುಳ್ಳುದೀ ಶಾಸ್ತ್ರಂ ॥೨೩॥ ಆಮೇಲೆ ಸ್ಥಲಕ್ರಮವಂ ನಿರೂಪಿಸುತಿರ್ದಪಂ

ಆದೌ ಭಕ್ತಸ್ಥಲಂ ಪ್ರೋಕ್ತಂ ತತೋ ಮಾಹೇಶ್ವರಸ್ಥಲಂ
ಪ್ರಸಾದಿಸ್ಥಲಮನ್ಯತ್ತು ಪ್ರಾಣಲಿಂಗಿಸ್ಥಲಂ ತತಃ ॥

ಶರಣಸ್ಥಲಮಾಖ್ಯಾತಂ ಷಷ್ಠಮೈಕ್ಯಸ್ಥಲಂ ಮತಮ್

ಮೊದಲು ಭಕ್ತಸ್ಥಲಂ ಪೇಳಲ್ಪಟ್ಟಿತ್ತು. ಆಮೇಲೆ ಮಾಹೇಶ್ವರಸ್ಥಲಂ ಪೇಳಲ್ಪಟ್ಟಿತ್ತು. ಆಮೇಲೆ ತದ್ಭಿನ್ನಮಾದ ಪ್ರಸಾದಿಸ್ಥಲಂ ಪೇಳಲ್ಪಟ್ಟಿತ್ತು. ಆಮೇಲೆ ಪ್ರಾಣಲಿಂಗಿಸ್ಥಲಂ

ಪೇಳಲ್ಪಟ್ಟಿತ್ತು. ಆಮೇಲೀಶ್ವರಸ್ಥಲಂ ಪೇಳಲ್ಪಟ್ಟಿತ್ತು. ಆಮೇಲೆ ಆರನೆಯದಾದ ಶಿವೈಕ್ಯಸ್ಥಲಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೨೪॥. ಆಮೇಲೀ ಪ್ರಕಾರದಿಂದುದ್ದಿಷ್ಟಮಾದ ಸ್ಥಲಂಗಳಲ್ಲಿ ಪ್ರಥಮೋಸ್ಥಿತಮಾದ ಭಕ್ತಸ್ಥಲಂ ಮತ್ತದವಾಂತರಭೇದಂಗಳಂ ಪೇಳೇನು ಕೇಳೆಂದು ನಿರೂಪಿಸುತಿರ್ದಪಂ.

## ಭಕ್ತಸ್ಥಲಭೇದ ವಿವರಣ

### ಅಂಗಸ್ಥಲ – ೪೪

ಭಕ್ತಸ್ಥಲಂ ಪ್ರವಕ್ಷ್ಯಾಮಿ ಪ್ರಥಮಂ ಕಲಶೋದ್ಭವ
ತದವಾಂತರಭೇದಾಂಶ್ಚ ಸಮಾಹಿತಮನಾಃ ಶೃಣು ॥

ಅಹೋ ಕುಂಭಸಂಭವನಾದ ಅಗಸ್ತ್ಯನೆ ಮೊದಲಾದ ಭಕ್ತಸ್ಥಲವನು ಅದರೊಳಗಣ ಅವಾಂತರ ಸ್ಥಲಭೇದಂಗಳನು ಪೇಳೇನು ಏಕಾಗ್ರಚಿತ್ತನಾಗಿ ಕೇಳೆಂಬುದರ್ಥಂ ॥೨೫॥ ಆಮೇಲೆ ಭಕ್ತಸ್ಥಲಮಂ ಕುರುಹಿಡುತಿರ್ದಪಂ

ಶೈವೀಭಕ್ತಿಸ್ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ
ತಸ್ಯಾನುಷ್ಠೇಯಧರ್ಮಾಣಾಂ ಮುಕ್ತಿರ್ಭಕ್ತಸ್ಥಲಂ ಮತಮ್ ॥

ಯಾವಾತಂಗೆ ಶಿವನ ಸಂಬಂಧಮಾದ ಭಕ್ತಿಯುಂಟಾಯಿತು ಆ ಇವನು ಭಕ್ತನೆಂದು ಪೇಳಲ್ಪಡುತ್ತಿಹನು. ಆ ಭಕ್ತಂಗೆ ಆಚರಿಸಲ್ತಕ್ಕ ಧರ್ಮಂಗಳುಪದೇಶವಾಕ್ಯವು ಭಕ್ತಸ್ಥಲವೆಂದು ಶಾಸ್ತ್ರಸಮ್ಮತವೆಂಬುದರ್ಥಂ ॥೨೬॥ ಆಮೇಲೀ ಭಕ್ತಸ್ಥಲಕ್ಕೆ ಅವಾಂತರಸ್ಥಲಂಗಳು ಹದಿನೈದುಂಟೆಂದು ಅವನುದ್ದೇಶಿಸುತಿರ್ದಪಂ

ಅವಾಂತರಸ್ಥಲಾನ್ಯತ್ರ ಪ್ರಾಹುಃ ಪಂಚದಶೋತ್ತಮಾಃ
ಪಿಂಡತಾ ಪಿಂಡವಿಜ್ಞಾನಂ ಸಂಸಾರಗುಣಹೇಯತಾ ॥

ದೀಕ್ಷಾ ಲಿಂಗ ಧೃತಿಶ್ಚೈವ ವಿಭೂತೇರಪಿ ಧಾರಣಂ
ರುದ್ರಾಕ್ಷಧಾರಣಂ ಪಶ್ಚಾತ್ಪಂಚಾಕ್ಷರಜಪಸ್ತಥಾ ॥

ಭಕ್ತಮಾರ್ಗಕ್ರಿಯಾ ಚೈವ ಗುರೋರ್ಲಿಂಗಸ್ಯ ಚಾರ್ಚನಮ್
ಜಂಗಮಸ್ಯ ತಥಾ ಹ್ಯೇಷಾಂ ಪ್ರಸಾದಸ್ವೀಕೃತಿಸ್ತಥಾ ॥

ಅತ್ರ ದಾನತ್ರಯಂ ಪ್ರೋಕ್ತಮುಪಾಧಿ ನಿರುಪಾಧಿನೀ
ಸಹಜಂ ಚೇತಿ ನಿರ್ದಿಷ್ಟಂ ಸಮಸ್ತಾಗಮಪಾರಗೈಃ ॥

ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ

ಈ ಭಕ್ತಸ್ಥಲದಲ್ಲಿ ಅವಾಂತರ ಸ್ಥಲಗಳು ಹದಿನೈದು ಸಕಲಶಿವಾಗಮಪಾರಂಗತರಿಂ ಪೇಳಲ್ಪಟ್ಟಿತ್ತೆಂಬುದು. ಉತ್ತಮರಾದ ಶಿವಾಚಾರ್ಯರು ಪೇಳುವರು. ಅವಾವೆಂದಡೆ ಮೊದಲು ಪಿಂಡಸ್ಥಲವು. ಆಮೇಲೆ ಪಿಂಡಜ್ಞಾನಸ್ಥಲವು. ಆಮೇಲೆ ಸಂಸಾರ ಹೇಯಸ್ಥಲವು ಬಳಿಕ ದೀಕ್ಷಾಸ್ಥಲವು. ಮರಳಿ ಲಿಂಗಧಾರಣಸ್ಥಲವು. ಅನಂತರದಲ್ಲಿ ವಿಭೂತಿಧಾರಣಸ್ಥಲವು. ಆಮೇಲೆ ರುದ್ರಾಕ್ಷಧಾರಣಸ್ಥಲವು. ತರುವಾಯದಲ್ಲಿ ಪಂಚಾಕ್ಷರಿಜಪಸ್ಥಲವು, ಆಮೇಲೆ

ಭಕ್ತಮಾರ್ಗಕ್ರಿಯಾಸ್ಥಲವು, ಬಳಿಕ ಗುರುಲಿಂಗಾರ್ಚನವೆಂಬುಭಯಸ್ಥಲವು, ಆಮೇಲೆ ಜಂಗಮಾರ್ಚನೆಯೆಂಬ ತ್ರಿವಿಧಸಂಪತ್ತಿಸ್ಥಲವು. ಆಮೇಲೀ ಮೂರರ ಪ್ರಸಾದ ಸ್ವೀಕಾರ ರೂಪಮಾದ ಚತುರ್ವಿಧಸಾರಾಯಸ್ಥಲವು. ಆಮೇಲೀ ಭಕ್ತಸ್ಥಲದಲ್ಲಿ ಪೇಳಲ್ಪಟ್ಟ ದಾನತ್ರಯ ರೂಪಮಾದ ಉಪಾಧಿಮಾಟ, ನಿರುಪಾಧಿಮಾಟ, ಸಹಮಾಟವೆಂಬ ಸ್ಥಲತ್ರಯವು. ಈ ಪ್ರಕಾರದಿಂದ ಅವಾಂತರಸ್ಥಲಂಗಳು ಹದಿನೈದು ಶಿವಭಕ್ತನಿಂದಲಸಿಕೆಯಿಲ್ಲದೆ ಆಚರಿಸಲ್ತಕ್ಕವೆಂಬುದರ್ಥಂ ॥೩೧॥ ಆಮೇಲೆ ಸಮಸ್ತ ವೇದಾಗಮಶಿರ ಸಿದ್ಧಾಂತಾ ಷಟ್‌ಸ್ಥಲಾಂತರ್ಗತಮಾಗಿ ಆಚರಿಸಲು ಯೋಗ್ಯಮಾದ ಪಿಂಡಜ್ಞಾನಾದಿ ಶೂನ್ಯಾಂತಮಾದ ನೂರುಸ್ಥಲಂಗಳಿಗೆ ಮುಖ್ಯಮಾದ ಪಿಂಡಸ್ಥಲಮಂ ನಿರೂಪಿಸುತಿರ್ದಪಂ

## ೧. ಪಿಂಡಸ್ಥಲ

ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ ॥

ಬಹುಜನ್ಮಂಗಳಲ್ಲಿ ಮಾಡಲ್ಪಟ್ಟ ಸುಕೃತದಿಂದ ಪಾಪಸಮೂಹವು ನಷ್ಟವಾಗಲಾಗಿ ನಿರ್ಮಲವಾದ ಅಂತಃಕರಣವುಳ್ಳ ಜೀವನು ಪಿಂಡಶಬ್ದದಿಂ ಪೇಳಲ್ಪಡುತ್ತಿಹನೆಂಬುದರ್ಥಂ. ಇಲ್ಲಿ ಪಿಂಡಸ್ಥಲವೆಂಬುದು ಸಾಧ್ಯವು. ಮುಂದೆ ಪೇಳುವ ಪಿಂಡ ಜ್ಞಾನಾದಿ ಶೂನ್ಯಾಂತಮಾದ ನೂರುಸ್ಥಲಂಗಳೆ ಸಾಧನಂಗಳು ॥೩೨॥ ಆಮೇಲೆ ಪಿಂಡಶಬ್ದವಾಚ್ಯನಾದ ಜೀವನು ಲೋಕಸಾಧಾರಣನೊ ಲೋಕೋತ್ಕೃಷ್ಟನೊ ಎಂಬಲ್ಲಿ ಪೇಳುತಿರ್ದಪಂ

ಶಿವಶಕ್ತಿಸಮುತ್ಪನ್ನೇ ಪ್ರಪಂಚೇsಸ್ಮಿನ್ವಿಕಲ್ಪಿತೇ
ಪುಣ್ಯಾಧಿಕಃ ಕ್ಷೀಣಪಾಪಃ ಶುದ್ಧಾತ್ಮಾ ಪಿಂಡನಾಮಕಃ ॥

ಲಿಂಗಾಂಕಿತಂ ಪಶ್ಯ ಜಗದ್ಭಗಾಂಕಂ ಹೀಗೆಂಬ ವ್ಯಾಸವಚನದಿಂ ಶಿವಶಕ್ತಿಗಳಿಂದುಂಟಾದ ಈ ಪ್ರಪಂಚದಲ್ಲಿ ಪುಣ್ಯದ ಹೆಚ್ಚಿಗೆಯಿಂ ಪಾಪ ನಷ್ಟವಾದ ಕಾರಣದಿಂ ನಿರ್ಮಲಾಂತಃಕರಣನಾಗಿ ಪಿಂಡವೆಂಬ ಪೆಸರನ್ನುಳ್ಳಾತನು ಇತರ ಜನರಿಂ ಶ್ರೇಷ್ಠನೆಂಬುದರ್ಥಂ ॥೩೩॥ ಹಾಗಾದರೆ ಪಿಂಡವೆಂಬ ಪೆಸರುಳ್ಳಾತನು ಶಿವನೋ ತದ್ವ್ಯತಿರಿಕ್ತನೋಯೆಂದು ಶಂಕೆ ಪ್ರಾಪ್ತಮಾದಲ್ಲಿ ಪೇಳುತಿರ್ದಪಂ.

ಏಕ ಏವ ಶಿವಸ್ಸಾಕ್ಷಾಚ್ಚಿದಾನಂದಮಯೋವಿಭುಃ
ನಿರ್ವಿಕಲ್ಪೋ ನಿರಾಕಾರಃ ನಿರ್ಗುಣೋ ನಿಷ್ಪ್ರಪಂಚಕಃ ॥

ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ
ದೇವತಿರ್ಯಙ್ಮನುಷ್ಯಾದಿ ಜಾತಿಭೇದೇ ವ್ಯವಸ್ಥಿತಃ ॥
ಮಾಯೀ ಮಾಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ

ಚಿದಾನಂದ ಮಯಃ – ಸ್ವತಂತ್ರ ಪ್ರಕಾಶನು, ಸಾಕ್ಷಾತ್ – ಅದು ಕಾರಣದಿಂದಲೆ ದೇಶ ಕಾಲ ಆಕಾರಂಗಳ ಸೋಂಕಿಲ್ಲದೆ ಸಾಮಾನ್ಯಾಕಾರದಿಂ ನಾನೆಂದು ಸರ್ವಲೋಕ ಪ್ರತ್ಯಕ್ಷನು. ಉತ್ಯೆನಂ ಗೋಪಾ ಅದೃಶನ್ ಹೀಗೆಂದು ಶ್ರೀ ರುದ್ರಶ್ರುತಿ ಪೇಳುತ್ತಿರುವುದು.

ವಿಭುಃ– ಪರಿಪೂರ್ಣನು, ನಿರ್ವಿಕಲ್ಪಃ – ಭೇದರಹಿತನು, ನಿಷ್ಪ್ರಪಂಚಕಃ – ಆ ಕಾರಣದಿಂದಲೆ ಮಾಯಿಕಪ್ರಪಂಚ ಶೂನ್ಯನು. ನಿರಾಕಾರಃ – ಆ ಕಾರಣದಿಂದಲೆ ನೀಲಪೀತಾದ್ಯಾಕಾರ ರಹಿತನು. ನಿರ್ಗುಣಃ – ಮಾಯಿಕ ಸತ್ವರಜಸ್ತಮೋ ಗುಣರಹಿತನು. ಶಿವಃ – ಅಕುಂಠಿತೇಚ್ಛಾದ್ಯಾನಂತ ಕಲ್ಯಾಣಗುಣ ಪೂರ್ಣ ಪರಮಾತ್ಮನು. ಅಥವಾನಂತ ಕಲ್ಯಾಣಗುಣೈಕನಿಧಿರೀಶ್ವರಃ ಶಿವಯಿತ್ಯುಚ್ಯತೇಸದ್ಭಿಃ ಶಿವತತ್ವಾರ್ಥ ವೇದಿಭಿಃ ಹೀಗೆಂಬ ಪುರಾಣವಚನೀಯರ್ಥದಲ್ಲಿ ಪ್ರಮಾಣವಾಗಿರುವುದು. ಏಕೇವ ಏಕಮೇವಾದ್ವಿತೀಯವೆಂಬ ಶ್ರುತಿಪ್ರಮಾಣದಿಂದೊರ್ವನೆ ಸರಿ. ಹಾಗಾದರೂ ಅನಾದ್ಯವಿದ್ಯಾಸಂಬಂಧಾತ್ ಜೀವಬ್ರಹ್ಮ ವಿಭಾಗದಂತೆ ಮುಂದೆ ಪೇಳುವ ತನ್ನ ವಿಮರ್ಶಾಶಕ್ತಿಯಿಂದನಾದಿ ಪರಿಕಲ್ಪಿತಮಾದ ಮಾಯಾಸಂಬಂಧದತ್ತಣಿಂ ತದಂಶಃ ಜ್ಞಾನಕ್ರಿಯಾ ಸಾಮರಸ್ಯಾತ್ಮಕನಾದ ಶಿವನ ಚಿತ್ಕ್ರಿಯಾ ಲೇಶವು, ಜೀವನಾಮಕಃ – ಜೀವನೆಂಬ ಪೆಸರುಳ್ಳನೆಂಬುದರ್ಥಂ. ಈ ಅರ್ಥದಲ್ಲಿ ಮಮೈವಾಂಶೋ ಜೀವಲೋಕೇ ಜೀವ ಭೂತಸ್ಸನಾತನಃ ಅಂಶೋ ನಾ ನಾವ್ಯಪದೇಶಾತ್ ಹೀಗೆಂಬ ಗೀತಾವಾಕ್ಯವೂ ವ್ಯಾಸಸೂತ್ರವೂ ಪ್ರಮಾಣವಾಗಿರುವುದು. ಈ ಪ್ರಕಾರದಿಂ ಶಿವನೆ ಅಂಶೀಭೂತನಾದ ಜೀವನು ದೇವತಿರ್ಯಙ್ಮಾನುಷ್ಯಾದಿ ಜಾತಿಭೇದ ವ್ಯವಸ್ಥಿತಃ ದೇವಾಃ ಷೋಡಶಲಕ್ಷಾಣಿ ನವಲಕ್ಷಾಣಿ ಮಾನುಷಾಃ ದಶಭಿರ್ದಬಿಸ್ತದ್ವ ಜ್ಜಲಜಾ ವಿಹಂಗಮಗಾಃ ಸರೀಸೃಪಾಸ್ತು ಲಕ್ಷಾಣಿಏಕಾದಶ ಚರೇತರಾಃ ಅಷ್ಟಾ ಚ ದಶ ಲಕ್ಷಾಣಿ ಸಪ್ತಜನಾಸ್ಯೈಮೂನಿವ್ಯೈ ದೇವಾಃ – ದೇವತೆಗಳು ಹದಿನಾರು ಲಕ್ಷಜಾತಿ, ಮನುಷ್ಯರೊಂಬತ್ತು ಲಕ್ಷ ಜಾತಿ, ಜಲಚರ ಪ್ರಾಣಿಗಳು ಹತ್ತುಲಕ್ಷ ಜಾತಿ, ಪಕ್ಷಿಗಳು ಹತ್ತು ಲಕ್ಷ ಜಾತಿ, ಮೃಗಗಳು ಹತ್ತು ಲಕ್ಷ ಜಾತಿ, ಸರ್ಪಗಳು ಹನ್ನೊಂದು ಲಕ್ಷ ಜಾತಿ, ಸ್ಥಾವರ ಪ್ರಾಣಿಗಳು ಹದಿನೆಂಟು ಲಕ್ಷ ಜಾತಿ. ಈ ಪ್ರಕಾರದಿಂ ದೇವ ಮಾನವ ಜಲಚರ ಪಕ್ಷಿ ಮೃಗ ಸರ್ಪ ಸ್ಥಾವರವೆಂಬ ಸಪ್ತಯೋನಿಗಳಲ್ಲಿ ೮೪ ಲಕ್ಷ ಜೀವಜಾತಿ ಭೇದಂಗಳು ಉಂಟಾಗಿರುವವೆಂಬ ಸ್ಕಂದಪುರಾಣ ವಚನದಿಂ ದೇವತಿರ್ಯಙ್ಮಾನುಷ್ಯಾದಿ ನಾನಾಜಾತಿ ಭೇದವನಾಶ್ರಯಿಸಿ ಕೊಂಡಿರುವನು. ಮಾಹೇಶ್ವರಃ – ಪೇಳಲ್ಪಟ್ಟ ಕುರುಹುಳ್ಳ ಪರಶಿವನು ಮಾಯಿ ಮಾಯಿನಂತು ಮಹೇಶ್ವರಂ ಹೀಗೆಂಬ ಶ್ರುತಿಯಿಂದುಕ್ತರೂಪಮುಳ್ಳ ಮಾಯಾಶಕ್ತಿಯೊಡನೆ ಕೂಡಿದಾತನಾಗಿ, ತೇಷಾಂ – ಆ ಜೀವರ, ಹೃದಿ –ಅಂತರಂಗದಲ್ಲಿ, ಪ್ರೇರಕಃ – ಪುಣ್ಯಾಪಾಪ ವಿಷಯಕಮಾದ ಬುದ್ಧಿ ವೃತ್ತಿ ಪ್ರೇರಕನಾಗಿ, ಸ್ಥಲಸ್ಥಿತಃ – ಇರುತ್ತಿಹನೆಂಬುದರ್ಥಂ ॥೩೫॥ ಆಮೇಲೆ ಶಿವನು ಜೀವರಂತರಂಗದಲ್ಲಿ ಹೇಗಿರುವನೆಂಬಲ್ಲಿ ಪೇಳುತಿರ್ದಪಂ

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥ್ಯಾನಲಃ
ಬೀಜೇ ಯಥಾಂಕುರಸ್ಸಿದ್ಧಸ್ತಥ್ಯಾತ್ಮನಿ ಶಿವಸ್ಸ್ಥಿತಃ ॥

ಚಂದ್ರಕಾಂತದಲ್ಲಿ ಉದಕವಿರುವಂತೆ, ಸೂರ್ಯಕಾಂತದಲ್ಲಿ ವಹ್ನಿಯಿರುವಂತೆ, ಬೀಜದಲ್ಲಿ ಅಂಕುರ ಸಿದ್ಧವಾಗಿರುವಂತೆ, ಜೀವಾತ್ಮನಲ್ಲಿ ಪರಮಾತ್ಮನಾದ ಶಿವನು ಇರುವನೆಂಬುದರ್ಥಂ ॥೩೬॥ ಈ ಪ್ರಕಾರದಲ್ಲಿ ಜೀವೇಶ್ವರರೀರ್ವರೂ ಬ್ರಹ್ಮಾದಿ ರಿಕ್ತರಲ್ಲ, ಮತ್ತೇನೆಂದರೆ ಜೀವತ್ವವೂ ಈಶ್ವರತ್ವವೂ ಬ್ರಹ್ಮದಲ್ಲಿ ಕಲ್ಪಿತಮೆಂಬುದುಂ ಪೇಳುತಿರ್ದಪಂ.

ಆತ್ಮತ್ವಮೀಶ್ವರತ್ವಂ ಚ ಬ್ರಹ್ಮಣ್ಯೇಕತ್ರ ಕಲ್ಪಿತಮ್
ಬಿಂಬತ್ವಂ ಪ್ರತಿಬಿಂಬತ್ವಂ ಯಥಾ ಪೂಷಣಿ ಕಲ್ಪಿತಮ್ ॥

ಸೂರ್ಯನಲ್ಲಿ ಬಿಂಬತ್ವವೂ ಪ್ರತಿಬಿಂಬತ್ವವೂ ಹೇಗೆ ಕಲ್ಪಿಸಲ್ಪಟ್ಟಿತ್ತು ಹಾಗೆ ಏಕತ್ರ ಬ್ರಹ್ಮನಿಂದೆಯಾದ ಬ್ರಹ್ಮದಲ್ಲಿ ಜೀವತ್ವವೂ ಈಶ್ವರತ್ವವೂ ಕಲ್ಪಿಸಲ್ಪಟ್ಟಿತ್ತೆಂಬುದರ್ಥಂ ॥೩೭॥ ಆಮೇಲೆ ಪ್ರತಿಬಿಂಬವು ದರ್ಪಣವದ್ಯುಪಾಧಿಕೃತಮಾದುದರಿಂ ಪ್ರತಿಬಿಂಬತ್ವವು ತನ್ನಿರೂಪಿತಮಾದ ಬಿಂಬತ್ವವೂ ಸೂರ್ಯನಲ್ಲಿ ಕಲ್ಪಿತಮೆಂದು ಪೇಳಬಹುದು. ಬ್ರಹ್ಮದಲ್ಲಿ ಬೇರೊಂದು ಉಪಾಧಿಯಿಲ್ಲವಲ್ಲ ಎಂಬಲ್ಲಿ ಪೇಳುತಿರ್ದಪಂ

ಗುಣತ್ರಯವಿಭೇದೇನ ಪರತತ್ತ್ವೇ ಚಿದಾತ್ಮನಿ
ಭೋಕ್ತೃತ್ವಂ ಚೈವ ಭೋಜ್ಯತ್ವಂ ಪ್ರೇರಕತ್ವಂ ಚ ಕಲ್ಪಿತಮ್ ॥

ಪರತತ್ತ್ವವಾದ ಶುದ್ಧಚಿದ್ರೂಪಬ್ರಹ್ಮದಲ್ಲಿ ಸಾತ್ವಿಕಾದಿ ಗುಣತ್ರಯ ಭೇದದಿಂದ ಸುಖದುಃಖಭೋಕ್ತೃತ್ವವೂ ಭೋಜ್ಯಪದಾರ್ಥತ್ವವೂ ಪ್ರೇರಕತ್ವವೂ ಕಲ್ಪಿಸಲ್ಪಟ್ಟಿತ್ತೆಂಬುದರ್ಥಂ॥೩೮॥ ಬಳಿಕ ಶುದ್ಧ ಚಿದ್ರೂಪ ಬ್ರಹ್ಮದಲ್ಲಿ ಸಾತ್ವಿಕಾದಿ ಗುಣತ್ರಯ ಭೇದವಿಲ್ಲವೆಂದು ಪೇಳಿದ ಕಾರಣದಿಂದುಕ್ತಾರ್ಥ ಸಿದ್ಧಿ ಎಂತಪ್ಪುದೆಂದು ಶಂಕೆ ಪ್ರಾಪ್ತಮಾದಲ್ಲಿ ಪೇಳುತ್ತಿರ್ದಪಂ

ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ
ತದ್ವೈಷಮ್ಯಾತ್ಸಮುತ್ಪನ್ನಾ ತಸ್ಮಿನ್ವಸ್ತುತ್ರಯಾಭಿಧಾ ॥

ಸನಾತನೀ–ಅನಿತ್ಯವಲ್ಲದ ಬ್ರಹ್ಮನಿಷ್ಠಾ ಸಂಯೋಗವೆಂಬುದು ಕ್ರಿಯಾಪೂರ್ವಮಾದುದರಿಂ ಭಿನ್ನದೇಶ ಸ್ಥಿತ ಪದಾರ್ಥಂಗಳಿಗೆ ಘಟಿಸುವುದಾದ ಕಾರಣ ಬ್ರಹ್ಮಬಾಹ್ಯ ದೇಶಮಿಲ್ಲ, ಸಂಬಂಧ ಕೂಡದೆ ಹೋಗಲಾಗಿ ಶುಕ್ಲಪಟನ್ಯಾಯದಿಂ ಬ್ರಹ್ಮದಲ್ಲಿ ಸಮವೇತಮಾದ ಶಕ್ತಿಃ ಸ್ವತಂತ್ರ ಸ್ವಪ್ರಕಾಶ ಶಕ್ತಿಯು ಅಸ್ತಿ ಉಂಟೆಂಬುದು ಉಳ್ಳುಮೆಯು. ತದ್ವೈಷಮ್ಯಾತ್ – ಆ ಸ್ವತಂತ್ರತೆ ಸ್ವಪ್ರಕಾಶತೆಗಳ ವ್ಯತ್ಯಾಸದತ್ತಣಿಂ, ತಸ್ಮಿನ್ – ಆ ಸ್ವಚ್ಛ ಚಿದ್ರೂಪ ಬ್ರಹ್ಮದಲ್ಲಿ ಗುಣತ್ರಯಾತ್ಮಿಕ ಪ್ರತಿಪತ್ತಿ ರಜಸ್ತಮೋಗುಣಂಗಳುಳ್ಳದಾಗಿ ವಸ್ತುತ್ರಯಾಭಿಧಾ ಭೋಕ್ತೃ ಭೋಜ್ಯ ಅದ್ವೈತಕ್ಕೆ ಹಾನಿ ಬರುವುದು. ಬ್ರಹ್ಮಭಿನ್ನವಾಗಿ ಒಂದು ಪದಾರ್ಥವುಂಟೆಂದಗೀಕರಿಸುವುದಕ್ಕೂ ಕೂಡದು. ಘಟದಿಂ ಭಿನ್ನವಾದ ಪಟವು ಘಟಕೆ ಹಾರಾಗದಂತೆ ಬ್ರಹ್ಮ ಭಿನ್ನವಾದ ವಸ್ತು ಬ್ರಹ್ಮಕ್ಕೆ ಹಾರಾಗಬೇಕಾಗಿ ಅದಕ್ಕೆ ಸ್ಥಿತಿ ಇಲ್ಲದೆ ಹೋಗೂದೆಂಬ ಕಾರಣದಿಂ ಇಲ್ಲಿ ಘಟಗತ ರೂಪಾದಿ ದೃಷ್ಟಾಂತವು ಕೂಡದು. ಅದರಂತೆ ಆ ಸಮವೇತಮಾದ ಕಾರಣದಿಂ ಘಟಾಕಾಶ ದೃಷ್ಟಾಂತವು ಕೂಡದು – ಪೂರ್ವ ಪರಿಭಾವಮಿಲ್ಲದ ಕಾರಣದಿಂ ಕ್ಷೀರನೀರ ದೃಷ್ಟಾಂತವೂ ಕೂಡದು. ಅವೆರಡು ಪರಿಚ್ಛಿನ್ನಮಾಗಿ ಪರಸ್ಪರ ಬಾಹ್ಯಮಾಗಿ ಸಜಾತೀಯಮಾಗಿ ಪುರುಷಪ್ರಯತ್ನದಿಂ ಕೂಡಿರುವವಾದ ಕಾರಣದಿಂ ಬ್ರಹ್ಮಭಿನ್ನಪದಾರ್ಥವಸತ್ಕಲ್ಪವು ಶ್ರುತ್ಯಾದಿ ಪ್ರಮಾಣ ಬಲದಿಂ ಅಂಗೀಕರಿಸುತ್ತೇವೆ ಎಂದರೆ ಘಟಾದಿಗಳಂ ಕುರಿತು ತದ್ವಿಜಾತೀಯಮಾದ ಚಕ್ಷುರಾದಿಗಳಂತೆ ತದ್ವಿಜಾತೀಯ ಪ್ರಮಾಣಮಿಲ್ಲಂ. ಅಂಗೀಕರಿಸಿದರೂ ಜೀವೇಶ್ವರ ವಿಭಾಗ ಮುಂತಾದ್ದು

ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ವಿಸ್ತರಿಸಿ ಬರೆದಿದೆ. ಇಲ್ಲಿ ಗ್ರಂಥ ವಿಸ್ತಾರ ಭಯದಿಂದ ಬರೆಯಲಿಲ್ಲ, ಶಾಸ್ತ್ರಜ್ಞರಾದವರಲ್ಲಿ ನೋಡಿಕೊಂಬುದು. ಹಾಗಾದಡೆ ಸಮವೇತ ಶಕ್ತಿಯೆಂಬುದು ಶಿವಾಭಿನ್ನಮಾದ ಕಾರಣದಿಂ ನಿರವಯವವೆಸರಿಂ ಸಾವಯವ ಪ್ರಪಂಚಕ್ಕೆಂತುಪಾದಾನಮಪ್ಪುದೆಂದು ಶಂಕಿಸಲಾಗದು. ನಿರಂಶಮಾದ ಪರಮಾಣು ತನ್ನ ತನ್ನ ಕಾರ್ಯರೂಪಮಾದ ದ್ವ್ಯೇಣುಕದಲ್ಲಿ ನಿರಂಶೀಯಮಾದ ತನ್ನ ಸಂಯೋಗ ಮಹಿಮೆಯಿಂ ಸಾಂಶತ್ವವನ್ನುಂಟು ಮಾಡಿ ಜಗದುಪಾದಾನಕಾರಣಮಾದಂತೆ ಶಕ್ತಿನಿರಂಶವಾದರೂ ತನ್ನ ಸ್ವತಂತ್ರತೆಯಿಂ ಕಲ್ಪಿಸಲ್ಪಟ್ಟ ಮಾಯೆಯಲ್ಲಿ ಸಾಂಶತ್ವವನ್ನುಂಟು ಮಾಡಿ ತನ್ಮುಖದಿಂ ವಿಶ್ವೋಪಾದಾನಮಾಗಿರುವುದು. ಯೇತಾವಾನಸ್ಯ ಮಹಿಮಾಯೆಂಬ ಶೃತಿಯುತ್ತಣಿಂ ಶಕ್ತಿಯತಿದುರ್ಘಟಕಾರಿಯೆಂದು ಪ್ರಸಿದ್ಧಮಾದಕಾರಣದಿಂದಾವ ಪ್ರಯಾಸಮೂಯಿಲ್ಲಂ ॥೩೯॥ ಆಮೇಲೆ ಯಾವ ಗುಣದಿಂ ಯಾವ ವಸ್ತು ಉಂಟಾಯಿತ್ತೆಂಬಲ್ಲಿ ಪೇಳುತಿರ್ದಪಂ

> ಪರತತ್ತ್ವಮಯೋಪಾಧಿರ್ಬ್ರಹ್ಮಚೈತನ್ಯಮೀಶ್ವರಃ
> ಕಿಂಚಿತ್ ಸತ್ವರಜೋರೂಪಂ ಭೋಕ್ತೃಸಂಜ್ಞಕಮುಚ್ಯತೇ ॥
> ಅತ್ಯಂತ ತಾಮಸೋಪಾಧಿರ್ಭೋಜ್ಯಮಿತ್ಯಭಿಧೀಯತೇ

ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ ಹೀಗೆಂಬ ಭಗವದ್ವಚನಾನುಸಾರದಿಂ ರಜೋಗುಣವೆಂಬುದು ಕಿಂಚಿತ್ಸತ್ವತಮೋಮಿಶ್ರಮಾದಂಥಾದು. ಆದ್ದರಿಂದ ಕಿಂಚಿತ್ಸತ್ವರಜೋರೂಪಂ – ಕಿಂಚಿತ್ಸತ್ವ ತಮೋಮಿಶ್ರಮಾದ ರಜೋಗುಣದಿಂ ವಿಶಿಷ್ಟಮಾದ ಚೈತನ್ಯವೆ, ಭೋಕ್ತೃಸಂಜ್ಞಕಮುಚ್ಯತೇ– ಸುಖದುಃಖ ಭೋಕ್ತೃವಾದ ಜೀವನೆಂಬ ಪೆಸರುಳ್ಳದೆಂದು ಪೇಳಲ್ಪಡುವುದು. ಪರತತ್ತ್ವಮಯೋಪಾಧಿಃ – ಕೇವಲ ಪ್ರೇರಕವೆಂಬ ನಾಮರೂಪ ಕ್ರಿಯೆಗಳುಳ್ಳಾಯಕನಾಗಿ, ಸಮುತ್ಪನ್ನಾ – ಮಾಯೆಯೆಂಬ ಪೆಸರಿನಿಂದ ಆವಿರ್ಭವಿಸಿದಳೆಂಬುದರ್ಥಂ. ಅವೆಂತೆಂದಡೆ ಶಿವನು ಸೃಷ್ಟ್ಯುನ್ಮುಖನಾಗಲಾಗಿ ಅನ್ಯೋನ್ಯ ಸಮರಸವಾಗಿರುವ ಸ್ವತಂತ್ರ ಸ್ವಪ್ರಕಾಶ ಶಕ್ತಿಯ ಸ್ವತಂತ್ರತೆಗೆ ಒಂದಂಶದಲ್ಲಿ ಸ್ವಪ್ರಕಾಶತೆಗೆ ತಿರೋಭಾವವುಂಟಾಗುವುದು. ಸ್ವಪ್ರಕಾಶತೆಗೆ ಒಂದಂಶದಲ್ಲಿ ಸ್ವತಂತ್ರತೆಗೆ ತಿರೋಭಾವ ವಹುದು. ಆಗಮಾಖ್ಯ ಸ್ವತಂತ್ರತಾ ವಿಯುಕ್ತ ಸ್ವಪ್ರಕಾಶತಾಶಯದಿಂ ಸತ್ವಗುಣಮಪ್ಪುದು. ಮುಖ್ಯ ಸ್ವಪ್ರಕಾಶತಾ ಶೂನ್ಯ ಸ್ವತಂತ್ರಾಂಶದಿಂದ ರಜೋಗುಣಶಕ್ತಿಯುಂಟಾಹದು. ಆಮೇಲೆ ಇತಿಯುಂಟಾದ ವಿಯೋಗ ಮಹಿಮೆಯಿಂ ಸ್ವತಂತ್ರತೆ ಸ್ವಪ್ರಕಾಶತೆಯಲ್ಲ, ಸ್ವಪ್ರಕಾಶತೆ ಸ್ವತಂತ್ರತೆ ಇಲ್ಲವೆಂಬ ಅನ್ಯೋನ್ಯ ಭಾವಬುದ್ಧಿಯೆ ತಮೋಗುಣ ಶಕ್ತಿಯಹುದು. ಈ ಪ್ರಕಾರದಿಂ ಶಿವಸಮವೇತಮಾದ ಸ್ವತಂತ್ರ ಸ್ವಪ್ರಕಾಶತಾ ಶಕ್ತಿಯೆ ಗುಣತ್ರಯಾತ್ಮಿಕೆಯಾಗಿ ಪ್ರತಿಸ್ಫುರಣ ಗತಿಯಿಂ ಮಾಯೆಯೆನಿಸಿಕೊಂಬಳೆಂಬುದು ತಾತ್ಪರ್ಯಂ.

ಇಲ್ಲಿ ಜೀವೇಶ್ವರ ವಿಭಾಗ ಪ್ರಕರಣದಲ್ಲಿ ಅನಾದ್ಯವಿದ್ಯಾಸಂಬಂಧಾತ್ತೆಂದು ಉಪತ್ಯಾಂತದಲ್ಲಿಮಾಗಿರುವುದರಿಂ ಅಸನಾತನಿಯೆಂದು ಪದಚ್ಛೇದವ ಮಾಡಿಕೊಂಡು ಬ್ರಹ್ಮಕ್ಕೆ ಸಮಾನವಾದ ಇರುವಿಕೆಯಿಲ್ಲದೆ ಅನಿರ್ವಚನೀಯ ಸಂಬಂಧದಿಂ ಬ್ರಹ್ಮದಲ್ಲಿರುವ ಅವಿದ್ಯಾಶಕ್ತಿಯೆ ಗುಣತ್ರಯಾತ್ಮಿಕೆಯೆಂದಂಗೀಕರಿಸಿದರದತಿ ಸುಲಭವಾಗಿರುವುದು. ಇಷ್ಟು

ಪ್ರಯಾಸವೇಕೆಂದು ಶಂಕಿಸಲಾಗದು. ಇದಕ್ಕಿಂತ ಮೊದಲು ಶಕ್ತಿಸ್ವರೂಪ ನಿರ್ಣಯ ಪ್ರಕರಣದಲ್ಲಿ ತದೀಯಪರಮಾ ಶಕ್ತಿಸ್ಸಚ್ಚಿದಾನಂದ ಲಕ್ಷಣಾ । ಸಮಸ್ತ ಲೋಕನಿರ್ಮಾಣ ಸಮವಾಯ ಸ್ವರೂಪಿಣೀಯೆಂದು ನಿರೂಪಿಸಿದ ವಚನಕ್ಕೂ ಮುಂದೆ ಭಾಜನಸ್ಥಲದಲ್ಲಿ ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ ತಥಾ ಶಕ್ತಿಃ ವಿಮರ್ಶಾತ್ಮಪ್ರಕಾರೇ ಬ್ರಹ್ಮಾಣಿ ಸ್ಥಿತಾ ಎಂದು ಪೇಳುವ ವಚನಕ್ಕೂ ವಿರೋಧವಾಹುದೆಂಬುದರಿಂ, ಆಮೇಲೆ ಅವಿದ್ಯೆಯು ಅನಾದಿ ಭಾವರೂಪವೆಂದಂಗೀಕರಿಸಿಹದರಿಂದ ಬ್ರಹ್ಮದಂತೆ ನಿತ್ಯತ್ವ ಪ್ರಸಕ್ತಿ ಯುಂಟಹುದು. ಅನಾದಿಭಾವತ್ವವಿರಲಿ ನಿತ್ಯತ್ವ ಬೇಡವೆಂದರೆ ನಿತ್ಯವಲ್ಲದ ಪದಾರ್ಥವು ಘಟಾದಿ ಭಾವದಂತೆ ಅನಾದಿಭಾವವೂ ಆಗದೆಂಬ ವ್ಯತಿರಿಕ್ತ ದೃಷ್ಟಾಂತವಿರುವುದರಿಂದ ಹಾಗೆ ಹೇಳಗೊಡದೆ ಅವಿದ್ಯೆಗೆ ನಿತ್ಯತ್ವ ಉಂಟಾಗಿ ತಮೋಗುಣ ವಿಶಿಷ್ಟ ಚೈತನ್ಯವೆ ಭೋಜ್ಯಮಿತ್ಯಭಿದೀಯ್ಯತೆ. ಭುಂಜಿಸಲು ಯೋಗ್ಯಮಾದ ರಸಾದಿರೂಪಮಾದಂಥಾದೆಂದು ಪೇಳಲ್ಪಡುವುದು. ಪರತತ್ತ್ವಮಯೋಪಾಧಿಃ – ಇವೆರಡರಿಂದುತ್ಕೃಷ್ಟಮಾದ ಕಾರಣದಿಂ ಪರತತ್ತ್ವವೆನಿಸಿಕೊಂಬ ಸತ್ವಗುಣೋಪಾಧಿವಿಶಿಷ್ಟಮಾದ, ಬ್ರಹ್ಮಚೈತನ್ಯಂ– ಪರಬ್ರಹ್ಮ ಚೈತನ್ಯವೆ, ಈಶ್ವರಃ – ಮಹೇಶ್ವರನೆಂಬುದರ್ಥಂ. ಆಮೇಲೆ ಇಲ್ಲಿ ಪೇಳಿದ ಅರ್ಥವನೆ ಸ್ಫುಟೀಕರಿಸುತಿರ್ದಪಂ. ॥೪೧॥

ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಮ್  
ಅಖಂಡೇ ಬ್ರಹ್ಮಚೈತನ್ಯೇ ಕಲ್ಪಿತಂ ಗುಣಭೇದತಃ ॥

ಅದ್ವಿತೀಯ ಬ್ರಹ್ಮಚೈತನ್ಯದಲ್ಲಿ ಈ ಪ್ರಕಾರದಿಂದುಂಟಾದ ಮಾಯಿಕ ಸತ್ತ್ವಾದಿ ಗುಣಭೇದದಿಂ ಭೋಕ್ತೃ ಭೋಜ್ಯ ಪ್ರೇರಕರೆಂಬೀ ವಸ್ತುತ್ರಯಂ ಕಲ್ಪಿಸಲ್ಪಟ್ಟಿತ್ತೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ॥೪೨॥ ಆಮೇಲೀ ವಸ್ತುತ್ರಯದ ಗುಣವನೂ ಪರ್ಯಾಯನಾಮಂಗಳನೂ ಪೇಳುತಿರ್ದಪಂ

ಅತ್ರ ಪ್ರೇರಯಿತಾ ಶಂಭುಶ್ಶುದ್ಧೋಪಾಧಿರ್ಮಹೇಶ್ವರಃ  
ಸಮ್ಮಿಶ್ರೋಪಾಧಯಸ್ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ ॥

ಭೋಜ್ಯಮವ್ಯಕ್ತಮಿತ್ಯುಕ್ತಂ ಶುದ್ಧತಾಮಸರೂಪಕಂ  
ಸರ್ವಜ್ಞಃ ಪ್ರೇರಕಶ್ಶಂಭುಃ ಕಿಂಚಿಜ್ಞೋಜೀವ ಉಚ್ಯತೇ ॥

ಅತ್ರ – ಈ ವಸ್ತುತ್ರಯಂಗಳಲ್ಲಿ ಅಧಿಕ ಸತ್ವೋಪಾಧಿಕನಾದ ಮಹೇಶ್ವರನು ಜಡ ಜೀವ ಪ್ರೇರಕನು ಸರ್ವಜ್ಞನು. ಸುಖಭೋಕ್ತೃವಾಗಿ ಸುಖವನೀವ ಶಂಭುವೆನಿಸಿ ಕೊಂಬನು. ಕಿಂಚಿತ್ತಮೋಯುಕ್ತನಾದ ಕಾರಣದಿಂ ಸಂಹಾರಕೃತ್ಯ ಪ್ರವೀಣನು. ಸಮಾನವಾಗಿ ಸತ್ತ್ವತಮೋ ಮಿಶ್ರಮಾದ ರಜೋಗುಣೋಪಾಧಿಕರಾದ ಕಾರಣದಿಂ ಸುಖ ದುಃಖ ಭೋಕ್ತೃಗಳಾದ ಸಕಲ ಜೀವರೂ ಪಶುಗಳೆಂದು ಸ್ಮರಿಸಲ್ಪಟ್ಟವರು. ಜೀವವರ್ಗಮೆಲ್ಲಂ ಕಿಂಚಿತ್‌ಜ್ಞಾನಯುಕ್ತಮಾದುದೆಂದು ಪೇಳಲ್ಪಡುತಿಹುದು. ಶುದ್ಧ ತಾಮಸೋಪಾಧಿಕಮಾದ ಭೋಜ್ಯವು ಪ್ರಕೃತ್ಯಪದಪರ್ಯಾಯಮಾದ ಅವ್ಯಕ್ತಮೆನಿಸಿ ಕೊಂಬುದರ್ಥಂ ॥೪೪॥ ಆಮೇಲೆ ಅವ್ಯಕ್ತಮೆಂದಡೇನೆಂಬಲ್ಲಿ ಪೇಳುತಿರ್ದಪಂ

ಅತ್ಯಂತಗೂಢಚೈತನ್ಯಂ ಜಡಮವ್ಯಕ್ತಮುಚ್ಯತೇ ॥

ವೃಕ್ಷಾದಿಗಳಿಗೆ ಇಂದ್ರಿಯ ಪ್ರಾಣಾದಿಗಳಿಲ್ಲದಿರುವುದರಿಂ ಜಡತ್ವಮುಂಟಾದರೂ ಜಲಪಾನೇಚ್ಛೆ ಬೆಳವಿಗೆಗಳುಂಟಾದ ಕಾರಣದಿಂ ಗುಪ್ತಚೈತನ್ಯವೆನಿಸಿಕೊಂಬ ಜಡಮೆ ಪ್ರವ್ಯಕ್ತ ಮೆನಿಸಿಕೊಂಬುದೆಂಬುದರ್ಥಂ ॥೪೪॥ ಈ ಪ್ರಕಾರದಿಂ ಮಾಯಾಗುಣ ಭೇದ ರೂಪಮಾದ ಉಪಾಧಿತ್ರಯಮಂ ವಿವರಿಸಿ ಬಳಿಕ ಲಿಂಗಾಂಗರೂಪಮಾದ ಶಿವಜೀವ ಸ್ವರೂಪಮಂ ಚೆನ್ನಾಗಿ ಕುರುಹಿಡಲೋಸ್ಕರ ಪೂರ್ವೋಕ್ತ ಮಾಯೋಪಾಧಿಯನಿತ್ತೆರನಾಗಿ ವಿಭಾಗಿಸಿ ಪೇಳುತಿರ್ದಪಂ.

ಉಪಾಧಿಃ ಪುನರಾಖ್ಯಾತಶ್ಶುದ್ಧಾಶುದ್ಧವಿಭೇದತಃ
ಶುದ್ಧೋಪಾಧಿಃ ಪರಾಮಾಯಾ ಸ್ವಾಶ್ರಯ್ಯಾಮೋಹಕಾರಿಣೀ ॥

ಅಶುದ್ಧೋಪಾಧಿರಪ್ಯೇವಮವಿದ್ಯಾಶ್ರಯಮೋಹಿನೀ
ಅವಿದ್ಯಾ ಶಕ್ತಿಭೇದೇನ ಜೀವಾಃ ಬಹುವಿಧಾಃ ಸ್ಮೃತಾಃ ॥

ಮಾಯಾಶಕ್ತಿವಶಾದೀಶಃ ನಾನಾಮೂರ್ತಿಧರಃ ಪ್ರಭುಃ
ಸರ್ವಜ್ಞ ಸರ್ವಕರ್ತಾ ಚ ನಿತ್ಯಮುಕ್ತೋ ಮಹೇಶ್ವರಃ ॥

ಕಿಂಚಿತ್ಕರ್ತಾ ಚ ಕಿಂಚಿಜ್ಞೋ ಬದ್ಧೋಽನಾದಿ ಶರೀರವಾನ್
ಅವಿದ್ಯಾಮೋಹಿತಾಃ ಜೀವಾಃ ಬ್ರಹ್ಮೈಕ್ಯಜ್ಞಾನವರ್ಜಿತಾಃ ॥

ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ
ದೇವತಿರ್ಯಙ್ಮನುಷ್ಯಾದಿನಾನಾಯೋನಿವಿಭೇದತಃ ॥

ಉಪಾಧಿಃ – ಪೂರ್ವೋಕ್ತಮಾಯೋಪಾಧಿಯು ಮರಳಿ ಶುದ್ಧಾಶುದ್ಧ ಭೇದದಿಂ ದಿತ್ತೆರನಾಗಿಹುದು. ಅಲ್ಲಿ ಶುದ್ಧೋಪಾಧಿಯೆಂಬುದು ತನಗಾಶ್ರಯವಾದಾತಂಗೆ ಅಜ್ಞಾನವ ಕೊಡದೆ ಇರುವುದೆಂದೂರ್ಧ್ವಮಾಯೆಯೆನಿಸಿಕೊಂಬುದು. ಅಶುದ್ಧೋಪಾಧಿಯಾದ ಅವಿದ್ಯೆಯು ತನಗಾಶ್ರಯವಾದಾತಂಗೆ ಅಜ್ಞಾನವನೀವದಂತಿದಧೋಮಾಯೆಯೆನಿಸಿ ಕೊಂಬುದು. ಆ ಅವಿದ್ಯೆಯಲ್ಲಿ ಅಂಶಭೇದದಿಂದ ಜೀವರು ಬಹುವಿಧವಾಗಿ ನೆನೆಯಲ್ಪಟ್ಟರು. ಶುದ್ಧೋಪಾಧಿಯುಳ್ಳ ಮಹೇಶ್ವರನು ಮಹಾಮಾಯಾಶಕ್ತಿವಶದಿಂ ಸದ್ಯೋಜಾತಾದಿ ನಾನಾ ಮೂರ್ತಿಗಳ ಧರಿಸಿಹನು. ಈಶಃ – ಜೀವರುಗಳಿಗೆ ಬುದ್ಧಿಪ್ರೇರಕನು. ಪ್ರಭುಃ – ಮಾಡಲು ಮಾಡದಿರಲು ಅನ್ಯಥಾ ಮಾಡಲು ಸಮರ್ಥನು. ಸದಸತ್ಸಕಲ ಪದಾರ್ಥ ವಿಷಯಕಮಾದ ಜ್ಞಾನಶಕ್ತಿಯುಳ್ಳವನು. ಸಕಲಪ್ರಪಂಚನಿರ್ಮಾಣದಲ್ಲಿ ನಿಮಿತ್ತ ಕಾರಣನಾದವನು. ಆಣವಾದಿಮಲತ್ರಯ ಸಂಬಂಧಮಿಲ್ಲದ ಕಾರಣದಿಂ ನಿತ್ಯಮುಕ್ತನು. ಈ ಅರ್ಥದಲ್ಲಿ ಸರ್ವಗಸ್ಸರ್ವ ಕರ್ತಾ ಚ ಸರ್ವಜ್ಞಃ ಪಂಚಕೃತ್ಯ ಸಂಪನ್ನ ಸರ್ವೇಶ್ವರ ಈಶ್ವರಃ ಹೀಗೆಂಬ ವೃದ್ಧಜಾಬಾಲಶ್ರುತಿಯುಂಟಾಗಿ ಆಮೇಲೆ ಜೀವನು ಕಿಂಚಿಜ್ಞನು. ಆಣವಾದಿ ಮಲತ್ರಯ ಬದ್ಧನು. ಅನಾದಿಯಾಗಿ ಬಂದ ಶರೀರಾಭಿಮಾನವುಳ್ಳವನು. ಈ ಅರ್ಥದಲ್ಲಿ ತಜ್ಞಾಜ್ಞಾದ್ವ ವಿಜಾವೇಶಾನಿಶಾವಜೋಹ್ಯೇಕೋ ಭೋಕ್ತೃ ಭೋಗಾರ್ಥಯುಕ್ತಃ ಅನೀಶಾಶಾತ್ಮಾ ಬಾಧತೇ ಭೋಕ್ತೃಭಾವಾತ್ ಜ್ಞಾತ್ವಾದೇವ ಮುಚ್ಯತೇ ಸರ್ವಪಾಶೈಃ ಹೀಗೆಂಬ ಶ್ವೇತಾಶ್ವತರ

ಶ್ರುತಿಯೂ ಅನಾದಿಮಲ ಸಂಬಂಧಾತ್ಕಿಂಚಿಜ್ಞೋ -ಕರ್ಮಚೋದಿತಃ ಅನಾದಿಮಲ ಯುಕ್ತತ್ವಾತ್ ಸರ್ವಜ್ಞೋಸೌಶಿವಸ್ಮೃತಃ ಹೀಗೆಂಬ ಕಿರಣಾಗಮವಾಕ್ಯವು ಉಂಟಾಗಿ ಏವಂ ಜೀವಾಃ ಈ ಪ್ರಕಾರಮಾದ ರೂಪಮುಳ್ಳ ಜೀವರು ಅವಿದ್ಯೆಯಿಂ ಮೋಹಿತರಾಗಿ ಅಹಂ ಬ್ರಹ್ಮಾಸ್ಮಿ ಎಂಬ ಬ್ರಹ್ಮೈಕ್ಯಜ್ಞಾನಶೂನ್ಯರಾಗಿ ತಮ್ಮ ಕರ್ಮಾನುಸಾರದಿಂದ ದೇವತಿರ್ಯಙ್ಮನುಷ್ಯಾದಿ ನಾನಾಯೋನಿಗಳನೈದಿ ಸಂಸಾರದಲ್ಲಿ ತಿರುಗುತ್ತಿಹರೆಂಬುದರ್ಥಂ ॥೪೯॥ ಆಮೇಲೆ ಹೇಗೆ ತಿರುಗುತ್ತಿಹರೆಂಬಲ್ಲಿ ಪೇಳುತಿರ್ದಪಂ.

ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮ ಕೇವಲಮ್ ॥

ಪ್ರಾಣಿಗಳು ಬಂಡಿಗಾಲಿಮಸ್ತಕಕ್ಕೆ ಕಟ್ಟಿದ ಹಳಿ ತಿರುಗುವಂತೆ ತಿರುಗುತ್ತಿಹವು. ಜಾತ್ಯಾಯುಸ್ಸು ಸುಖದುಃಖಾನುಭವಂಗಳಿಗೆ ಕಾರಣಮಾದುದು. ಬಚ್ಚ ಬರಿಯ ಕರ್ಮವೆಂಬುದರ್ಥಂ ॥೫೦॥ ಹಾಗಾದರೀಶ್ವರನೇಕೆ ಎಂಬಲ್ಲಿ ಪೇಳುತಿರ್ದಪಂ.

ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ
ಸಂಸಾರೇ ಭ್ರಮತಾಂ ನಿತ್ಯಂ ಕರ್ಮಯಂತ್ರನಿಯಂತ್ರಣೇ ॥

ಕರ್ಮವೆಂಬ ಸೂತ್ರದಿಂ ಕಟ್ಟಲ್ಪಟ್ಟ ಸಂಸಾರವೆಂಬ ರಾಟಾಳದಲ್ಲಿ ನಿರಂತರವೂ ತಿರುಗುವಂಥಾ ಈ ವಿಚಿತ್ರದೇಹಿಗಳಿಗೂ ಶೇಷಾರ್ಥಮಾದ ಈ ಕರ್ಮಂಗಳಿಗೂ ಅಸ್ವತಂತ್ರತ್ವ ಜಡತ್ವವುಂಟಾಗಿರುವುದರಿಂ ಕರ್ಮಪರತಂತ್ರನಲ್ಲದೆ ಸಾಕ್ಷಿಕನಾಗಿ ಪ್ರೇರಕನಾಗಿ ಕರ್ಮಫಲವನೀವ ಪರಮೇಶ್ವರನ ಅಂಗೀಕರಿಸಬೇಕೆಂಬುದರ್ಥಂ ॥೫೧॥ ಆಮೇಲೆ ಶಿವನಿಷ್ಟು ಮಾತ್ರವೇ ಅಲ್ಲ ವಿಶೇಷವುಂಟೆಂದು ಪೇಳುತಿರ್ದಪಂ

ದೇಹಿನಾಂ ಪ್ರೇರಕಶ್ಶಂಭುರ್ಹಿತಮಾರ್ಗೋಪದೇಶಕಃ
ಪುನರಾವೃತ್ತಿರಹಿತಮೋಕ್ಷಮಾರ್ಗೋಪದೇಶಕಃ ॥

ಪ್ರಾಣಿಗಳಿಗೆ ಪುಣ್ಯಪಾಪವಿಷಯಕಮಾದ ಬುದ್ಧಿಯಂ ಪ್ರೇರಿಸುವ ಶಿವನು ಪುನಾರಾವೃತ್ತಿರಹಿತಮಾದ ಮೋಕ್ಷಮಾರ್ಗವನು ಪೇಳಿಕೊಡುವಾತನೆಂಬುದರ್ಥಂ. ಅದೆಂತೆಂದಡೆ ಪೇಳುತಿರ್ದಪಂ ॥೫೨॥

ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ
ಶಿವಪ್ರಸಾದಾಜ್ಜೀವೋsಯಂ ಜಾಯತೇ ಶುದ್ಧಮಾನಸಃ ॥

ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ
ಜಾಯತೇ ಶಿವಕಾರುಣ್ಯಾತ್ಪ್ರಸ್ಫುಟಾ ಭಕ್ತಿರೈಶ್ವರೀ ॥

ಈ ಜೀವನು ವಿಜ್ಞಾನಯೋಗ ಸಂನ್ಯಾಸೈರ್ಭೋಗಾದ್ವಾ ಕರ್ಮಣಾಃಕ್ಷಯಃ ಹೀಗೆಂಬ ಶಿವಾಗಮೋಕ್ತಿಯಿಂ ತನ್ನ ಕರ್ಮಪರಿಪಾಕದಿಂದ ಹೋಗಲ್ಪಟ್ಟ ಮಲವಾಸನೆಯುಳ್ಳವನಾಗಿ ಶಿವಪ್ರಸಾದದತ್ತಣಿಂ ಶುದ್ಧಾಂತಃಕರಣನಾಗುತ್ತಿಹನು. ಆ ಶುದ್ಧಾಂತಃಕರಣನಾದ ಜೀವನಲ್ಲಿ

ಶ್ರುತ್ಯಾಗಮೋಕ್ತಮಾದ ಶುದ್ಧಕರ್ಮ ಪರಿಪಾಕದತ್ತಣಿಂ ಶಿವನ ಕೃಪೆಯುಂಟಾಗುತ್ತಿಹದು. ಅದರಿಂ ಶಿವವಿಷಯಕಮಾದ ಭಕ್ತಿ ಸ್ಫುಟವಾಗುವುದು. ಆ ಭಕ್ತಿದ್ವಾರದಿಂದ ಮೋಕ್ಷ ಮಾರ್ಗವನುಪದೇಶಿಸುವನೆಂಬುದರ್ಥಂ ||೫೪|| ಈ ಪ್ರಕಾರದಿಂದುಂಟಾದ ಶಿವಭಕ್ತಿಯುಳ್ಳ ಚರಮದೇಹಿಯು ಪಿಂಡಶಬ್ದವಾಚ್ಯನೆಂದು ಪೇಳುತಿರ್ದಪಂ.

ಜಂತುರಂತ್ಯಶರೀರೋऽಸೌ ಪಿಂಡಶಬ್ದಾಭಿಧೇಯಕಃ ||

ಈ ಪ್ರಕಾರದಿಂ ಪುಟ್ಟಿದ ಶಿವಭಕ್ತಿಯುಳ್ಳ ಜೀವನು ತದಸ್ಯ ತೃತೀಯೇ ಜನ್ಮ ಎಂಬ ಶ್ರುತಿಯಿಂ ಕಡೆಯ ಶರೀರವುಳ್ಳವನಾಗಿ ಪಿಂಡವೆಂಬ ನಾಮಧೇಯವುಳ್ಳವನಹ ನೆಂಬುದರ್ಥಂ ||೫೫|| ವಿವೇಕಮೇತಕೆಂಬಲ್ಲಿ ಪೇಳುತಿರ್ದಪಂ.

ಶರೀರಮೇವ ಚಾರ್ವಾಕೈರಾತ್ಮೇತಿ ಪರಿಕೀರ್ತ್ಯತೇ ||

ಇಂದ್ರಿಯಾಣಾಂ ತಥಾತ್ಮತ್ವಮಪರೈಃ ಪರಿಭಾಷ್ಯತೇ
ಬುದ್ಧಿತತ್ತ್ವಗತೈರ್ಬೌದ್ಧೈಃ ಬುದ್ಧಿರಾತ್ಮೇತಿ ಗೀಯತೇ ||

ಚಾರ್ವಾಕರಿಂ ಶರೀರದಲ್ಲಿ ಜ್ಞಾನೋದಯಮುಂಟಾಗಿರುವುದರಿಂ ಶರೀರವೆ ಆತ್ಮನೆಂದು ಪೇಳಲ್ಪಡುತ್ತಿಹುದು. ಅದೇ ಪ್ರಕಾರದಿಂಗ ಇಂದ್ರಿಯಂಗಳಿಂ ಆತ್ಮತ್ವವು ಮತ್ತೆ ಕೆಲರಿಂ ಪೇಳಲ್ಪಡುತ್ತಿಹುದು. ಅದೇ ಪ್ರಕಾರದಿಂದ ಇಂದ್ರಿಯಂಗಳಿಂ ಜ್ಞಾನೋದಯಮುಂಟಾಗಿ ಇಂದ್ರಿಯಂಗಳಿಗೆ ಆತ್ಮತ್ವವು ಮತ್ತೆ ಕೆಲರಿಂ ಪೇಳಲ್ಪಡುತ್ತಿಹುದು. ಬುದ್ಧಿತತ್ತ್ವವೆಂದು ತಿಳಿದಿರುವ ಬೌದ್ಧರಿಂ ಬುದ್ಧಿಯೆ ಆತ್ಮನೆಂದು ಪೇಳಲ್ಪಡುತ್ತಿಹುದು. ಈ ಪ್ರಕಾರದಿಂ ವೇದಬಾಹ್ಯರಾದ ತ್ರಿವಿಧಾವಾದಿಗಳಿಂದಾತ್ಮತತ್ತ್ವವು ಸಂದಿಗ್ಧಮಾಗಲಾಗಿ ಶರೀರಾತ್ಮ ವಿವೇಕಮಾವಶ್ಯಕವೆಂಬುದರ್ಥಂ ||೫೬|| ಅದೆಂತೆಂದಡೆ ಪೇಳುತಿರ್ದಪಂ

ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ
ಶಿವಪ್ರಸಾದಾಜ್ಜೀವೋऽಯಂ ಜಾಯತೇ ಶುದ್ಧಮಾನಸಃ ||

ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ
ಜಾಯತೇ ಶಿವಕಾರುಣ್ಯಾತ್ಪ್ರಸ್ಫುಟಾಭಕ್ತಿರೈಶ್ವರೀ ||

ಈ ಜೀವನು ವಿಜ್ಞಾನಯೋಗ ಸಂನ್ಯಾಸೈರ್ಭೋಗಾದ್ವಾಕರ್ಮಣಃ ಕ್ಷಯಃ ಹೀಗೆಂಬ ಶಿವಾಗಮೋಕ್ತಿಯಿಂ ತನ್ನ ಕರ್ಮಪರಿಪಾಕದಿಂದ ಹೋಗಲ್ಪಟ್ಟ ಮಲವಾಸನೆಯುಳ್ಳವನಾಗಿ ಶಿವಪ್ರಸಾದದತ್ತಣಿಂ ಶುದ್ಧಾಂತಃಕರಣನಾಗುತ್ತಿಹನು. ಆ ಶುದ್ಧಾಂತಃಕರಣನಾದ ಜೀವನಲ್ಲಿ ಶ್ರುತ್ಯಾಗಮೋಕ್ತಮಾದ ಶುದ್ಧಕರ್ಮಪರಿಪಾಕದತ್ತಣಿಂ ಶಿವನ ಕೃಪೆಯುಂಟಾಗುತ್ತಿಹದು. ಅದರಿಂ ಶಿವವಿಷಯಕಮಾದ ಭಕ್ತಿ ಸ್ಫುಟವಾಗುವುದು. ಆ ಭಕ್ತಿದ್ವಾರದಿಂದ ಮೋಕ್ಷಮಾರ್ಗವನುಪದೇಶಿಸುವನೆಂಬುದರ್ಥಂ ||೫೭|| ಈ ಪ್ರಕಾರದಿಂದುಂಟಾದ ಶಿವಭಕ್ತಿಯುಳ್ಳ ಚರಮದೇಹಿಯು ಪಿಂಡಶಬ್ದವಾಚ್ಯನೆಂದು ಪೇಳುತಿರ್ದಪಂ.

## ೨. ಪಿಂಡಜ್ಞಾನಸ್ಥಲ

ಜಂತುರಂತ್ಯಶರೀರೋऽಸೌ ಪಿಂಡಶಬ್ದಾಭಿಧೇಯಕಃ

ಈ ಪ್ರಕಾರದಿಂ ಪುಟ್ಟಿದ ಶಿವಭಕ್ತಿಯುಳ್ಳ ಜೀವನು ತದಸ್ಯ ತೃತೀಯ ಜನ್ಮ ಎಂಬ ಶ್ರುತಿಯಿಂ ಕಡೆಯ ಶರೀರವುಳ್ಳವನಾಗಿ ಪಿಂಡವೆಂಬ ನಾಮಧೇಯವುಳ್ಳವನಹ ನೆಂಬುದರ್ಥಂ ॥೫೯॥ ಈ ಪ್ರಕಾರ ಬಳಿಕ ಪಿಂಡಜ್ಞಾನಸ್ಥಲಮಂ ನಿರೂಪಿಸುತಿರ್ದಪಂ

ಶರೀರಾತ್ಮವಿವೇಕೇನ ಪಿಂಡಜ್ಞಾನೀ ಸ ಕಥ್ಯತೇ ॥

ಆ ಪೂರ್ವೋಕ್ತ ಚರಮ ಶರೀರಿಯಾದ ಪಿಂಡನಾಮಕನು ಶರೀರ ಶರೀರಿಗಳಿಗೆ ವಿವೇಕದಿಂ ಪಿಂಡಜ್ಞಾನಿಯೆಂದು ಶಾಸ್ತ್ರಜ್ಞರಿಂ ಪೇಳಲ್ಪಡುವನೆಂಬುದರ್ಥಂ ॥೬೦॥ ಆಮೇಲೀ ಶರೀರಾತ್ಮ

ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್
ಅಹಂ ಪ್ರತ್ಯಯವೇದ್ಯತ್ವಾದನುಭೂತಸ್ಮೃತೇರಪೀ ॥

ಶರೀರೇಂದ್ರಿಯಬುದ್ಧಿಭ್ಯೋ ವ್ಯತಿರಿಕ್ತಸ್ಸನಾತನಃ
ಆತ್ಮಾಸ್ತೀತಿ ವಿವೇಕಃ ಯಃ ಪಿಂಡಜ್ಞಾನೀ ಸ ಕಥ್ಯತೇ ॥

ಇಂದ್ರಿಯಗಳಿಗೂ ದೇಹಕ್ಕೂ ಬುದ್ಧಿಗೂ ಹಾನಾದಾನಾದಿ ಸಕಲ ಲೋಕ ವ್ಯವಹಾರಕ್ಕೆ ಕಾರಣಮಾದ ಅನುಭೂತಾರ್ಥ ಪ್ರಕಾಶಮಾದ ಸ್ಮೃತಿಗೂ ಆತ್ಮತ್ವ ಕೂಡದು. ಅದೇಕೆಂದರೆ ಅಹಂ ಪ್ರತ್ಯಯ ವೇದ್ಯತ್ವಾತ್ ಹೀಗೆಂಬುದೊಂದೆ ಉತ್ತರಂ. ಅದೆಂತೆಂದರೆ ನನ್ನ ಶರೀರ ಬಡವಾಗಿ ಅದೆ ದೊಡ್ಡನಾಗಿ ಅದೆ ನನ್ನ ಕಣ್ಣು ಕಾಣುತ್ತದೆ. ನನ್ನ ಕಣ್ಣು ಕಾಂಬುದಿಲ್ಲ ನನ್ನ ಬುದ್ಧಿಗಿದು ಒಳಿತಾಗಿರುತ್ತದೆ. ಇದು ಒಳಿತಾಗಿ ತೋರುವುದಿಲ್ಲ, ಅದು ನನಗೆ ನೆನಪಾಗಿ ಅದೆ. ಅದು ನನಗೆ ಮರತೀತೆಂದು ಶರೀರೇಂದ್ರಿಯ ಬುದ್ಧಿ ಸ್ಮೃತಿಗಳಿಂ ಮೀರಿದ ನಾನೆಂಬ ಅಖಂಡ ಪ್ರಕಾಶದಿಂದೀ ವಿಷ್ಣಗೋಚರಿಸಲಾವಕಾರಣದತ್ತಣೆಂದೆಂಬುದು ತಾತ್ಪರ್ಯಂ ॥೬೨॥ ಅದು ಕಾರಣಮಾಗಿ ಶರೀರೇಂದ್ರಿಯ ಬುದ್ಧಿಗಳತ್ತಣಿಂ ಭಿನ್ನಮಾಗಿ ಯಾವನಾನೊಬ್ಬ ನಾನು ಚಿಕ್ಕಂದು ತಂದೆ ತಾಯಿಗಳ ಕಂಡಿಪ್ಪೆನು. ಆ ನಾನೆ ಈಗ ಮೊಮ್ಮಕ್ಕಳು ಮರಿಮಕ್ಕಳು ಕಂಡೆನೆಂಬ ಅನುಭವ ಬಲದಿಂ ಕ್ಷಣಿಕಜ್ಞಾನಮಲ್ಲದ ನಿತ್ಯಜ್ಞಾನ ಸ್ವರೂಪನಾದ ಆತ್ಮನುಂಟೆಂಬ ವಿವೇಕವುಳ್ಳವನಾತನುಂಟು ಆತನು ಪಿಂಡಜ್ಞಾನೀಯೆಂದು ಶಿವಶಾಸ್ತ್ರ ಪ್ರವೀಣರಿಂ ಪೇಳಲ್ಪಡುತಿಹನೆಂಬುದರ್ಥಂ. ಇಲ್ಲಿ ಪೂರ್ವಾಪೂರ್ವಮತಖಂಡನ ಪ್ರಕಾರ ಬೌದ್ಧ ಮತೋಪಪಾದನವ್ರ ಪರಿವಾಚಾರ ಸಹ ಗ್ರಂಥವಿಸ್ತರಭಯದಿಂ ಬರೆಯಲಿಲ್ಲ, ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ಬರದದೆ. ವಿದ್ವಾಂಸರಲ್ಲಿ ನೋಡಿಕೊಂಬುದು ॥೬೨॥ ಇಲ್ಲಿ ಶರೀರಾತ್ಮವಿವೇಕವುಳ್ಳವ ಪಿಂಡಜ್ಞಾನೀಯೆಂದು ಪೇಳಿದಲ್ಲಿ ಪಿಂಡಸ್ವರೂಪ ಪೇಳಲಿಲ್ಲವೆಂದು ಶಂಕೆಗೆ ಉತ್ತರಮಂ ಪೇಳುತ್ತಿರ್ದಪಂ

ನಶ್ವರಾಣಿ ಶರೀರಾಣಿ ನಾನಾರೂಪಾಣಿ ಕರ್ಮಣಾ
ಆಶ್ರಿತೋ ನಿತ್ಯ ಏವಾಸೌ ಇತಿ ಜಂತೋರ್ವಿವೇಕಿತಾ ॥

ಕರ್ಮವಶದಿಂದ ನಾನಾರೂಪಮಾದ ಶರೀರಂಗಳಿಪ್ಪು ಅನಿತ್ಯವೆಂಬ ವಿವೇಕವೆ ಪಿಂಡವಿವೇಕವು. ಅಂಥ ಪಿಂಡವನಾಶ್ರಯಿಸಿಕೊಂಡಿರುವಂಥಾ ಅಹಂಪ್ರಕಾಶಾತ್ಮಕನಾದ ಈ ಆತ್ಮನು ನಿತ್ಯವೆಂಬ ವಿವೇಕವೆ ಪಿಂಡಜ್ಞ ವಿವೇಕವೆಂಬುದರ್ಥಂ ॥೬೩॥ ಇಲ್ಲಿ ಪೇಳಿದ ವಿವೇಕವು ಸಾಂಖ್ಯಮತಸದೃಶವಾಯಿತ್ತೆಂಬ ಶಂಕೆಗೆ ಉತ್ತರಮಂ ಪೇಳುತಿರ್ದಪಂ ॥

ಶರೀರಾತ್ಪೃಥಗಾತ್ಮಾನನಂ ಆತ್ಮಭ್ಯಃ ಪೃಥಗೀಶ್ವರಂ
ಪ್ರೇರಕಂ ಯೋ ವಿಜಾನಾತಿ ಪಿಂಡಜ್ಞಾನೀ ಸ ಕಥ್ಯತೇ ॥

ಶರೀರದತ್ತಣಿಂ ಭಿನ್ನಮಾಗಿ ಕ್ಷೇತ್ರಜ್ಞರಾದ ಜೀವರಂ ಆ ಜೀವದತ್ತಣಿಂ ಭಿನ್ನಮಾಗಿ ಆ ಜೀವರಿಗೆ ಪ್ರೇರಕನಾಗಿ ಶಿವಾನಂದವ ಆವಾತ ತಿಳಿವುತ್ತಿಹನು ಅವನು ಪಿಂಡಜ್ಞನೆಂದು ಪೇಳುತ್ತಿಹನೆಂಬುದರ್ಥಂ. ಇದೇ ನಿತ್ಯಾನಿತ್ಯವಸ್ತುವಿವೇಕವೆನಿಸಿಕೊಂಬುದು. ॥೬೪॥

## ೩. ಸಂಸಾರಹೇಯಸ್ಥಲ

ಬಳಿಕೀ ಪ್ರಕಾರಮಾದ ಪಿಂಡಜ್ಞಾನಿಗುಂಟಾಗುವ ಸಂಸಾರಹೇಯಸ್ಥಲಮಂ ನಿರೂಪಿಸುತಿರ್ದಪಂ

ನಿರಸ್ತಹೃತ್ಕಲಂಕಸ್ಯ ನಿತ್ಯಾನಿತ್ಯವಿವೇಕಿನಃ
ಸಂಸಾರಹೇಯತಾಬುದ್ಧಿರ್ಜಾಯತೇ ವಾಸನಾಬಲಾತ್ ॥

ಬಹುಜನ್ಮನಾರ್ಜಿತ ಸುಕೃತವಶದಿಂ ಪಾಪಕ್ಷಯವಾಗಿ ಶುದ್ಧಾಂತಃಕರಣವುಳ್ಳಾತಂಗೆ ನಿತ್ಯಾನಿತ್ಯವಿವೇಕಮುಂಟಾಗಲಾಗಿ ಸಂಸಾರದಲ್ಲಿ ಹೇಯಬುದ್ಧಿ ಹುಟ್ಟುತ್ತಿಹುದೆಂಬುದರ್ಥಂ ॥೬೫॥ ಅದೇನು ಕಾರಣವೆಂಬಲ್ಲಿ ಪೇಳುತಿರ್ದಪಂ.

ಐಹಿಕೇ ಕ್ಷಣಿಕೇ ಸೌಖ್ಯೇ ಪುತ್ರದಾರಾದಿಸಂಭವೇ
ಕ್ಷಯಿತ್ವಾದಿಯುತೇ ಸ್ವರ್ಗೇ ಕಸ್ಯ ವಾಂಛಾ ವಿವೇಕಿನಃ ॥

ಸ್ತ್ರೀಪುತ್ರಾದಿಗಳಿಂದುಂಟಾದ ಐಹಿಕಸುಖವು ಕ್ಷಣಿಕಮಾದ ಕಾರಣದಿಂ ಜ್ಯೋತಿಷ್ಟೋಮಾದಿಯಾಗಗಳಿಂದುಂಟಾಹ ಸ್ವರ್ಗಸುಖವು ತೇತಾಂಭುಕ್ತ್ವಾ ಸ್ವರ್ಗಲೋಕಂ ವಿಶಾಲಂ। ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿಯೆಂಬ ಭಗವದ್ವಾಕ್ಯದಿಂದ ಅನಿತ್ಯವೆ ಆದ ಕಾರಣದಿಂ ನಿತ್ಯಾನಿತ್ಯವಿವೇಕವುಳ್ಳಾತಂಗೆ ಐಹಿಕಾಮುಷ್ಮಿಕಸುಖಗಳಲ್ಲಿ ಒಬ್ಬನಿಗೂ ಈ ಇಚ್ಛೆ ಉಂಟಾಗದು ಮತ್ತೇನೆಂದರೆ ಸಂಸಾರದಲ್ಲಿ ಹೇಯಬುದ್ಧಿಯುಂಟಹುದೆಂಬದರ್ಥಂ. ಸಾಂಸಾರಿಕಸುಖಮನಿತ್ಯಮಾದ ಕಾರಣದಿಂದಿಲ್ಲಿ ತ್ಯಾಗಬುದ್ಧಿಯುಂಟಾಗಲೀ ಸಂಸಾರಮೇನುಕಾರಣಂ ಬಿಡಲ್ಕಕ್ಕದೆಂಬಲ್ಲಿ ದೋಷಂಗಳ ಉದ್ಭವಿಸುತಿರ್ದಪಂ ॥೬೬॥

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ
ಜಂತುರ್ಮರಣಜನ್ಮಭ್ಯಾಂ ಪರಿಭ್ರಮತಿ ಚಕ್ರವತ್ ॥

ಹುಟ್ಟಿದವಗೆ ಮರಣವೆಂಬುದು ನಿಶ್ಚಿತ. ಸತ್ತವಗೆ ಜನನವೂ ನಿಶ್ಚಿತ. ಶರೀರದತ್ತಣಿಂ ಭಿನ್ನಮಾಗಿ ಕ್ಷೇತ್ರಜ್ಞರಾದ ಜೀವರಂ ಆ ಜೀವದತ್ತಣಿಂ ಭಿನ್ನಮಾಗಿ ಆ ಜೀವರಿಗೆ ಪ್ರೇರಕನಾಗಿ

ಶಿವಾನಂದವ ಆವಾತ ತಿಳಿವುತ್ತಿಹನು ಅವನು ಪಿಂಡಜ್ಞನೆಂದು ಪೇಳಲ್ಪಡುತ್ತಿಹನೆಂಬುದರ್ಥಂ. ಇದೇ ನಿತ್ಯಾನಿತ್ಯವಸ್ತುವಿವೇಕವೆನಿಸಿಕೊಂಬುದು ॥೬೭॥ ಈ ಪ್ರಕಾರದಿಂ ಪ್ರಾಣಿಯು ಜನನ ಮರಣಗಳಿಂ ರಾಟಾಳದಂತೆ ತಿರುಗುತ್ತಿಹನು. ಆ ಕಾರಣದಿಂ ನಾಶವು ಅನಿತ್ಯ ವೆಂಬುದರಿಂ ಬಿಡಲ್ತಕ್ಕುದೆಂಬುದರ್ಥಂ. ಈ ಅರ್ಥದಲ್ಲಿ ಕರ್ಮಾಧೀನವಲ್ಲದ ಮಹಾಪುರುಷನ ದೃಷ್ಟಾಂತವನು ಪೇಳುತಿರ್ದಪಂ

ಮತ್ಸ್ಯಕೂರ್ಮವರಾಹಾಂಗೈರ್ನೃಸಿಂಹಮನುಜಾದಿಭಿಃ
ಜಾತೇನ ನಿಧನಂ ಪ್ರಾಪ್ತಂ ವಿಷ್ಣುನ್ಯಾಪಿ ಮಹಾತ್ಮನಾ ॥

ಮತ್ಸ್ಯ ಕೂರ್ಮ ಕಾಡಹಂದಿ ನರಮೃಗ ಮನುಜಾದಿ ಶರೀರಗಳೊಡನೆ ಹುಟ್ಟಿದ ಮಹಾಪುರುಷನಾದ ನಾರಾಯಣನಿಂದಲೂ ಮರಣವು ಪಡೆಯಲ್ಪಟ್ಟಿತ್ತೆಂಬುದರ್ಥಂ ॥೬೮॥ ಹೀಗಿರುತ್ತಿರ್ದಲ್ಲಿ ಕರ್ಮಾಧೀನನಾದವನು ತಾಪತ್ರಯದಿಂ ತಪ್ಪಿಸುತ್ತ ಇಹನೆಂದು ಪೇಳುತಿರ್ದಪಂ

ಭೂತ್ವಾ ಕರ್ಮವಶಾಜ್ಜಂತುಃ ಬ್ರಾಹ್ಮಣಾದಿಷು ಜಾತಿಷು
ತಾಪತ್ರಯಮಹಾವಹ್ನಿಸಂತಾಪಾದ್ದಹ್ಯತೇ ಭೃಶಮ್ ॥

ಜೀವನು ಕರ್ಮವಶದಿಂದ ಬ್ರಾಹ್ಮಣಾದಿ ಜಾತಿಗಳಲ್ಲಿ ಹುಟ್ಟಿ ತಾಪತ್ರಯವೆಂಬ ಮಹಾವಹ್ನಿ ಸಮೂಹದಿಂ ವೆಗ್ಗಳವಾಗಿ ಕುದಿವುತ್ತಿಹನೆಂಬುದರ್ಥಂ ಹಾಗಾದರೀ ಸಂಸಾರದಲ್ಲಿ ತಾಪತ್ರಯನಿವೃತ್ತಿ ಒಂದುಸಮಯದಲ್ಲಾದರೂ ಉಂಟೋ ಇಲ್ಲವೋ ಎಂಬಲ್ಲಿ ಪೇಳುತಿರ್ದಪಂ ॥೬೯॥

ಕರ್ಮಮೂಲೇನ ದುಃಖೇನ ಪೀಡ್ಯಮಾನಸ್ಯ ದೇಹಿನಃ
ಆಧ್ಯಾತ್ಮಿಕಾದಿನಾ ನಿತ್ಯಂ ಕುತ್ರ ವಿಶ್ರಾಂತಿರಿಷ್ಯತೇ ॥

ಕರ್ಮವೆ ಮೂಲವಾಗಿ ಉಳ್ಳ ಆಧ್ಯಾತ್ಮಿಕ ಮೊದಲಾದ ತಾಪತ್ರಯದಿಂದ ಸದಾ ಬಾಧೆಪಡುವ ಪ್ರಾಣಿಗೆ ಬಳಲಿಕೆಯಿಲ್ಲದೆ ಇಹಣವು ಯಾವ ಕಾರಣದಿಂದುಂಟು ಇಲ್ಲವೆಂಬುದರ್ಥಂ ॥೭೦॥ ಆಮೇಲೆ ತಾಪತ್ರಯಗಳಾವವೆಂದರೆ ಪೇಳುತಿರ್ದಪಂ.

ಆಧ್ಯಾತ್ಮಿಕಂ ತು ಪ್ರಥಮಂ ದ್ವಿತೀಯಂ ಚಾಧಿಭೌತಿಕಂ
ಆಧಿದೈವಿಕಮನ್ಯಚ್ಚ ದುಃಖತ್ರಯಮಿದಂ ಸ್ಮೃತಮ್ ॥

ಮೊದಲದಾಧ್ಯಾತ್ಮಿಕವು ಎರಡನೇದಾಧಿಭೌತಿಕವು ಮೂರನೇದಾಧಿದೈವಿಕವು ಇದೀಗ ದುಃಖತ್ರಯನೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ॥೭೧॥ ಆಮೇಲೆ ತಾಪತ್ರಯಗಳ ಸ್ವರೂಪಮಂ ಪೇಳುತಿರ್ದಪಂ

ಆಧ್ಯಾತ್ಮಿಕಂ ದ್ವಿಧಾ ಪ್ರೋಕ್ತಂ ಬಾಹ್ಯಾಭ್ಯಂತರಭೇದತಃ
ವಾತಪಿತ್ತಾದಿಜಂ ದುಃಖಂ ಬಾಹ್ಯಮಾಧ್ಯಾತ್ಮಿಕಂ ಮತಮ್ ॥

ರಾಗದ್ವೇಷಾದಿಸಂಪನ್ನಮಾಂತರಂ ಪರಿಕೀರ್ತ್ಯತೇ
ಆಧಿಭೌತಿಕ ಮೇತದ್ಧಿ ದುಃಖಂ ರಾಜಾಧಿಭೂತಜಮ್ ॥

ಆಧಿದೈವಿಕಮಾಖ್ಯಾತಂ ಗ್ರಹಯಕ್ಷಾದಿ ಸಂಭವಮ್

ಆಧ್ಯಾತ್ಮಿಕವೆಂಬುದು ಬಾಹ್ಯಾಭ್ಯಂತರ ಭೇದದಿಂದಿತ್ತೆರನು. ಅಲ್ಲಿ ವಾತ ಪಿತ್ತಾದಿಗಳಿಂದುಂಟಾದ ದುಃಖವೆ ಬಾಹ್ಯಮಾದ ಆಧ್ಯಾತ್ಮಿಕವೆಂದು ಸಮ್ಮತವು. ರಾಗ ದ್ವೇಷಾದಿಗಳಿಂದುಂಟಾದದೆ ಆಂತರವೆಂದು ಪೇಳಲ್ಪಡುತಿಹದು. ನೃಪ ತಸ್ಕರ ಸಿಂಹ ವ್ಯಾಘ್ರಾದಿಗಳಿಂದುಂಟಾದ ಈ ದುಃಖವು ಆಧಿಭೌತಿಕವು. ಭೂತ ಪ್ರೇತ ಯಕ್ಷಾದಿ ಗಳಿಂದುಂಟಾದ ದುಃಖವೆ ಆಧಿದೈವಿಕವೆನಿಸಿಕೊಂಬುದರ್ಥಂ ॥೭೪॥

ದುಃಖೈರೇತೈರುಪೇತಸ್ಯ ಕರ್ಮಬದ್ಧಸ್ಯ ದೇಹಿನಃ
ಸ್ವರ್ಗೇ ವಾ ಯದಿ ವಾ ಭೂಮೌ ಸುಖಲೇಶೋ ನ ವಿದ್ಯತೇ ॥

ಈ ಕರ್ಮಬದ್ಧನಾಗಿ ಈ ದುಃಖಗಳೊಡನೆ ಕೂಡಿದ ದೇಹಿಂಗೆ ಭೂಲೋಕದಲ್ಲಿಯೂ ಸ್ವರ್ಗಲೋಕದಲ್ಲಿಯೂ ಸುಖಲೇಶವೂ ಇಲ್ಲವೆಂಬುದರ್ಥಂ ॥೭೫॥ ಆಮೇಲೆ ರಾಜ್ಯಾದಿ ಸಂಪತ್ತುಗಳಿಂದಲಾದರೂ ಸುಖವುಂಟೋ ಇಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ತಟಿತ್ಸುವೀಚಿಮಾಲಾಸು ಪ್ರದೀಪಸ್ಯ ಪ್ರಭಾಸು ಚ
ಸಂಪತ್ಸು ಕರ್ಮಮೂಲಾಸು ಕಸ್ಯ ವಾ ಸ್ಥಿರತಾಮತಿಃ ॥

ಮಿಂಚುಗಳಲ್ಲಿ ತೆರೆಗಳಮಾಲೆಗಳಲ್ಲಿ ದೀಪಶಿಖಿಗಳಲ್ಲಿ ಕರ್ಮಮೂಲದ ರಾಜ್ಯಾದಿ ಸಂಪತ್ತುಗಳಲ್ಲಿ ಯಾವಾತಂಗೆ ಸ್ಥಿರತ್ವ ಬುದ್ಧಿಯುಂಟು? ಯಾರಿಗೂ ಇಲ್ಲವೆಂಬುದರ್ಥಂ ॥೭೬॥ ಹಾಗಾದರೆ ಮಿಂಚು ಮೊದಲಾದವರಿಂ ವಿಲಕ್ಷಣಮಾಗಿ ಸುಖಸಾಧನವಾದ ಶರೀರಮಿಚ್ಛಾ ವಿಷಯಮಾಗಲೆಂದು ಶಂಕೆಪ್ರಾಪ್ತಮಾದಲ್ಲಿ ಪೇಳುತಿರ್ದಪಂ

ಮಲಕೋಶೇ ಶರೀರೇsಸ್ಮಿನ್ಮಹಾದುಃಖವಿವರ್ಧನೇ
ತಟಿದಂಕುರಸಂಕಾಶೇ ಕೋ ವಾ ರುಚ್ಯೇತ ಪಂಡಿತಃ ॥

ಅಸ್ಥಿ ಚರ್ಮ ಮಾಂಸ ರಕ್ತ ಶುಕ್ಲ ಮಲ ಮೂತ್ರವುಳ್ಳದಾಗಿ ಮಿಂಚಿನಮಾಲೆಗೆ ಸಮಾನವಾಗಿ ತಾಪತ್ರಯ ಪಂಚಕ್ಲೇಷ ಸಪ್ತ ವ್ಯಸನಗಳೆಂಬ ಮಹಾದುಃಖವ ಹೆಚ್ಚಿಸುವಂಥಾ ಈ ಶರೀರದಲ್ಲಿ ನಿತ್ಯಾನಿತ್ಯ ವಿವೇಕವುಳ್ಳ ದಾವಾತನು ಪ್ರೀತಿಯ ಮಾಡಿಯಾನು. ದಾವಾತನು ಮಾಡನೆಂಬುದರ್ಥಂ ॥೭೭॥ ಬಳಿಕೀ ಪ್ರಕಾರಮಾದುದಾದರೂ ಶರೀರವೆಂಬುದು ಪರಮ ಪ್ರೇಮಾಸ್ಪದವಾದ ಕಾರಣದಿಂ ಬಯಸಲ್ತಕ್ಕದಾಗಲೆಂದು ಶಂಕೆಪ್ರಾಪ್ತಮಾದಲ್ಲಿ ಪೇಳುತಿರ್ದಪಂ.

ನಿತ್ಯಾನಂದಚಿದಾಕಾರಮಾತ್ಮತತ್ತ್ವಂ ವಿಹಾಯ ಕಃ
ವಿವೇಕೀ ರಮತೇ ದೇಹೇ ನಶ್ವರೇ ದುಃಖಭಾಜನೇ ॥

ನಿತ್ಯಾನಂದಚಿದ್ರೂಪಮಾದ ಆತ್ಮತತ್ತ್ವವಿರುತಿರಲಾಗಿ ಬಿಟ್ಟು ಅನಿತ್ಯವಾಗಿ ದುಃಖಭಾಜನವಾದಂಥ ಶರೀರದಲ್ಲಿ ನಿತ್ಯಾನಿತ್ಯ ವಿವೇಕವುಳ್ಳ ದಾವ ಪುರುಷ ಪ್ರೀತಿಯ ಮಾಡಿಯಾನು? ಯಾವಾತ ಮಾಡನೆಂಬುದರ್ಥಂ ॥೭೮॥ ಆಮೇಲೆ ವಿವೇಕಿಯಾದವನಿಗೆ ನಶ್ವರಮಾದ ಶರೀರಮಾತ್ರದಲ್ಲಿಯೆ ವಿರಕ್ತಿಯೆಂಬುದಲ್ಲ. ತತ್ಸಂಬಂಧಿಗಳಲ್ಲಿಯೂ ವಿರಕ್ತಿಯುಂಟಾಗಿರುವುದೆಂದು ಪೇಳುತಿರ್ದಪಂ.

ವಿವೇಕೀ ಶುದ್ಧಹೃದಯಃ ನಿಶ್ಚಿತಾತ್ಮಸುಖೋದಯಃ
ದುಃಖಹೇತೌ ಶರೀರೇऽಸ್ಮಿನ್ ಕಲತ್ರೇ ಚ ಸುತೇಷು ಚ ॥

ಸುಹೃತ್ಸುಬಂಧುವರ್ಗೇಷು ಧನೇಷು ಕುಲಪದ್ಧತೌ
ಅನಿತ್ಯಬುದ್ಧ್ಯಾ ಸರ್ವತ್ರ ವೈರಾಗ್ಯಂ ಪರಮಶ್ನುತೇ ॥

ನಿರ್ಮಲಾಂತಃಕರಣನಾಗಿ ಆಕಾರಣದಿಂದಲೆ ಶ್ರುತಿ ಗುರು ಸ್ವಾನುಭವಂಗಳಿಂ ನಿಶ್ಚೈ ಸಲ್ಪಟ್ಟ ನಿತ್ಯಸುಖಸ್ಫೂರ್ತಿಯುಳ್ಳ ನಿತ್ಯಾನಿತ್ಯವಸ್ತುವಿವೇಕಿಯಾದವನು ಪೇಳಲ್ಪಟ್ಟ ದುಃಖಕ್ಕೆ ಕಾರಣಮಾದ ಈ ಶರೀರದಲ್ಲಿ ತತ್ಸಂಬಂಧಿಗಳಾದ ಸ್ತ್ರೀಪುತ್ರರಲ್ಲಿ ಮಿತ್ರರಲ್ಲಿ ಬಂಧು ವರ್ಗಂಗಳಲ್ಲಿ ಕುಲಕ್ರಮದಲ್ಲಿ ಗೋ ಧನಾದಿಗಳಲ್ಲಿ ಕಡೆಯಲ್ಲೂ ಅನಿತ್ಯಬುದ್ಧಿಯಿಂ ವೈರಾಗ್ಯವನೆ ಆಶ್ರಯಿಸುತ್ತಿರ್ದನೆಂಬುದರ್ಥಂ ॥೮೦॥ ಬಳಿಕಿವು ಮೊದಲಾದ ಅನಿತ್ಯವಸ್ತುಗಳಲ್ಲಿ ವಿರಕ್ತನಾಗಿ ನಿತ್ಯವಸ್ತುವಿನಲ್ಲಿ ಪ್ರೀತಿಯುಳ್ಳಾತಂಗೆ ಸಾಂಸಾರಿಕ ದುಃಖನಿವೃತ್ತಿಗೆ ಕಾರಣವಾದ ವಸ್ತುವಿನಲ್ಲಿ ಬುದ್ಧಿಯುಂಟಾಗುತ್ತಿಹದೆಂದು ಪೇಳುತಿದರ್ಪಂ

ವಿವೇಕಿನೋ ವಿರಕ್ತಸ್ಯ ವಿಷಯೇಷ್ವಾತ್ಮರಾಗಿಣಃ
ಸಂಸಾರದುಃಖವಿಚ್ಛೇದ ಹೇತೌ ಬುದ್ಧಿಃ ಪ್ರವರ್ತತೇ ॥

ನಿತ್ಯಾನಿತ್ಯವಸ್ತುವಿವೇಕವುಳ್ಳವನಾಗಿ ಅನಿತ್ಯಮಾದ ವಿಷಯಂಗಳಲ್ಲಿ ವಿರಕ್ತನಾಗಿ ನಿತ್ಯಮಾದ ಆತ್ಮತತ್ತ್ವದಲ್ಲಿ ಪ್ರೀತಿಯುಳ್ಳಾತಂಗೆ ಸಾಂಸಾರಿಕ ದುಃಖನಿವೃತ್ತಿಗೆ ಕಾರಣವಾದ ವಸ್ತುವಿನಲ್ಲಿ ಬುದ್ಧಿಯುಂಟಾಹುದೆಂಬುದರ್ಥಂ ॥೮೧॥ ಬಳಿಕ ವಸ್ತುವಾವುದೆಂಬಲ್ಲಿ ಪಿಂಡಪಿಂಡಜ್ಞಾನಸ್ಥಲಾರ್ಥಮಂ ಸಂಗ್ರಹಿಸಿ ವೃತ್ತದಿಂ ಪೇಳುತಿರ್ದಪಂ.

ನಿತ್ಯಾನಿತ್ಯವಿವೇಕಿನಃ ಸುಕೃತಿನಃಶುದ್ಧಾಶಯಸ್ಯಾತ್ಮನಃ
ಬ್ರಹ್ಮೋಪೇಂದ್ರಮಹೇಂದ್ರಮುಖ್ಯವಿಭವೇಷ್ವಸ್ಥಾಯಿತಾಂ ಪಶ್ಯತಃ
ನಿತ್ಯಾನಂದಪದೇ ನಿರಾಕೃತಜಗತ್ಸಂಸಾರದುಃಖೋದಯೇ
ಸಾಂಬೇ ಚಂದ್ರಶಿರೋಮಣೌ ಸಮುದಯೇದ್ಭಕ್ತಿರ್ಭವಧ್ವಂಸಿನೀ ॥

ನಿತ್ಯಾನಿತ್ಯವಿವೇಕಿನಸ್ಸು ಪ್ರತಿದಿನವು ನಿಗಮಾಗಮೋಕ್ತ ಸತ್ಕರ್ಮಾನುಷ್ಠಾನಮುಳ್ಳ ಆ ಕಾರಣದಿಂದಲೆ ನಿರ್ಮಲಾಂತಃಕರಣನಾದ ಅದರಿಂದಲೆ ಪಿಂಡಶಬ್ದ ವಾಚ್ಯವಾದ ನಿತ್ಯಾನಿತ್ಯವಸ್ತು ವಿವೇಕವುಳ್ಳ ಬ್ರಹ್ಮ ವಿಷ್ಣು ಸುರೇಂದ್ರ ಮೊದಲಾದ ಸಂಪತ್ತುಗಳಲ್ಲಿ ಅನಿತ್ಯತ್ವವ ತಿಳಿವುತಿರುವ ಆ ಕಾರಣದಿಂದಲೆ ಸಂಸಾರದಲ್ಲಿ ಹೇಯಬುದ್ಧಿಯುಳ್ಳ ಪುರುಷಗೆ

ನಿತ್ಯಾನಂದಕ್ಕಾಧಾರಮಾದ ನಿರಾಕರಿಸಲ್ಪಟ್ಟ ಸಕಲ ಸಂಸಾರದುಃಖವಾ ನಿರ್ಭಾವವುಳ್ಳ ಉಮಾ ಸಹಿತವಾದ ಚಂದ್ರಧರಾದಿ ನಾನಾ ಲೀಲಾನಿಗ್ರಹಕ್ಕೆ ಕಾರಣ ಕಾರಣಮಾದ ಮಹಾಲಿಂಗದಲ್ಲಿ ಅಷ್ಟವಿಧವಾದ ಭಕ್ತಿಯು ಜನನ ಮರಣಂಗಳ ಕೆಡಿಸುವಂಥಾದಾಗಿ ಉದ್ಭವಿಸುವನೆಂಬುದರ್ಥಂ ॥೮೩॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಭಕ್ತಸ್ಥಲೇ ಪಿಂಡ ಪಿಂಡಜ್ಞಾನ ಸಂಸಾರಹೇಯಸ್ಥಲ ಪ್ರಸಂಗೋನಾಮ ಪಂಚಮಪರಿಚ್ಛೇದಃ.

## ಷಷ್ಠಪರಿಚ್ಛೇದ

### ೪. ಗುರುಕಾರುಣ್ಯಸ್ಥಲ

ಬಳಿಕ ತದ್ವಿಜ್ಞಾನಾರ್ಥಂ ಸದ್ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮ ವಿಷ್ಠಾಸ್ವಯೆಂಬ ಮುಂಡಕಶ್ರುತಿಯಿಂ ಪೂರ್ವೋಕ್ತ ಪಿಂಡ ಪಿಂಡಜ್ಞಾನ ಸಂಸಾರ ಹೇಯಸ್ಥಲಸಂಪನ್ನನು ಸಂಸಾರನಾಶಕಮಾದ ಮಹಾಲಿಂಗಮಂ ತಿಳಿಯಲಿಚ್ಛೆಯುಳ್ಳವನಾಗಿ ಸದ್ಗುರುವನ್ನೈದುತ್ತಿಹನೆಂಬುದು. ಕುಂಭಜನಂ ಕುರಿತು ದೀಕ್ಷಾರೂಪಮಾದ ಗುರುಕಾರುಣ್ಯ ಸ್ಥಲಮಂ ರೇಣುಕಾಚಾರ್ಯಂ ನಿರೂಪಿಸುತಿರ್ದಪಂ.

ತತೋ ವಿವೇಕಸಂಪನ್ನಃ ವಿರಾಗೀ ಶುದ್ಧಮಾನಸಃ
ಜಿಜ್ಞಾಸುಸ್ಸರ್ವಸಂಸಾರದೋಷಧ್ವಂಸಕರಂ ಶಿವಮ್ ॥

ಉಪೈತಿ ಲೋಕವಿಖ್ಯಾತಂ ಲೋಭಮೋಹವಿವರ್ಜಿತಮ್
ಆತ್ಮತತ್ತ್ವವಿಚಾರಜ್ಞಂ ವಿಮುಕ್ತವಿಷಯಭ್ರಮಮ್ ॥

ಶಿವಸಿದ್ಧಾಂತತತ್ತ್ವಜ್ಞಂ ಛಿನ್ನಸಂದೇಹವಿಭ್ರಮಮ್
ಸರ್ವತಂತ್ರಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಮ್ ॥

ಕುಲಕ್ರಮಾಗತಾಚಾರಂ ಕುಮಾರ್ಗಾಚಾರವರ್ಜಿತಮ್
ಶಿವಧ್ಯಾನಪರಂ ಶಾಂತಂ ಶಿವತತ್ತ್ವವಿವೇಕಿನಮ್ ॥

ಭಸ್ಮೋದ್ಧೂಲನನಿಷ್ಣಾತಂ ಭಸ್ಮತತ್ತ್ವವಿವೇಕಿನಮ್
ತ್ರಿಪುಂಡ್ರಧಾರಣೋತ್ಕಂಠಂ ಧೃತರುದ್ರಾಕ್ಷಮಾಲಿಕಮ್ ॥

ಲಿಂಗಧಾರಣಸಂಯುಕ್ತಂ ಲಿಂಗಪೂಜಾಪರಾಯಣಮ್
ಲಿಂಗಾಂಗಯೋಗತತ್ತ್ವಜ್ಞಂ ನಿರೂಢಾದ್ವೈತವಾಸನಮ್ ॥

ಲಿಂಗಾಂಗಸ್ಥಲಭೇದಜ್ಞಂ ಶ್ರೀಗುರುಂ ಶಿವವಾದಿನಮ್ ॥

ಸಂಸಾರದಲ್ಲಿ ಹೇಯಬುದ್ಧಿಯುಂಟಾದ ತರುವಾಯದಲ್ಲಿ ನಿರ್ಮಲಾಂತಃಕರಣನಾದುದರಿಂ ಪಿಂಡಶಬ್ದವಾಚ್ಯವಾಗಿ ಶರೀರಾತ್ಮವಿವೇಕದಿಂ ಪಿಂಡಜ್ಞಾನಿ ಎನಿಸಿಕೊಂಡು ಅನಿತ್ಯಸುಖದಲ್ಲಿ ವಿಮುಖನಾದ ಕಾರಣದಿಂ ಸಂಸಾರದಲ್ಲಿ ಪೇಯಬುದ್ಧಿಯುಳ್ಳ ಸಾಧಕನು ಸರ್ವಸಂಸಾರದುಃಖನಿವಾರಕನಾದ ಪರಬ್ರಹ್ಮ ಪರಶಿವನೆಂಬ ಪೆಸರನ್ನುಳ್ಳ ಮಹಾಲಿಂಗಮಂ ತಿಳಿಯಲಿಚ್ಛೆಯುಳ್ಳವನಾಗಿ ಮಹಾಲಿಂಗ ಸ್ವರೂಪವನುಪದೇಶಿಸುವಂಥಾ ಶ್ರೀಗುರುವನ್ನೈದುತಿಹನೆಂಬುದು ಕ್ರಿಯಾಕಾರಕ ಯೋಜನೆಯು. ಆ ಶ್ರೀಗುರುವೆಂಥವನೆಂದಡೆ ಸರ್ವಲೋಕಪ್ರಸಿದ್ಧನು. ಲೋಕಜ್ಞಾನ ರಹಿತನು. ದೇಹೇಂದ್ರಿಯಾದಿ ವ್ಯತಿರಿಕ್ತಮಾದ ಆತ್ಮಯಥಾರ್ಥ್ಯ ಸ್ವರೂಪಮಾದ ಬಲವನು ಶಬ್ದಾರ್ಥಮಯ ಪ್ರಪಂಚಮೆಲ್ಲಂ ಶಿವಶಕ್ತ್ಯಾತ್ಮಕವೆಂಬ ನಿಶ್ಚಯ ಬಲದಿಂ ಘಟಾದಿ ವಿಷಯಂಗಳಲ್ಲಿ ಬಿಡಲ್ಪಟ್ಟ ಭೇದಭ್ರಾಂತಿಯುಳ್ಳವನು. ಆ ಕಾರಣದಿಂದಲೆ ದೃಢವಾದ ಅದ್ವೈತಸಂಸಾರವುಳ್ಳವನು. ಶಿವಾಗಮಸಿದ್ಧಾಂತವ ಬಲ್ಲಾತನು. ಛೇದಿಸಲ್ಪಟ್ಟ ಸಂಶಯ ವಿಪರ್ಯಯವುಳ್ಳವನು. ಚತುಷ್ಷಷ್ಟಿತಂತ್ರ ಪ್ರಯೋಗವನ್ನು ತಿಳಿದಾತನು.

ಶಿವಧರ್ಮನಿಷ್ಠನು. ಯಥಾರ್ಥವನು ನುಡಿವವನು. ಗುರುಪಾರಂಪರ್ಯ ಪ್ರಾಪ್ತ ಸದಾಚಾರವುಳ್ಳವನು. ಕುಮಾರ್ಗಾಚಾರ ರಹಿತನು. ಕುಲಪ್ರಾಪ್ತ ಸಮಯಾಚಾರಶೂನ್ಯನು. ಶಿವಲಿಂಗಚಿಂತಾಪರನು. ರಾಗದ್ವೇಷರಹಿತನು. ಶಿವ ಪರಶಿವ ಸ್ವರೂಪವ ತಿಳಿದವನು. ತತ್ಪೂಜಾನಿಷ್ಠನು. ಶಿವ ಜೀವರ ಸಂಬಂಧವ ತಿಳಿದವನು. ಲಿಂಗಾಂಗಸ್ಥಲಗತಮಾದ ನೂರೊಂದುಸ್ಥಲಭೇದವ ತಿಳಿದವನು. ಶುಭವಾಕ್ಯವನು ನುಡಿವವನು. ಈ ಪ್ರಕಾರಮಾದ ಸದ್ಗುಣಮುಳ್ಳ ಶ್ರೀಗುರುಸ್ವಾಮಿಯಂ ಸಂಸಾರದಲ್ಲಿ ಹೇಯಬುದ್ಧಿಯುಳ್ಳ ಪಕ್ವ ಶಿಷ್ಯನೆನಿಸಿಕೊಂಬ ಮುಮುಕ್ಷುವು ಕೈಗಾಣಿಕೆಯಿಂ ಯುಕ್ತನಾಗಿ ಯೈದೂದೆಂಬುದರ್ಥಂ ॥೬॥ ಬಳಿಕೀ ಪ್ರಕಾರದಿಂ ಸದ್ಗುರುವನೈದಿ ಆತನ ಸೇವೆಯಂ ಮಾಡೂದೆಂದು ಪೇಳುತಿರ್ದಪಂ.

ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿಸಮನ್ವಿತಃ
ಷಣ್ಮಾಸಾನ್ವತ್ಸರಂ ವ್ಯಾಪಿ ಯಾವದೇಷ ಪ್ರಸೀದತಿ ॥

ಭಕ್ತಿಯುಕ್ತನಾದ ಶಿಷ್ಯನು ಅಂಥಾ ಆಚಾರ್ಯನಂ ಆರುತಿಂಗಳಾಗಲಿ ಸಂವತ್ಸರ ವಾಗಲಿ ಎಷ್ಟು ದಿವಸಕ್ಕೆ ಪ್ರಸನ್ನನಹನು ಅಷ್ಟು ಪರ್ಯಂತವಾಗಿ ಆಪ್ತಸ್ಥಾನಾಂಗ ಸದ್ಭಾವಗಳಿಂ ಸೇವಿಸೂದೆಂಬುದರ್ಥಂ ॥೭॥ ಆಮೇಲಾತನ ಪ್ರಾರ್ಥಿಸುವ ಪ್ರಕಾರಮಂ ಪೇಳುತಿರ್ದಪಂ.

ಪ್ರಸನ್ನಂ ಪರಮಾಚಾರ್ಯಂ ಭಕ್ತ್ಯಾ ಮುಕ್ತಿಪ್ರದರ್ಶಕಮ್
ಪ್ರಾರ್ಥಯೇದಗ್ರತಶ್ಶಿಷ್ಯಃ ಪ್ರಾಂಜಲಿರ್ವಿನಯಾನ್ವಿತಃ ॥

ಭೋ ಕಲ್ಯಾಣ ಮಹಾಭಾಗ ಶಿವಜ್ಞಾನಮಹೋದಧೇ
ಆಚಾರ್ಯವರ್ಯ ಸಂಪ್ರಾಪ್ತಂ ರಕ್ಷ ಮಾಂ ಭವರೋಗಿಣಮ್ ॥

ಸೇವೆಯಿಂದ ಪ್ರಸನ್ನನಾಗಿ ಪರಾಪರಮೋಕ್ಷಮಾರ್ಗವ ತೋರಿಸುವ ಮಹಾಗುರು ಸ್ವಾಮಿಯಂ ಭಕ್ತಿಯುಕ್ತನಾಗಿ ಶಿಷ್ಯಂ ಕೈಮುಗಿದುಕೊಂಡು ಮುಂದುಗಡೆಯಲ್ಲಿ ಪ್ರಾರ್ಥಿಸುವುದು. ಅದೆಂತೆಂದಡೆ ಮಂಗಲಾತ್ಮಕನೆ ಮಹಾ ಶ್ರೇಷ್ಠನೆ ಶಿವಜ್ಞಾನಕ್ಕೆ ಸಮುದ್ರನಾದವನೆ ಗುರೋತ್ತಮನೆ ಜನನ ಮರಣವೆಂಬ ಸಂಸಾರರೋಗದಿಂದ ಬಳಲಿಬಂದು ನಿನ್ನನಾಶ್ರಯಿಸಿದ ಎನ್ನ ರಕ್ಷಿಸೆಂದು ಬೇಡಿಕೊಂಬುದು ॥೯॥ ಬಳಿಕೀ ಪ್ರಕಾರದಿಂ ಪ್ರಾರ್ಥಿಸಿದ ಶಿಷ್ಯನಂ ಶ್ರೀಗುರುವು ಉಪದೇಶಾಂಗಮಾದ ದೀಕ್ಷೆಯೊಡನೆ ಕೂಡಿಸು ಎಂದು ಪೇಳುತಿರ್ದಪಂ.

ಇತಿ ಶುದ್ಧೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ ॥

ಈ ಪ್ರಕಾರದಿಂ ಶುದ್ಧಾಂತಃಕರಣನಾದ ಶಿಷ್ಯನಿಂ ಪ್ರಾರ್ಥಿಸಲ್ಪಟ್ಟ ಮಹಾ ಗುರುಸ್ವಾಮಿಯು ಆ ಶಿಷ್ಯನ ತೀವ್ರತರ ಶಕ್ತಿಪಾತಮಂ ಒಳ್ಳಿತ್ತಾಗಿ ತಿಳಿದು ಮುಂಭಾಗದಲ್ಲಿ ನಿಂತಿರ್ದ ಶಿಷ್ಯನಂ ದೀಕ್ಷೆಯೊಡನೆ ಸಂಬಂಧಿಸೂದೆಂಬುದರ್ಥಂ ॥೧೦॥ ಬಳಿಕೀ ದೀಕ್ಷೆಯೆಂದರೇನೆಂಬಲ್ಲಿ ಪೇಳುತಿರ್ದಪಂ.

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್
ಯಸ್ಮಾದತಸ್ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥

ಯಾವದಾನೊಂದು ಕಾರಣದಿಂ ದಾ ದಾನೆ ಯೆಂಬ ಧಾತುಗತಿಯಿಂ ಕೀಕ್ಷಯೆಂಬ ಧಾತುಗತಿಯಿಂ ಪರಶಿವ ಪರಬ್ರಹ್ಮವೆಂಬುದು ಮಹಾಲಿಂಗಜ್ಞಾನವು ಸಾತ್ಮಾಭಿನ್ನಮಾಗಿ ಪ್ರಕಾಶಿಸಲ್ಪಡುತ್ತಿಹುದು. ಮಲ ಮಾಯಾ ಕರ್ಮ ಬಂಧನವು ಕೀಕ್ಷಯೆಂಬ ಧಾತುಗತಿಯಿಂ ಕ್ಷಯವ ಪಡುತ್ತಿಹುದು. ಆ ಕಾರಣದಿಂ ಈ ಜ್ಞಾನಕ್ರಿಯಾರೂಪಮಾದ ಶಕ್ತಿಯೆ ದೀಕ್ಷೆಯೆಂದು ಶಾಸ್ತ್ರಜ್ಞರಿಂ ಒಳಿತಾಗಿ ಪೇಳಲ್ಪಡುತ್ತಿಹದೆಂಬುದರ್ಥಂ ॥೧೧॥ ಆಮೇಲೆ ದೀಕ್ಷೆ ಮೂರು ಪ್ರಕಾರವೆಂದು ಪೇಳುತಿರ್ದಪಂ.

ಸಾ ದೀಕ್ಷಾ ತ್ರಿವಿಧಾ ಪ್ರೋಕ್ತಾ ಶಿವಾಗಮವಿಶಾರದೈಃ
ವೇಧಾರೂಪಾ ಕ್ರಿಯಾರೂಪಾ ಮಂತ್ರರೂಪಾ ಚ ತಾಪಸಾ ॥

ತಪಸ್ವಿಯಾದ ಭೋ ಅಗಸ್ತ್ಯನೆ ಆ ದೀಕ್ಷೆಯು ಶಿವಾಗಮಜ್ಞರಿಂ ವೇಧಾದೀಕ್ಷೆಯೆಂದು ಕ್ರಿಯಾದೀಕ್ಷೆಯೆಂದು ಮಂತ್ರದೀಕ್ಷೆಯೆಂದು ಮೂರು ಪ್ರಕಾರವಾಗಿ ಪೇಳಲ್ಪಟ್ಟಿತೆಂಬುದರ್ಥಂ ॥೧೨॥ ಆಮೇಲೆ ಮೂರು ದೀಕ್ಷೆಗಳ ಸ್ವರೂಪಮಂ ವಿವರಿಸುತಿರ್ದಪಂ.

ಗುರೋರಾಲೋಕಮಾತ್ರೇಣ ಹಸ್ತಮಸ್ತಕಯೋಗತಃ
ಯಶ್ಶಿವತತ್ತ್ವ ಸಮಾವೇಶಃ ವೇಧಾದೀಕ್ಷೇತಿ ಸಾ ಮತಾ ॥

ಶ್ರೀಗುರುವಿನ ನೋಟಮಾತ್ರದಿಂದಲೂ ಹಸ್ತಮಸ್ತಕಯೋಗದತ್ತಣಿಂದಲೂ ಯಾವುದಾನೊಂದು ಜ್ಞಾನಕ್ರಿಯಾತ್ಮಕಮಾದ ಶಿವತತ್ತ್ವದ ಪ್ರವೇಶವುಂಟು ಅದು ವೇಧಾದೀಕ್ಷೆಯೆಂದು ನೆನೆಯಲ್ಪಟ್ಟಿತ್ತೆಂಬುದುರ್ಥಂ. ಗುರುವಿನ ದೃಷ್ಟಿಗರ್ಭದಲ್ಲಿ ಇದ್ದು ಕರಕಮಲದಲ್ಲಿ ಹುಟ್ಟಿದಾತಂಗೆ ಚಿನ್ಮಯಸ್ವರೂಪೋಪದೇಶವೆ ವೇಧಾದೀಕ್ಷೆಯೆಂಬುದು ತಾತ್ಪರ್ಯಂ ॥೧೩॥

ಮಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ ॥

ಸೋಽಹವೆಂಬ ಪ್ರಣಮುಮಂತ್ರ ಸ್ವರೂಪನಾದ ಪ್ರಾಣಿಗೆ ಪಂಚಾಕ್ಷರಿ ಮಂತ್ರೋಪದೇಶವಾವುದುಂಟು ಅದು ಮನನ ತ್ರಾಣ ಧರ್ಮವುಳ್ಳ ಮಂತ್ರದೀಕ್ಷೆಯೆಂದು ಪೇಳಲ್ಪಟ್ಟಿತೆಂಬುದರ್ಥಂ ॥೧೪॥

ಕುಂಡಮಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ ॥

ಕಲಶಬಂಧ ಸ್ವಸ್ತಿಕಮಂಡಲಯುಕ್ತಮಾದ ಲಿಂಗಧಾರಣಕ್ರಿಯೆಯೊಡನೆ ಕೂಡಿದಂಥಾದು ಕ್ರಿಯಾದೀಕ್ಷೆಯೆನಿಸಿಕೊಂಬುದರ್ಥಂ ॥೧೫॥ ಆಮೇಲಾ ಪ್ರಕಾರಮಂ ಪಂಚಶ್ಲೋಕಂಗಳಿಂ ಪ್ರತಿಪಾದಿಸುತಿರ್ದಪಂ.

ಶುಭಮಾಸೇ ಶುಭತಿಥೌ ಶುಭಕಾಲೇ ಶುಭೇಽಹನಿ
ವಿಭೂತಿಂ ಶಿವಭಕ್ತೇಭ್ಯೋ ದತ್ತ್ವಾ ತಾಂಬೂಲಪೂರ್ವಕಂ ॥

ಯಥಾವಿಧಿ ಯಥಾಯೋಗಂ ಶಿಷ್ಯಮಾನೀಯ ದೇಶಿಕಃ
ಸ್ನಾತಂ ಶುಕ್ಲಾಂಬರಧರಂ ದಂತಧಾವನಪೂರ್ವಕಂ ॥

ಮಂಡಲೇ ಸ್ಥಾಪಯೇಚ್ಛಿಷ್ಯಂ ಪ್ರಾಙ್ಮುಖಂ ತಮುದಙ್ಮುಖಂ
ಶಿವಸ್ಯ ನಾಮ ಕೀರ್ತಿಂ ಚ ಚಿಂತಾಮಪಿ ಚ ಕಾರಯೇತ್ ॥

ಮಾಘಾದಿ ಶುಭಮಾಸದಲ್ಲಿ ಭದ್ರಾದಿ ಶುಭತಿಥಿಗಳಲ್ಲಿ ಸೋಮಶುಕ್ರಾದಿ ಶುಭ ವಾರಗಳಲ್ಲಿ ಅಮೃತಯುಕ್ತ ಶುಭಮುಹೂರ್ತದಲ್ಲಿ ಶಾಸ್ತ್ರೋಕ್ತ ಪ್ರಕಾರದಿಂ ಶಿವಭಕ್ತರಿಗೆ ತಾಂಬೂಲಪೂರ್ವಕವಾಗಿ ವಿಭೂತಿಯಂ ಕೊಟ್ಟು ಆಚಾರ್ಯನು ದಂತಧಾವನ ಪೂರ್ವಕವಾಗಿ ಸ್ನಾನವ ಮಾಡಿ ವಸ್ತ್ರವ ಧರಿಸಿ ಶಿಷ್ಯನಂ ಕರೆದು ಪೂರ್ವಾಭಿಮುಖನ ಮಾಡಿ ತಾನು ಉತ್ತರಾಭಿಮುಖನಾಗಿ ಸ್ವಸ್ತಿಕಮಂಡಲದಲ್ಲಿ ಮೇಲೆ ಕುಳ್ಳಿರಿಸುವುದು. ಆಮೇಲೆ ಸಕಲ ಪ್ರಾಯಶ್ಚಿತ್ತರೂಪಮಾದ ಶಿವನ ಕೀರ್ತನವನೂ ತನ್ಮೂರ್ತಿಧ್ಯಾನವನೂ ಮಾಡಿಸುವುದೆಂಬುದರ್ಥಂ ॥೧೮॥ ಆಮೇಲೆ

ವಿಭೂತಿಪಟ್ಟಂ ದತ್ವಾಗ್ರೇ ಯಥಾಸ್ಥಾನಂ ಯಥಾವಿಧಿಃ
ಪಂಚಬ್ರಹ್ಮಮಯೈಸ್ತತ್ರ ಸ್ಥಾಪಿತೈಃ ಕಲಶೋದಕೈಃ ॥

ಆಚಾರ್ಯಸ್ಸಮಮೃತ್ವಿಗ್ಭಿಸ್ತ್ರಿಶ್ಶಿಷ್ಯಮಭಿಷಿಂಚಯೇತ್ ॥

ಮೊದಲು ವಿಧಿಯ ಮೀರದೆ ಸ್ಥಾನ ತಪ್ಪದೆ ವಿಭೂತಿಧಾರಣವ ಮಾಡಿ ಆ ಮಂಡಲ ಸ್ಥಾಪಿಸಿದ ಈಶಾನಾದಿ ಪಂಚಬ್ರಹ್ಮ ಪಂಚಾಕ್ಷರಿ ಮಂತ್ರಮಯಮಾದ ಕುಲಶೋದಕಗಳಿಂದ ಪ್ರಸಿದ್ಧರಾದ ಪಂಚಾಚಾರ್ಯರ ಸಂಪ್ರದಾಯವಿಡಿದು ಬಂದ ದ್ವಿಜರಿಂ ಕೂಡಿ ಆ ಸಂಪ್ರದಾಯದಲ್ಲಿಯೆ ಪಟ್ಟಾಭಿಷೇಕನಾದ ಶ್ರೀಗುರುವು ಶಿಷ್ಯನಂ ಮೂರು ಸಾರಿ ಪ್ರೋಕ್ಷಿಸೂದೆಂಬುದರ್ಥಂ ॥೧೯॥ ಆಮೇಲೆ ಮಾಂಸಪಿಂಡವಂ ಮಂತ್ರಪಿಂಡವಂ ಮಾಡಲೋಸ್ಕರ ಮಂತ್ರೋಪದೇಶಂ ಮಾಡೂದೆಂದು ಪೇಳುತಿರ್ದಪಂ.

ಅಭಿಷಿಚ್ಯ ಗುರುಃ ಶಿಷ್ಯಮಾಸೀನಂ ಪುರತಶ್ಶುಚಿಮ್
ತತಃ ಪಂಚಾಕ್ಷರೀಂ ಶೈವೀಂ ಸಂಸಾರಭಯಹಾರಿಣೀಮ್ ॥

ತಸ್ಯ ದಕ್ಷಿಣಕರ್ಣೇ ತು ನಿಗೂಢಮಪಿ ಕೀರ್ತಯೇತ್
ಛಂದೋ ರೂಪ ಮೃಷಿಂಚಾಸ್ಯದೇವತಾನ್ಯಾಸಪದ್ಧತಿಮ್ ॥

ಪ್ರದಕ್ಷಿಣೆಯ ಮಾಡಿದ ಬಳಿಕ ಗುರುವು ಶುಚಿಯಾಗಿ ಸಮೀಪದಲ್ಲಿದ್ದ ಶಿಷ್ಯನಂ ಕುರಿತು ಅವನ ಬಲಗಿವಿಯಲ್ಲಿ ಸಂಸಾರಭೀತಿಯಂ ಬಿಡಿಸುವಂಥಾ ಶಿವನೊಡನೆ ಸಂಬಂಧಿಸಿದ ಶ್ರೀರುದ್ರಪ್ರಸಿದ್ಧಮಾದ ನಮಶ್ಶಿವಾಯ ಎಂಬ ಪಂಚಾಕ್ಷರಮುಳ್ಳದಾಗಿ ಪರತತ್ತ್ವ ಪ್ರಕಾಶಮಾದ ವಿದ್ಯೆಯಂ ಪರಶ್ರುತಿಗೆ ಗೋಚರಮಾಗದಂತೆ ಉಪದೇಶಂಗೈದು ಈ ಪಂಚಾಕ್ಷರಿ ಸ್ವರೂಪಮಂ ಛಂದಸ್ಸವಂ ಮಂತ್ರವ ಮುಂಚೆ ಕಂಡ ಋಷಿಯಂ ಅಧಿಪ್ರತ್ಯಧಿದೇವತಾ ರೂಪಂ ಚ ಬ್ರಹ್ಮಪಂಚಸಾದಾಖ್ಯಮೆಂಬ ಪರ್ಯಾಯನಾಮವುಳ್ಳ ಆಚಾರಾದಿ ಪಂಚಲಿಂಗಮಂ ಕರನ್ಯಾಸಮಂ ನಿರೂಪಿಸೂದು. ಆಜ್ಞಾಚಕ್ರದಲ್ಲಿರುವ ಪ್ರಣವಮಯಮಾದ ಮಹಾಲಿಂಗ ಕರತಳದಲ್ಲಿ ಸ್ಥಾಪಿಸಲೋಸ್ಕರ ಮೊದಲು ಆಧಾರದಿಂ

ಪಂಚಚಕ್ರಂಗಳಲ್ಲಿ ನಕಾರಾದಿ ಬೀಜಮಯಮಾದ ಸದಾಚಾರದ ಲಿಂಗಪಂಚಕಮಂ ಶಿವಾಗಮೋಕ್ತಪ್ರಕಾರದಿಂದುಪದೇಶಂ ಮಾಡೂದೆಂಬುದು ತಾತ್ಪರ್ಯಂ ॥೨೧॥

## ೫. ಲಿಂಗಧಾರಣಸ್ಥಲ

ಆಮೇಲೆ ಏತತ್ಸೋಮಸ್ಯೈ ಸೂರ್ಯಸ್ಯ ಸರ್ವಲಿಂಗಂ ಸ್ಥಾಪಯಾತಿ ಪ್ರಾಣಮಂತ್ರಂ ಪವಿತ್ರಮ್ ಹೀಗೆಂಬ ಪ್ರತ್ಯುಕ್ತಪ್ರಕಾರದಿಂ ಶ್ರೀ ಗುರುವಿನಿಂ ಮಾಡುವಂಥಾ ಲಿಂಗಧಾರಣ ಸ್ಥಲಮಂ ನಿರೂಪಿಸುತಿರ್ದಪಂ. ಇಲ್ಲಿ ಮೊದಲು ಧರಿಸಲ್ತಕ್ಕ ಲಿಂಗಸ್ವರೂಪಂ ಪೇಳುತಿರ್ದಪಂ.

ಸ್ಫಾಟಿಕಂ ಶೈಲಜಂ ವ್ಯಾಪಿ ಚಂದ್ರಕಾಂತಮಯಂ ತು ವಾ
ಬಾಣಂ ವಾ ಸೂರ್ಯಕಾಂತಂ ವಾ ಲಿಂಗಮೇಕಂ ಸಮಾಹರೇತ್ ॥

ಶ್ರೀಶೈಲಾದಿ ಮಹಾಪರ್ವತಂಗಳಲ್ಲಿ ಹುಟ್ಟಿದ್ದಾಗಲಿ ಸ್ಫಟಿಕಶಿಲೆಯಲ್ಲಿ ಹುಟ್ಟಿದ್ದಾಗಲಿ ಚಂದ್ರಕಾಂತಶಿಲಾಮಯಮಾಗಲಿ ಬಾಣಲಿಂಗವಾಗಲಿ ಸೂರ್ಯಕಾಂತಶಿಲಾಮಯವಾಗಲಿ ಇದರೊಳಗೊಂದು ಲಿಂಗಮಂ ಪರೀಕ್ಷಿಸಿ ತೆಗೆದುಕೊಂಬುದರ್ಥಂ ॥೨೨॥ ಆಮೇಲಾ ಲಿಂಗದಲ್ಲಿ ಶಿವಕಲೆಯನಾವಾಹಿಸೂದೆಂದು ಪೇಳುತಿರ್ದಪಂ.

ಸರ್ವಲಕ್ಷಣಸಂಪನ್ನೇ ತಸ್ಮಿನ್ ಲಿಂಗೇ ವಿಶೋಧಿತೇ
ಪೀಠಸ್ಥಿತೇಭಿಷಿಕ್ತೇ ಚ ಗಂಧಪುಷ್ಪಾದಿಪೂಜಿತೇ ॥

ಮಂತ್ರಪೂತೇ ಕಲಾಂ ಶೈವೀಂ ಯೋಜಯೇದ್ವಿಧಿನಾ ಗುರುಃ ॥

ಶಿಲ್ಪಶಾಸ್ತ್ರೋಕ್ತ ಸರ್ವಲಕ್ಷಣಯುಕ್ತಮಾದ ಪಂಚಗವ್ಯಗಳಿಂ ಪರಿಶುದ್ಧಮಾದ ಪಂಚಾಮೃತಗಳಿಂದಭಿಷೇಕಮಾದ ಸುಗಂಧಪುಷ್ಪಾದಿಗಳಿಂ ಪೂಜಿಸಲ್ಪಟ್ಟ ಮೂಲ ಪಂಚಾಕ್ಷರೀಮಂತ್ರದಿಂ ಸಂಸ್ಕೃತಮಾದ ಕರಪೀಠದಲ್ಲಿ ಒಪ್ಪುತ್ತಿರುವ ಆ ಲಿಂಗದಲ್ಲಿ ಆಚಾರ್ಯನು ಶಿಷ್ಯನ ಮಸ್ತಕದಲ್ಲಿರುವ ಶಿವಕಲೆಯಂ ಶಾಸ್ತ್ರೋಕ್ತ ಪ್ರಕಾರದಿಂದಾವಾಹಿಂಸೂ ದೆಂಬುದರ್ಥಂ ॥೨೩॥ ಆಮೇಲೆ ಲಿಂಗಪ್ರಾಣಸಾಮರಸ್ಯಮಂ ಮಾಡಿ ಆ ಲಿಂಗಮಂ ಶಿಷ್ಯನ ಹಸ್ತದಲ್ಲಿ ಮಡುಗೂದೆಂದು ಪೇಳುತಿರ್ದಪಂ.

ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್

ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್ ॥

ಶಿವಕಲಾಭರಿತಮಾದ ಆ ಲಿಂಗದಲ್ಲಿ ಶಿಷ್ಯನ ಜೀವಕಲಾರೂಪಮಾದ ಪ್ರಾಣಮಂ ಸೆಳೆದು ಕೂಡಿಸೂದು. ಆ ಲಿಂಗಮಂ ಶಿಷ್ಯನ ಪ್ರಣವಮಯವಾದ ಜೀವಕಲಾರೂಪ ಪ್ರಾಣದಲ್ಲಿ ತಾದಾತ್ಮ್ಯದಿಂ ಕೂಡಿಸೂದು. ಈ ಪ್ರಕಾರದಿಂ ಗುರುವು ಲಿಂಗಮಂ ಶಿವಜೀವಕಲಾಸಾಮರಸ್ಯಾತ್ಮಕಮಾದಂಥಾದನಾಗಿ ಮಾಡಿ ಶಿಷ್ಯನ ಕರಕಮಲದಲ್ಲಿ ಮಡಗೂದೆಂಬುದರ್ಥಂ ॥೨೪॥ ಆಮೇಲೆ ಶಿಷ್ಯನಂ ಶಿಕ್ಷಿಸುತ್ತಿರ್ದಪಂ.

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ
ಕದಾಚಿತ್ಕುತ್ರಚಿದ್ವ್ಯಾಪಿ ನ ವಿಯೋಜಯ ದೇಹತಃ ॥

ಭೋ-ಶಿಷ್ಯನೆ, ಆ ಈ ಪ್ರಾಣಲಿಂಗವು, ತವ - ನಿನ್ನಿಂದ, ಪ್ರಾಣದಂತೆ ಧರಿಸಲ್ತಕ್ಕದು. ಎಲ್ಲಿಯಾದರೂ ಯಾವಾಗಲಾದರೂ ಶರೀರದತ್ತಣಿಂ ಕಡೆಗೆ ಮಾಡಬೇಡ ವೆಂಬುದರ್ಥಂ ॥೨೫॥ ಎತ್ತಲಾನು ಮರವೆಯಿಂದ ಶರೀರದ ಕಡೆಗಾದರೇನ ಮಾಡಬೇಕೆಂಬಲ್ಲಿ ಪೇಳುತಿರ್ದಪಂ.

ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ಮಹೀತಲೇ
ಪ್ರಾಣಾನ್ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ ॥

ಎತ್ತಲಾನು ವಿಸ್ಮೃತಿಯಿಂದ ಲಿಂಗವು ಶರೀರದಿಂ ಭೂಮಿ ಮೇಲೆ ಬಿದ್ದಿತ್ತಾದರೆ ಮೋಕ್ಷಸಂಪತ್ತಿಗೋಸ್ಕರ ಶೀಘ್ರದಲ್ಲಿ ಪ್ರಾಣವಂ ಬಿಡುವುದು. ಉಳಿದೆಯಾದರೆ ನರಕವೆಂಬುದು ತಾತ್ಪರ್ಯಂ ॥೨೬॥

ಇತಿ ಸಂಬೋಧಿತಶ್ಶಿಷ್ಯೋ ಗುರುಣಾ ಶಾಸ್ತ್ರವೇದಿನಾ
ಧಾರಯೇಚ್ಛಾಂಕರಂ ಲಿಂಗಂ ಶರೀರೇ ಪ್ರಾಣಯೋಗತಃ ॥

ಹೀಗೆಂಬುದು ವೀರಶೈವಶಾಸ್ತ್ರಜ್ಞನಾದ ಗುರುವಿನಿಂ ಭೋದಿಸಲ್ಪಟ್ಟ ಶಿಷ್ಯನು ಶರೀರದಲ್ಲಿ ಪ್ರಾಣವಿರುವ ಪರ್ಯಂತಮಾಗಿ ಶಿವಲಿಂಗವ ಧರಿಸೂದೆಂಬುದರ್ಥಂ ॥೨೭॥ ಆಮೇಲೆ ಲಿಂಗಧಾರಣಕ್ಕೆ ಪ್ರಯೋಜನವೇನು ಯಾರಿಂದ ಅಂಗೀಕರಿಸಲ್ಪಟ್ಟಿತ್ತೆಂಬಲ್ಲಿ ಪೇಳುತಿರ್ದಪಂ.

ಲಿಂಗಸ್ಯ ಧಾರಣಂ ಪುಣ್ಯಂ ಸರ್ವಪಾಪಪ್ರಣಾಶನಮ್
ಆದೃತಂ ಮುನಿಭಿಸ್ಸರ್ವೈರಾಗಮಾರ್ಥವಿಶಾರದೈಃ ॥

ಲಿಂಗಧಾರಣಂ ಪುಣ್ಯವು, ಸಕಲ ಪಾಪಂಗಳಂ ಕೆಡಿಸುವಂಥಾದು. ವೀರಶೈವ ಶಾಸ್ತ್ರಾಭಿಜ್ಞರಾದ ಮುನಿಗಳಿಂದ ಅಂಗೀಕರಿಸಲ್ಪಟ್ಟಂಥಾದೆಂಬುದರ್ಥಂ ॥೨೮॥ ಆಮೇಲೆ ಲಿಂಗಧಾರಣವು ಮೋಕ್ಷಾರ್ಥಿಗಳಾದ ಮುನಿಗಳಿಂದೆರಡು ಪ್ರಕಾರಮಾಗಿ ಅಂಗೀಕರಿ ಸಲ್ಪಟ್ಟಿತ್ತೆಂದು ಪೇಳುತಿರ್ದಪಂ

ಲಿಂಗಧಾರಣಮಾಖ್ಯಾತಂ ದ್ವಿಧಾ ಸರ್ವಾರ್ಥಸಾಧಕೈಃ
ಬಾಹ್ಯಮಾಭ್ಯಂತರಂ ಚೇತಿ ಮುನಿಭಿರ್ಮೋಕ್ಷಕಾಂಕ್ಷಿಭಿಃ ॥

ಭೋಗ ಮೋಕ್ಷಪ್ರದಮಾದ ಲಿಂಗಧಾರಣವು ಮೋಕ್ಷಾರ್ಥಿಗಳಾದ ಮುನಿಗಳಿಂದ ಬಾಹ್ಯವೆಂದಾಭ್ಯಂತರವೆಂದೆರಡು ಪ್ರಕಾರಮಾಗಿ ಪೇಳಲ್ಪಟ್ಟಿತ್ತೆಂಬುದರ್ಥಂ ॥೨೯॥ ಬಳಿಕಾಂತರವೇನೆಂಬಲ್ಲಿ ಪೇಳುತಿರ್ದಪಂ.

ಚಿದ್ರೂಪಂ ಪರಮಂ ಲಿಂಗಂ ಶಾಂಕರಂ ಸರ್ವಕಾರಣಮ್
ಯತ್ತಸ್ಯ ಧಾರಣಂ ಚಿತ್ತೇ ತದಾಂತರಮುದಾಹೃತಮ್ ॥

ಸಚ್ಚಿದಾನಂದಾತ್ಮಕಮಾಗಿ ವಿಶ್ವವನೂ ಮೀರಿ ವಿಶ್ವಕ್ಕೆ ಕಾರಣಮಾಗಿ ಶಿವ ಸಂಬಂಧಮಾದ ಯಾವುದಾನೊಂದು ಲಿಂಗವುಂಟು ಆ ಲಿಂಗವ ಹೃತ್ಕಮಲದಲ್ಲಿ ಧ್ಯಾನರೂಪದಿಂ ಧರಿಸುಹುದೆ ಅಂತರವೆಂದು ಶಾಸ್ತ್ರಜ್ಞರಿಂ ಪೇಳಲ್ಪಟ್ಟಿತೆಂಬುದರ್ಥಂ ॥೩೦॥ ಆಮೇಲೆ ಚಿಲ್ಲಿಂಗಸ್ವರೂಪಮಂ ಬಹುಪ್ರಕಾರವಾಗಿ ಪ್ರತಿಪಾದಿಸುತಿರ್ದಪಂ.

ಚಿದ್ರೂಪಂ ಹಿ ಪರಂ ತತ್ತ್ವಂ ಶಿವಾಖ್ಯಂ ವಿಶ್ವಕಾರಣಮ್
ನಿರಸ್ತವಿಶ್ವಕಾಲುಷ್ಯಂ ನಿಷ್ಕಲಂ ನಿರ್ವಿಕಲ್ಪಕಮ್ ॥

ಸತ್ತಾನಂದಪರಿಸ್ಫೂರ್ತಿಸಮುಲ್ಲಾಸ ಕಲಾಮಯಮ್
ಅನುಮೇಯಮನಿರ್ದೇಶ್ಯಂ ಮುಮುಕ್ಷುಭಿರುಪಾಸಿತಮ್ ॥

ಪರಂ ಬ್ರಹ್ಮ ಮಹಾಲಿಂಗಂ ಪ್ರಪಂಚಾತೀತಮವ್ಯಯಮ್

ಚಿದ್ರೂಪಮಾದ ಕಾರಣದಿಂ ಜಡಜೀವಲಕ್ಷಣವು ಅದಕಿಂತಲೂ ಶ್ರೇಷ್ಠ ವಾದುದರಿಂ ಜೀವಲಕ್ಷಣವು. ಅದರಿಂದಲೆ ವಿಶ್ವಕ್ಕೆ ಕಾರಣಮಾದಂಥಾದು. ಜರಾಮರಣಾದಿ ಸಕಲದೋಷರಹಿತಮಾದಂಥಾದು. ಕರಚರಣಾದ್ಯವಯವಶೂನ್ಯಮಾದಂಥಾದು. ನಿತ್ಯಾನಂದ ಪ್ರಕಾಶಾತ್ಮಕವಾಗಿ ವ್ಯಾಪಿಸಿಕೊಂಡಿರುವ ತುರ್ಯಾತೀತಮಾದ ಹದಿನೇಳನೇ ಕಲಾಸ್ವರೂಪ ಮಾದಂಥಾದು. ಪ್ರತ್ಯಕ್ಷಾದಿ ಪ್ರಮಾಣಗಳಿಗಗೋಚರಮಾದಂಥಾದು ಪೇಳಲು ಶಕ್ಯವಲ್ಲದಂಥಾದು. ಮೋಕ್ಷಾರ್ಥಿಗಳಿಂ ಭಜಿಸಲ್ಪಕ್ಕಂಥಾದು. ವಿಶ್ವವ ಮೀರಿದಂಥಾದು. ಅದರಿಂದಲೆ ನಿತ್ಯಮಾದಂಥಾದು. ಈ ಪ್ರಕಾರಮಾದ ವಿಶೇಷಣವಿಶಿಷ್ಟಮಾಗಿ ಶಿವನೆಂಬ ಹೆಸರುಳ್ಳ ಪರಬ್ರಹ್ಮವು ಮಹಾಲಿಂಗವೆಂದು ಪ್ರಸಿದ್ಧ ವೆಂಬುದರ್ಥಂ ॥೩೩॥ ಬಳಿಕೀ ಪ್ರಕಾರವಾದ ಮಹಾಲಿಂಗಕ್ಕೆ ಸ್ಥಾನಧ್ಯಾನಶೂನ್ಯಮಾದ ಕಾರಣದಿಂದದೆಂತು ಭಜಿಸಲ್ಪಕ್ಕದೆಂಬಲ್ಲಿ ಪೇಳುತಿರ್ದಪಂ.

ತದೇವ ಸರ್ವಭೂತಾನಾಮಂತಸ್ತ್ರಿಸ್ಥಾನಗೋಚರಂ ॥

ಮೂಲಾಧಾರೇ ಚ ಹೃದಯೇ ಭ್ರೂಮಧ್ಯೇ ಸರ್ವದೇಹಿನಾಂ
ಜ್ಯೋತಿರ್ಲಿಂಗಂ ಸದಾ ಭಾತಿ ಯದ್ಬ್ರಹ್ಮೇತ್ಯಾಹುರಾಗಮಾಃ ॥

ಆ ಪೂರ್ವೋಕ್ತ ಮಹಾಲಿಂಗವೆ ಸಮಸ್ತ ಪ್ರಾಣಿಗಳೊಳಗು ಮೂರು ಸ್ಥಾನವುಳ್ಳದ್ದು ಯಾವುದಾನೊಂದು ಶಿವಾಗಮಪ್ರಸಿದ್ಧಮಾದ ಮಹಾಲಿಂಗಮಂ ಉಪನಿಷತ್ತುಗಳು ಬ್ರಹ್ಮವೆಂದು ಪೇಳುವುವು. ಆ ಜ್ಯೋತಿರ್ಮಯವಾದ ಮಹಾಲಿಂಗವು ಸಮಸ್ತ ಪ್ರಾಣಿಗಳ ಪೂರ್ವಹೃದಯಮಾದ ಮೂಲಾಧಾರದಲ್ಲಿ ಮಧ್ಯಹೃದಯಮಾದ ಹೃದಯದಲ್ಲಿ ಊರ್ಧ್ವಹೃದಯಮಾದ ಭ್ರೂಮಧ್ಯದಲ್ಲಿ ಸದಾ ಪ್ರಕಾಶಿಸುತ್ತಿರುವುದು. ಗುರೂಪದೇಶದಿಂ ತಿಳಿಯಲ್ಪಕ್ಕದೆಂಬುದರ್ಥಂ ॥೩೪॥ ಬಳಿಕ ಅಖಂಡಿತಮಾದ ಮಹಾಲಿಂಗಕ್ಕೆ ಖಂಡಿತತ್ವಮೆಂತೆಂಬಲ್ಲಿ ಪೇಳುತಿರ್ದಪಂ.

ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮ ಸನಾತನಮ್
ಉಪಾಸನಾರ್ಥಮಂತಸ್ಥಂ ಪರಿಚ್ಛಿನ್ನಂ ಸ್ವಮಾಯಯಾ ॥

ವ್ಯಾಪಕವಾಗಿ ಅಪ್ರಕಟವಾಗಿ ನಿತ್ಯವಾಗಿ ಬ್ರಹ್ಮವೆಂಬ ಪೆಸರುಳ್ಳದಾಗಿ ಅಂತಸ್ಥಮಾದ ಲಿಂಗ ಒಂದೆ. ಆದರೂ ಭಕ್ತರಾದವರಿಗೆ ಉಪಾಸನಪೂಜಾರ್ಥಮಾಗಿ ತನ್ನ ಸ್ವತಂತ್ರತಾರೂಪಮಾದ ಮಾಯಾಶಕ್ತಿಯಿಂ ಸ್ಥಾನಭೇದದಿಂ ಲಿಂಗತ್ರಯ ಸ್ವರೂಪ ಮಾಯಿತೆಂಬುದರ್ಥಂ ॥೩೫॥ ಬಳಿಕ ಪರಬ್ರಹ್ಮಕ್ಕೆ ಲಿಂಗವೆಂಬ ವ್ಯವಹರಣೆಯೆಂತೆನೆ ಪೇಳುತಿರ್ದಪಂ.

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್
ಪುನಃ ಪುನಸ್ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್ ॥

ಯಾವುದಾನೊಂದು ಪರಬ್ರಹ್ಮದಲ್ಲಿ ಈ ಚರಾಚರಮಯಮಾದ ವಿಶ್ವವು ಲಯವನೈದುತ್ತಿಹುದು. ಮರಳಿ ಮರಳಿ ಉತ್ಪತ್ತಿಯನೈದುತ್ತಿಹುದು. ಆ ಕಾರಣದಿಂ ಲಯಗಮನಕ್ಕೆ ಕಾರಣಮಾಗಿ ನಿತ್ಯಮಾದ ಆ ಬ್ರಹ್ಮವು ಲಿಂಗವೆನಿಸಿಕೊಂಬುದರ್ಥಂ ॥೩೬॥ ಆಮೇಲೆ ಪೇಳಿದರ್ಥವನೆ ನಿರ್ಧರಿಸುತಿರ್ದಪಂ.

ತಸ್ಮಾಲ್ಲಿಂಗಮಿತಿ ಖ್ಯಾತಂ ಸತ್ಯಾನಂದಚಿದಾತ್ಮಕಮ್
ಬೃಹತ್ವಾದ್ಬೃಂಹಣತ್ವಾಚ್ಚ ಬ್ರಹ್ಮಶಬ್ದಾಭಿಧೇಯಕಮ್ ॥

ಅದು ಕಾರಣವಾಗಿ ಸಚ್ಚಿದಾನಂದಾತ್ಮಕಮಾದ ಮಹಾಲಿಂಗವೆ ವಿಶ್ವಕ್ಕಿಂತ ಮಹತ್ತ್ವವುಳ್ಳದಾದ ಕಾರಣದಿಂದಲೂ ವಿಶ್ವಸೃಷ್ಟಿಯಲ್ಲಿ ಉನ್ಮುಖವುಳ್ಳದಾಹತನದಿಂದಲೂ ಬ್ರಹ್ಮಶಬ್ದದಿಂ ಪೇಳಿಸಿಕೊಂಬುದೆಂದು ಪ್ರಸಿದ್ಧಮೆಂಬುದರ್ಥಂ ॥೩೭॥ ಆಮೇಲೆ ಪೇಳಲ್ಪಟ್ಟ ಸ್ಥಾನಂಗಳೊಳಗೆ ಒಂದುಸ್ಥಾನದಲ್ಲಿ ಜ್ಯೋತಿರ್ಲಿಂಗಾನುಸಂಧಾನವಾಂತರಲಿಂಗಧಾರಣ ವೆಂದು ಪೇಳುತಿರ್ದಪಂ.

ಆಧಾರೇ ಹೃದಯೇ ವಾಪಿ ಭ್ರೂಮಧ್ಯೇ ವಾ ನಿರಂತರಮ್
ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಮ್ ॥

ಮೊದಲು ಪೇಳಲ್ಪಟ್ಟ ಮೂಲಾಧಾರದಲ್ಲಿಯಾಗಲಿ ಅಲ್ಲದಿರ್ದಡೆ ಹೃದಯ ದಲ್ಲಾಗಲಿ ಅಲ್ಲದಿರ್ದಡೆ ಭ್ರೂಮಧ್ಯದಲ್ಲಾಗಲಿ ನಿರಂತರವು ಜ್ಯೋತಿರ್ಲಿಂಗ ಚಿಂತನವಾಂತ ರಲಿಂಗಧಾರಣವೆಂಬುದರ್ಥಂ ॥೩೮॥ ಬಳಿಕದೆಂತು ಚಿಂತಿಸಬೇಕೆಂಬಲ್ಲಿ ಪೇಳುತಿರ್ದಪಂ.

ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಮ್
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗೀ ವಿಭಾವಯೇತ್ ॥

ಮೂಲಾಧಾರದಲ್ಲಿ ಚೊಕ್ಕ ಚಿನ್ನದ ಬಣ್ಣವುಳ್ಳದನಾಗಿ ಹೃದಯದಲ್ಲಿ ಹವಳದ ಕಾಂತಿಯುಳ್ಳದನಾಗಿ ಭ್ರೂಮಧ್ಯದಲ್ಲಿ ಶುದ್ಧ ಸ್ಫಟಿಕವರ್ಣವನ್ನುಳ್ಳದನಾಗಿ ಲಿಂಗಮಂ ಶಿವಯೋಗಿಯಾದವನು ಧ್ಯಾನಿಸೂದೆಂಬುದರ್ಥಂ ॥೩೯॥ ಬಳಿಕ ಅಂತರಲಿಂಗಧಾರಣ ವೆಂದು ಬಾಹ್ಯಲಿಂಗಧಾರಣೆಯಿಂ ಶ್ರೇಷ್ಠವೆಂದು ಪೇಳುತಿರ್ದಪಂ.

ನಿರುಪಾಧಿಕಮಾಖ್ಯಾತಂ ಲಿಂಗಸ್ಯಾಂತರ ಧಾರಣಂ
ವಿಶಿಷ್ಟಂ ಕೋಟಿ ಗುಣಿತಂ ಬಾಹ್ಯಲಿಂಗಸ್ಯ ಧಾರಣಾತ್ ॥

ಬಾಹ್ಯಲಿಂಗಧಾರಣದಿಂದಲೂ ಅಂತರಲಿಂಗಧಾರಣಕ್ಕೆ ಅತಿಶಯುವನು ಪೇಳುತಿರ್ದಪಂ.

ಲಿಂಗಸ್ಯ-ಲಿಂಗಕ್ಕೆ, ಅಂತರಧಾರಣಂ-ಅಭ್ಯಂತರ ಲಿಂಗಧಾರಣವು, ನಿರುಪಾಧಿಕಂ-ನಿರ್ಮಲವಾಗಿರ್ದಂಥಾದೆಂದು, ಆಖ್ಯಾತಂ-ಪೇಳಲ್ಪಟ್ಟಿತು. ಬಾಹ್ಯಲಿಂಗಸ್ಯ-ಬಾಹ್ಯಲಿಂಗದ, ಧಾರಣಾತ್- ಧಾರಣದದೆಸೆಯಿಂದಲೂ, ಕೋಟಿಗುಣಿತಂ- ಲೆಕ್ಕವಿಲ್ಲದ, ವಿಶಿಷ್ಟಂ-ವಿಶೇಷಗುಣವು ॥೪೦॥*

ಯೇ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೈಶ್ವರಮ್
ನ ತೇಷಾಂ ಪುನರಾವೃತ್ತಿರ್ಘೋರಸಂಸಾರಮಂಡಲೇ ॥

ಯಾವ ಶಿವಯೋಗಿಗಳ ಹೃದಯದಲ್ಲಿ ಈಶ್ವರನದಾದ ಚಿದ್ರೂಪಲಿಂಗಮಂ ಧರಿಸಿಹರು ಅವರಿಗೆ ಈ ಕ್ರೂರವಾದ ಸಂಸಾರದ ಚಕ್ರದಲ್ಲಿ ಮರಳಿ ಬಾಹಣವಿಲ್ಲವೆಂಬುದರ್ಥಂ ॥೪೧॥ ಅದೆಂತೆಂದೊಡೆ

ಅಂತರ್ಲಿಂಗಾನುಸಂಧಾನಮಾತ್ಮವಿದ್ಯಾಪರಿಶ್ರಮಃ
ಗುರೂಪಾಸನಶಕ್ತಿಶ್ಚ ಕಾರಣಂ ಮೋಕ್ಷಸಂಪದಾಮ್ ॥

ನಾನು ಶಿವನಲ್ಲವೆಂಬ ಅಜ್ಞಾನ ನಿವಾರಕಮಾದ ಆತ್ಮವಿದ್ಯಾದಾರ್ಢ್ಯ ಗುರು ಭಜನೆಗಳಂತೆ ಅಂತರ್ಲಿಂಗಾನುಸಂಧಾನವು ಮೋಕ್ಷಸಂಪತ್ತುಗಳಿಗೆ ಕಾರಣವೆಂಬುದರ್ಥಂ ॥೪೨॥ ಅದುಕಾರಣಮಾಗಿ ನಿಶ್ಚಲಚಿತ್ತರಾದ ಶಿವಯೋಗಿಗಳಿಗೆ ಅಂತರ್ಲಿಂಗಾನು ಸಂಧಾನದಲ್ಲಿಯೆ ಪ್ರೀತಿಯುಂಟಾಗಿರುವುದು. ಬಾಹ್ಯಲಿಂಗದಲ್ಲಿ ಪ್ರೀತಿ ಇಲ್ಲವೆಂದು ಪೇಳುತಿರ್ದಪಂ.

ವೈರಾಗ್ಯಜ್ಞಾನಯುಕ್ತಾನಾಂ ಯೋಗಿನಾಂ ಸ್ಥಿರಚೇತಸಾಮ್
ಅಂತರ್ಲಿಂಗಾನುಸಂಧಾನೇ ರುಚಿರ್ಬಾಹ್ಯೇ ನ ಜಾಯತೇ ॥

ಸ್ವರ್ಗಾದಿಭೋಗಂಗಳಲ್ಲಿ ವಿರಕ್ತನಾಗಿ ನಿಶ್ಚಲಚಿತ್ತರಾದ ಶಿವಯೋಗಿಗಳಿಗೆ ಅಂತರ್ಲಿಂಗಾನುಸಂಧಾನದಲ್ಲಿಯೆ ಪ್ರೀತಿಯುಂಟಾಗಿರುವುದಲ್ಲದೆ ಬಾಹ್ಯಲಿಂಗದಲ್ಲಿ ಪ್ರೀತಿಯಿಲ್ಲವೆಂಬುದರ್ಥಂ ॥೪೩॥ ಬಳಿಕ ಪರಿಪಕ್ವಜ್ಞಾನಿಗಳಾದ ಬ್ರಹ್ಮಾದಿಗಳಾದರೂ ಸುಜ್ಞಾನಯೋಗದಿಂದಲೆ ಜ್ಯೋತಿರ್ಲಿಂಗವ ಕಾಣುತ್ತಿಹರೆಂದು ಪೇಳುತಿರ್ದಪಂ.

ಬ್ರಹ್ಮ ವಿಷ್ಣುಶ್ಚ ರುದ್ರಶ್ಚ ವಾಸವಾದ್ಯಾಶ್ಚ ಲೋಕಪಾಃ
ಮುನಯಸ್ಸಿದ್ಧಗಂಧರ್ವಾಃ ದಾನವಾ ಮಾನವಾಸ್ತಥಾ ॥

ಸರ್ವೇ ಚ ಜ್ಞಾನಯೋಗೇನ ಸರ್ವಕಾರಣಕಾರಣಮ್
ಪಶ್ಯಂತಿ ಹೃದಯೇ ಲಿಂಗಂ ಪರಮಾನಂದಲಕ್ಷಣಮ್ ॥

ತಸ್ಮಾತ್ಸರ್ವಪ್ರಯತ್ನೇನ ಶಾಂಕರಂ ಲಿಂಗಮುತ್ತಮಂ
ಅಂತರ್ವಿಭಾವಯೇದ್ವಿದ್ವಾನಶೇಷಕ್ಲೇಶಮುಕ್ತಯೇ ॥

---

*ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತವಿರಚಿತ ಸಿದ್ಧಾಂತ ಶಿಖಾಮಣಿವ್ಯಾಖ್ಯೆಯಿಂದ ಸೇರಿಸಿದೆ.

ಬ್ರಹ್ಮ, ವಿಷ್ಣು, ರುದ್ರ, ಇಂದ್ರ ಮೊದಲಾದ ಲೋಕಪಾಲಕರು, ಮುನಿಗಳು, ಸಿದ್ಧರು, ಗಂಧರ್ವರು, ಸಮಸ್ತರೂ ಜ್ಞಾನಯೋಗದಿಂದ ಹೃದಯದಲ್ಲಿ ಸಚ್ಚಿದಾನಂದವೆ ಕುರುಹಾಗಿ ಉಳ್ಳ ವಿಶ್ವಕಾರಣರಾದ ಬ್ರಹ್ಮಾದಿಗಳಿಗೂ ಕಾರಣಮಾದ ಶಿವಲಿಂಗಮಂ ಕಾಣುತ್ತಿಹರೆಂಬುದರ್ಥಂ. ಅದು ಕಾರಣದಿಂ ಭವರೋಗನಿವೃತ್ಯರ್ಥಮಾಗಿ ಸರ್ವಪ್ರಯತ್ನ ದಿಂದಲೂ ಉತ್ತಮವಾದ ಶಿವಲಿಂಗವನೆ ಹೃದಯದಲ್ಲಿ ಚಿಂತಿಸೂದೆಂಬುದರ್ಥಂ ॥೪೬॥ ಹಾಗಾದರೆ ಬಾಹ್ಯಲಿಂಗಮೇಕೆಂದು ಶಂಕೆ ಪ್ರಾಪ್ತಮಾದಲ್ಲಿ ಪೇಳುತಿರ್ದಪಂ.

ಅಂತರ್ಧಾರಯಿತುಂ ಲಿಂಗಮಶಕ್ತಶ್ಶಕ್ತ ಏವ ವಾ
ಬಾಹ್ಯಂ ಚ ಧಾರಯೇಲ್ಲಿಂಗಂ ತದ್ರೂಪಮಿತಿ ನಿಶ್ಚಯಾತ್

ಹೃದಯಕಮಲದಲ್ಲಿ ಶಿವಲಿಂಗ ಧರಿಸಲು ಶಕ್ತನಾಗಲಿ ಸ್ಫಟಿಕ ಶಿಲಾದಿನಿರ್ಮಿತ ಬಾಹ್ಯಲಿಂಗವಮಂ ಬಿಂದುಸ್ವರೂಪಾವುಲ ಮೂಲಪೀಠನಾದ ಸ್ವರೂಪವಮಾದ ಪೀಠಕಲಾತ್ಮತಿರ್ಯ್ಯಗ್ಜ್ಞತ ಗೋಮುಖಾಖ್ಯಂ ಚಿದ್ರೂಪಿಲಿಂಗಂ ಹೃದಯಾಬ್ಜ ಸಂಸ್ಥಿತಂ ಹೀಗೆಂಬ ಶಿವಲೋಕ ವಚನದಿಂ ಹೃತ್ಕಮಲನಿಷ್ಠೆ ಚಿನ್ಮಯ ಮಹಾಲಿಂಗ ಸ್ವರೂಪವುಳ್ಳವ ನಾಗಿ ಸಂದೇಹವಿಲ್ಲದೆ ತಿಳಿದು ಅಂತರ್ಲಿಂಗ ಸ್ಮರಣಾರ್ಥನಾಗಿ ವೀರಶೈವನು ಧರಿಸೂದೆಂಬುದರ್ಥಂ ॥೪೭॥ ಬಳಿಕ ಮಹಾಲಿಂಗಭೇದಮಂ ನಿರೂಪಿಸುತಿರ್ದಪಂ.

ಲಿಂಗಂ ತು ತ್ರಿವಿಧಂ ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಮ್
ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರಯೇತ್ತನೌ ॥

ಪ್ರಾಣಲಿಂಗಂ ತು ತತ್ಸೂಕ್ಷ್ಮಂ ಯದಂತರ್ಭಾವನಾಮಯಮ್
ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ ॥

ಮಹಾಲಿಂಗಮಾಯಿತ್ತಾದ ದೇಹ ಸ್ಥೂಲವೆಂದು ಸೂಕ್ಷ್ಮವೆಂದು ಪರಾತ್ಪರವೆಂದು ಮೂರು ತೆರನಾಗಿಹುದು. ಅಲ್ಲಿ ಯಾವುದಾನೊಂದು ಶರೀರಬಾಹ್ಯದಲ್ಲಿ ಧರಿಸಲ್ಪಡುತ್ತಿಹುದು. ಆ ಇದು ಸ್ಥೂಲವೆನಿಸಿಕೊಂಬುದು. ಇಷ್ಟಲಿಂಗವು ಯಾವುದಾನೊಂದು ಲಿಂಗವು ಹೃದಯಕಮಲದಲ್ಲಿ ಸನ್ಮಾತ್ರಭಾವನಾಮಯವಾಗಿರುವುದು. ಅದು ಸೂಕ್ಷ್ಮವೆನಿಸಿಕೊಂಬ ಪ್ರಾಣಲಿಂಗವು. ಯಾವುದಾನೊಂದು ಲಿಂಗವು ಪರಾತ್ಪರವೆಂದು ಪೇಳಲ್ಪಟ್ಟಿತ್ತು, ಅದು ತೃಪ್ತಿಲಿಂಗವೆಂದು ಪೇಳಲ್ಪಡುತ್ತಿಹುದೆಂಬುದರ್ಥಂ ॥೪೮॥ ಬಳಿಕ ಸ್ಥೂಲಲಿಂಗ ಧಾರಣದಿಂದೇನು ಫಲವೆಂಬಲ್ಲಿ ಪೇಳುತಿರ್ದಪಂ.

ಭಾವನಾತೀತಮವ್ಯಕ್ತಂ ಪರಬ್ರಹ್ಮ ಶಿವಾಭಿಧಮ್
ಇಷ್ಟಲಿಂಗಮಿದಂ ಸಾಕ್ಷಾದನಿಷ್ಟ ಪರಿಹಾರತಃ ॥
ಧಾರಯೇದವಧಾನೇನ ಶರೀರೇ ಸರ್ವದಾ ಬುಧಃ

ರೂಪಾದಿಗಳಿಲ್ಲದ ಕಾರಣದಿಂ ಬಾಹ್ಯೇಂದ್ರಿಯಗೋಚರವಲ್ಲದೆ ಸಮಲಾಂತಃ ಕರಣವೃತ್ತಿಗಗೋಚರವಮಾದ ಕಾರಣದಿಂ ಭಾವನಾತೀತಮಾದ ನಿಗಮಾಗಮ ಪ್ರಾಣನಾದನು. ಎಲ್ಲಾಗಳು ಎಚ್ಚರಿಕೆಯಿಂದ ಶರೀರದಲ್ಲಿ ಧರಿಸೂದೆಂಬುದರ್ಥಂ ॥೫೦॥ ಬಳಿಕೀ ಸಿದ್ಧಮಾದ ಶಿವನೆಂಬ ಪೆಸರುಳ್ಳ ಪರಬ್ರಹ್ಮವೆ ದೂರದೃಷ್ಟಂಗಳಂ ಪರಿಹರಿಸಿ

ಭೋಗಮೋಕ್ಷಂಗಳನೀವುದರತ್ತಣಿಂ ಇಷಮೂರ್ಜಂತಪಸಾನಿಯೇಚ್ಛತ ಅಥರ್ವಶಿರಃ ಪ್ರಸಿದ್ಧಮಾದ ಇಷ್ಟಲಿಂಗಮಂ ನಿಗಮಾಗಮ ನಿಪುಣನಾದವನು ಎಲ್ಲಾಗಳು ಎಚ್ಚರಿಕೆಯಿಂದ ಶರೀರದಲ್ಲಿ ಧರಿಸೂದೆಂಬುದರ್ಥಂ ॥೫೧॥ ಬಳಿಕ ಇಷ್ಟಲಿಂಗವನೀ ದೇಹದಲ್ಲಿ ಯಾವ ಸ್ಥಾನದಲ್ಲಿ ಧರಿಸಬೇಕೆಂಬಲ್ಲಿ ಪೇಳುತಿರ್ದಪಂ.

ಮೂರ್ಧ್ನಿ ವಾ ಕಂಠದೇಶೇ ವಾ ಕಕ್ಷೇ ವಕ್ಷಸ್ಥಲೇsಪಿ ವಾ
ಕುಕ್ಷೌ ಹಸ್ತಸ್ಥಲೇ ವಾsಪಿ ಧಾರಯೇಲ್ಲಿಂಗಮೈಶ್ವರಮ್ ॥

ಮಸ್ತಕದಲ್ಲಿ ಅಲ್ಲದಿದ್ದರೆ ಕೊರಳಲ್ಲಿ ಅಲ್ಲದಿದ್ದರೆ ಕಂಕುಳಲ್ಲಿ ಅಲ್ಲದಿದ್ದರೆ ಎದೆಯಲ್ಲಿ ಅಲ್ಲದಿದ್ದರೆ ಹೊಟ್ಟೆಮೇಲೆ ಅಲ್ಲದಿದ್ದರೆ ಹಸ್ತದಲ್ಲಿ ಉತ್ತಮವಾದ ಶಿವಲಿಂಗ ಧರಿಸೂದೆಂಬುದರ್ಥಂ ॥೫೨॥ ಆಮೇಲೆ ನಿಷೇಧಸ್ಥಾನಂಗಳಂ ಪೇಳುತಿರ್ದಪಂ.

ನಾಭೇರಧಸ್ತಾಲ್ಲಿಂಗಸ್ಯ ಧಾರಣಂ ಪಾಪಕಾರಣಮ್
ಜಟಾಗ್ರೇ ತ್ರಿಕಭಾಗೇ ಚ ಮಲಸ್ಥಾನೇ ನ ಧಾರಯೇತ್ ॥

ಹೊಕ್ಕುಳಿಂ ಕೆಳಗೆ, ಜಡೆತುದಿಯಲ್ಲಿ, ಪೃಷ್ಠಭಾಗದಲ್ಲಿ, ಮಲಸ್ಥಾನದಲ್ಲಿ ಲಿಂಗಧಾರಣವು ಪಾಪಕ್ಕೆ ಕಾರಣವಹುದು. ಆದರಿಂದೀ ಸ್ಥಾನಂಗಳಲ್ಲಿ ಧರಿಸಲಾಗದೆಂಬುದರ್ಥಂ ॥೫೩॥ ಬಳಿಕ ಈ ಲಿಂಗವನ್ನೆಲ್ಲಿ ಪೂಜಿಸಬೇಕೆಂಬಲ್ಲಿ ಪೇಳುತಿರ್ದಪಂ.

ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋರಮಮ್
ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ॥

ಬಾಹ್ಯಪೀಠಾರ್ಚನಾದೇತತ್ಕರಪೀಠಾರ್ಚನಂ ವರಮ್
ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಮ್ ॥

ಲಿಂಗಧಾರಿಯಾದಾತ ಎಲ್ಲಾಗಳು ಪವಿತ್ರನಾದವನು. ಏಕಾಗ್ರಚಿತ್ತನಾಗಿ ಕರಪೀಠದಲ್ಲಿ ಗಂಧ ಪುಷ್ಪಾದಿಗಳಿಂದ ಮನೋಹರಮಾದ ತನ್ನಿಷ್ಟಲಿಂಗಮಂ ಪೂಜಿಸೂದು. ಮೋಕ್ಷವ ಬಯಸುವ ಸಮಸ್ತ ವೀರಶೈವರಿಗೆ ಸದಾಕರಪೀಠಾರ್ಚನೆಯೆಂಬುದು ಬಾಹ್ಯ ಪೀಠಾರ್ಚನೆಯಿಂ ಶ್ರೇಷ್ಠಮಾದಂಥಾದೆಂಬುದರ್ಥಂ ॥೫೫॥ ಬಳಿಕೀ ಲಿಂಗಧಾರಣವು ಯಾರಿಂದ ಅಂಗೀಕರಿಸಿತ್ತೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮವಿಷ್ಣ್ವಾದಯೋ ದೇವಾಃ ಮುನಯೋ ಗೌತಮಾದಯಃ
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥

ಲಕ್ಷ್ಮ್ಯಾದಿಶಕ್ತಿಯಸ್ಸರ್ವಾಶ್ಶಿವಶಕ್ತಿವಿಭಾವಿತಾಃ
ಧಾರಯಂತ್ಯಲಿಕಾಗ್ರೇಷು ಶಿವಲಿಂಗಮಹರ್ನಿಶಮ್ ॥

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಗೌತಮಾದಿ ಮುನಿಗಳು ಶಿರಸ್ಸಿನಲ್ಲಿ ವಿಶೇಷವಾಗಿ ಎಲ್ಲಾಗಳೂ ಶಿವಲಿಂಗವ ಧರಿಸಿಹರು. ಲಕ್ಷ್ಮಿ ಮೊದಲಾದ ಸರ್ವ ಸ್ತ್ರೀಯರೂ ಶಿವಶಕ್ತಿಯುಳ್ಳವರಾಗಿ ಲಲಾಟದಲ್ಲಿ ಶಿವಲಿಂಗಮಂ ಧರಿಸಿಹರೆಂಬುದರ್ಥಂ ॥೫೭॥ ಇದರಿಂದ ಸ್ತ್ರೀ ಪುರುಷರಿಗೀರ್ವರಿಗೂ ಧಾರಣಂ ಸೂಚಿಸಲ್ಪಟ್ಟಿತ್ತು ಬಳಕೀ ಲಿಂಗಧಾರಣ ಎಲ್ಲಿ ಹೇಳಿದೆ ಎಂಬಲ್ಲಿ ಪೇಳುತಿರ್ದಪಂ.

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ॥

ವೇದ ಶಾಸ್ತ್ರ ಪುರಾಣಂಗಳಲ್ಲಿ ಕಾಮಿಕಾದಿ ವಾತುಳಾಂತಮಾದ ದಿವ್ಯಾಗಮಂಗಳಲ್ಲಿ ಸಂದೇಹವಿಲ್ಲದೆ ವೀರಶೈವರಿಗೆ ಲಿಂಗಧಾರಣವೆಂಬಲ್ಲಿ ಪೇಳಲ್ಪಟ್ಟಿತ್ತೆಂಬುದರ್ಥಂ ॥೫೮॥ ಬಳಿಕ ದಾವ ಶ್ರುತಿಯಲ್ಲಿ ಪ್ರಸಿದ್ಧವೆಂಬಲ್ಲಿ ಪೇಳುತಿರ್ದಪಂ.

ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಮ್ ॥

ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ ಹೀಗೆಂದು ಋಗ್ವೇದ ಪೇಳುತ್ತಿಹದು. ಇದಕ್ಕೆ ವಿವರ ಈ ಲಿಂಗವೆಂದು ವಿಶೇಷವು. ಅಹೋ ಬ್ರಹ್ಮಂಗಧಿಪತಿಯಾದ ಶಿವನೆ ನಿನ್ನ ಲಿಂಗವು ಶಿವಾಭೂಮ್ಯಂತವಾಗಿ ಪಸರಿಸಲ್ಪಟ್ಟಾಂಥದು. ಪಾವನವಾದಂಥಾದು. ಹೀಗೆಂದು ಋಗ್ವೇದ ಪೇಳುತ್ತಿಹುದು. ಅದು ಕಾರಣವಾಗಿ ದೋಷರಹಿತಮಾದ ಆ ಶಿವಲಿಂಗವು ಧರಿಸಲ್ತಕ್ಕದೆಂಬುದರ್ಥಂ ॥೫೯॥ ಬಳಕೀ ಲಿಂಗಧಾರಣದಿಂದೇನು ಪ್ರಯೋಜನಮೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಸ್ಪತಿರೀಶ್ವರಃ
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಶ್ಶುಚಿಃ ॥

ಸೃಷ್ಟಿಗೆ ಕರ್ತನಾದ ಬ್ರಹ್ಮದೇವಂಗೊಡೆಯನಾದ ಶಿವನು, ಆ ಶಿವನೆ ಪರಬ್ರಹ್ಮ ಆದೇ ಲಿಂಗವೆಂದು ಪೂರ್ವದಲ್ಲಿ ಪೇಳಲ್ಪಟ್ಟಿತ್ತು. ಆ ಲಿಂಗವು ಪವಿತ್ರವೆಂದು ಪ್ರಸಿದ್ಧಮಾದ ಕಾರಣದಿಂದಾ ಲಿಂಗದ ಸಂಪರ್ಕದತ್ತಣಿಂ ಶರೀರಂ ಪವಿತ್ರವಾದುದೆಂಬುದರ್ಥಂ ॥೬೦॥ ಸೂತ್ರದ್ವಯದಿಂದ ಪೇಳುತಿರ್ದಪಂ. ಬಳಿಕೀ ಪ್ರಕಾರಮಾದ ಲಿಂಗವಂ ದೀಕ್ಷೆಯಿಲ್ಲದ ಕಾರಣದಿಂ ಪಕ್ವ ಹೃದಯನಲ್ಲದ ನಿತ್ಯಾನಿತ್ಯ ವಸ್ತುವಿವೇಕವಿಲ್ಲದ ಶಿವ ಸಂಸಾರಶೂನ್ಯನು. ಗುರುಕೃಪೆ ಇಲ್ಲದವನಾಗಿ ಶ್ರೇಷ್ಠನಾದ ಪ್ರತ್ಯಕ್ಷ ಶಿವಲಿಂಗಮಂ ಧರಿಸಲಾಗದು. ಧರಿಸಿದರೆ ವಿಫಲವೆಂಬುದರ್ಥಂ. ಇಲ್ಲಿ ಅತಪ್ತತನೂರ್ನತದಾಮೊ ಅಶ್ನುತೆಯೆಂದು ಶ್ರುತಿ ಯುಂಟಾಗಿರುವುದು. ತತ್ ಆಮಃ ಎಂದು ಪದಚ್ಛೇದಂ ॥೬೧॥ ಮರಳಿ ಲಿಂಗಧಾರಣ ವಿಷಯದಲ್ಲಿ ಯಜುರ್ವೇದ ಶ್ರುತಿಯುಂಟೆಂದು ಪೇಳುತಿರ್ದಪಂ.

ಅತಪ್ತತನುರಜ್ಞೋ ವೈ ಆಮಸಂಸ್ಕಾರವರ್ಜಿತಃ
ದೀಕ್ಷಯಾ ರಹಿತಸ್ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಮ್

ಅತಪ್ತತನುಃ – ಮಂತ್ರದಲ್ಲಿ ಅತಪ್ತತನು ಎಂಬ ಪದದಿಂದ ಪೇಳಲ್ಪಡುವಂಥವನು, ಸಂಸ್ಕಾರವರ್ಜಿತಃ – ಪುಣ್ಯ ಸಂಸ್ಕಾರಹೀನನಾಗಿರ್ದಂಥಾ, ದೀಕ್ಷಯಾ – ಶಿವದೀಕ್ಷೆಯಿಂದ, ರಹಿತಃ – ಇಲ್ಲದೆ ಇದ್ದಂತಹ, ತನು ಆಮಃ – ಮಂತ್ರದ ಆಮಶಬ್ದದಿಂದ ಪೇಳಲ್ಪಡುವನು ಸಃ–ಅಂಥಾ ಪುರುಷನು, ಉತ್ತಮಂ–ಉತ್ಕೃಷ್ಟವಾಗಿರ್ದಂಥಾ, ಸಾಕ್ಷಾತ್ – ಪ್ರತ್ಯಕ್ಷವಾಗಿ ರ್ದಂಥಾ, ಲಿಂಗಂ – ಲಿಂಗವನು, ನಾಮಜ್ಞುಯಾತ್–ಐಯ್ದನು, ಆಪ್ಲ– ವ್ಯಾಪ್ತೌ ॥೬೨॥*

---

*ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತವಿರಚಿತ ಸಿದ್ಧಾಂತ ಶಿಖಾಮಣಿವ್ಯಾಖ್ಯೆಯಿಂದ ಸೇರಿಸಿದೆ.

ಅಘೋರಾ ಪಾಪಕಾಶಿತಿ ಯಾ ತೇ ರುದ್ರಶಿವಾತನೂಃ
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋsಘ ವರ್ಜಿತಃ ॥

ಭೋ ರುದ್ರ – ಅಹೋ ಮಹಾರುದ್ರನೆ, ಶಿವಾ – ಮಂಗಲಾತ್ಮಕಮಾದ, ತೇ– ನಿನ್ನ, ಯಾ ತನೂಃ ಲಿಂಗಂ ತು ಶಿವಾಯೋರ್ದೇಹಃ ಹೀಗೆಂಬಾಗಮೋಕ್ತಿಯಿಂ ಶಿವಶಕ್ತ್ಯಾತ್ಮಕಮಾದ ಲಿಂಗಮೂರ್ತಿ ಯಾವದುಂಟು, ಸಾ- ಅದು, ಅಘೋರಾ– ಸೌಮ್ಯವಾದಂಥದು, ಅಪಾಪಕಾಶಿತಿ – ದೋಷರಹಿತಮಾದಂಥಾದೆಂದು, ಯಜುಷಾ– ಯಜುರ್ವೇದದಿಂದ, ಯಸ್ಮಾತ್ – ಯಾವ ಕಾರಣದಿಂ, ಗೀಯತೇ-ಪೇಳಲ್ಪಡುತ್ತಿಹುದು, ತಸ್ಮಾತ್-ಅದು ಕಾರಣದಿಂ, ಶಿವಃ – ಶಿವಲಿಂಗದೊಡನೆ ಸಂಬಂಧವುಳ್ಳವನು, ಅಘವರ್ಜಿತಃ – ಪಾಪರಹಿತನೆಂಬುದರ್ಥಂ.॥೬೩॥ ಗೀಯತೇ- ಪೇಳಲ್ಪಡುತ್ತಿಹುದು, ತಸ್ಮಾತ್- ಅದು ಕಾರಣದಿಂ ಬಳಿಕ ಲಿಂಗಧಾರಣ ಸ್ಥಲಮಂ ಮುಗಿಸಿ ಭಸ್ಮಧಾರಣಸ್ಥಲಮಂ ಸೂಚಿಸುತಿರ್ದಪಂ

ಯೋ ಲಿಂಗಧಾರೀ ನಿಯತಾಂತರಾತ್ಮಾ
ನಿತ್ಯಂ ಶಿವಾರಾಧನಬದ್ಧಚಿತ್ತಃ
ಸ ಧಾರಯೇತ್ಸರ್ವಮಲಾಪಹತ್ಯೈ
ಭಸ್ಮಾಮಲಂ ಚಾರು ಯಥಾ ಪ್ರಯೋಗಂ ॥

ನಿರ್ಮಲಾಂತಃಕರಣನಾಗಿ ನಿತ್ಯವು ಶಿವಪೂಜೆಯಲ್ಲಿ ಆಸಕ್ತನಾದ ಯಾವ ಶಿವಲಿಂಗಧಾರಕನುಂಟು ಆತನು ಸರ್ವದೋಷ ನಿವೃತ್ಯರ್ಥಮಾಗಿ ಮನೋಹರಮಾದ ನಿರ್ಮಲಮಾದ ಭಸ್ಮಮಂ ಶಾಸ್ತ್ರೋಕ್ತ ಪ್ರಕಾರದಿಂ ಧರಿಸೂದೆಂಬುದರ್ಥಂ ॥೬೪॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಭಕ್ತಸ್ಥಲ ಗುರುಕಾರುಣ್ಯ ಲಿಂಗಧಾರಣಪ್ರಸಂಗೋನಾಮಷಷ್ಠಪರಿಚ್ಛೇದಃ.

## ಸಪ್ತಮಪರಿಚ್ಛೇದ

### ೬. ವಿಭೂತಿಧಾರಣಸ್ಥಲ.

ಬಳಿಕ ಭೂತ್ಯೈ ನ ಪ್ರಮದಿತವ್ಯಮೆಂಬ ಶ್ರುತಿಪ್ರಸಿದ್ಧಮಾದ ಭಸ್ಮಧಾರಣಸ್ಥಲಮಂ ನಿರೂಪಿಸುತಿರ್ದಪಂ.

ಶ್ರೀ ರೇಣುಕಃ

ಇಲ್ಲಿ ಮೊದಲು ನಿರುಪಾಧಿಕಭಸ್ಮಧಾರಣಮಂ ಸೂಚಿಸಿ

ಭಸ್ಮಧಾರಣಸಂಯುಕ್ತಃ ಪವಿತ್ರೋ ನಿಯತಾಶಯಃ
ಶಿವಾಭಿಧಾನಂ ಯತ್ಪ್ರೋಕ್ತಂ ಭಾಸನಾದ್ಭಸಿತಂ ತಥಾ ॥

ಮಹಾಭಸ್ಮೇತಿ ಸಂಚಿಂತ್ಯ ಮಹಾದೇವಂ ಪ್ರಭಾಮಯಂ
ವರ್ತಂತೇ ಯೇ ಮಹಾಭಾಗಾಃ ಮುಖ್ಯಾಸ್ತೇ ಭಸ್ಮಧಾರಿಣಃ ॥

ಭಸ್ಮಧಾರಣೆಯೊಡನೆ ಕೂಡಿ ಶುದ್ಧನಾದ ಶಿವಲಿಂಗಧಾರಕನು ಭಸ್ಮಧ್ಯಾನಾತ್ ಸಂಧ್ಯಾನಂ ಭವತಿ ಭಸ್ಮಧ್ಯಾನಾತ್ಪಂಚಾಕ್ಷರೀಸ್ಮರಣಂ ಭವತಿ ಭಸ್ಮಧ್ಯಾನಾತ್ ಸ್ಥಾಣುತ್ವಂ ಚ ಗಚ್ಛತಿ ಸ ಯೇಷಃ ಭಸ್ಮಜ್ಯೋತಿಃ – ಹೀಗೆಂಬ ಜಾಬಾಲಶ್ರುತಿಯಿಂ ಭಸ್ಮಜ್ಯೋತಿ ರ್ಲಿಂಗಮಯೇ ಎಂದು ನಿಯಮಿಸಲ್ಪಟ್ಟ ಚಿತ್ತವುಳ್ಳವನಾಗಿ ಯಾವುದಾದರೊಂದು ಭಸ್ಮ ಜ್ಯೋತಿರ್ಲಿಂಗವು ಪರಶಿವನು ಪರಬ್ರಹ್ಮವೆಂಬ ಪೆಸರುಳ್ಳದಾಗಿ ಪೇಳಲ್ಪಟ್ಟಿತ್ತೆಂದು ಜ್ಯೋತಿರ್ಲಿಂಗ ಸ್ವರೂಪನಾದ ಮಹಾದೇವನಂ ಚಾಸಣವ ಮಾಡುವ ಕಾರಣದತ್ತಣಿಂ ಭಸಿತವೆಂದು ಹಾಂಗೆ ಭಸ್ಮಮೆಂದು ಧ್ಯಾನಿಸಿ ಶ್ರೇಷ್ಠರಾದ ಯಾವ ಚಿಲ್ಲಿಂಗಧಾರಕರುಂಟು ಅವರುಗಳು ಮುಖ್ಯಮಾದ ನಿರುಪಾಧಿಕ ಭಸ್ಮಧಾರಿಗಳೆಂಬುದರ್ಥಂ ॥೨॥ ಆಮೇಲೆ ಸೋಪಾಧಿಕಭಸ್ಮರೂಪಮಂ ನಿರ್ಮಿಸುತಿರ್ದಪಂ.

ಶಿವಾಜ್ಞಾದಿಸಮುತ್ಪನ್ನಂ ಮಂತ್ರನ್ಯಾಸಾದಿಯೋಗತಃ
ತದುಪಾಧಿಕಮಿತ್ಯಾಹುರ್ಭಸ್ಮತಂತ್ರವಿಶಾರದಾಃ ॥

ಯಾವುದಾನೊಂದು ಭಸ್ಮವು ಪಂಚಬ್ರಹ್ಮಮಂತ್ರನ್ಯಾಸಾದಿ ಸಂಬಂಧದತ್ತಣಿಂ ಶಿವಮಂತ್ರ ಸಂಸ್ಕೃತಾಗ್ನಿ ಲೌಕಿಕಾಗ್ನಿಗಳಿಂ ಹುಟ್ಟಿದಂಥಾಗುತ್ತಿಹುದು. ಆ ಭಸ್ಮಮಂತ್ರ ವಿಶಾರದಾಃ-ಶಿವಾಗಮ ಪ್ರವೀಣರಾದರೂ ಸೋಪಾಧಿಕಭಸ್ಮವಾಗಿ ಪೇಳುತ್ತಿಹ ರೆಂಬುದರ್ಥಂ ॥೩॥ ಬಳಿಕೀ ಭಸ್ಮಕ್ಕೆ ಕಾರಣಭೇದದಿಂ ಪಂಚನಾಮಂಗಳುಂಟೆಂದು ಪೇಳುತಿರ್ದಪಂ

ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನಃ
ಯೇತಾನಿ ಪಂಚನಾಮಾನಿ ಹೇತುಭಿಃ ಪಂಚಭಿರ್ಭೃಶಮ್ ॥

ಭಸ್ಮಕ್ಕೆ ಐದು ಕಾರಣಗಳಿಂದ ವಿಭೂತಿ ಭಸಿತ ಭಸ್ಮ ಕ್ಷಾರ ರಕ್ಷೆಯೆಂದು ಮೆಗ್ಗಳವಾಗಿ ಐದು ನಾಮಂಗಳುಂಟೆಂಬುದರ್ಥಂ ॥೪॥ ಬಳಿಕೀ ನಾಮಂಗಳನನ್ವರ್ಥನಾಮವ ಮಾಡಿ ಪೇಳುತಿರ್ದಪಂ.

ವಿಭೂತಿರ್ಭೂತಿಹೇತುತ್ವಾದ್ಭಸಿತಂ ತತ್ತ್ವಭಾಸನಾತ್
ಪಾಪಾನಾಂ ಭರ್ತ್ಸನಾದ್ಭಸ್ಮ ಕ್ಷಾರಣಾತ್ ಕ್ಷಾರಮಾಪದಾಮ್ ॥
ರಕ್ಷಣಾತ್ಸರ್ವಭೂತೇಭ್ಯೋ ರಕ್ಷೇತಿ ಪರಿಗೀಯತೇ ॥

ಅಣಿಮಾದ್ಯಷ್ಟೈಶ್ವರ್ಯಕ್ಕೆ ಕಾರಣಮಾದುದರತ್ತಣಿಂ ವಿಭೂತಿಯೆಂದು ಶಿವತತ್ವಮಂತ್ರ ಪ್ರಕಾಶವ ಮಾಡುವದರಿಂ ಭಸಿತವೆಂದು, ಪಾಪಂಗಳನ್ನುಡುಗಿಸುವ ಕಾರಣದಿಂ ಭಸ್ಮವೆಂದು, ತಾಪತ್ರಯೋತ್ಪನ್ನಮಾದ ವಿಪತ್ತುಗಳ ಕ್ಷಯವ ಮಾಡುವುದರತ್ತಣಿಂ ಕ್ಷಾರವೆಂದು, ಗೃಹ ಯಕ್ಷಾದಿ ದುಷ್ಟಪ್ರಾಣಿಗಳತ್ತಣಿಂ ರಕ್ಷಿಸುವ ಕಾರಣದಿಂ ರಕ್ಷಣೆಯೆಂದು ಪೇಳಲ್ಪಟ್ಟಿತ್ತಿಹುದೆಂಬುದರ್ಥಂ ॥೫॥ ಬಳಿಕೀ ಪ್ರಕಾರಮಾದ ಕ್ರಿಯಾಭೇದಕ್ಕೆ ಕಾರಣವೇನೆಂಬಲ್ಲಿ ಗೋಮೂಲವೆಂದು ಪೇಳುತಿರ್ದಪಂ.

ನಂದಾ ಭದ್ರಾ ಚ ಸುರಭಿಸ್ಸುಶೀಲಾ ಸುಮನಾಸ್ತಥಾ
ಪಂಚಗಾವೋ ವಿಭೋರ್ಜಾತಸ್ಸದ್ಯೋಜಾತಾದಿ ವಕ್ತ್ರತಃ ॥

ವ್ಯಾಪಕನಾದ ಶಿವನ ಸದ್ಯೋಜಾತ ಮುಖದಿಂ ನಂದೆಯೆಂಬ ಗೋವು, ವಾಮದೇವ ಮುಖದಿಂ ಭದ್ರೆಯೆಂಬ ಗೋವು, ಅಘೋರ ಮುಖದಿಂ ಸುರಭಿಯೆಂಬ ಗೋವು, ತತ್ಪುರುಷ ಮುಖದಿಂ ಸುಶೀಲೆಯೆಂಬ ಗೋವು, ಈಶಾನ ಮುಖದಿಂ ಸುಮನೆಯೆಂಬ ಗೋವು. ಈ ರೂಪಮಾದ ಪಂಚಮುಖಗಳಿಂ ಪಂಚಗೋವುಗಳ್ಪುಟ್ಟಿದವು. ಅವರಿಂದುಂಟಾದುದೀ ಕಾರ್ಯಭೇದವೆಂಬುದರ್ಥಂ ॥೬॥ ಹಾಗಾದರೀ ಗೋವುಗಳ ಸ್ವರೂಪಮೆಂತೆನೆ ಪೇಳುತಿರ್ದಪಂ

ಕಪಿಲಾ ಕೃಷ್ಣಾ ಧವಲಾ ಧೂಮ್ರರಕ್ತಾಸ್ತಥೈವ ಚ
ನಂದಾದೀನಾಂ ಗವಾಂ ವರ್ಣಾಃ ಕ್ರಮೇಣ ಪರಿಕೀರ್ತಿತಾಃ ॥

ನಂದೆಯೆಂಬ ಗೋವು ಕಪಿಲ ವರ್ಣಮುಳ್ಳುದು, ಭದ್ರೆಯೆಂಬುದು ಕೃಷ್ಣವರ್ಣ ಮುಳ್ಳುದು, ಸುರಭಿ ಎಂಬುದು ಶ್ವೇತವರ್ಣಮುಳ್ಳುದು, ಸುಶೀಲೆಯೆಂಬುದು ಧೂಮ್ರ ವರ್ಣಮುಳ್ಳುದು, ಸುಮನೆಯೆಂಬುದು ರಕ್ತವರ್ಣಮುಳ್ಳುದು. ಈ ಪ್ರಕಾರದಿಂ ಕ್ರಮದಿಂದ ನಂದಾದಿ ಗೋವುಗಳ ವರ್ಣಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೭॥ ಬಳಿಕ ಯಾವ ಗೋವಿನಿಂದ ಎಂಥ ಭಸ್ಮ ಹುಟ್ಟಿತೆಂಬಲ್ಲಿ ಬೃಹಜ್ಜಾಬಾಲಶ್ರುತ್ಯುಕ್ತ ಪ್ರಕಾರದಿಂ ಪೇಳುತಿರ್ದಪಂ.

ಸದ್ಯೋಜಾತಾದ್ವಿಭೂತಿಶ್ಚ ವಾಮಾದ್ಭಸಿತಮೇವ ಚ
ಅಘೋರಾದ್ಭಸ್ಮ ಸಂಜಾತಂ ಪುರುಷಾತ್ ಕ್ಷಾರನಾಮ ಚ ॥

ರಕ್ಷಾ ಚೇಶಾನವಕ್ತ್ರಾಚ್ಚ ನಂದಾದಿ ದ್ವಾರತೋ ಭವೇತ್ ॥

ಸದ್ಯೋಜಾತ ಮುಖದಿಂದುಂಟಾದ ನಂದೆಯಿಂ ವಿಭೂತಿ, ವಾಮದೇವ ಮುಖದಿಂ ಪುಟ್ಟಿದ ಭದ್ರೆಯಿಂ ಭಸಿತಂ, ಅಘೋರ ಮುಖದಿಂದುತ್ಪನ್ನಮಾದ ಸುರಭಿಯಿಂ ಭಸ್ಮ, ತತ್ಪುರುಷ ಮುಖದಿಂದಾವಿರ್ಭವಿಸಿದ ಸುಶೀಲೆಯಿಂ ಕ್ಷಾರಂ, ಈಶಾನ್ಯ ಮುಖದಿಂದ

ಜನಿಸಿದ ಸುಮನೆಯಿಂ ರಕ್ಷೆಯೆಂಬ ಭಸ್ಮ ಪುಟ್ಟಿತೆಂಬುದರ್ಥಂ ॥೯॥ ಆಮೇಲೀ ಭಸ್ಮಂಗಳಿಗೆ ವಿನಿಯೋಗಮಂ ಪೇಳುತಿರ್ದಪಂ.

ಧಾರಯೇನ್ನಿತ್ಯಕಾರ್ಯೇಷು ವಿಭೂತಿಂ ಚ ಪ್ರಯತ್ನತಃ
ನೈಮಿತ್ತಿಕೇಷು ಭಸಿತಂ ಕ್ಷಾರಂ ಕಾರ್ಯೇಷು ಸರ್ವದಾ ॥

ಪ್ರಾಯಶ್ಚಿತ್ತೇಷು ಸರ್ವೇಷು ಭಸ್ಮನಾಮ ಯಥಾವಿಧಿ
ರಕ್ಷಾ ಚ ಮೋಕ್ಷಕಾರ್ಯೇಷು ಪ್ರಯೋಕ್ತವ್ಯಾ ಸದಾ ಬುಧೈಃ ॥

ವೀರಶೈವ ಮತ ಪೃಷ್ಟರಾದ ವಿದ್ವಜ್ಜನರಿಂದ ಪ್ರಯತ್ನದಿಂದ ನಿತ್ಯಕರ್ಮಂಗಳಲ್ಲಿ ವಿಭೂತಿಯು ನೈಮಿತ್ತಿಕ ಕರ್ಮಂಗಳಲ್ಲಿ ಭಸಿತವು ಸಕಲ ಕಾರ್ಯಗಳಲ್ಲಿಯೂ ಕ್ಷಾರವು ಸಕಲ ಪ್ರಾಯಶ್ಚಿತ್ತಂಗಳಲ್ಲಿ ಭಸ್ಮವು ಮೋಕ್ಷಕಾರ್ಯಂಗಳಲ್ಲಿ ರಕ್ಷೆಯು ವಿಧಿದಪ್ಪದೆ ಧರಿಸತಕ್ಕದೆಂಬುದರ್ಥಂ ॥೧೧॥ ಬಳಿಕೀ ಭಸ್ಮಂಗಳಿಗೆ ವರ್ಣಮಂ ಪೇಳುತಿರ್ದಪಂ.

ನಂದಾದೀನಾಂ ತು ಯೇ ವರ್ಣಾಃ ಕಪಿಲಾದ್ಯಾಃ ಪ್ರಕೀರ್ತಿತಾಃ
ತ ಏವವರ್ಣಾಃ ವಿಖ್ಯಾತಾಃ ಭೂತ್ಯಾದೀನಾಂ ಯಥಾಕ್ರಮಮ್ ॥

ನಂದಾದಿ ಗೋವುಗಳಿಗೆ ಯಾವ ಕಪಿಲಾದಿ ವರ್ಣಂಗಳು ಪೇಳಲ್ಪಟ್ಟವು ಆ ವರ್ಣಂಗಳೆ ವಿಭೂತಿ ಮೊದಲಾದ ಭಸ್ಮಂಗಳಿಗೆ ಕ್ರಮದಿಂ ವರ್ಣಂಗಳೆಂದು ಪ್ರಸಿದ್ಧವಾದಂಥಾವೆಂಬುದರ್ಥಂ ॥೧೨॥ ಬಳಿಕೀ ಭಸ್ಮೋತ್ಪತ್ತಿ ನಾಲ್ಕು ಪ್ರಕಾರವೆಂದು ಪೇಳುತಿರ್ದಪಂ

ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಧಾ ತಂತ್ರವೇದಿಭಿಃ
ಕಲ್ಪಂ ಚೈವಾನುಕಲ್ಪಂ ತು ಉಪಕಲ್ಪಮಕಲ್ಪಕಮ್ ॥

ಏಷಾಮಾದಿಮಮುತ್ಕೃಷ್ಟಮನ್ಯತ್ಸರ್ವಮಭಾವತಃ ॥

ಕಲ್ಪವೆಂದು ಅನುಕಲ್ಪವೆಂದು ಉಪಕಲ್ಪವೆಂದು ಅಕಲ್ಪವೆಂದು ಭಸ್ಮೋತ್ಪತ್ತಿ ನಾಲ್ಕು ಪ್ರಕಾರವಾಗಿ ಶಾಸ್ತ್ರಜ್ಞರಿಂ ಪೇಳಲ್ಪಟ್ಟಿತ್ತು. ಈ ನಾಲ್ಕು ವಿಧಮಾದ ಭಸ್ಮಂಗಳಲ್ಲಿ ಮೊದಲಾದ ಕಲ್ಪಭಸ್ಮ ಶ್ರೇಷ್ಠವು. ಉಳಿದ ಮೂರು ಭಸ್ಮವಾ ಭಸ್ಮಕಲ್ಪ ಭಸ್ಮದೋದಕದಿಂದಂಗೀಕರಿಸಲ್ತಕ್ಕದೆಂಬುದರ್ಥಂ ॥೧೩॥ ಬಳಿಕ ಭಸ್ಮಂಗಳ ಸ್ವರೂಪಮಾತ್ರದಿಂ ಪೇಳುತಿರ್ದಪಂ.

ಯಥಾಶಾಸ್ತ್ರೋಕವಿಧಿನಾ ಗೃಹೀತ್ವಾ ಗೋಮಯಂ ನವಮ್
ಸದ್ಯೇನ ವಾಮದೇವೇನ ಕುರ್ಯಾತ್ಪಿಂಡಮನುತ್ತಮಮ್ ॥

ಶೋಷಯೇತ್ಪುರುಷೇಣೈವ ದಹೇದ್ಘೋರಾಚ್ಛವಾಗ್ನಿನಾ
ತತ ಈಶಾನಮಂತ್ರೇಣ ಬಿಲ್ವಪಾತ್ರೇ ನಿಧಾಪಯೇತ್ ॥

ನಂದಾದಿ ಗೋವುಗಳಿಂದಾವಿರ್ಭೂತಮಾದ ನೂತನಗುಣಮಯಮಂ ಸದ್ಯೋಜಾತ ಮಂತ್ರದಿಂದ ಅಂತರದಲ್ಲಿಯೆ ಹಿಡಿದು ವಾಮದೇವ ಮಂತ್ರದಿಂದ ಮುದ್ದೆಯ ಮಾಡಿ ತತ್ಪುರುಷ ಮಂತ್ರದಿಂದ ಒಣಗಿಸಿ ಶಿವಮಂತ್ರ ಸಂಸ್ಕೃತಾಗ್ನಿಯಿಂದ ಅಘೋರ ಮಂತ್ರದಿಂ ಭಸ್ಮೀಕರಿಸೂದು. ಬಳಿಕೀಶಾನ ಮಂತ್ರದಿಂ ಬಿಲ್ವಾದಿಪಾತ್ರೆಗಳಲ್ಲಿ ತುಂಬಿರಿಸಿದ ಆ ಭಸ್ಮವೆ ಕಲ್ಪವೆಂದು ತಿಳಿಯಲು ಯೋಗ್ಯವೆಂಬುದರ್ಥಂ॥೧೪॥

ಕಲ್ಪಂ ತದ್ಭಸ್ಮವಿಜ್ಞೇಯಮನುಕಲ್ಪಮಥೋಚ್ಯತೇ
ವನೇಷು ಗೋಮಯಂ ಯಚ್ಚ ಶುಷ್ಕಂ ಚೂರ್ಣೀಕೃತಂ ತಥಾ ॥

ದಗ್ಧಂ ಚೈವಾನುಕಲ್ಪಾಖ್ಯಮಾಪಣಾದಿಗತಂ ತು ಯತ್
ವಸ್ತ್ರೇಣೋತ್ತಾರಿತಂ ಭಸ್ಮ ಗೋಮೂತ್ರಾಬದ್ಧ ಪಿಂಡಿತಮ್ ॥

ದಗ್ಧಂ ಪ್ರಾಗುಕ್ತವಿಧಿನಾ ಭವೇದ್ಭಸ್ಮೋಪಕಲ್ಪಕಮ್

ಅರಣ್ಯಗಳಲ್ಲಿ ಒಣಗಿದ ಗೋಮಯಮಂ ಚೂರುಮಾಡಿ ಪೂರ್ವೋಕ್ತ ಪ್ರಕಾರದಿಂ ದಹಿಸಲ್ಪಟ್ಟ ಭಸ್ಮವನು ಕಲ್ಪವೆನಿಸಿಕೊಂಬುದೆಂಬುದರ್ಥಂ. ಮಂತ್ರ ಸಂಸ್ಕಾರವಿಲ್ಲಂ ॥೧೬॥

ಅಂಗಡಿ ಸಂತೆ ಮೊದಲಾದ ಸ್ಥಾನಂಗಳಲ್ಲಿದ್ದ ಭಸ್ಮವ ವಸ್ತ್ರದಿಂ ಗಾಳಿಸಿ ಗೋಮೂತ್ರದಿಂ ಮುದ್ದೆಯ ಮಾಡಿ ಪೂರ್ವೋಕ್ತ ಪ್ರಕಾರದಿಂದ ದಹಿಸಿದರೆ ಆ ಭಸ್ಮವು ಉಪಕಲ್ಪವಾಹದೆಂಬುದರ್ಥಂ ॥೧೭॥

ಅನ್ಯೈರಾಪಾದಿತಂ ಭಸ್ಮಾಪ್ಯಕಲ್ಪಮಿತಿ ನಿಶ್ಚಿತಂ ॥

ಮಂತ್ರಜ್ಞರಿಲ್ಲದವರಿಂ ಸಂಪಾದಿಸಲ್ಪಟ್ಟ ಭಸ್ಮವಕಲ್ಪವೆಂದು ನಿಶ್ಚೈಸಲ್ಪಟ್ಟಿತ್ತೆಂಬುದರ್ಥಂ ॥೧೮॥ ಬಳಿಕೀ ಪ್ರಕಾರಮಾದ ಭಸ್ಮದಿಂ ಸ್ನಾನವ ಮಾಡೂದೆಂದು ಪೇಳುತಿರ್ದಪಂ.

ಏಷ್ವೇಕತಮಮಾದಾಯ ಪಾತ್ರೇಷು ಕಲಶಾದಿಷು
ತ್ರಿಸಂಧ್ಯಮಾಚರೇತ್ ಸ್ನಾನಂ ಯಥಾಸಂಭವಮೇವ ವಾ ॥

ಶಾಸ್ತ್ರೋಕ್ತ ಪ್ರಕಾರದಿಂ ಕಲಶಾದಿಪಾತ್ರಗಳಲ್ಲಿ ಭಿನ್ನಭಿನ್ನವಾಗಿ ಇರಿಸಲ್ಪಟ್ಟ ಭಸ್ಮಗಳಲ್ಲಿ ಯಾವುದನಾದರೊಂದು ಭಸ್ಮವ ತೆಗೆದುಕೊಂಡು ತ್ರಿಕಾಲದಲ್ಲಿ ಸ್ನಾನವಂ ಮಾಡುವುದೆಂಬುದರ್ಥಂ ॥೧೯॥ ಆ ಭಸ್ಮಸ್ನಾನಮೆಂದು ಮಾಡಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ಸ್ನಾನಕಾಲೇ ಕರೌ ಪಾದೌ ಪ್ರಕ್ಷಾಲ್ಯ ವಿಮಲಾಂಭಸಾ
ವಾಮಹಸ್ತತಲೇ ಭಸ್ಮಕ್ಷಿಪ್ತ್ವಾಚ್ಛಾದ್ಯಾನ್ಯಪಾಣಿನಾ ॥

ಅಷ್ಟಕೃತ್ವಾಥ ಮೂಲೇನ ಮೌನೀ ಭಸ್ಮಾಭಿಮಂತ್ರ್ಯ ಚ
ಶಿರ ಈಶಾನಮಂತ್ರೇಣ ಪುರುಷೇಣ ಮುಖಂ ತಥಾ ॥

ಹೃತ್ಪ್ರದೇಶಮಘೋರೇಣ ವಾಮದೇವೇನ ಗುಹ್ಯಕಮ್
ಪಾದೌ ಸದ್ಯೇನ ಸರ್ವಾಂಗಂ ಪ್ರಣವೇನೈವ ಸೇಚಯೇತ್ ॥

ಭಸ್ಮಸ್ನಾನಕಾಲದಲ್ಲಿ ಶುದ್ಧೋದಕದಿಂ ಹಸ್ತಪಾದಂಗಳಂ ತೊಳೆದು ವಾಮಹಸ್ತದಲ್ಲಿ ಭಸ್ಮವನ್ನಿಟ್ಟುಕೊಂಡು ದಕ್ಷಿಣಹಸ್ತದಿಂ ಮುಚ್ಚಿ ಬಲದೊಡೆಯ ಮೇಲಿಟ್ಟುಕೊಂಡು ಮೌನಿಯಾಗಿ ಮೂಲದಿಂದೆಂಟು ಸಾರಿ ಮಂತ್ರಿಸಿ ಶಿರ ಮುಖ ಹೃದಯ ನಾಭಿ ಪಾದಂಗಳಲ್ಲಿ ಪ್ರಣವ ಸಹಿತಮಾದ ಈಶಾನಮಂತ್ರಗಳಿಂ ಪ್ರೋಕ್ಷಿಸೋದು. ಮರಳಿ ಬರಿಯ ಪ್ರಣವಮಂತ್ರದಿಂ ಸರ್ವಾಂಗಮಂ ಪ್ರೋಕ್ಷಿಸೂದೆಂಬುದರ್ಥಂ ॥೨೨॥ ಬಳಿಕೀ ಭಸ್ಮಸ್ನಾನದಿಂದುತ್ಕೃಷ್ಟಮೆಂದು ಪೇಳುತಿರ್ದಪಂ.

ಭಸ್ಮನಾ ವಿಹಿತಂ ಸ್ನಾನಮಿದಮಾಗ್ನೇಯಮುತ್ತಮಮ್
ಸ್ನಾನೇಷು ವಾರುಣಾದ್ಯೇಷು ಮುಖ್ಯಮೇತನ್ಮಲಾಪಹಮ್ ॥

ಗಂಗೋದಕ ದಿವ್ಯ ವಾಯವ್ಯ ಸ್ನಾನಂಗಳಲ್ಲಿ ಭಸ್ಮದಿಂ ಮಾಡಲ್ಪಟ್ಟ ಸ್ನಾನವಾಗ್ನೇಯ ಮಾದ ಕಾರಣದಿಂ ಶ್ರೇಷ್ಠವು. ಅಗ್ನಿ ಸರ್ವಭಕ್ಷಕನಾದ ಕಾರಣದಿಂ ಸಕಲಮಲಗಳನೂ ಅಪಹರಿಸುವಂಥಾದೆಂಬುದರ್ಥಂ॥೨೩॥ ಬಳಿಕ ಜಲಾದಿ ಸ್ನಾನಗಳಿಗೆ ಸಕಲಮಲ ನಿವರ್ತಕತ್ವವಿಲ್ಲವೆ ಎಂಬಲ್ಲಿ ಪೇಳುತಿರ್ದಪಂ.

ಭಸ್ಮಸ್ನಾನವತಾಂ ಪುಂಸಾಂ ಯಥಾ ಯೋಗಂ ದಿನೇದಿನೇ
ವಾರುಣ್ಯಾದ್ಯೈರಲಂ ಸ್ನಾನೈರ್ಬಾಹ್ಯದೋಷಾಪಹಾರಿಭಿಃ ॥

ಶಾಸ್ತ್ರೋಕ್ತ ಪ್ರಕಾರ ಮೀರದೆ ಪ್ರತಿದಿನವೂ ಭಸ್ಮಸ್ನಾನವ ಮಾಡುವಂಥಾ ಪುರುಷರಿಗೆ ಭಸ್ಮಜ್ಞಾನಾಂಗಮಾದ ಕಾರಣ ಬಾಹ್ಯಾಭ್ಯಂತರ ಮಲಕ್ಷಯವಾದುದು. ಬಾಹ್ಯಮಲಮಾತ್ರ ನಿವರ್ತಕಮಾದ ಜಲಾದಿಸ್ನಾನಂಗಳಿಂದೇನು ಪ್ರಯೋಜನವೆಂಬುದರ್ಥಂ ॥೨೪॥ ಆ ಕಾರಣದಿಂ ಯತಿಗಳು ಜಲಂ ಭಸ್ಮ ಸ್ನಾನದಿಂದಾಗ್ನೇಯವೆಂದು ಭಸ್ಮದಿಂದಲೆ ಸ್ನಾನವ ಮಾಡುವರೆಂದು ಪೇಳುತಿರ್ದಪಂ.

ಆಗ್ನೇಯಂ ಭಸ್ಮನಾ ಸ್ನಾನಂ ಯತಿಭಿಸ್ತು ವಿಧೀಯತೇ
ಆರ್ದ್ರಸ್ನಾನಾತ್ಪರಂ ಭಸ್ಮ ಆರ್ದ್ರೇ ಜಂತುವಧೋ ಧ್ರುವಮ್ ॥

ಭಸ್ಮಸ್ನಾನಮಾಗ್ನೇಯವೆಂದು ಯತಿಗಳೆಲ್ಲ ಭಸ್ಮಸ್ನಾನವೆ ಯಾವಾಗಲು ಮಾಡಲ್ಪಡುತ್ತಿಹುದು. ಅಗ್ನಿಯು ಪ್ರಕಾಶಾತ್ಮಕನಾದ ಕಾರಣ ಜ್ಞಾನಪ್ರದನೆಂಬುದರಿಂ ಜಲಸ್ನಾನಕ್ಕಿಂತ ಭಸ್ಮಸ್ನಾನವೆ ಶ್ರೇಷ್ಠವು. ಜಲಸ್ನಾನದಲ್ಲಿ ಜಲಚರ ಪ್ರಾಣಿ ಪೀಡೆಯಿಂದ ಶೈತ್ಯದ ಬಾಧೆಯಿಂದ ಪ್ರಾಣಿಗಳಿಗೆ ಹಿಂಸೆಯೆ ನಿಶ್ಚಿತಮಾಗಿರುವುದು. ಇಲ್ಲಿ ಆ ದೋಷವಿಲ್ಲ ವೆಂಬುದರ್ಥಂ ॥೨೫॥ ಆಮೇಲೆ ಜಲಕ್ಕೆ ದೋಷಾಂತರವನು ಉದ್ಭವಿಸುತಿರ್ದಪಂ.

ಆರ್ದ್ರಂ ತು ಪ್ರಕೃತಿಂ ವಿಂದ್ಯಾತ್ಪ್ರಕೃತಿಂ ಬಂಧನಂ ವಿದುಃ
ಪ್ರಕೃತೇಸ್ತು ಪ್ರಹಾಣಾರ್ಥಂ ಭಸ್ಮನಾ ಸ್ನಾನಮಿಷ್ಯತೇ ॥

ಜಲಮುಂ ಗರ್ಭವಾಸಕೆ ಪ್ರಕೃತಿಯಾದಂಥಾದನಾಗಿ ತಿಳಿವುದು.

ಸರ್ವಾಂ ಏಷ ಪುರುಷೋನ್ನರಸಮಯಃ ಹೀಗೆಂದು ಶ್ರುತಿ ಪೇಳುತ್ತಿಹುದು. ಪುರುಷಃ ಪ್ರಕೃತಿಸ್ಥೋತಿಹಿ ಭುಙ್ತ್ಕೇತಿಪ್ರಕೃತಿ ಜಾನುನಾಮ್ ಹೀಗೆಂಬ ಭಗವದ್ವಚನದಿಂ ಪ್ರಕೃತಿಯಂ ಭೋಜ್ಯ ಭೋಜನರೂಪದಿಂ ಪುರುಷಗೆ ಪಾಶವಾಗಿ ಬಲ್ಲವರು ಪೇಳುವರು. ಪುರುಷನು ಪ್ರಕೃತಿಬದ್ಧನಾದ ಕಾರಣದಿಂ ಜಲಸ್ನಾನದಿಂದುಂಟಾದ ದೋಷ ನಿವೃತ್ಯರ್ಥಮಾಗಿ ಭಸ್ಮದಿಂ ಸ್ನಾನ ನಿಚ್ಚೈಸಲ್ಪಡುತ್ತಿಹದೆಂಬುದರ್ಥಂ ॥೨೬॥ ಬಳಿಕೀ ಭಸ್ಮಸ್ನಾನ ವಾರಿಂದಂಗೀಕರಿಸಲ್ಪಟ್ಟಿತೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮಾದ್ಯಾವಿಭುಧಾಸ್ಸರ್ವೇ ಮುನಯೋ ನಾರದಾದಯಃ
ಯೋಗಿನಸ್ಸನಕಾದ್ಯಾಶ್ಚ ಬಾಣಾದ್ಯಾ ದಾನವಾ ಅಪಿ ॥

ಭಸ್ಮಸ್ನಾನಯುತಾಸ್ಸರ್ವೇ ಶಿವಭಕ್ತಿಪರಾಯಣಾಃ
ನಿರ್ಮುಕ್ತದೋಷಕಲಿಲಾಃ ನಿತ್ಯಶುದ್ಧಾ ಭವಂತಿ ಹಿ ॥

ಬ್ರಹ್ಮಾದಿ ಸಕಲದೇವತೆಗಳು ನಾರದಾದಿ ಮುನಿಗಳು ಸನಕಾದಿ ಯೋಗಿಗಳು ಬಾಣಾದಿ ದಾನವರು ಸಕಲರೂ ಭಸ್ಮಸ್ನಾನಯುಕ್ತರಾಗಿ ಶಿವಭಕ್ತಿ ಪರಾಯಣರಾಗಿ ನಿರ್ದೋಷಿಗಳಾಗಿ ನಿತ್ಯಶುದ್ಧರಾಗಿ ಇರುವರೆಂಬುದರ್ಥಂ ॥೨೮॥ ಬಳಿಕ ಭಸ್ಮೋದ್ಧೂಳನ ತ್ರಿಪುಂಡ್ರಧಾರಣಂ ಮಾಡಲ್ತಕ್ಕದೆಂದು ಪೇಳುತಿರ್ದಪಂ.

ನಮಃ ಶಿವಾಯೇತಿ ಭಸ್ಮಕೃತ್ವಾ ಸಪ್ತಾಭಿಮಂತ್ರಿತಂ
ಉದ್ಧೂಳಯೇತ್ತೇನ ದೇಹಂ ತ್ರಿಪುಂಡ್ರಂ ಚಾಪಿ ಧಾರಯೇತ್ ॥

ನಮಃ ಶಿವಾಯ ಎಂಬ ಪಂಚಾಕ್ಷರೀಮಂತ್ರದಿಂದ ಭಸ್ಮವನೇಳು ಬಾರಿ ಮಂತ್ರಿಸಿ ಅದರಿಂದ ದೇಹವನು ಧೂಳಿಸೂದು ತ್ರಿಪುಂಡ್ರವನು ಧರಿಸುವುದೆಂಬುದರ್ಥಂ ॥೨೯॥ ಬಳಿಕೀ ತ್ರಿಪುಂಡ್ರವ ಯಾವ ಕಾಲದಲ್ಲಿ ಯಾವ ಸ್ಥಾನದಲ್ಲಿ ಹೇಗೆ ರಚಿಸಬೇಕೆಂಬಲ್ಲಿ ಪೇಳುತಿರ್ದಪಂ.

ಸರ್ವಾಂಗೋದ್ಧೂಲನಂ ಚಾಪಿ ನ ಸಮಾನಂ ತ್ರಿಪುಂಡ್ರಕೈಃ
ತಸ್ಮಾತ್ತ್ರಿಪುಂಡ್ರಮೇವೈಕಂ ಲಿಖೇದುದ್ಧೂಲನಂ ವಿನಾ ॥

ತ್ರಿಪುಂಡ್ರಕ್ಕೆ ಅವಶ್ಯಮೇಕತ್ವವನು ಪೇಳುತಿರ್ದಪಂ. ಸರ್ವಾಂಗೋದ್ಧೂಲನಂ ಸರ್ವಾಂಗಕ್ಕೂ ಅನುಲೇಪನವು, ತ್ರಿಪುಂಡ್ರಕೈಃ – ತ್ರಿಪುಂಡ್ರಕ್ಕೆ ನ ಸಮಾನಂ –ಸರಿಯಿಲ್ಲ, ತಸ್ಮಾತ್ – ಅದುಕಾರಣ, ಉದ್ಧೂಲನಂ ವಿನಾ – ಅಂಗಾಲೇಪವನುಳಿದಾದರು, ತ್ರಿಪುಂಡ್ರವೇಕಂ – ತ್ರಿಪುಂಡ್ರವಂದನೇ, ಲಿಖೇತ್ – ಧರಿಸಬೇಕು ॥೩೦॥*

ತ್ರಿಪುಂಡ್ರಂಧಾರಯೇನ್ನಿತ್ಯಂ ಭಸ್ಮನಾ ಸಲಿಲೇನ ಚ
ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮ ಃ ॥

ಜಲಮಿಶ್ರಮಾದ ಭಸ್ಮದಿಂದ ತ್ರಿಕಾಲದಲ್ಲೂ ಶರೀರದಲ್ಲಿ ಹದಿನೈದು ಸ್ಥಾನಂಗಳಲ್ಲಿ ಯಾವ ಸ್ಥಾನದಲ್ಲಿ ಸದಾ ಕಾಲದಲ್ಲಿ ಶ್ರೇಷ್ಠನು ತ್ರಿಪುಂಡ್ರಮಂ ಧರಿಸೂದೆಂಬುದರ್ಥಂ ॥೩೧॥ ಬಳಿಕೀ ಸ್ಥಾನಂಗಳಾವವೆಂಬಲ್ಲಿ ಪೇಳುತಿರ್ದಪಂ.

ಉತ್ತಮಾಂಗೇ ಲಲಾಟೇ ಚ ಶ್ರವಣದ್ವಿತಯೇ ತಥಾ
ಗಲೇ ಭುಜದ್ವಯೇ ಚೈವ ಹೃದಿ ನಾಭೌ ಚ ಪೃಷ್ಠಕೇ ॥

ಬಾಹುಯುಗ್ಮೇ ಕಕುದ್ದೇಶೇ ಮಣಿಬಂಧದ್ವಯೇ ತಥಾ
ತ್ರಿಪುಂಡ್ರಂ ಭಸ್ಮನಾ ಧಾರ್ಯಂ ಮೂಲಮಂತ್ರೇಣ ಸಾಧಕೈಃ ॥

ತ್ರಿಯಾಯುಷ ತ್ರಿಯಂಬಕ ಪ್ರಣವಪಂಚಾಕ್ಷರ ಮಂತ್ರ ಗಳಿಂ ಶಿರ ಲಲಾಟ ಕರ್ಣದ್ವಯ ಕೊರಳು ಭುಜದ್ವಯ ವಕ್ಷಸ್ಥಲ ನಾಭಿ ಬೆನ್ನು ಬಾಹುಮಧ್ಯದ್ವಯ ಹೆಡಕುಗಳು ಮುಂಗೈಗಳೆರಡರಲ್ಲಿ ಸಾಧಕರಿಂ ಭಸ್ಮತ್ರಿಪುಂಡ್ರಂ ರಚಿಸಲ್ತಕ್ಕದೆಂಬುದರ್ಥಂ ॥೩೨॥ ಬಳಿಕ ಅಭಿಮಂತ್ರಣ ಪೂರ್ವಕನಾಗಿ ಸಮಂತ್ರಕ ತ್ರಿಪುಂಡ್ರಧಾರಣಕ್ಕೆ ಫಲಮಂ ಪೇಳುತಿರ್ದಪಂ.

* ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ವಾಮಹಸ್ತತಲೇ ಭಸ್ಮಕ್ಷಿಪ್ತ್ವಾಚ್ಛಾದ್ಯಾನ್ಯಪಾಣಿನಾ
ಅಗ್ನಿರಿತ್ಯಾದಿಮಂತ್ರೇಣ ಸ್ಪೃಶನ್ವಾರಾಭಿಮಂತ್ರ್ಯ ಚ ॥

ತ್ರಿಪುಂಡ್ರಮುಕ್ತ ಸ್ಥಾನೇಷು ದಧ್ಯಾತ್ಸಜಲಭಸ್ಮನಾ
ಶಿವಂ ಶಿವಂಕರಂ ಶಾಂತಂ ಸ ಪ್ರಾಪ್ನೋತಿ ನ ಸಂಶಯಃ ॥

ಎಡದ ಕರತಳದಲ್ಲಿ ಭಸ್ಮವನ್ನಿಟ್ಟುಕೊಂಡು ಬಲದ ಹಸ್ತದಿಂ ಮುಚ್ಚಿ ಅಗ್ನಿರಿತಿ ಭಸ್ಮಯೆಂಬುದು ಮೊದಲಾದ ಮಂತ್ರದಿಂದ ಭಸ್ಮವ ಮುಟ್ಟುವಾತನಾಗಿ ಏಳು ಸಾರಿ ಮಂತ್ರಿಸಿ ಜಲಮಿಶ್ರಿತಮಾದ ಭಸ್ಮದಿಂದ ಹೇಳಿದ ಸ್ಥಾನದಲ್ಲಿ ತ್ರಿಪುಂಡ್ರಮಂ ಧರಿಸೂದು. ಆ ತ್ರಿಪುಂಡ್ರಧಾರಿಯಾದ ಪುರುಷನು ರಾಗದ್ವೇಷರಹಿತನಾದ ಸಕಲರಿಗೂ ಶುಭಕರನಾದ ಶಿವನಂ ಯೆಯ್ದುವನು, ಸಂದೇಹವಿಲ್ಲವೆಂಬುದರ್ಥಂ ॥೩೫॥ ಬಳಿಕ ತ್ರಿಪುಂಡ್ರ ರಚನ ಪ್ರಕಾರಮಂ ಪೇಳುತಿರ್ದಪಂ.

ಮಧ್ಯಾಂಗುಲಿತ್ರಯೇಣೈವ ಸ್ವದಕ್ಷಿಣಕರಸ್ಯ ತು
ಷಡಂಗುಲಾಯತಂ ಮಾನಮಪಿ ವ್ಯಾಲಿಕಮಾನಕಮ್ ॥
ನೇತ್ರಯುಗ್ಮಪ್ರಮಾಣೇನ ಭಾಲೇ ದದ್ಯಾತ್ತ್ರಿಪುಂಡ್ರಕಮ್ ॥

ತನ್ನ ಬಲಗೈಯ ಮಧ್ಯದ ಮೂರು ಬೆರಳುಗಳಿಂದ ಆರು ಬೆರಳ ಪ್ರಮಾಣವಾಗಲಿ ಹೆಚ್ಚಾಗಿ ನೇತ್ರದ್ವಯ ಪ್ರಮಾಣಿನಿಂದಲಾದರೂ ಲಲಾಟದಲ್ಲಿ ತ್ರಿಪುಂಡ್ರಮಂ ರಚಿಸೂದೆಂಬುದರ್ಥಂ ॥೩೬॥ ಬಳಿಕ ಮತ್ತೊಂದು ಪ್ರಕಾರಮಾದ ಅಂಗುಲಿಗಳಿಂ ತ್ರಿಪುಂಡ್ರಮಂ ರಚಿಸೂದೆಂದು ಪೇಳುತಿರ್ದಪಂ

ಮಧ್ಯಮಾನಾಮಿಕಾಂಗುಷ್ಠೈರನುಲೋಮವಿಲೋಮತಃ
ಧಾರಯೇದ್ಯಸ್ತ್ರಿ ಪುಂಡ್ರಾಂಕಂ ಸ ರುದ್ರೋನಾತ್ರಸಂಶಯಃ

ಮಧ್ಯಮಾನಾಮಿಕೆಗಳಿಂದ ಎಡದಿಂ ಬಲಕ್ಕೆರಡು ರೇಖೆಗಳ ಮಾಡಿ ಅವರ ನಡುವೆ ಅಂಗುಷ್ಠದಿಂದ ಬಲದಿಂದೆಡಕೆ ಒಂದು ರೇಖೆಯ ಮಾಡಿ ಈ ಪ್ರಕಾರದಿಂ ತ್ರಿಪುಂಡ್ರವನಾವಾತ ರಚಿಸುವನು ಆತನು ಪ್ರತ್ಯಕ್ಷ ಶಿವನೆ ಸರಿ. ಸಂದೇಹವಿಲ್ಲದೆಂಬುದರ್ಥಂ ॥೩೭॥ ಬಳಿಕ ತ್ರಿಪುಂಡ್ರಲಕ್ಷಣಮಂ ಪೇಳುತಿರ್ದಪಂ.

ಋಜು ಶ್ವೇತಮನುವ್ಯಾಪ್ತಂ ಸ್ನಿಗ್ಧಂ ಶ್ರೋತ್ರಪ್ರಮಾಣಕಮ್
ಏವಂ ಸಲ್ಲಕ್ಷಣೋಪೇತಂ ತ್ರಿಪುಂಡ್ರಂ ಸರ್ವಸಿದ್ಧಿದಮ್ ॥

ನೆಟ್ಟಗೆ ಬೆಳ್ಳಗೆ ಹರುಕಾಗದೆ ಒಟ್ಟಿತ್ತಾಗಿ ಕಿವಿಪರ್ಯಂತರವಾಗಿ ಈ ಪ್ರಕಾರಮಾದ ಸಲ್ಲಕ್ಷಣದಿಂದ ತ್ರಿಪುಂಡ್ರಂ ಸರ್ವಸಿದ್ಧಿಪ್ರದಮೆಂಬುದರ್ಥಂ ॥೩೮॥ ಬಳಿಕೀ ತ್ರಿಪುಂಡ್ರದ ಮಹತ್ವಮಂ ಪೇಳುತಿರ್ದಪಂ.

ಪ್ರಾತಃಕಾಲೇ ಚ ಮಧ್ಯಾಹ್ನೇ ಸಾಯಾಹ್ನೇ ಚ ತ್ರಿಪುಂಡ್ರಕಮ್
ಕದಾಚಿದ್ಭಸ್ಮನಾ ಕುರ್ಯಾತ್ಸರುದ್ರೋ ನಾತ್ರ ಸಂಶಯಃ ॥

ಏವಂವಿಧಂ ವಿಭೂತ್ಯಾ ಚ ಕುರುತೇ ಯಸ್ತ್ರಿಪುಂಡ್ರಕಮ್
ಸ ರೌದ್ರಧರ್ಮಸಂಯುಕ್ತಸ್ತ್ರಯೀಮಯ ಇತಿ ಶ್ರುತಿಃ ॥

ಸೂತ್ರದ್ವಯದಿಂ ಯಾವಾತ ಭಸ್ಮದಿಂದೀ ಪ್ರಕಾರಮಾದ ಯುಜಶ್ಶ್ವೇತಾದಿ ಸಲ್ಲಕ್ಷಣ ಯುಕ್ತಮಾದ ತ್ರಿಪುಂಡ್ರವಂ ಧರಿಸುತ್ತಿಹನು ಆತಂ ಶಿವಾಚಾರದೊಡನೆ ಕೂಡಿದಾತನಾಗಿ ವೇದತ್ರಯ ಸ್ವರೂಪನೆಂದು ಐದು ತ್ರಿಪುಂಡ್ರಂ ಧರಿಸಿ ಸ ವೇದತ್ರಯಧಾರೀ ಭವತಿ ಸ ಸಂತತಂ ತ್ರೇತಾಗ್ನಿರ್ಭವತಿ ಸಃ ಪುಷ್ಕರತ್ರಯಪುರುಷಃ ಸ್ನಾತೋ ಭವತಿ. ಯಸ್ತ್ರಿಪುಂಡ್ರಧಾರೀ ಪುರುಷಃ ಸ ರುದ್ರಸ್ಸ ಪರಮೇಷ್ಠೀಯ ಇದಂ ತ್ರಿಪುಂಡ್ರಂ ಧೃತವಂತಃ ಪುರುಷಂಪಶ್ಯಂತಿ ಸ ಸರ್ವೇಪಾಪೇಭ್ಯೋರು ವಿನಿರ್ಮುಕ್ತೋ ಭವತಿ ಸ ಸರ್ವವೇದಾಧ್ಯಯನ ಜನ್ಮಫಲ ವಾನ್ಭವತೀಯೆಂದು ವೃದ್ಧ ಜಾಬಾಲಾದಿ ಶ್ರುತಿ ಪ್ರಸಿದ್ಧಂ. ಅದು ಕಾರಣವಾಗಿ ಕಾಲತ್ರಯದಲ್ಲಿ ಒಂದು ಕಾಲದಲ್ಲಿಯಾದರೂ ತ್ರಿಪುಂಡ್ರಮಂ ದಾವಾತ ಧರಿಸುವನಾತಂ ಶಿವನೆ ಸರಿ ಸಂದೇಹವಿಲ್ಲವೆಂಬುದರ್ಥಂ ॥೪೦॥ ಬಳಿಕೀ ಪ್ರಕಾರಮಾದ ತ್ರಿಪುಂಡ್ರಂ ಯಾರಿಂದಂಗೀಕರಿಸಲ್ಪಟ್ಟಿತೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾಶ್ಶಕ್ರ ಪುರೋಗಮಾಃ
ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಮ್ ॥

ವಸಿಷ್ಠಾದ್ಯಾ ಮಹಾಭಾಗಾ ಮುನಯಶ್ಶ್ರುತಿಕೋವಿದಾಃ
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಮ್ ॥

ಬ್ರಹ್ಮ ವಿಷ್ಣು ರುದ್ರರು ಇಂದ್ರ ಮೊದಲಾದ ದೇವತೆಗಳು ವಸಿಷ್ಠ ಮೊದಲಾದ ಮಹಾಋಷಿಗಳು ವೇದ ಪುರಾಣಗತರಾದ ಮುನಿಗಳು ಭಸ್ಮದಿಂದ ಮಾಡಲ್ಪಟ್ಟ ತ್ರಿಪುಂಡ್ರಮಂ ಎಲ್ಲಾಗಳು ಧರಿಸೂದೆಂಬುದರ್ಥಂ ॥೪೨॥ ಬಳಿಕೀ ತ್ರಿಪುಂಡ್ರಂ ಎಲ್ಲಿ ವಿಧಿಸಿಯವೆ ಎಂಬಲ್ಲಿ ಪೇಳುತಿರ್ದಪಂ.

ಶೈವಾಗಮೇಷು ವೇದೇಷು ಪುರಾಣೇಷ್ವಖಿಲೇಷು ಚ
ಸ್ಮೃತೀತಿಹಾಸಕಲ್ಪೇಷು ವಿಹಿತಂ ಭಸ್ಮಪುಂಡ್ರಕಮ್ ॥
ಧಾರಣೀಯಂ ಸಮಸ್ತಾನಾಂ ಶೈವಾನಾಂ ಚ ವಿಶೇಷತಃ

ಶಿವಸಂಬಂಧಮಾದ ಆಗಮಂಗಳಲ್ಲಿ ವೇದಂಗಳಲ್ಲಿ ಪುರಾಣಂಗಳಲ್ಲಿ ಸಮಸ್ತ ಸ್ಮೃತಿಗಳಲ್ಲಿ ಭಾರತಾದಿ ಇತಿಹಾಸಂಗಳಲ್ಲಿ ಕಲ್ಪಸೂತ್ರಂಗಳಲ್ಲಿ ಸಮಸ್ತರಿಗೂ ಧರಿಸಲು ಯೋಗ್ಯವೆಂದು ಭಸ್ಮತ್ರಿಪುಂಡ್ರಂ ವಿಧಿಸಲ್ಪಟ್ಟಿತ್ತು. ಶೈವರಾದವರಿಗೆ ವಿಶೇಷವಾಗಿ ಪೇಳಲ್ಪಟ್ಟಿತ್ತೆಂಬುದರ್ಥಂ ॥೪೩॥ ಬಳಿಕೀ ತ್ರಿಪುಂಡ್ರಧಾರಣದಿಂ ಸಕಲ ಪಾಪಕ್ಷಯವೆಂದು ಪೇಳಿ ಭಸ್ಮಧಾರಣಸ್ಥಲಮಂ ಮುಗಿಸುತಿರ್ದಪಂ.

ನಾಸ್ತಿಕೋ ಭಿನ್ನಮರ್ಯಾದೋ ದುರಾಚಾರಪರಾಯಣಃ
ಭಸ್ಮತ್ರಿಪುಂಡ್ರಧಾರೀ ಚೇನ್ಮುಚ್ಯತೇ ಸರ್ವಕಿಲ್ಬಿಷೈಃ ॥

ವೇದವಿರುದ್ಧಾಚಾರ ಸಂಪನ್ನನಾಗಿ ಶರೀರೇಂದ್ರಿಯ ಬುದ್ಧಿ ವ್ಯತಿರಿಕ್ತಮಾಗಿ ಒಬ್ಬಾತನಿಲ್ಲವೆಂದು ಹೇಳುವ ಚಾರ್ವಾಕ ಮೊದಲಾದ ದುರಾಚಾರ ನಿಷ್ಠ ಜನವು ಭಸ್ಮತ್ರಿಪುಂಡ್ರವ ಧರಿಸಿದಂಥಾದಾದಡೆ ಸಕಲ ಪಾಪಂಗಳಿಂದಲೂ ಬಿಡುಗಡೆಯಂ ಪಡೆವುತ್ತಿಹುದೆಂಬುದರ್ಥಂ ॥೪೪॥

## ೭. ರುದ್ರಾಕ್ಷಧಾರಣಸ್ಥಲ

ರುದ್ರಾಕ್ಷಧಾರಣಸ್ಥಲಮಂ ನಿರೂಪಿಸುತಿರ್ದಪಂ

ಭಸ್ಮನಾ ವಿಹಿತಸ್ಥಾನಃ ತ್ರಿಪುಂಡ್ರಾಂಕಿತ ಮಸ್ತಕಃ
ಶಿವಾರ್ಚನಪರೋ ನಿತ್ಯಂ ರುದ್ರಾಕ್ಷಮಪಿ ಧಾರಯೇತ್ ॥

ಭಸ್ಮದಿಂದ ಮಾಡಲ್ಪಟ್ಟ ಸ್ನಾನವುಳ್ಳವನಾಗಿ ತ್ರಿಪುಂಡ್ರದಿಂದಂಕಿತಮಾದ ಲಲಾಟವುಳ್ಳವನಾಗಿ ತ್ರಿಕಾಲವು ಶಿವಪೂಜಾನಿಷ್ಠನಾದ ಭಕ್ತನೂ ರುದ್ರಾಕ್ಷಿಯನು ಧರಿಸೂದೆಂಬುದರ್ಥಂ ॥೪೫॥ ಬಳಿಕೀ ರುದ್ರಾಕ್ಷಿಧಾರಣದಿಂದೇನು ಫಲವೆಂಬಲ್ಲಿ ಪೇಳುತಿರ್ದಪಂ.

ರುದ್ರಾಕ್ಷಧಾರಣಾದೇವ ಮುಚ್ಯಂತೇ ಸರ್ವಪಾತಕೈಃ
ದುಷ್ಟಚಿತ್ತಾ ದುರಾಚಾರ ದುಷ್ಪ್ರಾಜ್ಞಾ ಅಪಿ ಮಾನವಾಃ ॥

ದುರ್ಮನಃಸ್ಥಿತಿಗಳಾಗಲಿ ದುರ್ಬುದ್ಧಿಗಳಾಗಲಿ ದುರಾಚಾರಿಗಳಾಗಲಿ ರುದ್ರಾಕ್ಷಿಧಾರಣದಿಂದ ಸಕಲ ಪಾಪಂಗಳಿಂದಲೂ ಬಿಡಲ್ಪಡುತ್ತಿಹದೆಂಬುದರ್ಥಂ ॥೪೬॥ ಬಳಿಕೀ ರುದ್ರಾಕ್ಷಿಗಳೆಂತು ಪುಟ್ಟಿದವು ಯಾವ ಕಾರಣದಿಂದೀ ಶಕ್ತಿಯುಂಟಾಯಿತ್ತೆಂಬಲ್ಲಿ ಪೇಳುತಿರ್ದಪಂ.

ಪುರಾ ತ್ರಿಪುರಸಂಹಾರೇ ತ್ರಿನೇತ್ರೋ ಜಗತಾಂ ಪತಿಃ
ಉದಪಶ್ಯತ್ಪುರಾಂ ಯೋಗಮುನ್ಮೀಲಿತವಿಲೋಚನಃ ॥

ನಿಪೇತುಸ್ತಸ್ಯ ನೇತ್ರೇಭ್ಯೋ ಬಹವೋ ಜಲಬಿಂದವಃ
ತೇಭ್ಯೋ ಜಾತಾ ಹಿ ರುದ್ರಾಕ್ಷಾಃ ರುದ್ರಾಕ್ಷಾ ಇತಿ ಕೀರ್ತಿತಾಃ ॥

ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ ॥

ಪೂರ್ವದಲ್ಲಿ ತ್ರಿಪುರಸಂಹಾರ ಪ್ರಸ್ತಾವದಲ್ಲಿ ಜಗನ್ಮಯನಾದ ಮುಕ್ಕಣ್ಣ ಶಿವನು ತ್ರಿಪುರಂಗಳ ಸಂಬಂಧವಂತೆ ತೆರೆಯಲ್ಪಟ್ಟ ಕಣ್ಣುಗಳುಳ್ಳವನಾಗಿ ಊರ್ಧ್ವದೃಷ್ಟಿಯಿಂ ನೋಡಿದನು. ಆ ನೋಡಮಂಥಾ ಶಿವನೇತ್ರಂಗಳತ್ತಣಿಂ ಬಹುಜಲಬಿಂದುಗಳು ಭೂಮಿಯ ಮೇಲೆ ಬಿದ್ದವು. ಆ ಜಲಬಿಂದುಗಳಿಂ ರುದ್ರಾಕ್ಷಿಗಳುಟ್ಟಿದವು. ಯಾವ ಕಾರಣದಿಂದ ರುದ್ರನೇತ್ರಂಗಳಿಂ ಪುಟ್ಟಿದವು. ಆ ಕಾರಣದಿಂ ರುದ್ರಾಕ್ಷಿಗಳೆಂದು ಪ್ರಸಿದ್ಧವಾಗಿ ಲೋಕಪಾವನವಾದವೆಂಬುದರ್ಥಂ. ಈ ಅರ್ಥದಲ್ಲಿ ಪುರಾ ತ್ರಿಪುರವಧಾಯೋನ್ಮೀಲಿತಾಕ್ಷೋಹಂ ತೇಭ್ಯೋ ಜಲಬಿಂದವೊ ಭೂಮೌ ಪತಿತಾಸ್ತೇ ರುದ್ರಾಕ್ಷಾಃ ಜಾತಾಃ ಸರ್ವಾನುಗ್ರಹಾರ್ಥಾಯ ತೇಷಾಂ ನಾಮೋಚ್ಚಾರಣೇನ ದಶಶತಗೋದಾನಫಲಂ ಭವತಿ. ದರ್ಶನಂ ಸ್ಪರ್ಶನಾಭ್ಯಾಂ ದ್ವಿಗುಣ ತ್ರಿಗುಣಂ ಫಲಂ ಭವತಿ ಅಥ ಊರ್ಧ್ವಂ ವಕ್ತುಂ ನ ಶಕ್ಯಮೆಂದು ಬೃಹಜ್ಜಾಬಾಲ ಶ್ರುತಿಯುಂಟಾಗಿ ರುವುದು ॥೪೮॥ ಈ ರೀತಿಯಿಂ ರುದ್ರನೇತ್ರಂಗಳಿಂ ಪುಟ್ಟಿದವಾದ ಕಾರಣದಿಂ ತತ್ಕಲಾ ಭೇದದಿಂದ ಮೂವತ್ತೆಂಟು ಪ್ರಕಾರವಾಗಿ ಉತ್ಪತ್ತಿಯುಳ್ಳವಾದವೆಂದು ಪೇಳುತಿರ್ದಪಂ.

ಅಷ್ಟತ್ರಿಂಶತ್ಪ್ರಭೇದೇನ ಭವಂತ್ಯುತ್ಪತ್ತಿಭೇದತಃ ॥

ಮೂವತ್ತೆಂಟು ಪ್ರಕಾರಮಾದ ಉತ್ಪತ್ತಿ ಭೇದವುಳ್ಳವಾಗುತ್ತಿಹವೆಂಬುದರ್ಥಂ ||೪೯|| ಬಳಿಕ ಯಾವ ನೇತ್ರದಿಂದಷ್ಟು ಭೇದಮುಂಟಾದವೆಂಬಲ್ಲಿ ಪೇಳುತಿರ್ದಪಂ.

ನೇತ್ರಾತ್ಸೂರ್ಯಾತ್ಮನಶ್ಶಂಭೋಃ ಕಪಿಲಾ ದ್ವಾದಶೋದಿತಾಃ
ಶ್ವೇತಾಃ ಷೋಡಶ ಸಂಜಾತಾಸ್ಸೋಮರೂಪಾದ್ವಿಲೋಚನಾತ್

ಕೃಷ್ಣಾ ದಶವಿಧಾ ಜಾತಾ ವಹ್ನಿರೂಪಾದ್ವಿಲೋಚನಾತ್
ಏವಮುತ್ಪತ್ತಿಭೇದೇನ ರುದ್ರಾಕ್ಷಾಃ ಬಹುಧಾ ಸ್ಮೃತಾಃ ||

ಶಿವನ ಸೂರ್ಯಾತ್ಮಕವಾದ ನೇತ್ರ ಕಪಿಲ್ಯಾದಿ ದ್ವಾದಶ ಕಲಾತ್ಮಕಮಪ್ಪುದರಿಂದ ನೇತ್ರದತ್ತಣಿಂ ಕಪಿಲವರ್ಣವುಳ್ಳ ದ್ವಾದಶಭೇದವುಳ್ಳ ರುದ್ರಾಕ್ಷಿಗಳುಟ್ಟಿದವು. ಸೋಮ ನೇತ್ರಮಮೃತಾದಿ ದ್ವಾದಶಕಲಾಮಯವಾದ ಕಾರಣದತ್ತಣಿಂ ಶ್ವೇತರೂಪಮಾದ ಷೋಡಶ ಭೇದವುಳ್ಳ ರುದ್ರಾಕ್ಷಿಗಳಾ ನೇತ್ರದಿಂ ಪುಟ್ಟಿದವು. ವಹ್ನಿನೇತ್ರವು ಧೂಮಾರ್ಚಿ ಮೊದಲಾದ ದಶಕಲಾ ರೂಪಮಾದ ಕಾರಣದತ್ತಣಿಂ ಕೃಷ್ಣವರ್ಣಮಾದ ದಶಭೇದವುಳ್ಳ ರುದ್ರಾಕ್ಷಿಗಳುಟ್ಟಿದವು. ಈ ಪ್ರಕಾರಮಾದ ಉತ್ಪತ್ತಿ ಭೇದದಿಂ ರುದ್ರಾಕ್ಷಿಗಳು ಬಹು ಪ್ರಕಾರವಾಗಿ ಪುಟ್ಟಿದವೆಂಬುದರ್ಥಂ ||೫೧|| ಬಳಿಕ ಧರಿಸಲ್ತಕ್ಕ ರುದ್ರಾಕ್ಷಿಗಳ ಸ್ವರೂಪಮಂ ಪೇಳುತಿರ್ದಪಂ.

ಅಚ್ಛಿದ್ರಂ ಕನಕಪ್ರಖ್ಯಮನನ್ಯಧೃತಮುತ್ತಮಮ್
ರುದ್ರಾಕ್ಷಂ ಧಾರಯೇತ್ಪ್ರಾಜ್ಞಃ ಶಿವಪೂಜಾಪರಾಯಣಃ ||

ಹುಳುಕೊರೆಯದೆ ಚಿನ್ನದ ವರೆಯುಂಟಾಗಿ ಮತ್ತೊಬ್ಬರು ಧರಿಸದ ರುದ್ರಾಕ್ಷಿಯುತ್ತಮವು. ಶಿವಪೂಜಾನಿಷ್ಠನಾದ ಪ್ರಾಜ್ಞಪುರುಷನ ಪ್ರಕಾರಮಾದ ರುದ್ರಾಕ್ಷಿಯ ನೋಡಿ ಧರಿಸೂದೆಂಬುದರ್ಥಂ ||೫೨|| ಬಳಿಕ ಯಾವ ಸ್ಥಾನದಲ್ಲಿ ಯಾವ ಪ್ರಕಾರದಿಂದ ಎಷ್ಟು ರುದ್ರಾಕ್ಷಿಗಳಂ ಧರಿಸಬೇಕೆಂಬಲ್ಲಿ ಪೇಳುತಿರ್ದಪಂ.

ಯಥಾಸ್ಥಾನಂ ಯಥಾವಕ್ತ್ರಂ ಯಥಾಯೋಗಂ ಯಥಾವಿಧಿಃ
ರುದ್ರಾಕ್ಷಧಾರಣಂ ವಕ್ಷ್ಯೇ ರುದ್ರಸಾಯುಜ್ಯ ಸಿದ್ಧಯೇ ||

ಸ್ಥಾನತಪ್ಪದೆ ಮುಖವ್ಯತ್ಯಾಸವಾಗದೆ ಕ್ರಮತಪ್ಪದೆ ವಿಧಿತಪ್ಪದೆ ರುದ್ರಸಾಯುಜ್ಯ ಸಿದ್ಧ್ಯರ್ಥವಾಗಿ ರುದ್ರಾಕ್ಷಧಾರಣಂ ಪೇಳ್ವೆನೆಂದು ಪ್ರತಿಜ್ಞೆಯಂ ಮಾಡಿ ಸ್ಥಾನವನೂ ಸಂಖ್ಯೆಯನೂ ಪೇಳುತಿರ್ದಪಂ. ||೫೩||

ಶಿಖಾಯಾಮೇಕಮೇಕಾಸ್ಯಂ ರುದ್ರಾಕ್ಷಂ ಧಾರಯೇದ್ಬುಧಃ
ದ್ವಿ ತ್ರಿ ದ್ವಾದಶವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್ ||

ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ ನಿತ್ಯಮೇಕಾದಶಾನನಾನ್
ದಶಸಪ್ತಪಂಚವಕ್ತ್ರಾನ್ ಷಟ್‌ಷಟ್ಕರ್ಣದ್ವಯೇ ವಹೇತ್ ||

ಷಡಷ್ಟನವದಾನಾನ್ಕಂಠೇ ದ್ವಾತ್ರಿಂಶದ್ಧಾರಯೇತ್ಸದಾ
ಪಂಚಾಶದ್ಧಾರಯೇದ್ವಿದ್ವಾನ್ ಚತುರ್ವಕ್ತ್ರಾಣಿ ವಕ್ಷಸಿ ||

ತ್ರಯೋದಶಮುಖಾನ್ಬಾಹ್ವೋರ್ಧರೇತ್ ಷೋಡಶ ಷೋಡಶ
ಪ್ರತ್ಯೇಕಂ ದ್ವಾದಶ ವಹೇನ್ನವಾಸ್ಯಾನ್ಮಣಿಬಂಧಯೋಃ ||

ಚತುರ್ದಶಮುಖಂ ಯಜ್ಞಸೂತ್ರಮಷ್ಟೋತ್ತರಂ ಶತಂ
ಧಾರಯೇತ್ಸರ್ವಕಾಲಂ ತು ರುದ್ರಾಕ್ಷಂ ಶಿವಪೂಜಕಃ ॥

ಶಿಖಿಯಲ್ಲಿ ಏಕಮುಖವುಳ್ಳದೊಂದು ರುದ್ರಾಕ್ಷಿಯಂ ಧರಿಸೂದು. ಶಿರಸ್ಸಿನಲ್ಲಿ ಮೂರು, ಆರು, ಹನ್ನೆರಡುಮುಖಂಗಳುಳ್ಳ ರುದ್ರಾಕ್ಷಿಗಳಂ ಮೂರ ಧರಿಸೂದು. ತಲೆಸುತ್ತಲೂ ಹನ್ನೊಂದುಮುಖವುಳ್ಳ ರುದ್ರಾಕ್ಷಿಗಳಂ ಮೂವತ್ತಾರ ಧರಿಸೂದು. ಕಿವಿಗಳೆರಡರಲ್ಲಿ ಹತ್ತುಮುಖದ ಎರಡು, ಸಪ್ತಮುಖದ ಎರಡು, ಪಂಚಮುಖದ ಎರಡು ಈ ಪ್ರಕಾರದಿಂ ಸಮನಾಗಿ ಹನ್ನೆರಡು ರುದ್ರಾಕ್ಷಿಗಳಂ ಧರಿಸೂದು. ಕೊರಳಲ್ಲಿ ಆರು ಮುಖದವು ಹದಿನಾರು ಎಂಟುಮುಖದವು ಹದಿನಾರು ಹೀಗೆ ಸಮವಾಗಿ ಮೂವತ್ತೆರಡು ರುದ್ರಾಕ್ಷಿಗಳಂ ಧರಿಸೂದು. ವಕ್ಷಸ್ಥಲದಲ್ಲಿ ನಾಲ್ಕುಮುಖವುಳ್ಳ ಐವತ್ತಾರು ರುದ್ರಾಕ್ಷಿಗಳಂ ಧರಿಸೂದು. ಬಾಹುಗಳಲ್ಲಿ ಹದಿಮೂರು ಮುಖವುಳ್ಳ ಹದಿನಾರು ಹದಿನಾರು ರುದ್ರಾಕ್ಷಿಯಂ ಧರಿಸೂದು. ಮುಂಗೈಗಳಲ್ಲಿ ಒಂಬತ್ತು ಮುಖಂಗಳುಳ್ಳ ಹನ್ನೆರಡು ಹನ್ನೆರಡು ರುದ್ರಾಕ್ಷಿಯಂ ಧರಿಸೂದು. ಹದಿನಾಲ್ಕು ಮುಖವುಳ್ಳ ನೂರೆಂಟು ರುದ್ರಾಕ್ಷಿಗಳಂ ಯಜ್ಞೋಪವೀತನಾಗಿ ಸದಾ ಶಿವಪೂಜಕನಾದಾತ ಧರಿಸೂದೂ. ಇಲ್ಲಿ ಶುದ್ಧ ಮಿಶ್ರಶುದ್ಧ ಭುವನಾಧೀಶ್ವರರಾದ ಶಿವಾಷ್ಟವಿದ್ಯೇಶ್ವರರ ಶತರುದ್ರ ಸಂಖ್ಯೆಯುಳ್ಳ ಯಜ್ಞೋಪವೀತ ಧಾರಣದಿಂದ ಭುವನಾಧ್ವ ಶುದ್ಧಿಯೂ ಪಂಚಾಶದ್ವರ್ಣ ಸಂಖ್ಯೆಯುಳ್ಳ ವಕ್ಷಮಾಲೆಯಿಂದ ವರ್ಣಾಧ್ವ ಶುದ್ಧಿ, ಕೊರಳು, ಭುಜದ್ವಯ, ಮಣಿಬಂಧದ್ವಯದಲ್ಲಿರುವ ಎಂಬತ್ತೆಂಟು ರುದ್ರಾಕ್ಷಿಗಳು ಪದಾಧ್ವಶುದ್ಧಿಯು, ಷಡಂಗ ಪಂಚಬ್ರಹ್ಮ ಪ್ರಣವ ಸಂಖ್ಯೆಯುಳ್ಳ ಮಸ್ತಕ ಮಾಲೆಯಿಂ ಕರ್ಣಾಭರಣದಿಂ ಮಂತ್ರಾಧ್ವ ಶುದ್ಧಿಯು ಮೂವತ್ತಾರು ಸಂಖ್ಯೆಯುಳ್ಳ ತತ್ತ್ವಾಧ್ವ ಶುದ್ಧಿಯು ಅಷ್ಟತ್ರಿಂಶತ್ಕಲೆಗಳಿಂ ಪೂರ್ಣಮಾದ ಸೋಮ ಸೂರ್ಯಾಗ್ನಿಮಯವಾದ ಶಿರೋರಂಧ್ರಮಾಲೆಯಿಂ ಕಲಾಧ್ವಶುದ್ಧಿಯುಂಟ ಪ್ಪುತ್ತಿಹುದು. ಈ ಪ್ರಕಾರಮಾದ ಷಡಧ್ವಕ್ಕೆ ಕಾರಣಮಾದ ಪರಶಿವ ಬ್ರಹ್ಮಮಯ ರೇಖಾಗತ್ಯೈಕ ರುದ್ರಾಕ್ಷಿಯಿಂ ಪರಶಿವಸ್ವರೂಪನೆ ಸರಿ. ಯೋ ರುದ್ರಾಕ್ಷಂ ಧತ್ತೇ ಸತ್ಯಂ ಪರಮಃ ಶಿವಃಸತ್ಯಂಪರಮಃ ಶಿವಃ ಹೀಗೆಂದು ಶ್ರುತಿ ಪೇಳುತಿರ್ದಪುದೆಂಬುದು ತಾತ್ಪರ್ಯಂ ॥೫೮॥ ಬಳಿಕೀ ಪ್ರಕಾರಮಾದ ರುದ್ರಾಕ್ಷಿ ಧಾರಣೆಯಿಂ ಸರ್ವಪಾಪಕ್ಷಯ ಎಂಬಲ್ಲಿ ಪೇಳುತಿರ್ದಪಂ.

ಏವಂ ರುದ್ರಾಕ್ಷಧಾರೀ ಯಸ್ಸರ್ವಕಾಲೇ ತು ವರ್ತತೇ
ತಸ್ಯ ಪಾಪಕಥಾ ನಾಸ್ತಿ ಮೂಢಸ್ಯಾಪಿ ನ ಸಂಶಯಃ ॥

ಈ ಪ್ರಕಾರದಿಂದೀ ಸ್ಥಾನಗಳಲ್ಲಿ ಸದಾ ರುದ್ರಾಕ್ಷಧಾರಿ ಯಾವನುಂಟು ಅವ ಮೂಢನಾದರೂ ಅವನಿಗೆ ಪಾಪದ ಸುದ್ದಿಯಿಲ್ಲ ಪಾಪವೆತ್ತಣದು ಸಂದೇಹವಿಲ್ಲ ವೆಂಬುದರ್ಥಂ ॥೫೯॥ ಇಲ್ಲಿ ಕ್ಷುದ್ರಪಾಪ ಸಂಬಂಧವಿಲ್ಲವೋ ಮಹಾಪಾಪ ಸಂಬಂಧವಿಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ಬ್ರಹ್ಮಹಾ ಮದ್ಯಪಾಯೀ ಚ ಸ್ವರ್ಣಹೃದ್ಗುರುತಲ್ಪಗಃ
ಮಾತೃಹಾ ಪಿತೃಹಾ ಚೈವ ಭ್ರೂಣಹಾ ಕೃತ ಘಾತಕಃ ॥
ರುದ್ರಾಕ್ಷಧಾರಣಾದೇವಾ ಮುಚ್ಯವತೇ ಸರ್ವಪಾತಕೈಃ

ಯಾವನಾನೊರ್ವನು ಬ್ರಹ್ಮಹತ್ಯೆಯ ಮಾಡಿದವನಾಗಲಿ, ಮದ್ಯಪಾನವ ಮಾಡಿದವನಾಗಲಿ, ಚಿನ್ನವ ಕದ್ದವನಾಗಲಿ, ಗುರುಪತ್ನಿಗಳುಪಿದವನಾಗಲಿ, ತಾಯಿ ತಂದೆಗಳಂ ಕೊಂದವನಾಗಲಿ, ಶಿಶುವ ಕೊರಳ ಮುರಿದವನಾಗಲಿ ಮಾಡಿದ ಉಪಕಾರವ ಮರೆತವನಾಗಲಿ ರುದ್ರಾಕ್ಷಿಯಂ ಧರಿಸಿದ ಮಾತ್ರದಿಂದ ಅವನು ಇಲ್ಲಿ ಪೇಳದೆ ಉಳಿದ ಸಕಲ ಪಾತಕಂಗಳಿಂದಲೂ ಬಿಡಲ್ಪಡುತ್ತಿಹನೆಂಬುದರ್ಥಂ ॥೬೦॥ ಬಳಿಕ ವಿಶೇಷಮಂ ಪೇಳುತಿರ್ದಪಂ.

ದರ್ಶನಾತ್ಸ್ಪರ್ಶನಾಚ್ಚೈವಾ ಸ್ಮರಣಾದಪಿ ಪೂಜನಾತ್
ರುದ್ರಾಕ್ಷಧಾರಣಾಲ್ಲೋಕೇ ಮುಚ್ಯಂತೇ ಪಾತಕೈರ್ಜನಾಃ ॥

ರುದ್ರಾಕ್ಷಿಯ ದರ್ಶನ ಸ್ಪರ್ಶನ ಸ್ಮರಣ ಪೂಜನ ಧಾರಣೆಗಳಿಂದಲೂ ಬಿಡಲ್ಪಡುತ್ತಿಹನೆಂಬುದರ್ಥಂ. ಲೋಕದಲ್ಲಿ ಜನರುಗಳು ಸಕಲ ಪಾಪಂಗಳಿಂದಲೂ ಬಿಡಲ್ಪಡುತ್ತಿಹರೆಂಬುದರ್ಥಂ ॥೬೧॥ ಇಲ್ಲಿ ಜನ ಶಬ್ದದಿಂದಾವ ಜನರಂ ಪೇಳುತಿರ್ದಪಂ.

ಬ್ರಾಹ್ಮಣೋವ್ಯಾಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋsಪಿ ವಾ
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ ॥

ಬ್ರಾಹ್ಮಣನಾಗಲಿ ಹೊಲೆಯನಾಗಲಿ ಮೂಢನಾಗಲಿ ಪಂಡಿತನಾಗಲಿ ರುದ್ರಾಕ್ಷಧಾರಣ ಮಾತ್ರದಿಂದ ಸಕಲ ಪಾತಕಂಗಳಿಂದಲೂ ಬಿಡಲ್ಪಡುತ್ತಿಹರೆಂಬುದರ್ಥಂ. ॥ ೬೨॥ ಬಳಿಕೀ ರುದ್ರಾಕ್ಷಧಾರಣದಿಂದ ಪಾಪಕ್ಷಯವೇ ಸರಿಯೋ ಪುಣ್ಯವೋ ಕಿಂಚಿದ್ದುಂಟಾ ಎಂಬಲ್ಲಿ ಪೇಳುತಿರ್ದಪಂ.

ಗವಾಂ ಕೋಟಿಪ್ರದಾನಸ್ಯ ಯತ್ಫಲಂ ಭುವಿ ಲಭ್ಯತೇ
ತತ್ಫಲಂ ಲಭತೇ ಮರ್ತ್ಯೋ ನಿತ್ಯಂ ರುದ್ರಾಕ್ಷಧಾರಣಾತ್ ॥

ಭೂಮಿಯಲ್ಲಿ ಕೋಟಿಗೋವುಗಳುನ್ನು ದಾನವ ಮಾಡಿದ ಯಾವ ಫಲವ ಮನುಷ್ಯ ಪಡೆವನು. ಆ ಫಲವ ನಿತ್ಯವು ರುದ್ರಾಕ್ಷಧಾರಣೆಯಿಂ ಪಡೆವನೆಂಬುದರ್ಥಂ ॥೬೩॥ ಬಳಿಕಿಷ್ಟು ಮಾತ್ರವೇ ಅಲ್ಲ ಮತ್ತು ಕ್ರಿಯಾಭೇದದಿಂದ ಚಮತ್ಕಾರಮುಂಟೆಂದು ಪೇಳುತಿರ್ದಪಂ.

ಮೃತ್ಯುಕಾಲೇ ತು ರುದ್ರಾಕ್ಷಂ ನಿಷ್ಪೀಡ್ಯ ಸಹವಾರಿಣಾ
ಯಃ ಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಸ ಗಚ್ಛತಿ ॥

ಯಾವನಾನೊರ್ವನು ಮರಣಕಾಲದಲ್ಲಿ ರುದ್ರಾಕ್ಷಿಯಂ ತೇದು ನೀರೊಳಗಡೆ ಕದಡಿ ಶಿವನಂ ಧ್ಯಾನಿಸುತ್ತ ಪಾನವ ಮಾಡಿದವನಾದರೆ ಅವನು ಶರ್ವಲೋಕವನೈದುವ ನೆಂಬುದರ್ಥಂ. ॥೬೪॥ ಬಳಿಕೀ ಪ್ರಕಾರವಂ ನಿಶ್ಚೈಸಿ ಭಸ್ಮರುದ್ರಾಕ್ಷಿಧಾರಿಗಳಾರುಂಟು ಅವರು ಸಾಕ್ಷಾತ್ ರುದ್ರರೇ ಸರಿ ಸಂದೇಹವಿಲ್ಲವೆಂದು ಪೇಳುತಿರ್ದಪಂ

ಭಸ್ಮೋದ್ಧೂಲಿತ ಸರ್ವಾಂಗಾಧೃತರುದ್ರಾಕ್ಷಮಾಲಿಕಾಃ
ಯೇ ಭವಂತಿ ಮಹಾತ್ಮಾನಾಸ್ತೇ ರುದ್ರಾಃ ನಾತ್ರಸಂಶಯಃ ॥

ಭಸ್ಮದಿಂದ ಲೇಪಿಸಲ್ಪಟ್ಟ ಸರ್ವ ಶರೀರವುಳ್ಳವರಾಗಿ ರುದ್ರಾಕ್ಷಿಧಾರಿಗಳಾದವರಾರುಂಟು ಅವರುಗಳು ಮಹಾತ್ಮರಾದ ಭೂರುದ್ರರೆನಿಸಿಕೊಂಬರು. ಈ ವಿಷಯದಲ್ಲಿ ಸಂದೇಹವಿಲ್ಲವೆಂಬುದರ್ಥಂ ॥೬೫॥ ಆಮೇಲೆ ಭಸ್ಮ ರುದ್ರಾಕ್ಷಧಾರಣೆಯಿಲ್ಲದ ದ್ವಿಜನಿಂ ಮಾಡಲ್ಪಟ್ಟ ನಿತ್ಯ ನೈಮಿತ್ತಿಕ ಕಾಮ್ಯಕರ್ಮವೆಲ್ಲ ವ್ಯರ್ಥವೆಂದು ಪೇಳುತಿರ್ದಪಂ.

ನಿತ್ಯಾನಿ ಕಾಮ್ಯಾನಿನಿಮಿತ್ತಜಾನಿ
ಕರ್ಮಾಣಿ ಸರ್ವಾಣಿ ಸದ್ಯಾಪಿ ಕುರ್ವನ್
ಯೋಽಭಸ್ಮರುದ್ರಾಕ್ಷಧರೋ ಯದಿ ಸ್ಯಾತ್
ದ್ವಿಜೋ ನ ತಸ್ಯಾಸ್ತಿ ಫಲೋಪಪತ್ತಿಃ ॥

ನಿತ್ಯ ನೈಮಿತ್ತಿಕ ಕಾಮ್ಯಕರ್ಮಂಗಳ ಮಾಡುವಂಥಾ ದ್ವಿಜನು ಎತ್ತಲಾನು ಭಸ್ಮ ರುದ್ರಾಕ್ಷಿಧಾರಣೆ ಇಲ್ಲದವನಾದರೆ ಅವಂಗೆ ತತ್ತದುಕ್ತ ಪ್ರಾಪ್ತಿ ಇಲ್ಲವೆಂಬುದರ್ಥಂ ॥೬೭॥ ಅದು ಕಾರಣದಿಂ ವರ್ಣಾಶ್ರಮಾಚಾರನಿಷ್ಠರಲ್ಲಿ ಭಸ್ಮ ರುದ್ರಾಕ್ಷಿಧಾರಿಯಾದವನೆ ಶ್ರೇಷ್ಠನೆಂದು ಪೇಳುತಿರ್ದಪಂ.

ಸರ್ವೇಷು ವರ್ಣಾಶ್ರಮಸಂಗತೇಷು
ನಿತ್ಯಂ ಸದಾಚಾರಪರಾಯಣೇಷು
ಶ್ರುತಿ ಸ್ಮೃತಿಭ್ಯಾಮಿಹ ಚೋದ್ಯಮಾನೋ
ವಿಭೂತಿ ರುದ್ರಾಕ್ಷಧರಸ್ಸಮಾನಃ ॥

ಬ್ರಾಹ್ಮಣಾದಿ ವರ್ಣ ಬ್ರಹ್ಮಚರ್ಯಾದ್ಯಾಶ್ರಮಯುಕ್ತರಾಗಿ ನಿತ್ಯವು ಸದಾಚಾರ ಸಂಪನ್ನರಾದ ಸತ್ಪುರುಷರ ವಿಷಯದಲ್ಲಿ ವಿಭೂತಿ ರುದ್ರಾಕ್ಷಧಾರಿಯಾದವನೊರ್ವನೆ ಶ್ರುತಿ ಸ್ಮೃತಿಗಳಿಂ ಕೊಂಡಾಡಲು ಯೋಗ್ಯನೆಂಬುದರ್ಥಂ ॥೬೮॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮಪುರಾಣಾದಿ ಸಾರಭೂತೇ ಶ್ರೀ ವೀರಶೈವ ಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಭಕ್ತಿಸ್ಥಲೇ ವಿಭೂತಿ ರುದ್ರಾಕ್ಷಧಾರಣ ಪ್ರಸಂಗೋನಾಮಃ ಸಪ್ತಮ ಪರಿಚ್ಛೇದಃ.

# ಅಷ್ಟಮಪರಿಚ್ಛೇದ

## ೮. ಪಂಚಾಕ್ಷರೀಜಪಸ್ಥಲ

ಬಳಿಕ ಶಿವಲಿಂಗ ಭಸ್ಮ ರುದ್ರಾಕ್ಷಧಾರಣಸಂಪನ್ನನು ಶಿವತತ್ತ್ವಜ್ಞಾನಾರ್ಥವಾಗಿ ಪಂಚಾಕ್ಷರಿಯಂ ಜಪಿಸುವುದೆಂದು ಪಂಚಾಕ್ಷರೀಸ್ಥಲಮಂ ಕುಂಭಸಂಭವಂಗೋಸ್ಕರ ಶ್ರೀ ರೇಣುಕಾಚಾರ್ಯರ್ಗಂ ನಿರೂಪಿಸುತಿರ್ದಪಂ.

ಧೃತಶ್ರೀಭೂತಿರುದ್ರಾಕ್ಷಃ ಪ್ರಯತೋ ಲಿಂಗಧಾರಕಃ
ಜಪೇತ್ಪಂಚಾಕ್ಷರೀವಿದ್ಯಾಂ ಶಿವತತ್ತ್ವಪ್ರಬೋಧಿನೀಮ್ ॥

ಧರಿಸಲ್ಪಟ್ಟ ಮಂಗಲಕರವಾದ ವಿಭೂತಿ ರುದ್ರಾಕ್ಷಿಗಳಿಂ ಪವಿತ್ರನಾದ ಲಿಂಗ ಧಾರಕನು ಪರಶಿವತತ್ತ್ವವ ಪ್ರಕಾಶ ಮಾಡುವಂಥಾ ನಮಃಶಿವಾಯ ಎಂದು ಶ್ರೀರುದ್ರ ಪಸಿದ್ಧವಾದ ಪಂಚಾಕ್ಷರೀವಿದ್ಯೆಯಂ ಮಾನಸೋಪಾಂಶುವಾಚಕರೂಪದಿಂ ಉಚ್ಚರಿಸುವುದೆಂಬುದರ್ಥಂ ॥೧॥

ಶಿವ ತತ್ತ್ವಾತ್ಪರಂ ನಾಸ್ತಿ ಯಥಾ ತತ್ತ್ವಾತ್ಪರಂ ಮಹತ್
ತಥಾ ಪಂಚಾಕ್ಷರೀಮಂತ್ರಾನ್ನಾಸ್ತಿಮಂತ್ರಾಂತ್ಪರಂ ಮಹತ್॥

ಇಲ್ಲಿ ಶಿವತತ್ತ್ವ ಪ್ರಕಾಶಕಮಾದ ಮಂತ್ರಗಳನೇಕವಿರಲಾಗಿ ಈ ಪಂಚಾಕ್ಷಾರೀಮಂತ್ರ ದತ್ತಣಿಂ ದೊಡ್ಡಿತ್ತಾದ ಮಂತ್ರಾಂತರವಿಲ್ಲವೆಂಬುದರ್ಥಂ. ಅದೆಂತೆಂದಡೆ ವಿದ್ಯಾಸುಶ್ರುತಿ ರುತ್ಕೃಷ್ಟಾಕ್ಷರ ರುದ್ರೈಕಾದಶಿಹಿ ಶ್ರುತೌ ತತ್ರೌ ಪಂಚಾಕ್ಷರೀ ತಸ್ಯಾಂ ಶಿವ ಇತ್ಯಕ್ಷರ ದ್ವಯಮ್ ಹೀಗೆಂಬ ಶಿವಪುರಾಣ ವಚನದಿಂ ಶಿವ ಎಂಬೆರಡಕ್ಕರಂ ಋಕ್ಸಾಮಸಂಗ್ರಹರೂಪಮಾದ ಅಕಾರ ಯಜುರ್ವೇದಸಂಗ್ರಹರೂಪಮಾದಯಿಕಾರ ಅಥರ್ವಣಸಂಗ್ರಹರೂಪಮಾದ ಶಿಕಾರ ವೇದಾಂಗಸಂಗ್ರಹರೂಪಮಾದ ವಕಾರದಿಂ ಶೋಭಿಸುತ್ತಿಹ ಕಾರಣದಿಂ ವೇದಸಾರ ಮಾದಂಥಾದು ಅಂಥಾ ಶಿವನಾಮಯುಕ್ತಮಾದ ಕಾರಣದಿಂದ ಪಂಚಾಕ್ಷರೀ ಮಂತ್ರವೇ ಶ್ರೇಷ್ಠವೆಂಬುದು ತಾತ್ಪರ್ಯಂ ॥೨॥ ಬಳಿಕೀ ಪ್ರಕಾರದಿಂ ಪಂಚಾಕ್ಷರೀಮಂತ್ರವು ಶಿವನು ತಿಳಿಯಲ್ಪಡಲಾಗಿ ಮಂತ್ರಾಂತರದಿಂದಲೂ ದೇವತಾಂತರದಿಂದಲೂ ಪ್ರಯೋಜನ ಮೆಂತೆಂದು ಪೇಳುತಿರ್ದಪಂ

ಜ್ಞಾತೇ ಪಂಚಾಕ್ಷಾರೀಮಂತ್ರೇ ಕಿಂ ವಾ ಮಂತ್ರಾಂತರೈಃ ಫಲಮ್
ಜ್ಞಾತೇ ಶಿವೇ ಜಗನ್ಮೂಲೇ ಕಿಂ ಫಲಂ ದೇವತಾಂತರೈಃ ॥

ಧ್ಯಾಯಿತೇಶಾನಾಂ ಪದ್ಯಾಯಿತವ್ಯಂ ಸರ್ವಯಿದಂ ಬ್ರಹ್ಮ ವಿಷ್ಣು ರುದ್ರೇಂದ್ರಾಸ್ತಿ ಸಂಪ್ರಸೂಯಂಬ ಶ್ರುತಿಯಿಂ ಶಿವನು ಬ್ರಹ್ಮ ವಿಷ್ಣು ಮೊದಲಾದ ಸಕಲಜಗನ್ಮೂಲ ಕಾರಣವೆಂದು ತಿಳಿಯಲಾಗಿ ದೇವತಾಂತರದಿಂದಲೂ ಈ ಪ್ರಕಾರದಿಂ ಪಂಚಾಕ್ಷರೀಮಂತ್ರಂ ವೇದ ವೇದಾಗಮಸಾರವೆಂದು ತಿಳಿಯಲಾಗಿ ಮಂತ್ರಾಂತರದಿಂದಲೂ ಏನು ಫಲ ಬ್ರಹ್ಮ ವಿಷ್ಣ್ವಾದಿಗಳೆಲ್ಲ ಜನನ ಮರಣ ಪರಿಪೀಡಿತರಾದುದರಿಂದೇನು ಫಲವೆಂಬುದರ್ಥಂ ॥೩॥ ಬಳಿಕ ಸಪ್ತಕೋಟಿ ಮಹಾಮಂತ್ರಂಗಳಲಿ ಒಂದೂ ಇದಕೆ ಸಮಾನವಾದ ಮಂತ್ರವಿಲ್ಲ ವೆಂಬಲ್ಲಿ ಪೇಳುತಿರ್ದಪಂ.

ಸಪ್ತ ಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್
ಬ್ರಹ್ಮವಿಷ್ಣ್ವಾದಿದೇವೇಷು ಯಥಾ ಶಂಭುರ್ಮಹತ್ತರಃ ॥

ಸರ್ವಮಾನ್ಪರಿತ್ಯಜ್ಯ ಹೇಯವಿಷ್ಣ್ವಾದಿಕಾನ್ಸುರಾನ್ ಶಿವ ಏವ ಸದಾ ಧ್ಯೇಯ ಸರ್ವಂ ಸಂಸಾರ ನಾಶನಮ್ ಹೀಗೆಂಬ ಪಿಪ್ಪಲಾದಶ್ರುತಿಯಿಂ ಅಜಾತಯಿತ್ಯೇವ ಕಶ್ಚಿದ್ಭಿತುಃ ಪ್ರಪದ್ಯತೇರುದ್ರತ್ಯೇದಯತ್ತೇದಕ್ಷಿಣಂ ಮುಖಂ ತೇ ನಮಾಪಾಹಿ ನಿತ್ಯಂ ಹೀಗೆಂಬ ಶ್ವೇತಾಶ್ವತರ ಶ್ರುತಿಯಿಂದಜಾತನಾಗಿ ಮುಮುಕ್ಷುಪಾಸ್ಯನಾದುದರಿಂ ಶಿವ ಹೇಗೆ ಬ್ರಹ್ಮ ವಿಷ್ಣ್ವಾದಿ ದೇವರುಗಳಲ್ಲಿ ಶ್ರೇಷ್ಠನೊ ಹಾಗೆ ಸಪ್ತಕೋಟಿಮಹಾಮಂತ್ರಂಗಳಲ್ಲಿ ವೇದವೇದಾಂಗಸಾರ ಮಪ್ಪುದರಿಂ ಪಂಚಾಕ್ಷಾರೀಮಂತ್ರವೆ ಶ್ರೇಷ್ಠವೆಂಬುದರ್ಥಂ ॥೪॥ ಇಲ್ಲಿ ಬ್ರಹ್ಮ ವಿಷ್ಣ್ವಾದಿ ಸಕಲ ಜಗನ್ಮೂಲವಾದುದರಿಂ ಶಿವನೆ ಶ್ರೇಷ್ಠನಾಗಲಿ ಪಂಚಾಕ್ಷರಿಯೆಂತು ಸರ್ವೋತ್ಕೃಷ್ಟ ಮೆಂಬಲ್ಲಿ ಪೇಳುತಿರ್ದಪಂ.

ಅಶೇಷಜಗತಾಂ ಹೇತುಃ ಪರಮಾತ್ಮಾ ಮಹೇಶ್ವರಃ
ತಸ್ಯ ವಾಚಕಮಂತ್ರೋಽಯಂ ಸರ್ವಮಂತ್ರೈಕ ಕಾರಣಮ್॥

ಪರಮಾತ್ಮನಾದ ಶಿವನು ಸಕಲ ವಿಶ್ವಕ್ಕೂ ಹೇಗೆ ಕಾರಣನು ಹಾಗೆ ಆ ಶಿವನ ಹೇಳುವಂಥಾ ಈ ಪಂಚಾಕ್ಷರೀಮಂತ್ರವು ಸಕಲ ಮಂತ್ರಕ್ಕೂ ಕಾರಣವೆಂಬುದರ್ಥಂ ॥೫॥ ಬಳಿಕದೆಂತೆನೆ ಕೇಳುತಿರ್ದಪಂ.

ತಸ್ಯಾಭಿಧಾನಮಂತ್ರೋಽಯಮಭಿದೇಯಯಶ್ಚ ಸ ಸ್ಮೃತಃ
ಅಭಿಧಾನಾಭಿಧೇಯತ್ವಾನ್ಮಂತ್ರಾತ್ಸಿದ್ಧಃ ಪರಃ ಶಿವಃ॥

ಈ ಮಂತ್ರ ಶಿವನ ಹೆಸರ ಮಂತ್ರವು. ಆ ಶಿವನೀ ಮಂತ್ರದಿಂ ಪೇಳಿಸಿಕೊಂಬ ವನೆಂದು ನೆನೆಯಲ್ತಕ್ಕನು ಆ ಶಿವನ ಪೆಸರ ಹೇಳುವ ಕಾರಣದತ್ತಣಿಂ ಈ ಮಂತ್ರದಿಂದ ಪರಶಿವನು ಪ್ರಕಾಶಿಸಿದನು ಮಂತ್ರಂಗಳು ಯಜನೀಯದೇವತಾ ಪ್ರಕಾಶಕಂಗಳೆಂಬುದು ಶಾಸ್ತ್ರಸಿದ್ಧವು. ಈ ಮಂತ್ರವಿಲ್ಲದಿದ್ದರೆ ಶಿವನ ಸ್ಫುರಣೆಯಿಲ್ಲದೆ ಹೋಹದು. ಈ ಮಂತ್ರದಿಂ ಶಿವನು ಪ್ರಕಾಶಿಸಲಾಗಿ ಸಕಲ ತತ್ತ್ವೋಪಾದನಕಾರಣನಾದ ಶಿವನಿಗೆ ತದ್ವಾಚಕಮಾದ ಪಂಚಾಶದ್ವರ್ಣಮಯತ್ವವೂ ಯುಕ್ತಯೆಂಬುದರಿಂದ ಶಿವನು ಸಕಲ ಮಂತ್ರಂಗಳಿಗೂ ಮೂಲ ಕಾರಣನು ಅಂಥಾ ಶಿವನ ಪ್ರಕಾಶವ ಮಾಡುವುದರಿಂದಲೂ ತಾನು ಪಂಚಾಶದ್ವರ್ಣ ಸಂಗ್ರಹಾತ್ಮಕನಾದ ಅಕಾರ ವಕಾರ ರೂಪವರ್ಣತ್ರಯವಿಶಿಷ್ಟಮಾಗಿ ಮೂಲ ಕಾರಣಮಾದ ಯಿಕಾರ ರೂಪೇಚ್ಛಾ ಶಕ್ತಿಯಿಂ ಕೂಡಿ ಕೊಂಡಿರುವ ಸಂಬಂಧ ಸಕಲ ಮಂತ್ರಕಾರಣವೆಂಬುದರ್ಥಂ ॥೬॥ ಹಾಗಾದರೀ ಮಂತ್ರಕ್ಕೆ ಎರಡಕ್ಕರವೆ ಯುಕ್ತವು ಪಂಚಾಕ್ಷರವೇಕೆಂಬಲ್ಲಿ ಪೇಳುತಿರ್ದಪಂ.

ನಮಶ್ಶಬ್ದಂವದೇತ್ಪೂರ್ವಂ ಶಿವಾಯೇತಿ ತತಃ ಪರಮ್
ಮಂತ್ರಃ ಪಂಚಾಕ್ಷರೋಹ್ಯೇಪಸ್ಸರ್ವಶ್ರುತಿ ಶಿರೋಗತಃ ॥

ಮುಂಚೆ ನಮಃ ಶಬ್ದ ಹೇಳೋದು ಆ ಬಳಿಕ ಶಿವಾಯ ಎಂದು ಉಚ್ಚರಿಸೋದು. ಈ ಪ್ರಕಾರದಿಂ ಪಂಚಾಕ್ಷರೀಮಂತ್ರವು ಸಕಲಶ್ರುತಿಮಸ್ತಕದಲ್ಲಿಯೂ ಪ್ರಕಾಶಿಸುತ್ತಿಹು

ದೆಂಬುದರ್ಥಂ॥ ಇಲ್ಲಿ ನಮಸ್ಕಾರದಿಂ ಜೀವತ್ವ, ಶಿವ ಶಬ್ದದಿಂ ಶಿವತ್ವ ಆಯಾ ಎಂಬುದರಿಂದ ಯ ಗತೌ ಎಂಬ ಧಾತುಗತಿಯಿಂದ ಶಿವ ಜೀವರಿಗೈಕ್ಯವು ಪ್ರಕಾಶಿಸುತ್ತಿಹುದು. ಶಿವ ಜೀವೈಕ್ಯ ಬೋಧನಾರ್ಥವಾಗಿ ಪಂಚಾಕ್ಷರಂಗಳು ಪ್ರಯೋಗಿಸಲ್ಪಟ್ಟಿತೆಂಬುದು ತಾತ್ಪರ್ಯ ॥೭॥ ಬಳಿಕ ಚಿದಾನಂದದ ಘಟ್ಟಿಯಾದ ಪರಬ್ರಹ್ಮಕ್ಕೆ ಶಿವನೆಂಬ ಪೆಸರೆಂತು ಬಂತೆಂಬಲ್ಲಿ ಪೇಳುತಿರ್ದಪಂ.

ಆದಿತಃ ಪರಿಶುದ್ಧತ್ವಾನ್ಮಲತ್ರಯವಿಯೋಗತಃ
ಶಿವ ಇತ್ಯುಚ್ಯತೇ ಶಂಭುಶ್ಚಿದಾನಂದಘನಃ ಪ್ರಭುಃ॥

ಚಿದಾನಂದದ ಘಟ್ಟಿಯಾದ ಸ್ವತಂತ್ರನಾದ ಸುಖಭೋಕ್ತೃವಾಗಿ ಸುಖಪ್ರದನಾದ ಪರಮಾತ್ಮನು ಯಾವ ಕಾಲದಲ್ಲಿಯೂ ಆಣವಾದಿ ಮಲತ್ರಯವಿಲ್ಲದೆ ನಿರ್ಮಲವಾದ ಕಾರಣದಿಂ ವಶ ಕಾಂತೌ ಎಂಬ ಧಾತುಗತಿಯಿಂ ಸ್ವಚ್ಛ ಪ್ರಕಾಶರೂಪನಾದುದರಿಂ ಶಿವನೆಂದು ಪೇಳಲ್ಪಡುವನೆಂಬುದರ್ಥಂ ॥೮॥ ಬಳಿಕ ಸಕಲ ಮಂಗಲವಾಸ ಭೂಮಿಯಪ್ಪುದರಿಂ ಬ್ರಹ್ಮವು ಶಿವ ಶಬ್ದದಿಂ ಪೇಳಿಸಿಕೊಂಬುದೆಂದು ನುಡಿವುತಿರ್ದಪಂ.

ಆಸ್ಪದತ್ವಾದಶೇಷಾಣಾಂ ಮಂಗಲಾನಾಂ ವಿಶೇಷತಃ
ಶಿವಶಬ್ದಾಭಿಧೇಯೋ ಹಿ ದೇವ ದೇವಸ್ತ್ರಯಂಬಕಃ॥

ಸೃಷ್ಟ್ಯಾದಿ ಕೃತ್ಯಂಗಳಿಗೆ ಕಾರಣವಾದ ಮುಕ್ಕಣ್ಣುಳ್ಳ ಆ ಕಾರಣದಿಂದಲೆ ಬ್ರಹ್ಮಾದಿ ದೇವರಿಗೂ ದೇವನಾದ ಪರಮಾತ್ಮನು ವಿಷ್ಣ್ವಾದಿಗಳಿಂ ವಿಶೇಷವಾಗಿ ಸಕಲಮಂಗಳ ಗಳಿಗೂ ಆಶ್ರಯನಾದ ಕಾರಣದಿಂ ಶಿವ ಶಬ್ದದಿಂದ ಪೇಳಲು ಯೋಗ್ಯನೆಂಬುದರ್ಥಂ॥೯॥ ಬಳಿಕ ಪರಬ್ರಹ್ಮವಾಚಕಮಾದ ಅನೇಕ ನಾಮಂಗಳಿರಲಾಗಿ ಶಿವ ಶಬ್ದದಿಂದಲೆ ಏನು ಕಾರಣಂ ಬ್ರಹ್ಮ ಪೇಳಿಸಿಕೊಂಬಲ್ಲಿ ಪೇಳುತಿರ್ದಪಂ

ಶಿವ ಇತ್ಯಕ್ಷರದ್ವಂದ್ವಂ ಪರಬ್ರಹ್ಮಪ್ರಕಾಶಕಮ್
ಮುಖ್ಯವೃತ್ತ್ಯಾ ತದನ್ಯೇಷಾಂ ಶಬ್ದಾನಾಂ ಗೌಣವೃತ್ತಯಃ ॥

ಶಿವ ಎಂಬೆರಡಕ್ಕರಂ ಮುಖ್ಯವೃತ್ತಿಯಿಂ ಪರಬ್ರಹ್ಮಪ್ರಕಾಶವು ಆ ಶಿವ ಶಬ್ದವೆ ಸ್ವವ್ಯತಿರಿಕ್ತಮಾದ ಭವಾದಿ ಶಬ್ದಗಳಿಗೆ ನಿಂ ಅಹೋ ಮಾಣವಕಃ ಎಂಬಂತೆ ಗುಣಯೋಗದಿಂ ಪರಬ್ರಹ್ಮ ಪ್ರಕಾಶಕತ್ವವನುಂಟು ಮಾಡುವುದಾಗಿರುವದೆಂಬುದರ್ಥಂ ॥೧೦॥ ಬಳಿಕಿಲ್ಲಿ ಪೇಳಿದರ್ಥಮಂ ಮುಗಿಸುತಿರ್ದಪಂ.

ತಸ್ಮಾನ್ಮುಖ್ಯತರಂ ನಾಮ ಶಿವ ಇತ್ಯಕ್ಷರದ್ವಯಮ್
ಸಚ್ಚಿದಾನಂದ ರೂಪಸ್ಯ ಶಂಭೋರಮಿತ ತೇಜಸಃ ॥

ಏತನ್ನಾಮಾವಲಂಬೇವ ಮಂತ್ರಃ ಪಂಚಾಕ್ಷರಸ್ಮೃತಃ

ಮಹಾನೆಂಬುದು ಶೇಷಂ ಅದು ಕಾರಣವಾಗಿ ಶಿವ ಎಂಬೆರಡಕ್ಕರಂ ಸಚ್ಚಿದಾನಂದ ಸ್ವರೂಪನಾದ ಅಪರಿಮಿತ ಪ್ರಕಾಶರೂಪನಾದ ಪರಮಾತ್ಮನಿಗೆ ಮುಖ್ಯವಾದ ನಾಮವು, ಈ ಎರಡಕ್ಕರವಾದವನು ಆಶ್ರಯಿಸಿದ ಕಾರಣದಿಂ ಪಂಚಾಕ್ಷರಮಂತ್ರ ದೊಡ್ಡದೆಂದು

ನೆನೆಯಲ್ಪಟ್ಟಿತ್ತೆಂಬುದರ್ಥಂ ॥೧೧॥ ಬಳಿಕೀ ಮಂತ್ರದಿಂದೇನ ಮಾಡಬೇಕು ಇದರಿಂದೇನು ಫಲವೆಂಬಲ್ಲಿ ದೃಷ್ಟಾಂತಪೂರ್ವಕನಾಗಿ ಪೇಳುತಿರ್ದಪಂ

ಯಸ್ಮಾದತಸ್ಸದಾಜಪ್ಯೋ ಮೋಕ್ಷಾಕಾಂಕ್ಷಿಭಿರಾದರಾತ್ ॥

ಯಥ್ಯಾನಾದಿರ್ಮಹಾದೇವಸ್ಸಿದ್ಧ ಸಂಸಾರಮೋಚಕಃ
ತಥಾ ಪಂಚಾಕ್ಷರೋಮಂತ್ರಸ್ಸಂಸಾರಕ್ಷಯಕಾರಕಃ ॥

ಶಿವನಾಮಯುಕ್ತಮಾದ ಯಾವ ಕಾರಣದಿಂ ಪಂಚಾಕ್ಷರಮಂತ್ರ ದೊಡ್ಡದು. ಆ ಕಾರಣದಿಂ ಮೋಕ್ಷವ ಬಯಸುವ ಪುರುಷರಿಂ ಪ್ರೀತಿಯಿಂದೆಲ್ಲಾಗಳು ಜಪಿಸಲು ಯೋಗ್ಯಮಾದಂಥಾದು. ಅದೆಂತೆಂದಡೆ ಅನಾದಿಯಾದ ಪರಶಿವನು ಶಿವಏವ ಸದಾಧ್ಯೇಯ ಸರ್ವ ಸಂಸಾರ ನಾಶನಃ ಹೀಗೆಂಬ ಶ್ರುತಿಯಿಂ ಸಂಸಾರಪಾಶಮೋಚಕನು ಹಾಗೆ ಪಂಚಾಕ್ಷರ ಮಂತ್ರವು ಅಶೇಷ ಪಾಪ ವಿಚ್ಛೇತ್ರೈಕ ಶಿವ ಇತ್ಯಕ್ಷರದ್ವಯಮ್ ಅಲಂ ನಮಃ ಸ್ತ್ರಿಯಾ ಯುಕ್ತೋ ಮುಕ್ತಯೇ ಕಲ್ಪಿತಾ ಮನುಃ ಹೀಗೆಂಬ ಬ್ರಹ್ಮೋತ್ತರಖಂಡವಚನದಿಂ ಸಕಲ ಸಂಸಾರ ಪಾಶಕ್ಷಯಕಾರಕವೆಂದು ಪ್ರಸಿದ್ಧಮೆಂಬುದರ್ಥಂ ॥೧೩॥ ಹಾಗಾದದೀಮಂತ್ರಕ್ಕೆ ಶಿವನಂತೆ ವಿಶ್ವಕಾರಣತ್ವವುಂಟೋ ಎಂಬಲ್ಲಿ ಪೇಳುತಿರ್ದಪಂ.

ಪಂಚಭೂತಾನಿ ಸರ್ವಾಣಿ ಪಂಚತನ್ಮಾತ್ರಕಾನಿ ಚ
ಜ್ಞಾನೇಂದ್ರಿಯಾಣಿ ಪಂಚ್ಯಾಪಿ ಪಂಚಕರ್ಮೇಂದ್ರಿಯಾಣಿ ಚ ॥

ಪಂಚಬ್ರಹ್ಮಾಣಿ ಪಂಚಾಪಿ ಕೃತ್ಯಾನಿ ಸಹಕಾರಿಣ್ಯೈಃ
ಬೋಧ್ಯಾನಿ ಪಂಚಭಿರ್ವರ್ಣೈಃ ಪಂಚಾಕ್ಷರಮಹಾಮನೋಃ ॥

ಪೃಥ್ವ್ಯಾದಿ ಪಂಚಭೂತಂಗಳು ಗಂಧಾದಿ ಪಂಚತನ್ಮಾತ್ರೆಗಳು ಜ್ಞಾನಶಕ್ತಿ ಮಯವಾದ ಘ್ರಾಣಾದಿ ಪಂಚಜ್ಞಾನೇಂದ್ರಿಯಗಳು ಕ್ರಿಯಾಶಕ್ತಿಸ್ವರೂಪಮಾದ ಉಪಸ್ಥಾದಿ ಪಂಚ ಕರ್ಮೇಂದ್ರಿಯಗಳು ಪಂಚಬ್ರಹ್ಮ ಪಂಚಸಾದಾಖ್ಯಗಳೆಂಬ ಪರ್ಯಾಯನಾಮವುಳ್ಳ ಆಚಾರಾದಿ ಪಂಚಲಿಂಗಂಗಳು ಪಂಚವಿಧವಾದ ಸಮಸ್ತವು ಪಂಚಾಕ್ಷರಮಂತ್ರದ ಪಂಚ ವರ್ಣಗಳಿಂ ಪ್ರಕಾಶಿಸಲ್ತಕ್ಕವೆಂಬುದರ್ಥಂ ॥೧೫॥ ಬಳಿಕಿಲ್ಲಿ ಬೆಳಕಿನಿಂ ಘಟಾದಿಗಳಂತೆ ಪ್ರಕಾಶಿಸವ್ರೋ ಸ್ವರ್ಣದಿಂ ಕುಂಡಲದಂತೆ ಪ್ರಕಾಶಿಸವ್ರೋ ಎಂಬಲ್ಲಿ ಪೇಳುತಿರ್ದಪಂ.

ಪಂಚಧಾ ಪಂಚಧಾ ಯಾನಿ ಪ್ರಸಿದ್ಧಾನಿ ವಿಶೇಷತಃ
ತಾನಿ ಸರ್ವಾಣಿ ವಸ್ತೂನಿ ಪಂಚಾಕ್ಷರಮಯಾನಿ ಹಿ ॥

ಪಂಚಶಕ್ತಿ ಪಂಚಾಂಗುಲಿ ವಚನಾದಗಮನನ ನಿಸರ್ಗಾನಂದರೂಪ ಕರ್ಮೇಂದ್ರಿಯಾರ್ಥ ಮನೋಬುದ್ಧ್ಯಹಂಕಾರ ಪ್ರಕೃತಿ ಪುರುಷ ಮೊದಲಾಗಿ ಪಂಚಪ್ರಕಾರದಿಂ ವಿಶೇಷವಾಗಿ ಪ್ರಸಿದ್ಧವಾದವಾವುದುಂಟು ಅವೆಲ್ಲವೂ ಸ್ವರ್ಣಕುಂಡಲ ನ್ಯಾಯದಿಂ ಪಂಚಾಕ್ಷರ ಕಾರ್ಯಂಗಳೂ ಆಗಿ ಪಂಚಾಕ್ಷರಂಗಳಿಂ ತಿಳಿಹಲೂ ತಕ್ಕವೆಂಬುದು ಹಿ ಶಬ್ದದಿಂ ಸೂಚಿಸಲ್ಪಟ್ಟಿತು ವರ್ಣಂಗಳು ಶಕ್ತಿರೂಪಮಾದುದರಿಂ ವಿಶ್ವಮೆಲ್ಲಂ ತತ್ತುರ್ಯ್ಯಮೆಂಬುದು ಪ್ರಸಿದ್ಧಮೆಂಬುದರ್ಥಂ ॥೧೬॥ ಹಾಗಾದಡೆ ಪಂಚಕೃತ್ಯಾಂತರ್ಗತಮಾದದು ಮೋಕ್ಷಂ ಪ್ರಣವಾಭ್ಯಾಸ ಸಾಧ್ಯವು. ಆ ಪ್ರಣವವೀ ಪಂಚಾಕ್ಷರಿಯಲ್ಲಿ ಕಾಣದ ಕಾರಣದೆಂತು ಘಟಿಸೂದೆಂಬಲ್ಲಿ ಪೇಳುತಿರ್ದಪಂ.

ಓಂಕಾರಪೂರ್ವೋ ಮಂತ್ರೋಽಯಂ ಪಂಚಾಕ್ಷರಮಯಃ ಪರಃ
ಶೈವಾಗಮೇಷು ವೇದೇಷು ಷಡಕ್ಷರ ಇತಿ ಸ್ಮೃತಃ॥

ಹೇಳಿದ ಪ್ರಕಾರದಿಂ ಸರ್ವೋತ್ಕೃಷ್ಟಮಾದ ಪಂಚಾಕ್ಷರಮಾದ ಮಂತ್ರವು ಶ್ರೀರುದ್ರದಲ್ಲಿ ನಮಸ್ಕಾರಾಯ ಎಂಬುದರಿಂದಲೂ ಈಶಾನಮಂತ್ರದ ತುದಿಯಲ್ಲಿ ಮೇ ಅಸ್ತು ಸದಾಶಿವೋಮೆಂದು ಕೇಳುವುದರಿಂದಲೂ ಓಂಕಾರಾತ್ಮತಾ ತಯಾ ಭಾತಿ ಶಾಂತ್ಯತೀತಃ ಪರಃ ಶಿವಃ ಹೀಗೆಂಬ ಶಿವಾಗಮೋಕ್ತಿಯಿಂದಲೂ ಶಿವೋಽಹಂ ಪ್ರಣವಃ ಪ್ರೋಕ್ತ ಪ್ರಣವೋ ವಾ ಶಿವಸ್ಮೃತಃ ವಾಚ್ಯವಾಚಕಯೋರ್ಭೇದೋನಾತ್ಯಂತಂ ವಿದ್ಯತೇ ಕ್ವಚಿತ್ ಹೀಗೆಂಬ ಶಿವಪುರಾಣ ವಚನದಿಂದಲೂ ಶಿವ ಪ್ರಣವಗಳಿಗಭೇದಮಾದ ಕಾರಣ ಓಂಕಾರ ಮೊದಲುಳ್ಳದಾಗಿ ಷಡಕ್ಷರವೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ॥೧೭॥ ಬಳಿಕ ನಕಾರಸ್ತಾರಕಾ ರೂಪಂ ಮಕಾರೋ ದಂಡ ಹುಚ್ಯತೆ ಶಿಕಾರಃ ಕುಂಡಲಾಕಾರೋ ವಕಾರಶ್ಚಾರ್ಧಚಂದ್ರಕಃ ಯಕಾರೋ ದರ್ಪಣಾಕಾರಃ ಓಂಕಾರಃ ಪಂಚವರ್ಣರಾಟ್ ಹೀಗೆಂಬ ಶಿವಾಗಮ ವಚನದಿಂ ಪಂಚಾಕ್ಷರಮಯವಾದ ಕಲ್ಪವೃಕ್ಷಕ್ಕೆ ಬೀಜರೂಪವಾದ ಮಹತ್ವಮಂ ಮೂರು ಸೂತ್ರದಿಂ ನಿರೂಪಿಸುತಿರ್ದಪಂ

ಮಂತ್ರಸ್ಯಾಸ್ಯಾದಿಭೂತೇನ ಪ್ರಣವೇನ ಮಹಾಮನೋಃ
ಪ್ರಬೋಧ್ಯತೇ ಮಹಾದೇವಃ ಕೇವಲಶ್ಚಿತ್ಸುಖಾತ್ಮಕಃ ॥

ಮಹಾಮಂತ್ರಮಾದ ಪಂಚಾಕ್ಷರ ಮಂತ್ರಕ್ಕೆ ಆದಿಯಾದ ಪ್ರಣವದಿಂದ ಬಚ್ಚಬರಿಯ ಸಚ್ಚಿದಾನಂದಾತ್ಮಕನಾದ ಶಿವನು ತಿಳಿಯಲ್ಪಡುತ್ತಿಹನೆಂಬುದರ್ಥಂ ಬಳಿಕ ಶಿವಂ ಪ್ರಣವದಿಂದಲ್ಲದೆ ಮತ್ತೇತರಿಂದಲೂ ಪ್ರಕಾಶಿಸುವುದಿಲ್ಲವೋ ಏನು ಎಂಬಲ್ಲಿ ಪೇಳುತಿರ್ದಪಂ॥೧೮॥

ಪ್ರಣವೇನೈಕವರ್ಣೇನ ಪರಬ್ರಹ್ಮ ಪ್ರಕಾಶ್ಯತೇ
ಅದ್ವಿತೀಯಂ ಪರಾನಂದಂ ಶಿವಾಖ್ಯಂ ನಿಷ್ಪ್ರಪಂಚಕಮ್ ॥

ಎರಡಿಲ್ಲದ ಕಾರಣದಿಂ ಪ್ರಪಂಚರಹಿತವಾದ ಸಚ್ಚಿದಾನಂದಸ್ವರೂಪಮಾದ ಶಿವನೆಂಬ ಪೆಸರುಳ್ಳ ಪರಬ್ರಹ್ಮವು ಪ್ರಣವವೆಂಬೊಂದಕ್ಕರದಿಂದಲೆ ಪ್ರಕಾಶಿಸುತ್ತಿಹುದು. ಅದೆಂತೆಂದಡೆ ಆ ಪ್ರಣವವು ಸಚ್ಚಿದಾನಂದರೂಪಮಾದ ಅಕಾರೋಕಾರ ಮಕಾರಮಯ ವಾಗಿರುವುದರಿಂದೆಂಬುದು ತಾತ್ಪರ್ಯಂ ಬಳಿಕೀ ಪಂಚಾಕ್ಷರಂಗಳೆ ಆಚಾರ್ಯ ಗುರು ಶಿವಾಚಾರ ಪ್ರಸಾದ ಲಿಂಗ ಬೀಜಾಕ್ಷರಂಗಳು ಪ್ರಣವವೆ ಮಹಾಲಿಂಗ ಬೀಜವು. ಈ ಪ್ರಕಾರದಿಂ ಬೀಜವೃಕ್ಷ ನ್ಯಾಯದಿಂದಿರುವ ಪಂಚಾಕ್ಷರವೆ ಷಟ್‌ಸ್ಥಲಬೀಜಮೆಂಬುದು ರಹಸ್ಯಂ ॥೧೯॥ ಬಳಿಕೀ ಲಿಂಗಾಂಗ ಷಡ್‌ಸ್ಥಲಯೋಗಾಕಾರಮಾದ ಪ್ರಣವಕ್ಕೆ ಸಚ್ಚಿದಾನಂದ ರೂಪ ಪರಬ್ರಹ್ಮ ಪ್ರಕಾಶಕತ್ವಮಾಗಲಿ ನಿಷ್ಪ್ರಪಂಚ ಬ್ರಹ್ಮ ಪ್ರತಿಪಾದಕತ್ವಮೆಂತೆಂಬಲ್ಲಿ ಅಜಪಾ ಗಾಯಿತ್ರಿ ಮಂತ್ರಯೋಗಪೂರ್ವಕನಾಗಿ ಆ ಸ್ವರೂಪಮಂ ಪ್ರತಿಪಾದಿಸುತಿರ್ದಪಂ.

ಪರಮಾತ್ಮಮನುರ್ಜ್ಞೇಯಸ್ಸೋಽಹಂರೂಪಸ್ಸನಾತನಃ
ಜ್ಞಾಯತೇ ಹಂಸಯೋರ್ಲೋಪಾದೋಮಿತ್ಯೇಕಾಕ್ಷರೋ ಮನುಃ॥

ಪರಮಾತ್ಮ ಮಂತ್ರವು ಸೋಹಮೆಂಬ ಭೂತ ವರ್ತಮಾನ ಕಾಲಾವಗಾಹಿಯಾದ ಪ್ರತ್ಯಭಿಜ್ಞಾರೂಪಮಾದಂಥಾದೆಂದು ಯೋऽಸಾವಾಸೌ ಪುರುಷಃ ಸೋಹಮೆಂಬ ಶ್ರುತಿಗುರು ಸ್ವಾನುಭಾವಗಳಿಂ ತಿಳಿಯಲ್ಪಕ್ಕದು ಆ ಸೋಹ ಮಂತ್ರವು ಭೇದ ಪುಟ್ಟಿದುದಾದ ಕಾರಣದಿಂ ಕೇವಲ ಕುಂಭಕದಿಂದ ಸಕಾರ ಹಕಾರಗಳಿಗೆ ಲೋಪವಾಗಲಾಗಿ ನಿತ್ಯಮಾದ ಓಂ ಎಂಬ ಏಕಾಕ್ಷರಮಂತ್ರವೆ ಪ್ರಕಾಶಿಸುತ್ತಿಹುದು. ಅಲ್ಲಿ ಸಕಾರಂ ಚಂದ್ರಬೀಜಮಪ್ಪುದರಿಂ ವೇದ್ಯಮಯವು ಹಕಾರಂ ಸೂರ್ಯಬೀಜಮಪ್ಪುದರಿಂ ವೇದ್ಯ ಪ್ರಕಾಶಾತ್ಮಕ ವೃತ್ತಿಜ್ಞಾನಮಯವು ಅವೆರಡು ಉಕ್ತಮಾಗಲಾಗಿ ವೇದ್ಯವೇದನೆ ಶೂನ್ಯಮಾದ ಕೇವಲ ವೇದಕಮಾತ್ರ ಪ್ರಕಾಶಮಾದು ದೋಂಕಾರವೆಂದು ಪೇಳಲ್ಪಟ್ಟಿತು. ಇದರಿಂ ಶ್ರುತ್ಯಾಗಮಪ್ರಸಿದ್ಧಮಾದ ಶಿವ ಜೀವೈಕ್ಯವೆಂಬಲ್ಲಿ ಲಿಂಗಾಂಗಸಾಮರಸ್ಯ ರೂಪ ಪರಮುಕ್ತಿ ಸೂಚಿಸಲ್ಪಟ್ಟಿತೆಂದನುಸಂಧಾನಿಸೂದೆಂಬುದರ್ಥ ತಾತ್ಪರ್ಯಂ ॥೨೦॥ ಹೀಗಿರುತ್ತಿರಲಾಗಿ ಪ್ರಣವದಿಂ ನಿಷ್ಕಲಜ್ಞಾನವೂ ಪಂಚಾಕ್ಷರಿಯಿಂ ಸಕಲಜ್ಞಾನವೂ ಪ್ರಣವಸಮೇತ ಪಂಚಾಕ್ಷರಿಯಿಂ ಸಕಲ ನಿಷ್ಕಲಜ್ಞಾನವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಪ್ರಣವೇನೈಕಮಂತ್ರೇಣ ಬೋಧ್ಯತೇ ನಿಷ್ಕಲಶ್ಶಿವಃ
ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ ॥

ನಿಷ್ಕಲಸ್ಸಂವಿದಾಕಾರಸ್ಸಕಲೌ ವಿಶ್ವಮೂರ್ತಿಕಃ
ಉಭಯಾತ್ಮಾಶ್ಶಿವೋ ಮಂತ್ರೇ ಷಡಕ್ಷರಮಯೇ ಸ್ಥಿತಃ ॥

ಇಲ್ಲಿ ಬಚ್ಚ ಬರಿಯ ಸಚ್ಚಿದಾನಂದ ಬ್ರಹ್ಮವೆ ನಿಷ್ಕಲವೆನಿಸಿಕೊಂಬುದು ಪ್ರಪಂಚ ವಿಶೇಷಮಾದುದೆ ಸಕಲವೆನಿಸಿಕೊಂಬುದು ಆ ನಿಷ್ಕಲಬ್ರಹ್ಮವು ಪ್ರಣವಮಂತ್ರದಿಂದಲೆ ಪ್ರಕಾಶಿಸಲ್ಪಡುತ್ತಿಹುದು. ಪಂಚಾಕ್ಷರಮಂತ್ರದಿಂದ ಸರ್ವಸರ್ವಂ ಖಲ್ವಿದಾ ಬ್ರಹ್ಮ ಎಂಬ ಶ್ರುತಿಪ್ರಮಾಣದಿಂ ಭೂಮ್ಯಾದಿ ಪಂಚಬ್ರಹ್ಮವಿಶಿಷ್ಟನಾದ ಶಿವಂ ಪ್ರಕಾಶಿಸಲ್ಪಡುವನು. ಸಕಲನಿಷ್ಕಲನಾದ ಶಿವಂ ಪ್ರಣವಸಮೇತಮಾದ ಷಡಕ್ಷರಮಂತ್ರದಲ್ಲಿ ಪ್ರಕಾಶಿಸುತ್ತಿಹ ನೆಂಬುದರ್ಥಂ. ಇಲ್ಲಿ ಅಕಾರಂ ಬ್ರಹ್ಮಣೇ ನಾಭೌ ಉಕಾರಂ ವಿಷ್ಣು ಹೃದಯೇ ಮಕಾರಂ ರುದ್ರಂ ಭ್ರೂಮಧ್ಯೇ ಓಂಕಾರಂ ಸರ್ವೇಶ್ವರಂ ದ್ವಾದಶಾಂತೇಯೆಂಬ ಶ್ರುತಿಯಿಂ ಪ್ರಣವವು ಪ್ರಪಂಚಬ್ರಹ್ಮ ಪ್ರಕಾಶವೆ ಸರಿ. ಹಾಗಾದರೂ ವೈದ್ಯಸಂಸ್ಕಾರಾತ್ಮಕಮಾದ ಬಿಂದುಸ್ಪಂದ ಘಟಿತಮಾಗಿರುವುದರಿಂದ ಸೂಕ್ಷ್ಮ ಪ್ರಪಂಚಮಯವಾದ ಕಾರಣ ನಿಷ್ಕಲ ಬ್ರಹ್ಮಪ್ರಕಾಶ ವೆಂಬ ವ್ಯವಹರಣೆಯುಂಟಾಗಿರುವುದೆಂಬುದು ತಾತ್ಪರ್ಯಂ ॥೨೨॥ ಬಳಿಕೀ ಪಂಚಾಕ್ಷರಮಂತ್ರಕ್ಕೆ ಪರ್ಯಾಯನಾಮಂಗಳಂ ಪೇಳುತಿರ್ದಪಂ.

ಮೂಲಂವಿದ್ಯಾಶಿವಶ್ಶೈವಂ ಸೂತ್ರಂ ಪಂಚಾಕ್ಷರಸ್ತಥಾ
ಏತಾನಿ ನಾಮಧೇಯಾನಿ ಕೀರ್ತಿತಾನಿ ಮಹಾಮನೋಃ॥

ಪಂಚಾಕ್ಷರಮಂತ್ರಕ್ಕೆ ಮೂಲವೆಂದು ವಿದ್ಯೆಯೆಂದು ಶಿವನೆಂದು ಸೂತ್ರವೆಂದು ಪಂಚಾಕ್ಷರವೆಂದು ಈ ನಾಮಧೇಯಂಗಳು ವರ್ಣಸಂಖ್ಯೆಯಿಂ ಪೇಳಲ್ಪಟ್ಟವೆಂಬುದರ್ಥಂ ॥೨೩॥ ಬಳಿಕೀ ಪ್ರಕಾರದಿಂ ಪ್ರಣವಯುಕ್ತಮಾಗಿ ಷಡಕ್ಷರಿಯಾದ ಪಂಚಾಕ್ಷರಿಯಂ ಜಪಿಸೂದೆಂದು ನುಡಿವುತಿರ್ದಪಂ.

ಪಂಚಾಕ್ಷರೀಮಿಮಾಂ ವಿದ್ಯಾಂ ಪ್ರಣವೇನ ಷಡಕ್ಷರೀಮ್
ಜಪೇತ್ಸಮಾಹಿತೋ ಭೂತ್ವಾ ಶಿವಪೂಜಾಪರಾಯಣಃ ॥

ಶಿವಪೂಜಾನಿಷ್ಠನಾದವನು ಏಕಾಗ್ರಚಿತ್ತನಾಗಿ ಪ್ರಣವದೊಡನೆ ಕೂಡಿ ಷಡಕ್ಷರಿಯಾದ ಈ ಪಂಚಕ್ಷರೀವಿದ್ಯೆಯಂ ಜಪಿಸೂದೆಂಬುದರ್ಥಂ ॥ ೨೪॥ ಬಳಿಕದೆಂತು ಜಪಿಸಲ್ತಕ್ಕದೆಂಬಲ್ಲಿ ಪೇಳುತಿರ್ದಪಂ

ಪ್ರಾಣಾಯಾಮ ತ್ರಯಂ ಕೃತ್ವಾ ಪ್ರಾಙ್ಮುಖೋದಙ್ಮುಖೋಽಪಿ ವಾ
ಚಿಂತಯನ್ ಹೃದಯಾಂಭೋಜೇ ದೇವದೇವಂ ತ್ರಿಯಂಬಕಮ್ ॥

ಸರ್ವಾಲಂಕಾರಸಂಯುಕ್ತಂ ಸಾಂಬಂ ಚಂದ್ರಾರ್ಧಶೇಖರಮ್
ಜಪೇದೇತಾಂ ಮಹಾವಿದ್ಯಾಂ ಶಿವರೂಪಾಮನನ್ಯಧೀಃ ॥

ಶುದ್ಧ ಸ್ಥಲದಲ್ಲಿ ಮೃಗಾಜಿನ ಚಿತ್ರಕಂಬಳ ಮೊದಲಾದ ಆಸನದಲ್ಲಿ ಪದ್ಮಾಸನದಿಂ ಪೂರ್ವ ಮುಂತಾಗಿ ಉತ್ತರ ಮುಂತಾಗಿಯಾದರೂ ಕುಳ್ಳಿರ್ದು ಭಸ್ಮ ರುದ್ರಾಕ್ಷಿಗಳಿಂದ ಅಲಂಕೃತನಾಗಿ ಅಸಂಪೂಜ್ಯ ಶಿವಂ ಸ್ತೋತ್ರಜಪಾತ್ಫಲಮುದೀರಿತಮ್ ಸಂಪೂಜ್ಯ ಚ ಶಿವಂ ಪಶ್ಚಾತ್ಫಲಂ ವಕ್ತುಂ ನ ಶಕ್ಯತೇ॥ ಹೀಗೆಂಬ ಶಿವಾಗಮವಚನದಿಂ ಶಿವಪೂಜೆಯಂ ಮಾಡಿ ಮರಳಿ ಪ್ರಾಣಾಯಾಮವಂ ಮಾಡಿ ಷಡಂಗನ್ಯಾಸಂಗೈದು ದಿಗ್ಬಂಧಮಂ ಬಲಿದು ಹೃದಯಕಮಲದಲ್ಲಿ ತ್ರಿನೇತ್ರನಾದ ಮಂಡಲತ್ರಯ ಗುಣತ್ರಯ ವೇದತ್ರಯಾದಿ ತ್ರಿವಿಧ ವಸ್ತುಕಾರಣೀಭೂತನಾದ ದೇವದೇವನಾದ ಭವಾನೀಸಮೇತನಾದ ಸರ್ವಾಲಂಕಾರ ಸಂಯುಕ್ತನಾದ ಚಂದ್ರಾರ್ಧಶೇಖರನಾದ ಶಿವನಂ ಬೇರೊಂದು ಚಿಂತೆಯಿಲ್ಲದೆ ಚಿಂತಿಸುತ್ತಾ ಮಂಗಲಾತ್ಮಕಮಾದ ಈ ಮಹಾವಿದ್ಯೆಯಂ ಸಹಸ್ರಂ ವಾ ತದರ್ಧಂ ವಾ ತದರ್ಧಂ ವಾ ಶತಾಷ್ಟಕಮ್ ಅಷ್ಟೋತ್ತರ ಸಹಸ್ರಂ ವಾ ಜಪಂ ಕುರ್ಯಾದತಂದ್ರಧೀಃ ಹೀಗೆಂಬ ಶಿವಾಗಮವಚನೋಕ್ತ ಪ್ರಕಾರದೊಳಗೆ ಒಂದು ಪ್ರಕಾರವನಾಶ್ರಯಿಸಿ ಗುರೂಪದಿಷ್ಟ ಮಾರ್ಗದಿಂ ಮಾತೃಕಾಸಂಘಟಿತಮಾಗಿರ್ಪ ಗರ್ಭಜಪವಂ ಮಾಡೂದೆಂಬುದರ್ಥಂ ॥೨೬॥ ಬಳಿಕ ಜಪಭೇದಮಂ ತೋರಿಸುತಿರ್ದಪಂ.

ಜಪಸ್ತು ತ್ರಿವಿಧಃ ಪ್ರೋಕ್ತೋ ವಾಚಕೋಪಾಂಶು ಮಾನಸಃ
ಶ್ರೂಯತೇ ಯಸ್ತು ಪಾರ್ಶ್ವಸ್ಥೈರ್ಯಥಾವರ್ಣಸಮನ್ವಯಃ ॥
ವಾಚಿಕಸ್ಸ ತು ವಿಜ್ಞೇಯಸ್ಸರ್ವಪಾಪಪ್ರಭಂಜನಃ
ಈಶಾತ್ಸ್ಪೃಷ್ಟಾಧರಪುಟಂ ಯೋ ಮಂದಮಭಿಧೀಯತೇ ॥
ಪಾರ್ಶ್ವಸ್ಥೈರಶ್ರುತಸ್ಸೋಽಯಮುಪಾಂಶುಃ ಪರಿಕೀರ್ತಿತಃ
ಅಸ್ಪೃಷ್ಟಾಧರಮಸ್ಪಂದಿಜಿಹ್ವಾಗ್ರಂ ಯೋಽಂತರಾತ್ಮನಾ ॥
ಭಾವ್ಯತೇ ವರ್ಣರೂಪೇಣ ಸ ಮಾನಸ ಇತಿ ಸ್ಮೃತಃ ॥

ಮಂತ್ರೋಚ್ಚಾರರೂಪಮಾದ ಜಪಂ ವಾಚಿಕಮೆಂದು ಉಪಾಂಶುವೆಂದು ಮಾನಸವೆಂದು ಮೂವಿಧವಾಗಿರುವುದು, ಅಲ್ಲಿ ಯಾವುದಾನೊಂದು ಮಂತ್ರೋಚ್ಚಾರಣೆಯು ವರ್ಣಸಂತಾನವ ಮೀರದೆ ಸಮೀಪವರ್ತಿಗಳಿಂ ಕೇಳಲ್ಪಡುತ್ತಿಹುದು. ಆ ಮಂತ್ರೋಚ್ಚಾರವು ಮನೋವಚನಕಾಯಜನ್ಯವಾದ ಸಕಲ ಪಾಪಕ್ಷಯಕರವೆಂದು ತಿಳಿಯಲು

ಯೋಗ್ಯಮಾದಂಥಾದು. ಯಾವುದಾನೊಂದು ಮಂತ್ರೋಚ್ಚಾರವು ಒಂದಿಷ್ಟು ಅಧರಪುಟವ ಮುಟ್ಟಿ ಪಾರ್ಶ್ವಸ್ಥರಿಂ ಕೇಳದಂಥಾಗಿ ಮೆಲ್ಲನೆ ಮಾಡಲ್ಪಡುತ್ತಿಹುದು. ಆ ಈ ಉಚ್ಚಾರಮಂ ಉಪಾಂಶು ಜಪವೆಂದು ಪೇಳಲ್ಪಡುವುದು. ಯಾವುದಾನೊಂದು ಮಂತ್ರೋಚ್ಚಾರಂ ತುಟಿಯ ಮುಟ್ಟದೆ ಮಿಸುಕದಿದ್ದ ಜಿಹ್ವಾಗ್ರವುಳ್ಳದು ಹೇಗಹದು ಹಾಗೆ ಮಂತ್ರಾಕ್ಷರಸಂಯುಕ್ತಮಾದ ಚಿತ್ತದಿಂದ ಭಾವಿಸಲ್ಪಡುತ್ತಿಹುದು. ಆ ಮಂತ್ರೋಚ್ಚಾರಂ ಮಾನಸಜಪವೆಂದು ನೆನೆಯಲ್ತಕ್ಕದೆಂಬುದರ್ಥಂ ॥ ೨೯॥ ಬಳಿಕೀ ಜಪಯಜ್ಞದ ಮಹತ್ವಮಂ ಪೇಳುತಿರ್ದಪಂ.

ಯಾವಂತಃ ಕರ್ಮಯಜ್ಞಾದ್ಯಾ ವ್ರತದಾನತಪಾಂಸಿ ಚ
ಸರ್ವೇ ತೇ ಜಪಯಜ್ಞಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

ಜ್ಯೋತಿಷ್ಟೋಮ ಮೊದಲಾದ ಎಷ್ಟು ಕರ್ಮಯಜ್ಞಗಳುಂಟು. ಕೃಚ್ಛ್ರ ಚಾಂದ್ರಾಯಣ ಮೊದಲಾದ ವ್ರತ, ಕನ್ಯಾದಾನ ಮೊದಲಾದ ದಾನ, ಅತ್ಯುಗ್ರ ತಪಸ್ಸುಗಳು ಯಾವವುಂಟು ಅವಷ್ಟು ಜಪಯಜ್ಞದ ಹದಿನಾರು ಭಾಗದೊಳಗೊಂದು ಭಾಗವ ಕುರಿತು ಸಮಾನವಾಗ ಲಾರದೆಂಬುದರ್ಥಂ ॥ ೩೦॥ ಬಳಿಕೀ ಪೇಳಿದ ತ್ರಿವಿಧ ಜಪಗಳಿಗೂ ಮಾಹಾತ್ಮ್ಯಮೊಂದೆ ಬಗೆಯೊ ಏನೆಂಬಲ್ಲಿ ಪೇಳುತಿರ್ದಪಂ.

ಮಾಹಾತ್ಮ್ಯಂ ವಾಚಿಕಸ್ಯೈತಜ್ಜಪಯಜ್ಞಸ್ಯ ಕೀರ್ತಿತಮ್
ತಸ್ಮಾಚ್ಛತಗುಣೋಪಾಂಶುಃ ಸಹಸ್ರೋಮಾನಸಃ ಸ್ಮೃತಃ ॥

ವಾಚಿಕಜಪಯಜ್ಞಕ್ಕೆ ಯಾವುದಾನೊಂದು ಮಹತ್ವಮಂ ಪೇಳಲ್ಪಟ್ಟಿತ್ತು ಅದಕಿಂದೋ ಪಾಂಶುಜಪಂ ನೂರುಮಡಿ ಮಹತ್ತ್ವವುಳ್ಳುದು ಮಾನಸಜಪಮುಪಾಂಶು ಜಪಕ್ಕಿಂದಾ ಸಹಸ್ರಮಡಿ ಮಹತ್ತ್ವವುಳ್ಳದೆಂದು ನೆನೆಯಲ್ತಕ್ಕದೆಂಬುದರ್ಥಂ ॥೩೧॥ ಬಳಿಕೀ ಜಪಂಗಳೊಳಗೆ ಯಾ ಜಪಂ ಮಾಡಲ್ತಕ್ಕಮೆಂಬಲ್ಲಿ ಮೋಕ್ಷಾರ್ಥಿಗಳಿಂ ಮಾನಸಜಪ ಮಾಡಲ್ಪಕ್ಕದೆಂದು ಪೇಳುತಿರ್ದಪಂ.

ವಾಚಿಕಾತ್ತದುಪಾಂಶೋಶ್ಚ ಜಪಾದಸ್ಯ ಮಹಾಮನೋಃ
ಮಾನಸೋ ಹಿ ಜಪಃ ಶ್ರೇಷ್ಠೋ ಘೋರಸಂಸಾರನಾಶಕಃ ॥

ಈ ಮಹಾಮಂತ್ರದಿಂದ ವಾಚಿಕಜಪದಿಂದಲೂ ಉಪಾಂಶುಜಪದಿಂದಲೂ ಮಾನಸಜಪ ಮಾಡಲ್ತಕ್ಕದೆಂದು ಪೇಳುತಿರ್ದಪಂ ಕ್ರೂರವಾದ ಸಂಸಾರಮಂ ಕೆಡಿಸುವಂಥಾದಾಗಿ ಶ್ರೇಷ್ಠವಾಗಿರುವುದೆಂಬುದರ್ಥಂ ॥೩೨॥ ಹಾಗಾದಡೆ ಎರಡು ಜಪಂಗಳಿಗೆ ಏನುಗತಿಯೆಂಬಲ್ಲಿ ಪೇಳುತಿರ್ದಪಂ.

ಏತೇಷ್ವೇತೇನ ವಿಧಿನಾ ಯಥಾಭಾಗಂ ಯಥಾಕ್ರಮಮ್
ಜಪೇತ್ಪಂಚಾಕ್ಷರೀಮೇತಾಂ ವಿದ್ಯಾಂ ಪಾಶವಿಮುಕ್ತಯೇ ॥

ಈ ವಾಚಿಕಾದಿ ಜಪಂಗಳ ವಿಷಯದಲ್ಲಿ ಈ ಹೇಳಿದ ಪ್ರಕಾರದಿಂದ ಕ್ರಮತಪ್ಪದೆ ಕೂಡಿದ ಹಾಗೆ ಈ ಪಂಚಾಕ್ಷರೀವಿದ್ಯೆಯಂ ಮಲಮಾಯಾದಿ ಪಾಶನಿವೃತ್ಯರ್ಥಮಾಗಿ ಜಪಿಸೂದೆಂಬುದರ್ಥಂ ॥೩೩॥ ಬಳಿಕೀ ಮಂತ್ರದಿಂದಲೆ ಶಿವಲಿಂಗಪೂಜೆಯಂ ಮಾಡೂದೆಂದು ನುಡಿವುತಿರ್ದಪಂ.

ಅನೇನಮೂಲಮಂತ್ರೇಣ ಶಿವಲಿಂಗಂ ಪ್ರಪೂಜಯೇತ್
ನಿತ್ಯಂ ನಿಯಮಸಂಪನ್ನಃ ಪ್ರಯತಾತ್ಮಾ ಶಿವಾತ್ಮಕಃ ॥

ಯಮ ನಿಯಮ ಸಂಪನ್ನನಾಗಿ ಶುದ್ಧಾಂತಃಕರಣನಾಗಿ ನಾ ರುದ್ರೋರುದ್ರ ಮರ್ಚಯೇತ್ ಹೀಗೆಂಬ ಶ್ರುತಿಯಿಂ ಶಿವೋಹಂಭಾವ ಉಳ್ಳವನಾಗಿ ಈ ಪ್ರಣವ ಪಂಚಾಕ್ಷರೀ ಮಂತ್ರದಿಂದ ಶಿವಲಿಂಗಮಂ ಕಾಲತ್ರಯದಲ್ಲಿಯೂ ವಿಭವದಿಂ ಪೂಜಿಸೂದೆಂಬುದರ್ಥಂ ॥೩೪॥ ಬಳಿಕ ವ್ರತ ನಿಯಮಾದಿಗಳಿಂ ಸದ್ಗತಿಯುಂಟಪ್ಪುದರಿಂ ಶಿವಪೂಜೆಯನೆ ಮಾಡಬೇಕೆಂಬಲ್ಲಿ ಪೇಳುತಿರ್ದಪಂ.

ಭಕ್ತ್ಯಾ ಪಂಚಾಕ್ಷರೇಣೈವ ಯಶ್ಶಿವಂ ಸಕೃದರ್ಚಯೇತ್
ಸೋಽಪಿ ಗಚ್ಛೇಚ್ಛಿವಸ್ಥಾನಂ ಮಂತ್ರಸ್ಯಾಸ್ಯೈವ ಗೌರವಾತ್ ॥

ಯಾವಾತಂ ಭಕ್ತಿಯೊಡನೆ ಕೂಡಿದಾತನಾಗಿ ಪಂಚಾಕ್ಷರಮಂತ್ರದಿಂ ಶಿವನಂ ಒಂದೇ ಸಾರಿ ಪೂಜಿಸುವನು ಆತನೀ ಮಂತ್ರಮಹತ್ವದಿಂ ಶಿವಸ್ಥಾನವನೈದುವನೆಂಬುದರ್ಥಂ ॥೩೫॥ ಬಳಿಕ ವ್ರತನಿಯಮಾದಿಗಳಿಂ ಸದ್ಗತಿಯುಂಟಪ್ಪುದರಿಂ ಶಿವಪೂಜೆಯನೆ ಮಾಡಬೇಕೆಂಬಲ್ಲಿ ಪೇಳುತಿರ್ದಪಂ.

ಅಬ್ಭಕ್ಷಾ ವಾಯುಭಕ್ಷಾಶ್ಚ ಯೇ ಚಾನ್ಯೇ ವ್ರತಕರ್ಷಿತಾಃ
ತೇಷಾಮೇತೈಃ ವ್ರತೈರ್ನಾಸ್ತಿ ಶಿವಲೋಕಸಮಾಗಮಃ ॥

ಜಲಾಹಾರಿಗಳು ವಾಯು ತರಗೆಲೆಯ ಭಕ್ಷಿಸುವರು. ಕೃಚ್ಛ್ರ ಚಾಂದ್ರಾಯಣಾದಿ ವ್ರತಗಳಿಂ ಕೃಶರಾಗಿಹರವರು ಸಹ ಯಾರುಂಟು ಅವರುಗಳಿಗೆ ಈ ವ್ರತಗಳಿಂದ ಶಿವಲೋಕ ಪ್ರಾಪ್ತಿಯಿಲ್ಲವೆಂಬುದರ್ಥಂ ॥ ೩೬॥ ಅದು ಕಾರಣದಿಂ ಜಪಯಜ್ಞಾದಿಗಳೆಲ್ಲಂ ಲಿಂಗಾರ್ಚನೆಯ ಕೋಟ್ಯಂಶದೊಳಗೆ ಒಂದಂಶವನು ಪಡೆಯಲಾರದೆಂದು ಪೇಳುತಿರ್ದಪಂ.

ತಸ್ಮಾತ್ತಪಾಂಸಿ ಯಜ್ಞಾಶ್ಚ ವ್ರತಾನಿ ನಿಯಮಾಸ್ತಥಾ
ಪಂಚಾಕ್ಷರಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ

ಅದು ಕಾರಣಮಾಗಿ ಪಂಚಾಗ್ನಿಮಧ್ಯ ಮೊದಲಾದ ತಪಸ್ಸು ಅಶ್ವಮೇಧ ಮೊದಲಾದ ಯಜ್ಞಗಳು ಕೃಚ್ಛ್ರ ಚಾಂದ್ರಾಯಣ ಮೊದಲಾದ ವ್ರತ ನಿಯಮಂಗಳು ಈ ವಿಷ್ಣು ಪಂಚಾಕ್ಷರಿ ಮಂತ್ರಯುಕ್ತಮಾಗಿ ಮಾಡುವ ಶಿವಲಿಂಗಪೂಜೆಯ ಕೋಟ್ಯಂಶದೊಳಗೊಂದಂಶಕು ಸಮಾನವಾಗಲಾರದೆಂಬುದರ್ಥಂ ॥೩೭॥ ಬಳಿಕ ಶಿವಾರ್ಚನೆಯಲ್ಲಿ ನಿರ್ಮಲ ಜ್ಞಾನಿಯಧಿಕಾರಿಯೆಂದು ಪೇಳಿದ ಸಂಬಂಧ ಅಶುದ್ಧಬುದ್ಧಿಗಳಿಗೇನು ಗತಿ ಎಂಬಲ್ಲಿ ಪೇಳುತಿರ್ದಪಂ.

ಅಶುದ್ಧೋ ವಾ ವಿಶುದ್ಧೋ ವಾ ಸಕೃತ್ಪಂಚಾಕ್ಷರೇಣ ಯಃ
ಪೂಜಯೇತ್ಪತಿತೋ ವಾಽ ಪಿ ಮುಚ್ಯಂತೇ ನಾತ್ರ ಸಂಶಯಃ ॥

ಮಲಿನಹೃದಯನಾಗಲಿ ನಿರ್ಮಲಚಿತ್ತನಾಗಲಿ ಪತಿತನಾಗಲಿ ಒಂದೇ ಸಾರಿ ಪಂಚಾಕ್ಷರೀಮಂತ್ರದಿಂದ ಯಾವನು ಶಿವಲಿಂಗಮಂ ಪೂಜಿಸುವನು ಅವನು

ಮುಕ್ತನಹನೆಂಬುದರ್ಥಂ ॥೩೮॥ ಬಳಿಕ ಒಂದೇ ಸಾರಿ ಪಂಚಾಕ್ಷರ ಮಂತ್ರೋಚ್ಚಾರಣೆಯಿಂದ ಸಕಲರಿಗೂ ಸಕಲ ಪಾಪಕ್ಷಯವಾಹದೆಂದು ನುಡಿವುತಿರ್ದಪಂ.

ಸಕೃದುಚ್ಚಾರಮಾತ್ರೇಣ ಪಂಚಾಕ್ಷರಮಹಾಮನೋಃ
ಸರ್ವೇಷಾಮಪಿ ಜಂತೂನಾಂ ಸರ್ವಪಾಪಕ್ಷಯೋ ಭವೇತ್ ॥

ಪಂಚಾಕ್ಷರ ಮಹಾಮಂತ್ರದ ಒಂದು ಉಚ್ಚಾರಣಮಾತ್ರದಿಂದ ಸಕಲ ಪ್ರಾಣಿಗಳಿಗೂ ಸಕಲ ಪಾಪಕ್ಷಯವೆಂಬುದರ್ಥಂ ॥೩೯॥ ಬಳಿಕ ಶಿವಾಗಮ ಪ್ರಸಿದ್ಧಮಾದ ಮಂತ್ರಗಳನೇಕ ವಿರುತ್ತವೆ. ಅವರತ್ತಣಿಂದೀ ಮಂತ್ರಕ್ಕೆ ಶ್ರೇಷ್ಠತ್ವವೇತರಿಂದ ಎಂಬಲ್ಲಿ ಪೇಳುತಿರ್ದಪಂ.

ಅನ್ಯೇಽಪಿ ಬಹವೋ ಮಂತ್ರಾಃ ವಿದ್ಯಂತೇ ಸಕಲಾಗಮೇ
ಭೂಯೋ ಭೂಯಸ್ಸಮಭ್ಯಾಸಾತ್ಪುರುಷಾರ್ಥಪ್ರದಾಯಿನಃ ॥

ಏಷಮಂತ್ರೋ ಮಹಾಶಕ್ತಿರೀಶ್ವರಃ ಪ್ರತಿಪಾದಕಃ
ಸಕೃದುಚ್ಚಾರಣಾದೇವ ಸರ್ವಸಿದ್ಧಿಪ್ರದಾಯಕಃ॥

ಸಮಸ್ತಮಾದ ಶಿವಾಗಮಂಗಳಲ್ಲಿ ಈ ಪಂಚಾಕ್ಷರೀಮಂತ್ರ ವ್ಯತಿರಿಕ್ತಮಾಗಿ ಬಹುಮಂತ್ರಂಗಳಿರುತ್ತವೆ ಆ ವ್ಯಪುರುಶ್ಚರಣೆಗಳ ಆವೃತ್ತಿ ಬಾಹುಲ್ಯದಿಂದ ಫಲವ ಕೊಡುವಂಥಾವು ಈ ಪಂಚಾಕ್ಷರೀಮಂತ್ರವಾದರೋ ಮಹಾಸಾಮರ್ಥ್ಯವುಳ್ಳದು ಈಶ್ವರನ ವಿಶ್ವಮಯ ವಿಶ್ವೋತ್ತೀರ್ಣ ಸಾಮರಸ್ಯರೂಪಮಾದ ಮಹತ್ತ್ವವ ಪ್ರತಿಪಾದಿಸುವಂಥದು ಅದು ಕಾರಣವಾಗಿ ಒಂದೇ ಸಾರಿ ಎಚ್ಚರಿಸಿದ ಮಾತ್ರದಿಂದ ಸಕಲ ಸಿದ್ಧಿಗಳಂ ಕೊಡುವಂಥಾ ದೆಂಬುದರಿಂದ ಶ್ರೇಷ್ಠವೆಂಬುದರ್ಥಂ ॥೪೧॥ ಬಳಿಕ ಸಮಂತ್ರಮಾದ ಶಿವಲಿಂಗ ಪೂಜಾಫಲಮಂ ಪ್ರಕಾಶಿಸುತಿರ್ದಪಂ.

ಪಂಚಾಕ್ಷರೀಂ ಸಮುಚ್ಚಾರ್ಯ ಪುಷ್ಪಂ ಲಿಂಗೇ ವಿನಿಕ್ಷಿಪೇತ್
ಯಸ್ತಸ್ಯ ವಾಜಪೇಯಾನಾಂ ಸಹಸ್ರಫಲಮಿಷ್ಯತೇ ॥

ಯಾವವನು ಪಂಚಾಕ್ಷರೀಮಂತ್ರವನು ಉಚ್ಚರಿಸಿ ಲಿಂಗಮಸ್ತಕದಲ್ಲಿ ಕುಸುಮಾರ್ಪಣೆಯಂ ಮಾಡುವನು ಅವನಿಂ ಸಹಸ್ರ ವಾಜಪೇಯಯಾಗಫಲಮಿಚ್ಛಾ ವಿಷಯವಾಗಿ ಮಾಡಲ್ಪಡುತ್ತಿಹುದೆಂಬುದರ್ಥಂ ॥೪೨॥ ಬಳಿಕ ಪಂಚಾಕ್ಷರೀಜಪಫಲಮಂ ಪೇಳುತಿರ್ದಪಂ.

ಅಗ್ನಿಹೋತ್ರಂ ತ್ರಯೋ ವೇದಾಃ ಯಜ್ಞಾಶ್ಚ ಬಹುದಕ್ಷಿಣಾಃ
ಪಂಚಾಕ್ಷರಜಪಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ॥

ಸಾಯಂ ಪ್ರಾತಃ ಕಾಲದಲ್ಲಿ ಮಾಡುವ ಅಗ್ನಿಹೋತ್ರವು ಋಗ್ಯಜುಸ್ಸಾಮಾಧ್ಯ ಯನಂಗಳು ಜ್ಯೋತಿಷ್ಟೋಮಾದಿ ಯಾಗಂಗಳು ಬಹು ದಕ್ಷಿಣೆಗಳುಳ್ಳ ಷೋಡಶ ಮಹಾದಾನಂಗಳು ಇವಿಷ್ಟು ಪಂಚಾಕ್ಷರಜಪದ ಕೋಟ್ಯಂಶದಲ್ಲಿ ಒಂದಂಶಕ್ಕೂ ಸಮಾನವಾದಂಥಾವಲ್ಲವೆಂಬುದರ್ಥಂ ॥ ೪೩ ॥ಬಳಿಕೀ ಪಂಚಾಕ್ಷರೀಮಂತ್ರಸಿದ್ಧಿಯುಳ್ಳ ಮಹಾಪುರುಷ ಮಹತ್ಪ್ರಕಾಶನ ಮುಖದಿಂದೀಮಂತ್ರಕ್ಕೆ ಆಧಿಕ್ಯಮಂ ಪ್ರತಿಪಾದಿಸುತಿರ್ದಪಂ.

ಪುರಾ ಸಾನಂದಯೋಗೀಂದ್ರಶ್ಶಿವಜ್ಞಾನಪರಾಯಣಃ
ಪಂಚಾಕ್ಷರಂ ಸಮುಚ್ಚಾರ್ಯ ನಾರಕಾನುದತಾರಯತ್ ॥

ಶಿವಪೂರ್ವದಲ್ಲಿ ಶಿವಜ್ಞಾನಯೋಗನಿಷ್ಠನಾದ ಸಾನಂದಗಣೇಶ್ವರನು ಪಂಚಾಕ್ಷರ ಮಂತ್ರಮಂ ವಾಚಕರೂಪದಿಂದುಚ್ಚರಿಸಿ ಇಪ್ಪತ್ತೆಂಟುಕೋಟಿ ನಾಯಕನರಕದಲ್ಲಿದ್ದ ಪಾಪಿಗಳನುದ್ಧಾರವಂ ಮಾಡಿದನೆಂಬುದರ್ಥಂ ॥೪೪॥

ಸಿದ್ಧ್ಯಾ ಪಂಚಾಕ್ಷರಸ್ಯಾಸ್ಯ ಶತಾನಂದಃ ಪುರಾ ಮುನಿಃ
ನರಕಂ ಸ್ವರ್ಗಮಕರೋತ್ಸಂಗಿರಸ್ಯಾಪಿ ಪಾಪಿನಃ ॥

ಪೂರ್ವದಲ್ಲಿ ಶತಾನಂದನೆಂಬವಂ ಪಂಚಾಕ್ಷರೀಮಂತ್ರಜಪಸಿದ್ಧಿಯಿಂ ಪಾಪಿಷ್ಠನಾದ ಸಂಗಿರನ ನರಕಲೋಕಮಂ ಸ್ವರ್ಗವನ್ನಾಗಿ ಮಾಡಿದನೆಂಬುದರ್ಥಂ ॥೪೫॥

ಉಪಮನ್ಯುಃ ಪುರಾ ಯೋಗೀ ಮಂತ್ರೇಣಾನೇನ ಸಿದ್ಧಿಮಾನ್
ಲಬ್ಧವಾನ್ ಪರಮೇಶಾನಾಚ್ಛೈವಶಾಸ್ತ್ರ ಪ್ರವಕ್ತೃತಾಮ್॥

ಪೂರ್ವದಲ್ಲಿ ಉಪಮನ್ಯುವೆಂಬ ಯೋಗೀಶ್ವರನೀ ಮಂತ್ರ ಜಪದಿಂ ಸಿದ್ಧಿ ಯುಳ್ಳವ ನಾಗಿ ಶಿವನತ್ತಣಿಂ ಶೈವಶಾಸ್ತ್ರಕ್ಕೆ ಆಚಾರ್ಯನಾಹತನವಂ ಪಡೆದನೆಂಬುದರ್ಥಂ ॥೪೬॥

ವಶಿಷ್ಠ ವಾಮದೇವಾದ್ಯಾಃ ಮುನಯೋ ಮುಕ್ತಕಿಲ್ಬಿಷಾಃ
ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋऽಭವನ್ ॥

ಬಿಡಲ್ಪಟ್ಟ ಪಾಪಕರ್ಮವುಳ್ಳ ವಶಿಷ್ಠ ವಾಮದೇವ ಮೊದಲಾದ ಮುನಿಗಳು ಈ ಪಂಚಾಕ್ಷರಮಂತ್ರದಿಂದ ಸಿದ್ಧರಾದವರಾಗಿ ಶಾಪಾನುಗ್ರಹಸಮರ್ಥರಾದರೆಂಬುದರ್ಥಂ ॥೪೭॥ ಬಳಿಕ ಬ್ರಹ್ಮಾದಿ ದೇವರುಗಳು ಈ ಮಂತ್ರಪ್ರಭಾವದಿಂದಲೆ ಸೃಷ್ಟ್ಯಾದಿ ಕೃತ್ಯಂಗಳಿಗಧಿಕಾರಿಗಳಾದರೆಂದು ಪೇಳುತಿರ್ದಪಂ

ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯಾದಿ ಕರ್ಮಣಿ
ಮಂತ್ರಸ್ಯಾಸ್ಯೈವ ಮಾಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ ॥

ಬ್ರಹ್ಮ ವಿಷ್ಣು ರುದ್ರ ಮೊದಲಾದ ದೇವರುಗಳಿಗೆ ಸೃಷ್ಟಿ ಸ್ಥಿತಿ ಸಂಹಾರಾದಿ ಕರ್ಮಂಗಳಲ್ಲಿ ಸಾಮರ್ಥ್ಯವು, ಈ ಮಂತ್ರಪ್ರಭಾವದಿಂದಲೆ ಉಂಟಾಗುತ್ತಿರುವ ದೆಂಬುದರ್ಥಂ ॥೪೮॥ ಬಳಿಕ ಬಹು ಮಾತಿನಿಂದೇನು ಪ್ರಯೋಜನ ಪ್ರಣವಸಹಿತಮಾದ ಷಡಕ್ಷರಮಂತ್ರಜಪದಿಂದಲೂ ಆದರಿಂ ಮಾಡಲ್ಪಟ್ಟ ಶಿವಲಿಂಗಪೂಜೆಯಿಂದಲೂ ಮೋಕ್ಷವನೆ ಪಡುತ್ತಿಹನೆಂದು ನಿರೂಪಿಸಿ ಪಂಚಾಕ್ಷರ ಜಪಸ್ಥಲಮಂ ಮುಗಿಸುತಿರ್ದಪಂ

ಕಿಮಿಹ ಬಹುಭಿರುಕ್ತೈರ್ಮಂತ್ರಮೇನಂ ಮಹಾತ್ಮಾ
ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಮ್
ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಮ್
ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ ॥

ಬಹುಮಾತುಗಳಿಂದೇನು ಪ್ರಯೋಜನ ಮಹಾತ್ಮನಾದವಂ ಮೊದಲು ಪ್ರಣವಯುಕ್ತಮಾದ ಪಂಚಾಕ್ಷರೀಮಂತ್ರಮಂ ಜಪಿಸುತ್ತಿಹನು. ಉತ್ಕೃಷ್ಟಮಾದ ಭಕ್ತಿಯಿಂ ದೇವದೇವನಾದ ಶಿವನಂ ಪೂಜಿಸುತ್ತಿಹನು. ಆತಂ ಹೋಗಲ್ಪಟ್ಟ ಪಾಪಬಂಧನಮುಳ್ಳವನಾಗಿ ಮೋಕ್ಷಲಕ್ಷ್ಮಿಯ ಪಡೆವನೆಂಬುದರ್ಥಂ. ಪ್ರಣವಪಂಚಾಕ್ಷರಿಯಂ ಜಪಿಸೂದು ಸ್ತ್ರೀ ಶೂದ್ರಾದಿಗಳಿಗೆ ಶಿವಾಯನಮಃ ಹೀಗೆಂಬ ಪಂಚಾಕ್ಷರೀಮಂತ್ರವೆ ಸರಿ ಎಂಬುದೀಗ ಜಪ ವಿಧಿಯು ॥ ೪೯॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮಪುರಾಣಾದಿ ಸಾರಭೂತೇ ವೀರಶೈವ ಧರ್ಮನಿರ್ಣಯೆ ಸಿದ್ಧಾಂತಶಿಖಾಮಣೌ ಭಕ್ತಸ್ಥಲೆ ಪಂಚಾಕ್ಷರೀಜಪಪ್ರಸಂಗೋನಾಮಾಷ್ಟಮಃಪರಿಚ್ಛೇದಃ

# ನವಮಪರಿಚ್ಛೇದ

## ೯. ಭಕ್ತಮಾರ್ಗಕ್ರಿಯಾಸ್ಥಲ

ಬಳಿಕ ಭಕ್ತಮಾರ್ಗಕ್ರಿಯಾಸ್ಥಲಮಂ ನಿರೂಪಿಸಲೋಸ್ಕರ ಪೂರ್ವೋಕ್ತ ಭಕ್ತಿಸ್ಥಲಮಂ ಚೆನ್ನಾಗಿ ಸ್ಮರಣೆಗೆ ಬರುವಂತೆ ಪ್ರಕಾಶಿಸುತಿರ್ದಪಂ. ಶ್ರೀ ರೇಣುಕಃ-

ಭೂತಿರುದ್ರಾಕ್ಷಸಂಯುಕ್ತೋ ಲಿಂಗಧಾರೀ ಸದಾಶುಚಿಃ
ಪಂಚಾಕ್ಷರಜಪೋದ್ಯೋಗೀ ಶಿವಭಕ್ತ ಇತಿ ಸ್ಮೃತಃ ॥

ವಿಭೂತಿ ರುದ್ರಾಕ್ಷಿಗಳೊಡನೆ ಕೂಡಿ ಲಿಂಗಧಾರಿಯಾಗಿ ಆ ಕಾರಣದಿಂದಲೆ ಎಲ್ಲಾಗಳು ಪವಿತ್ರವಾಗಿ ಪಂಚಾಕ್ಷರೀಮಂತ್ರಜಪದಲ್ಲಿ ಉದ್ಯೋಗವುಳ್ಳಾತನು ಶಿವಭಕ್ತನೆಂದು ನೆನೆಯಲ್ಪಟ್ಟನೆಂಬುದರ್ಥಂ ॥೧॥ ಬಳಿಕ ಭಕ್ತಿಭೇದಮಂ ನಿರೂಪಿಸುತಿರ್ದಪಂ.

ಶ್ರವಣಂ ಕೀರ್ತನಂ ಶಂಭೋಃಸ್ಮರಣಂ ಪಾದಸೇವನಮ್
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್॥

ಏವಂ ನವವಿಧಾ ಭಕ್ತಿಃ ಪ್ರೋಕ್ತಾ ದೇವೇನ ಶಂಭುನಾ
ದುರ್ಲಭಾ ಪಾಪಿನಾಂ ಲೋಕೇ ಸುಲಭಾ ಪುಣ್ಯಕರ್ಮಣಾಮ್,॥

ಶಿವನ ಕಥಾಶ್ರವಣವು ಸ್ತುತಿಯು ಧ್ಯಾನವು ಪಾದವನೊತ್ತೂದು ಅರ್ಚಿಸೂದು ನಮಸ್ಕರಿಸೂದು ಭೃತ್ಯಭಾವವು ಮಿತ್ರತ್ವವು ಸ್ವಾತ್ಮಸಮರ್ಪಣವು ಈ ಪ್ರಕಾರದಿಂ ಭಕ್ತಿ ಒಂಬತ್ತು ವಿಧವೆಂದು ಕ್ರೀಡಾಶೀಲನಾದ ಮಹಾದೇವನಿಂ ಪೇಳಲ್ಪಟ್ಟಿತ್ತು. ಈ ಭಕ್ತಿ ಲೋಕದಲ್ಲಿ ಪಾಪಿಗಳಾದವರಿಗೆ ದೊರಕದು ಸುಕೃತಿಗಳಾದವರಿಗೆ ಸುಲಭವೆಂಬುದರ್ಥಂ ॥೩॥ ಬಳಿಕೀ ಪ್ರಕಾರಮಾದ ಭಕ್ತಿಯುಳ್ಳವನೆ ಭಕ್ತನೆಂದು ಪೇಳುತಿರ್ದಪಂ

ಅಧಮೇ ಚೋತ್ತಮೇ ವ್ಯಾಪಿ ಯತ್ರ ಕುತ್ರಚಿದೂರ್ಜಿತಾ
ವರ್ತತೇ ಶಾಂಕರೀ ಭಕ್ತಿಃ ಸ ಭಕ್ತ ಇತಿ ಗೀಯತೇ॥

ಉತ್ತಮನಲ್ಲಾಗಲಿ ಮ್ಲೇಚ್ಛನಲ್ಲಾಗಲಿ ಯಾವನಲ್ಲಿಯಾಗಲಿ ಶ್ರೇಷ್ಠವಾದ ಭಕ್ತಿಯಿರುವುದೋ ಅವಂ ಶಿವಭಕ್ತನೆಂದು ಪೇಳಲ್ಪಡುವನೆಂಬುದರ್ಥಂ ॥೪॥ ಬಳಿಕೀ ಶಿವಭಕ್ತಿಯುಳ್ಳವನೆ ಶಿವಪ್ರಿಯನೆಂದು ಪೇಳುತಿರ್ದಪಂ.

ಭಕ್ತಿಃ ಸ್ಥಿರೀಕೃತಾ ಯಸ್ಮಿನ್ ಮ್ಲೇಂಚ್ಛೇ ವಾ ದ್ವಿಜಸತ್ತಮೇ
ಶಂಭೋಃ ಪ್ರಿಯಃ ಸ ವಿಪ್ರಶ್ಚ ನ ಪ್ರಿಯೋಭಕ್ತಿವರ್ಜಿತಃ

ಯಾವನಾನೊಬ್ಬ ಮ್ಲೇಚ್ಛನಾಗಲಿ ದ್ವಿಜೋತ್ತಮನಾಗಲಿ ಶಿವಭಕ್ತಿ ಸ್ಥಿರವಾಗಿ ಮಾಡಲ್ಪಟ್ಟದ್ದಾದರೆ ಅವನೆ ಶಿವನಿಗೆ ಪ್ರಿಯನು. ವಿಪ್ರನಾದರೂ ಭಕ್ತಿಶೂನ್ಯನಾದರೆ ಶಿವನಿಗೆ ಪ್ರಿಯನು ಅಲ್ಲ, ವಿಪ್ರನು ಅಲ್ಲವೆಂಬುದರ್ಥಂ॥೫॥ ಬಳಿಕ ಭಕ್ತಿಯೆಂಬುದೆರಡು ಪ್ರಕಾರವೆಂದು ಪೇಳುತಿರ್ದಪಂ.

ಸಾ ಭಕ್ತಿರ್ದ್ವಿವಿಧಾ ಜ್ಞೇಯಾ ಬಾಹ್ಯಾಭ್ಯಂತರ ಭೇದತಃ
ಬಾಹ್ಯಾ ಸ್ಥೂಲಾಂತರಾ ಸೂಕ್ಷ್ಮಾ ವೀರಮಾಹೇಶ್ವರಾದೃತಾ ॥

ವೀರಮಾಹೇಶ್ವರರಿಂದ ಅಂಗೀಕರಿಸಲ್ಪಟ್ಟ ಆ ಪೂರ್ವೋಕ್ತ ಭಕ್ತಿಯು ಬಾಹ್ಯ ಮಾಭ್ಯಂತರವೆನಿಸಿಕೊಂಬ ಸ್ಥೂಲ ಸೂಕ್ಷ್ಮರೂಪದಿಂದಿತ್ತೆರನಾಗಿ ತಿಳಿಯಲ್ತಕ್ಕದೆಂಬುದರ್ಥಂ ||೬|| ಬಳಿಕ ಬಾಹ್ಯವೆಂದರೇನೆಂಬಲ್ಲಿ ಪೇಳುತಿರ್ದಪಂ

ಸಿಂಹಾಸನೇ ಶುದ್ಧದೇಶೇ ಸುರಮ್ಯೇ ರತ್ನಚಿತ್ರಿತೇ
ಶಿವಲಿಂಗಸ್ಯ ಪೂಜಾ ಯಾ ಸಾ ಬಾಹ್ಯ ಭಕ್ತಿರುಚ್ಯತೇ||

ಅತ್ಯಂತ ಮನೋಹರವಾಗಿ ಷಟ್‌ಸಮ್ಮಾರ್ಜನೆಯಿಂ ಪರಿಶುದ್ಧಮಾದ ಸ್ಥಾನದಲ್ಲಿ ನವರತ್ನಗಳಿಂ ವಿಚಿತ್ರಮಾದ ಸಿಂಹಪೀಠದಲ್ಲಿ ಶಿವಲಿಂಗದ ಯಾವುದಾನೊಂದು ಪೂಜೆಯುಂಟು ಅದು ಬಾಹ್ಯಭಕ್ತಿಯೆಂದು ಪೇಳಲ್ಪಡುತ್ತಿಹುದೆಂಬುದರ್ಥಂ ||೭|| ಬಳಿಕೀ ಪ್ರಕಾರದಿಂ ಶಿವಭಕ್ತರಿಂ ಮಾಡಲ್ತಕ್ಕ ಬಾಹ್ಯಭಕ್ತಿಯಂ ಪೇಳಿ ಶಿವಯೋಗಿಗಳಿಂ ಮಾಡಲ್ತಕ್ಕ ಅಂತರಭಕ್ತಿಯಂ ವಿವರಿಸುತಿರ್ದಪಂ.

ಲಿಂಗೇ ಪ್ರಾಣಂ ಸಮಾಧಾಯ ಪ್ರಾಣೇ ಲಿಂಗಂ ತು ಶಾಂಭವಮ್
ಸ್ವಸ್ಥಂ ಮನಸ್ತಥಾ ಕೃತ್ವಾ ನ ಕಿಂಚಿಚ್ಚಿಂತಯೇದ್ಯದಿ ||

ಸ್ವಾಭ್ಯಂತರಾಭಕ್ತಿರಿತಿ ಪ್ರೋಚ್ಯತೇ ಶಿವಯೋಗಿಭಿಃ
ಸಾ ಯಸ್ಮಿನ್ವರ್ತತೇ ತಸ್ಯ ಜೀವನಂ ಭ್ರಷ್ಟಬೀಜವತ್ ||

ಶಿವಲಿಂಗದಲ್ಲಿ ಪ್ರಾಣವನಿರಿಸಿ ಶಿವಕಲಾರೂಪಮಾದ ಪ್ರಾಣದಲ್ಲಿ ಶಿವಕಲಾ ರೂಪಮಾದ ಲಿಂಗದಲ್ಲಿ ಮಡಗಿ ಮನವಂ ಸ್ವಸ್ಥ್ಯವಿಟ್ಟು ಎತ್ತಲಾನು ಮತ್ತೇನನು ಚಿಂತಿಸದೆ ಇರುವನು. ಆ ಲಿಂಗಪ್ರಾಣ ಸಮರಸರೂಪಮಾದ ಚಿಂತೆಯು ಅಭ್ಯಂತರಭಕ್ತಿಯೆಂದು ಶಿವಯೋಗಿಗಳಿಂ ಮಾಡಲ್ಪಡುತ್ತಿಹುದು. ಅಂಥ ಭಕ್ತಿ ಯಾವನಲ್ಲಿರುವುದೋ ಅವನ ಜೀವನವು ಹುರಿದ ಬೀಜದಂತೆ ಮರಳಿ ಜನನಕೆ ಬಾರದೆಂಬುದರ್ಥಂ ||೯|| ಬಳಿಕೀ ಪ್ರಕಾರದಿಂ ನಿರ್ಬೀಜದೀಕ್ಷಾ ಪ್ರಸಿದ್ಧಮಾದ ಆಂತರಭಕ್ತಿಯುಳ್ಳವನೆ ಮುಕ್ತನೆಂದು ನುಡಿವುತಿರ್ದಪಂ.

ಬಹುನಾತ್ರ ಕಿಮುಕ್ತೇನ ಗುಹ್ಯಾದ್ಗುಹ್ಯತರಾ ಪರಾ
ಶಿವಭಕ್ತಿರ್ನಸಂದೇಹಸ್ತಯಾ ಯುಕ್ತೋ ವಿಮುಚ್ಯತೇ ||

ಬಹು ಭಾಷಣೆಯಿಂದೇನು ಪ್ರಯೋಜನ ಈ ಪೇಳಲ್ಪಟ್ಟ ಶಿವಭಕ್ತಿಯೆಂಬುದು ಗೋಪ್ಯಾದ್ಗೋಪ್ಯವು. ಆ ಭಕ್ತಿಯುಳ್ಳವನು ಮುಕ್ತನೇ ಸರಿ ಅಲ್ಲಿ ಸಂದೇಹವಿಲ್ಲದೆಂಬುದರ್ಥಂ ||೧೦|| ಬಳಿಕೀ ಪ್ರಕಾರಮಾದ ಭಕ್ತಿಯೇತರಿಂದುಂಟಹದೆಂಬಲ್ಲಿ ಪೇಳುತಿರ್ದಪಂ.

ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ ||

ಶಿವನ ಪ್ರಸಾದದಿಂದಲೆ ಆ ಭಕ್ತಿಯುಂಟಹುದು. ಆ ಭಕ್ತಿಯಿಂದಲೆ ಪ್ರಸಾದ ಮುಂಟಪ್ಪುದು. ಹಿಂಗಾದಡನ್ಯೋನ್ಯಾಶ್ರಯದೋಷವಲ್ಲವೆ ಎಂಬಲ್ಲಿ ಆ ದೋಷ ಪ್ರಜ್ಞೆಯಲ್ಲಿಯೆ ಸರಿ ಬೀಜದಿಂದಂಕುರಮಂಕುರದಿಂ ಬೀಜಂ ಪುಟ್ಟುವಂತೆ ಉತ್ಪತ್ತಿಯಲ್ಲಿ

ದೋಷವಿಲ್ಲಮೆಂಬುದರ್ಥಂ ॥೧೧॥ ಬಳಿಕೀ ಪ್ರಕಾರಮಾದ ಭಕ್ತಿಯೊಂದೆ ಜನ್ಮದಲ್ಲಿ ದೊರಕೊಳ್ಳವೆಂದು ಪೇಳುತಿರ್ದಪಂ

ಪ್ರಸಾದಪೂರ್ವಿಕಾ ಯೇಯಂ ಭಕ್ತಿರ್ಮುಕ್ತಿವಿಧಾಯಿನೀ
ನೈವ ಸಾ ಶಕ್ಯತೇ ಪ್ರಾಪ್ತುಂ ನರೈರೇಕೇನ ಜನ್ಮನಾ ॥

ಶಿವನ ಪ್ರಸಾದದಿಂದುಂಟಾಗಿ ಮುಕ್ತಿಯನೀವ ಯಾವ ಭಕ್ತಿಯುಂಟು ಆ ಭಕ್ತಿಯು ನರರಿಂದೊಂದೆ ಜನ್ಮದಲ್ಲಿ ಪಡೆಯಲು ಶಕ್ಯವಲ್ಲದಂಥಾದೆಂಬುದರ್ಥಂ. ಹಾಗಾದರೆ ಭಕ್ತಿಯೆಷ್ಟು ಜನ್ಮಗಳಿಂ ದೊರಕೊಂಬವೆಂಬಲ್ಲಿ ಪೇಳುತಿರ್ದಪಂ ॥ ೧೨॥

ಅನೇಕಜನ್ಮಶುದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಮ್
ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರಃ ॥

ಬಹುಜನ್ಮಗಳಿಂದಲೂ ಮಾಡಿಬಂದ ಶಿವಪೂಜಾದಿ ಸೂತ್ರದಿಂ ಶುದ್ಧಾಂತಃ ಕರಣರಾಗಿ ಶ್ರೌತ ಸ್ಮಾರ್ತ ನಿತ್ಯಕರ್ಮನಿಷ್ಠೆಯಲ್ಲಿ ಇಲ್ಲದಿರ್ದಡು ಪೂರ್ವಜನ್ಮದಲ್ಲಿ ಶಿವಭಕ್ತರಿಗೆ ಮಾಡಿದ ಉಪಕಾರವಶದಿಂ ಶಿವಭಕ್ತಿ ಸ್ಫುರಿಸುವುದೆಂಬುದರ್ಥಂ ॥೧೩॥ ಬಳಿಕ ಬಹುಜನ್ಮಗಳಿಂ ದೊರಕೊಂಬ ಶಿವಭಕ್ತಿಯಿಂದೆಷ್ಟು ಜನ್ಮಗಳು ಕಳಿಯಲಾಗಿ ಮುಕ್ತಿಯಹುದು. ಆ ಮುಕ್ತಿಯಾದರೆಂಥಾದೆಂಬಲ್ಲಿ ಪೇಳುತಿರ್ದಪು.

ಪ್ರಸನ್ನೇಸತಿ ಮುಕ್ತೋಽಭೂನ್ಮುಕ್ತಶ್ಶಿವಸಮೋಭವೇತ್
ಅಲ್ಪಭಕ್ತ್ಯಾಽಪಿ ಯೋ ಮರ್ತ್ಯಸ್ತಸ್ಯ ಜನ್ಮತ್ರಯಾತ್ಪರಮ್ ॥

ಶಿವನು ಪ್ರಸನ್ನನಾಗಲಾಗಿ ಭಕ್ತನು ಮುಕ್ತನಹನು ಮುಕ್ತನು ಶಿವನೆ ಅಹನು ಶಿವನಿಗೆ ಸಮಾನವಾದವನಿಲ್ಲ ಶಿವನಿಂದ ಕಡಿಮೆಯಾದವ ಶಿವನ ಸಮನಲ್ಲ, ಗಗನಂ ಗಗನಾಕಾರಂ ಸಾಗರಸ್ಸಾಗರೋಪಮಃ ಎಂಬ ಹಾಗೆ ಶಿವನಿಗೆ ಸಮಾನನಾದ ಶಿವನೆ ಸರಿ ಎಂಬುದರಿಂದ ಅಲ್ಪಭಕ್ತಿಯುಳ್ಳ ಮರ್ತ್ಯನಾವನುಂಟು ಅವಂಗೆ ಮೂರುಜನ್ಮದ ಮೇಲೆ ಮುಕ್ತಿಯಪ್ಪುದು ಪೂರ್ಣಭಕ್ತಿಯುಳ್ಳ ವೀರಶೈವರಿಗೆ ಒಂದೇ ಜನ್ಮದಿಂ ಮುಕ್ತಿಯುಂಟಹುದು ಏಕೇನ ಜನ್ಮನಾ ಮುಕ್ತಿರ್ವೀರಾಣಾಂತು ಮಹೇಶ್ವರೀ ಇತರೇಷಾಂ ತು ಶೈವಾನಾಂ ಮುಕ್ತಿ ಜನ್ಮ ತ್ರಯಾತ್ಪರಮೆಂದು ವೀರಾಗಮವಚನವೀಯರ್ಥದಲ್ಲಿ ಪ್ರಮಾಣವಾಗಿ ಇರುವುದು ಶಿವಸ್ವರೂಪೋಭವತಿ ಶಿವಸ್ವರೂಪೋಭವತಿ ಎಂದು ವೃದ್ಧ ಜಾಬಾಲಶ್ರುತಿ ಈ ರೂಪಮಾದ ಮುಕ್ತಿಯಲ್ಲಿ ಪ್ರಮಾಣವಾಗಿ ಇರುವುದು ॥೧೪॥ ಬಳಿಕ ಅಲ್ಪಭಕ್ತಿ ಎಂದರೇನು ಮುಕ್ತಿಗೆ ಪುನರಾವೃತ್ತಿಯುಂಟೋ ಏನೆಂಬಲ್ಲಿ ಪೇಳುತಿರ್ದಪಂ.

ನ ಯೋನಿಯಂತ್ರಪೀಡಾ ವೈ ಭವೇನ್ನೈವಾತ್ರ ಸಂಶಯಃ
ಸಾಂಗಾನುಗಾ ಚ ಯಾ ಸೇವಾ ಸಾ ಭಕ್ತಿರಿತಿ ಕಥ್ಯತೇ॥

ನ ಸ ಪುನರಾವರ್ತತೇ ತೇನ ಸ ಪುನರಾವರ್ತತೇ ಎಂಬ ಶ್ರುತಿಯಿಂ ಯೋನಿ ಮುಖೋತ್ಪತ್ತಿಯಿಲ್ಲಂ ಪ್ರ[illegible]ರಾವೃತ್ತಿ ಇಲ್ಲವೆಂಬುದು ತಾತ್ಪರ್ಯಂ ಇಲ್ಲಿ ಸಂಶಯವಿಲ್ಲ, ಪೇಳಲ್ಪಟ್ಟಂಥ ಭಕ್ತಂಗೆ ವಿಶಿಷ್ಟಮಾದ ಸೇವೆಯೇ ಪೂರ್ಣಭಕ್ತಿ ಎನಿಸಿಕೊಂಬುದು

ಕಿಂಚಿನ್ನ್ಯೂನಮಾದುದಲ್ಪಭಕ್ತಿಯೆನಿಸಿಕೊಂಬುದರ್ಥಂ ॥೧೫॥ ಬಳಿಕ ಯದ್ಧಿಃ ಮನಸಾ ಧ್ಯಾಯತಿ ತದ್ವಾಚಾ ವದತಿ ತತ್ಕರ್ಮಣಾ ಕರೋತಿ ಎಂಬ ಶ್ರುತಿಯಿಂದ ಭಕ್ತಿ ಮೂರು ಪ್ರಕಾರವೆಂದು ಪೇಳುತಿರ್ದಪಂ.

ಸಾ ಪುನರ್ಭಿದ್ಯತೇ ತ್ರೇಧಾ ಮನೋವಾಕ್ಕಾಯಸಾಧನೈಃ
ಶಿವರೂಪಾದಿಚಿಂತಾ ಯಾ ಸಾ ಸೇವಾ ಮಾನಸೀ ಸ್ಮೃತಾ ॥

ಜಪಾದಿ ವಾಚಿಕೀ ಸೇವಾ ಕರ್ಮಪೂಜಾ ತು ಕಾಯಿಕೀ

ಆ ಸಾಂಗವಾದ ಭಕ್ತಿಯ ಮನೋವಾಕ್ಕಾಯರೂಪಮಾದ ಕಾರಣಗಳಿಂ ಮೂರು ತೆರನಾಗಿರುವುದು. ಅಲ್ಲಿ ಶಿವಲಿಂಗಾದಿ ಚಿಂತನವೆ ಮಾನಸಭಕ್ತಿ ಎನಿಸಿಕೊಂಬುದು, ಶಿವಮಂತ್ರ ಜಪಸ್ತುತಿ ಮಾಡೂದೆ ವಾಚಿಕ ಭಕ್ತಿ ಎನಿಸಿಕೊಂಬುದು, ಕಾಯದಿಂ ಮಾಡುವಂಥಾ ಶಿವಲಿಂಗ ಪೂಜೆಯೆ ಕಾಯಿಕ ಸೇವೆ ಎನಿಸಿಕೊಂಬುದರ್ಥಂ ॥೧೬॥ ಬಳಿಕೀ ಪ್ರಕಾರಮಾದ ತ್ರಿವಿಧಸೇವೆಯು ಬಾಹ್ಯಭೇದದಿಂ ತ್ರಿವಿಧಮಾಗಿರುವುದೆಂದು ಪೇಳುತಿರ್ದಪಂ.

ಬಾಹ್ಯಮಾಭ್ಯಂತರಂ ಚೈವ ಬಾಹ್ಯಾಭ್ಯಂತರಮೇವ ವಾ.
ಮನೋವಾಕ್ಕಾಯಭೇದೈಶ್ಚ ತ್ರಿಧಾ ತದ್ಭಜನಂ ವಿದುಃ ॥

ದೀಕ್ಷಾತ್ರಯದೊಡನೆ ಕೂಡಿದ ಮನೋವಾಕ್ಕಾಯಭೇದಮುಳ್ಳ ಪೂರ್ವೋಕ್ತ ಭಜನೆಯು ಬಾಹ್ಯಮೆಂದು ಅಂತರಮೆಂದು ಬಾಹ್ಯಾಭ್ಯಂತರಮೆಂದು ಮೂರು ಪ್ರಕಾರವಾಗಿ ಬಲ್ಲವರು ತಿಳಿದಿಹರೆಂಬುದರ್ಥಂ ॥೧೭॥ ಬಳಿಕಿವರ ಸ್ವರೂಪಮೆಂತೆನೆ ಮಾನಸಾದಿ ಸ್ವರೂಪಕಥನಪೂರ್ವಕವಾಗಿ ಪೇಳುತಿರ್ದಪಂ.

ಮನೋ ಮಹೇಶಧ್ಯಾನಾಢ್ಯಂ ನಾನ್ಯಧ್ಯಾನರತಂ ಮನಃ
ಶಿವನಾಮರತಾ ವಾಣೀ ವಾಙ್ಮತಾ ಚೈವ ನೇತರಾ ॥
ಲಿಂಗೈಶ್ಶಿವಸ್ಯ ಚೋದ್ದಿಷ್ಟೈಸ್ತ್ರಿಪುಂಡ್ರಾದಿಭಿರಂಕಿತಃ
ಶಿವೋಪಚಾರನಿರತಃ ಕಾಯಃ ಕಾಯೋ ನ ಚೇತರಃ ॥

ಶಿವನಾಮದಲ್ಲಿ ತತ್ಪರಮಾದುದೆ ವಾಕ್ಕು ಅನ್ಯನಾಮಯುಕ್ತಮಾದುದು ವಾಕ್ಕಲ್ಲ. ಶಿವಧ್ಯಾನಯುಕ್ತಮಾದುದೆ ಮನಸ್ಸು ಧ್ಯಾನಯುಕ್ತಮಾದುದು ಮನಸ್ಸಲ್ಲವೆಂಬುದರ್ಥಂ ॥೧೯॥ ಬಳಿಕ ಬಾಹ್ಯಾದಿಗಳಿಂ ಕುರುಹಿಡುತಿರ್ದಪಂ.

ಅನ್ಯಾತ್ಮವಿದಿತಂ ಬಾಹ್ಯಂ ಶಂಭೋರಭ್ಯರ್ಚನಾದಿಕಮ್
ತದೇವ ತು ಸ್ವಸಂವೇದ್ಯಮಾಭ್ಯಂತರಮುದಾಹೃತಮ್ ॥
ಮನೋ ಮಹೇಶಪ್ರವಣಂ ಬಾಹ್ಯಾಭ್ಯಂತರಮುಚ್ಯತೇ

ಪರದೃಷ್ಟಿಗೋಚರಮಾದ ಶಿವಪೂಜಾದಿ ಕರ್ಮ ಬಾಹ್ಯವು. ಅದೇ ಪರದೃಷ್ಟಿ ಗೋಚರಮಾಗದಂತೆ ಸ್ವಮಾತ್ರಗೋಚರಮಾದುದು ಅಭ್ಯಂತರವು. ಶಿವಲಿಂಗದಲ್ಲಿ ಎರಗಿದ ಮನಸ್ಸು ಮಕ್ಷಿಕಾನ್ಯಾಯದಿಂ ಉಭಯತ್ರವ್ಯಾಪ್ತವಾದ ಕಾರಣದಿಂ ಬಾಹ್ಯಾಭ್ಯಂತರಮೆಂದು ಶಾಸ್ತ್ರಜ್ಞರಿಂ ಪೇಳಲ್ಪಡುತ್ತಿಹುದೆಂಬುದರ್ಥಂ ॥೨೦॥ ಬಳಿಕೀ ಪ್ರಕಾರಮಾದ ಮಾನಸಾದಿ ಬಾಹ್ಯಾದಿ ರೂಪಮಾದ ತ್ರಿವಿಧಭಜನವೇ ಐದುಪ್ರಕಾರವಾಗುತ್ತಿಹದೆಂದು ಪೇಳುತಿರ್ದಪಂ.

ಪಂಚಧಾ ಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ
ತಪಃ ಕರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಮ್ ॥

ಆ ತ್ರಿವಿಧ ಭಜನವೆ ತಪಸ್ಸು, ಕರ್ಮ, ಜಪ, ಧ್ಯಾನ, ಜ್ಞಾನವೆಂದೈದು ಪ್ರಕಾರವಾಗಿ ಸತ್ಪುರುಷರಿಂ ಪೇಳಲ್ಪಡುತ್ತಿಹದೆಂಬುದರ್ಥಂ ॥೨೧॥ ಬಳಿಕಿವರ ಸ್ವರೂಪವೇನೆಂಬಲ್ಲಿ ಪೇಳುತಿರ್ದಪಂ.

ಶಿವಾರ್ಥೇ ದೇಹಸಂಶೋಷಸ್ತಪಃ ಕೃಚ್ಛ್ರಾದಿ ನೋ ಮತಮ್
ಶಿವಾರ್ಚಾಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ ॥

ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ
ರುದ್ರಾಧ್ಯಾಯಾದಿಕಾಭ್ಯಾಸೋ ನ ವೇದಾಧ್ಯಯನಾದಿಕಮ್ ॥

ಧ್ಯಾನಂ ಶಿವಸ್ಯ ರೂಪಾದಿ ಚಿಂತಾನಾತ್ಮಾದಿಚಿಂತನಮ್
ಶಿವಾಗಮಾರ್ಥವಿಜ್ಞಾನಂ ಜ್ಞಾನಂ ನಾನ್ಯಾರ್ಥವೇದನಮ್ ॥

ಇತಿ ಪಂಚಪ್ರಕಾರೋಽಯಂ ಶಿವಯಜ್ಞಃ ಪ್ರಕೀರ್ತಿತಃ

ಶಿವಪೂಜಾರ್ಥವಾಗಿ ಸಾಮಗ್ರಿ ಸಂಪಾದಿಸುವಲ್ಲಿ ಶರೀರವ ಬಳಲಿಸೋದೆ ತಪಸ್ಸು ಕೃಚ್ಛ್ರಾದಿಚಾಂದ್ರಾಯಣಾದಿಗಳಿಂ ಶರೀರವ ಶೋಷಿಸೋದು ತಪಸ್ಸೆಂದು ಸಮ್ಮತವಲ್ಲ. ಶಿವಲಿಂಗಪೂಜೆಯೆ ಕರ್ಮವೆಂದು ತಿಳಿಯಲು ಯೋಗ್ಯವು. ತತ್ಫಲಂ ಶಾಶ್ವತವಾದ ಕಾರಣದಿಂ ತದ್ವ್ಯತಿರಿಕ್ತಮಾದ ಜ್ಯೋತಿಷ್ಟೋಮಾದಿ ಯಾಗಂಗಳು ಕರ್ಮವೆಂದು ಪೇಳಲ್ಪಡವು. ತತ್ಫಲಂ ನಶ್ವರಮಾದ ಕಾರಣದಿಂ ವೇದಾಧ್ಯಯನ ಮೊದಲಾದುದು ಜಪವಲ್ಲ. ತ್ರೈಗುಣ್ಯಾವಿಷಯ ವೇದಾನಿಃಸ್ತ್ರೈಗುಣ್ಯೋ ಭವಾರ್ಜುನ ಎಂದು ಭಗವಂತನೆ ಪೇಳಿರುವ ಕಾರಣದಿಂ ಮತ್ತೇನೆಂದರೆ ಪಂಚಾಕ್ಷರೀಮಂತ್ರಾವೃತ್ತಿಯಾಗಲಿ ಪ್ರಣವಮಂತ್ರಾವೃತ್ತಿಯಾಗಲಿ ರುದ್ರಾಧ್ಯಾಯಾಥರ್ವಶಿರಶಿಖಾದಿಜಪವಾಗಲಿ ಜಪವೆನಿಸಿಕೊಂಬುದು. ಶಿವಲಿಂಗ ಶಿವಮೂರ್ತಿಚಿಂತನವೆ ಧ್ಯಾನವು. ಪರಿಮಿತ ಶರೀರೇಂದ್ರಿಯಾದಿ ವಿಶಿಷ್ಟಮಾದ ತನ್ನ ಸ್ವರೂಪ ಚಿಂತನಂ ಧ್ಯಾನವಲ್ಲ. ಶಿವಾಗಮಾರ್ಥವಿಜ್ಞಾನವೆ ಜ್ಞಾನವು. ಸಂಖ್ಯಾದ್ಯನ್ಯ ಶಾಸ್ತ್ರಜ್ಞಾನಂ ಜ್ಞಾನವಲ್ಲ. ಈ ಪ್ರಕಾರಮಾದ ಕಾಯ ವಾಙ್ಮಾನಸರೂಪ ಪೂಜಾ ತಪೋ ಜಪಾದ್ಯಾಜ್ಞಾನರೂಪವಾದುದೀ ಶಿವಯಜ್ಞವೆಂದು ಶಿವಶಾಸ್ತ್ರಜ್ಞರಿಂ ಪೇಳಲ್ಪಟ್ಟಿತೆಂಬುದರ್ಥಂ ॥೨೫॥ ಬಳಿಕೀ ಪ್ರಕಾರಮಾದ ಪಂಚಯಜ್ಞಗಳಿಂದಾವಾತ ಭಕ್ತಿಯಿಂ ಶಿವನ ಪೂಜಿಸುತ್ತಿಹನು ಆತಂ ಭಕ್ತನೆಂದು ಪೇಳುತಿರ್ದಪಂ.

ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಮ್
ಭಕ್ತ್ಯಾ ಪರಮಯಾ ಯುಕ್ತಸ್ಸ ವೈ ಭಕ್ತ ಇತೀರಿತಃ ॥

ಈ ಪ್ರಕಾರಮಾದ ಪಂಚಯಜ್ಞದಿಂದಾವಾತ ಶಿವನಂ ನವವಿಧಭಕ್ತಿಯಿಂ ಪೂಜಿಸುತ್ತಿಹನು ಆತಂ ಶಿವಭಕ್ತನೆಂದು ಪ್ರಸಿದ್ಧವೆಂಬುದರ್ಥಂ ॥ ೨೬॥ ಬಳಿಕಿಂಥಾ ಶಿವಭಕ್ತನ ಪೂಜಿಸಿದಲ್ಲಿ ಸದ್ಗತಿ. ಅವಮಾನವ ಮಾಡಿದಲ್ಲಿ ಘೋರನರಕವೆಂದು ಪೇಳುತಿರ್ದಪಂ.

ಪೂಜನಾಚ್ಛಿವಭಕ್ತಸ್ಯ ಪುಣ್ಯಾ ಗತಿರವಾಪ್ಯತೇ
ಅವಮಾನಾನ್ಮಹಾಘೋರೋ ನರಕೋ ನಾತ್ರ ಸಂಶಯಃ ॥

ಶಿವಭಕ್ತನ ಪೂಜಿಸಿದರಿಂದ ಪುಣ್ಯಗತಿ ಪ್ರಾಪ್ತವಹುದು. ಅವಮಾನವ ಮಾಡಿದರಿಂದ ಮಹಾಘೋರ ನರಕವಹುದು. ಇಲ್ಲಿ ಸಂದೇಹವಿಲ್ಲವೆಂಬುದರ್ಥಂ ॥೨೭॥ ಬಳಿಕ ಶಿವಭಕ್ತಂಗೆ ವಿಧಿಯಾ ವಿಧಿಯುಮಂ ಪೇಳುತಿರ್ದಪಂ.

ಶಿವಭಕ್ತೋ ಮಹಾತೇಜಾಃ ಶಿವಭಕ್ತಿ ಪರಾಙ್ಮುಖಾನ್
ನ ಸ್ಪೃಶೇನ್ನೈವ ವೀಕ್ಷೇತ ನ ತೈಸ್ಸಹವಸೇತ್ಕ್ವಚಿತ್ ॥

ಶಿವಭಕ್ತನು ಮಹಾತೇಜಸ್ಸುಳ್ಳವನಾದ ಕಾರಣದಿಂ ಶಿವಭಕ್ತರಲ್ಲದವರ ದರ್ಶನ ಸಹವಾಸವ ನೋಡುವೇಳೆಯಲ್ಲಿ ಮಾಡಲಾಗದು. ಯತ್ತಲಾನು ಮಾಡಿದನಾದರೆ ತೇಜೋಮಾಂದ್ಯವಾಹದೆಂಬುದರ್ಥಂ ॥೨೮॥ ಬಳಿಕ ವಿಧೇಯಮಂ ಪೇಳುತಿರ್ದಪಂ.

ಯದಾ ದೀಕ್ಷಾ ಪ್ರವೇಶಸ್ಸ್ಯಾಲ್ಲಿಂಗಧಾರಣಪೂರ್ವಕಮ್
ತದಾ ಪ್ರಭೃತಿ ಭಕ್ತೋಽಸೌ ಪೂಜಯೇತ್ ಸ್ವಾಗಮಸ್ಥಿತಾನ್ ॥

ಲಿಂಗದೀಕ್ಷಾ ನಂತರದಲ್ಲಿ ಭಕ್ತನಾದವನು ವೀರಶೈವಾಗಮನಿಷ್ಠರಾದವರ ಪ್ರತಿದಿನಂ ಪೂಜಿಸೂದೆಂಬುದರ್ಥಂ ॥೨೯॥

ಸ್ವಮಾರ್ಗಾಚಾರನಿರತೈಃ ಸಹವಾಸಂ ಸಮಾಚರೇತ್
ತೇಷಾಂ ಗೃಹೇಷು ಭುಂಜೀತಾ ನೇತರೇಷಾಂ ಕದಾಚನ॥

ಸ್ವಮಾರ್ಗಾಚಾರ ನಿರತೈಃ- ತನ್ನಾಚಾರ ಮಾರ್ಗದಲ್ಲಿರುತ್ತಂ ಇದ್ದವರುಗಳೊಡನೆ, ಸಹವಾಸಂ ಸಮಾಚರೇತ್- ಕೂಡಿರಬೇಕು, ತೇಷಾಂ- ಆ ಶಿವಭಕ್ತರುಗಳ, ಗೃಹೇಷು- ಮನೆಗಳಲ್ಲಿ, ಭುಂಜಿತ್ವಾ- ಭೋಜನವ ಮಾಡಬೇಕು, ಇತರೇಷಾಂ- ಉಳಿದವರ ಗೃಹದಲ್ಲಿ, ಕದಾಚನ ಒಂದು ಬಾರಿಯು, ನ -ಭೋಜನವ ಮಾಡಲಾಗದು॥೩೦॥*

ಸ್ವಮಾರ್ಗಾಚಾರವಿಮುಖೈರ್ಭವಿಭಿಃ ಪ್ರಾಕೃತಾತ್ಮಭಿಃ
ಪ್ರೇಷಿತಂ ಸಕಲಂ ದ್ರವ್ಯಮಾತ್ಮಲೀನಮಪಿ ತ್ಯಜೇತ್ ॥

ವೀರಶೈವಾಚಾರಶೂನ್ಯರಾದ ಪ್ರಾಕೃತರಾದ ಭವಿಗಳಿಂ ಕಳುಹಿಸಲ್ಪಟ್ಟ ವಸ್ತು ಸ್ವಾಧೀನವಾದರೂ ಆ ವಸ್ತು ಬಿಡುವದೆಂಬುದರ್ಥಂ ॥೩೧॥

ನಾರ್ಚಯೇದನ್ಯದೇವಾಂಸ್ತು ನ ಸ್ಮರೇನ್ನ ಚ ಕೀರ್ತಯೇತ್
ನ ತನ್ನಿವೇದ್ಯಮಶ್ನೀಯಾಚ್ಛಿವಭಕ್ತೋ ದೃಢವ್ರತಃ ॥

ವಿರಕ್ತ ವ್ರತವುಳ್ಳ ಶಿವಭಕ್ತನು ವಿಷ್ಣ್ವಾದಿ ದೇವರಂ ಪೂಜಿಸಲಾಗದು ನೆನೆಸಲಾಗದು ಸ್ತುತಿಸಲಾಗದು. ತನ್ನೈವೇದ್ಯವನು ಸ್ವೀಕರಿಸಲಾಗದೆಂಬುದರ್ಥಂ ॥೩೨॥

ಯದ್ಗೃಹೇಷ್ವನ್ಯದೇವೋಽಸ್ತಿ ತದ್ಗೃಹಾಣಿ ಪರಿತ್ಯಜೇತ್
ನಾನ್ಯ ದೇವಾರ್ಚಕಾನ್ಮರ್ತ್ಯಾನ್ ಪೂಜಾಕಾಲೇ ನಿರೀಕ್ಷಯೇತ್॥

* ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ಯಾವಾತನ ಮನೆಯಲ್ಲಿ ವಿಷ್ಣ್ವಾದ್ಯನ್ಯ ದೇವರ್ಕಳುಂಟು ಆ ಗೃಹಂಗಳ ಹೊಗಲಾಗದು. ಶಿವಪೂಜಾಕಾಲದಲ್ಲಿ ಅನ್ಯದೇವಪೂಜಕರು ಬಂದರೆ ಅವರಂ ನೋಡಲಾಗದೆಂಬುದರ್ಥಂ ||೩೩||

ಸದಾ ಶಿವೈಕನಿಷ್ಠಾನಾಂ ವೀರಶೈವಾಧ್ವವರ್ತಿನಾಮ್
ನ ಹಿ ಸ್ಥಾವರಲಿಂಗಾನಾಂ ನಿರ್ಮಾಲ್ಯಾದ್ಯುಪಯುಜ್ಯತೇ ||

ಎಲ್ಲಾಗಳು ಶಿವಲಿಂಗ ಒಂದರಲ್ಲಿಯೆ ನಿಷ್ಠೆಯುಳ್ಳ ವೀರಶೈವಮಾರ್ಗವರ್ತಿಗಳಿಗೆ ದೇವರ್ಷಿ ಮನುಷ್ಯ ಪ್ರತಿಷ್ಠಿತಮಾದ ಸ್ಥಾವರಲಿಂಗನಿರ್ಮಾಲ್ಯ ಸಲ್ಲವೆಂಬುದು ಪ್ರಸಿದ್ಧಮೆಂಬುದರ್ಥಂ ||೩೪|| ಹಾಗಾದರೆ ಅಂಥ ಸ್ಥಾವರಲಿಂಗಗಳಿಗೆ ಅಪಾಯ ಪ್ರಾಪ್ತಮಾದರೆ ಉದಾಸೀನವಾಗಬಹುದೋ ಏನೆಂಬಲ್ಲಿ ಪೇಳುತಿರ್ದಪಂ.

ಯತ್ರ ಸ್ಥಾವರಲಿಂಗಾನಾಮಪಾಯಃ ಪರಿವರ್ತತೇ
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರಿಣಾಮ್ ||

ತತ್ರ ಪ್ರಾಣಾನ್ಪಿಹಾಯ್ಯಾಪಿ ಪರಿಹಾರಂ ಸಮಾಚರೇತ್
ಶಿವಾರ್थಂ ಮುಕ್ತಜೀವೇಶ್ಚೇಚ್ಛಿವಸಾಯುಜ್ಯಮಾಪ್ನುಯಾತ್ ||

ಯಾವ ಸ್ಥಲದಲ್ಲಿ ಸ್ಥಾವರಲಿಂಗಗಳಿಗೆ ವಿಘ್ನ ಬಂದರೆ ಗಜಾಜಿನ ಗಂಗಾ ಕಪಾಲ ಕಂಕಾಳ ದಗ್ಧಕಾಮ ಕಾಲಪುರಭಸ್ಮ ಸದೃಶ ಕ್ವಥಾ ಕಮಂಡಲ ಭಿಕ್ಷಾಪಾತ್ರ ದಂಡ ಭಸ್ಮ ಘಟಿಕಾರೂಪ ಶಿವಲಾಂಛನಧಾರಿಗಳಾದ ಜಂಗಮದೇವರುಗಳಿಗೆ ಅಪಾಯ ಬಂದರೆ ಪೇಳಲ್ಪಟ್ಟ ನವವಿಧ ಭಕ್ತಿಯುಳ್ಳ ಶಿವಭಕ್ತರಿಗಾದರೂ ವಿಪತ್ತು ಬಂದರೆ ಅಲ್ಲಿ ಪಾರ್ವತಿ ದೇವಿಯರು ಮಾಡಿದ ಆಚಾರದಿಂದ ಪ್ರಾಣವನಾದರೂ ಬಿಟ್ಟು ಪರಿಹರಿಸೂದು ಶಿವಾರ್ಥವಾಗಿ ಪ್ರಾಣವ ಬಿಟ್ಟಾರೆಂದು ಮರಣದೋಷವಿಲ್ಲ. ಶಿವಸಾಯುಜ್ಯವನೆ ಪಡೆವನೆಂಬುದರ್ಥಂ ||೩೬|| ಬಳಿಕ ವೀರಭದ್ರಾಚಾರ ಬಸವೇಶ್ವರಾಚಾರಮಂ ಸೂಚಿಸುತ್ತ ಶಿವಭಕ್ತರಾಚಾರಭೇದಮಂ ಪ್ರತಿಪಾದಿಸುತಿರ್ದಪಂ.

ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ಯದ್ಯಕ್ಷಮೋಭವೇತ್ ||

ಶಿವನಿಂದಕನಂ ಕಂಡರೆ ಕೊಲ್ಲೋದು ಆಗದಿದ್ದರೆ ಶಪಿಸೂದು ಎರಡರಲ್ಲಿಯೂ ಅಸಮರ್ಥನಾದರೆ ಆ ಸ್ಥಾನವ ಬಿಟ್ಟು ಹೋಹದೆಂಬುದರ್ಥಂ || ೩೭||

ಯತ್ರ ಚಾಚಾರನಿಂದ್ಯಾಸ್ತಿ ಕದಾಚಿತ್ತತ್ರ ನ ವ್ರಜೇತ್
ಯದ್ಗೃಹೇ ಶಿವನಿಂದ್ಯಾಸ್ತಿ ತದ್ಗೃಹಾಣಿ ಪರಿತ್ಯಜೇತ್ ||

ಯಾವ ಸ್ಥಾನದಲ್ಲಿ ಶಿವಾಚಾರನಿಂದೆಯುಂಟಾಗಿರುವುದು ಆ ಸ್ಥಾನದಲ್ಲಿ ಒಂದು ಸಾರಿಯೂ ಹೊಗಲಾಗದು. ಯಾವ ಗೃಹಂಗಳಲ್ಲಿ ಶಿವನಿಂದೆಯುಂಟಾಗಿರುವುದು ಆ ಗೃಹಂಗಳ ಬಿಡುವದೆಂಬುದರ್ಥಂ ||೩೮|| ಬಳಿಕ ಶಿವನಿಂದಕನಿಗೆ ಪ್ರಾಯಶ್ಚಿತ್ತಮುಂಟೋ ಎಂಬಲ್ಲಿ ಪೇಳುತಿರ್ದಪಂ.

ಯಸ್ಸರ್ವಭೂತಾಧಿಪತಿಂ ವಿಶ್ವೇಶಾನಂ ವಿನಿಂದತಿ
ನ ತಸ್ಯ ನಿಷ್ಕೃತಿಶ್ಶಕ್ಯಾ ಕರ್ತುಂ ವರ್ಷ ಶತೈರಪಿ ॥

ಈಶ್ವರಸ್ಸರ್ವಭೂತಾನಾಂ ಎಂಬ ಶ್ರುತಿಯಿಂ ಸಕಲ ಪ್ರಾಣಿಗಳಿಗೂ ಪತಿಯಾದ ಸರ್ವೇಶ್ವರನ ಯಾವಾತ ನಿಂದಿಸುತ್ತಿಹನು ಅವಂಗೆ ಅನೇಕ ಕೋಟಿ ವರ್ಷಂಗಳಿಂದಲೂ ಪ್ರಾಯಶ್ಚಿತ್ತಂ ಮಾಡಲು ಶಕ್ಯವಲ್ಲ, ಬ್ರಹ್ಮವರ್ಷಪರಿಯಂತರವೂ ನರಕವೆ ಸರಿ ಎಂಬುದರ್ಥಂ ॥೩೯॥ ಬಳಿಕ ಶಿವಭಕ್ತಂಗನ್ಯದೇವತಾಸ್ಮರಣಾದಿಗಳು ಯೋಗ್ಯವಲ್ಲವೆಂದಡೆ ಸಂಧ್ಯಾವಂದನಾದಿ ಪೂರ್ವಕರ್ಮಕ್ಕೇನು ಗತಿ, ಅದು ಸೂರ್ಯ ಮೊದಲಾದ ಅನ್ಯದೇವತೋಪಾಸನರೂಪಮಾದಂಥಾದೆಂಬಲ್ಲಿ ಪೇಳುತಿರ್ದಪಂ.

ಶಿವಪೂಜಾಪರೋ ಭೂತ್ವಾಪೂರ್ವಕರ್ಮ ವಿವರ್ಜಯೇತ್
ಅಥವಾ ಪೂರ್ವಕರ್ಮಸ್ಯಾತ್ಸಾಪೂಜಾ ನಿಷ್ಫಲಾ ಭವೇತ್ ॥

ಶಿವಲಿಂಗದೀಕ್ಷಾಯುಕ್ತನಾಗಿ ಶಿವಪೂಜಾನಿಷ್ಠನಾದವನು ಪೂರ್ವಕರ್ಮಂಗಳ ಬಿಡುವುದು ಎತ್ತಲಾನು ಪೂರ್ವಕರ್ಮವುಳ್ಳವನಾದರೆ ಅವನ ಶಿವಲಿಂಗಪೂಜೆ ವ್ಯರ್ಥಮೆಂಬುದರ್ಥಂ ॥೪೦॥ ಬಳಿಕಿಷ್ಟು ಮಾತ್ರವೆ ಅಲ್ಲ ಪಾತಿತ್ಯವುಂಟಹುದೆಂದು ಪೇಳುತಿರ್ದಪಂ.

ಉತ್ತಮಾಂವೃತ್ತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ
ಆರೂಢಪತಿತೋಜ್ಞೇಯಸ್ಸರ್ವಕರ್ಮಬಹಿಷ್ಕೃತಃ ॥

ಉತ್ತಮವಾದ ಶಿವಲಿಂಗದೀಕ್ಷೆಯಂ ಪಡೆದು ಶಿವಲಿಂಗವನಾಶ್ರಯಿಸಿ ನಿಕೃಷ್ಟಮಾದ ಸೂರ್ಯಾದನ್ಯದೇವತೋಪಾಸ್ತೆಯ ಮಾಡಿದನಾದರೆ ಅವಂ ಸಕಲಕರ್ಮ ಪರಿಭ್ರಷ್ಟನಾದ ಆರೂಢಪತಿತನೆಂದು ತಿಳಿಯಲು ಯೋಗ್ಯಮೆಂಬುದರ್ಥಂ ॥೪೧॥ ಬಳಿಕ ಪಂಚಾಕ್ಷರೀ ಜಪಶೀಲನಾದ ಶಿವಭಕ್ತಂ ನರಸ್ತುತಿ ಮಾಡಲಾಗದೆಂದು ಪೇಳುತಿರ್ದಪಂ. ಪಂಚಾಕ್ಷರೋಪ ದೇಶೀ ಚ ನರಸ್ತುತಿಮಾಡಲಾಗದೆಂದು ಪೇಳುತಿರ್ದಪಂ.

ಪಂಚಾಕ್ಷರೋಪದೇಶೀ ಚ ನರಸ್ತುತಿಕರೋ ಯದಿ
ಸೋऽಲಿಂಗೀ ಸ ದುರಾಚಾರೀ ಕುಕವಿಸ್ಸ ತು ವಿಶ್ರುತಃ ॥

ಪ್ರಣವಪಂಚಾಕ್ಷರೀಮಂತ್ರೋಪದೇಶವುಳ್ಳ ಶಿವಭಕ್ತನು ಎತ್ತಲಾನು ನರಸ್ತುತಿಯ ಮಾಡಿದನಾದರೆ ಆತಂ ಲಿಂಗರಹಿತನು, ದುರಾಚಾರಿಯು, ದುರ್ಬುದ್ಧಿಯು, ಹೋಗಲ್ಪಟ್ಟ ಶಾಸ್ತ್ರ ಶ್ರವಣವುಳ್ಳವನೆಂಬುದರ್ಥಂ ॥೪೨॥

ಚರ್ಮಪಾತ್ರೇ ಜಲಂ ತೈಲಂ ನ ಗ್ರಾಹ್ಯಂ ಭಕ್ತಿತತ್ಪರೈಃ
ಗೃಹ್ಯತೇ ಯದಿ ಭಕ್ತೇನ ರೌರವಂ ನರಕಂ ವ್ರಜೇತ್ ॥

ಶಿವಭಕ್ತಿತತ್ಪರರು ಚರ್ಮಪಾತ್ರೆಯಲ್ಲಿ ಜಲವನು, ಎಣ್ಣೆಯನು ತುಂಬಿಕೊಂಡು ಅಂಗೀಕರಿಸಲಾಗದು. ಶಿವಭಕ್ತನಾದವ ಎತ್ತಲಾನು ಅಂಗೀಕರಿಸಿದನಾದಡೆ ರೌರವವೆಂಬ

ನರಕವನ್ನೈದುವನೆಂಬುದರ್ಥಂ ||೪೩|| ಬಳಿಕ ಲಿಂಗಿಗಳಿಂ ಪೂರ್ವಕರ್ಮ ಬಿಡಲ್ತಕ್ಕದಾದಡೆ ಜಾತ ಶೌಚಾದಿಗಳಿಗೆ ಏನು ಗತಿಯೆಂಬಲ್ಲಿ ಪೇಳುತಿರ್ದಪಂ.

ನ ತಸ್ಯ ಸೂತಕಂ ಕಿಂಚಿತ್ಪ್ರಾಣಲಿಂಗಾಂಗಸಂಗಿನಃ
ಜನ್ಮನೋತ್ಥಂ ಮೃತೋತ್ಥಂ ಚ ವಿದ್ಯತೇ ಪರಮಾರ್ಥತಃ ||

ಪ್ರಾಣಲಿಂಗಾಂಗಸಂಗಿಯಾದ ಶಿವಭಕ್ತನಿಗೆ ಜಾತಶೌಚ ಸಹ ಒಂದಿಷ್ಟು ಇಲ್ಲವೆಂಬುದರ್ಥಂ ||೪೪|| ಬಳಿಕ ಸ್ತ್ರೀಯರಿಗೆ ರಜಸ್ಸೂತಕ ಇಲ್ಲವೊ ಎಂಬಲ್ಲಿ ಪೇಳುತಿರ್ದಪಂ.

ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಮ್
ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ ||

ಲಿಂಗಪೂಜೆಯುಳ್ಳ ಸ್ತ್ರೀಯರಿಗೆ ರಜಸ್ಸೂತಕವು ಇಲ್ಲ ಹಾಗೆ ಶಿಶುಪ್ರಸೂತಿಯಿಂದುಂಟಾದ ಸೂತಕವು ಇಲ್ಲವೆಂಬುದರ್ಥಂ ||೪೫|| ಹಾಗಾದರೆ ಗೃಹಸೂತಕಕ್ಕೇನು ಗತಿ ಎಂಬಲ್ಲಿ ಪೇಳುತಿರ್ದಪಂ.

ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ
ಶಿವಪಾದಾಂಬುಸಂಸ್ಪರ್ಶಾತ್ಸರ್ವಪಾಪಂ ಪ್ರಣಶ್ಯತಿ ||

ಯಾವಾತನ ಗೃಹದಲ್ಲಿ ಸ್ತ್ರೀ ಋತಳಾದಡೆ ಆ ಗೃಹದಲ್ಲಿ ಸೂತಕವಿಲ್ಲವೆ ಅದೆಂತೆಂದಡೆ ಆ ಗೃಹದಲ್ಲಿ ಶಿವಪಾದೋದಕಸ್ಪರ್ಶನ ಉಂಟಾಗಿರುವುದರಿಂದಲೂ ಲಿಂಗಾರ್ಚನರತಾ ನಾರೀ ಸೂತಕೀ ತು ರಜಸ್ವಲಾ ರವಿರಗ್ನಿರ್ಯಥಾವಾಯುಸ್ತದ್ವತ್ಕೋಟಿ ಶುಚಿರ್ಭವೇತ್ ಎಂಬ ಶಿವಾಗಮವಚನದಿಂದಲೂ ಯಾವ ದೋಷವು ಇಲ್ಲವೆಂಬುದರ್ಥಂ ||೪೬|| ಬಳಿಕ ಪೂರ್ವದಲ್ಲಿ ಮಾಡುತ್ತಿದ್ದ ಶಿವಕ್ಷೇತ್ರ ತೀರ್ಥಯಾತ್ರಾದಿಗಳು ಬಿಡಲ್ತಕ್ಕದೋ ಏನು ಎಂಬಲ್ಲಿ ಪೇಳುತಿರ್ದಪಂ

ಶಿವಸ್ಥಾನಾನಿ ತೀರ್ಥಾನಿ ವಿಶಿಷ್ಟಾನಿ ಶಿವಾರ್ಚಕಃ
ಶಿವಯಾತ್ರೋತ್ಸವಂ ನಿತ್ಯಂ ಸೇವೇತ ಪರಯಾ ಮುದಾ ||

ಇಷ್ಟಲಿಂಗಪೂಜಕನಾದ ಶಿವಭಕ್ತನು ಶ್ರೇಷ್ಠಮಾದ ಶ್ರೀಶೈಲಾದಿಕ್ಷೇತ್ರಂಗಳಂ ತ್ರಿಮಕುಟ ಮೊದಲಾದ ತೀರ್ಥಂಗಳಂ ಶಿವಯಾತ್ರೋತ್ಸವಮಂ ಎಲ್ಲಾಗಳು ಸಂತೋಷದಿಂ ಸೇವಿಸೂದೆಂಬುದರ್ಥಂ ||೪೭||

ಶಿವಕ್ಷೇತ್ರೋತ್ಸವಮಹಾಯಾತ್ರಾದರ್ಶನಕಾಂಕ್ಷಿಣಾಮ್
ಮಾರ್ಗೇsನ್ನಪಾನದಾನಂ ಚ ಕುರ್ಯಾನ್ಮಾಹೇಶ್ವರೋ ಜನಃ

ಶಿವಕ್ಷೇತ್ರೋತ್ಸವಂಗಳ ಜಾತ್ರೆ ನೋಡುವಿಚ್ಛೆಯುಳ್ಳವರಾಗಿ ಹೋಗುವ ಜನರಿಗೆ ಮಾಹೇಶ್ವರನಾದ ಶಿವಭಕ್ತನು ಮಾರ್ಗದಲ್ಲಿ ಅನ್ನೋದಕದಾನವ ಮಾಡುವುದೆಂಬುದರ್ಥಂ ||೪೮|| ಇಲ್ಲಿ ವಸ್ತ್ರಾದಿ ದಾನಂಗಳಂ ಬಿಟ್ಟು ಅನ್ನೋದಕದಾನವ ಏನು ಕಾರಣ ಪೇಳಲ್ಪಟ್ಟಿತ್ತೆಂಬಲ್ಲಿ ಪೇಳುತಿರ್ದಪಂ.

ನಾನ್ನತೋಯಸಮಂ ದಾನಂ ನ ಚಾಹಿಂಸಾ ಪರಂ ತಪಃ
ತಸ್ಮಾನ್ಮಾಹೇಶ್ವರೋ ನಿತ್ಯಮನ್ನತೋಯಪ್ರದೋ ಭವೇತ್ ॥

ಅನ್ನೋದಕಕ್ಕೆ ಸಮಾನವಾದ ದಾನವೆ ಇಲ್ಲ ಅಹಿಂಸೆಗೆ ಸಮಾನವಾದ ತಪಸ್ಸು ಇಲ್ಲ ಅದು ಕಾರಣವಾಗಿ ಶಿವಭಕ್ತನು ಜೀವದಾನರೂಪಮಾದ ಕಾರಣದಿಂದನ್ನತೋಯ ದಾನ ನಿರತನಾಗಬೇಕೆಂಬುದರ್ಥಂ ॥೪೯॥ ಹಾಗಾದರೆ ಕನ್ಯಾದಾನವು ಯಾರಿಗಾದರೂ ಕೊಡಲ್ತಕ್ಕದೋ ಏನೆಂಬಲ್ಲಿ ಪೇಳುತಿರ್ದಪಂ.

ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಸ್ಸದಾವ್ರತೀ
ದದ್ಯಾತ್ತೇಭ್ಯಸ್ಸಮಾದದ್ಯಾತ್ ಕನ್ಯಾಂ ಕುಲಸಮುದ್ಭವಾಮ್ ॥

ನಿರಂತರವೂ ಶಿವಾಚಾರವ್ರತವುಳ್ಳ ಶಿವಭಕ್ತನು ವೀರಶೈವಾಚಾರಮಾರ್ಗವರ್ತಿಗಳಾದ ಸ್ವಜಾತಿಯ ಶಿವಭಕ್ತರಿಗೆ ತನ್ನ ಕುಲದಲ್ಲಿ ಹುಟ್ಟಿದ ಕನ್ನಿಕೆಯಂ ಕೊಡುವುದು ಅಂಥಾ ಶಿವಭಕ್ತರತ್ತಣಿಂದಲೆ ತಾಹದೆಂಬುದರ್ಥಂ ॥೫೦॥ ಈ ಪ್ರಕಾರದಿಂ ಬಹು ವಿಧಮಾದ ಶಿವಾಚಾರಯುಕ್ತನಾದ ವೀರವ್ರತಿಶಿವಭಕ್ತನು ಶ್ರೀ ಗುರುವನು ಶಿವಲಿಂಗವನು ಪೂಜಿಸೂದೆಂದುಭಯಸ್ಥಲಮಂ ಸೂಚಿಸುವಾತನಾಗಿ ಭಕ್ತಸ್ಥಲಮಂ ಮುಗಿಸುತಿರ್ದಪಂ.

ಏವಮಾಚಾರಸಂಯುಕ್ತೋ ವೀರಶೈವೋ ಮಹಾವ್ರತೀ
ಪೂಜಯೇತ್ಪರಯಾ ಭಕ್ತ್ಯಾ ಗುರುಂ ಲಿಂಗಂ ಚ ಸಂತತಂ ॥

ಈ ಪ್ರಕಾರಮಾದ ಶಿವಾಚಾರಸಂಪನ್ನನಾದ ವೀರಶೈವಮಹಾವ್ರತಿಯು ಉತ್ಕೃಷ್ಟಮಾದ ಭಕ್ತಿಯಿಂದ ಎಲ್ಲಾಗಳು ಶ್ರೀಗುರುವನೂ ಶಿವಲಿಂಗವನೂ ಪೂಜಿಸೂದೆಂಬುದರ್ಥಂ ॥೫೧॥

## ೧೦ ಉಭಯಸ್ಥಲ

ಬಳಿಕ ಉಭಯಸ್ಥಲಮಂ ನಿರೂಪಿಸಲೋಸ್ಕರಂ ಯಸ್ಯದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ಹಿಂಗೆಂಬ ಶ್ವೇತಾಶ್ವತರಶ್ರುತಿಯಿಂ ಶ್ರೀಗುರುಗಳಿಗೆ ಭೇದಮಂ ಸೂತ್ರದ್ವಯದಿಂ ನಿರೂಪಿಸುತಿರ್ದಪಂ ॥

ಗುರೋರಭ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಶ್ಶಿವಃ
ತಯೋರ್ನಾಸ್ತಿ ಭಿದಾ ಕಿಂಚಿದೇಕತ್ವಾತ್ತತ್ತ್ವರೂಪತಃ ॥

ಯಥಾ ದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ
ತಥಾ ಗುರುವರೇ ಕುರ್ಯಾದುಪಚಾರಾನ್ ದಿನೇ ದಿನೇ ॥

ಗುರುವ ಪೂಜಿಸುವರಿಂದ ಪ್ರತ್ಯಕ್ಷ ಶಿವನೆ ಪೂಜಿಸಲ್ಪಟ್ಟನು. ಶಿವಗುರುಗಳಿಗೆ ಪರಮಾರ್ಥ ಪರಮದರ್ಶನದತ್ತಣಿಂ ಏಕರೂಪನಾದಹತನದಿಂದಿಷ್ಟಾದರು ಭೇದವಿಲ್ಲ. ಅದು ಕಾರಣವಾಗಿ ಸರ್ವಜಗನ್ನಾಯಕನಾದ ಸರ್ವಾನುಗ್ರಾಹಕನಾದ ಶಿವನಲ್ಲಿ ಹೇಗೆ ಉಪಚಾರಗಳ ಮಾಡುತ್ತಿಹನು ಹಾಗೆ ಗುರುಶ್ರೇಷ್ಠನಾದ ಶ್ರೀಗುರುವಿನಲ್ಲಿ ಭಕ್ತ್ಯಾದುಪಚಾರಂಗಳಂ ಪ್ರತಿದಿವಸದಲ್ಲೂ ಭಕ್ತನಾದವ ಮಾಡೂದೆಂಬುದರ್ಥಂ ॥೫೨॥ ಬಳಿಕ

ಶ್ರೀಗುರುವಿಗೂ ಶಿವನಿಗೂ ಅಭೇದವಾದರೆ ಶಿವನಂತೆ ಗುರುವೂ ಪ್ರತ್ಯಕ್ಷವಾಗಲೆಂದು ಶಂಕೆ ಪ್ರಸಕ್ತಮಾದಲ್ಲಿ ಉತ್ತರಮಂ ಪೇಳುತಿರ್ದಪಂ.

ಅಪ್ರತ್ಯಕ್ಷೋ ಮಹಾದೇವಸ್ಸರ್ವೇಷಾತ್ಮಮಾಯಯಾ
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ ॥

ಪರಮೇಶ್ವರನು ತನ್ನ ಮಾಯಾಶಕ್ತಿಯಿಂ ಸಕಲರಿಗೂ ಪ್ರತ್ಯಕ್ಷನಾದರೂ ಭಕ್ತಿ ಸಿದ್ಧ್ಯರ್ಥವಾಗಿ ಗುರುರೂಪದಿಂ ಪ್ರತ್ಯಕ್ಷವಾಗಿಹನೆಂಬುದರ್ಥಂ ॥೫೩॥ ಹಾಗಾದರೆ ಶಿವನಂತೆ ಗುರುವಿಷ್ಟಾರ್ಥವ ಕೊಡುವುದಿಲ್ಲವಲ್ಲ, ಅದರಿಂದೀತನ ಏಕೆ ಪೂಜಿಸಬೇಕೆಂಬಲ್ಲಿ ಪೇಳುತಿರ್ದಪಂ.

ಶಿವಜ್ಞಾನಂ ಮಹಾಘೋರಸಂಸಾರಾರ್ಣವತಾರಕಮ್
ದೀಯತೇ ಯೇನ ಸ ಗುರುಃ ಕಸ್ಯ ವಂದ್ಯೋ ನ ಜಾಯತೇ ॥

ಯಾವನಾನೊಬ್ಬ ಗುರುವಿನಿಂ ಮಹಾಭಯಂಕರವಾದ ಸಂಸಾರಸಮುದ್ರವ ದಾಟಿಸುವಂಥಾ ಶಿವಜ್ಞಾನ ಉಪದೇಶಿಸಲ್ಪಡುತ್ತಿಹುದು ಆ ಗುರು ಯಾವನಿಂ ವಂದಿಸಲು ಯೋಗ್ಯನಾಗಿರುವನೋ ಜನನ ಮರಣ ಪರಿಪೀಡಿತರಾದ ಸಕಲ ಜನರಿಂದಲೂ ವಂದನೆ ಸರಿಯೆಂಬುದರ್ಥಂ ॥೫೪॥ ಬಳಿಕ ಶಿವಜ್ಞಾನವೆಂಥಾದೆಂಬಲ್ಲಿ ಅವರ ಮಹತ್ವಪೂರ್ವಕವಾಗಿ ಪೇಳುತಿರ್ದಪಂ.

ಯತ್ಕಟಾಕ್ಷಕಲಾಮಾತ್ರಾತ್ಪರಮಾನಂದಲಕ್ಷಣಮ್
ಲಭ್ಯತೇ ಶಿವರೂಪತ್ವಂ ಸ ಗುರುಃ ಕೇನ ನಾರ್ಚ್ಯತೇ ॥

ಯಾವನಾನೊಬ್ಬ ಶ್ರೀಗುರುವಿನ ಕಟಾಕ್ಷಲೇಶಮಾತ್ರದಿಂ ಪರಮಾನಂದ ರೂಪನಾದ ಸ್ವಾತ್ಮಶಿವತತ್ತ್ವವು ದಶಮದೃಷ್ಟಾಂತದಿಂ ಪ್ರಾಪ್ತಮಾಗುತ್ತಿಹದು ಅಂಥಾ ಗುರು ಯಾರಿಂದರ್ಚಿಸಲ್ಪಡನು ಮಾಯಾಮಹಿತರಾದ ಸಮಸ್ತರಿಂದಲೂ ಅರ್ಚಿಸಲ್ಪಡುವ ನೆಂಬುದರ್ಥಂ ॥೫೫॥ ಬಳಿಕ ಇಂಥ ಶ್ರೀಗುರುವಿಗೆ ಹಿತವನೆ ಆಚರಿಸಬೇಕು. ಆತನಾಜ್ಞೆಯ ಮೀರಲಾಗದೆಂದು ಹೇಳಿ ಉಭಯಸ್ಥಲಮಂ ಸೂತ್ರದ್ವಯದಿಂದ ಮುಗಿಸುತಿರ್ದಪಂ.

ಹಿತಮೇವಾಚರೇನ್ನಿತ್ಯಂ ಶರೀರೇಣ ಧನೇನ ಚ
ಆಚಾರ್ಯಸ್ಯೋಪಶಾಂತಸ್ಯ ಶಿವಜ್ಞಾನಮಹಾನಿಧೇಃ॥

ಗುರೋರಾಜ್ಞಾಂ ನ ಲಂಘೇತ ಸಿದ್ಧಿಕಾಮೀ ಮಹಾಮತಿಃ
ತದಾಜ್ಞಾಲಂಘನೇನಾಪಿ ಶಿವಾಜ್ಞಾಚ್ಛೇದಕೋ ಭವೇತ್ ॥

ರಾಗದ್ವೇಷರಹಿತನಾಗಿ ಶಿವಜ್ಞಾನಕ್ಕೆ ಸಮುದ್ರನಾದ ಶ್ರೀ ಗುರುವಿಗೆ ಶರೀರದಿಂದ ದ್ರವ್ಯದಿಂದ ಹಿತವನೆ ಆಚರಿಸೂದು. ನಿತ್ಯಾನಿತ್ಯವಸ್ತು ವಿವೇಕವುಳ್ಳವನಾಗಿ ಮೋಕ್ಷಾರ್ಥಿ ಯಾದ ಶಿಷ್ಯನಾತನಾಜ್ಞೆಯ ಮೀರಲಾಗದು. ಎತ್ತಲಾನು ಮೀರಿದರೆ ಶಿವನ ಆಜ್ಞಾಭಂಗವ ಮಾಡಿದನಹನು. ಅದರಿಂದ ನರಕವೆ ಪ್ರಾಪ್ತವಾಹುದೆಂಬುದರ್ಥಂ ॥೫೭॥

## ೧೧. ತ್ರಿವಿಧಸಂಪತ್ತಿಸ್ಥಲ

ಬಳಿಕ ತ್ರಿವಿಧಸಂಪತ್ತಿಸ್ಥಲಮಂ ನಿರೂಪಿಸುತಿರ್ದಪಂ.

ಯಥಾ ಗುರೌ ಯಥಾ ಲಿಂಗೇ ಭಕ್ತಿಮಾನ್ಪರಿವರ್ತತೇ
ಜಂಗಮೇ ಚ ತಥಾ ನಿತ್ಯಂ ಭಕ್ತಿಂ ಕುರ್ಯಾದ್ವಿಚಕ್ಷಣಃ ॥

ಪ್ರವೀಣನಾದ ಶಿವಭಕ್ತನು ಗುರುವಿನಲ್ಲಿಯೂ ಲಿಂಗದಲ್ಲಿಯೂ ಹೇಗೆ ಭಕ್ತಿಯುಳ್ಳವನಾಗಿರುವನೋ ಹಾಗೆ ಜಂಗಮದಲ್ಲಿಯೂ ಎಲ್ಲಾಗಳು ಭಕ್ತಿಯಂ ಮಾಡೂದೆಂಬುದರ್ಥಂ ॥೫೮॥ ಬಳಿಕ ಗುರುರೂಪದಿಂ ಶಿವನೆ ಅವತರಿಸಿದನೆಂದು ನಿರೂಪಿಸಿದ ಕಾರಣದಿಂ ಶಿವನಂತೆ ಗುರು ಪೂಜ್ಯನಾಗಲಿ ಜಂಗಮವನದೇನು ಕಾರಣ ಶಿವನಂತೆ ಪೂಜಿಸಬೇಕೆಂಬಲ್ಲಿ ಪೇಳುತಿರ್ದಪಂ.

ಏಕ ಏವ ಶಿವಸ್ಸಾಕ್ಷಾತ್ಸರ್ವಾನುಗ್ರಾಹಕಃ ಪ್ರಭುಃ
ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ ॥

ಅತೋಸ್ಮಿ ಲೋಕೇ ವೇದೇ ಚ ಪ್ರಸಿದ್ಧಃ ಪುರುಷೋತ್ತಮಃ ಹೀಗೆಂಬ ಗೀತ ವಚನದಿಂ ಲೋಕವೇದ ಪ್ರಸಿದ್ಧನಾಗಿ ಸರ್ವರಿಗೂ ಹಿತವನೆ ಮಾಡುವಂಥಾ ಸ್ವತಂತ್ರನಾದ ಶಿವನೊಬ್ಬನೆ ಶ್ರೀಗುರುಜಂಗಮಲಿಂಗಸ್ವರೂಪನಾಗಿ ಭೋಗಮೋಕ್ಷಂಗಳ ಕೊಡುತ್ತಿರುವನು. ಆ ಕಾರಣದಿಂ ಶಿವನಂತೆ ಜಂಗಮದಲ್ಲಿಯೂ ಭಕ್ತಿ ಮಾಡಲ್ತಕ್ಕದೆಂಬುದರ್ಥಂ ॥೫೯॥ ಬಳಿಕ ಲಿಂಗಾಪೇಕ್ಷೆಯಿಂ ಜಂಗಮಕ್ಕಾಧಿಕ್ಯಮಂ ಪೇಳಲೋಸ್ಕರ ಮೊದಲು ಲಿಂಗಸ್ವರೂಪಮಂ ಪ್ರಕಾಶಿಸುತಿರ್ದಪಂ.

ಲಿಂಗಂ ಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮನಾ
ಅಜಂಗಮೇ ಯಥಾ ಭಕ್ತಿರ್ಜಂಗಮೇ ಚ ತಥಾ ಸ್ಮೃತಾ॥

ಸ್ಥಿರ ಚರಭೇದದಿಂ ಶಿವಲಿಂಗಮಿತ್ತೆರನಾಗಿ ಪೇಳಲ್ಪಟ್ಟಿತ್ತು. ಅಲ್ಲಿ ಸ್ಥಿರಲಿಂಗದಲ್ಲಿ ಹೇಗೆ ಭಕ್ತಿ ಮಾಡಲ್ಪಡುತ್ತದೆ ಹಾಗೆ ಚರಲಿಂಗದಲ್ಲಿಯೂ ಭಕ್ತಿ ಮಾಡಲ್ತಕ್ಕದೆಂದೂ ನೆನೆಯಲ್ಪಟ್ಟಿತೆಂಬುದರ್ಥಂ ॥೬೦॥ ಬಳಿಕ ಸ್ಥಿರ ಚರ ಲಿಂಗಂಗಳ ಸ್ವರೂಪಮೆಂಥಾದೆಂಬಲ್ಲಿ ಪೇಳುತಿರ್ದಪಂ.

ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಮ್
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಮ್॥

ಮೃಚ್ಛಿಲಾದಿ ನಿರ್ಮಿತ ಲಿಂಗವಾವದುಂಟು ಅದು ಸ್ಥಿರಲಿಂಗವೆನಿಸಿಕೊಂಬುದು. ಶಿವಯೋಗಿಯೆಂದು ಪ್ರಸಿದ್ಧಮಾದ ಜಂಗಮಲಿಂಗವಾ ಮೃಚ್ಛಿಲಾದಿ ನಿರ್ಮಿತವಾದ ಸ್ಥಿರಲಿಂಗಾಪೇಕ್ಷೆಯಿಂ ಶ್ರೇಷ್ಠಮೆಂಬುದರ್ಥಂ ॥೬೧॥ ಬಳಿಕದೆಂತೆನೆ ಪೇಳುತಿರ್ದಪಂ.

ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ
ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ ॥

ಮೃಚ್ಛಿಲಾದಿ ನಿರ್ಮಿತವಾದ ಸ್ಥಿರಲಿಂಗದಲ್ಲಿ ಮಂತ್ರಸಂಸ್ಕಾರದತ್ತಣಿಂ ಶಿವನಿರುವನು. ಚರರೂಪಮಾದ ಜಂಗಮಲಿಂಗದಲ್ಲಿ ಶಿವನು ಯಲ್ಲಾಗಳು ಇರುತ್ತಲೆ ಇರುವನೆಂಬುದರ್ಥಂ ॥೬೨॥ ಅದು ಕಾರಣವಾಗಿ ಶಿವಯೋಗಿಯಂ ಕುರಿತು ಮಾಡಲ್ಪಟ್ಟ ದಾನ ಪೂಜಾಫಲಮಂ ಸೂತ್ರವೆರಡರಿಂ ಪೇಳುತಿರ್ದಪಂ.

ಶಿವಯೋಗಿನಿ ಯದ್ದತ್ತಂ ತದಕ್ಷಯಫಲಂ ಭವೇತ್
ತಸ್ಮಾತ್ಸರ್ವಪ್ರಯತ್ನೇನ ತಸ್ಮೈ ದೇಯಂ ಮಹಾತ್ಮನೇ ॥

ಯತ್ಫಲಂ ಲಭತೇ ಜಂತುಃ ಪೂಜಯಾ ಶಿವಯೋಗಿನಃ
ತದಕ್ಷಯಮಿತಿ ಪ್ರೋಕ್ತಂ ಸಕಲಾಗಮಪಾರಗೈಃ ॥

ದರ್ಶನಾದರ್ಚನಾತ್ತಸ್ಯ ತ್ರಿಸಪ್ತಕುಲ ಸಂಯುತಾಃ ಜನಾಃ ಮುಕ್ತಿಪದಂ ಯಾಂತಿ ಕಿಂ ಪುನಸ್ತತ್ಪರಾಯಣಾಃ ಹೀಗೆಂಬ ಯೋಗಜಾಗಮ ವಚನಾನುಸಾರದಿಂ ಶಿವಭಕ್ತಜನಂ ಶಿವಯೋಗೀಶ್ವರನ ಪೂಜೆಯಿಂ ಯಾವ ಫಲವ ಪಡೆವನು ಅದು ಅಕ್ಷಯವೆಂದೇ ಸಕಲ ಶಿವಾಗಮಪಾರಂಗತರಿಂ ಪೇಳಲ್ಪಟ್ಟಿತ್ತೆಂಬುದರಿಂದ ಯೋಗಿ ವಿಷಯದಲ್ಲಿ ಕೊಟ್ಟಂಥಾದು ಯಾವದುಂಟು ಅದು ಅಕ್ಷಯವಾದ ಫಲವುಳ್ಳದಾಹದು. ಅದು ಕಾರಣವಾಗಿ ಸಕಲ ಪ್ರಯತ್ನದಿಂ ಮಹಾಪುರುಷನಾದ ಆ ಶಿವಯೋಗಿಗೋಸ್ಕರ ತನ್ನ ಶಕ್ತ್ಯಾನುಸಾರವಾಗಿ ಕೊಟ್ಟು ಪೂಜಿಸೂದೆಂಬುದರ್ಥಂ ॥೬೪॥ ಬಳಿಕೀ ಪ್ರಕಾರದಿಂ ತತ್ಪೂಜಾಫಲಮಂ ಪೇಳಿದವಮಾನದ ಫಲಮಂ ಪ್ರಕಾಶಿಸುತಿರ್ದಪಂ.

ನಾವಮನ್ಯೇತ ಕುತ್ರಾಪಿ ಶಿವಯೋಗಿನಮಾಗತಮ್
ಅವಮಾನಾದ್ಭವೇತ್ತಸ್ಯ ದುರ್ಗತಿಶ್ಚ ನ ಸಂಶಯಃ ॥

ಒಳಗೆ ಹೊರಗೆ ಯಾವಲ್ಲಿಯಾದರೂ ಬಂದಂಥ ಶಿವಯೋಗಿಯನು ಉದಾಸೀನವ ಮಾಡಲಾಗದು. ಮಾಡಿದರೆ ಅವಂಗೆ ನರಕ ತಪ್ಪದೆಂಬುದರ್ಥಂ. ಅದು ಕಾರಣದಿಂ ಶಿವಯೋಗೀಶ್ವರನಂ ಪೂಜಿಸೂದೆಂದು ನುಡಿವುತ್ತ ತ್ರಿವಿಧಸಂಪತ್ತಿಸ್ಥಲಮಂ ಮುಗಿಸುತಿರ್ದಪಂ ॥ ೬೫॥

ಶಿವಯೋಗೀ ಶಿವಸ್ಸಾಕ್ಷಾದಿತಿ ಕೈಂಕರ್ಯಭಕ್ತಿತಃ
ಪೂಜಯೇದಾದರೇಣೈವ ಯಥಾ ಲಿಂಗಂ ಯಥಾ ಗುರುಃ ॥

ಶಿವಯೋಗೀಶ್ವರ ಪ್ರತ್ಯಕ್ಷ ಶಿವನೆ ಎಂದು ಭಯ ಭಕ್ತಿಯಿಂ ಪ್ರೀತಿಯಿಂ ಗುರುವನು ಲಿಂಗವನುಪೂಜಿಸುವಂತೆ ಪೂಜಿಸೂದೆಂಬುದರ್ಥಂ ॥೬೬॥

## ೧೨. ಚತುರ್ವಿಧಸಾರಾಯಸ್ಥಲ

ಬಳಿಕೀ ಗುರು ಲಿಂಗ ಜಂಗಮಂಗಳ ಪಾದೋದಕಸ್ವೀಕಾರ ರೂಪಮಾದ ಚತುರ್ವಿಧ ಸಾರಾಯಸ್ಥಲಮಂ ನಿರೂಪಿಸುತಿರ್ದಪಂ.

ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತುಃ
ತಥಾ ಶಿವಾತ್ಮನೋರ್ನಿತ್ಯಂ ಗುರುಜಂಗಮಯೋರಪಿ ॥

ಶಿವಲಿಂಗದ ಪಾದೋದಕವನೆಂತು ಭಕ್ತಿಯಿಂ ತೆಗೆದುಕೊಳ್ಳುತ್ತಿಹನು ಹಾಗೆ ಎಲ್ಲಾಗಳು ಶಿವಸ್ವರೂಪವಾದ ಗುರು ಜಂಗಮದೇವರುಗಳ ಪಾದೋದಕವನೂ ತೆಗೆದುಕೊಂಬುದರ್ಥಂ ॥೬೭॥ ಬಳಿಕ ಪಾದೋದಕಧಾರಣಸ್ವರೂಪ ನಿರೂಪಣ ಪೂರ್ವಕನಾಗಿ ಆ ಫಲಮಂ ಪೇಳುತಿರ್ದಪಂ.

ಸರ್ವಮಂಗಲಮಾಂಗಲ್ಯಂ ಸರ್ವಪಾವನಪಾವನಮ್
ಸರ್ವಸಿದ್ಧಿಕರಂ ಪುಂಸಾಂ ಶಂಭೋಃ ಪಾದಾಂಬುಧಾರಣಮ್ ॥

ಶಿವಲಿಂಗ ಚರಣತೀರ್ಥಧಾರಣಂ ಸಕಲ ಮಂಗಲಗಳಿಗೂ ಮಂಗಲವಾಗಿ ಸಕಲ ಪಾವನಕ್ಕೂ ಪಾವನವಾಗಿ ಜನರಿಗೂ ಭೋಗ ಮೋಕ್ಷವ ಕೊಡುವಂಥಾದೆಂಬುದರ್ಥಂ ॥೬೮॥ ಬಳಿಕ ನಿರ್ಮಾಲ್ಯ ಪತ್ರ ಪುಷ್ಪಧಾರಣ ಫಲಮಂ ಪೇಳುತಿರ್ದಪಂ.

ಶಿರಸಾಧಾರಯೇದ್ಯಸ್ತು ಪತ್ರಂ ಪುಷ್ಪಂ ಶಿವಾರ್ಪಿತಮ್
ಪ್ರತಿಕ್ಷಣಂ ಭವೇತ್ತಸ್ಯ ಪೌಂಡರೀಕಕ್ರಿಯಾಫಲಮ್ ॥

ಶಿವಲಿಂಗಕ್ಕೆ ಸಮರ್ಪಿಸಿದ ಪತ್ರೆ ಪುಷ್ಪಮಂ ಶಿರಸ್ಸಿನಿಂದ ಆವಾತ ಧರಿಸುವನು ಆತಂಗೆ ಪ್ರತಿಕ್ಷಣವು ಪೌಂಡರೀಕಯಾಗದ ಫಲಮುಂಟಹುದೆಂಬುದರ್ಥಂ ॥೬೯॥

ಶಿವಭಕ್ತಿ ವಿಹೀನಾನಾಂ ಜಂತೂನಾಂ ಪಾಪಕರ್ಮಣಾಂ
ವಿಶುದ್ಧೇ ಶಿವನಿರ್ಮಾಲ್ಯೇ ನಾಧಿಕಾರೋಽಸ್ತಿ ಕುತ್ರಚಿತ್॥

ಬಳಿಕ ಶಿವನಿರ್ಮಾಲ್ಯಂ ಧರಿಸಲು ಯೋಗ್ಯವಲ್ಲೆಂದು ಕ್ವಚಿತ್ಪುರಾಣಾದಿಗಳಲ್ಲಿ ಸ್ಮರಿಸಲ್ಪ ಡುತ್ತದೆ. ॥೭೦॥ ಅದರಿಂದೆಂತು ಗ್ರಾಹ್ಯವೆಂಬಲ್ಲಿ ಪೇಳುತಿರ್ದಪಂ.

ಭುಂಜೀಯಾದ್ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್
ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀಶ್ರುತಿಃ॥

ಶಿವಲಿಂಗಕ್ಕೆ ಸಮರ್ಪಿಸಿದ ನೈವೇದ್ಯಮಂ ಭುಂಜಿಸೂದು ಶಿವನಿಗೆ ಸಮರ್ಪಿಸಿದ ಉದಕವನೂ ಪಾನವ ಮಾಡೂದು ತತ್ಸಮರ್ಪಿತ ಕುಸುಮವನು ವಾಸಿಸೂದು ಈ ಅರ್ಥಮಂ ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿಯೆಂದು ಜಾಬಾಲಿಕೀಶ್ರುತಿ ನುಡಿವುತಿಹುದು. ಅದು ಕಾರಣದಿಂ ಪುರಾಣಾದಿಗಳಲ್ಲಿ ಕ್ವಚಿತ್ ಕೇಳುವ ಶಿವಲಿಂಗ ನಿರ್ಮಾಲ್ಯಾದಿ ನಿಷೇಧಂ ಚಂಡಾಧಿಕಾರವುಳ್ಳ ಸ್ಥಾವರಲಿಂಗ ಪರವಲ್ಲದೆ ಬಾಣಾದಿಲಿಂಗಪರವಲ್ಲ. ಬಾಣಾದಿಲಿಂಗೇ ಸ್ವಯಂಭೂತೇ ಚಂದ್ರಕಾಂತೇ ಹೃದಿಸ್ಥಿತೇ ಸಾಲಗ್ರಾಮ ಶಿಲೋದ್ಭೂತೇ ಶಂಭೋರ್ನೈವೇದ್ಯಭಕ್ಷಣಂ ಹೀಗೆಂಬ ಪುರಾಣ ವಚನವೀಯರ್ಥದಲ್ಲಿ ಪ್ರಮಾಣವಾಗಿರುವುದು. ಹಾಗಲ್ಲದಿರ್ದಡೆ ಶ್ರುತಿವಿರುದ್ಧಮಾದ ಪುರಾಣವಚನವು ಪ್ರಮಾಣವಾಗದೆಂದು ಶಾಸ್ತ್ರಜ್ಞರಿಂ ತಿಳಿವುದು ತಾತ್ಪರ್ಯಂ ॥೭೧॥ ಬಳಿಕೀ ಪ್ರಕಾರದಿಂ ಶಿವನಿರ್ಮಾಲ್ಯಸ್ವೀಕಾರಂ ಶ್ರುತಿಪ್ರಸಿದ್ಧಮಾದ ಕಾರಣದಿಂ

ಅರ್ಪಯಿತ್ವಾ ನಿಜೇಲಿಂಗೇ ಪತ್ರಂ ಪುಷ್ಪಂ ಫಲಂ ಜಲಮ್
ಅನ್ನಾದ್ಯಂ ಸರ್ವಭೋಜ್ಯಂ ಚ ಸ್ವೀಕುರ್ಯಾದ್ಭಕ್ತಿಮಾನ್ನರಃ ॥

ಶಿವಭಕ್ತನಾದ ಪುರುಷನು ಪತ್ರ ಪುಷ್ಪ ಫಲ ಜಲ ಅನ್ನಾದಿ ಸಕಲ ಭೋಜ್ಯವಸ್ತುವಂ ತನ್ನಿಷ್ಟಲಿಂಗಕ್ಕೆ ಸಮರ್ಪಿಸಿ ಭುಂಜಿಸೂದೆಂಬುದರ್ಥಂ ॥೭೨॥ ಬಳಿಕೀ ಗುರುಪ್ರಸಾದ ವಿಮುಖರಿಗೆ ಮುಕ್ತಿಯಿಲ್ಲವೆಂಬುದು ಪ್ರಸಿದ್ಧಮಾದುದರಿಂ ಶಿವನು ಈಶಾನಸ್ಸರ್ವ ವಿದ್ಯಾನಾಮೆಂಬ ಶ್ರುತಿಯಿಂ ಸಕಲವಿದ್ಯಾಧೀಶ್ವರನಾಗಿ ಸಕಲಲೋಕ ಗುರುವಾದ ಕಾರಣದಿಂದಾತನ ಪ್ರಸಾದವ ಅವಶ್ಯ ಸ್ವೀಕರಿಸಲ್ತಕ್ಕದೆಂದು ಪೇಳುತಿರ್ದಪಂ.

ಗುರುತ್ವಾತ್ಸರ್ವಭೂತಾನಾಂ ಶಂಭೋರಮಿತತೇಜಸಃ
ತಸ್ಮೈ ನಿವೇದಿತಂ ಸರ್ವಂ ಸ್ವೀಕಾರ್ಯಂ ತತ್ಪರಾಯಣೈಃ ॥

ಹವಣಿಸಬಾರದ ಕಾಂತಿಯುಳ್ಳ ಶಿವನು ಸಕಲಪ್ರಾಣಿಗಳಿಗೂ ಗುರುವಾದ ಕಾರಣದಿಂ ತದ್ಭಕ್ತರಾದವರಿಂದ ಆತ್ಮಗೆ ಸಮರ್ಪಿಸಿದ ಅನ್ನಾದಿ ದ್ರವ್ಯವೆಲ್ಲಾ ಸ್ವೀಕರಿಸಲ್ತಕ್ಕ ದೆಂಬುದರ್ಥಂ ॥೭೩॥ ಹಾಗಾದಡೆ ಶಿವಪ್ರಸಾದಕ್ಕಧಿಕಾರಿ ಯಾರೆಂಬಲ್ಲಿ ಪೇಳುತಿರ್ದಪಂ.

ಯೇ ಲಿಂಗಧಾರಿಣೋ ಲೋಕೇ ಯೇ ಶಿವೈಕಪರಾಯಣಾಃ
ತೇಷಾಂ ತು ಶಿವನಿರ್ಮಾಲ್ಯಮುಚಿತಂ ನಾನ್ಯಜಂತುಷು ॥

ಲೋಕದಲ್ಲಿ ಯಾರು ಲಿಂಗಧಾರಿಗಳುಂಟು ಯಾರು ಶಿವಲಿಂಗ ಒಂದರಲ್ಲಿಯೇ ನಿಷ್ಠೆಯುಳ್ಳವರುಂಟು ಅವರಿಗೆ ಶಿವನಿರ್ಮಾಲ್ಯ ಯೋಗ್ಯವು ಮೇಲಾದ ಪ್ರಾಕೃತರಿಗೆ ಯೋಗ್ಯವಲ್ಲೆಂಬುದರ್ಥಂ ॥೭೪॥ ಹಾಗಾದಡೆ ಶಿವಪ್ರಸಾದಾನ್ನ ಭೋಜನಕ್ಕೆ ಫಲವೇನೆಂಬಲ್ಲಿ ಪೇಳುತಿರ್ದಪಂ.

ಅನ್ನಜಾತೇ ತು ಭಕ್ತೇನ ಭುಜ್ಯಮಾನೇ ಶಿವಾರ್ಪಿತೇ
ಸಿಕ್ಥೇ ಸಿಕ್ಥೇಽಶ್ವಮೇಧಸ್ಯ ಯತ್ಫಲಂ ತದವಾಪ್ಯತೇ ॥

ಶಿವಲಿಂಗಕ್ಕೆ ಸಮರ್ಪಿಸಿದ ಅನ್ನಸಮೂಹವು ಭಕ್ತನಿಂ ಭುಂಜಿಸುತ್ತಿರಲಾಗಿ ಅಗುಳುಗಳಿಗೆ ಅಶ್ವಮೇಧಫಲಂ ಪಡೆಯಲ್ಪಡುತ್ತಿಹುದೆಂಬುದರ್ಥಂ ॥೭೫॥ ಬಳಿಕೀ ಶಿವಲಿಂಗ ಪ್ರಸಾದಕ್ಕನಧಿಕಾರಿಗಳಂ ಪೇಳುತಿರ್ದಪಂ.

ನಿರ್ಮಾಲ್ಯಂ ನಿರ್ಮಲಂ ಶುದ್ಧಂ ಶಿವೇನ ಸ್ವೀಕೃತಂ ಯತಃ
ನಿರ್ಮಲೈಸ್ತತ್ಪರೈರ್ಧಾರ್ಯಂ ನಾನ್ಯೈಃಪ್ರಾಕೃತಜಂತುಭಿಃ ॥

ಯಾವುದಾನೊಂದು ಕಾರಣದಿಂದನ್ನಾದಿ ದ್ರವ್ಯವು ಶಿವನಿಂ ಸ್ವೀಕರಿಸಲ್ಪಡುತ್ತಿಹುದು ಆ ಕಾರಣದಿಂ ನಿರ್ಮಲಮಾದ ಶುದ್ಧ ಶಿವನಿರ್ಮಾಲ್ಯವು ಶಿವಲಿಂಗನಿಷ್ಠರಾದ ನಿರ್ಮಲಾಂತಃಕರಣರಿಂ ಸ್ವೀಕರಿಸಲು ಯೋಗ್ಯವು. ಶಿವಲಿಂಗದೀಕ್ಷೆಯುಳ್ಳ ಭವಿಗಳಿಂ ಸ್ವೀಕರಿಸಲ್ತಕ್ಕದ್ದಲ್ಲವೆಂಬುದರ್ಥಂ ॥ ೭೬॥ ಬಳಿಕೀ ಅರ್ಥವನೆ ಸ್ಪಷ್ಟೀಕರಿಸುತಿರ್ದಪಂ.

ಶಿವಭಕ್ತಿವಿಹೀನಾನಾಂ ಜಂತೂನಾಂ ಪಾಪಕರ್ಮಿಣಾಮ್
ವಿಶುದ್ಧೇ ಶಿವನಿರ್ಮಾಲ್ಯೇ ನಾಧಿಕಾರೋಽಸ್ತಿ ಕುತ್ರಚಿತ್ ॥

ಪಾಪಕರ್ಮವುಳ್ಳವರಾದ ಕಾರಣದಿಂ ಶಿವಭಕ್ತಿ ಶೂನ್ಯರಾದ ಜನರಿಗೆ ಪವಿತ್ರಮಾದ ಶಿವನಿರ್ಮಾಲ್ಯದಲ್ಲಿ ಒಂದಿಷ್ಟೂ ಅಧಿಕಾರವಿಲ್ಲ. ವ್ಯಾಪಕನಾದ ಶಿವನ ಅಷ್ಟಮೂರ್ತಿಗಳಿಂ

ಪರಿಕಲ್ಪಿತಮಾದ ಕಾರಣದಿಂ ಸಾಧಾರಣವಾದ ದೇವತಾಂತರ ಪೂಜೆಯಲ್ಲಿ ಶಿವನಲ್ಲಿ ಕುಸುಮೋದಕರೂಪದಿಂ ಸಂಬಂಧಿಸಿಕೊಂಡಿರುವ ಚಂದ್ರ ಗಂಗೆಗಳಿಂ ಬೆಳೆದ ಧಾನ್ಯವು ಅಗ್ನಿರೂಪಮಾದ ರುದ್ರಜಿಹ್ವೆಯಿಂ ಪಕ್ವವಾದ ಕಾರಣದತ್ತಣಿಂದಿದಮೆರಡು ಕಡೆಯಲ್ಲೂ ಸರ್ವಪ್ರಾಣಿಗಳಿಗೂ ಅಧಿಕಾರಮುಂಟು. ಹಾಗಾದರೂ ಸಾಧಾರಣಮಾದ ಶಿವಲಿಂಗ ಪೂಜೆಯಲ್ಲಿ ಶಿವಲಿಂಗಪ್ರಸಾದ ಸ್ವೀಕರಿಸಿದಲ್ಲಿಯೂ ಶಿವಲಿಂಗದೀಕ್ಷಾಸಂಪನ್ನನೆ ಅಧಿಕಾರಿಯೆಂದು ಪ್ರಸಿದ್ಧವು ॥೭೭॥ ಬಳಿಕ ಪ್ರಸಾದದ ಮಹತ್ವಮಂ ಪೂಜಿಸಿ ಸೂತ್ರದ್ವಯದಿಂದೀ ಸ್ಥಲಮಂ ಮುಗಿಸುತಿರ್ದಪಂ.

ಶಿವಲಿಂಗಪ್ರಸಾದಸ್ಯ ಸ್ವೀಕಾರಾದ್ಯತ್ಫಲಂ ಭವೇತ್
ತಥಾ ಪ್ರಸಾದಸ್ವೀಕಾರಾದ್ಗುರುಜಂಗಮಯೋರಪಿ ॥

ತಸ್ಮಾದ್ಗುರುಂ ಮಹಾದೇವಂ ಶಿವಯೋಗಿನಮೇವ ಚ
ಪೂಜಯೇತ್ತತ್ಪ್ರಸಾದಾನ್ನಂ ಭುಂಜೀಯಾತ್ಪ್ರತಿವಾಸರಮ್ ॥

ಶಿವಲಿಂಗಪ್ರಸಾದದಿಂದಾವ ಫಲಮುಂಟಾಹುದು ಅಂಥ ಫಲವೆ ಗುರು ಲಿಂಗ ಜಂಗಮ ಪ್ರಸಾದ ಸ್ವೀಕಾರದಿಂದಲೂ ಆಹುದು. ಅದು ಕಾರಣವಾಗಿ ಗುರುವಂ ಶಿವನಂ ಶಿವಯೋಗಿಯಂ ತನು ಮನ ಧನಂಗಳಿಂ ಪೂಜಿಸೂದು ತತ್ಪ್ರಸಾದಾನ್ನಮಂ ಪ್ರತಿದಿನಂ ಭುಂಜಿಸೂದೆಂಬುದರ್ಥಂ ॥೭೯॥

## ೧೩. ಸೋಪಾಧಿಕಮಾಟಸ್ಥಲ

ಬಳಿಕ ಅಥ ದೇಹದಾನಾತ್ಸತ್ಯಸಿದ್ಧಿರರ್ಥದಾನಾಚ್ಚ ನಿರ್ವೃತಿಃ ಪ್ರಾಣದಾನಾತ್ ಜ್ಞಾನ ಸಿದ್ಧಿಃ ಏವಂ ಸರ್ವಂ ಸ್ಥಿರಂ ಭವೇತ್ ಹೀಗೆಂಬ ಯೋಗಜಾಗಮವಚನದಿಂ ಗುರುಲಿಂಗ ಜಂಗಮ ವಿಷಯದಲ್ಲಿ ಯಥಾಶಕ್ತಿ ದಾನವಂ ಮಾಡುವುದೆಂದು ಪೇಳುತಿರ್ದಪಂ.

ಶಿವಲಿಂಗೇ ಶಿವಾಚಾರ್ಯೇ ಶಿವಯೋಗಿನಿ ಭಕ್ತಿಮಾನ್
ದಾನಂ ಕುರ್ಯಾದ್ಯಥಾಶಕ್ತಿಃ ತತ್ಪ್ರಸಾದಯುತಸ್ಸದಾ ॥

ಶಿವಲಿಂಗದಲ್ಲಿಯೂ ಶ್ರೀ ಗುರುವಿನಲ್ಲಿಯೂ ಶಿವಯೋಗಿಯಾದ ಜಂಗಮದಲ್ಲಿಯೂ ಭಕ್ತಿಯುಳ್ಳವನಾಗಿ ಭಕ್ತನು ದೇಹದಾನದಿಂ ಸತ್ವಸಿದ್ಧಿಯಹದು. ಅರ್ಥದಾನದಿಂದಾನಂದ ಸಿದ್ಧಿಯಹುದು. ಪ್ರಾಣದಾನದಿಂ ಜ್ಞಾನಸಿದ್ಧಿಯಹುದು ॥ ೮೦॥ ಈ ಪ್ರಕಟಿಸುತಿರ್ದಪಂ.

ದಾನಂ ಚ ತ್ರಿವಿಧಂ ಪ್ರೋಕ್ತಂ ಸೋಪಾಧಿ ನಿರುಪಾಧಿಕಮ್
ಸಹಜಂ ಚೇತಿ ಸರ್ವೇಷಾಂ ಸರ್ವತಂತ್ರವಿಶಾರದೈಃ ॥

ಪ್ರಾಣದೇಹಾರ್ಥ ರೂಪಮಾದ ದಾನತ್ರಯಂ ಸೋಪಾಧಿಕವೆಂದು ನಿರುಪಾಧಿಕ ವೆಂದು ಸಹಜವೆಂದು ಮೂರು ಪ್ರಕಾರವಾಗಿರೂದೆಂದು ಸಕಲಾಗಮಪ್ರವೀಣರಿಂ ಸಮಸ್ತ ಶಿವಭಕ್ತರಿಗೂ ಪೇಳಲ್ಪಟ್ಟಿತ್ತೆಂಬುದರ್ಥಂ ॥೮೧॥ ಬಳಿಕ ದಾನತ್ರಯಂಗಳಲ್ಲಿ ಸೋಪಾಧಿಕ ದಾನಸ್ವರೂಪಮಂ ಪೇಳುತಿರ್ದಪಂ.

ಫಲಾಭಿಸಂಧಿಸಂಯುಕ್ತಂ ದಾನಂ ಯದ್ವಿಹಿತಂ ಭವೇತ್
ತತ್ಸೋಪಾಧಿಕಮಾಖ್ಯಾತಂ ಮುಮುಕ್ಷುಭಿರನಾದೃತಮ್ ॥

ತುಚ್ಛಮಾದ ಫಲಾಭಿಲಾಷೆಯೊಡನೆ ಕೂಡಿದ ಯಾವುದಾನೊಂದು ದಾನವು ಮಾಡಲ್ಪಡುವುದು ಆ ದಾನಂ ಮೋಕ್ಷಾರ್ಥಿಗಳಿಂದುಪೇಕ್ಷೆಯಾದ ಸೋಪಾಧಿಕದಾನವೆಂದು ಪೇಳಲ್ಪಟ್ಟಿತೆಂಬುದರ್ಥಂ ॥೮೨॥

೧೪. ನಿರುಪಾಧಿಕಮಾಟಸ್ಥಲ

ಬಳಿಕ ನಿರುಪಾಧಿಕದಾನಮಂ ಪೇಳುತಿರ್ದಪಂ

ಫಲಾಭಿಸಂಧಿನಿರ್ಮುಕ್ತಮೀಶ್ವರಾರ್ಪಿತಕಾಂಕ್ಷಿತಮ್
ನಿರುಪಾಧಿಕಮಾಖ್ಯಾತಂ ದಾನಂ ದಾನವಿಶಾರದೈಃ ॥

ತುಚ್ಛಫಲೇಚ್ಛೆ ಇಲ್ಲದೆ ಈಶ್ವರಾರ್ಪಣಬುದ್ಧಿಯಿಂ ಮಾಡುವಂಥಾ ದಾನಂ ದಾನ ತತ್ವವೀಣರಿಂ ನಿರುಪಾಧಿಕದಾನವೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೮೩॥

೧೫. ಸಹಜಮಾಟಸ್ಥಲ

ಬಳಿಕ ಸಹಜದಾನಸ್ಥಲ ರೂಪಮಂ ಪೇಳುತಿರ್ದಪಂ.

ಅದಾತೃದಾತೃದೇಯಾನಾಂ ಶಿವಾಭಾವಂ ವಿಚಿಂತಯನ್
ಆತ್ಮನೋಽಕರ್ತೃಭಾವಂ ಚ ಯದ್ದತ್ತಂ ಸಹಜಂ ಭವೇತ್ ॥

ದಾನವ ಹಿಡಿವವ ಕೊಡುವವ ಕೊಡುವಪದಾರ್ಥ ಇವು ಮೂರಕ್ಕೂ ಶಿವ ಸ್ವರೂಪತ್ವಮಂ ತನಗೆ ಅಕರ್ತೃತ್ವಮಂ ಚಿಂತಿಸುವನಾಗಿ ಯಾವುದಾನೊಂದು ಕೊಡಲ್ಪಟ್ಟಿತು. ಆ ದಾನವು ಸಹಜದಾನವೆಂದು ಪೇಳಿಸಿಕೊಂಬುದರ್ಥಂ ॥೮೪॥ ಬಳಿಕೀ ದಾನತ್ರಯಂಗಳಲ್ಲಿ ಯಾವುದು ಶ್ರೇಷ್ಠಮೆಂಬಲ್ಲಿ ಪೇಳುತಿರ್ದಪಂ.

ಸಹಜಂದಾನಮುತ್ಕೃಷ್ಟಂ ಸರ್ವದಾನೋತ್ತಮೋತ್ತಮಮ್
ಶಿವಜ್ಞಾನಪ್ರದಂ ಪುಂಸಾಂ ಜನ್ಮರೋಗನಿವರ್ತಕಮ್ ॥

ಸಹಜದಾನವೆ ಸರ್ವದಾನ ಶ್ರೇಷ್ಠವು. ಅದೆಂತೆಂದಡೆ ಪುರುಷಗೆ ಜನನ ಮರಣ ರೂಪಮಾದ ಭವರೋಗ ನಿವಾರಿಸುವ ಶಿವತಾದಾತ್ಮ್ಯಜ್ಞಾನವ ಕೊಡುವಂಥಾದೆಂಬ ಕಾರಣದಿಂದೆಂಬುದರ್ಥಂ ॥೮೫॥ ಬಳಿಕ ಗುರು ಲಿಂಗ ಜಂಗಮದ ವಿಷಯದಲ್ಲಿ ಈ ಭಾವದಿಂ ಕೊಟ್ಟರೆ ಸಹಜದಾನವೋ ಏನೆಂಬಲ್ಲಿ ಪೇಳುತಿರ್ದಪಂ.

ಶಿವಾಯ ಶಿವಭಕ್ತಾಯ ದೀಯತೇ ಯದಿ ಕಿಂಚನ
ಭಕ್ತ್ಯಾ ತದಪಿ ವಿಖ್ಯಾತಂ ಸಹಜಂ ದಾನಮುತ್ತಮಮ್ ॥

ಇಷ್ಟಲಿಂಗಾತಿರಿಕ್ತಮಾದ ಸ್ಥಾವರಲಿಂಗಗಳಿಗೆ ಭಕ್ತಿಯಿಂ ಕೊಟ್ಟ ಕ್ಷೇತ್ರದಾನ ವಿರಕ್ತಮೂರ್ತಿವ್ಯತಿರಿಕ್ತ ಶಿವಭಕ್ತರಿಗೆ ಏನಾದರೂ ಕೊಟ್ಟದು ಸಹಾಯ ಉಂಟು. ಅದು ಸಹಜದಾನವೆಂದು ಪ್ರಸಿದ್ಧಮೆಂಬುದರ್ಥಂ ॥೮೬॥ ಬಳಿಕ ದಾನಫಲಮಂ ಪೇಳುತಿರ್ದಪಂ.

ದಾನಾತ್ ಸ್ವರ್ಣಸಹಸ್ರಸ್ಯ ಸತ್ಪಾತ್ರೇ ಯತ್ಫಲಂ ಭವೇತ್
ಏಕಪುಷ್ಪಪ್ರದಾನೇನ ಶಿವೇ ತತ್ಫಲಮಿಷ್ಯತೇ ॥

ಸತ್ಪಾತ್ರದಲ್ಲಿ ಸಹಸ್ರ ಸುವರ್ಣದಾನವ ಮಾಡಿದರಿಂದ ಯಾವುದಾನೊಂದು ಫಲ ಮುಂಟಾಹದು ಆ ಫಲಂ ಶಿವಲಿಂಗದಲ್ಲಿ ಒಂದು ಪುಷ್ಪವನರ್ಪಿಸಿದರಿಂದ ಇಚ್ಛೈಸಲ್ಪಡುತ್ತಿಹುದೆಂಬುದರ್ಥಂ ॥೮೭॥ ಅದೆಂತೆಂದಡೆ ಪೇಳುತಿರ್ದಪಂ.

ಶಿವ ಯೇವ ಪರಂ ಪಾತ್ರಂ ಸರ್ವವಿದ್ಯಾನಿಧಿರ್ಗುರುಃ
ತಸ್ಮೈ ದತ್ತಂ ತು ಯತ್ಕಿಂಚಿತ್ತದನಂತಫಲಂ ಭವೇತ್ ॥

ಈಶಾನಸ್ಸರ್ವವಿದ್ಯಾನಾಂ ಎಂಬ ಶ್ರುತಿಯಿಂ ಸರ್ವವಿದ್ಯಾನಿಧಿಯಾಗಿ ಜಗದ್ಗುರುವಾದ ಕಾರಣದಿಂ ಶಿವನೆ ಮಹಾಪಾತ್ರನು. ಆತಗೋಸ್ಕರ ಪತ್ರ ಪುಷ್ಪ ಮುಂತಾಗಿ ಒಂದಿಷ್ಟನು ಸಮರ್ಪಿಸೂದು ಅಪರಿಮಿತ ಫಲವ ಕೊಡುವುದೆಂಬುದರ್ಥಂ ॥೮೮॥ ಹೀಗೆಂಬ ಶಿವಯೋಗಿಗೆ ಕೊಟ್ಟಂಥಾದು ಅನಂತಫಲಪ್ರದಮೆಂದು ಪೇಳುತಿರ್ದಪಂ.

ಶಿವಯೋಗೀ ಶಿವಸ್ಸಾಕ್ಷಾಚ್ಛಿವಜ್ಞಾನಮಹೋದಧಿಃ
ಯತ್ಕಿಂಚಿದ್ದೀಯತೇ ತಸ್ಮೈ ತದ್ದಾನಂ ಪಾರಮಾರ್ಥಿಕಮ್ ॥

ಶಿವಜ್ಞಾನಕ್ಕೆ ಸಮುದ್ರನಾದ ಶಿವಯೋಗೀಶ್ವರಂ ಪ್ರತ್ಯಕ್ಷ ಶಿವನೇ ಸರಿ. ಆತಗೆ ಒಂದಿಷ್ಟು ಕೊಟ್ಟಂಥಾದು ಯಾವುದುಂಟು ಆ ದಾನವು ಅನಂತಫಲವನೀವ ಸಹಜದಾನವೆಂಬುದರ್ಥಂ ॥೮೯॥ ಬಳಿಕಾ ಶಿವಯೋಗೀಶ್ವರನ ಮಹತ್ವವನೆ ವಿಶೇಷವಾಗಿ ಪೇಳುತಿರ್ದಪಂ.

ಶಿವಯೋಗೀ ಮಹತ್ಪಾತ್ರಂ ಸರ್ವೇಷಾಂ ದಾನಕರ್ಮಣಿ
ತಸ್ಮಾನ್ನಾಸ್ತಿ ಪರಂ ಕಿಂಚಿತ್ಪಾತ್ರಂ ಶಾಸ್ತ್ರವಿಚಾರತಃ ॥

ದಾನಕರ್ಮ ವಿಷಯದಲ್ಲಿ ಸಕಲವಾದ ಸತ್ಪಾತ್ರರಿಗೆ ಶಿವಯೋಗಿಯೆ ಮಹಾಪಾತ್ರನು, ಆತನಿಂದ ಶ್ರೇಷ್ಠಮಾದ ಪಾತ್ರಂ ಶಾಸ್ತ್ರವಿಚಾರದೊಂದಿಷ್ಟು ಇಲ್ಲವೆಂಬುದರ್ಥಂ ॥೯೦॥ ಬಳಿಕ ಶಿವಯೋಗಿಗೆ ಕೊಟ್ಟ ದಾನಫಲಮಂ ಪೇಳುತಿರ್ದಪಂ.

ಭಿಕ್ಷಾಮಾತ್ರಪ್ರದಾನೇನ ಶಾಂತಾಯ ಶಿವಯೋಗಿನೇ
ಯತ್ಫಲಂ ಲಭ್ಯತೇ ನೈತದ್ಯಜ್ಞಕೋಟಿಶತೈರಪಿ ॥

ರಾಗದ್ವೇಷರಹಿತನಾದ ಶಿವಯೋಗಿಗೆ ಕಬಳಮಾತ್ರವ ಕೊಟ್ಟದ್ದರಿಂದ ಯಾವ ಫಲಮುಂಟಹದು ಆ ಫಲಂ ಕೋಟಿಯಜ್ಞಗಳಿಂದಲೂ ಬಾರದೆಂಬುದರ್ಥಂ ॥೯೧॥ ಅದೆಂತೆಂದಡೆ ಪೇಳುತಿರ್ದಪಂ.

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್ ॥

ತಸ್ಮಾತ್ಸರ್ವಪ್ರಯತ್ನೇನ ಯೇನ ಕೇನಾಪಿ ಕರ್ಮಣಾ
ತೃಪ್ತಿಂ ಕುರ್ಯಾತ್ಸದಾಕಾಲಮನ್ನಾದ್ಯೈಶ್ಶಿವಯೋಗಿನಃ ॥

ಬ್ರಹ್ಮವಿದ್ಬ್ರಹ್ಮೈವಭವತಿಯೆಂಬ ಶ್ರುತಿಯಿಂ ಶಿವಯೋಗೀಶ್ವರಂ ಪ್ರತ್ಯಕ್ಷ ಶಿವನೆ ಸರಿ. ಆತಂ ಸಂತುಷ್ಟನಾಗುತ್ತಿರಲಾಗಿ ಶಿವಂ ತೃಪ್ತನಹನು. ಆ ಶಿವಂ ತೃಪ್ತನಾದ ಕಾರಣದಿಂ ಶಿವಮಯಮಾದ ಚರಾಚರ ಪ್ರಪಂಚಮೆಲ್ಲಂ ತೃಪ್ತಿಯನೈದುತ್ತಿಹನೆಂಬುದರ್ಥಂ ಅದು ಕಾರಣವಾಗಿ ಸರ್ವಪ್ರಯತ್ನದಿಂದ ಯಾವ ಬಗೆಯಲಾದರೂ ಎಲ್ಲಾಗಳು ಅನ್ನ ವಸ್ತ್ರಾದಿಗಳಿಂ ಶಿವಯೋಗಿಯಂ ತೃಪ್ತಿಪಡಿಸೂದೆಂಬುದರ್ಥಂ ||೯೩|| ಬಳಿಕೀ ಪ್ರಕಾರಮಾದ ಸತ್ಪಾತ್ರದಲ್ಲಿ ಸಹಜದಾನಸಂಪನ್ನನೆ ಸಾಕ್ಷಾಚ್ಛಿವನೆಂದು ಪೇಳುತಿರ್ದಪಂ.

ನಿರುಪಾಧಿಕಚಿದ್ರೂಪಪರಾನಂದಾತ್ಮವಸ್ತುನಿ<br>
ಸಮಾಪ್ತಂ ಸಕಲಂ ಯಸ್ಯ ಸ ದಾನೀ ಶಂಕರಸ್ಸ್ವಯಮ್ ||

ಸಚ್ಚಿದಾನಂದಂಗಳೆ ಗುರುತಾಗುಳ್ಳ ಗುರು ಲಿಂಗ ಜಂಗಮಾತ್ಮಕನಾದ ಪರಶಿವನಲ್ಲಿ ಯಾವ ಶಿವಭಕ್ತನ ಶರೀರಾರ್ಥಪ್ರಾಣರೂಪಮಾದ ಸಕಲವಸ್ತುವು ಸಮರ್ಪಿಸಲ್ಪಟ್ಟದಾಹದು ಆ ಸಹಜದಾನಿಯಾದ ಭಕ್ತ ತಾನೆ ಶಿವನೆಂಬುದರ್ಥಂ ||೯೪|| ಬಳಿಕೀ ಪ್ರಕಾರದಿಂ ಪೇಳಲ್ಪಟ್ಟ ಸಕಲಶಿವಾಚಾರಸಂಪನ್ನನಾಗಿ ಸಹಜದಾನಿಯಾದ ಶಿವಭಕ್ತನೆ ಮಾಹೇಶ್ವರತ್ವಮಂ ಪಡೆವುತ್ತಿಹನೆಂಬುದು ಪೇಳುತಿರ್ದಪಂ

ಉಕ್ತಾಖಿಲಾಚಾರಪರಾಯಣೋsಸೌ<br>
ಸದಾ ವಿತನ್ವನ್ ಸಹಜಂತು ದಾನಮ್<br>
ಬ್ರಹ್ಮಾದಿಸಂಪತ್ಸು ವಿರಕ್ತಚಿತ್ತೋ<br>
ಭಕ್ತೋ ಹಿ ಮಾಹೇಶ್ವರತಾಮುಪೈತಿ

ಪೇಳಲ್ಪಟ್ಟ ಸಕಲಶಿವಾಚಾರನಿಷ್ಠನಾಗಿ ಬ್ರಹ್ಮಾದಿಗಳ ಸಂಪತ್ತುಗಳ ಪ್ರೀತಿಯಿಲ್ಲದ ವನಾಗಿಯೂ ಎಲ್ಲಾಗಳೂ ದೇಹ ದ್ರವ್ಯ ಕ್ಷೇತ್ರಂಗಳು ಗುರು ಲಿಂಗ ಜಂಗಮಕ್ಕರ್ಪಿಸಿದ ಗುರುಸ್ವಾಮಿಯ ಪದಕಮಲದಲ್ಲಿ ಹುಟ್ಟಿ ಜಂಗಮದೇವರ ತೀರ್ಥಪ್ರಸಾದದಿಂದಲೆ ಬೆಳೆದು ಮಹಾಲಿಂಗೈಕ್ಯವ ಬಯಸುವ ಶಿವಭಕ್ತಂ ಮಾಹೇಶ್ವರನ ಸಂಬಂಧವಾದ ಸದಾ ಚಾರವುಳ್ಳವನಾಗಿ ಮಾಹೇಶ್ವರತ್ವವ ಪಡೆವನೆಂಬುದರ್ಥಂ ||೯೫||

ಇತೀ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮ ನಿರ್ಣಯ ಸಿದ್ಧಾಂತಶಿಖಾಮಣೌ ಭಕ್ತಸ್ಥಲ ಭಕ್ತಾದಿಸ್ಥಲಪ್ರಸಂಗೋನಾಮ ನವಮಃಪರಿಚ್ಛೇದಃ

# ದಶಮಪರಿಚ್ಛೇದ

## ಮಾಹೇಶ್ವರಸ್ಥಲ

ಬಳಿಕ ಭಕ್ತಸ್ಥಲವ ನಿರೂಪಿಸಿದ ತರುವಾಯದಲ್ಲಿ ಮರಳಿ ಶ್ರೀ ರೇಣುಕಾಚಾರ್ಯನು ಕುಂಭಸಂಭವಂ ಬೆಸಗೊಳುತಿರ್ದಪಂ

ಭಕ್ತಸ್ಥಲಂ ಸಮಾಖ್ಯಾತಂ ಭವತಾ ಗಣನಾಯಕ
ಕೇನ ವಾ ಧರ್ಮಭೇದೇನ ಭಕ್ತೋ ಮಾಹೇಶ್ವರೋ ಭವೇತ್ ॥

ಅಹೋ ಶಿವಗಣಾಧೀಶ್ವರನಾದ ರೇವಣಸಿದ್ಧೇಶ್ವರನೆ ನಿನ್ನ ಭಕ್ತಸ್ಥಲಂ ಪೇಳಲ್ಪಟ್ಟಿತು. ಬಳಿಕಾ ಶಿವಭಕ್ತಂ ಯಾವ ಸದಾಚಾರಭೇದದಿಂ ಮಾಹೇಶ್ವರನಹನೆಂಬುದಂ ಕರುಣಿಸ ಬೇಕೆಂದು ಪ್ರಶ್ನಾರ್ಥಂ ॥೧॥ ಈ ಪ್ರಶ್ನೆಗುತ್ತರಮಂ ಶ್ರೀ ರೇಣುಕಾಚಾರ್ಯಂ ನಿರೂಪಿಸುತಿರ್ದಪಂ.

ಕೇವಲೇ ಸಹಜೇ ದಾನೇ ನಿಷ್ಣಾತಶ್ಶಿವತತ್ಪರಃ
ಬ್ರಹ್ಮಾದಿಸ್ಥಾನ ವಿಮುಖೋ ಭಕ್ತೋ ಮಾಹೇಶ್ವರಸ್ಮೃತಃ ॥

ಬಚ್ಚಬರಿಯ ಸಹಜದಾನದಲ್ಲಿ ಕುಶಲನಾಗಿ ಬ್ರಹ್ಮಾದಿಗಳ ಸ್ಥಾನದಲ್ಲಿ ಅಡ್ಡಲಾದ ಮುಖವುಳ್ಳ ಶಿವಭಕ್ತನು ಶಿವ ಒಬ್ಬನಲ್ಲಿಯೆ ನಿಷ್ಠೆಯುಳ್ಳವನಾಗಿ ಮಾಹೇಶ್ವರನೆಂದು ನೆನೆಯಲ್ಪಡುವನೆಂಬುದರ್ಥಂ ॥೨॥ ಅದನ್ನೇ ಸ್ಫುಟೀಕರಿಸುತಿರ್ದಪಂ.

ಭಕ್ತೇರ್ಯದಾ ಸಮುತ್ಕರ್ಷೋ ಭವೇದ್ವೈರಾಗ್ಯಗೌರವಾತ್
ತದಾ ಮಾಹೇಶ್ವರಃ ಪ್ರೋಕ್ತೋ ಭಕ್ತಸ್ಥಿರವಿವೇಕವಾನ್ ॥

ವೈರಾಗ್ಯದ ಮಹತ್ವದತ್ತಣಿಂ ಶಿವಭಕ್ತಿಗೆ ಯಾವಾಗ ಚೆನ್ನಾಗಿ ಉದ್ರೇಕಮುಂಟಹದು ಆಗ ಸ್ಥಿರವಾದ ನಿತ್ಯಾನಿತ್ಯವಿವೇಕವುಳ್ಳ ಶಿವಭಕ್ತನು ಮಾಹೇಶ್ವರನೆಂದು ಪೇಳಲ್ಪಟ್ಟನೆಂಬು ದರ್ಥಂ ॥೩॥ ಬಳಿಕ ಮಾಹೇಶ್ವರನಿಗೂ ಅವಾಂತರಸ್ಥಲಭೇದಂಗಳುಂಟೋ ಏನೋ ಎಂಬಲ್ಲಿ ಆ ಭೇದಂಗಳಂ ಪೇಳುತಿರ್ದಪಂ.

ಮಾಹೇಶ್ವರಸ್ಥಲಂ ವಕ್ಷ್ಯೇ ಯಥೋಕ್ತಂ ಶಂಭುನಾ ಪುರಾ
ಮಾಹೇಶ್ವರಪ್ರಶಂಸಾದೌ ಲಿಂಗನಿಷ್ಠಾ ತತಃ ಪರಮ್ ॥

ಪೂರ್ವಾಶ್ರಯನಿರಾಸಶ್ಚ ತಥಾऽದ್ವೈತ ನಿರಾಕೃತಿಃ
ಆಹ್ವಾನವರ್ಜನಂ ಪಶ್ಚಾದಷ್ಟಮೂರ್ತಿನಿರಾಕೃತಿಃ ॥

ಸರ್ವಗತ್ವನಿರಾಸಶ್ಚ ಶಿವತ್ವಂ ವಿಶ್ವಭಕ್ತಯೋಃ
ಏವಂ ನವವಿಧಂ ಪ್ರೋಕ್ತಂ ಮಾಹೇಶ್ವರಮಹಾಸ್ಥಲಮ್॥

ಪೂರ್ವದಲ್ಲಿ ಶಿವನಿಂ ಮಾಹೇಶ್ವರಸ್ಥಲಭೇದಂ ಹೇಗೆ ಪೇಳಲ್ಪಟ್ಟಿತ್ತು ಅದೇ ಪ್ರಕಾರದಿಂ ಪೇಳ್ವೆನು ಕೇಳೆಂದು ಪ್ರತಿಜ್ಞೆಯಂ ಮಾಡಿ ನುಡಿವುತಿರ್ದಪಂ. ಮೊದಲು ಮಾಹೇಶ್ವರಮಹತ್ವಕಥನವು ಬಳಿಕ ಲಿಂಗನಿಷ್ಠಾಸ್ಥಲವು ಬಳಿಕ ಪೂರ್ವಾಶ್ರಯನಿರಸನ

ಸ್ಥಲವು. ಹಾಗೆ ಬಳಿಕ ಅದ್ವೈತನಿರಸನಸ್ಥಲವು. ಬಳಿಕಾಷ್ಟಮೂರ್ತಿನಿರಸನಸ್ಥಲವು. ಬಳಿಕ ಸರ್ವಗತನಿರಸನಸ್ಥಲವು ಬಳಿಕ ಶಿವಜಗನ್ಮಯಸ್ಥಲವು ಬಳಿಕ ಭಕ್ತದೇಹಿಕಲಿಂಗಸ್ಥಲವು ಈ ಪ್ರಕಾರದಿಂ ಒಂಬತ್ತು ಭೇದವುಳ್ಳದು ಮಾಹೇಶ್ವರಸ್ಥಲವೆಂದು ಪೇಳಲ್ಪಟ್ಟಿತ್ತೆಂಬುದರ್ಥಂ. ಇಲ್ಲಿ ಪೂರ್ವದಲ್ಲಿ ಶಿವನು ಪೇಳಿದ ಪ್ರಕಾರದಿಂ ಪೇಳುತ್ತೇನೆಂದು ಪ್ರತಿಜ್ಞೆಯಂ ಮಾಡಿದ ಕಾರಣದಿಂ ಹಿಂದೆ ಪೇಳಿದ್ದು ಮುಂದೆ ಪೇಳುವಂಥಾದೆಲ್ಲಂ ಶಿವ ಪೇಳಿದ ಪ್ರಕಾರವೆ ಸರಿ, ಸ್ವಕಪೋಲಕಲ್ಪಿತವಲ್ಲಮೆಂಬುದು ಸೂಚಿಸಲ್ಪಟ್ಟಿತ್ತು. ಅಷ್ಟಮೂರ್ತಿ ನಿರಾಕರಣ ನಂತರದಲ್ಲಿ ಆಹ್ವಾನನಿರಸನವ ಮಾಡುವುದು ಯುಕ್ತಮೆಂದು ಕೆಲವರು ಶಂಕಿಸುವದು. ಶಿವೋಕ್ತ ಕ್ರಮಕ್ಕೆ ವ್ಯತ್ಯಾಸವಾಹದರಿಂದದು ನಿರಸ್ತವಾಯಿತು. ಹಾಗಾದರು ಶಿವನು ವ್ಯಾಪಕನಾದ ಕಾರಣದಿಂದ ಆಹ್ವಾನ ಕೂಡದೆಂದು ನಿರಾಕರಿಸಲಿಲ್ಲ. ಮತ್ತೇನೆಂದರೆ ಶ್ರೇಷ್ಠಲಿಂಗದಲ್ಲಿ ಪೂರ್ವ ಪ್ರತಿಪತ್ತಿಗೆ ವಿರೋಧವಾಹದರಿಂ ಮರಳಿ ಆಹ್ವಾನ ಸಲ್ಲದೆಂದು ನಿರಾಕರಿಸಲ್ಪಟ್ಟದರಿಂದಾ ಶಂಕೆಗವಕಾಶವಿಲ್ಲಮೆಂದು ಭಾವಿಸೂದು ॥೬॥ ಬಳಿಕೋದ್ದೇಶ ಕ್ರಮದಿಂದಿತರವಾಂತರ ಸ್ಥಲಂಗಳಿಗೆ ಲಕ್ಷಣಮಂ ಪೇಳುತ್ತೇನೆ ಕೇಳೆಂದು ನಿರೂಪಿಸುತಿರ್ದಪಂ.

ಆದಿತಃ ಕ್ರಮಶೋ ವಕ್ಷ್ಯೇ ಸ್ಥಲಭೇದಸ್ಯ ಲಕ್ಷಣಮ್
ಸಮಾಹಿತೇನ ಮನಸಾ ಶ್ರೂಯತಾಂ ಭವತಾ ಮುನೇ॥

ಅಹೋ ಅಗಸ್ತ್ಯನೆ ಮೊದಲಿಂದ ಕ್ರಮತಪ್ಪದೆ ಸ್ಥಲಭೇದಂಗಳಿಗೆ ಲಕ್ಷಣಮಂ ಪೇಳ್ವಪೆ ಏಕಾಗ್ರಚಿತ್ತನಾಗಿ ಕೇಳೆಂಬುದರ್ಥಂ ॥೭॥ ಇಲ್ಲಿ ವಿಶ್ವಾಧಿಕೋ ರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ ಸ ನೋ ಬುಧ್ಯಾ ಶುಭಯಾ ಸಂಯುನಕ್ತಿ ಎಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ಸಪ್ತಸೂತ್ರಂಗಳಿಂದ ಮಾಹೇಶ್ವರಪ್ರಶಂಸಾ ಪೂರ್ವಕನಾಗಿ ಮಾಹೇಶ್ವರ ಸ್ವರೂಪಮಂ ವಿಸ್ತರಿಸುತಿರ್ದಪಂ.

## ೧೬. ಮಾಹೇಶ್ವರಪ್ರಶಂಸಾಸ್ಥಲ

ವಿಶ್ವಸ್ಮಾದಧಿಕೋ ರುದ್ರೋ ವಿಶ್ವಾನುಗ್ರಹಕಾರಕಃ
ಇತಿ ಯಸ್ಯಾ ಸ್ಥಿರಾ ಬುದ್ಧಿಸ್ಸವೈ ಮಾಹೇಶ್ವರಃ ಸ್ಮೃತಃ ॥

ಸಮಸ್ತ ದೇವ ದಾನವಾದಿ ವಿಶ್ವಕ್ಕೆ ಅನುಗ್ರಹಕರ್ತನಾದ ರುದ್ರನು ವಿಶ್ವಂ ನಾರಾಯಣಂ ಹರಿಃ ಹೀಗೆಂಬ ಶ್ರುತಿಯಿಂ ವಿಶ್ವರೂಪನಾದ ನಾರಾಯಣನಿಂದಲೂ ಶ್ರೇಷ್ಠನೆಂದು ಯಾವಾತಗೆ ಬುದ್ಧಿ ಸ್ಥಿರವಾಗಿಹದು ಆತಂ ಮಾಹೇಶ್ವರನೆಂಬುದರ್ಥಂ ॥೮॥ ಬಳಿಕ ನ ತತ್ಸಮಶ್ಚಾಭ್ಯಧಿಕಸ್ಸ ದೃಶ್ಯತೇ ಹೀಗೆಂಬ ಶ್ರುತ್ಯನುಸಾರದಿಂ ಮಾಹೇಶ್ವರಸ್ವರೂಪಮಂ ಪೇಳುತಿರ್ದಪಂ.

ಬ್ರಹ್ಮಾದ್ಯೈರ್ಮಲಿನಪ್ರಾಯೈರ್ನಿರ್ಮಲೇ ಪರಮೇಶ್ವರೇ
ಸಾಮ್ಯೋಕ್ತಿಂ ಯೋ ನ ಸಹತೇ ಸ ವೈ ಮಾಹೇಶ್ವರಾಭಿದಃ ॥

ಆಣವಾದಿ ಮಲಯುಕ್ತರಾದ ಬ್ರಹ್ಮಾದಿಗಳೊಡನೆ ನಿರ್ಮಲವಾದ ಪರಮೇಶ್ವರಗೆ

ಸಮಾನವಚನಮಂ ದಾವಾತ ಸಹಿಸದಿರುವನು ಆತಂ ಮಾಹೇಶ್ವರನೆಂಬ ಪೆಸರುಳ್ಳಾತ ನೆಂಬುದರ್ಥಂ ॥೯॥ ಬಳಿಕ ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿ ಬ್ರಹ್ಮಣೋಽಧಿಪತಿ ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್ ಹೀಗೆಂಬ ಶ್ರುತ್ಯರ್ಥಮಂ ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ಭ್ರಾಮಯನ್ ಸರ್ವಭೂತಾನಿ ಯಂತ್ರಾ ರೂಢಾನಿಮಾಯಯಾ ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ಎಂಬ ಭಗವದ್ಗೀತಾರ್ಥಮಂ ಸ್ಮರಿಸುವಂತಾತನಾಗಿ ಮಾಹೇಶ್ವರ ಸ್ವರೂಪಮಂ ಪೇಳುತಿರ್ದಪಂ.

ಈಶ್ವರಸ್ಸರ್ವಭೂತಾನಾಂ ಬ್ರಹ್ಮಾದೀನಾಂ ಮಹಾನಿತಿ
ಬುದ್ಧಿಯೋಗಾತ್ತದಾಸಕ್ತೋ ಭಕ್ತೋ ಮಾಹೇಶ್ವರಸ್ಸ್ಮೃತಃ ॥

ಚತುರ್ಮುಖಬ್ರಹ್ಮ ಮೊದಲಾದ ಸಕಲ ಪಶುಪ್ರಾಣಿಗಳಿಗೂ ಪ್ರೇರಕನಾದ ಪರಮೇಶ್ವರ ಒಬ್ಬನೆ ಶ್ರೇಷ್ಠನೆಂದು ಬುದ್ಧಿಯಿಂ ಪರಮೇಶ್ವರನಲ್ಲಿ ಎರಗಿದ ಭಕ್ತನು ಮಾಹೇಶ್ವರನೆಂದು ಸ್ಮರಿಸಲ್ಪಕ್ಕನೆಂಬುದರ್ಥಂ ॥ ೧೦॥ ಬಳಿಕ ಶಿವ ಒಬ್ಬನೆ ಮುಕ್ತಿಪ್ರದನೆಂದು ತಿಳಿದಿಹಾತಂ ಮಾಹೇಶ್ವರನೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಬ್ರಹ್ಮಾದಿದೇವತಾಜಾಲಂ ಮೋಹಿತಂ ಮಾಯಯಾ ಸದಾ
ಅಶಕ್ತಂ ಮುಕ್ತಿದಾನೇ ತು ಕ್ಷಯಾತಿಶಯ ಸಂಯುತಮ್॥

ಅನಾದಿಮುಕ್ತೋ ಭಗವಾನೇಕ ಏವ ಮಹೇಶ್ವರಃ
ಮುಕಿದಶ್ಚೇತಿ ಯೋ ವೇದ ಸ ವೈ ಮಾಹೇಶ್ವರಃ ಸ್ಮೃತಃ॥

ಬ್ರಹ್ಮ ವಿಷ್ಣು ರುದ್ರೇಂದ್ರಾಸ್ತೇಸಂಪ್ರಸೂತಯಃಯೆಂಬ ಶ್ರುತಿಯಿಂ ಬ್ರಹ್ಮಾದಿ ದೇವತಾ ಸಮೂಹಮೆಲ್ಲಾಗಳು ಉತ್ಪತ್ತಿ ನಾಶಂಗಳ ಅತಿಶಯದಿಂ ಕೂಡಿದಂಥಾದಾಗಿ ಶಿವನ ಸ್ವತಂತ್ರತೆಯಿಂ ಕಲ್ಪಿಸಲ್ಪಟ್ಟ ಮಾಯೆಯಿಂ ಮೋಹಿತಮಾದ ಕಾರಣದಿಂ ಪರಾಪರ ಮುಕ್ತಿಯನೀವಲ್ಲಿ ಸಾಮರ್ಥ್ಯವುಳ್ಳದಲ್ಲ ನಿತ್ಯಮುಕ್ತನಾಗಿ ಷಡ್ಗುಣೈಶ್ವರ್ಯಸಂಪನ್ನನಾದ ಶಿವನೊರ್ವನೆ ಮುಕ್ತಿಪ್ರದನೆಂದು ಯಾವಾತಂ ತಿಳಿವುತ್ತಿಹನು ಆತಂ ಮಾಹೇಶ್ವರನೆಂದು ತಿಳಿಯಲಕ್ಕನೆಂಬುದರ್ಥಂ ॥೧೨॥ ಬಳಿಕ ಬ್ರಹ್ಮಾದಿಗಳ ಮಾಹೈಶ್ವರ್ಯಮಂ ಕಡೆಗೆ ಸಮನಾಗಿ ತಿಳಿದು ಶಿವಾನಂದದಲ್ಲಿ ತತ್ಪರನಾದವ ಮಾಹೇಶ್ವರನೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಕ್ಷಯಾತಿಶಯಸಂಯುಕ್ತಾಃ ಬ್ರಹ್ಮಾವಿಷ್ಣ್ವಾದಿ ಸಂಪದಃ
ತೃಣವನ್ಮನ್ಯತೇ ಯುಕ್ತ್ಯಾ ವೀರಮಾಹೇಶ್ವರಸ್ಸದಾ ॥

ಶಬ್ದಸ್ಪರ್ಶಾದಿಸಂಪನ್ನೇ ಸುಖಲೇಶೇ ತು ನಿಸ್ಪೃಹಃ
ಶಿವಾನಂದೇ ಸಮುತ್ಕಂಠೋ ವೀರಮಾಹೇಶ್ವರೋ ಭವೇತ್ ॥

ಬ್ರಹ್ಮಾದಿಗಳ ಸಂಪತ್ತುಗಳಲ್ಲಿ ನಾಶದ ಅತಿಶಯದೊಡನೆ ಕೂಡಿದವಾದ ಕಾರಣ ಅನಿತ್ಯವೆಂಬ ಬುದ್ಧಿಯಿಂದ ತೃಣದಂತೆ ತಿಳಿದು ಶಬ್ದ ಸ್ಪರ್ಶಾದಿಗಳಿಂದುಂಟಾದ ಸೋಪಾಧಿಕ ಸುಖಲೇಶದಲ್ಲಿ ನಿಸ್ಪೃಹನಾಗಿ ನಿತ್ಯವಾದ ಶಿವಾನಂದದಲ್ಲಿ ಪ್ರೀತಿಯುಳ್ಳ ಶಿವಭಕ್ತಂ

ವೀರಮಾಹೇಶ್ವರನೆಂಬುದರ್ಥಂ ॥ ೧೪॥ ಬಳಿಕ ವೀರಮಾಹೇಶ್ವರಾಚಾರಭೇದಮಂ ಆತನ ಸ್ಥಿತಿಯಂ ಷಟ್‌ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಪರಸ್ತ್ರೀಸಂಗನಿರ್ಮುಕ್ತಃ ಪರದ್ರವ್ಯಪರಾಙ್ಮುಖಃ
ಶಿವಾರ್ಥಕಾರ್ಯಸಂಪನ್ನಶ್ಶಿವಾಗಮಪರಾಯಣಃ ॥

ಶಿವಸ್ತುತಿರಸಾಸ್ವಾದಮೋದಮಾನಮನಾಶ್ಶುಚಿಃ
ಶಿವೋತ್ಕರ್ಷಪ್ರಮಾಣಾನಾಂ ಸಂಪಾದನಸಮುದ್ಯತಃ ॥

ನಿರ್ಮಮೋ ನಿರಹಂಕಾರೋ ನಿರಸ್ತಕ್ಲೇಶಪಂಜರಃ
ಅಸ್ಪೃಷ್ಟಮದಸಂಬಂಧೋ ಮಾತ್ಸರ್ಯಾವೇಶವರ್ಜಿತಃ ॥

ನಿರಸ್ತಮದನೋನ್ಮೇಷೋ ನಿರ್ಧೂತಕ್ರೋಧವಿಪ್ಲವಃ
ಸದಾ ಸಂತುಷ್ಟಹೃದಯಸ್ಸರ್ವಪ್ರಾಣಿಹಿತೇ ರತಃ ॥

ನಿವಾರಣಸಮುದ್ಯೋಗೀ ಶಿವಕಾರ್ಯವಿರೋಧಿನಾಮ್
ಸಹಚಾರೀ ಸದಾಕಾಲಂ ಶಿವೋತ್ಕರ್ಷಾಭಿಧಾಯಿಭಿಃ ॥

ಶಿವಾಪಕರ್ಷಸಂಪ್ರಾಪ್ತೌ ಪ್ರಾಣತ್ಯಾಗೇsಪ್ಯಶಂಕಿತಃ
ಶಿವೈಕನಿಷ್ಠಸ್ಸರ್ವಾತ್ಮಾ ವೀರಮಾಹೇಶ್ವರೋ ಭವೇತ್ ॥

ಅನ್ಯಸ್ತ್ರೀ ಸಂಗ ಶೂನ್ಯನು. ಪರದ್ರವ್ಯದಲ್ಲಿ ಅಡ್ಡಲಾದ ಮುಖವುಳ್ಳವನು. ಶಿವಾಗಮ ಶ್ರವಣನಿಷ್ಠನು. ಶಿವಸ್ತುತಿರಸಾಯನಪಾನದಿಂ ಸುಖಿಸುತ್ತಿದ್ದ ಮನಸ್ಸುಳ್ಳವನು. ಪವಿತ್ರನಾದವನು. ಶಿವಾಧಿಕ್ಯವ ಪ್ರತಿಪಾದಿಸುವ ಶ್ರುತ್ಯಾದಿ ಪ್ರಮಾಣಂಗಳ ಸಂಪಾದಿಸುವಲ್ಲಿ ಉದ್ಯೋಗವುಳ್ಳವನು. ನಾನು ನನ್ನದೆಂಬ ಪರಿಮಿತ ಅಹಂಕಾರ ಮಮಕಾರ ಶೂನ್ಯನು. ನಿವಾರಿಸಲ್ಪಟ್ಟ ಅಜ್ಞಾನಾದಿ ಸಕಲಕ್ಲೇಶ ಸಮೂಹವುಳ್ಳವನು. ಮುಟ್ಟಲ್ಪಡದೆ ಇದ್ದ ಮದ ಮಾತ್ಸರ್ಯಂಗಳುಳ್ಳವನು. ನಿವಾರಿಸಲ್ಪಟ್ಟ ಕಾಮೋದ್ರೇಕವುಳ್ಳವನು. ಹಾರಿಸಲ್ಪಟ್ಟ ಕ್ರೋಧದ ಬಾಧೆಯುಳ್ಳವನು. ಎಲ್ಲಾಗಳು ಸುಖಿಸುತ್ತಿದ್ದ ಚಿತ್ತವುಳ್ಳವನು. ಸಕಲಪ್ರಾಣಿಗಳಿಗೂ ಹಿತವ ಚಿಂತಿಸುವನು. ಶಿವಪ್ರಯೋಜನಕ್ಕೆ ವಿರೋಧಿಗಳಾದವರ ನಿವಾರಿಸುವಲ್ಲಿ ಉದ್ಯೋಗ ವುಳ್ಳವನು. ಶಿವೋತ್ಕರ್ಷವ ಪೇಳುವವರ ಸಂಗಡ ಎಲ್ಲಾಗಳೂ ಸಂಚರಿಸುವನು. ಶಿವನಿಂದೆ ಪ್ರಾಪ್ತಮಾದಲ್ಲಿ ತನ್ನ ಪ್ರಾಣತ್ಯಾಗವ ಮಾಡುವುದಕ್ಕೆ ಶಂಕೆಯಿಲ್ಲದವನು. ಶಿವಲಿಂಗ ಒಂದರಲ್ಲಿಯೆ ನಿಷ್ಠೆಯುಳ್ಳವನು. ಶಿವಭಾವವುಳ್ಳವನು. ಇಂಥ ಮಹಾಪುರುಷಂ ವೀರಮಾಹೇಶ್ವರನೆನಿಸಿಕೊಂಬವನಹನೆಂಬುದರ್ಥಂ. ॥೨೦॥

## ೧೭. ಲಿಂಗನಿಷ್ಠಾಸ್ಥಲ

ಬಳಿಕ ಮಾಹೇಶ್ವರನಿಂ ಮಾಡಲ್ತಕ್ಕ ಲಿಂಗನಿಷ್ಠಾಸ್ಥಲಂ ಒಂಬತ್ತು ಸೂತ್ರಗಳಿಂ ಪ್ರತಿಪಾದಿಸುತಿರ್ದಪಂ.

ಅಸ್ಯ ಮಾಹೇಶ್ವರಸ್ಯೋಕ್ತಂ ಲಿಂಗನಿಷ್ಠಾಮಹಾಸ್ಥಲಮ್
ಪ್ರಾಣಾತ್ಯಯೇsಪಿ ಸಂಪನ್ನೇ ಯದತ್ಯಾಜ್ಯಂ ವಿಧೀಯತೇ ॥

ಯಾವುದಾನೊಂದು ಲಿಂಗನಿಷ್ಠಾಸ್ಥಲವು ಪ್ರಾಣಸಂಕಟ ಬಂದರೂ ಬಿಡಲು ಯೋಗ್ಯ

ವಲ್ಲದಂಥದಾಗಿ ವಿಧಿಸಲ್ಪಡುತ್ತಿಹುದು. ಆ ಲಿಂಗನಿಷ್ಠಾ ಸ್ಥಲವು ಶಿವಲಿಂಗ ಒಂದರಲ್ಲಿಯೇ ನಿಷ್ಠೆಯುಳ್ಳ ಈ ಮಾಹೇಶ್ವರಂಗೆ ಪೇಳಲ್ಪಟ್ಟಿತ್ತೆಂಬುದರ್ಥಂ ॥೨೧ ॥ ಬಳಿಕವೆಂಥಾದು ಪ್ರಾಣಸಂಕಟವೆಂಬಲ್ಲಿ ಭವೇತ್ಪ್ರಾಣಪರಿತ್ಯಾಗಃ ಛೇದನಂ ಶಿರಸೋ ಪಿ ವಾ ನತ್ವನಭ್ಯರ್ಚ ಭುಂಜೀಯಾದ್ಭಗವಂತಂ ತ್ರಿಯಂಬಕಮ್ ಎಂಬ ಶಿವಧರ್ಮವಚನಾನುಸಾರದಿಂ ಪೇಳುತಿರ್ದಪಂ.

ಅಪಗಚ್ಛತು ಸರ್ವಸ್ವಂ ಶಿರಚ್ಛೇದನಮಸ್ತು ವಾ
ಮಾಹೇಶ್ವರೋ ನ ಮುಂಚೇತ ಲಿಂಗಪೂಜಾ ಮಹಾವ್ರತಮ್ ॥

ತನ್ನ ಸರ್ವಸ್ವ ಹೋದರೂ ಹೋಗಲಿ ಶಿರಚ್ಛೇದನವಾದರೂ ಆಗಲಿ ಮಾಹೇಶ್ವರನಾದವನು ಲಿಂಗಪೂಜಾರೂಪಮಾದ ಮಹಾವ್ರತಮಂ ಬಿಡಲಾಗದೆಂಬು ದರ್ಥಂ ॥೨೨॥ ಬಳಿಕ ಯಾರು ಕೆಲಬರು ಶಿವಪೂಜೆಯಿಲ್ಲದೆ ಭೋಜನಮಂ ಮಾಡರು ಅವರ ಹಸ್ತದಲ್ಲಿ ಮೋಕ್ಷಲಕ್ಷ್ಮಿಯು ಕರತಳದಲ್ಲಿರುವ ನೆಲ್ಲಿಫಲದಂತೆ ಪ್ರಕಾಶಿಸುತ್ತಿಹಳೆಂದು, ಪೇಳುತಿರ್ದಪಂ.

ಲಿಂಗಪೂಜಾಮಕೃತ್ವಾತು ಯೇ ನ ಭುಂಜಂತಿ ಮಾನವಾಃ
ತೇಷಾಂ ಮಹಾತ್ಮಾನಾಂ ಹಸ್ತೇ ಮೋಕ್ಷಲಕ್ಷ್ಮೀರುಪಸ್ಥಿತಾ ॥

ಲಿಂಗಪೂಜೆಯ ಮಾಡದೆ ಯಾವ ಮಾನವರು ಭೋಜನಮಂ ಮಾಡರು, ಆ ಮಹಾತ್ಮರ ಹಸ್ತದಲ್ಲಿ ಮೋಕ್ಷಲಕ್ಷ್ಮಿಯು ಕರತಳಾಮಳಕದಂತೆ ಪ್ರತ್ಯಕ್ಷವಾಗಿ ಇರುವಳೆಂಬು ದರ್ಥಂ. ಇದು ಲಿಂಗನಿಷ್ಠೆಗೆ ಫಲವೆಂಬುದು ತಾತ್ಪರ್ಯಂ ॥೨೩॥ ಬಳಿಕೀ ಅರ್ಥವನೆ ವಿಶೇಷಿಸುತಿರ್ದಪಂ.

ಕಿಮನ್ಯೈ ಧರ್ಮಕಲಿಲೈಃ ಕೀಕಷಾರ್ಥ ಪ್ರದಾಯಿಭಿಃ
ಸಾಕ್ಷಾನ್ಮೋಕ್ಷಪ್ರದಶ್ಯಂಭೋರ್ಧರ್ಮೋ ಲಿಂಗಾರ್ಚನಾತ್ಮಕಃ ॥

ಶಿವಲಿಂಗ ಪೂಜಾರೂಪಮಾದ ಧರ್ಮವು ಅಪರೋಕ್ಷರೂಪಮಾದ ಮೋಕ್ಷವ ಕೊಡುವಂಥಾದು. ಅದುಕಾರಣವಾಗಿ ಶಿವಲಿಂಗಪೂಜಾವ್ಯತಿರಿಕ್ತಮಾದ ಅನಿತ್ಯಫಲವೀವ ಕ್ಷುದ್ರಧರ್ಮಗಳಿಂದೇನು ಪ್ರಯೋಜನವೆಂಬುದರ್ಥಂ ॥೨೪॥ ಬಳಿಕ ಲಿಂಗಾರ್ಪಿತಾನ್ನಪಾನ ಮಹತ್ವವಂ ಪೇಳುತಿರ್ದಪಂ.

ಅರ್ಪಿತೇನಾನ್ನಪಾನೇನ ಲಿಂಗೇ ನಿಯಮಪೂಜಿತೇ
ಯೇ ದೇಹವೃತ್ತಿಂ ಕುರ್ವಂತಿ ಮಹಾಮಾಹೇಶ್ವರಾ ಹಿ ತೇ ॥

ನಿಯಮದಿಂ ಪೂಜಿಸಲ್ಪಟ್ಟ ಶಿವಲಿಂಗದಲ್ಲಿ ಅರ್ಪಿಸಲ್ಪಟ್ಟ ಅನ್ನೋದಕದಿಂದ ಯಾರು ಕೆಲಬರು ದೇಹವ ಧರಿಸಿಹರು ಅವರು ಮಹಾಮಾಹೇಶ್ವರರೆಂದು ಪ್ರಸಿದ್ಧರೆಂಬುದರ್ಥಂ ॥೨೫॥ ಬಳಿಕ ಯದ್ಧಿ ಮನಸಾ ಧ್ಯಾಯತಿ ತದ್ವಾಚಾ ವದತಿ ತತ್ಕರ್ಮಣಾ ಕರೋತಿಯೆಂಬ ಶ್ರುತ್ಯನುಸಾರದಿಂ ತ್ರಿಕರಣಪೂರ್ವಕಮಾಗಿ ಶಿವಲಿಂಗ ನಿಷ್ಠರು ಶಿವಸ್ವರೂಪರೆ ಸರಿ ಎಂದು ಪೇಳುತಿರ್ದಪಂ.

ಚಿನ್ಮಯೇ ಶಾಂಕರೇ ಲಿಂಗೇ ಸ್ಥಿರಂ ಯೇಷಾಂ ಮನಸ್ಸದಾ
ವಿಮುಕ್ತೇತರಸರ್ವಾರ್ಥಂ ತೇ ಶಿವಾಃ ನಾತ್ರ ಸಂಶಯಃ ॥

ಯಾವ ಕೆಲಬರ ಮನಸ್ಸು ಬಿಡಲ್ಪಟ್ಟ ಸ್ವರ್ಗಾದಿ ತುಚ್ಛ ಫಲಾಭಿಲಾಷೆಯುಳ್ಳದಾಗಿ ಚಿದ್ರೂಪನಾದ ಶಿವಲಿಂಗದಲ್ಲಿ ನಿರಂತರವೂ ಸ್ಥಿರವಾಗಿರುವುದು ಅವರು ಭೂರುದ್ರರೆಂದು ಪ್ರಸಿದ್ಧರು. ಈ ಅರ್ಥದಲ್ಲಿ ಸಂದೇಹವಿಲ್ಲಮೆಂಬುದರ್ಥಂ ॥೨೬॥ ಬಳಿಕಿಲ್ಲೀ ಚಿಲ್ಲಿಂಗದಲ್ಲಿ ಮನೋಮಾತ್ರವಿಶ್ರಾಂತಿ ಪೇಳಲ್ಪಟ್ಟಿತ್ತೆಂದು ಶಂಕೆ ಪ್ರಾಪ್ತಮಾದಲ್ಲಿ ಕರಣತ್ರಯ ವಿಶ್ರಾಂತಿಯನು ಪೇಳುತಿರ್ದಪಂ.

ಲಿಂಗೇ ಯಸ್ಯ ಮನೋ ಲೀನಂ ಲಿಂಗಸ್ತುತಿಪರಾ ಚ ವಾಕ್
ಲಿಂಗಾರ್ಚನಪರೌ ಹಸ್ತೌ ಸ ರುದ್ರೋ ನಾತ್ರ ಸಂಶಯಃ ॥

ಯಾವಾತನ ಮನಸ್ಸು ಶಿವಲಿಂಗದಲ್ಲಿ ಎರಕವಾಗಿರುವುದು. ಯಾವಾತನ ವಾಗಿಂದ್ರಿಯವು ಲಿಂಗಸ್ತುತಿಯನೆ ಮಾಡುತ್ತಿಹುದು. ಯಾವಾತನ ಹಸ್ತಗಳು ಲಿಂಗಪೂಜೆಯನೆ ಮಾಡುತ್ತಿಹವು ಆತನು ಶಿವನೆ ಸರಿ ಸಂದೇಹವಿಲ್ಲ ವೆಂಬುದರ್ಥಂ ॥೨೭॥ ಈ ಪ್ರಕಾರದಿಂ ಲಿಂಗನಿಷ್ಠನಾದವಗೆ ಅಗ್ನಿಹೋತ್ರದಿಂ ಪ್ರಯೋಜನವಿಲ್ಲವೆಂದು ಪೇಳುತಿರ್ದಪಂ.

ಲಿಂಗನಿಷ್ಠಸ್ಯ ಕಿಂ ತಸ್ಯ ಕರ್ಮಣಾ ಸ್ವರ್ಗಹೇತುನಾ
ನಿತ್ಯಾನಂದಶಿವಪ್ರಾಪ್ತಿರ್ಯಸ್ಯ ಶಾಸ್ತ್ರೇಷು ನಿಶ್ಚಿತಾ ॥

ಯಾವನಾನೊಬ್ಬ ಲಿಂಗನಿಷ್ಠನಿಗೆ ನಿತ್ಯಾನಂದ ಶಿವಪ್ರದಪ್ರಾಪ್ತಿಯು ವೇದಾಗಮ ಪುರಾಣಂಗಳಲ್ಲಿ ನಿಶ್ಚೈಸಲ್ಪಟ್ಟಿತ್ತು ಆ ಕಾರಣದಿಂದಾತಂಗೆ ಅನಿತ್ಯಮಾದ ಸ್ವರ್ಗಕ್ಕೆ ಕಾರಣವಾದ ಅಗ್ನಿಹೋತ್ರಾದಿ ಕರ್ಮದಿಂದೇನು ಪ್ರಯೋಜನವಿಲ್ಲಮೆಂಬುದರ್ಥಂ ॥೨೮॥ ಬಳಿಕಾ ಲಿಂಗನಿಷ್ಠನ ಮಹತ್ತ್ವ ಪೇಳುತಿರ್ದಪಂ.

ಲಿಂಗನಿಷ್ಠಾಪರಂ ಶಾಂತಂ ಭೂತಿರುದ್ರಾಕ್ಷಸಂಯುತಮ್
ಪ್ರಶಂಸಂತಿ ಸದಾಕಾಲಂ ಬ್ರಹ್ಮಾದ್ಯಾ ದೇವತಾ ಮುದಾ ॥

ವಿಭೂತಿ ರುದ್ರಾಕ್ಷಿಗಳೊಡನೆ ಕೂಡಿ ರಾಗದ್ವೇಷರಹಿತನಾಗಿ ಲಿಂಗನಿಷ್ಠೆಯುಳ್ಳ ಮಾಹೇಶ್ವರನಂ ಎಲ್ಲಾಗಳು ಸಂತೋಷದಿಂ ಬ್ರಹ್ಮಾದಿಗಳು ಸ್ತುತಿಸುತ್ತಿಹರೆಂಬುದರ್ಥಂ ॥೨೯॥

## ೧೮. ಪೂರ್ವಾಶ್ರಯನಿರಸನಸ್ಥಲ

ಬಳಿಕ ಗುರುಸಂಸ್ಕೃತಭಾವಸ್ಸನ್ ಗುರುನಿರ್ಮಿತದೇಹವಾನ್ ವಿಸ್ಮೃತ್ಯ ಪೂರ್ವದುರ್ಭಾವಂ ತದಧೀನಃ ಸಮಾಚರೇತ್ ಇತಿ ಯೋಗಜಾಗಮ ವಚನಾನುಸಾರದಿಂದ ಶಿವಲಿಂಗನಿಷ್ಠನಿಗೆ ಪ್ರತಿಕೂಲಮಾದ ಪೂರ್ವಾಶ್ರಯದ ನಿರಸನಸ್ಥಲಮಂ ಸೂಚಿಸುತಿರ್ದಪಂ.

ಲಿಂಗೈಕನಿಷ್ಠಹೃದಯಃ ಸದಾ ಮಾಹೇಶ್ವರೋ ಜನಃ
ಪೂರ್ವಾಶ್ರಯಗತಾನ್ ಧರ್ಮಾಂಸ್ತ್ಯಜೇತ್ಸ್ವಾಚಾರರೋಧಕಾನ್ ॥

ನಿರಂತರವೂ ಶಿವಲಿಂಗ ಒಂದರಲ್ಲಿಯೇ ನಿಷ್ಠೆಯುಳ್ಳ ವೀರಮಾಹೇಶ್ವರನು ತನ್ನ ಸಮಯಾಚಾರಕ್ಕೆ ವಿರೋಧಿಗಳಾದ ಪೂರ್ವಾಶ್ರಯವನ್ನೈದಿದ ಪ್ರಾಕೃತಧರ್ಮಂಗಳಂ ಬಿಡುವುದೆಂಬುದರ್ಥಂ ॥೩೦॥ ಬಳಿಕಾತನೆಂತವನೆಂಬಲ್ಲಿ ಪೇಳುತಿರ್ದಪಂ.

ಸ್ವಜಾತಿ ಕುಲಜಾನ್ ಧರ್ಮಾನ್ ಲಿಂಗನಿಷ್ಠಾವಿರೋಧಿನಃ
ತ್ಯಜನ್ಮಾಹೇಶ್ವರೋ ಜ್ಞೇಯಃ ಪೂರ್ವಾಶ್ರಯನಿರಾಸಕಃ ॥

ಲಿಂಗನಿಷ್ಠೆಗೆ ಪ್ರತಿಕೂಲವಾದಂಥಾ ಬ್ರಾಹ್ಮಣತ್ವಾದಿ ಜಾತಿ ಕುಂಬಾರಾದಿ ಕುಲದಲ್ಲಿ ಪ್ರಾಪ್ತವಾದ ಜಾತಪ್ರೇತಾಶೌಚ ಮೊದಲಾದ ಧರ್ಮಂಗಳಂ ಬಿಡುವಂಥಾ ವೀರಮಾಹೇಶ್ವರರಂ ಪೂರ್ವಾಶ್ರಯ ನಿರಾಸಕನೆಂದು ತಿಳಿಯಲ್ತಕ್ಕನೆಂಬುದರ್ಥಂ ॥೩೧॥ ಬಳಿಕ ಪೂರ್ವಾಶ್ರಯ ಪ್ರಾಪ್ತಮಾದ ನಿತ್ಯನೈಮಿತ್ತಿಕ ಕರ್ಮಂಗಳಂ ಬಿಟ್ಟರೆ ಪಾಪ ಶ್ರವಣ ಮುಂಟಾಗಿರುವುದರಿಂದ ಧರ್ಮಂಗಳದೆಂತು ಬಿಡಲ್ತಕ್ಕವೆಂಬಲ್ಲಿ ಪೇಳುತಿರ್ದಪಂ.

ಶಿವಸಂಸ್ಕಾರಯೋಗೇನ ವಿಶುದ್ಧಾನಾಂ ಮಹಾತ್ಮನಾಮ್
ಕಿಂ ಪೂರ್ವಕಾಲಿಕೈರ್ಧರ್ಮೈಃ ಪ್ರಾಕೃತಾನಾಂ ಹಿತೇ ಮತಾಃ ॥

ಪೂರ್ವೋಕ್ತ ದೀಕ್ಷಾರೂಪಮಾದ ಶಿವಸಂಸ್ಕಾರ ಸಂಬಂಧದಿಂದುಂಟಾದ ಲಿಂಗ ನಿಷ್ಠೆಯಿಂ ಕೊಡಹಲ್ಪಟ್ಟ ಸಂಚಿತಾಗಾಮಿ ಸಕಲ ದೋಷವುಳ್ಳವರಾಹತನದಿಂ ನಿರ್ಮಲರಾದ ಶಿವಶರಣರಿಗೆ ಪೂರ್ವಾಶ್ರಯಪ್ರಾಪ್ತ ನಿತ್ಯ ನೈಮಿತ್ಯಕಾದಿ ಕರ್ಮಂಗಳಿಂದೇನು ಪ್ರಯೋಜನವಿಲ್ಲ. ಪ್ರತ್ಯವಾಯನಿವೃತ್ತಿಯೆ ಪ್ರಯೋಜನವೆಂಬಲ್ಲಿ ಪ್ರತ್ಯವಾಯವು ಇಲ್ಲ ಅದೇತರಿಂದೆಂದಡೆ ನೇಹಾಭಿಕ್ರಮ ನಾಶೋಸ್ತಿ ಪ್ರತ್ಯವಾಯೋ ನ ವಿದ್ಯತೇ ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥ ಈ ವಚನಕ್ಕೆ ಈ ಯತಿವರ್ಣಾಶ್ರಮದಲ್ಲಿ ಆತ್ಮಾಭಿಮುಖಿ ಪ್ರವೀಣಮಾದ ಗುರುಕಾರುಣ್ಯದಿಂ ಪ್ರಾಪ್ತಮಾದ ವಿಭೂತಿ ರುದ್ರಾಕ್ಷಿ ಧಾರಣೆ ಮೊದಲಾದ ಆಚಾರಾತ್ಮಕಮವು ವಿಸ್ಮೃತಿಯಿಲ್ಲದೆ ಸದಾ ತದೇಕನಿಷ್ಠೆಯಿಂ ಅನುಷ್ಠಿಸಲ್ಪಡುತ್ತಿರುವುದಕ್ಕೆ ವಿಚ್ಛೇದವಿಲ್ಲದ ಕಾರಣದಿಂ ಪೂರ್ವಾಶ್ರಯಪ್ರಾಪ್ತ ನಿತ್ಯ ನೈಮಿತ್ತಿಕ ಕರ್ಮಪರಿತ್ಯಾಗಕೃತ ಪ್ರತ್ಯವಾಯವಿಲ್ಲ. ಅದೇಕೆಂದಡೆ ಈ ಶಿವಾಶ್ರಯಕ್ಕಂಗಮಾದ ವಿಭೂತಿ ರುದ್ರಾಕ್ಷಿಧಾರಣಾದಿ ಪೂರ್ವಕಾಲ ಕರ್ಮತ್ಯಾಗಕೃತ ಪ್ರತ್ಯವಾಯ ಮೊದಲಾದ ಮಹಾಪಾತಕ ಭೀತಿಯಿಂ ರಕ್ಷಿಸುವುದೆಂಬ ಭಗವದ್ವಚನ ಬಲದಿಂದೆಂಬುದು ತಾತ್ಪರ್ಯಂ. ಹೇಗೆ ಸಂನ್ಯಾಸಿಗಳಿಗೆ ಪೂರ್ವಾಶ್ರಯಪ್ರಾಪ್ತಮಾಗ್ನಿಹೋತ್ರಾದಿ ಧರ್ಮಪರಿತ್ಯಾಗದಲ್ಲಿ ಪ್ರತ್ಯವಾಯವಿಲ್ಲವ್ರೋ ಹಾಗೆ ಅತ್ಯಾಶ್ರಮಿಭ್ಯಃ ಪ್ರಕಾಮಂ ಪವಿತ್ರಮಾದ ಶ್ರುತಿಪ್ರಸಿದ್ಧಮಾದ ಶಿವಾಶ್ರಮಿಗಳಿಗೆ ಪೂರ್ವಾಶ್ರಮಪ್ರಾಪ್ತ ನಿತ್ಯನೈಮಿತ್ತಿಕ ಕರ್ಮತ್ಯಾಗಕೃತ ಪ್ರತ್ಯವಾಯ ವಿಲ್ಲಮೆಂಬುದು ನಿಶ್ಚಯವು. ಆ ಪೂರ್ವಾಶ್ರಯ ಧರ್ಮಗಳು ಮಾಯಾಸಂಬಂಧಿಗಳಿಗೆ ಸರಿಯೆಂದು ಪ್ರಸಿದ್ಧಮಾದ ಕಾರಣದಿಂ ತತ್ಪರಿತ್ಯಾಗಕೃತದೋಷವವರಿಗೆ ಸರಿಯೆಂಬುದರ್ಥಂ ॥೩೨॥ ಅದು ಕಾರಣವಾಗಿ

ಶಿವಸಂಸ್ಕಾರಯೋಗೇನ ಶಿವಧರ್ಮಾನುಷಂಗಿಣಾಮ್
ಪ್ರಾಕೃತಾನಾಂ ನ ಧರ್ಮೇಷು ಪ್ರವೃತ್ತಿರುಪಪದ್ಯತೇ

ಶಿವದೀಕ್ಷಾಸಂಪರ್ಕದಿಂ ಶಿವಧರ್ಮಗಳೊಡನೆ ಕೂಡಿದವರಿಗೆ ಪ್ರಾಕೃತರ ಧರ್ಮದಲ್ಲಿ ಪ್ರವೃತ್ತಿಯಾಗದೆಂಬುದರ್ಥಂ ||೩೩|| ಬಳಿಕ ಮರ್ತ್ಯರಲ್ಲಿ ದ್ವೈವಿಧ್ಯಮೆಂತೆನೆ ಪೇಳುತಿರ್ದಪಂ.

ವಿಶುದ್ಧಾಃ ಪ್ರಾಕೃತಾಶ್ಚೇತಿ ದ್ವಿವಿಧಾ ಮಾನುಷಾಃ ಸ್ಮೃತಾಃ
ಶಿವಸಂಸ್ಕಾರಿಣಾಶ್ಶುದ್ಧಾಃ ಪ್ರಾಕೃತಾ ಇತರೇ ಮತಾಃ ||

ಮನುಷ್ಯರು ಶುದ್ಧರೆಂದು ಪ್ರಾಕೃತರೆಂದಿತ್ತೆರನಾಗಿ ನೆನೆಯಲ್ಪಟ್ಟರು. ಅಲ್ಲಿ ಶಿವದೀಕ್ಷಾ ಸಂಪನ್ನರೆ ಶುದ್ಧರು ಮೊದಲಾದವರು ಪ್ರಾಕೃತರೆನಿಸಿಕೊಂಬರೆಂಬುದರ್ಥಂ ||೩೪|| ಬಳಿಕೀ ಲೋಕದಲ್ಲಿ ವರ್ಣಾಶ್ರಮಧರ್ಮದೊಳ್ ದ್ವೈವಿಧ್ಯಂಕಾಬುದಿಲ್ಲ ಎಂಬಲ್ಲಿ ಪೇಳುತಿರ್ದಪಂ.

ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ
ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾ ಪರಾ ||

ವರ್ಣಾಶ್ರಮಧರ್ಮಗಳ ಮರ್ಯಾದೆಯು ಎರಡು ಪ್ರಕಾರದಿಂ ಸಮ್ಮತ ವಾಗಿರುವುದು. ಅದೆಂತೆಂದಡೆ ಒಂದು ಶಿವನಿಂ ಪೇಳಲ್ಪಟ್ಟುದು ಮತ್ತೊಂದು ಬ್ರಹ್ಮದೇವನಿಂ ಪೇಳಲ್ಪಟ್ಟುದೆಂಬುದರ್ಥಂ ||೩೫|| ಹಾಗಾದರಾವಧರ್ಮವಾರಿಗೆಯೆಂಬಲ್ಲಿ ಪೇಳುತಿರ್ದಪಂ.

ಶಿವೋಕ್ತಧರ್ಮನಿಷ್ಠಾ ತು ಶಿವಾಶ್ರಮನಿಷೇವಿಣಾಂ
ಶಿವಸಂಸ್ಕಾರಹೀನಾನಾಂ ಧರ್ಮಃ ಪೈತಾಮಹಃ ಸ್ಮೃತಃ ||

ಶಿವೋಕ್ತಧರ್ಮಾಚರಣೆಯು ಅತ್ಯಾಶ್ರಮಿಗಳೆನಿಸಿಕೊಂಬ ಶಿವಾಶ್ರಮಿಗಳಿಗೆ ಶಿವದೀಕ್ಷೆಯಿಲ್ಲದವರಿಗೆ ಬ್ರಹ್ಮನಿಂದುಕ್ತಮಾದ ಧರ್ಮವೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ||೩೬|| ಹಾಗಾದಡೆ ಶಿವಾಶ್ರಮಿಗಳು ಬ್ರಾಹ್ಮಣತ್ವಾದಿಜಾತಿಭೇದ ವಿಶಿಷ್ಟವೋ ಅಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ಶಿವಸಂಸ್ಕಾರಯುಕ್ತೇಷು ಜಾತಿ ಭೇದೋ ನ ವಿದ್ಯತೇ
ಕಾಷ್ಠೇಷು ವಹ್ನಿದಗ್ಧೇಷು ಯಥಾ ರೂಪಂ ನ ವಿದ್ಯತೇ ||

ಅಗ್ನಿಯಿಂ ಸುಡಲ್ಪಟ್ಟ ಶುಷ್ಕಂಗಳಲ್ಲಿ ಪೂರ್ವರೂಪಮೆಂತಿಲ್ಲವೋ ಹಾಗೆ ಶಿವಲಿಂಗದಲ್ಲಿ ದೀಕ್ಷೆಯೊಡನೆ ಕೂಡಿದ ಮಹಾಪುರುಷರಲ್ಲಿ ಬ್ರಾಹ್ಮಣತ್ವಾದಿ ಜಾತಿ ಭೇದವಿಲ್ಲಮೆಂಬುದರ್ಥಂ ||೩೭|| ಅದುಕಾರಣವಾಗಿ ಶಿವಭಕ್ತರಲ್ಲಿ ಜಾತಿಭೇದವ ಮಾಡಲಾಗದೆಂದು ನುಡಿವುತಿರ್ದಪಂ.

ತಸ್ಮಾತ್ಸರ್ವಪ್ರಯತ್ನೇನ ಶಿವಸಂಸ್ಕಾರಸಂಯುತಃ
ಜಾತಿಭೇದಂ ನ ಕುರ್ವೀತ ಶಿವಭಕ್ತೇ ಕದಾಚನ ||

ಅದು ಕಾರಣವಾಗಿ ಶಿವಾಶ್ರಮವತ್ಯುನ್ನತಮಾದುದೆಂದು ತಿಳಿದು ಸಕಲ ಪ್ರಯತ್ನದಿಂದಲೂ ಶಿವಲಿಂಗದೀಕ್ಷಾ ಸಂಪನ್ನನು ಶಿವದೀಕ್ಷೆಯೊಡನೆ ಕೂಡಿದ ಶಿವಭಕ್ತನಲ್ಲಿ

ಜಾತಿಭೇದವನಾವ ಸಮಯದಲ್ಲಿಯೂ ಮಾಡಲಾಗದು. ಎತ್ತಲಾನು ಜಾತಿಭೇದವ ಮಾಡಿದನಾದರೆ ಶಿವಲಿಂಗ ಶಿಲಾಬುದ್ಧಿಂ ಕುರ್ವಾಣಯಿವ ಪಾತಕಿ ಎಂಬ ಶಿವರಹಸ್ಯ ವಚನಾನುಸಾರದಿಂದವಂ ಪಾತಕಿ ಎಂಬುದರ್ಥಂ ॥೩೮॥

## ೧೯. ಸರ್ವಾದ್ವೈತನಿರಸನಸ್ಥಲ

ಬಳಿಕ ಮಾಹೇಶ್ವರಲಿಂಗನಿಷ್ಠೆಗೆ ವಿರೋಧಿಯಾದ ಕಾರಣದಿಂ ಪೂರ್ವಾಶ್ರಯ ನಿರಾಸಕನೆಂತಾದಾನು ಹಾಗೆ ತನ್ನಿಷ್ಠೆಗೆ ವಿಧಿಯಾದ ಸರ್ವಾದ್ವೈತವನು ತಿರಸ್ಕರಿಸುತ್ತಿಹನೆಂದು ಆತನಿಂ ಮಾಡಲ್ಪಟ್ಟ ಸರ್ವಾದ್ವೈತನಿರಸನಸ್ಥಲಂ ನಿರೂಪಿಸುತಿರ್ದಪಂ.

ಪೂಜ್ಯ ಪೂಜಕಯೋರ್ಲಿಂಗಜೀವಯೋರ್ಭೇದವರ್ಜನೇ
ಪೂಜಾಕರ್ಮಾದ್ಯಸಂಪತ್ತೇರ್ಲಿಂಗನಿಷ್ಠಾವಿರೋಧತಃ ॥

ಸರ್ವಾದ್ವೈತವಿಚಾರಸ್ಯ ಜ್ಞಾನಾಭಾವೇ ವ್ಯವಸ್ಥಿತೇಃ
ಭವೇನ್ಮಾಹೇಶ್ವರಃ ಕರ್ಮೀ ಸರ್ವಾದ್ವೈತನಿರಾಸಕಃ ॥

ಪೂಜ್ಯ ಪೂಜಕರಾದ ಶಿವಲಿಂಗ ಶಿವಭಕ್ತರಿಗೆ ಭೇದವಿಲ್ಲದಿದ್ದರೆ ಲಿಂಗನಿಷ್ಠೆಗೆ ವಿರೋಧವಾಹ ಕಾರಣದಿಂ ಪೂಜಾಕರ್ಮಸಂಪತ್ತಿಯಿಲ್ಲದ ಸಂಬಂಧ ಸರ್ವಾದ್ವೈತ ವಿಚಾರವ ವರ್ತನೆಗೆ ಉಪಪತ್ತಿ ಇಲ್ಲವಾಗಲಾಗಿ ಶಿವಲಿಂಗಪೂಜಾದಿ ಕರ್ಮನಿಷ್ಠನಾದ ವೀರಮಾಹೇಶ್ವರಂ ಸರ್ವಾದ್ವೈತನಿರಾಸಕನಹನೆಂಬುದರ್ಥಂ ॥೪೦॥ ಬಳಿಕ ಭೇದದಿಂ ಮಾಡುವ ಪೂಜಾಪ್ರಕಾರವೆಂತೆನೆ ಪೇಳುತಿರ್ದಪಂ.

ಪ್ರೇರಕಂ ಶಂಕರಂ ಬುದ್ಧ್ವಾ ಪ್ರೇರ್ಯಮಾತ್ಮಾನಮೇವ ಚ
ಭೇದಾತ್ತಂ ಪೂಜಯೇನ್ನಿತ್ಯಂ ನ ಚಾದ್ವೈತಪರೋ ಭವೇತ್ ॥

ಶಿವನು ಜೀವರಿಗೆ ಬುದ್ಧಿ ಪ್ರೇರಕನೂ ಜೀವನೆ ಪ್ರಿಯನೆಂದೂ ಭೇದದಿಂ ನಿತ್ಯವೂ ಪೂಜಿಸೂದು. ಪೂಜೆಗೆ ವಿರೋಧಮಾಹ ಕಾರಣದಿಂದದ್ವೈತನಿಷ್ಠರಾಗದೆಂಬುದರ್ಥಂ ॥೪೧॥ ಬಳಿಕ ಮತ್ತೊಂದು ಪ್ರಕಾರದಿಂದ ಭೇದವನು ಪಾಲಿಸುತಿರ್ದಪಂ.

ಪತಿಸ್ಸಾಕ್ಷಾನ್ಮಹಾದೇವಃ ಪಶುರೇಷತದಾಶ್ರಯಃ
ಅನಯೋಃ ಸ್ವಾಮಿಭೃತ್ಯತ್ವಮಭೇದೇ ಕಥಮಿಷ್ಯತೇ ॥

ಪತಿಂ ವಿಶ್ವಸ್ಯ ಎಂಬ ಶ್ರುತಿಯಿಂ ಮಾಹೇಶ್ವರಂ ಜಗತ್ಪತಿಯು ಶಿವನನಾಶ್ರಯದಿಂ ಕೂಡಿರುತ ಈ ಜೀವನು ಪಶುವೆನಿಸಿಕೊಂಬನು. ಈ ಪತಿ ಪಶುರೂಪಮಾದ ಶಿವಜೀವರಿಗೆ ಭೇದವಿಲ್ಲದಿದ್ದರೆ ಸ್ವಾಮಿಭೃತ್ಯಮೆಂತು ಇಚ್ಛೈಸಲ್ಪಡುವುದು. ಯಾವ ಪ್ರಕಾರದಿಂದಲೂ ಇಚ್ಛೈಸಲ್ಪಡದು. ಅದರಿಂದ ಸ್ವಾಮಿಭೃತ್ಯನ್ಯಾಯದಿಂ ಶಿವನು ಪೂಜಾವಿಷಯನಾದ ಕಾರಣ ಭವವೇ ಸರಿಯೆಂಬುದರ್ಥಂ ॥೪೨॥ ಬಳಿಕಾ ಭೇದಭಾವವೆಲ್ಲಿ ಪರ್ಯಂತವಿರುವುದೆಂಬಲ್ಲಿ ಪೇಳುತಿರ್ದಪಂ.

ಸಾಕ್ಷಾತ್ಕೃತಂ ಪರಂ ತತ್ತ್ವಂ ಯದಾ ಭವತಿ ಬೋಧತಃ
ತದಾದ್ವೈತಸಮಾಪತ್ತಿರ್ಜ್ಞಾನಹೀನಸ್ಯ ನ ಕ್ವಚಿತ್ ॥

ಶ್ರುತಿ ಗುರು ಸ್ವಾನುಭಾವಜ್ಞಾನದತ್ತಣಿಂ ಪರಶಿವ ಪರಬ್ರಹ್ಮವೆಂಬ ಪೆಸರುಳ್ಳ ಮಹಾಲಿಂಗತತ್ತ್ವವು ಯಾವಾಗ ದಶಮದೃಷ್ಟಾಂತರದಿಂ ಸಾಕ್ಷಾತ್ಕರಿಸಲ್ಪಡುವುದು ಆಗ ದ್ವೈತಸ್ಫುರಣೆಯುಂಟಹದು. ಅಂಥಾ ಅನುಭವವಿಲ್ಲದ ಕೇವಲ ಕರ್ಮಠಗೆ ದಾವ ಕಾಲದಲ್ಲಿಯೂ ಒಂದಿಷ್ಟು ಅಭೇದ ಸ್ಫುರಣೆಯಿಲ್ಲವೆಂಬುದರ್ಥಂ ॥೪೩॥ ಬಳಿಕ ಕರ್ಮನಿಷ್ಠಗೇನು ಕಾರಣ ಅದ್ವೈತಸ್ಫೂರ್ತಿಯಿಲ್ಲವೆ ಎಂಬಲ್ಲಿ ಪೇಳುತಿರ್ದಪಂ.

ಭೇದಸ್ಯ ಕರ್ಮಹೇತುತ್ವಾದ್ವ್ಯವಹಾರಃ ಪ್ರವರ್ತತೇ
ಲಿಂಗಪೂಜಾದಿ ಕರ್ಮಸ್ಥೋ ನ ಚಾದ್ವೈತಂ ಸಮಾಚರೇತ್ ॥

ಜೀವೇಶ್ವರಭೇದವ್ಯವಹಾರವು ಶಿವಪೂಜಾದಿ ಕ್ರಿಯೆಗೆ ಕಾರಣವಾಹತನದಿಂ ಪ್ರವರ್ತಿಸೂದು. ಅದು ಕಾರಣವಾಗಿ ಶಿವಲಿಂಗಪೂಜಾಜಪಾದಿ ಕರ್ಮನಿಷ್ಠನು ಅದ್ವೈತವನಾಚರಿಸಲಾಗದೆಂಬುದರ್ಥಂ ॥೪೪॥ ಬಳಿಕ ಪೇಳಿದರ್ಥಮಮಂ ಮುಗಿಸುತಿರ್ದಪಂ.

ಪೂಜಾದಿವ್ಯವಹಾರಸ್ಯಾದ್ಭೇದಾಶ್ರಯತಯಾ ಸದಾ
ಲಿಂಗಪೂಜಾಪರಸ್ತಸ್ಮಾನ್ನದ್ವೈತೇ ನಿರತೋ ಭವೇತ್ ॥

ಜೀವೇಶ್ವರರಿಗೆ ಭೇದವನಾಶ್ರಯಿಸಿದ ಕಾರಣದಿಂದ ಎಲ್ಲಾಗಳು ಶಿವಲಿಂಗ ಪೂಜಾದಿ ವ್ಯವಹಾರಮುಂಟಾಹದು. ಅದು ಕಾರಣವಾಗಿ ಶಿವಲಿಂಗಪೂಜಾನಿಷ್ಠನಾದ ವೀರಮಾಹೇಶ್ವರನು ಅದ್ವೈತದಲ್ಲಿ ಆಸಕ್ತನಾಗಲಾಗದೆಂಬುದರ್ಥಂ ॥೪೫॥

## ೨೦. ಆಹ್ವಾನನಿರಸನಸ್ಥಲ

ಬಳಿಕ ಶಿವಲಿಂಗಪೂಜಾರ್ಥವಾಗಿ ಅದ್ವೈತವ ನಿರಾಕರಿಸಿದ ಮಾಹೇಶ್ವರಂ ಶೈವರಂತೆ ಶಿವಲಿಂಗಪೂಜಾರ್ಥವಾಗಿ ಶಿವನನಾವಾಹಿಸಲಾಗದೆಂದು ಆಹ್ವಾನನಿರಸನಸ್ಥಲಮಂ ಸೂಚಿಸುತಿರ್ದಪಂ.

ಲಿಂಗಾರ್ಚನಪರಃ ಶುದ್ಧಃ ಸರ್ವಾದ್ವೈತನಿರಾಸಕಃ
ಶ್ರೇಷ್ಠಲಿಂಗೇ ಶಿವಾಕಾರೇ ನ ತಮಾವಾಹಯೇಚ್ಛಿವಮ್ ॥

ಶಿವಲಿಂಗಪೂಜಾ ತತ್ಪರನಾಗಿ ಸರ್ವಾದ್ವೈತ ನಿರಾಸಕನಾದ ನಿತ್ಯಶುದ್ಧನಾದ ವೀರಮಾಹೇಶ್ವರಂ ಶಿವಸ್ವರೂಪವುಳ್ಳ ತನ್ನಿಷ್ಟಲಿಂಗದಲ್ಲಿ ಆ ಪ್ರಸಿದ್ಧನಾದ ಶಿವನಾವಾಹಿಂಸಲಾಗದೆಂಬುದರ್ಥಂ ॥೪೬॥ ಬಳಿಕ ಏನುಕಾರಣವೆಂಬಲ್ಲಿ ಪೇಳುತಿರ್ದಪಂ.

ಯದಾ ಶಿವಕಲಾಯುಕ್ತಂ ಲಿಂಗಂ ದದ್ಯಾನ್ಮಹಾಗುರುಃ
ತದಾರಭ್ಯ ಶಿವಸ್ತತ್ರ ತಿಷ್ಠತ್ಯಾಹ್ವಾನಮತ್ರ ಕಿಂ ॥

ಸಕಲ ನಿಗಮಾಗಮ ಪಾರಂಗತನಾದ ಶಿವನಾದ ಗುರುಸ್ವಾಮಿಯು ಯಾವಾಗ ಶಿವಕಲೆಯೊಡನೆ ಕೂಡಿದ ಲಿಂಗಮಂ ದಯೆಯಿಂದ ಕೊಟ್ಟನು ಅಂದಾರಭ್ಯಮಾಗಿ ಆ ಶಿವಲಿಂಗದಲ್ಲಿ ಶಿವನು ಸನ್ನಿಹಿತನಾಗಿರುವನು. ಅದು ಕಾರಣದಿ ಶಿವಲಿಂಗದಲ್ಲಿ ಮರಳಿ ಆಹ್ವಾನದಿಂದೇನು ಪ್ರಯೋಜನವಿಲ್ಲಮೆಂಬುದರ್ಥಂ ॥೪೭॥ ಬಳಿಕ ಮತ್ತೊಂದು ಕಾರಣಾಂತರಮಂ ಪೇಳುತಿರ್ದಪಂ.

ಸಂಸ್ಕಾರೇಷು ಲಿಂಗೇಷು ಸದಾ ಸನ್ನಿಹಿತಃ ಶಿವಃ
ತತ್ರಾಹ್ವಾನಂ ನ ಕರ್ತವ್ಯಂ ಪ್ರತಿಪತ್ತಿವಿರೋಧಕಂ ॥

ಮಂತ್ರಸಂಸ್ಕಾರಯುಕ್ತಮಾದಲ್ಲಿ ಶಿವನು ಸದಾ ಸನ್ನಿಹಿತನಾಗಿರುವನು. ಆ ಲಿಂಗಂಗಳಲ್ಲಿ ಪೂರ್ವದಲ್ಲಿ ಮಾಡಿದ ಆವಾಹನೆ ಸಡಿಲಿಹೋಗಬೇಕೆಂಬ ಕಾರಣದಿಂ ಮರಳಿ ಆವಾಹನೆ ಮಾಡಲ್ಕಕ್ಕದಲ್ಲವೆಂಬುದರ್ಥಂ ॥೪೮॥ ಬಳಿಕ ಆವಾಹನೆ ಕೂಡದ ಕಾರಣದಿಂ ವಿಸರ್ಜನೆಯೂ ಇಲ್ಲವೆಂದು ಪೇಳುತಿರ್ದಪಂ.

ನಾಹ್ವಾನಂ ನ ವಿಸರ್ಜಂ ಚ ಸ್ವೇಷ್ಟಲಿಂಗೇ ತು ಕಾರಯೇತ್
ಲಿಂಗನಿಷ್ಠಾಪರೋ ನಿತ್ಯಮಿತಿ ಶಾಸ್ತ್ರಸ್ಯ ನಿಶ್ಚಯಃ ॥

ಲಿಂಗನಿಷ್ಠೆಯಲ್ಲಿ ಆಸಕ್ತಿಯುಳ್ಳಾತನು ತನ್ನಿಷ್ಟಲಿಂಗದಲ್ಲಿ ಪೂಜಾಕಾಲದಲ್ಲಿ ಎಲ್ಲಾಗಳು ಆವಾಹನೆ ವಿಸರ್ಜನೆ ಎರಡನು ಮಾಡಲಾಗದೆಂದು ಶಾಸ್ತ್ರಸಿದ್ಧ ಮೆಂಬುದರ್ಥಂ ॥೪೯॥

## ೨೧. ಅಷ್ಟತನುಮೂರ್ತಿನಿರಸನಸ್ಥಲ

ಬಳಿಕ ಶಿವಲಿಂಗವೆ ಶಿವನೆಂಬ ಅಭಿಪ್ರಾಯದಿಂದ ಆವಾಹನೆಯಂ ನಿರಾಕರಿಸಿ ಆ ಶಿವಂಗೆ ಭೂಮ್ಯಾದ್ಯಷ್ಟಮೂರ್ತಿತ್ವವು ಕೂಡದು. ಭೇದದತ್ತಣಿಂದ ಮಾಹೇಶ್ವರನಿಂ ಮಾಡಲ್ಪಟ್ಟ ಅಷ್ಟಮೂರ್ತಿನಿರಸನಸ್ಥಲಮಂ ಪ್ರಕಾಶಿಸುತಿರ್ದಪಂ.

ಯಥ್ಯಾತ್ಮಶಿವಯೋರೈಕ್ಯಂ ನ ಮತಂ ಕರ್ಮಸಂಗಿನಃ
ತಥಾ ಶಿವಾತ್ಪೃಥಿವ್ಯಾದೇರದ್ವೈತಮಪಿ ನೇಷ್ಯತೇ ॥

ಶಿವಪೂಜಾದಿ ಕರ್ಮನಿಷ್ಠನಾದ ವೀರಮಾಹೇಶ್ವರಂಗೆ ಪೂಜ್ಯ ಪೂಜಕ ವಿವೇಕಮಾದ ಕಾರಣದಿಂ ಶಿವ ಜೀವೈಕ್ಯರದೆಂತು ಸಮ್ಮತವಲ್ಲವೋ ಹಾಗೆ ಆ ಕರ್ಮನಿಷ್ಠಂಗೆ ಶಿವನಿಂ ಭೂಮ್ಯಾದಿಗಳಿಗೆ ಭೇದವು ಇಚ್ಛೈಸಲ್ಪಡದು. ಅದೆಂತೆಂದಡೆ ಅಷ್ಟಮೂರ್ತಿಗಳೊಳಗೆ ಆತ್ಮನು ಪ್ರವಿಷ್ಟನಾಗಿರುವ ಕಾರಣದಿಂದೆಂಬುದು ತಾತ್ಪರ್ಯಂ ॥೫೦॥ ಬಳಿಕ ಶಿವಂಗೆ ಭೂಮ್ಯಾದಿಗಳೊಡನೆ ಅಭೇದವು ಕೂಡದೆಂದು ನುಡಿವುತಿರ್ದಪಂ.

ಪೃಥಿವ್ಯಾದ್ಯಷ್ಟಮೂರ್ತಿತ್ವಮೀಶ್ವರಸ್ಯ ಪ್ರಕೀರ್ತಿತಮ್
ತದಧಿಷ್ಠಾತೃಭಾವೇನ ನ ಸಾಕ್ಷಾದೇಕಭಾವತಃ ॥

ಯಸ್ಯ ಪೃಥ್ವೀ ಶರೀರಮೆಂಬುದು ಮೊದಲಾಗಿ ಯಸ್ಯಾತ್ಮಾಶರೀರಮೆಂಬುದು ಕಡೆಯಾದ ಬೃಹದಾರಣ್ಯಶ್ರುತಿ ಸಿದ್ಧಾಷ್ಟಮೂರ್ತಿತ್ವವು ಆ ಭೂಮ್ಯಾದಿಗಳಿಗೆ ಆಧಾರವಾಹ ತನದಿಂ ಪೇಳಲ್ಪಟ್ಟಿತು. ಹೀಗೆ ಮೊಲೆಗೂ ಮೊಲೆವಾಲಿಗೂ ಭೇದವೆ. ಆದರೂ ಶಿಶು ಮೊಲೆಯನ್ನುಣ್ಣುತ್ತದೆ ಎಂಬಲ್ಲಿ ಅಭೇದ. ಔಪಚಾರಿಕವು ಹಾಗೆ ಔಪಚಾರಿಕವಲ್ಲದೆ ಸಾಕ್ಷಾದಭೇದವಿಲ್ಲ. ಅದೆಂತೆಂದಡೆ ದ್ವಯಮುಷ್ಣಂ ದ್ವಯಂ ಶೀತಮನುಷ್ಣಾಂ ಶೀತಲಂದ್ವಯಮ್ ದ್ವಯಮಸ್ಪರ್ಶಮಿತ್ಯಷ್ಟೌ ಪಾಂತು ವೋ ಹರಮೂರ್ತಯಃ. ಇದಕೆ ವಿವರ– ಅಗ್ನಿ ಸೂರ್ಯರುಷ್ಣ ಸ್ಪರ್ಶವುಳ್ಳವರು ಜಲ ಚಂದ್ರರು ಶೀತಸ್ಪರ್ಶವುಳ್ಳವರು. ಭೂ ವಾಯುಗಳುಷ್ಣ ಶೀತಸ್ಪರ್ಶವುಳ್ಳವರು. ಆಕಾಶಾತ್ಮರು ಸ್ಪರ್ಶರಹಿತರು. ಈ ಪ್ರಕಾರದಿಂ

ಭೇದ ಪುಟ್ಟಿತದರಿಂ ಶರೀರಭಾವವೂ ಭೇದಯುಕ್ತವೆಯಾದ ಕಾರಣದಿಂದೆಂಬುದರ್ಥಂ ||೫೧|| ಬಳಿಕ ಭೂಮ್ಯಾದ್ಯಷ್ಟಮೂರ್ತಿಗಳಿಗೂ ಶಿವನಿಗೂ ಕಾರ್ಯಕಾರಣ ಭಾವವುಂಟಾಗಿರುವುದರಿಂದಲೂ ಅಭೇದ ಕೂಡದೆಂದು ಪೇಳುತಿರ್ದಪಂ.

ಪೃಥ್ವ್ಯಾದಿಕಮಿದಂ ಸರ್ವಂ ಕಾರ್ಯಂ ಕರ್ತಾ ಮಹೇಶ್ವರಃ
ನೈತತ್ಸಾಕ್ಷಾನ್ಮಹೇಶೋಽಯಂ ಕುಲಾಲೋ ಮೃತ್ತಿಕಾ ಯಥಾ ||

ಬ್ರಹ್ಮ ವಿಷ್ಣು ರುದ್ರೇಂದ್ರಾಸ್ತೇ ಸಂಪ್ರಸೂಯಂತೇ ಸರ್ವಾಣಿ ಚೇಂದ್ರಿಯಾಣಿ ಸಹ ಭೂತೈಃ ನ ಕಾರಣಮ್ ತು ಧ್ಯೇಯಃ ಶಂಭುರಾಕಾಶಮಧ್ಯೇ ಎಂಬ ಶ್ರುತಿಯಿಂ ಭೂಮ್ಯಾದಿಗಳೆಲ್ಲಂ ಕಾರ್ಯರೂಪಮಾದಂಥಾವು ಶಿವನು ಕಾರಣನು ಹೇಗೆ ಸಿದ್ಧ ಸ್ಥಿತಿಯಲ್ಲಿ ಮೃತ್ತಿಕೆಯಂ ಕುರುಹಿಡಲ್ಪಟ್ಟ ಘಟಕ್ಕೂ ಕುಂಬಾರಗೂ ಹೇಗೆ ಐಕ್ಯ ಕೂಡದೋ ಹಾಗೆ ಕಾರಣನಾದ ಶಿವನಿಗೂ ಕಾರ್ಯಮಾದ ಭೂಮ್ಯಾದಿಗಳಿಗೂ ಐಕ್ಯ ಕೂಡದೆಂಬುದರ್ಥಂ ||೫೨|| ಹಾಗಾದರೆ ಕುಲಾಲ ಕುಂಭಾದಿಗಳಂತೆ ಶಿವನಿಗೂ ಭೂಮ್ಯಾದಿಗಳಿಗೂ ಅತ್ಯಂತ ಭೇದವೋ ಏನೆಂಬಲ್ಲಿ ಪೇಳುತಿರ್ದಪಂ.

ಪೃಥಿವ್ಯಾದ್ಯಾತ್ಮಪರ್ಯಂತಪ್ರಪಂಚೋಽಹ್ಯಷ್ಟಧಾ ಸ್ಥಿತಃ
ತನುರೀಶಸ್ಯಚಾತ್ಮಾಽಯಂ ಸರ್ವತತ್ತ್ವನಿಯಾಮಕಃ ||

ಪೃಥ್ವ್ಯಪ್ತೇಜೋವಾಯ್ವಾಕಾಶ ಚಂದ್ರ ಸೂರ್ಯಾಗ್ನಿಹೋತ್ರಿ ಪರ್ಯಂತಮಾಗಿ ಎಂಟು ವಿಧಮಾಗಿದ್ದ ವಿಶ್ವಂ ವಿಶ್ವನಿಗೆ ಶರೀರವು ಈ ಶಿವನೂ ಸರ್ವತತ್ತ್ವಾತ್ಮಕವಾದ ಶರೀರಕ್ಕೆ ಪ್ರೇರಕನಾಗಿ ಶರೀರಿ ಎನಿಸಿಕೊಂಬನು. ಹೀಗಿದ್ದ ಸ್ಥಿತಿಯಲ್ಲಿ ಘಟವು ಕುಲಾಲರಿಗೆ ದೇಹ ದೇಹಭಾವವಿಲ್ಲದ ಕಾರಣದಿಂ ತತೋ ವಿಶೇಷವೆಂಬುದರ್ಥಂ||೫೩|| ಹಾಗಾದಡ ಭೇದವೋ ಏನೆಂಬಲ್ಲಿ ಪೇಳುತಿರ್ದಪಂ.

ಶರೀರಭೂತಾದೇತಸ್ಮಾತ್ಪ್ರಪಂಚಾತ್ಪರಮೇಷ್ಠಿನಃ
ಆತ್ಮಭೂತಸ್ಯ ದೇವಸ್ಯ ನಾಭೇದೋ ನ ಪೃಥಕ್ ಸ್ಥಿತಿಃ||

ಪರಮಪದದಲ್ಲಿರುವ ಶಿವನಿಗೆ ಶರೀರಮಾದ ಈ ಪ್ರಪಂಚದತ್ತಣಿಂದೈಕ್ಯವಿಲ್ಲ ಭೇದವೆ ಸರಿ. ಹಾಗಾದರೂ ವಿಶ್ವಶರೀರಿಯಾದ ಮಹಾದೇವನಿಗೆ ಘಟಪಟದಂತೆ ಪರಸ್ಪರ ಬಾಹ್ಯವಾಗಿ ಸ್ಥಿತಿಯಿಲ್ಲ ಶಿವನು ವ್ಯಾಪಕನಾದ ಕಾರಣದಿಂದೆಂಬುದರ್ಥಂ ||೫೪|| ಹಾಗಾದಡೆ ಭೇದಮೆಂತೆನೆ ಪೇಳುತಿರ್ದಪಂ.

ಅಚೇತನತ್ವಾತ್ ಪೃಥ್ವ್ಯಾದೇರಜ್ಞತ್ವಾದಾತ್ಮನಸ್ತಥಾ
ಸರ್ವಜ್ಞಸ್ಯ ಮಹೇಶಸ್ಯ ನೈಕರ[illegible]ಪತ್ವಮಿಷ್ಯತೇ ||

ಕರ್ತೃತ್ವ ಜ್ಞಾತೃತ್ವಮಿಲ್ಲದ ಕಾರಣದಿಂ ಭೂಮ್ಯಾದಿಗಳಚೇತನವಾದಂಥಾವು. ಅಗ್ನಿಹೋತ್ರಿಯಾದ ಯಜಮಾನನು ಚೇತನನಾದರೂ ಕಿಂಚಿಜ್ಞನು. ವಿಶ್ವಶರೀರಿಯಾದ ಶಿವನು ಸರ್ವಜ್ಞನು. ಈ ಪ್ರಕಾರದಿಂ ಮೂರು ವಿಧಮಾದ ಕಾರಣ ಭೂಮ್ಯಾದಿಗಳಿಗೂ ಶಿವನಿಗೂ

ಭೇದವೆ ಸರಿಯೆಂಬುದರ್ಥಂ ॥೫೫॥ ಹಾಗಾದಡೆ ಈ ಪ್ರಕಾರದಿಂ ಭೇದಜ್ಞಾನವುಳ್ಳವನಾರೆಂಬಲ್ಲಿ ಪೇಳುತಿರ್ದಪಂ.

ಇತಿ ಯಶ್ಚಿಂತಯೇನ್ನಿತ್ಯಂ ಪೃಥ್ವ್ಯಾದೇರಷ್ಟಮೂರ್ತಿತಃ
ವಿಲಕ್ಷಣಂ ಮಹಾದೇವಂ ಸೋऽಷ್ಟಮೂರ್ತಿನಿರಾಸಕಃ ॥

ಈ ರೀತಿಯಿಂದಷ್ಟತನುವಾದ ಭೂಮ್ಯಾದಿಯತ್ತಣಿಂ ಶಿವನು ವಿಲಕ್ಷಣನಾದವನಾಗಿಯೂ ಯಾವಾತಂ ಚಿಂತಿಸುತ್ತಿಹನು ಆತನಷ್ಟಮೂರ್ತಿನಿರಾಸಕಗೇನಕೊಂಡನೆಂಬುದರ್ಥಂ ॥೫೬॥

## ೨೨. ಸರ್ವಗತ್ವನಿರಸನಸ್ಥಲ

ಬಳಿಕ ಮಾಹೇಶ್ವರಲಿಂಗನಿಷ್ಠೆಗೆ ಪ್ರತಿಕೂಲಮಾದ ಸರ್ವಗತ್ವವನು ನಿರಾಕರಿಸುತಿರ್ದಪಂ.

ಸರ್ವಗತ್ವೇ ಮಹೇಶಸ್ಯ ಸರ್ವತ್ರಾರಾಧನಂ ಭವೇತ್
ನ ಲಿಂಗಮಾತ್ರೇ ತನ್ನಿಷ್ಠೋ ನ ಶಿವಂ ಸರ್ವಗಂ ಸ್ಮರೇತ್ ॥

ಶಿವನು ಸರ್ವಗತ್ವನಾದರೆ ಎಲ್ಲಾ ಕಡೆಯಲ್ಲೂ ಪೂಜೆಯುಂಟಾಗಬೇಕು. ಲಿಂಗಮಾತ್ರದಲ್ಲಿಯೆ ಆರಾಧನೆ ಇಲ್ಲವಾಗಬೇಕು. ಆ ಕಾರಣದಿಂ ಲಿಂಗನಿಷ್ಠನು ಶಿವನಂ ಸರ್ವಗತ್ವನಾಗಿ ಸ್ಮರಿಸಲಾಗದೆಂಬುದರ್ಥಂ ॥೫೭॥ ಹಾಗಾದಡೆ ಭೇದಮೆಂತೆನೆ ಪೇಳುತಿರ್ದಪಂ. ಬಳಿಕ ಶಿವನಿಗೆ ಸರ್ವಗತ್ವವಿಲ್ಲದಿರ್ದಡೆ ಪರಿಚ್ಛಿನ್ನತ್ವಮುಂಟಪ್ಪುದರಿಂ ಲೋಕದಲ್ಲಿ ಭಕ್ತರನೇಕಮಾದ ಕಾರಣ ತದ್ಭಕ್ತರುಗಳಲ್ಲಿ ಸಂಬಂಧಮಾದ ಇಷ್ಟಲಿಂಗಗಳೂ ಬಹಳವಾಗಲಾಗಿ ಒಂದೇ ಲಿಂಗದಲ್ಲಿ ವಿಶ್ರಾಂತನಾದರೆ ಮೇಲಾದ ಲಿಂಗಗಳಲ್ಲಿ ಇರುವ ತೆರನಂತೆ ನುಡಿವುತಿರ್ದಪಂ.

ಸರ್ವಗೋऽಪಿಸ್ಥಿತಃ ಶಂಭುಸ್ವಾಧಾರೇ ಹಿ ವಿಶೇಷತಃ
ತಸ್ಮಾದನ್ಯತ್ರ ವಿಮುಖಃ ಸ್ವೇಷ್ಟಲಿಂಗೇ ಯಜೇಚ್ಛಿವಮ್॥

ಸ-ಶಿವನು ಸರ್ವಗತ್ವನಾದರೂ ತನಗಾಶ್ರಯವಾದಲ್ಲಿ ವೆಗ್ಗಳವಾಗಿ ಪ್ರಕಾಶಿಸುತ್ತಿಹನು. ಅದು ಕಾರಣದಿಂ ಲಿಂಗವ್ಯತಿರಿಕ್ತಸ್ಥಾನದಲ್ಲಿ ಅಡ್ಡಲಾದ ಮುಖವುಳ್ಳವನಾಗಿ ತನ್ನಿಷ್ಟಲಿಂಗದಲ್ಲಿಯೆ ಪೂಜಿಸೂದೆಂಬುದರ್ಥಂ ॥೫೮॥ ಬಳಿಕ ಸರ್ವಗತ್ವನಾದ ಶಿವನು ಲಿಂಗದಲ್ಲಿಯೆಂತು ವಿಶೇಷವಾಗಿ ಪ್ರಕಾಶಿಸುತ್ತಿರ್ದಪಂ.

ಶಿವಸ್ಸರ್ವಗತಶ್ಚಾಪಿ ಸ್ವಾಧಾರೇ ವ್ಯಜ್ಯತೇ ಭೃಶಮ್
ಶಮೀಗರ್ಭೇ ಯಥಾ ವಹ್ನಿರ್ವಿಶೇಷೇಣ ವಿಭಾವ್ಯತೇ॥

ವೃಕ್ಷಾದಿಗಳಲ್ಲಿ ಇರುವಂಥಾ ವಹ್ನಿಯು ಶಮೀವೃಕ್ಷದಲ್ಲಿ ಹೇಗೆ ಅತಿಶಯವಾಗಿ ಪ್ರಕಾಶಿಸುತ್ತದೆ ಹಾಗೆ ಶಿವಸರ್ವಗತ್ವನಾದರೂ ತನಗಾಧಾರವಾದ ಲಿಂಗದಲ್ಲಿ ಅತಿಶಯದಿಂ

ಪ್ರಕಾಶಿಸುತ್ತಿಹನೆಂಬುದರ್ಥಂ ||೫೯|| ಬಳಿಕ ಲಿಂಗದಲ್ಲಿ ಏನು ಕಾರಣ ವಿಶೇಷವಾಗಿ ಪ್ರಕಾಶಿಸುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಸರ್ವಗತ್ವಂ ಮಹೇಶಸ್ಯ ಸರ್ವಶಾಸ್ತ್ರವಿನಿಶ್ಚಿತಮ್
ತಥಾಪ್ಯಾಶ್ರಯಲಿಂಗಾದೌ ಪೂಜಾರ್ಥಮಧಿಕಾ ಸ್ಥಿತಿಃ||

ಶಿವನಿಗೆ ವಿಶ್ವವ್ಯಾಪಕತ್ವವು ಸಕಲ ಶಾಸ್ತ್ರಂಗಳಿಂದಲೂ ನಿಶ್ಚಿತಮಾದಂಥಾದು ಹಾಗಾದರೂ ತನಗಾಶ್ರಯವಾದ ಲಿಂಗ ಗುರು ಚರಮೂರ್ತಿಗಳಲ್ಲಿ ಪೂಜೆಗೊಂಬುದಕ್ಕಾಗಿ ಅಧಿಕದಿಂ ಪ್ರಕಾಶಿಸುತ್ತಿಹನೆಂಬುದರ್ಥಂ ||೬೦|| ಬಳಿಕೀ ವಿಷಯದಲ್ಲಿ ಯಾತೇ ರುದ್ರಯೆಂಬ ಶ್ರುತ್ಯರ್ಥವನೆ ಶ್ಲೋಕಮುಖದಿ ಪೇಳುತಿರ್ದಪಂ.

ನಿತ್ಯಂ ಭಾಸೀ ತದೀಯಸ್ತ್ವಂ ಯಾ ತೇ ರುದ್ರ ಶಿವಾ ತನೂಃ
ಅಘೋರ್ಯಾಪಾಪಕಾಶೀತಿ ಶ್ರುತಿರಾಹ ಸನಾತನೀ ||

ಅಹೋರುದ್ರನೆ ನಿನ್ನ ಯಾವುದಾನೊಂದು ಲಿಂಗಮೂರ್ತಿಯು ಮಂಗಲವಾಗಿ ಅಭಯಂಕರವಾಗಿ ದೋಷರಹಿತಮಾದಂಥಾದು. ನೀನು ಆ ಲಿಂಗದೊಡನೆ ಸಂಬಂಧಿಸಿ ದವನಾಗಿ ಎಲ್ಲಾಗಳೂ ಪ್ರಕಾಶಿಸುತ್ತಿದೀಯೆಂದು ನಿತ್ಯವಾದ ಶ್ರುತಿ ಪೇಳುತ್ತಿದೆಯೆಂಬುದರ್ಥಂ ||೬೧|| ಅದು ಕಾರಣವಾಗಿ ತನ್ನಿಷ್ಟಲಿಂಗದಲ್ಲಿಯೆ ಶಿವನಂ ಪೂಜಿಸೂದೆಂದು ಪೇಳುತಿರ್ದಪಂ.

ತಸ್ಮಾತ್ಸರ್ವಪ್ರಯತ್ನೇನ ಸರ್ವಸ್ಥಾನ ಪರಾಙ್ಮುಖಃ
ಸ್ವೇಷ್ಟಲಿಂಗೇ ಮಹಾದೈವಂ ಪೂಜಯೇತ್ಪೂಜಕೋತ್ತಮಃ ||

ಶ್ರುತಿಸಿದ್ಧಮಾದ ಕಾರಣದಿಂ ಪೂಜಕೋತ್ತಮನಾದ ಮಾಹೇಶ್ವರಂ ಸಕಲ ಪ್ರಯತ್ನದಿಂದಲೂ ಸರ್ವಸ್ಥಾನವಿಮುಖನಾಗಿ ತನ್ನ ಸಂಬಂಧಮುಳ್ಳ ಇಷ್ಟಲಿಂಗದಲ್ಲಿ ಶಿವನಂ ಪೂಜಿಸೂದೆಂಬುದರ್ಥಂ ||೬೨|| ಬಳಿಕೀ ಪ್ರಕಾರದಿಂ ತಿಳಿದು ತನ್ನಿಷ್ಟಲಿಂಗದಲ್ಲಿ ಶಿವನಂ ಪೂಜಿಸುವಾತಂ ಸರ್ವಗತ್ವನಿರಾಸಕನೆಂದು ಪೇಳುತಿರ್ದಪಂ.

ಶಿವಸ್ಯ ಸರ್ವಗತ್ವೇsಪಿ ಸರ್ವತ್ರ ರತಿವರ್ಜಿತಃ
ಸ್ವೇಷ್ಟಲಿಂಗೇ ಯಜನ್ ದೇವಂ ಸರ್ವಗತ್ವನಿರಾಸಕಃ ||

ಶಿವನಿಗೆ ಸರ್ವವ್ಯಾಪಕತ್ವವಿದ್ದರೂ ಸರ್ವತ್ರ ಪ್ರೀತಿಯಿಲ್ಲದವನಾಗಿ ತನ್ನಿಷ್ಟ ಲಿಂಗದಲ್ಲಿಯೆ ಶಿವನಂ ಪೂಜಿಸುವಾತಂ ಸರ್ವಗತ್ವನಿರಾಸಕನೆನಿಸಿಕೊಂಬನೆಂಬುದರ್ಥಂ ||೬೩||

## ೨೩. ಶಿವಜಗನ್ಮಯಸ್ಥಲ

ಬಳಿಕ ಶಿವನಿಗೆ ಪೂಜಾರ್ಥವಾಗಿ ಸರ್ವಗತ್ವಂ ನಿರಾಕರಿಸಲ್ಪಟ್ಟದಾದರೂ ಪ್ರಮಾಣಬಲದಿಂದೆಂತು ಸರ್ವಗತ್ವಮಂ ನಿರಾಕರಿಸಲಕ್ಕದೆಂದು ಶಿವಜಗನ್ಮಯಸ್ಥಲಮಂ ನಿರೂಪಿಸುತಿರ್ದಪಂ.

ಪೂಜಾವಿಧೌ ನಿಯಮ್ಯತ್ವಾಲ್ಲಿಂಗಮಾತ್ರೇ ಸ್ಥಿತಂ ಶಿವಮ್
ಪೂಜಯನ್ನಪಿ ದೇವಸ್ಯ ಸರ್ವಗತ್ವಂ ವಿಭಾವಯೇತ್ ॥

ಶಿವನು ಸರ್ವನಿಯಾಮಕನಾದರೂ ಪೂಜಾಕಾಲದಲ್ಲಿ ಭಕ್ತಾಧೀನನಾದ ಕಾರಣದಿಂ ಲಿಂಗಮಾತ್ರದಲ್ಲಿದ್ದ ಶಿವನಂ ಭಕ್ತರು ಪೂಜಿಸುತ್ತಿದ್ದರೂ ಲಿಂಗನಿಷ್ಠನಾದ ಶಿವನಿಗೆ ಸರ್ವವ್ಯಾಪಕತ್ವವನೂ ಚಿಂತಿಸೂದು. ಅಲ್ಲದಿರ್ದಡೆ ಕುಂಭಕಾರನಂತೆ ಪರಿಚ್ಛಿನ್ನತ್ವ ಬರುವುದೆಂಬುದು ಸರ್ವಗತ್ವ ಸಿದ್ಧಮಾಗಲಾಗಿ ಬಳಿಕಾ ಶಿವನಿಗೆ ಆತ್ಮನಃ ಆಕಾಶಸ್ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀಯೆಂಬ ಶ್ರುತಿಯಿಂದ ಭಿನ್ನನಿಮಿತ್ತೋಪಾದಾನ ಕಾರಣತ್ವ ಕೇಳುವುದರಿಂ ಬಹು ದೃಷ್ಟಾಂತಪೂರ್ವಕವಾಗಿ ಜಗನ್ಮಯತ್ವಮಂ ಪ್ರತಿಪಾದಿಸುತಿರ್ದಪಂ॥೬೪॥

ಯಸ್ಮಾದೇತತ್ಸಮುತ್ಪನ್ನಂ ಮಹಾದೇವಾಚ್ಚರಾಚರಮ್
ತಸ್ಮಾದೇತನ್ನಭಿದ್ಯೇತ ಯಥಾ ಕುಂಭಾದಿಕಂ ಮೃದಃ ॥

ಯಾವನಾನೊಬ್ಬ ಶಿವನತ್ತಣಿಂ ಜಡಚೇತನಾತ್ಮಕಮಾದ ಈ ವಿಶ್ವವು ಹುಟ್ಟಿತು. ಆ ಕಾರಣದಿಂ ಮೃತ್ತಿಕೆಯಿಂದುಂಟಾದ ಜಗತ್ತು ಮೃಣ್ಮಯವ್ಪೋ ಹಾಗೆ ಈ ಜಗತ್ತು ಶಿವನಿಂ ಭಿನ್ನಮಾಗುತ್ತಿರದೆಂಬುದರ್ಥಂ ॥೬೫॥

ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ
ಫೇನೋರ್ಮಿಬುದ್ಬುದಾಕಾರಂ ಯಥಾ ಸಿಂಧೋರ್ನ ಭಿದ್ಯತೇ॥

ಶಿವತತ್ತ್ವದಿಂದುಂಟಾದ ಜಗತ್ತು ಸಮುದ್ರದಿಂದುಂಟಾದ ತೊರೆನೊರೆಗಳಂತೆ ಭಿನ್ನವಿಲ್ಲವೆಂಬುದರ್ಥಂ ॥೬೬॥

ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ
ತಥಾ ಶಿವಾತ್ಸಮುತ್ಪನ್ನಂ ಶಿವ ಯೇವ ಚರಾಚರಮ್॥

ತಂತುಗಳಿಂದುಂಟಾದ ಪಟಮೆಂತು ತಂತುಮಯವ್ಪೋ ಹಾಗೆ ಶಿವನಿಂ ಪುಟ್ಟಿದ ಚರಾಚರ ರೂಪಮಾದ ವಿಶ್ವಂ ಶಿವನು ಸರಿಯೆಂಬುದರ್ಥಂ ॥೬೭॥ ಬಳಿಕೀ ಮೃಗಾದಿಗಳು ವಿಕಾರಿಗಳು ಶಿವನು ವಿಕಾರಿಯಲ್ಲದ ಕಾರಣದಿಂ ಪೇಳಿದ ದೃಷ್ಟಾಂತಮೆಲ್ಲ ವಿಷಮವೆಂದು ಶಂಕೆ ಪ್ರಾಪ್ತಮಾದಲ್ಲಿ ಪೇಳುತಿರ್ದಪಂ.

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ॥

ಪಟವು ತನ್ನೊಳಗೆ ಭಿನ್ನಮಾದ ಪ್ರಸಾರಣ ಶಕ್ತಿಯಿಂ ಹಡಪ ಚೀಲ ಗುಡಿ ಗುಂಮತಿ ಮುಂತಾದ ರೂಪುಳ್ಳದಾಗಿ ಹೇಗೆ ತೋರುತ್ತಿಹುದು ಹಾಗೆ ಶಿವನು ತನ್ನ ಸಮವೇತ ಶಕ್ತಿ ವಿಕಾಸದಿಂ ಜಗದಾಕಾರದಿಂದ ಪ್ರಕಾಶಿಸುತ್ತಿಪನೆಂಬುದರ್ಥಂ ॥೬೮॥ ಬಳಿಕಿಲ್ಲಿ ಪ್ರಸಾರಣ ಶಕ್ತಿದ್ವಾರದಿಂ ಘಟಕ್ಕೆ ಕಾರಣಮುಂಟಾದಂತೆ ಶಿವನಿಗೂ ಸಮವೇತ ಶಕ್ತಿದ್ವಾರದಿಂ ವಿಕಾರತ್ವಮುಂಟಾಹುದೆಂದು ಶಂಕೆ ಪ್ರಾಪ್ತಮಾದಲ್ಲಿ ದೃಷ್ಟಾಂತರವ ಪೇಳುತ್ತ ಪೇಳಿದರ್ಥವ ಮುಗಿಸುತಿರ್ದಪಂ.

ತಸ್ಮಾಚ್ಛಿವಮಯಂ ಸರ್ವಂ ಜಗದೇತಚ್ಚರಾಚರಮ್
ತದಭಿನ್ನತಯಾ ಭಾತಿ ಸರ್ಪತ್ವಮಿವ ರಜ್ಜುತಃ ॥

ಹಗ್ಗವು ತನ್ನಲ್ಲಿರುವ ದೀರ್ಘವ್ರತಕ್ಕೆ ಗೋಧೂಮವರ್ಣ ಸಾದೃಶ್ಯದಿಂ ವಿಕಾರವಿಲ್ಲದೆ ಹೇಗೆ ಸರ್ಪನಾಹತನದಿಂ ತೋರುತ್ತಿಹುದು. ಹೇಗೆ ಶಿವನು ವಿಕಾರವಿಲ್ಲದೆ ತನ್ನಲ್ಲಿ ಸಮವೇತಮಾದ ಮಾಯಾಶಕ್ತಿಯಿಂ ವಿಶ್ವರೂಪನಾಗಿ ತೋರುತ್ತಿಹನು ಅದು ಕಾರಣವಾಗಿ ಈ ಚರಾಚರರೂಪಮಾದ ವಿಶ್ವವೆಲ್ಲ ಶಿವಮಯವೆ ಸರಿ ಎಂಬುದರ್ಥಂ ॥೬೯॥ ಬಳಿಕೀ ವಿಷಯದಲ್ಲಿ ಧಾತ್ಯರ್ಥಮಾಗಿ ಪೇಳಿದ ದೃಷ್ಟಾಂತರಪೂರ್ವಕಮಾಗಿ ಬಹು ದೃಷ್ಟಾಂತರಗಳಂ ಪೇಳುತಿರ್ದಪಂ.

ರಜ್ಜೌ ಸರ್ಪತ್ವವದ್ಭಾತಿ ಶುಕ್ತೌ ಚ ರಜತತ್ವವತ್
ಚೋರತ್ವವದಪಿ ಸ್ಥಾಣೌ ಮರಿಚ್ಯಾಂ ಚ ಜಲತ್ವವತ್ ॥

ಗಂಧರ್ವಪುರವದ್ವ್ಯೋಮ್ನೀ ಸಚ್ಚಿದಾನಂದಲಕ್ಷಣೇ
ನಿರಸ್ತಭೇದಸದ್ಭಾವೇ ಶಿವೇ ವಿಶ್ವಂ ವಿರಾಜತೇ ॥

ಹಗ್ಗದಲ್ಲಿ ಗೋಧೂಮವರ್ಣತಾ ಶಕ್ತಿಯಿಂ ಸರ್ಪತ್ವ ತೋರುವಂತೆ ಚಿಪ್ಪಿನಲ್ಲಿ ಧಾವಳ್ಯ ಶಕ್ತಿಯಿಂ ರಜತತ್ವ ತೋರುವಂತೆ ಸ್ಥಾಣುವಿನಲ್ಲಿ ದೀರ್ಘತಾ ಶಕ್ತಿಯಿಂ ಪುರುಷತ್ವ ತೋರುವಂತೆ ಸೂರ್ಯಕಿರಣದಲ್ಲಿ ಸ್ವಚ್ಛತೋದ್ರೇಕ ಶಕ್ತಿಯಿಂ ಜಲತ್ವತೋರುವಂತೆ ಕಲಾಶಕ್ತಿಯಿಂದ ಆಕಾಶದಲ್ಲಿ ಗಂಧರ್ವನಗರ ತೋರುವಂತೆ ನಿವಾರಿಸಲ್ಪಟ್ಟ ವಿಶ್ವಭೇದಮುಳ್ಳ ನಿರ್ವಿಕಾರಮಾದ ಸಚ್ಚಿದಾನಂದರೂಪ ಬ್ರಹ್ಮದಲ್ಲಿ ಸಮವೇತಮಾದ ವಿಮರ್ಶಾಶಕ್ತಿಯ ಪ್ರತಿಸ್ಫುರಣಮಯಮಾದ ಮಾಯಾಶಕ್ತಿಯಿಂ ವಿಶ್ವಂ ತದಭಿನ್ನಮಾಗಿ ಪ್ರಕಾಶಿಸುತ್ತಿರ್ದ ಹುದೆಂಬುದರ್ಥಂ ॥೭೧॥ ಬಳಿಕಿಲ್ಲಿ ಪೇಳಿದ ದೃಷ್ಟಾಂತರದಿಂದ ವಿಶ್ವಮೆಲ್ಲಂ ತೋರುಹ ಮಾತ್ರವೆಯಾಗಿ ಅರ್ಥಕ್ರಿಯೋಪಯುಕ್ತವಲ್ಲದೆ ಹೋಗಬೇಕೆಂದು ಶಂಕೆ ಪ್ರಾಪ್ತಮಾದಲ್ಲಿ ದೃಷ್ಟಾಂತರಮಂ ಪೇಳುತಿರ್ದಪಂ.

ಪತ್ರಶಾಖಾದಿ ರೂಪೇಣ ಯಥಾ ತಿಷ್ಠತಿ ಪಾದಪಃ
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ ॥

ವೃಕ್ಷಮೆಂತು ಕಾಲಶಕ್ತಿಯಿಂ ವಿಕಾರವಿಲ್ಲದೆ ತನ್ನೊಳಡಗಿರ್ದ ಸ್ವಜಾತಿಯ ಪತ್ರ ಪುಷ್ಪಾದಿ ಭೇದ ವಿಶಿಷ್ಟವಾಗಿ ತೋರುತ್ತಿಹುದು ಹಾಗೆ ಶಿವಂ ಸ್ವಸಮೇತ ಶಕ್ತಿಯಲ್ಲಿ ತಾದಾತ್ಮ್ಯದಿಂದಿರುವ ಭೂಮ್ಯಾದಿಭೇದ ವಿಶಿಷ್ಟಮಾಗಿ ಪ್ರತಿಸ್ಫುರಣ ಗತಿಯಿಂ ತೋರುತ್ತಿಹನು. ಇಲ್ಲಿ ಧೃತಿಶಕ್ತಿಯಿಂ ಧರಣಿಯು ಕರುಣಾಶಕ್ತಿಯಿಂ ಜಲವು ಉಜ್ವಲತೆಯಿಂ ತೇಜಸ್ಸು ಪರಮಾನಂದ ಸ್ಪಂದನವೆ ವಾಯು ಚಿದ್ವ್ಯಾಪ್ತಿಯೆ ವ್ಯೋಮವು ಚಿಚ್ಛಕ್ತಿಯ ಸಂಕೋಚದಿಂ ಚಿತ್ರ ವಿಶಿಷ್ಟವಾದ ಜೀವನೆಂಬುದು ವಿವೇಕಂ. ಬಳಿಕಿಲ್ಲಿ ವೃಕ್ಷಸಾಂಶಮಾದ ಕಾರಣದಿಂ ಫಲಪುಷ್ಪಾದಿ ರೂಪದಿಂ ತೋರಬಹುದು. ಸಮವೇತಶಕ್ತಿಯೆಂಬುದು ಶಿವಾಭಿನ್ನಮಾದ ಕಾರಣದಿಂ ನಿರಂಶವೆ ಆಗಲಾಗಲಿ ಸಾವಯವ ಪ್ರಪಂಚ ರೂಪದಿಂದೆಂತು ತೋರುವುದೆಂದು ಶಂಕಿಸಲಾಗದು. ಶಕ್ತಿ ಶಿವಾಭಿನ್ನಮಾದರೂ ಅತಿ ದುರ್ಘಟನಾಕಾರಿಯಾದ

ಕಾರಣದಿಂ ಸರ್ಪಕುಂಡಲ ನ್ಯಾಯದಿಂ ತನ್ನ ಸ್ವತಂತ್ರತೆಯಿಂ ಕಲ್ಪಿಸಲ್ಪಟ್ಟ ಭೇದವು ಉಂಟೆ ಇದರಿಂ ಪರಮಾಣು ಕಾರ್ಯಮಾದ ದ್ವ್ಯಣುಕದಲ್ಲಿ ನಿರಂಶಮಾದ ಪರಮಾಣುದ್ವಯ ಸಂಯೋಗದಿಂ ಸಾಂಶತ್ವಮುಂಟಾಗುವಂತೆ ಅಸಮವೇತ ಶಕ್ತಿಯ ಕಾರ್ಯರೂಪಮಾದ ಮಾಯಾಶಕ್ತಿಗೆ ಸಾಂಶತ್ವ ಸಂಭವಿಸೂದೆಂದು ಪೂರ್ವದಲ್ಲಿ ಪ್ರತಿಪಾದಿಸಿಹ ಕಾರಣದಿಂ ವಿಷ್ಣು ಬಾಹ್ಯಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ಹೀಗೆಂಬ ಭಗವದ್ವಾಕ್ಯವು ಈ ಅರ್ಥದಲ್ಲಿ ಪ್ರಮಾಣವಾಗಿರುವುದು ಶುಕ್ತಿ ರಜತಾದಿಗಳಲ್ಲಿ ಅರ್ಥಕ್ರಿಯಾಶೂನ್ಯತೆಯು ಉತ್ತರಲಕ್ಷಣ ಬಾಧ್ಯಮಾನತೆಯು ತನ್ನ ಸ್ವತಂತ್ರಕ್ರಿಯೆಯಿಂದುಂಟಾದ ಶಕ್ತಿಶೂನ್ಯ ನಿರ್ಭಾವಕೃತವೆಂದು ಭಾವಿಸೂದುಪರಿವಿಚಾರವನ್ನಿಲ್ಲಿ ಗ್ರಂಥವಿಸ್ತರ ಭಯದಿಂ ಬರೆಯಲಿಲ್ಲ. ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ಬರದಿದೆ ವಿದ್ವಾಂಸರಾದವರಲ್ಲಿ ನೋಡಿಕೊಂಬುದು ॥೭೨॥

## ೨೪. ಭಕ್ತದೇಹಿಕಲಿಂಗಸ್ಥಲ

ಬಳಿಕೀ ಪ್ರಕಾರದಿಂ ಶಿವಜಗನ್ಮಯನಾದರೂ ವೇದವೇದಾಂತವಾಕ್ಯಾರ್ಥ ಸಂಧಾನಾತೀತವರ್ತನಃ ಭಕ್ತಭಾವಪರಾನಂದೋ ಭಕ್ತಭಾವೈಕಗೋಚರಃ ಹೀಗೆಂಬ ವಚನಾನುಸಾರದಿಂ ಭಕ್ತರ ಹೃದಯದಲ್ಲಿ ಪ್ರಕಾಶಿಸುತ್ತಿಹನೆಂದು ಭಕ್ತದೇಹಿಕಲಿಂಗಸ್ಥಲಮಂ ಸಪ್ತಸೂತ್ರಗಳಿಂ ಪ್ರಕಾಶಿಸುತಿರ್ದಪಂ.

ಸಮಸ್ತ ಜಗದಾತ್ಮಾಪಿ ಶಂಕರಃ ಪರಮೇಶ್ವರಃ
ಭಕ್ತಾನಾಂ ಹೃದಯಾಂಭೋಜೇ ವಿಶೇಷೇಣ ವಿರಾಜತೇ ॥

ಸುಖಕರನಾದ ಪರಮೇಶ್ವರನು ಭಾವಾಭಾವಪ್ರಪಂಚಮಯನಾದರೂ ಭಕ್ತರ ಹೃದಯ ಕಮಲದಲ್ಲಿ ಆಧಿಕ್ಯದಿಂ ಪ್ರಕಾಶಿಸುತ್ತಿಹನು ॥೭೩॥ ಅದೆಂತೆಂದಡೆ

ಕೈಲಾಸೇ ಮಂದರೇ ಚೈವಾ ಹಿಮಾದ್ರೌ ಕನಕಾಚಲೇ
ಹೃದಯೇಷು ಚ ಭಕ್ತಾನಾಂ ವಿಶೇಷೇಣ ವ್ಯವಸ್ಥಿತಃ ॥

ಕೈಲಾಸ ಮಂದರಗಿರಿಯಲ್ಲಿ ಹಿಮವತ್ಪರ್ವತದಲ್ಲಿ ಮಹಾಮೇರುವಿನಲ್ಲಿ ಹೇಗೆ ವಿಶೇಷದಿಂ ಪ್ರಕಾಶಿಸುತ್ತಿಹನು, ಹಾಗೆ ಭಕ್ತರ ಹೃದಯಕಮಲಲಿಂಗಗಳಲ್ಲಿ ಅಧಿಕವಾಗಿ ಪ್ರಕಾಶಿಸುತ್ತಿಹನೆಂಬುದರ್ಥಂ ॥ ೭೪॥ ಬಳಿಕಿಲ್ಲಿ ಅಪರಿಮಿತನಾದ ಪರಮೇಶ್ವರನದೆಂತು ಪರಿಚ್ಛಿನ್ನಮಾಗಿ ಭಕ್ತರ ಹೃದಯಕಮಲದಲ್ಲಿರುವನೆಂದು ಶಂಕೆ ಪ್ರಾಪ್ತಮಾದಲ್ಲಿ ಪೇಳುತಿರ್ದಪಂ.

ಸರ್ವಾತ್ಮಾऽಪಿ ಪರಿಚ್ಛಿನ್ನೋ ಯಥಾ ದೇಹೇಷು ವರ್ತತೇ
ತಥಾ ಸ್ವಕೀಯಭಕ್ತೇಷು ಶಂಕರೋ ಭಾಸತೇ ಸದಾ ॥

ಪರಮೇಶ್ವರಂ ಸರ್ವಾತ್ಮಕನಾದರೂ ದೇವ ತಿರ್ಯಕ್ ಮಾನುಷ್ಯಾದಿ ರೂಪಮಾಗಿ ಭಿನ್ನಾಂತಃಕರಣ ವಿಶಿಷ್ಟಮಾದ ದೇಹಂಗಳಲ್ಲಿ ಪ್ರತಿಸ್ಫುರಣಗತಿಯಿಂದೆಂತು ಪ್ರಕಾಶಿಸುತಿರ್ದಪಂ ಹಾಗೆ ತನ್ನ ಭಕ್ತರ ಹೃದಯಕಮಲದಲ್ಲಿ ಸದಾ ಪ್ರಕಾಶಿಸುತ್ತಿಹನೆಂಬುದರ್ಥಂ ॥೭೫॥ ಬಳಿಕೀ ಅರ್ಥದಲ್ಲಿ ಪ್ರಮಾಣಗರ್ಭಿತಮಾದ ವಚನಮಂ ನುಡಿವುತಿರ್ದಪಂ.

ನಿತ್ಯಂ ಭಾತಿ ತ್ವದೀಯೇಷು ಯಾ ತೇ ರುದ್ರ ಶಿವಾ ತನೂಃ
ಅಘೋರ್‍ಯಾಪಾಪಕಾಶೀತಿ ಶ್ರುತಿರಾಹ ಸನಾತನೀ ॥

ಭೋ ರುದ್ರನೆ ಯಾವುದಾನೊಂದು ಲಿಂಗಮೂರ್ತಿಯೆ ಸಾಮ್ಯವಾದಂಥಾದು ದೋಷರಹಿತಮಾದಂಥಾದು ಆ ಮೂರ್ತಿಯು ನಿನ್ನವರಾದ ಭಕ್ತರಲ್ಲಿ ಎಲ್ಲಾಗಳು ಪ್ರಕಾಶಿಸುತ್ತಿಹುದು ಹೀಗೆಂದು ನಿತ್ಯವಾದ ಶ್ರುತಿ ಪೇಳುತ್ತಿಹದೆಂಬುದರ್ಥಂ ॥೭೬॥ ಹಾಗಾದಡಾ ಲಿಂಗಮೂರ್ತಿಯು ಶಿವಭಕ್ತರಲ್ಲದವರ ಹೃದಯದಲ್ಲಿ ಪ್ರಕಾಶಿಸುವುದಿಲ್ಲವೋ ಏನೋ ಎಂಬಲ್ಲಿ ಪೇಳುತಿರ್ದಪಂ.

ವಿಶುದ್ಧೇಷು ವಿರಕ್ತೇಷು ವಿವೇಕಿಷು ಮಹಾತ್ಮಸು
ಶಿವಸ್ತಿಷ್ಠತಿ ಸರ್ವಾತ್ಮಾ ಶಿವಲಾಂಛನಧಾರಿಷು॥

ಷಟ್‌ಸ್ಥಲಜ್ಞಾನಿಗಳಾದ ಚರಮೂರ್ತಿಗಳಲ್ಲಿ ಮಹಾತ್ಮರಾದ ಶುಕಾದಿ ಯೋಗಿಗಳಲ್ಲಿ ವಿಭೂತಿ ರುದ್ರಾಕ್ಷಧಾರಿಗಳಾದ ದ್ವಿಜರಲ್ಲಿ ಸರ್ವಾತ್ಮಕನಾದ ಶಿವನು ಪ್ರಕಾಶಿಸುತ್ತಿಹ ನೆಂಬುದರ್ಥಂ ॥೭೭॥ ಹಾಗಾದರಿದು ಸಾಧಾರಣವಾದುದರಿಂ ಶಿವಭಕ್ತರಲ್ಲಿ ಏನು ವಿಶೇಷವೆಂಬಲ್ಲಿ ಪೇಳುತಿರ್ದಪಂ.

ನಿತ್ಯಂ ಸಂತೋಷಯುಕ್ತಾನಾಂ ಜ್ಞಾನನಿರ್ಧೂತಕರ್ಮಣಾಮ್
ಮಾಹೇಶ್ವರಾಣಾಮಂತಸ್ಥೋ ವಿಭಾತಿ ಪರಮೇಶ್ವರಃ ॥

ಶಿವಜ್ಞಾನದಿಂ ಕೊಡಲ್ಪಟ್ಟ ಕಲ್ಮಷಮುಳ್ಳರಾಹತನದಿಂ ಶಿವಸುಖಾನುಭಾವಿಗಳಾದ ಮಾಹೇಶ್ವರರ ಅಂತಃಕರಣಗತರಾಗಿ ನಿರ್ಮಲದರ್ಪಣದಲ್ಲಿ ಮುಖಾದಿಗಳು ಸ್ಫುಟವಾಗಿ ಪ್ರತಿಫಲಿಸುವಂತೆ ಸದಾ ಪ್ರಕಾಶಿಸುತ್ತಿಹನೆಂಬುದರ್ಥಂ ॥೭೮॥ ಬಳಿಕ ಮುಂದೆ ಪೇಳುವ ಪ್ರಸಾದಿಸ್ಥಲಮಂ ಸೂಚಿಸುತಿರ್ದಪಂ.

ಅನ್ಯತ್ರ ಶಂಭೋರತಿಮಾತ್ರ ಶೂನ್ಯಃ
ನಿಜೇಷ್ಟಲಿಂಗೇ ನಿಯತಾಂತರಾತ್ಮಾ
ಶಿವಾತ್ಮಕಂ ವಿಶ್ವಮಿದಂ ವಿಬುಧ್ಯ
ನ್ಮಾಹೇಶ್ವರ್‍ಯ್ಯೋಸೌ ಭವತಿ ಪ್ರಸಾದಿ ॥

ಶಿವನಿಂದನ್ಯತ್ರದೇವತಾಂತರದಲ್ಲಿ ಪ್ರತಿಲೇಶವೂ ಇಲ್ಲದವನಾಗೀತನಿಷ್ಟಲಿಂಗ ನಿಯಮಿಸಲ್ಪಟ್ಟ ಅಂತಃಕರಣವುಳ್ಳ ಈ ಮಾಹೇಶ್ವರನೀ ವಿಶ್ವವನೆಲ್ಲಂ ಪೇಳಲ್ಪಟ್ಟ ದೃಷ್ಟಾಂತ ರಗಳಿಂ ಶಿವಮಯವಾಗಿ ತಿಳಿದವನಾಗಿ ಪ್ರಸಾದಿಯಾಗುತ್ತಿಹನು. ಈ ಅರ್ಥದಲ್ಲಿ ಶಿವ ಏಕೋಧ್ಯೇಯಃ ಶಿವಂಕರಃ ಸರ್ವಮನ್ಯಾತ್ಪರಿತ್ಯಜ್ಯಯೆಂದು ಶ್ರುತಿಯುಂಟಾಗಿರುವುದು ॥೭೯॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣ ಸಾರಭೂತೇ ವೀರಶೈವ ಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಮಾಹೇಶ್ವರಸ್ಯ ನವವಿಧ ಪ್ರಸಂಗೋನಾಮ ದಶಮಃ ಪರಿಚ್ಛೇದಃ

# ಏಕಾದಶಪರಿಚ್ಛೇದ

## ೨೫. ಪ್ರಸಾದಿಸ್ಥಲ

ಬಳಿಕ ಶ್ರೀ ರೇಣುಕಾಚಾರ್ಯನಂ ಕುಂಭಜಂ ಏಕಾದಶಪರಿಚ್ಛೇದ ಪ್ರಶ್ನೆಯ ಮಾಡುತಿರ್ದಪಂ

ಉಕ್ತೋ ಮಾಹೇಶ್ವರಸ್ಸಾಕ್ಷಾಲ್ಲಿಂಗನಿಷ್ಠಾದಿ ಧರ್ಮವಾನ್
ಕಥಮೇಷ ಪ್ರಸಾದೀತಿ ಕಥ್ಯತೇ ಗಣನಾಯಕಃ ॥

ಅಹೋ ಶಿವಗಣಂಗಳಿಗಧಿಪತಿಯಾದ ರೇವಣಸಿದ್ಧೇಶ್ವರನೆ ಪ್ರತ್ಯಕ್ಷವಾದ ಲಿಂಗನಿಷ್ಠಾದಿಧರ್ಮವುಳ್ಳ ಮಾಹೇಶ್ವರಂ ಪೇಳಲ್ಪಟ್ಟನು ಬಳಿಕೀತನೆ ಪ್ರಸಾದಿಯೆಂದು ಯಾವ ಪ್ರಕಾರದಿಂ ಪೇಳಲ್ಪಡುತ್ತಿಹನೆಂಬುದರ್ಥಂ ॥೧॥ ಶ್ರೀ ರೇಣುಕ ಉವಾಚ

ಲಿಂಗನಿಷ್ಠಾದಿಭಾವೇನ ಧ್ವಸ್ತಪಾಪನಿಬಂಧನಃ
ಮನಃ ಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ ॥

ಪೇಳಲ್ಪಟ್ಟ ಲಿಂಗನಿಷ್ಠೆ ಮೊದಲಾದ ಸ್ಥಲಪರಿಜ್ಞಾನ ತದಾಚರಣೆಯಿಂ ಕೊಲ್ಲಲ್ಪಟ್ಟ ಪಾಪಸಮೂಹವುಳ್ಳ ಈ ಮಾಹೇಶ್ವರಂ ಮನೋನಿರ್ಮಲತ್ವದ ಸಂಬಂಧಧಿಂ ಪ್ರಸಾದಿಯೆಂದು ಪೇಳಲ್ಪಟ್ಟನೆಂಬುದರ್ಥಂ ॥೨॥ ಬಳಿಕೀ ಪ್ರಸಾದಿಸ್ಥಲಮೆಂದು ಎಷ್ಟು ಪ್ರಕಾರವುಳ್ಳದೆಂಬಲ್ಲಿ ಪೇಳುತಿರ್ದಪಂ.

ಪ್ರಸಾದಿಸ್ಥಲಮಿತ್ಯೇತದಸ್ಯ ಮಾಹಾತ್ಮ್ಯಬೋಧಕಮ್
ಅಂತರಸ್ಥಲಭೇದೇನ ಸಪ್ತಧಾ ಪರಿಕೀರ್ತಿತಮ್ ॥

ಈ ಪ್ರಸಾದಿಸ್ಥಲವು ಭಕ್ತ ಮಾಹೇಶ್ವರಸ್ಥಲೋಕ್ತಮಾದ ಸದಾಚಾರಮಹತ್ವಮಂ ತಿಳಿಹುವಂಥಾದು. ಅವಾಂತರಸ್ಥಲಭೇದದಿಂದ ಏಳು ಪ್ರಕಾರಮುಳ್ಳದೆಂಬುದರ್ಥಂ ॥೩॥ ಬಳಿಕದೆಂತೆನೆ ಉದ್ದೇಶಿಸುತಿರ್ದಪಂ.

ಪ್ರಸಾದಿಸ್ಥಲಮಾದೌ ತು ಗುರುಮಾಹಾತ್ಮ್ಯಕಂ ತತಃ
ತತೋ ಲಿಂಗಪ್ರಶಂಸಾ ಚ ತತೋ ಜಂಗಮಗೌರವಮ್ ॥

ತತೋ ಭಕ್ತಸ್ಯ ಮಾಹಾತ್ಮ್ಯಂ ತತಃ ಶರಣಕೀರ್ತನಮ್
ಶಿವಪ್ರಸಾದಮಾಹಾತ್ಮ್ಯಮಿತಿ ಸಪ್ತಪ್ರಕಾರಕಮ್ ॥

ಮೊದಲು ಪ್ರಸಾದಿಸ್ಥಲಂ ಬಳಿಕ ಗುರುಮಹತ್ವಸ್ಥಲಂ ತದನಂತರದಲ್ಲಿ ಲಿಂಗಮಹತ್ವಸ್ಥಲಂ ಬಳಿಕ ಭಕ್ತಮಹತ್ವಸ್ಥಲವು ಜಂಗಮಮಹತ್ವಸ್ಥಲವು ಬಳಿಕ ಶರಣಮಹತ್ವಸ್ಥಲವು ಬಳಿಕ ಶಿವಮಹತ್ವಸ್ಥಲವು ಈ ರೀತಿಯಿಂದ ಏಳು ಪ್ರಕಾರಮಾದಂಥಾದೆಂಬುದರ್ಥಂ ॥೪॥ ಆಮೇಲೆ ಚಿತ್ತಸ್ಯ ಹಿ ಪ್ರಸಾದೇನ ಹಂತಿ ಕರ್ಮ ಶುಭಾಶುಭಮ್ ಪ್ರಸನ್ನಾತ್ಮಾಽತ್ಮನಿ ಸ್ಥಿತ್ವಾ ಸುಖಮಕ್ಷಯಮಶ್ನುತೇ ಎಂಬ ಮೈತ್ರೇಯಶ್ರುತ್ಯಾನುಸಾರದಿಂದ ಉಂಟಾಹ ಮನಃಪ್ರಸನ್ನತೆಯಂ ದ್ವಾದಶಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇಷ ಸಿದ್ಧ್ಯತಿ ॥

ಮನಸ್ಸಿನ ನಿರ್ಮಲತ್ವದ ಚಿಹ್ನೆಯು ಪ್ರಸಾದವೆಂದು ಪೇಳಲ್ಪಡುತ್ತಿಹುದು. ಈ ಮನೋನಿರ್ಮಲತ್ವರೂಪಮಾದ ಪ್ರಸಾದವು ಲಿಂಗರೂಪನಾದ ಶಿವನ ಪ್ರಸಾದದಿಂ ಸಿದ್ಧಿಸೂದೆಂಬುದರ್ಥಂ ॥೬॥ ಬಳಿಕ ಚಿತ್ತ ನೈರ್ಮಲ್ಯರೂಪಮಾದ ಪ್ರಸಾದಕ್ಕೆ ಕಾರಣಮಾದ ಶಿವಪ್ರಸಾದವಾವುದೆಂಬಲ್ಲಿ ಪೇಳುತಿರ್ದಪಂ

ಶಿವಪ್ರಸಾದಂ ಯದ್ದ್ರವ್ಯಂ ಶಿವಾಯ ವಿನಿವೇದಿತಮ್
ನಿರ್ಮಾಲ್ಯಂ ತತ್ತು ಶೈವಾನಾಂ ಮನೋನೈರ್ಮಲ್ಯಕಾರಣಮ್ ॥

ಶಿವನಿಗೆ ಸಮರ್ಪಿಸಿದ ದ್ರವ್ಯವಾವುದುಂಟು ಅದು ನಿರ್ಮಾಲ್ಯವೆನಿಸಿಕೊಂಡು ವೀರಶೈವರಿಗೆ ವಿಶೇಷವಾಗಿ ಮನೋನಿರ್ಮಲತ್ವಕ್ಕೆ ಕಾರಣವಾಗುತ್ತಿಹುದೆಂಬುದರ್ಥಂ ॥೭॥ ಬಳಿಕೀ ಪ್ರಕಾರಮಾದ ಶಿವಪ್ರಸಾದ ಸ್ವೀಕಾರವುಳ್ಳವಂ ಪ್ರಸಾದಿಯೆಂದು ಪೇಳುತಿರ್ದಪಂ

ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಮ್
ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ ॥

ನಿರ್ಮಲವಾದ ಶಿವಜ್ಞಾನಕ್ಕೆ ಕಾರಣಮಾದಂಥಾದು ಶಿವಲಿಂಗಪ್ರಸಾದರೂಪಮಾದ ನಿರ್ಮಾಲ್ಯವು. ಅದ ಚಿತ್ತನೈರ್ಮಲ್ಯಸಿದ್ಧ್ಯರ್ಥಮಾಗಿ ಅಂಗೀಕರಿಸಿದ ಈ ವೀರಮಾಹೇಶ್ವರ ಪ್ರಸಾದಿಯೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೮॥ ಅದು ಕಾರಣವಾಗಿ ಆಹಾರಶುದ್ಧೌ ಸತ್ತ್ವಶುದ್ಧಿಃ ಹೀಗೆಂಬ ಛಾಂದೋಗ್ಯಶ್ರುತಿಯಿಂ ಶುದ್ಧ ಶಿವನಿರ್ಮಾಲ್ಯ ಭಕ್ಷಣೆಯಿಂ ಸಕಲತತ್ತ್ವಶುದ್ಧಿದ್ವಾರದಿಂ ಭಕ್ತಂ ಮನೋನೈರ್ಮಲ್ಯಮಂ ಪಡೆವನೆಂದು ಪೇಳುತಿರ್ದಪಂ.

ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಾ
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್ ॥

ತದೇವ ಸರ್ವಕಾಲಂ ತು ಭುಂಜಾನೋ ಲಿಂಗತತ್ಪರಃ
ಮನಃಪ್ರಸಾದಮತುಲಂ ಲಭತೇ ಜ್ಞಾನಕಾರಣಮ್ ॥

ಅನ್ನಶುದ್ಧಿಯಿಂ ಸಕಲಪ್ರಾಣಿಗಳಿಗೂ ದೈಹಿಕ ಭುವನ ಪ್ರಪಂಚ ಶುದ್ಧಿಯುಂಟಾಹದೆಂದು ಶಾಸ್ತ್ರಜ್ಞರಿಂ ಪೇಳಲ್ಪಡುವುದು. ಶಿವನಿಗೆ ಸಮರ್ಪಿಸಿದ ಯಾವುದಾನೊಂದು ಅನ್ನಸಮೂಹಂ ಶುದ್ಧಮಾದಂಥಾದು ಆ ಅನ್ನಸಮೂಹಮಂ ಲಿಂಗನಿಷ್ಠನಾಗಿ ಸದಾ ಭುಂಜಿಸುವಂಥಾ ಪ್ರಸಾದಿಯು ಪಡಿಯಿಲ್ಲದ ಶಿವಜ್ಞಾನಕ್ಕೆ ಕಾರಣ ಮನೋನೈರ್ಮಲ್ಯಮಂ ಪಡೆವುತ್ತಿಹನೆಂಬುದರ್ಥಂ ॥೧೦॥ ಅದು ಕಾರಣಮಾಗಿ ಆತ್ಮ ಭೋಗಕ್ಕೋಸ್ಕರ ನಿಯಮಿತನಾಗಿ ಯಾವ ದ್ರವ್ಯಂ ಪ್ರಾಪ್ತವಾಗುತ್ತಿಹುದು ಅದನೆಲ್ಲಂ ಯದ್ಯದಾತ್ಮಹಿತಂ ವಸ್ತು ತತ್ತದ್ವಸ್ತು ಶಿವಾರ್ಪಿತಮ್ ಎಂಬ ಶಿವರಹಸ್ಯವಚನಾನುಸಾರದಿಂ ಶಿವನಿಗೆ ಸಮರ್ಪಿಸಿ ಭುಂಜಿಸೂದೆಂದು ಪೇಳುತಿರ್ದಪಂ.

ಆತ್ಮಭೋಗಾಯ ನಿಹಿತಂ ಯದ್ಯದ್ದ್ರವ್ಯಂ ಸಮಾಹಿತಮ್
ತತ್ತತ್ಸಮರ್ಪ್ಯ ದೇವಾಯ ಭುಂಜೀತಾತ್ಮವಿಶುದ್ಧಯೇ ॥

ತನ್ನ ಭೋಗಕ್ಕೋಸ್ಕರ ಕ್ಲುಪ್ತಮಾಗಿ ಸಂಪಾದಿಸಿದ ಯಾವ ದ್ರವ್ಯವುಂಟು ಅದನೆಲ್ಲಂ ಶಿವಲಿಂಗದೇವರಿಗೆ ಸಮರ್ಪಿಸಿ ಚಿತ್ತಶುದ್ಧ್ಯರ್ಥಮಾಗಿ ಭುಂಜಿಸೂದೆಂಬುದರ್ಥಂ ॥೧೧॥ ಬಳಿಕ ಪ್ರಸಾದಮಹತ್ವಮಂ ಪೇಳುತಿರ್ದಪಂ.

ನಿತ್ಯಸಿದ್ಧೇನ ದೇವೇನ ಭಿಷಜಾ ಜನ್ಮರೋಗಿಣಾಮ್
ಯದ್ಯತ್ಪ್ರಸಾದಿತಂ ಭುಕ್ತ್ವಾ ತತ್ತಜ್ಜನ್ಮರಸಾಯನಮ್ ॥

ಭವರೋಗಿಗಳಿಗೆ ವೈದ್ಯನಾದ ಶಿವಲಿಂಗದಲ್ಲಿ ನಿರಂತರ ಸ್ಥಾಯಿಯಾದ ಮಾಹೇಶ್ವರನಿಂ ಯಾವ ದ್ರವ್ಯಂ ಭುಂಜಿಸಿ ಪ್ರಸಾದವಾಗಿ ಮಾಡಲ್ಪಟ್ಟಿತ್ತು ಅದೆಲ್ಲವು ಸಂಸಾರವ್ಯಾಧಿರಸಾಯನವೆಂಬುದರ್ಥಂ ॥೧೨॥ ಬಳಿಕ ಐಹಿಕಾರೋಗ್ಯಕ್ಕೂ ಕಾರಣ ಮಾದಂಥಾದೆಂದು ಪೇಳುತಿರ್ದಪಂ.

ಆರೋಗ್ಯಕಾರಣಂ ಪುಂಸಾಮಂತಃಕರಣ ಶುದ್ಧಿದಮ್
ತಾಪತ್ರಯಮಹಾರೋಗಸಮುದ್ಧರಣಭೇಷಜಮ್ ॥

ವಿದ್ಯಾವೈಶದ್ಯಕರಣಂ ವಿನಿಪಾತವಿಘಾತನಮ್
ದ್ವಾರಂ ಜ್ಞಾನಾವತಾರಸ್ಯ ಮೋಹಚ್ಛೇದಸ್ಯ ಕಾರಣಮ್ ॥

ವೈರಾಗ್ಯಸಂಪದೋ ಮೂಲಂ ಮಹಾನಂದಪ್ರವರ್ಧನಮ್
ದುರ್ಲಭಂ ಪಾಪಚಿತ್ತಾನಾಂ ಸುಲಭಂ ಶುದ್ಧಕರ್ಮಣಾಮ್ ॥

ಆದೃತಂ ಬ್ರಹ್ಮವಿಷ್ಣ್ವಾದ್ಯೈರ್ವಸಿಷ್ಠಾದ್ಯೈಶ್ಚ ತಾಪಸೈಃ
ಶಿವಸ್ವೀಕೃತಮನ್ನಾದ್ಯಂ ಸ್ವೀಕಾರ್ಯಂ ಸಿದ್ಧಿಕಾಂಕ್ಷಿಭಿಃ ॥

ಆ ಪ್ರಸಾದದ್ರವ್ಯಂ ಪುರುಷರಿಗೆ ಆರೋಗ್ಯಕ್ಕೆ ಕಾರಣಮಾದ ಚಿತ್ತಶುದ್ಧಿಯಾಗಿ ರುವುದಾಗಿ ಆಧ್ಯಾತ್ಮಕಾದಿ ತಾಪತ್ರಯಗಳೆಂಬ ಮಹಾರೋಗವ ನಾಶಮಾಡುವಲ್ಲಿ ಅಧಿಪತಿಯಾದ ವಿದ್ಯಾವಿಶೇಷದ ಸಿದ್ಧಿಗೆ ಕಾರಣವಾದ ಕೃತ್ರಿಮದೋಷಂಗಳಂ ಕೊಲ್ಲುವ ಶಿವಜ್ಞಾನದ ಆವಿರ್ಭಾವಕ್ಕೆ ಬಾಗಿಲಾದ ಅಜ್ಞಾನದ ನಾಶಕ್ಕೆ ಕಾರಣವಾದ ವೈರಾಗ್ಯದ ಸಂಪತ್ತಿಗೆ ಮೂಲಕಾರಣಮಾದ ನಿತ್ಯಾನಂದಪ್ರಕಾಶಮಾದ ಪಾಪಿಷ್ಠರಿಗೆ ದುರ್ಲಭವಾದ ಪುಣ್ಯಾತ್ಮರಿಗೆ ಸುಲಭವಾದ ಬ್ರಹ್ಮಾದಿ ದೇವರಿಂದಲೂ ವಸಿಷ್ಠಾದಿ ಮುನಿಗಳಿಂದಲೂ ಪ್ರೀತಿ ಮಾಡಲ್ಪಟ್ಟ ಶಿವಲಿಂಗ ಸ್ವೀಕೃತಾನ್ನ ಪಾನಾದಿ ಪ್ರಸಾದ ದ್ರವ್ಯವು ಭೋಗಮೋಕ್ಷಾರ್ಥಿಗಳಾದ ಪ್ರಸಾದಿಗಳಿಂ ಸ್ವೀಕರಿಸಲ್ತಕ್ಕದೆಂಬುದರ್ಥಂ ॥೧೬॥ ಬಳಿಕೀ ಪ್ರಸಾದ ಸ್ವೀಕಾರದಿಂ ಸಕಲ ಪಾಪಕ್ಷಯವಾಹದೆಂದು ಪೇಳುತಿರ್ದಪಂ.

ಪತ್ರಂ ಪುಷ್ಪಂ ಫಲಂ ತೋಯಂ ಯಚ್ಛಿವಾಯ ನಿವೇದಿತಮ್
ತತ್ತತ್ ಸ್ವೀಕಾರಯೋಗೇನ ಸರ್ವಪಾಪಕ್ಷಯೋ ಭವೇತ್ ॥

ಪತ್ರ ಪುಷ್ಪ ಫಲ ಜಲ ಮುಂತಾಗಿ ಯಾವುದಾನೊಂದು ದ್ರವ್ಯವು ಶಿವನಿಗೆ ಸಮರ್ಪಿಸಲ್ಪಟ್ಟಿತ್ತು ಆಯಾ ದ್ರವ್ಯಸ್ವೀಕಾರದಿಂ ಸರ್ವಪಾಪಕ್ಷಯವಾಹದೆಂಬುದರ್ಥಂ ॥೧೭॥

ಬಳಿಕ ಶಿವಲಿಂಗದಂತೆ ಶ್ರೀ ಗುರು ಶಿವಯೋಗಿಗಳ ಪ್ರಸಾದವು ಸ್ವೀಕರಿಸಲ್ತಕ್ಕದೆಂದು ಪೇಳಿ ಪ್ರಸಾದಿಸ್ಥಲಮಂ ಮುಗಿಸುತಿರ್ದಪಂ.

ಯಥಾ ಶಿವಪ್ರಸಾದಾನ್ನಂ ಸ್ವೀಕಾರ್ಯಂ ಲಿಂಗತತ್ಪರೈಃ
ತಥಾ ಗುರೋಃ ಪ್ರಸಾದಾನ್ನಂ ತಥೈವ ಶಿವಯೋಗಿನಾಮ್ ॥

ಲಿಂಗನಿಷ್ಠರಾದ ಪ್ರಸಾದಿಗಳಿಂ ಶಿವಪ್ರಸಾದಾನ್ನಮೆಂತು ಸ್ವೀಕರಿಸಲ್ತಕ್ಕದು ಹಾಗೆ ಶ್ರೀ ಗುರು ಶಿವಯೋಗಿಗಳ ಪ್ರಸಾದಾನ್ನವು ಸ್ವೀಕರಿಸಲ್ತಕ್ಕದೆಂಬುದರ್ಥಂ ॥೧೮॥

## ೨೬. ಗುರುಮಾಹಾತ್ಮ್ಯಸ್ಥಲ

ಬಳಿಕ ಪ್ರಸಾದನಿಷ್ಠೆಯಿಂ ತಿಳಿಯಲ್ತಕ್ಕ ಗುರುಮಾಹಾತ್ಮ್ಯಸ್ಥಲಮಂ ನಿರೂಪಿಸುತಿರ್ದಪಂ.

ಗುರುರೇವಾತ್ರ ಸರ್ವೇಷಾಂ ಕಾರಣಂ ಸಿದ್ಧಿಕರ್ಮಣಾಮ್
ಗುರುರೂಪೋ ಮಹಾದೇವೋ ಯತಸ್ಸಾಕ್ಷಾದುಪಸ್ಥಿತಃ ॥

ಈ ಲೋಕದಲ್ಲಿ ಭೋಗಮೋಕ್ಷಪ್ರದವಾದ ಸಿದ್ಧಿಕರ್ಮಗಳಿಗೂ ಗುರುವೆ ಕಾರಣವಾದಾತನು. ಯಾವುದಾನೊಂದು ಕಾರಣದಿಂ ಶಿವನೆ ಪ್ರತ್ಯಕ್ಷವಾದ ಗುರುವಾಗಿರುತಿಹನೆಂಬುದರ್ಥಂ ॥೧೯॥ ಬಳಿಕ ನಿಷ್ಕಲನಾದ ಶಿವನದೇನು ಕಾರಣ ಸಕಲನಾದ ಗುರುರೂಪದಿಂ ಪ್ರಕಾಶಿಸುತ್ತಿಹನೆಂಬಲ್ಲಿ ಪೇಳುತಿರ್ದಪಂ.

ನಿಷ್ಕಲೋ ಹಿ ಮಹಾದೇವಃ ನಿತ್ಯಜ್ಞಾನಮಹೋದಧಿಃ
ಸಕಲೋ ಗುರುರೂಪೇಣ ಸರ್ವಾನುಗ್ರಾಹಕೋ ಭವೇತ್ ॥

ನಿತ್ಯಜ್ಞಾನ ಸಮುದ್ರನಾದ ಮಹೇಶ್ವರಂ ನಿಷ್ಕಲನಾದ ಗುರುರೂಪದಿಂ ಸಕಲನಾಗಿ ಸಕಲಾನುಗ್ರಾಹಕನಾಗಿರುವನೆಂಬುದರ್ಥಂ ॥೨೦॥ ಅದು ಕಾರಣವಾಗಿ ಗುರು ಶಿವನಿಗೆ ಭೇದವಿಲ್ಲವೆಂದು ಪೇಳುತಿರ್ದಪಂ.

ಯಶ್ಶಿವಸ್ಸಗುರುರ್ಜ್ಞೇಯೋ ಯೋ ಗುರುಸ್ಸಶಿವಸ್ಸ್ಮೃತಃ
ನ ತಯೋರಂತರಂ ಕುರ್ಯಾದ್ಜ್ಞಾನಾವಾಪ್ತೌ ಮಹಾಮತಿಃ ॥

ಗುರುವು ಮೋಕ್ಷಕ್ಕೆ ಕಾರಣವಾದ ಜ್ಞಾನಪ್ರದನಾದ ಕಾರಣದಿಂ ಶಿವನೆ ಸರಿ. ಅಲ್ಲದಿರ್ದಡೆ ಜ್ಞಾನವೆ ಇಲ್ಲದೆ ಹೋಹುದು. ಅದು ಕಾರಣವಾಗಿ ಸೂಕ್ಷ್ಮದೃಷ್ಟಿಯಾದವಂ ಗುರು ಶಿವನಿಗೆ ಭೇದಮಂ ಮಾಡಲಾಗದೆಂಬುದರ್ಥಂ ॥೨೧॥ ಬಳಿಕ ಯಥ್ಯಾಹಂ ಸರ್ವಲೋಕಾನಾಂ ಗುರುರಂಬಿಕಯಾ ಸಹ ಎಂಬಾಗಮವಚನದಿಂ ಶಿವಸಮಾನವಾದ ಶ್ರೀಗುರುಸ್ವಾಮಿಯಂ ಪ್ರಾಕೃತರಿಗೆ ಸಮಾನವಾಗಿ ನುಡಿಯದೆ ಪೂಜಿಸೂದೆಂದು ಪೇಳುತಿರ್ದಪಂ.

ಹಸ್ತಪಾದಾದಿಸಾಮ್ಯೇನ ನೇತರೈಸ್ಸದೃಶಂ ವದೇತ್
ಆಚಾರ್ಯಂ ಜ್ಞಾನದಂ ಶುದ್ಧಂ ಶಿವರೂಪತಯಾ ಸ್ಥಿತಮ್ ॥

ಆಚಾರ್ಯಸ್ಯಾವಮಾನೇನ ಶ್ರೇಯಃ ಪ್ರಾಪ್ತಿರ್ವಿಹನ್ಯತೇ
ತಸ್ಮಾನ್ನಿಶ್ರೇಯಸಪ್ರಾಪ್ತ್ಯೈ ಪೂಜಯೇತ್ತಂ ಸಮಾಹಿತಃ ॥

ನಿರ್ಮಲಾಂತಃಕರಣನಾಗಿ ಶಿವಜ್ಞಾನಪ್ರಕಾಶಕನಾದ ಉಮಾಮಹೇಶ್ವರ ರೂಪದಿಂದಿರುವ ಶ್ರೀಗುರುಸ್ವಾಮಿಯಂ ಹಸ್ತಪಾದಾದಿ ಸಾಮ್ಯತೆಯಿಂ ಪ್ರಾಕೃತರಿಗೆ ಸಮಾನವಾಗಿ ನುಡಿಯಲಾಗದು. ಅದರಿಂದೇನಾಹದೆಂದರೆ ಆಚಾರ್ಯನ ಉದಾಸೀನವ ಮಾಡಿದರಿಂದ ಭೋಗಮೋಕ್ಷರೂಪಮಾದ ಶ್ರೇಯಸ್ಸು ಕೆಡುವುದು. ಅದು ಕಾರಣದಿಂ ಭೋಗಮೋಕ್ಷಾರ್ಥವಾಗಿಯೆ ಏಕಾಗ್ರಚಿತ್ತನಾಗಿ ಆ ಶ್ರೀಗುರುಸ್ವಾಮಿಯಂ ಪೂಜಿಸೂದೆಂಬು ದರ್ಥಂ ॥೨೨॥ ಬಳಿಕ ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ಎಂಬ ಶ್ವೇತಾಶ್ವತರಶ್ರುತ್ಯರ್ಥಮಂ ಪ್ರಕಟಿಸುತ್ತ ಗುರುಮಹತ್ವ ಸ್ಥಲಮಂ ಮುಗಿಸುತಿರ್ದಪಂ.

ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ನ ಜಾಯತೇ
ತತಃ ಶಿವೇ ಯಥಾ ಭಕ್ತಿಸ್ತಥಾ ಭಕ್ತಿರ್ಗುರಾವಪಿ ॥

ಗುರುಭಕ್ತಿ ಇಲ್ಲದವಂಗೆ ಶಿವಭಕ್ತಿಯೇ ಹುಟ್ಟದು. ಅದು ಕಾರಣವಾಗಿ ಶಿವನಲ್ಲಿ ಹೇಗೆ ಭಕ್ತಿ ಮಾಡಲ್ಪಡುತ್ತಿಹುದು ಹಾಗೆ ಗುರುವಿನಲ್ಲಿಯೂ ಭಕ್ತಿ ಮಾಡಲ್ತಕ್ಕದೆಂಬುದರ್ಥಂ ॥೨೩॥

## ೨೭. ಲಿಂಗಮಾಹಾತ್ಮ್ಯಸ್ಥಲ

ಬಳಿಕ ಗುರುರೂಪಿಯಂ ಪ್ರಕಾಶಿಸುವಂಥಾ ಲಿಂಗಮಹತ್ವ ಸ್ಥಲಮಂ ಪೇಳುತಿರ್ದಪಂ

ಗುರುಮಾಹಾತ್ಮ್ಯಯೋಗೇನ ನಿಜಜ್ಞಾನಾತಿರೇಕತಃ
ಲಿಂಗಸ್ಯಾಪಿ ಚ ಮಾಹಾತ್ಮ್ಯಂ ಸರ್ವೋತ್ಕೃಷ್ಟಂ ವಿಭಾವ್ಯತೇ ॥

ಗುರುಮಹತ್ವಜ್ಞಾನಯೋಗದಿಂದ ನಿಜಜ್ಞಾನೋದ್ರೇಕದತ್ತಣಿಂ ಶಿವಲಿಂಗದ ಮಹತ್ವವು ಸರ್ವೋತ್ಕೃಷ್ಟವಾಗಿ ತಿಳಿಯಲ್ಪಡುವುದೆಂಬುದರ್ಥಂ ॥೨೪॥ ಬಳಿಕ ಲಿಂಗಜ್ಞಾನ ಹೊರತಾಗಿ ಲಿಂಗಮಹತ್ವಜ್ಞಾನ ಕೂಡದಲ್ಲ ಅದರಿಂ ಲಿಂಗಸ್ವರೂಪಮೇತರಿಂ ತಿಳಿಯಲ್ಪಟ್ಟಿತ್ತೆಂಬಲ್ಲಿ ಪೇಳುತಿರ್ದಪಂ.

ಶಿವಸ್ಯ ಬೋಧಲಿಂಗಂ ಯದ್ಗುರುಬೋಧಿತಚೇತಸಾ
ತದೇವ ಲಿಂಗಂ ವಿಜ್ಞೇಯಂ ಶಾಂಕರಂ ಸರ್ವಕಾರಣಮ್ ॥

ಶಿವನ ಯಾವುದಾನೊಂದು ಚಿನ್ಮಯಲಿಂಗಮುಂಟು ಅದು ವಿಷ್ಣ್ವಾದಿ ಸಕಲ ವಿಶ್ವಕ್ಕೂ ಮೂಲಕಾರಣಮೆಂದು ಗುರುವಿನಿಂದ ತಿಳಿಯಲ್ಪಟ್ಟ ಅಂತಃಕರಣವುಳ್ಳವನಿಂದ ತಿಳಿಯಲು ಯೋಗ್ಯಂ ಗುರುವಿನಿಂದಲೆ ತಿಳಿಹಲ್ಪಟ್ಟಿತೆಂಬುದರ್ಥಂ ॥೨೫॥ ಬಳಿಕಾ ಲಿಂಗ ಮೆಂಥದೆಂಬಲ್ಲಿ ಪೇಳುತಿರ್ದಪಂ.

ಪರಂ ಪವಿತ್ರಮಮಲಂ ಲಿಂಗಂ ಬ್ರಹ್ಮ ಸನಾತನಮ್
ಶಿವಾಭಿಧಾನಂ ಚಿನ್ಮಾತ್ರಂ ಸದಾನಂದಂ ನಿರಂಕುಶಮ್ ॥

ಕಾರಣಂ ಸರ್ವಲೋಕಾನಾಂ ವೇದಾನಾಮಪಿ ಕಾರಣಮ್
ಪೂರಣಂ ಸರ್ವತತ್ತ್ವಾನಾಂ ಕಾರಣಂ ಜನ್ಮವಾರಿಧೇಃ ॥

ಜ್ಯೋತಿರ್ಮಯಮನಿರ್ದೇಶ್ಯಂ ಯೋಗಿನಾಮಾತ್ಮನಿ ಸ್ಥಿತಮ್
ಕಥಂ ವಿಜ್ಞಾಯತೇ ಲೋಕೇ ಮಹಾಗುರುದಯಾಂ ವಿನಾ ॥

ಚರಾಚರ ಪ್ರಪಂಚಿನಿಂದಲೂ ಶ್ರೇಷ್ಠಮಾಗಿ ಪವಿತ್ರಮಾಗಿ ನಿರ್ಮಲವಾಗಿ ನಿತ್ಯವಾಗಿ ಶಿವನೆಂಬ ಪೆಸರುಳ್ಳದಾಗಿ ಚಿದಾನಂದರೂಪಮಾಗಿ ತಡೆಯಿಲ್ಲದಾಗಿ ಸರ್ವಲೋಕಕ್ಕೂ ಕಾರಣವಾಗಿ ವಿಷ್ಣ್ವಾದಿ ದೇವತೆಗಳಿಗೂ ಕಾರಣವಾಗಿ ಮಯೂರಾಂಡರಸನ್ಯಾಯದಿಂ ಸಕಲತತ್ತ್ವಗಳಿಂದಲೂ ಪೂರ್ಣವಾಗಿ ಸಂಸಾರಸಮುದ್ರವ ದಾಟಿಸುವುದಾಗಿ ಯೋಗಿಗಳಿಂದಲೂ ಕುರುಹಿಡಲ್ಬಾರದದಾಗಿ ತನ್ನ ನಿಜಸ್ವರೂಪದಲ್ಲಿಯೆ ಇರುವಂಥಾ ಪರಬ್ರಹ್ಮಲಿಂಗವು ತತ್ ಜ್ಞಾನಂ ಸದ್ಗುರೋರ್ಜ್ಞೇಯಂ ನಾನ್ಯಥಾ ಶಾಸ್ತ್ರ ಕೋಟಿಭಿಃ ಹೀಗೆಂಬಲ್ಲಿ ಶಿವರಹಸ್ಯವಚನಾನುಸಾರದಿಂದೀ ಲೋಕದಲ್ಲಿ ಮಹಾಗುರು ದಯೆ ಹೊರತಾಗಿ ಯಾವ ಪ್ರಕಾರದಿಂದಲೂ ತಿಳಿಯಲ್ಪಡದೆಂಬುದರ್ಥಂ ॥೨೮॥ ಬಳಿಕ ನಮ್ಮಂಥವರಿಗೆ ಲಿಂಗ ತಿಳಿಯದೆಂಬುದರಿಂದ ಗುರುಕೃಪೆ ಬೇಕಲ್ಲದೆ ಸರ್ವಜ್ಞರಾದ ಬ್ರಹ್ಮಾದಿಗಳಿಗೆ ಗುರುಕೃಪೆ ಬೇಡವಲ್ಲ ಎಂಬಲ್ಲಿ ವರಾ ವಿಷ್ಣುರ್ನಿಮಮಾಜ್ಯಭೂಮ್ ಬ್ರಹ್ಮತ್ವಪಾತದಿವಮಾಶು ಹೃದಃ ಹೀಗೆಂಬ ಲಿಂಗಸೂತ್ರಾನುಸಾರದಿಂ ಪೇಳುತಿರ್ದಪಂ.

ಬ್ರಹ್ಮಣಾ ವಿಷ್ಣುನಾ ಪೂರ್ವಂ ಯಲ್ಲಿಂಗಂ ಜ್ಯೋತಿರಾತ್ಮಕಮ್
ಅಪರಿಚ್ಛೇದ್ಯಮಭವತ್ಕೇನ ವಾ ಪರಿಬೋಧ್ಯತೇ ॥

ಜ್ಯೋತಿರ್ಮಯವಾದ ಯಾವುದಾನೊಂದು ಲಿಂಗವು ಪೂರ್ವದಲ್ಲಿ ಬ್ರಹ್ಮನಿಂದಲೂ ವಿಷ್ಣುವಿನಿಂದಲೂ ತಿಳಿಯಲು ಶಕ್ಯವಲ್ಲದಂಥಾದ್ದಾಯಿತು ಅಂಥಾ ಮಹಾಲಿಂಗವು ಯಾರಿಂದಲೂ ತಿಳಿಯಲು ಶಕ್ಯವಲ್ಲದೆಂಬುದರ್ಥಂ. ಹಾಗಾದರೆ ಬ್ರಹ್ಮಾದಿಗಳಿಗೂ ಅಗೋಚರವಾದ ಲಿಂಗವೆಂಥಾದೆಂಬಲ್ಲಿ ಪೇಳುತಿರ್ದಪಂ. ॥೨೯॥

ಬಹುನಾತ್ರ ಕಿಮುಕ್ತೇನ ಲಿಂಗಂ ಬ್ರಹ್ಮಸನಾತನಮ್
ಯೋಗಿನೋ ಯತ್ರ ಲೀಯಂತೇ ಮುಕ್ತಪಾಶನಿಬಂಧನಾಃ ॥

ಈ ವಿಷಯದಲ್ಲಿ ಬಹುಮಾತಿನಿಂದೇನು ಪ್ರಯೋಜನ ವಿಶ್ವದ ಲಯಗಮನಕ್ಕೆ ಕಾರಣವಾಗಿ ನಿತ್ಯವಾದ ಬ್ರಹ್ಮವೆ ಲಿಂಗವು. ಯಾವುದಾನೊಂದು ಪರಬ್ರಹ್ಮಮಯ ಲಿಂಗದಲ್ಲಿ ಸನಕಾದಿ ಯೋಗಿಗಳೂ ಬಿಡಲ್ಪಟ್ಟ ಅವಿದ್ಯಾದಿ ಪಂಚಪಾಶ ಸಮೂಹವುಳ್ಳವರಾಗಿ ತದಾತ್ಮವ ಪಡುತ್ತಿಹರೆಂಬುದರ್ಥಂ ॥೩೦॥ ಬಳಿಕ ಬ್ರಹ್ಮಲಿಂಗವಾದರೆ ಅದಕ್ಕೆ ಪೀಠವಾವುದೆಂಬಲ್ಲಿ ಪೇಳುತಿರ್ದಪಂ.

ಪೀಠಿಕಾ ಪರಮಾಶಕ್ತಿರ್ಲಿಂಗಂ ಸಾಕ್ಷಾತ್ಪರಶ್ಶಿವಃ
ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ ॥

ಕ್ರಿಯಾಶಕ್ತ್ಯಾತ್ಮಕಂ ಪೀಠಂ ಜ್ಞಾನಶಕ್ತ್ಯಾತ್ಮನಃ ಪ್ರಭೋಃ ಹೀಗೆಂಬ ಶಿವಾಗಮ ವಚನದಿಂ ಪೂರ್ವೋತ್ಕೃಷ್ಟಮಾದ ಕ್ರಿಯಾಶಕ್ತಿಯೆ ಪೀಠವು. ಚಿದ್ರೂಪನಾದ ಪರಮೇಶ್ವರನೆ

ಲಿಂಗವು. ಈ ಪ್ರಕಾರವಾದ ಶಿವಶಕ್ತಿಯೋಗವುಳ್ಳ ಆ ಲಿಂಗವು ನ ವಜ್ರಚಕ್ರಾಂಕ ಸರೋರುಹಾಂಕಂ ಲಿಂಗಾಂಕಿತಂ ಪಶ್ಯ ಜಗದ್ಭಗಾಂಕಮ್ ಜ್ಞಾನಕರ್ಮೇಂದ್ರಿಯೈರ್ವಿಶ್ವಂ ಚಿತ್ಕ್ರಿಯಾ ಲಿಂಗರೂಪಕಂ ಹೀಗೆಂಬ ಪುರಾಣವಚನದಿಂ ಸಕಲಜಗದ್ರೂಪಮಾದಂಥಾ ದೆಂಬುದರ್ಥಂ ॥೩೧॥ ಬಳಿಕೀ ಪ್ರಕಾರವಾದ ಲಿಂಗಮಂ ಬ್ರಹ್ಮಾದಿಗಳು ಪೂಜಿಸಿ ಮಹೈಶ್ವರ್ಯಮಂ ಪಡೆದರೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮಾದಯಸ್ಸುರಾಸ್ಸರ್ವೇಮುನಯಶ್ಶೌನಕಾದಯಃ
ಶಿವಲಿಂಗಾರ್ಚನಾದೇವ ಸ್ವಂ ಸ್ವಂ ಪದಮವಾಪ್ನುಯುಃ ॥

ಬ್ರಹ್ಮಾದಿ ದೇವತೆಗಳೂ ಶೌನಕಾದಿ ಋಷಿಗಳೂ ಶಿವಲಿಂಗಪೂಜೆಯಿಂದಲೆ ತಂತಮ್ಮ ಸತ್ಯಲೋಕಾದಿ ಸ್ಥಾನಂಗಳಂ ಪಡೆದರೆಂಬುದರ್ಥಂ ಈ ವಿಷಯದಲ್ಲಿ ತವಶ್ರೀಯೈಃ ಮರುತೋಮರ್ಜಯಂತ ರುದ್ರಯತ್ತೇ ಜನಿಮ ಚಾರುಚಿತ್ರಮ್ ಪದಂ ಯದ್ವಿಷ್ಣೋರುಪಮಂ ನಿಧಾಯಿಯೆಂದು ಶ್ರುತಿಯುಂಟಾಗಿರುವುದು. ಇದಕ್ಕೆ ವಿವರ ಅಹೋ ರುದ್ರನೆ ನಿನ್ನ ಅಭಿವ್ಯಕ್ತಿಗಾಧಾರವಾಗಿ ಮನೋಹರವಾಗಿ ವಿಚಿತ್ರವಾದ ಲಿಂಗಮಂ ಬ್ರಹ್ಮಾದಿ ದೇವತೆಗಳೂ ಐಶ್ವರ್ಯಕ್ಕೋಸ್ಕರ ವಿಷ್ಣು ನಿನ್ನ ಪೂಜಿಸಿ ಪಡೆದ ವೈಕುಂಠ ಮೊದಲಾದ ಸ್ಥಾನವಂ ದೃಷ್ಟಾಂತರ ಮಾಡಿಕೊಂಡು ಪೂಜಿಸಿದರೆಂಬುದರ್ಥಂ ॥೩೨॥ ಹಾಗಾದರೆ ಶಿವನಿಗೂ ವಿಶ್ವಾಧಿಕತ್ವಾದಿ ಮಹೈಶ್ವರ್ಯಂ ಮತ್ತೊಬ್ಬ ಮಹಾಪುರುಷನ ಪೂಜೆಯಿಂದುಂಟಾ ಯಿತೋ ಎಂಬಲ್ಲಿ ಪೇಳುತಿರ್ದಪಂ.

ವಿಶ್ವಾಧಿಪತ್ಯಮೀಶಸ್ಯ ಲಿಂಗಮೂರ್ತೇಃ ಸ್ವಭಾವಜಮ್
ಅನನ್ಯದೇವಸಾದೃಶ್ಯಂ ಶ್ರುತಿರಾಹ ಸನಾತನೀ ॥

ವಿಶ್ವಾಧಿಕೋ ರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಜನಯಾಮಾಸಪೂರ್ವಮ್ ಸ ನೋ ಬುದ್ಧ್ಯಾ ಶುಭಯಾ ಸಃ ಯುನಕ್ತು ಹೀಗೆಂಬ ಶ್ವೇತಾಶ್ವತರ ಶ್ರುತಿಯಿಂ ಚಿಲ್ಲಿಂಗಮೂರ್ತಿಯಾದ ಪರಮೇಶ್ವರಂಗೆ ವಿಶ್ವಾಧಿಕತ್ವ ವಿಶ್ವಸೇವ್ಯತ್ವ ಮುಂತಾದುವು ಸ್ವಾಭಾವಿಕವು ದೇವತಾಂತರ ಸಾಧಾರಣವಲ್ಲವೆಂದು ನಿತ್ಯವಾದ ಶ್ರುತಿ ಪೇಳುತ್ತಿಹ ದೆಂಬುದರ್ಥಂ ॥೩೩॥

## ೨೮. ಜಂಗಮಮಾಹಾತ್ಮ್ಯಸ್ಥಲ

ಬಳಿಕ ಗುರುಲಿಂಗಮಹತ್ವದತ್ತಣಿಂ ತಿಳಿಯಲ್ತಕ್ಕ ಜಂಗಮಮಹತ್ವಸ್ಥಲಮಂ ನಿರೂಪಿಸುತಿರ್ದಪಂ.

ಗುರುಶಿಷ್ಯಸಮಾರೂಢಲಿಂಗಮಾಹಾತ್ಮ್ಯಸಂಪದಃ
ಸರ್ವಂ ಚಿದ್ರೂಪವಿಜ್ಞಾನಾಜ್ಜಂಗಮಾಧಿಕ್ಯಮುಚ್ಯತೇ ॥

ಆಚಾರ್ಯಃ ಪೂರ್ವರೂಪಮ್ ಅಂತೇವಾಸ್ಯುತ್ತರರೂಪಮ್ ವಿದ್ಯಾ ಸಂಧಿಃ ಹೀಗೆಂಬ ಶ್ರುತಿಯಿಂ ಗುರುಶಿಷ್ಯ ಮಧ್ಯಗತ ಶಿವಲಿಂಗಮಹತ್ವ ಸಂಪತ್ತಿಯತ್ತಣಿಂ ಸಕಲ ಪ್ರಪಂಚವೂ ಚಿತ್ಕ್ರಿಯಾರೂಪಮೆಂಬ ಜ್ಞಾನದತ್ತಣೀಂ ಜಂಗಮಾಧಿಕ್ಯ ಪೇಳಲ್ಪಡುತ್ತಿದೆ

ಯೆಂಬುದರ್ಥಂ. ಗುರುಶಿಷ್ಯಂ ಇಷ್ಟಪ್ರಾಣಭಾವಗಳಲ್ಲಿ ತಾದಾತ್ಮ್ಯಭಾವನೆಯಿಂದ ರೂಢಮಾದ ಲಿಂಗಮಹತ್ವದ ಸಂಪತ್ತಿಯಿಂ ಸಕಲವಿಶ್ವವು ಶಿವಶಕ್ತ್ಯಾತ್ಮಕವೆಂಬಲ್ಲಿ ಜ್ಞಾನವೆಂಬ ಜಂಗಮಾಧಿಕ್ಯವೆಂಬುದು ತಾತ್ಪರ್ಯಂ ॥೩೪॥ ಬಳಿಕ ಜಂಗಮರೆಂದರಾರು ಎಂಬಲ್ಲಿ ಪೇಳುತಿರ್ದಪಂ.

ಜಾನಂತ್ಯತಿಶಯಾದ್ಯೇ ತು ಶಿವಂ ವಿಶ್ವಪ್ರಕಾಶಕಮ್
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ ॥

ತಸ್ಯಭಾಸಾ ಸರ್ವಮಿದಂ ವಿಭಾತಿ ಎಂಬ ಶ್ರುತಿಯಿಂ ತನ್ನ ಚಿತ್ಕ್ರಿಯಾ ಶಕ್ತಿಗಳಿಂದ ವಿಶ್ವ ಪ್ರಕಾಶಕನಾದ ಶಿವನಂ ಯಾರು ಕೆಲಬರು ಅತಿಶಯದಿಂದ ಮಾಯಾಕಾರ್ಯಕೋಟಿ ಪ್ರವಿಷ್ಟರಾದ ಸರ್ವಸಮಸ್ತ ಪದಾರ್ಥಂಗಳ ನಿತ್ಯವೆಂದು ತಿಳಿದು ಅದಂ ಮೀರಿ ಅದಕ್ಕೆ ಜೀವನಭೂತವಾದ ಜ್ಞಾತೃತ್ವ ಕರ್ತೃತ್ವ ಸ್ವಭಾವನಾದವನಾಗಿ ತಿಳಿದು ಅಂಥಾ ಜೀವೇಶ್ವರ ಸಾಧಾರಣವಾದ ಅಸ್ಮದ್ರೂಪಾತ್ಮತತ್ತ್ವಾಭಿನ್ನ ಶಿವನೆ ತಾನೆಂಬ ದೃಢನಿಶ್ಚಯದಿಂ ಸ್ವಸ್ವರೂಪಮಂ ತಿಳಿದಿಹರು ಅವರೀಗ ಜಂಗಮರೆಂಬುದರ್ಥಂ ॥೩೫॥ ಬಳಿಕ ಶಿವಯೋಗಿಗಳೆಂದು ಪ್ರಸಿದ್ಧರಾದ ಜಂಗಮ ಮಹತ್ವವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಯೇ ಪಶ್ಯಂತಿ ಜಗಜ್ಜಾಲಂ ಚಿದ್ರೂಪಂ ಶಿವಯೋಗತಃ
ನಿರ್ಧೂತಮಲಸಂಸ್ಪರ್ಶಾಸ್ತೇ ಸ್ಮೃತಾಶ್ಶಿವಯೋಗಿನಃ ॥

ಯಾವ ಜಂಗಮದೇವರೀ ವಿಶ್ವಮಂ ಶಿವಸಂಬಂಧಮುಂಟಾಗಿರುವುದರಿಂ ಶಿವಸ್ವರೂಪವೇ ಸರಿಯೆಂದು ತಿಳಿದಿಹರು ಅವರುಗಳು ನಿರ್ಮಲರಾದ ಶಿವಯೋಗಿಗಳೂ ಬ್ರಹ್ಮಪ್ರಪಂಚಗಳಿಗೆ ಸಂಯೋಗ ಸಂಬಂಧ ಕೂಡದೆಂದು ಖಂಡಿಸಿಹ ಕಾರಣದಿಂ ತಾದಾತ್ಮ್ಯವನಂಗೀಕರಿಸಬೇಕಾಗಿ ಶಿವಸ್ವರೂಪವೆ ಸರಿಯೆಂಬುದು ತಾತ್ಪರ್ಯಂ ॥೩೬॥

ಘೋರಸಂಸಾರತಿಮಿರಪರಿಧ್ವಂಸನಕಾರಣಮ್
ಯೇಷಾಮಸ್ತಿ ಶಿವಜ್ಞಾನಂ ತೇ ಮತಾಶ್ಶಿವಯೋಗಿನಃ ॥

ಭಯಂಕರವಾದ ಸಂಸಾರವೆಂಬ ಕತ್ತಲೆಯ ಕೆಡಿಸುವುದಕ್ಕೆ ಕಾರಣವಾದಂಥಾ ಶಿವಾಧಿಕ್ಯಜ್ಞಾನ ಯಾರಿಗುಂಟು ಅವರುಗಳು ಶಿವಯೋಗಿಗಳೆಂದು ನೆನೆಯಲ್ಪಟ್ಟ ರೆಂಬುದರ್ಥಂ ॥೩೭॥ ಬಳಿಕ ಶಿವಯೋಗಿಗಳೆಂಥವರು ಹೇಗಿಹರೆಂಬಲ್ಲಿ ಪೇಳುತಿರ್ದಪಂ.

ಜಿತಕಾಮಾ ಜಿತಕ್ರೋಧಾ ಮೋಹಗ್ರಂಥಿವಿಭೇದಿನಃ
ಸಮಲೋಷ್ಟಾಶ್ಮಕನಕಾಸ್ಸಾಧವಶ್ಶಿವಯೋಗಿನಃ॥

ಸಮುಶ್ಶತ್ರೌ ಚ ಮಿತ್ರೇ ಚ ಸಾಕ್ಷಾತ್ಪ್ರತ ಶಿವಾತ್ಮಕಾಃ
ನಿಸ್ಪೃಹಾಃ ನಿರಹಂಕಾರಾಃ ವರ್ತಂತೇ ಶಿವಯೋಗಿನಃ ॥

ಕಾಮ ಕ್ರೋಧಗಳಿಲ್ಲದವರು ಅಜ್ಞಾನಗ್ರಂಥಿಯ ಛೇದಿಸಿದವರು ಮಣ್ಣು ಹೆಂಟೆ, ಪಾಷಾಣ, ಚಿನ್ನದ ಘಟ್ಟಿಗಳಲ್ಲಿ ಸಮನಾದ ಬುದ್ಧಿಯುಳ್ಳವರು, ಸಾಧುಗಳಾದವರು, ಶಿವಯೋಗಿಗಳು. ಅಂಥಾ ಶಿವಯೋಗಿಗಳು ಶತ್ರು ಮಿತ್ರರಲ್ಲಿ ಏಕಪ್ರಕಾರವಾಗಿ

ಪ್ರತ್ಯಕ್ಷೀಕರಿಸಲ್ಪಟ್ಟ ಶಿವಸ್ವರೂಪವುಳ್ಳವರಾಗಿ ಇಹಮುತ್ರ ಫಲಭೋಗಂಗಳಲ್ಲಿ ವಿರಾಗಿಗಳಾಗಿ ಶರೀರ ಅಹಂಭಾವ ಶೂನ್ಯರಾಗಿ ಇರುವರೆಂಬುದರ್ಥಂ ॥೩೯॥ ಈ ಪ್ರಕಾರದಿಂ ಪೇಳಲ್ಪಟ್ಟ ಜ್ಞಾನದ್ವಯಸಂಪನ್ನರಾರುಂಟು ಅವರೂ ಸಾಕ್ಷಾಚ್ಛಿವರೂಪರೇ ಎಂದು ಪೇಳುತಿರ್ದಪಂ.

ದುರ್ಲಭಂ ಹಿ ಶಿವಜ್ಞಾನಂ ದುರ್ಲಭಂ ಶಿವಚಿಂತನಮ್
ಯೇಷಾಮೇತದ್ದ್ವಯಂ ಚಾಸ್ತಿ ತೇ ಹಿ ಸಾಕ್ಷಾಚ್ಛಿವಾತ್ಮಕಾಃ ॥

ಶಿವಾಧಿಕ್ಯಜ್ಞಾನವು ಪೇಳಿದ ಯುಕ್ತಿಗಳಿಂ ಶಿವಾಭೇದಚಿಂತನೆಯೂ ಎರಡೂ ದುರ್ಲಭವು. ಯಾರಿಗೆ ಈ ಎರಡೂ ಉಂಟೋ ಅವರುಗಳು ಪ್ರತ್ಯಕ್ಷ ಶಿವಮೂರ್ತಿಗಳೆಂಬುದರ್ಥಂ ॥೪೦॥ ಬಳಿಕ ಮರಳಿ ಅವರ ಮಹತ್ವವನೆರಡು ಶ್ಲೋಕಂಗಳಿಂ ಪೇಳುತಿರ್ದಪಂ.

ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿನಾಮ್
ತದೇವ ಸದನಂ ಪುಣ್ಯಂ ಪಾವನಂ ಗೃಹಮೇಧಿನಾಮ್ ॥

ಸರ್ವಸಿದ್ಧಿಕರಂ ಪುಂಸಾಂ ದರ್ಶನಂ ಶಿವಯೋಗಿನಾಮ್
ಸ್ಪರ್ಶನಂ ಪಾಪಶಮನಂ ಪೂಜನಂ ಮುಕ್ತಿಸಾಧನಮ್ ॥

ಶಿವಯೋಗಿಗಳಾದ ಜಂಗಮದೇವರ ಪಾದಾಗ್ರರೇಣುಗಳು ಗೃಹಸ್ಥರಾದವರ ಯಾವ ಗೃಹದಲ್ಲಿ ಬೀಳುತ್ತಿಹವು ಆ ಗೃಹವೆ ಪುಣ್ಯಕ್ಷೇತ್ರವು, ಪವಿತ್ರವಾದಂಥವು. ಆ ಶಿವಯೋಗಿಗಳ ದರ್ಶನಂ ಪುರುಷಂಗೆ ಸರ್ವಸಿದ್ಧಿಯನ್ನೀವದು. ಅವರ ಸೋಂಕು ಪಾಪಮಂ ಕೆಡಿಸೂದು. ಅವರ ಪೂಜನವೆ ಮುಕ್ತಿಯಂ ಕೊಡುವದೆಂಬುದರ್ಥಂ ॥೪೨॥ ಬಳಿಕಿಂಥಾ ಶಿವಯೋಗಿಗಳ ಸಂಬಂಧದಿಂದಿಷ್ಟಾರ್ಥಸಿದ್ಧಿಯಹುದೆಂದು ನುಡಿವುತಿರ್ದಪಂ.

ಮಹತಾಂ ಶಿವತಾತ್ಪರ್ಯವೇದಿನಾಮನುಮೋದಿನಾಮ್
ಕಿಂ ವಾ ಫಲಂ ನ ಸಿದ್ಧ್ಯೇತ ಸಂಪರ್ಕಾಚ್ಛಿವಯೋಗಿನಾಮ್ ॥

ಶಿವನ ರಹಸ್ಯಾಭಿಪ್ರಾಯವ ತಿಳಿದು ನಿತ್ಯಾನಂದಿಗಳಾಗಿರುವ ಮಹಾಪುರುಷರಾದ ಶಿವಯೋಗಿಗಳ ಸಮಾಗಮದಿಂದ ಏನುಫಲ ಸಿದ್ಧಿಸದು. ಸಕಲಫಲವು ಸಿದ್ಧಿಸೂದೆಂಬುದರ್ಥಂ ॥೪೩॥

## ೨೯.ಭಕ್ತಮಾಹಾತ್ಮ್ಯಸ್ಥಲ

ಬಳಿಕ ಗುರು ಲಿಂಗ ಜಂಗಮ ಮಹತ್ವದಲ್ಲಿ ತತ್ಪರನಾದ ಭಕ್ತನ ಮಹತ್ವವಂ ಹನ್ನೆರಡು ಸೂತ್ರಂಗಳಿಂ ಪೇಳುತಿರ್ದಪಂ.

ಗುರೋರ್ಲಿಂಗಸ್ಯ ಮಾಹಾತ್ಮ್ಯಕಥನಾಚ್ಛಿವಯೋಗಿನಾಮ್
ಸಿದ್ಧಂ ಭಕ್ತಸ್ಯ ಮಾಹಾತ್ಮ್ಯಂ ತಥಾಪ್ಯೇಷ ಪ್ರಶಸ್ಯತೇ ॥

ಗುರು ಲಿಂಗ ಜಂಗಮಂಗಳಲ್ಲಿ ಈ ಹೇಳಿದ ಮಹತ್ವಜ್ಞಾನಪೂರ್ವಕವಾಗಿ ಭಕ್ತಿಯ ಮಾಡುವುದರಿಂದ ಭಕ್ತನ ಮಹತ್ವವು ಸಿದ್ಧವಾಯಿತೆಂದು ಶಾಸ್ತ್ರಂಗಳಿಂದುತ್ಕೃಷ್ಟವಾಗಿ ಈ

ಭಕ್ತಂ ಪೇಳಲ್ಪಡುತ್ತಿಹನೆಂಬುದರ್ಥಂ ॥೪೪॥ ಬಳಿಕ ಭಕ್ತರೆಂಬವರಾರೆಂಬಲ್ಲಿ ಯದ್ಧಿ ಮನಸಾ ಧ್ಯಾಯತಿ ತದ್ವಾಚ ವದತಿ ತತ್ಕರ್ಮಣಾ ಕರೋತಿ ಎಂಬ ಶ್ರುತ್ಯನುಸಾರದಿಂ ಭಕ್ತಸ್ವರೂಪಮಂ ಪೇಳುತಿರ್ದಪಂ.

ಯೇ ಭಜಂತಿ ಮಹಾದೇವಂ ಪರಮಾತ್ಮಾನಮವ್ಯಯಮ್
ಕರ್ಮಣಾ ಮನಸಾ ವಾಚಾ ತೇ ಭಕ್ತಾ ಇತಿ ಕೀರ್ತಿತಾಃ ॥

ಹಸ್ತಂಗಳಿಂ ಪೂಜಿಸುವ ಕಾಯಕಕ್ರಿಯೆಯಿಂ ಶಿವಮೂರ್ತಿಧ್ಯಾನರೂಪವಾದ ಮಾನಸಕ್ರಿಯೆಯಿಂ ಸ್ತುತಿರೂಪಮಾದ ವಾಚಿಕಕ್ರಿಯೆಯಿಂದಾವ ಕೆಲಂಬರು ನಿತ್ಯ ಸಿದ್ಧಲಿಂಗ ರೂಪನಾದ ಪರಮಾತ್ಮನ ಭಜಿಸುತ್ತಿಹರು ಅವರುಗಳು ಭಕ್ತರೆನಿಸಿಕೊಂಬರೆಂಬುದರ್ಥಂ ॥ ೪೫॥ ಬಳಿಕೀ ಪ್ರಕಾರಮಾದ ಶಿವಭಕ್ತರಲ್ಲಿ ಜಾತಿಭೇದಮಂ ಉಂಟೋ ಇಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ದುರ್ಲಭಾ ಹಿ ಶಿವೇ ಭಕ್ತಿಸ್ಸಂಸಾರಭಯತಾರಿಣೀ
ಸಾ ಯತ್ರ ವರ್ತತೇ ಸಾಕ್ಷಾತ್ಸಭಕ್ತಃ ಪರಿಗೀಯತೇ ॥

ಸಂಸಾರ ಭೀತಿಯಂ ಬಿಡಿಸುವ ಶಿವಭಕ್ತಿ ದುರ್ಲಭವು ಅಂಥಾ ಶಿವಭಕ್ತಿ ಯಾವನಲ್ಲಿರುವುದು ಆತಂ ಭಕ್ತನೆಂದು ಪೇಳಲ್ಪಡುವನು ॥೪೬॥ ಅದು ಕಾರಣವಾಗಿ ಜನನ ಮರಣ ಪರಿಪೀಡಿತರಾದ ಜನರಿಗೆ ಶಿವಭಕ್ತಿ ಹೊರತಾಗಿ ಯಾವ ಸತ್ಕರ್ಮದಿಂದಲೂ ಪ್ರಯೋಜನವಿಲ್ಲವೆಂದು ಪೇಳುತಿರ್ದಪಂ.

ಕಿಂ ವೇದೈಃ ಕಿಂ ತಃ ಶಾಸ್ತ್ರೈಃ ಕಿಂ ಯಜ್ಞೈಃ ಕಿಂ ತಪೋವ್ರತೈಃ
ನಾಸ್ತಿ ಚೇಚ್ಛಾಂಕರೀ ಭಕ್ತಿರ್ದೇಹಿನಾಂ ಜನ್ಮರೋಗಿಣಾಮ್ ॥

ಭವರೋಗಿಗಳಾದ ಜೀವರಿಗೆ ಶಿವಭಕ್ತಿಯಿಲ್ಲದಿರ್ದಡೆ ವೇದಗಳಿಂದಲೂ ವೇದಾರ್ಥಾನುಸಾರಿಯಾದ ಶಿವಾಗಮಸೂತ್ರ ಪುರಾಣಾದಿಗಳಿಂದಲೂ ಯಜ್ಞಗಳಿಂದಲೂ ತಪಸ್ಸುಗಳಿಂದಲೂ ವ್ರತಗಳಿಂದಲೂ ಏನೂ ಪ್ರಯೋಜನವಿಲ್ಲವೆಂಬುದರ್ಥಂ ॥೪೭॥ ಬಳಿಕ ಶಿವಭಕ್ತಿ ಇಲ್ಲದೆ ಮಾಡಿದ ಸತ್ಕರ್ಮವು ವಿಫಲವಾಗಿ ವಿಪರೀತಫಲವನು ಕೊಡುವದೆಂದು ದೃಷ್ಟಾಂತರಪೂರ್ವಕವಾಗಿ ಪೇಳುತಿರ್ದಪಂ.

ಶಿವಭಕ್ತಿವಿಹೀನಸ್ಯ ಸುಕೃತಂ ಚಾಪಿ ನಿಷ್ಫಲಮ್
ವಿಪರೀತಫಲಂ ಚ ಸ್ಯಾದ್ದಕ್ಷಸ್ಯಾಪಿ ಮಹಾಧ್ವರೇ ॥

ಶಿವಭಕ್ತಿಯಿಲ್ಲದ ದಕ್ಷಪ್ರಜೇಶ್ವರನ ಯಾಗವು ವಿಫಲವಾಗಿ ವಿಪರೀತಫಲವನು ಕೊಟ್ಟಂಥಾದು ಹೇಗಾಯಿತು ಹಾಗೆ ಶಿವಭಕ್ತಿಯಿಲ್ಲದವ ಮಾಡಿದ ಸತ್ಕರ್ಮವೆಲ್ಲ ವಿಫಲವಾಗಿ ವಿಪರೀತಫಲವೀವದೆಂಬುದರ್ಥಂ ॥೪೮॥ ಬಳಿಕ ಶಿವಭಕ್ತಿಯಿಂ ಪಾಪಿಷ್ಠರಾದರೂ ಸತ್ಕರ್ಮ ಏನೆಂದು ದೃಷ್ಟಾಂತರಪೂರ್ವಕವಾಗಿ ಪೇಳುತಿರ್ದಪಂ.

ಅತ್ಯಂತಪಾಪಕರ್ಮಾಪಿ ಶಿವಭಕ್ತ್ಯಾ ವಿಶುದ್ಧ್ಯತಿ
ಚಂಡೋ ಯಥಾ ಪುರಾ ಭಕ್ತ್ಯಾ ಪಿತೃಹಾಽಪಿ ಶಿವೋಽಭವೇತ್ ॥

ತಂದೆಯ ಕೊಂದುದರಿಂ ಮಹಾಪಾಪಿಯಾದ ಚಂಡನು ಶಿವಭಕ್ತಿಯಿಂ ಶಿವಗಣಾಧಿಪತಿಯಂತಾದನು ಹಾಗೆ ಅತ್ಯಂತಪಾಪಿಯಾದರೂ ಶಿವಭಕ್ತಿಯಿಂ ಶುದ್ಧನಹನೆಂಬುದರ್ಥಂ ॥೪೯॥ ಹಾಗಾದರೆ ಶಿವಭಕ್ತರಿಗೆ ಪುಣ್ಯ ಪಾಪ ಸಂಬಂಧ ಉಂಟೋ ಇಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ಸುಕೃತಂ ದುಷ್ಕೃತಂ ಚಾಪಿ ಶಿವಭಕ್ತಸ್ಯ ನಾಸ್ತಿ ಹಿ
ಶಿವಭಕ್ತಿವಿಹೀನಾನಾಂ ಕರ್ಮಪಾಶನಿಬಂಧನಮ್ ॥

ಶಿವಭಕ್ತನಾದವಂಗೆ ಪುಣ್ಯವೂ ಇಲ್ಲ ಪಾಪವೂ ಇಲ್ಲವೆಂಬುದು ಪ್ರಸಿದ್ಧವು. ಶಿವಭಕ್ತಿ ಇಲ್ಲದವರಿಗೆ ಪುಣ್ಯಪಾಪ ಕರ್ಮಬಂಧನವೆಂಬುದರ್ಥಂ ॥೫೦॥ ಅದೆಂತೆಂದಡೆ ದೃಷ್ಟಾಂತರ ಪೂರ್ವಕವಾಗಿ ಸೂತ್ರದ್ವಯಂ ಪೇಳುತಿರ್ದಪಂ.

ಶಿವಾಶ್ರಿತಾನಾಂ ಜಂತೂನಾಂ ಕರ್ಮಣಾ ನಾಸ್ತಿ ಸಂಗಮಃ
ವಾಜಿನಾಂ ದಿನನಾಥಸ್ಯ ಕಥಂ ತಿಮಿರಜಂ ಭಯಮ್ ॥

ದಿನಕರನಾದ ಸೂರ್ಯನ ಕುದುರೆಗಳಿಗೆಂತು ಕತ್ತಲೆಯ ಭೀತಿಯಿಲ್ಲವೋ ಹಾಗೆ ಶಿವಭಕ್ತರಿಗೆ ಪುಣ್ಯಪಾಪ ಸಂಬಂಧವಿಲ್ಲವೆಂಬುದರ್ಥಂ ॥೫೧॥ ಮರಳಿ ದೃಷ್ಟಾಂತರಮಂ ಪೇಳುತಿರ್ದಪಂ.

ನಿರೋದ್ಧುಂ ನ ಕ್ಷಮಂ ಕರ್ಮ ಶಿವಭಕ್ತಾನ್ನಿಶೃಂಖಲಾನ್
ಕಥಂ ಮತ್ತಗಜಾನ್ರುಂಧೇಚ್ಛೃಂಖಲಾ ಬಿಸತಂತುಜಾ ॥

ತಾವರೆದಂಟನೊಳಗಣ ನೂಲಿನಿಂದ ನಿರ್ಮಿಸಿದ ಸಂಕಲೆಯೆಂತು ಮದ್ದಾನೆಗಳಂ ಬಂಧಿಸಲಾರದು ಹಾಗೆ ಶಿವದೀಕ್ಷೆಯಿಂ ನಿವಾರಿಸಲ್ಪಟ್ಟ ಮಲಮಾಯಾದಿ ಪಾಶವುಳ್ಳವರ ಪ್ಪುದರಿಂ ಬಂಧರಹಿತವಾದ ಶಿವಭಕ್ತರಂ ಕರ್ಮ ಬಂಧಿಸಲಾರದೆಂಬುದರ್ಥಂ ॥೫೨॥ ಅದು ಕಾರಣದಿಂದ ಶಿವಭಕ್ತನೆ ಪೂಜ್ಯನೆಂದು ಪೇಳುತಿರ್ದಪಂ.

ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯೋ ವಾ ಶೂದ್ರ ಏವ ವಾ
ಅಂತ್ಯಜೋ ವಾ ಶಿವೇ ಭಕ್ತಶ್ಶಿವವನ್ಮಾನ್ಯ ಏವ ಸಃ ॥

ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ಶೂದ್ರನಾಗಲಿ ಚಂಡಾಲನಾಗಲಿ ಶಿವನಲ್ಲಿ ಭಕ್ತಿಯುಳ್ಳವಂ ಶಿವನಂತೆ ಪೂಜ್ಯನೆ ಸರಿಯೆಂಬುದರ್ಥಂ ॥೫೩॥ ಬಳಿಕ ಶೂದ್ರಾದಿಗಳೂ ಬ್ರಾಹ್ಮಣರಿಂದ ನಿಕೃಷ್ಟರಾದಕಾರಣದಿಂದವರೆಂತು ಬ್ರಾಹ್ಮಣನಿಗೆ ಸಮಾನರೆಂಬಲ್ಲಿ ಪೇಳುತಿರ್ದಪಂ.

ಶಿವಭಕ್ತಿಸಮಾವೇಶೇ ಕ್ವ ಜಾತಿಪರಿಕಲ್ಪನಾ
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ ॥

ಅಗ್ನಿಯಿಂ ದಗ್ಧಮಾದ ಕಾಷ್ಠಂಗಳಲ್ಲಿ ಹೇಗೆ ಪೂರ್ವದ ಭೇದವಿಲ್ಲವೋ ಹಾಗೆ ಶಿವಭಕ್ತಿಯುಂಟಾಗುತ್ತಿರಲಾಗಿ ಪೂರ್ವದ ಜಾತಿಭೇದವಿಲ್ಲವೆಂಬುದರ್ಥಂ ॥೫೪॥ ಅದು ಕಾರಣವಾಗಿ ಶಿವಭಕ್ತರೆ ಗಣೇಶ್ವರನೆಂದು ಪೇಳಿ ಭಕ್ತ ಮಾಹಾತ್ಮ್ಯಮಂ ಮುಗಿಸುತಿರ್ದಪಂ.

ಶುದ್ಧಾ ನಿಯಮಸಂಯುಕ್ತಾಶ್ಶಿವಾರ್ಪಿತಫಲಾಗಮಾಃ
ಅರ್ಚಯಂತಿ ಶಿವಂ ಲೋಕೇ ವಿಜ್ಞೇಯಾಸ್ತೇ ಗಣೇಶ್ವರಾಃ ॥

ಯಾರು ದೀಕ್ಷೆಯಿಂ ಪವಿತ್ರರಾಗಿ ಶಿವವ್ರತಿಗಳಾಗಿ ಶಿವನಲ್ಲಿ ಸಮರ್ಪಿಸಲ್ಪಟ್ಟ ಪುಣ್ಯಪಾಪಫಲಾಗಮವುಳ್ಳವರಾಗಿ ಲೋಕದಲ್ಲಿ ಶಿವನಂ ಪೂಜಿಸುತ್ತಿಹರು ಅವರುಗಳು ನಾ ಶಿವಸ್ಯ ಶಿವೋಪಾಸ್ತಿಃ ನಾ ರುದ್ರೋರುದ್ರಮರ್ಚಯೇತ್ ಹೀಗೆಂಬ ವಚನದಿಂ ಶಿವಭಕ್ತರೆಂದು ರುದ್ರರೆಂದು ತಿಳಿಯಲು ಯೋಗ್ಯರೆಂಬುದರ್ಥಂ ॥೫೫॥

## ೩೦. ಶರಣಮಹತ್ವಸ್ಥಲ

ಬಳಿಕ ಗುರು ಲಿಂಗ ಜಂಗಮ ತದ್ಭಕ್ತ ಮಹತ್ವಮಂ ತಿಳಿದು ಶಿವನೊರ್ವನೆ ರಕ್ಷಕನೆಂದು ಯ್ದೈದುವ ಶರಣನ ಮಹತ್ವವಂ ಪ್ರತಿಪಾದಿಸುತಿರ್ದಪಂ.

ಗುರುಲಿಂಗಾದಿಮಾಹಾತ್ಮ್ಯಬೋಧಾನ್ವೇಷಣಸಂಗತಃ
ಸರ್ವಾತ್ಮನಾ ಶಿವಾಪತ್ತಿಶ್ಶರಣಸ್ಥಾನಮುಚ್ಯತೇ ॥

ಗುರು ಲಿಂಗ ಶಿವಯೋಗಿ ಶಿವಭಕ್ತರ ಮಹತ್ವಜ್ಞಾನವಿಚಾರ ಸಂಬಂಧದತ್ತಣಿಂ ನಾನಾ ಪ್ರಕಾರದಿಂದಲೂ ಶಿವನೆ ರಕ್ಷಕನೆಂದು ಯ್ದೈದುವದಾವದುಂಟು ಅದೇ ಶರಣ ಸ್ಥಾನವೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೫೬॥ ಬಳಿಕದನೆ ವಿವರಿಸುತಿರ್ದಪಂ.

ಬ್ರಹ್ಮಾದಿ ವಿಬುಧಾನ್ಸರ್ವಾನ್ಮುಕ್ತ್ವಾ ಪ್ರಾಕೃತವೈಭವಾನ್
ಪ್ರಪದ್ಯತೇ ಶಿವಂ ಯತ್ತು ಶರಣಂ ತದುದಾಹೃತಮ್ ॥

ಶಿವ ಈಶಾನಃ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ ಎಂಬ ಶ್ರುತಿಯಂ ಪ್ರಕೃತಿಜನ್ಯಮಾದ ಸಂಪತ್ತುಳ್ಳ ಬ್ರಹ್ಮ ವಿಷ್ಣು ಮೊದಲಾದವರಂ ಬಿಟ್ಟು ಶಿವನಂ ಯ್ದೈದುಹದಾವದುಂಟು ಅದು ಶರಣಸ್ಥಲಮೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೫೭॥ ಬಳಿಕ ಶರಣಾಗತನ ಸ್ವರೂಪಮಂ ವಿಸ್ತರಿಸುತಿರ್ದಪಂ.

ಶರಣ್ಯಸ್ಸರ್ವಭೂತಾನಾಂ ಶಂಕರಶ್ಶಶಿಶೇಖರಃ
ಸರ್ವಾತ್ಮನಾ ಪ್ರಪನ್ನಸ್ತಂ ಶರಣಾಗತ ಉಚ್ಯತೇ ॥

ಚಂದ್ರಚೂಡನಾದ ಸುಖಕರನಾದ ಪರಮೇಶ್ವರನು ಸಕಲ ಪ್ರಾಣಿಗಳನ್ನು ರಕ್ಷಿಸುವಲ್ಲಿ ಸಮರ್ಥನೆಂದು ತಿಳಿದು ನಾನಾ ಪ್ರಕಾರದಿಂದಲೂ ರಕ್ಷಿಸೆಂದು ಮರೆಹೊಕ್ಕವರಂ ಶರಣಾಗತನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೫೮॥ ಬಳಿಕ ಶರಣಾರ್ಥಿಯ ಸ್ವರೂಪಂ ಪೇಳುತಿರ್ದಪಂ.

ವಿಮುಕ್ತಭೋಗಲಾಲಸ್ಯೋ ದೇವತಾಂತರನಿಸ್ಪೃಹಃ
ಶಿವಮಭ್ಯರ್ಥಯನ್ಮೋಕ್ಷಂ ಶರಣಾರ್ಥೀತಿ ಗೀಯತೇ ॥

ಬಿಡಲ್ಪಟ್ಟ ತುಚ್ಛ ಭೋಗಪ್ರೀತಿಯುಳ್ಳವನು ಬ್ರಹ್ಮಾದಿಗಳ ಪದವಿಯಲ್ಲಿ ವಿರಕ್ತನಾಗಿ ಶಿವನ ಕುರಿತು ಮೋಕ್ಷವ ಬೇಡಿಕೊಂಬವಂ ಶರಣಾರ್ಥಿಯೆಂದು ಪೇಳಲ್ಪಡುತ್ತಿಹ

ನೆಂಬುದರ್ಥಂ ॥೮೯॥ ಈ ಪ್ರಕಾರದಿಂ ಶಿವಪ್ರಪನ್ನರಿಗೆ ಬೇರೊಂದು ಸತ್ಕರ್ಮ ಬೇಡವೆಂದು ಪೇಳುತಿರ್ದಪಂ.

ಯೇ ಪ್ರಪನ್ನಾ ಮಹಾದೇವಂ ಮನೋವಾಕ್ಕಾಯಕರ್ಮಭಿಃ
ತೇಷಾಂ ತು ಕರ್ಮಜಾತೇನ ಕಿಂ ವಾ ದೇವಾದಿ ತರ್ಪಣೈಃ ॥

ಯಾರು ಕೆಲಂಬರು ಶಿವನಂ ಧ್ಯಾನ ಸ್ತುತಿ ಪೂಜಾರೂಪಮಾದ ಮನೋವಾಕ್ಕಾಯ ಕರ್ಮಗಳಿಂ ರಕ್ಷಿಸೆಂದು ಮರೆಹೊಕ್ಕವರಾರುಂಟು ಅವರುಗಳಿಗೆ ಯಜ್ಞಾದಿ ಕರ್ಮಗಳಿಂದಲೂ ದೇವರ್ಷಿಪಿತೃತರ್ಪಣದಿಂದಲೂ ಏನೂ ಪ್ರಯೋಜನವಿಲ್ಲವೆಂಬುದರ್ಥಂ ॥೯೦॥ ಅದೇನು ಕಾರಣವೆಂಬಲ್ಲಿ ಸೂತ್ರದ್ವಯದಿಂ ಪೇಳುತಿರ್ದಪಂ.

ಸರ್ವೇಷಾಮಪಿ ಯಜ್ಞಾನಾಂ ಕ್ಷಯಸ್ಸ್ವರ್ಗಃ ಫಲಾಯತೇ
ಅಕ್ಷಯಂ ಫಲಮಾಪ್ನೋತಿ ಪ್ರಪನ್ನಃ ಪರಮೇಶ್ವರಮ್ ॥

ಜ್ಯೋತಿಷ್ಟೋಮಾದಿ ಸಕಲ ಯಾಗಂಗಳಿಗೂ ನಶ್ವರಮಾದ ಸ್ವರ್ಗಂ ಫಲ ವಾಗುತ್ತಿಹುದು. ಶಿವನಂ ಮನೋವಾಕ್ಕಾಯ ಕರ್ಮಗಳಿಂ ಪ್ರಪನ್ನರಿಗೆ ನಾಶವಿಲ್ಲದ ಮೋಕ್ಷಫಲಮುಂಟಾಗುತ್ತಿರುವದೆಂಬುದರ್ಥಂ ॥೯೧॥ ಪಾಪಿಗಳಿಗೆಂತೆನೆ ಪೇಳುತಿರ್ದಪಂ.

ಪ್ರಪನ್ನಪಾರಿಜಾತಸ್ಯ ಭವಸ್ಯ ಪರಮಾತ್ಮನಃ
ಪ್ರಪತ್ತ್ಯಾ ಕಿಂ ನ ಜಾಯೇತ ಪಾಪಿನಾಮಪಿ ದೇಹಿನಾಮ್ ॥

ಶರಣಾಗತರಿಗೆ ಕಲ್ಪದ್ರುಮವಾದ ಸಕಲಸತ್ವರೂಪನಾದ ಶಿವನ ಮರೆಹೊಗುವದರಿಂ ಪಾಪಿಗಳಾದ ಪ್ರಾಣಿಗಳಿಗೂ ಏನಾಗದು. ಪಾಪಕ್ಷಯದ್ವಾರದಿಂ ಭೋಗಮೋಕ್ಷಂಗಳೂ ಆಹವೆಂಬುದರ್ಥಂ ॥೯೨॥ ಅದು ಕಾರಣವಾಗಿ ಶಿವನ ಮರೆಹೊಕ್ಕವರೆ ಶ್ರೇಷ್ಠರೆಂದು ಪೇಳುತಿರ್ದಪಂ.

ಪ್ರಪನ್ನಾನಾಂ ಮಹಾದೇವಂ ಪರಿಪಕ್ವಾಂತರಾತ್ಮನಾಮ್
ಜನ್ಮೈವ ಜನ್ಮನಾಽನ್ಯೇಷಾಂ ವೃಥಾ ಜನನಸಂಗಿನಾಮ್ ॥

ಮಹಾದೇವನಾದ ಶಿವನಂ ಮರೆಹೊಕ್ಕು ಪರಿಪಕ್ವರಾದ ಅಂತಃಕರಣವುಳ್ಳ ಪುರುಷರ ಜನ್ಮವೆ ಸಫಲ. ಅಪ್ರಸನ್ನರಾದವರ ಜನ್ಮವು ವ್ಯರ್ಥವೆಂಬುದರ್ಥಂ ॥೯೩॥ ಬಳಿಕದನೆ ವಿಶೇಷಿಸುತಿರ್ದಪಂ.

ದುರ್ಲಭಂ ಮಾನುಷಂ ಪ್ರಾಪ್ಯ ಜನನಂ ಜ್ಞಾನಸಾಧನಮ್
ಯೇ ನ ಜಾನಂತಿ ದೇವೇಶಂ ತೇಷಾಮಾತ್ಮಾನಿರರ್ಥಕಃ ॥

ದುರ್ಲಭನಾದ ಮನುಷ್ಯಜನ್ಮವ ಪಡೆದು ಜ್ಞಾನಪ್ರದನಾದ ಪರಶಿವನಂ ಯಾರು ಕೆಲಂಬರರಿಯದಿಹರು ಅವರ ಜೀವ ವ್ಯರ್ಥವೆಂಬುದರ್ಥಂ ॥೯೪॥ ಬಳಿಕ ಕುಲಂ ಪವಿತ್ರಂ ಜನನೀ ಕೃತಾರ್ಥಂ ಎಂಬ ಸೂತಸಂಹಿತವಾದ ವಚನಾನುಸಾರದಿಂ ಶರಣನ ಮಹತ್ವಮಂ ಪ್ರಕಾಶಿಸಿ ಆ ಸ್ಥಲಮಂ ಮುಗಿಸುತಿರ್ದಪಂ.

ತತ್ಕುಲಂ ಹಿ ಸದಾ ಶುದ್ಧಂ ಸಫಲಂ ತಸ್ಯ ಜೀವಿತಮ್
ಯಸ್ಯ ಚಿತ್ತಂ ಶಿವೇ ಸಾಕ್ಷಾದ್ವಿಲೀನಮಬಹಿರ್ಮುಖಮ್ ॥

ಯಾವ ಚಿತ್ತಂ ಪ್ರತ್ಯಕ್ಷಮಾದ ಶಿವಲಿಂಗದಲ್ಲಿ ಬಹಿರ್ಮುಖನಾದಂಥಾದು ಹೋಗದು ಹಾಗೆ ಜಯಿಸುತ್ತಿಹುದು. ಆತನ ಕುಲಂ ಪವಿತ್ರವು. ಆತನ ಜೀವನವೆ ಸಫಲವೆಂಬುದರ್ಥಂ॥೬೫॥

## ೩೧. ಪ್ರಸಾದಮಹತ್ವಸ್ಥಲ

ಬಳಿಕ ಪೂರ್ವೋಕ್ತ ಗುರುಲಿಂಗಾದಿ ಮಹತ್ವಾನುಭವಂ ಶಿವಪ್ರಸಾದಲಭ್ಯಮಾದ ಕಾರಣದತ್ತಣಿಂ ಪ್ರಸಾದಮಹತ್ವಮಂ ಪೇಳುತಿರ್ದಪಂ.

ಗುರುಲಿಂಗಾದಿಮಾಹಾತ್ಮ್ಯವಿಶೇಷಾನುಭವಸ್ಥಿತಿಃ
ಯಸ್ಮಾಚ್ಛಿವಪ್ರಸಾದಾತ್ಸ್ಯಾತ್ತದಸ್ಯ ಮಹಿಮೋಚ್ಯತೇ ॥

ಗುರು ಲಿಂಗ ಜಂಗಮ ಶಿವಭಕ್ತ ಶಿವಶರಣರ ಮಹತ್ವ ವಿಶೇಷದ ಅನುಭವಸ್ಥಿತಿಯು ಯಾರ ಪ್ರಸಾದ ಮಹತ್ವ ಪೇಳಲ್ಪಡುತ್ತಿಹದೆಂಬುದರ್ಥಂ ॥೬೬॥ ಬಳಿಕ ಶಿವಪ್ರಸಾದಮೆಂತು ಗುರು ಲಿಂಗಾದಿ ಮಾಹಾತ್ಮ್ಯವಿಶೇಷಾನುಭವ ಸ್ಥಿತಿಗೆ ಕಾರಣವೆಂಬಲ್ಲಿ ಪೇಳುತಿರ್ದಪಂ.

ಸದಾ ಲಿಂಗೈಕನಿಷ್ಠಾನಾಂ ಗುರುಪೂಜಾನುಷಂಗಿಣಾಮ್
ಪ್ರಪನ್ನಾನಾಂ ವಿಶುದ್ಧಾನಾಂ ಪ್ರಸೀದತಿ ಮಹೇಶ್ವರಃ ॥

ತ್ರಿಕಾಲದಲ್ಲಿಯೂ ಲಿಂಗನಿಷ್ಠೆಯುಳ್ಳ ಗುರುಪೂಜಾಸಕ್ತವಾದ ಶಿವನೆ ಗತಿಯೆಂದು ಯ್ದಿದ ನಿರ್ಮಲ ಹೃದಯರಿಗೆ ಶಿವಂ ಪ್ರಸನ್ನನಾಗುವನೆಂಬುದರ್ಥಂ ॥ ೬೭॥ ಬಳಿಕ ಪ್ರಸಾದಮೆಂಥಾದು ಅದರಿಂದೇನಹುದೆಂಬಲ್ಲಿ ಪೇಳುತಿರ್ದಪಂ.

ಪ್ರಸಾದೋಽಪಿ ಮಹೇಶಸ್ಯ ದುರ್ಲಭಃ ಪರಿಕೀರ್ತ್ಯತೇ
ಘೋರಸಂಸಾರಸಂತಾಪನಿವೃತ್ತಿರ್ಯೇನ ಜಾಯತೇ ॥

ಶಿವಪ್ರಸಾದ ಲಿಂಗಧಾರಿಗಳಲ್ಲದವರಿಗೆ ದುರ್ಲಭವಾದಂಥಾದು. ಆ ಶಿವ ಪ್ರಸಾದದಿಂ ಭಯಂಕರವಾದ ಸಂಸಾರದಿಂದುಂಟಾದ ತಾಪತ್ರಯ ನಿವೃತ್ತಿಯಾಹುದೆಂಬು ದರ್ಥಂ ॥೬೮॥ ಬಳಿಕ ಯಜ್ಞಾದಿಗಳು ಚಿತ್ತಶುದ್ಧ ದ್ವಾರದಿಂ ಶಿವಜ್ಞಾನಕ್ಕೆ ಸಾಧನವಾದಂಥಾ ವೆಂದು ಶ್ರುತ್ಯಾದಿಪ್ರಮಾಣಸಿದ್ಧವಾದ ಕಾರಣದಿಂದವರಿಂದಲೆ ತಾಪತ್ರಯ ನಿವೃತ್ತಿಯುಂಟ ಪ್ಪುದರಿಂ ಶಿವಪ್ರಸಾದವೇತಕೆಂಬಲ್ಲಿ ಪೇಳುತಿರ್ದಪಂ.

ಯಜ್ಞಾಸ್ತಪಾಂಸಿ ಮಂತ್ರಾಣಾಂ ಜಪಶ್ಚಿಂತಾ ಪ್ರಬೋಧನಮ್
ಪ್ರಸಾದಾರ್ಥಂ ಮಹೇಶಸ್ಯ ಕೀರ್ತಿತಾನಿ ನ ಸಂಶಯಃ ॥

ಜ್ಯೋತಿಷ್ಟೋಮಾದಿ ಯಾಗಂಗಳು ಉಗ್ರ ತಪಸ್ಸುಗಳು ಪಂಚಾಕ್ಷರೀ ಮೊದಲಾದ ಮಂತ್ರ ಜಪಂಗಳು ಶಿವಲಿಂಗಧ್ಯಾನಂ ಶಿವಾಧಿಕ್ಯಜ್ಞಾನಂ ಇವಿಷ್ಟು ಶಿವಪ್ರಸಾದಕ್ಕೋಸ್ಕರ

ಪೇಳಲ್ಪಟ್ಟವು ಸಂದೇಹವಿಲ್ಲವೆಂಬುದರ್ಥಂ ॥೬೯॥ ಬಳಿಕ ಮೋಕ್ಷಕ್ಕೆ ಭಕ್ತಿಯೆ ಮೂಲಕಾರಣವಾದುದರಿಂ ಶಿವಪ್ರಸಾದಮೇತಕೆಂಬಲ್ಲಿ ಪೇಳುತಿರ್ದಪಂ.

ಪ್ರಸಾದಮೂಲಾ ಸರ್ವೇಷಾಂ ಭಕ್ತಿರವ್ಯಭಿಚಾರಿಣೀ
ಶಿವಪ್ರಸಾದಹೀನಸ್ಯ ಭಕ್ತಿಶ್ಚಾಪಿ ನ ಸಿದ್ಧ್ಯತಿ ॥

ಸಮಸ್ತರಿಗೂ ಅನನ್ಯಗಾಮಿಯಾದ ಭಕ್ತಿಯು ಪ್ರಸಾದದಿಂದುಂಟಾಹದು. ಆ ಕಾರಣದಿಂ ಶಿವಪ್ರಸಾದಶೂನ್ಯನಿಗೆ ಭಕ್ತಿಯೆ ಹುಟ್ಟದೆಂಬುದರ್ಥಂ ॥೭೦॥ ಅದು ಕಾರಣವಾಗಿ

ಗರ್ಭಸ್ಥೋ ಜಾಯಮಾನೋ ವಾ ಜಾತೋ ವಾ ಬ್ರಾಹ್ಮಣೋsಥ ವಾ
ಅಂತ್ಯಜೋ ವಾಪಿ ಮುಚ್ಯೇತ ಪ್ರಸಾದೇ ಸತಿ ಶಾಂಕರೇ ॥

ತಾಯ ಗರ್ಭದಲ್ಲಿದ್ದವನಾಗಲಿ, ಭೂಮಿಯಲ್ಲಿ ಜನಿಸಿದವನಾಗಲಿ, ಅವಂ ಬ್ರಾಹ್ಮಣನಾಗಲಿ, ಚಂಡಾಲನಾಗಲಿ ಶಿವಪ್ರಸಾದ ಉಂಟಾಗಲಾಗಿ ಮುಕ್ತನಹನೆಂಬುದರ್ಥಂ ॥೭೧॥ ಬಳಿಕ ಬ್ರಹ್ಮಾದಿಗಳಿಗೂ ಶಿವಪ್ರಸಾದದಿಂದಲೆ ನಿತ್ಯಸಿದ್ಧರಾಗಿರುವರೆಂದು ಪೇಳುತಿರ್ದಪಂ.

ಬ್ರಹ್ಮಾದ್ಯಾಃ ವಿಬುಧಾಸ್ಸರ್ವೇ ಸ್ವಸ್ವಸ್ಥಾನ ನಿವಾಸಿನಃ
ನಿತ್ಯಸಿದ್ಧಾ ಭವಂತ್ಯೇವ ಪ್ರಸಾದಾತ್ಪಾರಮೇಶ್ವರಾತ್ ॥

ಬ್ರಹ್ಮ ಮೊದಲಾದ ಸಕಲ ದೇವತೆಗಳು ಶಿವಪ್ರಸಾದದಿಂದಲೆ ತಮ್ಮತಮ್ಮ ಸ್ಥಾನದಲ್ಲಿ ಪ್ರಳಯಾವಧಿಯಾಗಿ ನಿತ್ಯಸಿದ್ಧರಾಗಿರುವರೆಂಬುದರ್ಥಂ ॥೭೨॥ ಬಳಿಕ ಸರ್ವ ಶಿವಾತ್ಮಕ ಜ್ಞಾನದಿಂದಲೆ ತಾಪತ್ರಯ ನಿವೃತ್ತಿಯಾಗಲಾಗಿ ಪ್ರಸಾದದಿಂದೇನು ಪ್ರಯೋಜನವೆಂಬಲ್ಲಿ ಭೋಕ್ತಾ ಭೋಗ್ಯಂ ಪ್ರೇರಯಿತಾ ಭೋಗೋಪಕರಣಾನಿ ಚ ಸರ್ವಂ ಶಿವಮಯಂ ಭಾತಿ ಪ್ರಸಾದಾತ್ಪಾರಮೇಶ್ವರಾತ್ ಹೀಗೆಂಬ ಸೂತಸಂಹಿತಾ ವಚನಾನುಸಾರದಿಂ ಪೇಳುತಿರ್ದಪಂ.

ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದಕಾರಣೇ
ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರಸಂಶಯಃ ॥

ನಿತ್ಯಾನಂದದ ಆವಿರ್ಭಾವಕ್ಕೆ ಕಾರಣಮಾದ ಶಿವಪ್ರಸಾದಮುಂಟಾಗುತ್ತಿರಲಾಗಿ ಜಗಕ್ಕೆಲ್ಲಾ ಶಿವಮಯವಾಗಿರುತ್ತಿಹುದು. ಈ ಅರ್ಥದಲ್ಲಿ ಸಂದೇಹವಿಲ್ಲಮೆಂಬುದರ್ಥಂ ॥೭೩॥ ಬಳಿಕ ಶಿವಪ್ರಸಾದ ಮಹತ್ವಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಸಂಸಾರಚಕ್ರನಿರ್ವಾಹನಿಮಿತ್ತಂ ಕರ್ಮ ಕೇವಲಮ್
ಪ್ರಸಾದೇನ ವಿನಾ ಶಂಭೋರ್ನಕಸ್ಯಾಪಿ ನಿವರ್ತತೇ ॥

ಸಂಸಾರವೆಂಬ ಚಕ್ರವ ನಿರ್ವಹಿಸುವಲ್ಲಿ ಕಾರಣಮಾದಂಥಾದು ಬಚ್ಚ ಬರಿಯ ಕರ್ಮವೆ ಸರಿ. ಆ ಕರ್ಮವು ಯಜ್ಞಾದಿಗಳಿಂ ಕೆಡದು. ಅವು ಕರ್ಮರೂಪಮಪ್ಪುದರಿಂ

ಕರ್ಮದ ಏಳಿಗೆಗೆ ಕಾರಣಮಾದಂಥಾದು. ಆ ಕಾರಣದಿಂದಾವಾತಂಗೂ ಶಿವಪ್ರಸಾದವಿಲ್ಲದೆ ಕರ್ಮಕ್ಷಯವಾಗದೆಂಬುದರ್ಥಂ ॥ ೭೪॥ ಬಳಿಕೀ ಪ್ರಕಾರಮಾದ ಪ್ರಸಾದಸಿದ್ಧನಾದ ಪ್ರಸಾದಿಯೆ ಪ್ರಾಣಲಿಂಗಿಯೆಂದು ನಿರೂಪಿಸುತಿರ್ದಪಂ.

ಬಹುನ್ಯಾತ್ರ ಕಿಮುಕ್ತೇನ ನಾಸ್ತಿ ನಾಸ್ತಿ ಜಗತ್ರಯೇ
ಸಮಾನಮಧಿಕಂ ಚಾಪಿ ಪ್ರಸಾದಸ್ಯ ಮಹೇಶಿತುಃ ॥

ಶಿವಪ್ರಸಾದೇಸತಿಯೋಗಭಾಜಿ
ಸರ್ವಂ ಶಿವೈಕಾತ್ಮತಯಾ ವಿಭಾತಿ
ಸ್ವಕರ್ಮಮುಕ್ತಶ್ಶಿವಭಾವಿತಾತ್ಮಾ
ಸ ಪ್ರಾಣಲಿಂಗೀತಿ ನಿಗದ್ಯತೇsಸೌ

ಸ್ವರೂಪಹಾನಿವೃದ್ಧಿಯಿಲ್ಲದೆ ಸ್ವಜಾತಿಯ ಸಮರಸಶಿವಯೋಗವುಳ್ಳ ಶಿವ ಪ್ರಸಾದಮಂ ಸಿದ್ಧಮಾಗಲಾಗಿ ಸಕಲಜಗತ್ತು ಶಿವಾಭಿನ್ನಮಾಗಿ ತೋರುವುದು. ಅದು ಕಾರಣಮಾಗಿ ಶಿವಾಭೇದದಿಂ ಭಾವಿಸಲ್ಪಟ್ಟ ಸ್ವರೂಪವುಳ್ಳ ಆಯಿವಂ ಸ್ವಕರ್ಮವು ಸ್ವಸ್ವರೂಪವೆ ಆಗಲಾಗಿ ಸ್ವಕರ್ಮಪಾಶದಿಂ ಬಿಡಲ್ಪಟ್ಟವನಾಗಿ ಪ್ರಾಣಲಿಂಗಿಯೆಂದು ನುಡಿಯಲ್ಪಡುತ್ತಿಹನೆಂಬುದರ್ಥಂ ॥ ೭೬॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಪ್ರಸಾದೀ ನವ ಸಪ್ತವಿಧಸ್ಥಲಂ ಪ್ರಸಂಗೋನಾಮೇಕಾದಶೀಯಃ ಪರಿಚ್ಛೇದಃ.

# ದ್ವಾದಶಪರಿಚ್ಛೇದ

## ಪ್ರಾಣಲಿಂಗಿಸ್ಥಲ

ಬಳಿಕ ಅಗಸ್ತ್ಯಂ ಪ್ರಶ್ನೆಯಂ ಮಾಡುತಿರ್ದಪಂ. ಅಗಸ್ಯ ಉವಾಚ

ಭಕ್ತೋ ಮಾಹೇಶ್ವರಶ್ಚೇತಿ ಪ್ರಸಾದೀತಿ ನಿಬೋಧಿತಃ
ಏಕ ಏವ ಕಥಂ ಚೈಷ ಪ್ರಾಣಲಿಂಗೀತಿ ಕಥ್ಯತೇ ॥

ಒಬ್ಬನೆ ಪುರುಷನು ಭಕ್ತನೆಂದು ಮಹೇಶ್ವರನೆಂದು ಪ್ರಸಾದಿಯೆಂದು ತಿಳಿಹಲ್ಪಟ್ಟನು. ಮರಳಿ ಈತನೆ ಪ್ರಸಾದಿಯೆಂದು ಯಾವ ಪ್ರಕಾರದಿಂ ಪೇಳಲ್ಪಡುತ್ತಿಹನೆಂಬುದು ಪ್ರಶ್ನಾರ್ಥಂ. ಶ್ರೀ ರೇಣುಕ ಉವಾಚ. ಈ ಪ್ರಶ್ನೆಗೆ ರೇಣುಕಗಣೇಶ್ವರಂ ಪ್ರತ್ಯುತ್ತರಮಂ ನಿರೂಪಿಸುತಿರ್ದಪಂ ॥೧॥

ಭಕ್ತೋ ಮಾಹೇಶ್ವರಾಶ್ಚೈಷಃ ಪ್ರಸಾದೀತಿ ಚ ಕೀರ್ತಿತಃ
ಕರ್ಮಪ್ರಾಧಾನ್ಯಯೋಗೇನ ಜ್ಞಾನಯೋಗೋಽಸ್ಯ ಕಥ್ಯತೇ ॥

ಈ ಶಿವಲಿಂಗದೀಕ್ಷಾ ಸಂಪನ್ನನು ಈ ಪ್ರಕಾರಮಾದ ಕರ್ಮಕಾಂಡದಲ್ಲಿ ಪೇಳಲ್ಪಟ್ಟ ಕ್ರಿಯಾಪ್ರಾಧಾನ್ಯಯೋಗದಿಂ ಭಕ್ತನೆಂದು ಮಾಹೇಶ್ವರನೆಂದು ಪ್ರಸಾದಿಯೆಂದು ಪೇಳಲ್ಪಟ್ಟನು ॥೨॥ ಬಳಿಕೀ ಪ್ರಕಾರಮಾದ ರೂಪತ್ರಯ ಸಂಪನ್ನನಿಗೆ ಜ್ಞಾನಯೋಗಂ ಪೇಳಲ್ಪಡುತ್ತದೆ. ಆ ಜ್ಞಾನಯೋಗ ಪ್ರಾಧಾನ್ಯದಿಂದ ಪ್ರಾಣಲಿಂಗಿಯೆಂದು ಪೇಳಲ್ಪಡುತ್ತಿಹನೆಂಬುದರ್ಥಂ. ಬಳಿಕೀ ಪ್ರಾಣಲಿಂಗಿ ಯಾರೆಂಬಲ್ಲಿ ಸರ್ವತತ್ತ್ವಮಯಃ ಪ್ರಾಣಃ ಸರ್ವಜ್ಞಾನಮಯಃ ಶಿವಃ ಅನಯೋರ್ಯೋಗಮೇವೈ ತತ್ಪ್ರಾಣಲಿಂಗಮಿಹೋಚ್ಯತೇ ಎಂಬ ವೀರಾಗಮೋಕ್ತ ಪ್ರಾಣಲಿಂಗವುಳ್ಳವನೆ ಪ್ರಾಣಲಿಂಗಿಯೆಂದು ನುಡಿವುತಿರ್ದಪಂ.

ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥

ಚಿದ್ರೂಪನಾದ ಬ್ರಹ್ಮವೆ ಶಿವಲಿಂಗವು. ಆ ಶಿವಲಿಂಗ ಪೀಠಶಕ್ತಿಯೆ ಪ್ರಾಣಮಯವಾದ ಪ್ರಾಣಸ್ವರೂಪವುಳ್ಳದು, ಆ ಪ್ರಣಮವು ವೇದ್ಯ ಸಂಸ್ಕಾರರೂಪವಾದ ಬಿಂದುಸ್ಪಂದಯುಕ್ತಮಾಗಿ ಚಿತ್ಕ್ರಿಯಾ ಸಾಮರಸ್ಯಾತ್ಮಕವಾದ ಉನ್ಮೇಷಶಕ್ತಿಯುಕ್ತಮಪ್ಪುದರಿಂ ಸರ್ವತತ್ತ್ವಮಯತ್ವಂ ಪೇಳಲ್ಪಟ್ಟಿತ್ತು. ಆ ಪ್ರಕಾರವಾದ ಲಿಂಗಜ್ಞಾನವುಳ್ಳವಂ ಪ್ರಾಣಲಿಂಗಿ ಎಂದು ಪೇಳಲ್ಪಡುವನೆಂಬುದರ್ಥಂ ॥೩॥ ಬಳಿಕ ಪ್ರಾಣಲಿಂಗಿಸ್ಥಲಮುಂಟೋ ಎಂಬಲ್ಲಿ ಪೇಳುತಿರ್ದಪಂ.

ಪ್ರಾಣಲಿಂಗಿಸ್ಥಲಂ ಚೈತತ್ಪಂಚಸ್ಥಲಸಮನ್ವಿತಮ್
ಪ್ರಾಣಲಿಂಗಿಸ್ಥಲಂ ಚಾದೌ ಪ್ರಾಣಲಿಂಗಾರ್ಚನಂ ತತಃ ॥

ಶಿವಯೋಗಸಮಾಧಿಶ್ಚ ತತೋ ಲಿಂಗನಿಜಸ್ಥಲಮ್
ಅಂಗಲಿಂಗಸ್ಥಲಂ ಚಾಥ ಕ್ರಮಾದೇಷಾಂ ಭಿದೋಚ್ಯತೇ ॥

ಈ ಪ್ರಾಣಲಿಂಗಿಸ್ಥಲವು ಐದುಸ್ಥಲಂಗಳೊಡನೆ ಕೂಡಿದಂಥಾದು. ಅಲ್ಲಿ ಮೊದಲು ಪ್ರಾಣಲಿಂಗಿಸ್ಥಲವು ಬಳಿಕ ಪ್ರಾಣಲಿಂಗಾರ್ಚನಸ್ಥಲವು ಬಳಿಕ ಶಿವಯೋಗಸಮಾಧಿಸ್ಥಲವು ಬಳಿಕ ಲಿಂಗನಿಜಸ್ಥಲವು ಬಳಿಕ ಅಂಗಲಿಂಗಸ್ಥಲವು. ಈ ಸ್ಥಲಂಗಳಿಗೆ ಪರಿವಿಡಿಯಿಂ ಭೇದವು ಪೇಳಲ್ಪಡುತ್ತಿಹನೆಂಬುದರ್ಥಂ. ॥೫॥ ಬಳಿಕ ಪ್ರಾಣೇಷ್ವಂತರ್ಮನಸೋ ಲಿಂಗ ಮಾಹುಃ ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ ಎಂಬಥರ್ವಶಿರಕಠವಲ್ಲಿಶ್ರುತ್ಯನುಸಾರದಿಂ ಪ್ರಾಣಲಿಂಗಿಸ್ಥಲಮಂ ಪಂಚಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

## ೩.೨. ಪ್ರಾಣಲಿಂಗಿಸ್ಥಲ

ಪ್ರಾಣಾಪಾನಸಮಾಘಾತಾತ್ಕಂಧಮಧ್ಯಾದ್ಯದುತ್ಥಿತಮ್
ಪ್ರಾಣಲಿಂಗಂ ತದಾಖ್ಯಾತಂ ಪ್ರಾಣಾಪಾನನಿರೋಧಿಭಿಃ ॥

ದೇಶಿಕೋಪದೇಶದಿಂ ಪ್ರಾಣಾಪಾನವಾಯುಗಳಿಗೆ ಸಂಘಟನಮುಂಟಾಗಲಾಗಿ ನಾಭಿಗೆ ಧ್ಯೇಯಮಧ್ಯದತ್ತಣಿಂ ಯಾವುದಾನೊಂದು ತೇಜಸ್ಸುಂಟಾಗುತ್ತಿಹುದು. ಆ ತೇಜಸ್ಸು ಪ್ರಾಣಲಿಂಗವೆಂದು ಪ್ರಾಣಾಪಾನವಾಯುನಿರೋಧವುಳ್ಳ ಶಿವಯೋಗಿಗಳಿಂ ಪೇಳುತ್ತಿಹನೆಂಬುದರ್ಥಂ ॥೬॥ ಬಳಿಕದಂ ಚೆನ್ನಾಗಿ ತಿಳಿಯಲಿಲ್ಲದೆಂಬಲ್ಲಿ ಪೇಳುತಿರ್ದಪಂ.

ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇ ತುಹಿನಂ ಯಥಾ
ತತ್ಪ್ರಾಣಲಿಂಗಮುದ್ದಿಷ್ಟಂ ತದ್ಧಾರೀಸ್ಯಾತ್ತದಾಕೃತಿಃ॥

ಪ್ರಾಣವಾಯು ಯಾವುದಾನೊಂದು ಪರಬ್ರಹ್ಮಮಯವಾದ ಶಿವಲಿಂಗದಲ್ಲಿ ಸೂರ್ಯೋದಯದಲ್ಲಿ ಮಂಜಿನಂತೆ ಲಯ ಪಡೆವುತ್ತಿಹುದು ಅದು ಪ್ರಾಣಲಿಂಗವೆಂದು ಪೇಳಲ್ಪಟ್ಟಿತ್ತು. ಅಂಥ ಪ್ರಾಣಲಿಂಗದ ಪರಾಮರ್ಶಮುಳ್ಳಾತಂ ತತ್ಸ್ವರೂಪನಾಗು ವನೆಂಬುದರ್ಥಂ ॥೭॥ ಬಳಿಕ ಲಿಂಗಂ ಯಾರಿಗೆ ತೋರುತ್ತಿಹುದೆಂಬಲ್ಲಿ ಪೇಳುತಿರ್ದಪಂ.

ಜ್ಞಾನಿನಾಂ ಯೋಗಯುಕ್ತಾನಾಮಂತಃಸ್ಫುರತಿ ದೀಪವತ್
ಚಿದಾಕಾರಂ ಪರಂ ಬ್ರಹ್ಮ ಲಿಂಗಮಜ್ಞೈರ್ನಭಾವ್ಯತೇ ॥

ಸ್ಫುರಣಮಯವಾದ ಪರಬ್ರಹ್ಮವೆಂಬ ಪ್ರಾಣಲಿಂಗವು ಶಿವಯೋಗ ಯುಕ್ತವಾದ ಶಿವಜ್ಞಾನಿಗಳಿಗೆ ಹೃದಯಕಮಲದಲ್ಲಿ ದೀಪದಂತೆ ಪ್ರಕಾಶಿಸುತ್ತಿಹುದು. ಗುರೂಪದೇಶವಿಲ್ಲ ಪ್ರಾಕೃತರಿಂ ತಿಳಿಯಲ್ಪಡದು. ಹೃದಯೇ ವೈ ಬ್ರಹ್ಮಸೋಮಸೂರ್ಯಾಗ್ನಿಮಂಡಲೇ ನಿವಾತ ದೀಪೋಪಮಸ್ಥಾಯಿ ಹೃದ್ಯಂತರ್ಜ್ಯೋತಿಃ ಪುರುಷಃ ಹೀಗೆಂಬಿವು ಮೊದಲಾದ ಶ್ರುತಿ ಪ್ರಸಿದ್ಧಂ ॥೮॥ ಬಳಿಕೀ ಪ್ರಕಾರಮಾದ ಪ್ರಾಣಲಿಂಗಮಂ ಬಿಟ್ಟು ಬಾಹ್ಯಲಿಂಗನಿಷ್ಠರಾದವರು ಮೂಢರೆಂದು ಪೇಳುತಿರ್ದಪಂ.

ಅಂತಸ್ಥಿತಂ ಪರಂ ಲಿಂಗಂ ಜ್ಯೋತಿರೂಪಂ ಶಿವಾತ್ಮಕಮ್
ವಿಹಾಯ ಬಾಹ್ಯಲಿಂಗಸ್ಥಾ ವಿಮೂಢಾಃ ಇತಿ ಕೀರ್ತಿತಾಃ ॥

ತನ್ನೊಳಗಿದ್ದಂಥಾ ಸರ್ವೋತ್ಕೃಷ್ಟರಾದ ಸ್ವಪ್ರಕಾಶಮಯ ಶಿವಸ್ವರೂಪಮಾದ ಲಿಂಗಮಂ ಬಿಟ್ಟು ಪ್ರಾಕೃತಮಾದ ಸ್ಥಾವರಲಿಂಗನಿಷ್ಠರು ಮೂಢರೆಂದು ಪೇಳಲ್ಪಡುವರೆಂಬುದರ್ಥಂ ॥೯॥ ಅದು ಕಾರಣಂ ಬಾಹ್ಯಲಿಂಗ ವಿಮುಖನಾಗಿ ಚಿಲ್ಲಿಂಗ ಪರಾಮರ್ಶಿಯೆ ಪ್ರಾಣಲಿಂಗಿ ಎಂದು ಪೇಳುತಿರ್ದಪಂ.

ಸಂವಿಲ್ಲಿಂಗಪರಾಮರ್ಶಿ ಬಾಹ್ಯವಸ್ತು ಪರಾಙ್ಮುಖಃ
ಯಸ್ಸದಾ ವರ್ತತೇ ಯೋಗೀ ಪ್ರಾಣಲಿಂಗೀ ಸ ಉಚ್ಯತೇ ॥

ಬಾಹ್ಯ ಸ್ಥಾವರಲಿಂಗ ತತ್ಪೂಜಾಸಾಧನ ದ್ರವ್ಯಂಗಳೆಲ್ಲಂ ಬಾಹ್ಯವೆನಿಸಿಕೊಂಬವು. ಅವರಲ್ಲಿ ವಿಮುಖನಾಗಿ ಎಲ್ಲಾಗಳು ತನ್ನೊಳಗೆ ಚಿದ್ರೂಪಮಾದ ಪ್ರಾಣಲಿಂಗದಲ್ಲಿ ವಿಚಾರವುಳ್ಳವನಾಗಿ ಯಾವ ಶಿವಯೋಗಿ ಇರುವನು ಆತಂ ಪ್ರಾಣಲಿಂಗಿ ಎಂದು ಪೇಳಲ್ಪಡುವರೆಂಬುದರ್ಥಂ ॥೧೦॥ ಬಳಿಕ ಬಾಹ್ಯಲಿಂಗದಲ್ಲಿ ವಿಮುಖನಾಹದೇನು ಕಾರಣದಿಂದ ಪೇಳುತಿರ್ದಪಂ.

ಮಾಯಾವಿಕಲ್ಪಜಂ ವಿಶ್ವಂ ಹೇಯಂ ಸಂಚಿಂತ್ಯ ನಿತ್ಯಶಃ
ಚಿದಾನಂದಮಯೇ ಲಿಂಗೇ ವಿಲೀನಃ ಪ್ರಾಣಲಿಂಗವಾನ್ ॥

ಜಗತ್ತು ಮಾಯಾಗುಣ ಭೇದದಿಂದುಂಟಾದ ಕಾರಣದಿಂ ಬಿಡಲ್ತಕ್ಕದು. ಎಲ್ಲಾಗಳು ಸಚ್ಚಿದಾನಂದ ರೂಪಮಾದ ಪ್ರಾಣಲಿಂಗದಲ್ಲಿ ಮನೋಲಯವುಳ್ಳಾತಂ ಪ್ರಾಣಲಿಂಗವುಳ್ಳವನೆಂಬುದರ್ಥಂ ॥೧೧॥ ಹಾಗಾದಡೆ ಚಿಲ್ಲಿಂಗವೆಂಬುದು ನಾದ ಬಿಂದು ಕಲಾತೀತವು ಪ್ರಣವಂ ನಾದಬಿಂದು ಕಲಾತ್ಮಕವು. ಅದರಿಂದೀ ಪ್ರಣವಕ್ಕೆ ಪೀಠರೂಪತ್ವಮೆಂತು ಘಟಿಸೂದೆಂಬ ಶಂಕೆಯಂ ಪರಿಹರಿಸುವಾತನಾಗಿ ಪ್ರಾಣಲಿಂಗಿಸ್ಥಲವಂ ಮುಗಿಸುತಿರ್ದಪಂ.

ಸತ್ತಾ ಪ್ರಾಣಮಯೀ ಶಕ್ತಿಸ್ಸದ್ರೂಪಂ ಪ್ರಾಣಲಿಂಗಕಮ್
ತತ್ಸಾಮರಸ್ಯ ವಿಜ್ಞಾನಾತ್ಪ್ರಾಣಲಿಂಗೀತಿ ಕಥ್ಯತೇ ॥

ಸತೋ ಭಾವಸ್ಸತಾಯೆಂಬುದರಿಂ ನಾನದೇನೆಂಬುತ್ತಮಪುರುಷನಿಷ್ಠಸ್ಫೂರ್ತಿಯ ಚಿಲ್ಲಿಂಗಕ್ಕೆ ಜೀವನಭೂತವಾದ ಶಕ್ತಿಯು ಅಂಥ ಸ್ಫುರಣೆಯಿಲ್ಲದಿರ್ದಡೆ ಚಿಲ್ಲಿಂಗಂ ಜಡಮಪ್ಪುದು. ಅಂಥ ಸ್ಫುರಣೆವುಳ್ಳ ಉತ್ತಮಪುರುಷನೆ ಪ್ರಾಣಲಿಂಗವು. ಆ ಶಿವಭಕ್ತಿಗಳ ಅನ್ಯೋನ್ಯ ಸಾಮರಸ್ಯ ಜ್ಞಾನದಿಂ ಪ್ರಾಣಲಿಂಗಿಯೆಂದು ಪೇಳಲ್ಪಡುವನೆಂಬುದರ್ಥಂ ॥೧೨॥

## ೩೩. ಪ್ರಾಣಲಿಂಗಾರ್ಚನಸ್ಥಲ

ಬಳಿಕ ಪ್ರಾಣಲಿಂಗಿಯಂ ಮಾಡುವ ಸಕಲ ಯೋಗಶಾಸ್ತ್ರ ಪ್ರಸಿದ್ಧವಾದ ಮಾನಸ ಪ್ರಾಣಲಿಂಗಾರ್ಚನ ಪ್ರಕಾರವ ಏಳು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಅಂತರ್ಗತಂ ಚಿದಾಕಾರಂ ಲಿಂಗಂ ಶಿವಮಯಂ ಪರಮ್
ಪೂಜ್ಯತೇ ಭಾವಪುಷ್ಪೈರ್ಯತ್ಪ್ರಾಣಲಿಂಗಾರ್ಚನಂ ಹಿ ತತ್ ॥

ಹೃತ್ಕಮಲನಿಷ್ಠನಾಗಿ ಘಟಕ್ಕೆ ಕಂಬುಗ್ರೀವತ್ವಮೆಂತಂತೆ ಸ್ಫುರಣೆಯೆ ಆಕಾರವಾಗಿವುಳ್ಳ ಸರ್ವೋತ್ಕೃಷ್ಟವಾದ ಯಾವುದಾನೊಂದು ಶಿವಸ್ವರೂಪವಾದ ವಿಶ್ವ ಪ್ರಾಣಲಿಂಗವು ಅಂತಃಕರಣವೃತ್ತಿ ವಿಶೇಷಗಳಿಂ ಪೂಜಿಸಲ್ಪಡುತ್ತಿಹುದು ಅದು ಪ್ರಾಣಲಿಂಗಾರ್ಚನಮೆಂದು ಪ್ರಸಿದ್ಧವೆಂಬುದರ್ಥಂ ॥೧೩॥ ಬಳಿಕ ಪ್ರಾಣಲಿಂಗವೆಲ್ಲಿ ಪೂಜಿಸತಕ್ಕದೆಂಬಲ್ಲಿ ಪ್ರಾಣಲಿಂಗಕ್ಕಾಶ್ರಯಮಾದ ಊರ್ಧ್ವಹೃತ್ಕಮಲಮಂ ವರ್ಣಿಸಿ ಭಾವಪುಷ್ಪಗಳಿಂ ಪೂಜಿಸೂದೆಂದು ಪೇಳುತಿರ್ದಪಂ.

ಅಂತಃಪವನ ಸಂಸ್ಪೃಷ್ಟೇ ಸುಸೂಕ್ಷ್ಮಾಂಬರ ಶೋಭಿತೇ
ಮೂರ್ಧನ್ಯಚಂದ್ರ ವಿಗಲತ್ಸುಧಾಸೇಕಾತಿ ಶೀತಲೇ ॥

ಬದ್ಧೇಂದ್ರಿಯನವದ್ವಾರೇ ಬೋಧದೀಪೇ ಹೃದಾಲಯೇ
ಪದ್ಮಪೀಠೇ ಸಮಾಸೀನಂ ಚಿಲ್ಲಿಂಗಂ ಶಿವವಿಗ್ರಹಮ್ ॥
ಭಾವಯಿತ್ವಾ ಸದಾಕಾಲಂ ಪೂಜಯೇದ್ಭಾವವಸ್ತುಭಿಃ ॥

ಪ್ರಾಣವಾಯುವಿನಿಂದ ವ್ಯಾಪಿಸಲ್ಪಟ್ಟಂಥಾ ಅತಿಸೂಕ್ಷ್ಮನಾದ ಆಕಾಶದಿಂದೊಪ್ಪುತ್ತಿದ್ದಂಥಾ ಬ್ರಹ್ಮರಂಧ್ರದಲ್ಲಿರುವ ಪೂರ್ಣಚಂದ್ರಮಂಡಲದಿಂದೊಸರುವ ಸುಧಾ ಪ್ರೋಕ್ಷಣದಿಂದತಿ ಶೀತಳಮಾದಂಥಾ ಕಟ್ಟಲ್ಪಟ್ಟ ಶ್ರೋತ್ರಾದಿ ಪಂಚೇಂದ್ರಿಯಗಳಲ್ಲಿಯೆ ನವದ್ವಾರವುಳ್ಳಂಥಾ ಊರ್ಧ್ವಹೃದಯವೆಂಬ ಗೃಹದಲ್ಲಿ ಪದ್ಮಪೀಠದಲ್ಲಿ ದ್ವಾದಶದಳ ಕಮಲ ಕರ್ಣಿಕೆಯಲ್ಲಿರುವಂಥಾ ಮಂಗಳಮೂರ್ತಿಯಾದ ಚಿದಾನಂದಮಯ ಪ್ರಾಣಲಿಂಗಮಂ ಗುರೂಪದಿಷ್ಟಪ್ರಕಾರದಿಂ ಧ್ಯಾನಿಸಿ ಮಾನಸಿಕಪದಾರ್ಥದಿಂದ ಸದಾ ಪೂಜಿಸೂದೆಂಬುದರ್ಥಂ॥೧೫॥ ಬಳಿಕ ವಸ್ತುಗಳಾವವೆಂಬಲ್ಲಿ ಪೇಳುತಿರ್ದಪಂ.

ಕ್ಷಮಾಭಿಷೇಕಸಲಿಲಂ ವಿವೇಕೋ ವಸ್ತ್ರಮುಚ್ಯತೇ
ಸತ್ಯಮಾಭರಣಂ ಪ್ರೋಕ್ತಂ ವೈರಾಗ್ಯಂ ಪುಷ್ಪಮಾಲಿಕಾ ॥

ಗಂಧಸ್ಸಮಾಧಿಸಂಪತ್ತಿರಕ್ಷತಾ ನಿರಹಂಕೃತಿಃ
ಶ್ರದ್ಧಾ ಧೂಪೋ ಮಹಾಜ್ಞಾನಂ ಜಗದ್ಭಾಸಿಪ್ರದೀಪಿಕಾ ॥

ಭ್ರಾಂತಿಮೂಲಪ್ರಪಂಚಸ್ಯ ನೈವೇದ್ಯಂ ತನ್ನಿವೇದನಮ್
ಮೌನಂ ಘಂಟಾಪರಿಸ್ಪಂದಸ್ತಾಂಬೂಲಂ ವಿಷಯಾರ್ಪಣಂ ॥

ವಿಷಯಭ್ರಾಂತಿರಾಹಿತ್ಯಂ ತತ್ಪ್ರದಕ್ಷಿಣಕಲ್ಪನಾ
ಬುದ್ಧೇಸ್ತದಾತ್ಮಿಕಾ ಶಕ್ತಿರ್ನಮಸ್ಕಾರಕ್ರಿಯಾ ಮತಾ ॥

ಯೇವಂ ವಿಧೈರ್ಭಾವಶುದ್ಧೈರುಪಚಾರೈರದೂಷಿತೈಃ
ಪ್ರತ್ಯುನ್ಮುಖಮನಾ ಭೂತ್ವಾ ಪೂಜಯೇಲ್ಲಿಂಗಮಾಂತರಮ್ ॥

ಕ್ಷಮೆಯೆ ಮಜ್ಜನೋದಕವು, ನಿತ್ಯಾನಿತ್ಯ ವಸ್ತುವಿವೇಕವು ವಸ್ತ್ರವು, ಸತ್ಯವೆ ಆಭರಣವು, ವೈರಾಗ್ಯವೆ ಹೂವಿನಮಾಲೆ, ಸಮಾಧಿಸಂಪತ್ತಿ ಗಂಧ, ನಿರಹಂಕಾರವೆ ಅಕ್ಷತೆಯು, ವಿಶ್ವಾಸವೆ ಧೂಪವು, ವಿಶ್ವಪ್ರಕಾಶಕವಾದ ಮಹಾಜ್ಞಾನವೆ ದೀಪವು, ತಾನು ಶಿವಾಲಯವೆಂಬ ಅಜ್ಞಾನಕ್ಕೆ ಮೂಲಕಾರಣವಾದ ಶರೀರಾದ್ಯಹಂಕಾರವರ್ಗದ ಯಾವುದಾನೊಂದು

ಸಮರ್ಪಣೆಯುಂಟು ಅದೇ ನೈವೇದ್ಯವು. ಅನಾಹತನಾದಾನುಸಂಧಾನ ಕಾರಣವಾದ ಮೌನವೆ ಘಂಟಾನಾದವು ಮಾತೃಮಾನ ಮಾಯರೂಪವಾದ ವಿಷಯಂಗಳಿಗೆ ನೊರೆಬೊಬ್ಬುಳಿಕೆಗಳು ತರಂಗಮುಖದಿಂ ಸಮುದ್ರದೊಳೇಕರೂಪಮಪ್ಪಂತೆ ಮಾಯ ಮಾನದಲ್ಲಿ ಮಾನಂ, ಮಾತೃವಿನಲ್ಲಿ ಮಾತೃ, ಪರಮಪ್ರಮಾತೃವಾದ ಜ್ಯೋತಿರ್ಲಿಂಗ ದಲ್ಲಿಯ ಚಿಂತನವೆ ಅಡಕೆ ಎಲೆ ಸುಣ್ಣ ಸಮ್ಮೇಳನರೂಪಮಾದ ತಾಂಬೂಲ ಸಮರ್ಪಣವು, ಶಬ್ದಾದಿವಿಷಯಂಗಳಿಗೆ ಶಿವನತ್ತಣಿಂ ಭ್ರಾಂತಿಯಿಲ್ಲದಿರುವುದೆ ಪ್ರದಕ್ಷಿಣವು. ಬುದ್ಧಿಗೆಲ್ಲಿಂದೆಲ್ಲಿಯ ಚಿಂತನವೆ ನಮಸ್ಕಾರ. ಈ ಪ್ರಕಾರವಾದ ಶುದ್ಧೋಪಚಾರಗಳಿಂದ ಅಂತರ್ಮುಖನಾಗಿ ಚಿದ್ರೂಪವಾದ ಪ್ರಾಣಲಿಂಗಮಂ ಪೂಜಿಸೂದೆಂಬುದರ್ಥಂ ॥೨೦॥

## ೩೪. ಶಿವಯೋಗಸಮಾಧಿಸ್ಥಲ

ಬಳಿಕ ಚಿತ್ತವೃತ್ತಿನಿರೋಧೋಯೋಗಃ ಹೀಗೆಂಬ ಯೋಗಸೂತ್ರಾನುಸಾರದಿಂ ಪ್ರಾಣಲಿಂಗಾರ್ಚನೆಯಿಂ ಲಭ್ಯವಾದ ಶಿವಯೋಗಸಮಾಧಿ ಸ್ಥಲಮಂ ನಿರೂಪಿಸುತಿರ್ದಪಂ.

ಅಂತಃಕ್ರಿಯಾರತಸ್ಯಾಸ್ಯ ಪ್ರಾಣಲಿಂಗಾರ್ಚನಕ್ರಮೈಃ
ಶಿವಾತ್ಮಧ್ಯಾನಸಂಪತ್ತಿಸ್ಸಮಾಧಿರಿತಿ ಕಥ್ಯತೇ ॥

ಪೂರ್ವೋಕ್ತ ಪ್ರಾಣಲಿಂಗಪೂಜಾ ಪ್ರಕಾರದಿಂದ ಅಂತರಕ್ರಿಯಾಸಕ್ತವಾದ ಪ್ರಾಣಲಿಂಗಿಗೆ ಲಿಂಗಾಂಗರೂಪವಾದ ಶಿವಜೀವರ ಸಮಾನ ಸಮರಸಧ್ಯಾನಸಂಪತ್ತಿಯೆ ಸಮಾಧಿಯೆಂಬುದರ್ಥಂ ॥೨೧॥ ಅದೆಂತೆದಡೆ ಯೋsಸಾವಸೌ ಪುರುಷಃ ಸೋsಹಮೆಂಬ ಶ್ರುತ್ಯನುಸಾರದಿಂದಜಪಾಗಾಯತ್ರಿ ರೂಪವಾದ ಶಿವಯೋಗ ಸಮಾಧಿಯಂ ನಿರೂಪಿಸುತಿ ರ್ದಪಂ.

ಸರ್ವತತ್ತ್ವೋಪರಿಗತಂ ಸಚ್ಚಿದಾನಂದ ಭಾಸುರಂ
ಸ್ವಪ್ರಕಾಶಮನಿರ್ದೇಶ್ಯಮವಾಙ್ಮನಸಗೋಚರಮ್ ॥

ಊಮಾಖ್ಯಯಾ ಮಹಾಶಕ್ತ್ಯಾ ದೀಪಿತಂ ಚಿತ್ಸ್ವರೂಪಯಾ
ಹಂಸರೂಪಂ ಪರಾತ್ಮಾನಂ ಸೋsಹಂಭಾವೇನ ಭಾವಯೇತ್ ॥

ತದೇಕತಾನತಾ ಸಿದ್ಧಿಸ್ಸಮಾಧಿಃ ಪರಮೋ ಮತಃ ॥

ಶಿವಾದಿ ಭೂಮ್ಯಂತರವಾದ ಮೂವತ್ತಾರುತತ್ತ್ವಂಗಳ ಮೀರಿ ಇರುವಂಥಾ ಸಚ್ಚಿದಾನಂದ ಸ್ವರೂಪದಿಂ ಪ್ರಕಾಶಿಸುವಂಥಾ ವಾಙ್ಮನೋಮಾರ್ಗಕ್ಕಗೋಚರವಾದಂಥಾ ಅದರಿಂದಲೆ ಇಂಥದೆಂದು ಕುರುಹಿಡಲು ಶಕ್ಯವಿಲ್ಲದಂಥಾ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ವಿಷಯವಲ್ಲದಂಥಾ ಶುಕ್ಲಪಟನ್ಯಾಯದಿಂ ಸ್ವಸಮವೇತಮಾದ ತಚ್ಛಕ್ತಿರೂಪೋಮೇ ಎಂಬ ಮಹಾಶಕ್ತಿಯಿಂ ಪ್ರಕಾಶಿಸಲ್ಪಟ್ಟ ಹಂಸರೂಪ ಪರಾತ್ಮನ ಸೋಹಂಭಾವದಿಂ ಭಾವಿಸೂದು. ಆ ಜೀವೇಶ್ವರರ ಏಕತ್ವಸಿದ್ಧಿಯು ಉತ್ಕೃಷ್ಟವಾದ ಸಮಾಧಿಯು. ಷಡಧ್ವವನೂ ಮೀರಿದ ತಚ್ಛಬ್ದವಾಚನಾದ ಪರಮಾತ್ಮನಿಗೂ ಅಹಂ ಶಬ್ದಸ್ಯ ರೂಢತ್ವಾಲ್ಲೋಕೇ ಜೀವಾತ್ಮವಸ್ತುನಿ ಎಂಬ ಸೂತಸಂಹಿತಾ ವಚನದಿಂ ಅಕಾರಾದಿ ಹಕಾರಾಂತವಾದ ವರ್ಣಾಧ್ವಪಾಶ ಬದ್ಧವಾದ

ಜೀವಾತ್ಮನಿಗೂ ಅಹಮಸ್ಮಿ ಪ್ರಥಮಜಾ ಅಹಮಾದಿ ಹಿ ಜೀವಾನಾಂ ಅಹಂ ಸರ್ವಸ್ಯ ಪ್ರಭವೋಮತ್ತಸ್ಸರ್ವಂ ಪ್ರವರ್ತತೇ ಹೀಗೆಂಬ ಮೊದಲಾದ ಪ್ರಮಾಣ ಬಲದಿಂ ಅಕಾರಃ ಶಿವ ಆಖ್ಯಾತಃ ಹಕಾರಃ ಶಕ್ತಿರುಚ್ಯತೇಯೆಂದು ಮುಂದೆ ಪೇಳುವ ಪ್ರಕಾರದಿಂದಲೂ ಷಡಧ್ವಕ್ಕೆ ಕಾರಣವಾದ ಅನಾಹತನಾದ ರೂಪಪರಾವಾನ್ ಶಕ್ತಿಮಯ ಸದ್ರೂಪಾತ್ಮ ತತ್ತ್ವಭೇದದಿಂ ಚಿಂತನವೆ ಸಮಾಧಿಯೆಂಬುದು ತಾತ್ಪರ್ಯಂ ॥೨೩॥ ಬಳಿಕ ಪ್ರಾಣರೂಪ ಇಹ ಜೀವ ಉಚ್ಯತೇ ಲಿಂಗರೂಪ ಇತಿ ಶಂಕರಃ ಸ್ಮೃತಃ ಯಸ್ತದೈಕ್ಯಮಿತಿ ವೇದಿತ್ವಾನಯೋಃ ಪ್ರಾಣಲಿಂಗವಿದಸೌ ಶಿವಯೋಗೀ ಎಂಬ ಶಂಕರಸಂಹಿತ ವಚನಾನುಸಾರದಿಂ ಸಮಾಧಿನಿಷ್ಠನ ಸ್ವರೂಪಮಂ ಪೇಳುತಿರ್ದಪಂ.

ಪರಬ್ರಹ್ಮ ಮಹಾಲಿಂಗಂ ಪ್ರಾಣೋ ಜೀವಃ ಪ್ರಕೀರ್ತಿತಃ
ತದೇಕಭಾವಮನನಾತ್ಸಮಾಧಿಸ್ಥಃ ಪ್ರಕೀರ್ತಿತಃ ॥

ಮಹಾಲಿಂಗವೆ ಪರಬ್ರಹ್ಮವೆಂಬ ಪರಶಿವತತ್ತ್ವವೆಂದು ಪೇಳಲ್ಪಟ್ಟಿತ್ತು. ಪ್ರಾಣಾರೂಢೋ ಭವೇಜ್ಜೀವಃ ಹೀಗೆಂಬಾಗಮವಚನದಿಂ ಪ್ರಾಣವೆ ಜೀವನೆಂದು ಪೇಳಲ್ಪಟ್ಟಿತ್ತು. ಆ ಲಿಂಗ ಪ್ರಾಣಂಗಳನಾಶ್ರೈಸಿಕೊಂಡಿರುವಂಥಾ ಲಿಂಗಾಂಗಿಗಳಾದ ಶಿವಜೀವರಿಗೆ ಸಮಾನಸಮರಸೈಕ್ಯವ ಚಿಂತಿಸುವ ಕಾರಣದಿಂ ಶಿವಯೋಗ ಸಮಾಧಿಸ್ಥಲ ವೆಂದು ಪೇಳಲ್ಪಡುವನೆಂಬುದರ್ಥಂ ॥೨೪॥ ಬಳಿಕ ಗುದಮವಷ್ಟಭ್ಯಾಧಾರಾದ್ವಾಯು ಮುತ್ಥಾಪ್ಯ ಸ್ವಾಧಿಷ್ಠಾನಂ ತ್ರಿಃಪ್ರದಕ್ಷಿಣೀಕೃತ್ಯ ಮಣಿಪೂರಕಂ ಗತ್ವಾ ಅನಾಹತಮತಿಕ್ರಮ್ಯ ವಿಶುದ್ಧೌ ಪ್ರಾಣಲಿಂಗಂ ನಿರುಧ್ಯ ಆಜ್ಞಾಮನುಯಾನ್ ಬ್ರಹ್ಮರಂಧ್ರಂ ಧ್ಯಾಯನ್ ತ್ರಿಮಾತ್ರೋಽಹಮಿತಿ ಸರ್ವದಾ ಧ್ಯಾಯೇತ್ ಹೀಗೆಂಬ ಹಂಸೋಪನಿಷದ್ವಚನಾನು ಸಾರದಿಂ ಸಕಲ ಸಮಾಧಿಯಂ ಪ್ರಕಾಶಿಸುತಿರ್ದಪಂ.

ಅಂತಷ್ಷಟ್ಚಕ್ರರೂಢಾನಿ ಪಂಕಜಾನಿ ವಿಭಾವಯೇತ್
ಬ್ರಹ್ಮಾದಿಸ್ಥಾನಭೂತಾನಿ ಭ್ರೂಮಧ್ಯಾಂತಾನಿ ಮೂಲತಃ ॥

ಭ್ರೂಮಧ್ಯಾದೂರ್ಧ್ವಭಾಗೇ ತು ಸಹಸ್ರದಳಮಂಬುಜಮ್
ಭಾವಯೇತ್ತತ್ರ ವಿಮಲಂ ಚಂದ್ರಬಿಂಬಂ ತದಂತರೇ ॥

ಸೂಕ್ಷ್ಮರಂಧ್ರಂ ವಿಜಾನೀಯಾತ್ತತ್ಕೈಲಾಸಪದಂ ವಿದುಃ
ತತ್ರಸ್ಥಂ ಭಾವಯೇಚ್ಛಂಭುಂ ಸರ್ವಕಾರಣಕಾರಣಮ್ ॥

ಜೀವೇಶ್ವರರಿಗಾಶ್ರಯವಾದ ಸೂಕ್ಷ್ಮಶರೀರ ಮಧ್ಯದಲ್ಲಿ ಷಟ್‌ಸ್ಥಲಚಕ್ರಂಗಳಲ್ಲಿ ಉಂಟಾಗಿರುವುವದ ಷಟ್ಕಮಲಂಗಳಂ ಮೂಲಾಧಾರವಾರಭ್ಯ ಭ್ರೂಮಧ್ಯಂತರವಾಗಿ ಬ್ರಹ್ಮಾದಿಗಳಿಗೆ ಆಶ್ರಯವಾದಂಥಾವನಾಗಿ ಗುರೂಪದಿಷ್ಟ ಪ್ರಕಾರದಿಂ ಚಿಂತಿಸೂದು. ಭ್ರೂಮಧ್ಯದಿಂ ಮೇಲೆ ಬ್ರಹ್ಮರಂಧ್ರದಲ್ಲಿ ಶ್ವೇತವರ್ಣವಾದ ಸಹಸ್ರಶಕ್ತಿಮಯದಳ ಗಳಿಂದಲಂಕೃತಮಾದ ಕಮಲಮಂ ಭಾವಿಸೂದು. ಆ ಚಂದ್ರಮಂಡಲ ಮಧ್ಯದಲ್ಲಿ ಕೂದಲಿನ ತುದಿಯ ಶತಭಾಗದೊಳಗೊಂದು ಭಾಗೆಯಂತತಿ ಸೂಕ್ಷ್ಮರಂಧ್ರಮಂ ಚಿಂತಿಸೂದು. ಆ

ಸೂಕ್ಷ್ಮರಂಧ್ರವನೆ ಕೈಲಾಸಸ್ಥಾನವಾಗಿ ಶಾಸ್ತ್ರಜ್ಞರು ತಿಳಿದಿಹರು. ಅಲ್ಲಿ ಬ್ರಹ್ಮಾದಿಗಳಿಗೂ ಕಾರಣನಾದಂಥಾ ಶಿವನಂ ಸ್ವಾತ್ಮಾಭೇದದಿಂ ಚಿಂತಿಸೂದೆಂಬುದರ್ಥಂ. ॥೨೭॥ ಬಳಿಕ ಆಧಾರಸ್ವಾಧಿಷ್ಠಾನಗತ ಪೃಥ್ವಿ ಜಲ ಸಂಘಟನದಿಂದ ಮಣಿಪೂರಕನೆಂಬ ನಾಭಿಗಡ್ಡೆ ಪುಟ್ಟಿ ಅದರಿಂದುಂಟಾದ ಅನಾಹತವೆಂಬ ಹೃದಯಕವಾಟ ದ್ವಾದಶದಳಕಮಲದಲ್ಲಿ ತಪನಿ ಮೊದಲಾದ ದ್ವಾದಶಕಲಾಯುಕ್ತವಾದ ಸೂರ್ಯಮಂಡಲಂ ಶೋಭಿಸುತ್ತಿಹುದು. ಅದರಿಂ ಮೇಲೆ ಷೋಡಶದಳಯುಕ್ತವಾದ ವಿಶುದ್ಧಿಕಮಲದಲ್ಲಿ ಅಮೃತಾದಿ ಷೋಡಶ ಕಲಾಘಟಿತವಾದ ಚಂದ್ರಮಂಡಲಂ ಪ್ರಕಾಶಿಸುತ್ತಿಹುದು. ಅದರಿಂ ಮೇಲೆ ದ್ವಿದಳಯುಕ್ತವಾದ ಆಜ್ಞಾಚಕ್ರದಲ್ಲಿ ದ್ವಿಮಸ್ತಕ ಧೂಮಾರ್ಚಿ ಮೊದಲಾದ ದಶಕಲಾ ಸಂಯುಕ್ತ ವಹ್ನಿಮಂಡಲಂ ಒಪ್ಪುತ್ತಿಹುದು. ಅದರಿಂ ಮೇಲೆ ಶ್ವೇತ ಸಹಸ್ರ ಶಕ್ತಿದಳಗಳಿಂದ ಅಲಂಕೃತವಾದ ಬ್ರಹ್ಮಚಕ್ರದಲ್ಲಿ ಈ ಮೂವತ್ತೆಂಟು ಕಳೆಗಳಿಂ ಕೂಡಿದ ಕುಂಡಲಿಮಂಡಲದ ಮೇಲೆ ಲಿಂಗಾಂಗಸಾಮರಸ್ಯ ರೂಪವಾದ ಶಿವಯೋಗಸಮಾಧಿಯುಳ್ಳ ಪ್ರಾಣಲಿಂಗಿಗೆ ಶಿವಾನಂದವಲ್ಲದೆ ಮಾಯಿಕ ಸುಖಾನುಭಾವವಿಲ್ಲವೆಂದು ಸೂತ್ರವೆರಡರಿಂ ಪೇಳುತಿರ್ದಪಂ.

ಬಹಿರ್ವಾಸನಯಾ ವಿಶ್ವಂ ವಿಕಲ್ಪಾರ್ಥಂ ಪ್ರಕಾಶತೇ
ಅಂತರ್ವಾಸಿತಚಿತ್ತಾನಾಮಾತ್ಮಾನಂದಃ ಪ್ರಕಾಶತೇ ॥

ಇದಮೆಂಬ ಬಾಹ್ಯಸಂಸ್ಕಾರದಿಂ ಸಕಲ ಜಗತ್ತು ಸಂಕಲ್ಪ ವಿಕಲ್ಪಾರ್ಥವಾಗಿ ಪ್ರಕಾಶಿಸುತ್ತಿಹುದು. ಅಹಮೆಂಬ ಅಂತರ್ಮುಖತ್ವದಿಂದ ಪರಿಮಳಿಸುತ್ತಿಹ ಚಿತ್ತವುಳ್ಳವರ್ಗೆ ನಿತ್ಯಾನಂದವೆ ಪ್ರಕಾಶಿಸುತ್ತಿಹುದು. ॥೨೮॥ ಬಳಿಕ ಬಹಿರ್ವಾಸನೆಯೆಂತು ಪೋಪುದೆಂಬಲ್ಲಿ ಪೇಳುತಿರ್ದಪಂ.

ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ಸುಧೀಃ
ಜ್ಞಾನಾಗ್ನಿನಾ ದಹೇತ್ಸರ್ವಂ ಪಾಶಜಾಲಂ ಜಗನ್ಮಯಮ್ ॥

ಸುಜ್ಞಾನಿಯಾದ ಪ್ರಾಣಲಿಂಗಿಯು ಶಿವಸುಖ ವಿಚಾರದತ್ತಣಿಂ ಆತ್ಮನೆಂಬ ಅರಣಿಯಲ್ಲಿ ಹುಟ್ಟಿದ ಶಿವಾಭೇದ ಜ್ಞಾನಾಗ್ನಿಯಿಂ ಜಗದ್ರೂಪವಾದ ಮಲ ಮಾಯಾದಿ ಪಾಶ ಸಮೂಹಮಂ ಭಸ್ಮೀಕರಿಸೂದೆಂಬುದರ್ಥಂ ॥೨೯॥ ಬಳಿಕ ಶಿವಧ್ಯಾನದ ಮಹತ್ವಮಂ ಸೂತ್ರವೆರಡರಿಂ ಪೇಳುವಾತನಾಗಿ ಶಿವಯೋಗಸಮಾಧಿಸ್ಥಲಮಂ ಮುಗಿಸುತಿರ್ದಪಂ.

ಸಂಸಾರವಿಷವೃಕ್ಷಸ್ಯ ಪಂಚಕ್ಲೇಶಪಲಾಶಿನಃ
ಛೇಧನೇ ಕರ್ಮಮೂಲಸ್ಯ ಪರಶುಶ್ಶಿವಭಾವನಾ ॥

ಧರ್ಮರೂಪವಾದ ಕರ್ಮವೆ ಮೂಲವಾಗಿವುಳ್ಳ ಅವಿದ್ಯಾದಿ ಪಂಚಕ್ಲೇಶಗಳೆಂಬ ಎಲೆಗಳುಳ್ಳ ಜನನ ಮರಣ ರೂಪವಾದ ಸಂಸ್ಕಾರವೆಂಬ ವಿಷವೃಕ್ಷ ಛೇದಿಸುವಲ್ಲಿ ಶಿವಧ್ಯಾನವೆ ಕೊಡಲಿ ಎಂಬುದರ್ಥಂ ॥೩೦॥

ಅಜ್ಞಾನರಾಕ್ಷಸೋನ್ಮೇಷಕಾರಿಣಸ್ಸಂಹೃತಾತ್ಮನಃ
ಶಿವಧ್ಯಾನಂ ತು ಸಂಸಾರತಮಸಶ್ಚಂಡಭಾಸ್ಕರಃ ॥

ಅಜ್ಞಾನವೆಂಬ ರಾಕ್ಷಸನ ಕಣ್ಣಂ ತೆರೆಸುವ ದಟ್ಟಿತ್ತಾದ ಸಂಸಾರಂಧಕಾರಕ್ಕೆ ಶಿವಧ್ಯಾನಂ ಚಂಡಮಾರ್ತಾಂಡನೆಂಬುದರ್ಥಂ ||೩೧||

೩೫. ಲಿಂಗನಿಜಸ್ಥಲ

ಬಳಿಕೀ ಪ್ರಕಾರವಾದ ಶಿವಯೋಗಸಂಪನ್ನನಿಗೆ ಪ್ರತ್ಯಕ್ಷವಾದ ಲಿಂಗನಿಜಸ್ಥಲಂ ನಿರೂಪಿಸುತಿರ್ದಪಂ.

ಸ್ವಾಂತಸ್ಥಶಿವಲಿಂಗಸ್ಯ ಪ್ರತ್ಯಕ್ಷಾನುಭವಸ್ಥಿತಿಃ
ಯಯ್ಯೈವ ಪರಲಿಂಗಸ್ಯ ನಿಜಮಿತ್ಯುಚ್ಯತೇ ಬುಧೈಃ ||

ತನ್ನೊಳಗೆ ತಾದಾತ್ಮ್ಯದಿಂದಿರುವ ಶಿವಲಿಂಗದ ಯಾವುದಾನೊಂದು ಸಾಮಾನ್ಯಾಕಾರದಿಂ ತೋರುವ ಅಹಂ ಎಂಬ ಪ್ರತ್ಯಕ್ಷಾನುಭವ ಸ್ಥಿತಿಯುಂಟು ಅದೇ ಮಹಾಲಿಂಗದ ನಿಜರೂಪವೆಂದು ಆತ್ಮತತ್ತ್ವಜ್ಞಾನಿಗಳು ಪೇಳಲ್ಪಡುತ್ತಿಹರೆಂಬುದರ್ಥಂ ||೩೨|| ಬಳಿಕಾ ಸ್ವರೂಪಮಂ ಸೂತ್ರಂಗಳೆರಡರಿಂ ಪೇಳುತಿರ್ದಪಂ.

ಬ್ರಹ್ಮವಿಷ್ಣ್ವಾದಯೋ ದೇವಾಃ ಸರ್ವೇ ವೇದಾದಯಸ್ತಥಾ
ಲೀಯಂತೇ ಯತ್ರ ಗಮ್ಯಂತೇ ತಲ್ಲಿಂಗಂ ಬ್ರಹ್ಮ ಕೇವಲಮ್ ||

ಬ್ರಹ್ಮ ವಿಷ್ಣು ಮೊದಲಾದ ದೇವತೆಗಳು ವೇದಾಗಮ ಪುರಾಣ ಮುಂತಾದ ಶಬ್ದ ಸಮೂಹವು ಯಾವಲ್ಲಿ ಲಯಪಡದು ಮರಳಿ ಪ್ರಕಾಶಿಸುತ್ತಿಹುದು. ಅದು ಲಿಂಗಶಬ್ದದಿಂ ಪೇಳಿಸಿಕೊಂಬ ಬಚ್ಚಬರಿಯ ಬ್ರಹ್ಮವೆ ಎಂಬುದರ್ಥಂ ||೩೩|| ಬಳಿಕ ಲಿಂಗಶಬ್ದದಿಂ ಪೇಳಿಸಿಕೊಂಡು ವಿಶ್ವೋತ್ಪತ್ತಿಲಯಕ್ಕೆ ಕಾರಣವಾದಂಥಾದ್ದು ಬ್ರಹ್ಮವೆ ಆದರೆ ಅದು ಶಿವನೊ ತದ್ವ್ಯತಿರಿಕ್ತನೊ ಎಂಬಲ್ಲಿ ಪೇಳುತಿರ್ದಪಂ.

ಚಿದಾನಂದಮಯಸ್ಸಾಕ್ಷಾಚ್ಛಿವ ಯೇವ ನಿರಂಜನಃ
ಲಿಂಗಮಿತ್ಯುಚ್ಯತೇ ನಾನ್ಯದ್ಯತಸ್ಸಾದ್ವಿಶ್ವಸಂಭವಃ ||

ಯಾವುದಾನೊಂದು ಪರಬ್ರಹ್ಮ ಸ್ವರೂಪವಾದ ಲಿಂಗದತ್ತಣಿಂ ವಿಶ್ವಮುಂಟಹುದು ಆ ಬ್ರಹ್ಮಸ್ವರೂಪವಾದ ಲಿಂಗವು ಚಿದಾನಂದ ಸ್ವರೂಪನಾದ ದೋಷರಹಿತನಾದ ಪ್ರತ್ಯಕ್ಷವಾದ ಶಿವನೆ ಎಂದು ಪೇಳಲ್ಪಡುತ್ತಿಹುದು. ಮತ್ತೊಂದು ವಸ್ತುವು ಪೇಳಿಸಿಕೊಳ್ಳದೆಂಬುದರ್ಥಂ ||೩೪|| ಬಳಿಕ ನಿಷ್ಕರ್ಷಮಂ ಪೇಳುತಿರ್ದಪಂ.

ಬಹುನ್ಯಾತ್ರಕಿಮುಕ್ತೇನ ಲಿಂಗಮಿತ್ಯುಚ್ಯತೇ ಬುಧೈಃ
ಶಿವಾಭಿಧಂ ಪರಂ ಬ್ರಹ್ಮ ಚಿದ್ರೂಪಂ ಜಗದಾಸ್ಪದಮ್ ||

ಈ ವಿಷಯದಲ್ಲಿ ಬಹುಮಾತಿನಿಂದೇನು ಪ್ರಯೋಜನ. ಜಗತ್ತಿಗಾಧಾರವಾದ ಸ್ಫುರಣರೂಪವಾದ ಬ್ರಹ್ಮವೆ ಶಿವನೆಂಬ ಪೆಸರುಳ್ಳ ನಿಜಲಿಂಗವೆಂದು ಶಾಸ್ತ್ರಜ್ಞರಿಂ ಪೇಳಲ್ಪಡುತ್ತಿಹುದೆಂಬುದರ್ಥಂ ||೩೫|| ಆಮೇಲೆ ಮಾಯಿಕವೇದಾಂತ ಪ್ರಸಿದ್ಧವಾದ ಲಿಂಗವು ನಿಜಲಿಂಗವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ವೇದಾಂತವಾಕ್ಯಜಾಂ ವಿದ್ಯಾಂ ಲಿಂಗಮಾಹುಸ್ತಥಾsಪರೇ
ತದಸದ್ಜ್ಞೇಯರೂಪತ್ವಾಲ್ಲಿಂಗಸ್ಯ ಬ್ರಹ್ಮರೂಪಿಣಃ ॥

ಪ್ರಜ್ಞಾನಂಬ್ರಹ್ಮಯೆಂಬಿವು ಮೊದಲಾದ ವೇದಾಂತ ವಾಕ್ಯಂಗಳಿಂ ಪ್ರಕಾಶಿಸಲ್ಪಟ್ಟ ವಿದ್ಯೆಯೂ ನಿಜಲಿಂಗವನಾಗಿ ವೇದಾಂತಗಳೂ ಪೇಳುವವು. ಆ ವೇದಾಂತ ವಾಕ್ಯದಿಂ ಪ್ರಕಾಶಿಸಲ್ಪಟ್ಟ ಜ್ಞಾನರೂಪವಾದ ಬ್ರಹ್ಮಲಿಂಗವು ನಿಜಲಿಂಗರೂಪವಾದ ಚಿದಹಂತೆಯಿಂ ತಿಳಿಯಲ್ತಕ್ಕವಾದ ಕಾರಣದಿಂದದು ಪ್ರಶಸ್ತವಲ್ಲ. ಪ್ರಮಾಣಂಗಳು ಪ್ರಮಾತೃಭಿತ್ತಿಯ ನಾಶ್ರಯಿಸಿ ಪ್ರಮೇಯಂಗಳ ಪ್ರಕಾಶಿಸುವವು. ಅಲ್ಲದಿದ್ದರೆ ಬೌದ್ಧಮತ ಪ್ರವೇಶವಾಹದು. ಆದರಿಂದ ಪರಬ್ರಹ್ಮಲಿಂಗವು ಪ್ರಮೇಯಪದ ಪ್ರವಿಷ್ಟಮಾದ ಕಾರಣ ಪ್ರಮಾತೃತರ ಸಾಪೇಕ್ಷೆಯುಂಟಾಹ ಕಾರಣದಿಂದೆಂಬುದರ್ಥಂ ॥೩೬॥ ಬಳಿಕ ಮತಾಂತರಮಂ ನಿರಾಕರಿಸುತಿರ್ದಪಂ

ಅವ್ಯಕ್ತಂ ಲಿಂಗಮಿತ್ಯಾಹುರ್ಜಗತಾಂ ಮೂಲಕಾರಣಮ್
ಲಿಂಗೀ ಮಾಹೇಶ್ವರಶ್ಚೇತಿ ಮತಮೇತದಸಂಗತಮ್ ॥

ವಿಶ್ವಕ್ಕೆ ಮೂಲಕಾರಣವಾದ ಮಾಯಾತತ್ತ್ವವೆ ಲಿಂಗವು. ಮಾಹೇಶ್ವರನೆಂದು ಲಿಂಗವುಳ್ಳವನೆಂದು ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂತು ಮಾಹೇಶ್ವರವೆಂಬ ಶ್ರುತ್ಯನುಸಾರದಿಂ ಶ್ವೇತಾಶ್ವತರರು ಪೇಳುವರು. ಅದು ಪ್ರಾಣಲಿಂಗಿಗಳಿಗೆ ಸಮರ್ಥವಲ್ಲ ಪ್ರಕೃತಿ ಹೇಯಕೋಟಿ ಪ್ರವಿಷ್ಟವಾದ ಕಾರಣದಿಂದೆಂಬುದರ್ಥಂ ॥೩೭॥ ಬಳಿಕ ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಮ್ ನೇಮಾ ವಿದ್ಯುತೋ ಭಾಂತಿಕುತೋಯಮಗ್ನಿಃ ತಮೇವ ಭಾಂತಮನುಭಾತಿ ಸರ್ವಮ್ ತಸ್ಯ ಭಾಸಾ ಸರ್ವಮಿದಂ ವಿಭಾತಿ ಎಂಬ ಕಠವಲ್ಲಿಶ್ರುತ್ಯನುಸಾರದಿಂ ಪ್ರಾಣಲಿಂಗಿಗಳಿಗೆ ಸಮ್ಮತವಾದ ನಿಜಲಿಂಗ ಸ್ವರೂಪಮಂ ಸೂತ್ರಂಗಳೆರಡರಿಂ ನಿರೂಪಿಸುತಿರ್ದಪಂ.

ನ ಸೂರ್ಯೋ ಭಾತಿ ತತ್ರೇಂದುರ್ನ ವಿದ್ಯುನ್ನ ಚ ಪಾವಕಃ
ನ ತಾರಕಾ ಮಹಾಲಿಂಗೇ ದ್ಯೋತಮಾನೇ ಪರಾತ್ಮನಿ ॥

ಪರಮಾತ್ಮನಾದ ಮಹಾಲಿಂಗವು ಪ್ರಕಾಶಿಸುತ್ತಿರಲಾಗಿ ಆ ಮಹಾಪ್ರಕಾಶದಲ್ಲಿ ಸೂರ್ಯಚಂದ್ರಾಗ್ನಿ ಮಿಂಚುನಕ್ಷತ್ರಂಗಳು ತಮ್ಮ ಪ್ರಕಾಶದಿಂದಲೆ ಪ್ರಕಾಶಿಸುತ್ತಿರವು. ಮತ್ತವಕೆ ಪ್ರಕಾಶಮೆಂತೆನೆ॥೩೮॥

ಜ್ಯೋತಿರ್ಮಯಂ ಪರಂ ಲಿಂಗಂ ಶ್ರುತಿರಾಹ ಶಿವಾತ್ಮಕಮ್
ತಸ್ಯ ಭಾಸಾ ಸರ್ವಮಿದಂ ಪ್ರತಿಭಾತಿ ನ ಸಂಶಯಃ ॥

ಶಿವಸ್ವರೂಪಮಾದ ಮಹಾಲಿಂಗವೆ ಮತ್ತೊಂದು ಪ್ರಕಾಶದ ಹಂಗಿಲ್ಲದೆ ತನಗೆ ತಾನೆ ಪ್ರಕಾಶಿಸುವದು. ಅದು ಕಾರಣದಿಂದಾ ಜ್ಯೋತಿರ್ಲಿಂಗದ ಪ್ರಕಾಶದಿಂದಲೆ ಸೂರ್ಯ ಚಂದ್ರ ಮೊದಲಾದೀ ಪ್ರಪಂಚವೆಲ್ಲಂ ಪ್ರಕಾಶಿಸುತ್ತಿಹುದೆಂದು ಕಠವಲ್ಲಿಶ್ರುತಿ ಹೇಳುವ ಕಾರಣದಿಂ ಸಂದೇಹವಿಲ್ಲ. ಸೋಮ ಸೂರ್ಯಾಗ್ನಿಗಳಿಗೆ ಮಾತ್ರ ಮಾನಮೇಯಾತ್ಮಕವಾದ

ತ್ರಿಪುಟಿಮಯ ಪ್ರಪಂಚವೆಂಬುದರಿಂದಿವರ ಪ್ರಕಾಶಂ ಮಹಾಲಿಂಗದ ಪ್ರಕಾಶವೆಂಬುದು ಸಿದ್ಧವಾಗಲಾಗಿ ಮರಳಿ ಆ ಮಹಾಲಿಂಗ ವೇದಾಂತಜನ್ಯ ಜ್ಞಾನದಿಂ ಪ್ರಕಾಶ್ಯವಾದದಿೞ ಪರಾಧೀನ ಪ್ರಕಾಶತೆ ಪ್ರಾಪ್ತಮಾಗಿ ಜಡತ್ವಮುಂಟಪ್ಪುದರಿಂ ಪ್ರಮೇಯ ಸ್ವಪ್ರಕಾಶಂ ವಸ್ತು ನಿಜಲಿಂಗವೆನಿಸಿಕೊಂಬುದು. ನಮ್ಮ ಮತದಲ್ಲಿ ನಿಗಮಾಗಮಾದಿ ಶಬ್ದ ಪ್ರಮಾಣವೆಲ್ಲಂ ಸ್ವಶಕ್ತಿಮಯವಾದುದರಿಂ ಸ್ವಸಂವೇದ್ಯವಾದ ಕಾರಣದೋಷಮಿಲ್ಲವೆಂಬುದರ್ಥಂ॥೩೯॥ ಬಳಿಕ ಸೂತ್ರದ್ವಯದಿಂ ಲಿಂಗದ ಮಹತ್ವಮಂ ಪೇೞ್ದು ಲಿಂಗನಿಜಸ್ಥಲಮಂ ಮುಗಿಸುತಿರ್ದಪಂ.

ಲಿಂಗಾನ್ನಾಸ್ತಿ ಪರಂ ತತ್ತ್ವಂ ಯದಸ್ಮಾಜ್ಜಾಯತೇ ಜಗತ್
ಯದೇತದ್ರೂಪತಾಂ ಧತ್ತೇ ಯದತ್ರ ಲಯಮಶ್ನುತೇ ॥

ಯಾವ ಲಿಂಗದಲ್ಲಿ ಯಾವುದಾನೊಂದು ಕಾರಣದಿಂ ಯಾವ ಜಗತ್ತು ಉಂಟಾಗುತ್ತಿಹುದು ಯಾವ ಜಗತ್ತು ಸ್ಥಿತಿಯಂ ಧರಿಸುತ್ತಿಹುದು ಯಾವ ಜಗತ್ತು ಸಂಹಾರವನನುಭವಿಸುತ್ತಿಹುದು ಆ ಕಾರಣದಿಂದನ್ಯಾಪೇಕ್ಷೆಯಿಲ್ಲದೆ ತೋರುವೀ ಸ್ವಪ್ರಕಾಶಮಯ ನಿಜಲಿಂಗದತ್ತಣಿಂದ ಉತ್ಕೃಷ್ಟಮಾದ ತತ್ತ್ವವೆಲ್ಲಂ॥೪೦॥

ತಸ್ಮಾಲ್ಲಿಂಗಂ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಮ್
ನಿಜರೂಪಮಿತಿ ಧ್ಯಾನಾತ್ತದವಸ್ಥಾ ಪ್ರಜಾಯತೇ ॥

ಅದು ಕಾರಣವಾಗಿ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮವೆ ಲಿಂಗದ ನಿಜರೂಪಮೆಂಬ ಚಿಂತನೆಯತ್ತಣಿಂ ಲಿಂಗವೆ ನಿಜವೆಂಬುದು ಪ್ರಕಾಶಿಸುವದೆಂಬುದರ್ಥಂ ॥೪೧॥

## ೩೬. ಅಂಗಲಿಂಗಸ್ಥಲ

ಬಳಿಕೀ ಪ್ರಕಾರವಾದ ಲಿಂಗನಿಜವೆ ಅಂಗವುಳ್ಳ ಅಂಗಲಿಂಗಿಯಂ ಸೂತ್ರದ್ವಯದಿಂ ಸೂಚಿಸುತಿರ್ದಪಂ

ಜ್ಞಾನಮಂಗಮಿತಿ ಪ್ರಾಹುರ್ಜ್ಞೇಯಂ ಲಿಂಗಂ ಸನಾತನಮ್
ವಿದ್ಯತೇ ತದ್ವಯಂ ಯಸ್ಯ ಸೋಽಂಗಲಿಂಗೀತಿ ಕೀರ್ತಿತಃ ॥

ಶಿವಜ್ಞಾನವುಳ್ಳ ಜೀವನಂ ಅಂಗವಾಗಿ ಪೇಳುವರು. ಆ ಶಿವಜ್ಞಾನವುಳ್ಳ ಜೀವನಿಂದ ಸಾಕ್ಷಾತ್ಕರಿಸಲ್ಪಟ್ಟ ನಿತ್ಯವಾದ ವಸ್ತುವಂ ಲಿಂಗವಾಗಿ ಪೇಳುವರು. ಇಲ್ಲಿ ದ್ವಾ ಸುಪರ್ಣಾ ಸಯುಜಾ ಸಖಾಯಾ ಎಂದು ಶ್ರುತಿಯುಂಟಾಗಿರುವುದು. ಈ ಅಂಗಲಿಂಗಗಳೆರಡೂ ಯಾವ ಪ್ರಾಣಲಿಂಗಿಗಿರುವುದೋ ಆತನು ಅಂಗಲಿಂಗಿಯೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೪೨॥ ಬಳಿಕೆಂತೆಂದರೆ ಭೇದಭಾವಾದಿಮತಪ್ರವೇಶವಾಯಿತಲ್ಲಾ ಎಂಬಲ್ಲಿ ಪೇೞುತಿರ್ದಪಂ.

ಅಂಗೇ ಲಿಂಗಂ ಸಮಾರೂಢಂ ಲಿಂಗೇ ಚಾಂಗಮುಪಸ್ಥಿತಮ್
ಯೇತದಸ್ತಿ ದ್ವಯಂ ಯಸ್ಯ ಸ ಭವೇದಂಗಲಿಂಗವಾನ್ ॥

ಜೀವಾತ್ಮನಲ್ಲಿ ಶಿವಲಿಂಗ ಸಾಮರಸ್ಯದಿಂದಿರುವುದು ಶಿವಲಿಂಗದಲ್ಲಿ ಹಾಗೆ ಈತನು ಜೀವನು. ಈ ಎರಡು ಜ್ಞಾನವು ಬೀಜಾಂಕುರನ್ಯಾಯದಿಂದಾವ ಪ್ರಾಣಲಿಂಗಿಗುಂಟು ಆತನು ಅಂಗಲಿಂಗಿಯೆಂಬುದರ್ಥಂ ॥೪೩॥ ಇಲ್ಲಿ ಜ್ಞಾನಮಾತ್ರವೆ ವಿವಕ್ಷಿತವ್ರೋ ಏನೆಂಬಲ್ಲಿ ಪೇಳುತಿರ್ದಪಂ.

ಜ್ಞಾತ್ವಾ ಯಸ್ಸತತಂ ಲಿಂಗಂ ಸ್ವಾಂತಸ್ಥಂ ಜ್ಯೋತಿರಾತ್ಮಕಮ್
ಪೂಜಯೇದ್ಭಾವಯನ್ನಿತ್ಯಂ ತಂ ವಿದ್ಯಾದಂಗಲಿಂಗಿನಮ್ ॥

ಯಾವನಾನೊರ್ವ ಪ್ರಾಣಲಿಂಗಿಯು ತನ್ನ ಹೃದಯಕಮಲದಲ್ಲಿ ಜ್ಯೋತಿರ್ಮಯ ವಾದ ನಿಜಲಿಂಗಮಂ ಶ್ರುತಿ ಗುರು ಸ್ವಾನುಭವಂಗಳಿಂ ಸಾಮರಸ್ಯವಾಗಿ ತಿಳಿದು ಧ್ಯಾನಿಸಿ ಪೂಜಿಸುವನು ಆತನು ಪ್ರಾಣಲಿಂಗಿಯಾಗಿ ತಿಳಿವುದೆಂಬುದರ್ಥಂ॥೪೪॥ ಬಳಿಕ ನಿಜಲಿಂಗದ ಪರ್ಯಾಯನಾಮಂಗಳಂ ಪೇಳಿ ಅಲ್ಲಿ ದೃಢಚಿತ್ತವುಳ್ಳವಂ ಜೀವನ್ಮುಕ್ತನೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಜ್ಞಾಯತೇ ಲಿಂಗಮೇವೈಕಂ ಸರ್ವೈ ಶ್ಶಾಸ್ತ್ರೈ ಸ್ಸನಾತನೈಃ
ಬ್ರಹ್ಮೇತಿ ವಿಶ್ವಧಾಮೇತಿ ವಿಮುಕ್ತೇಃ ಪದಮಿತ್ಯಪಿ ॥

ಮುಕ್ತಿರೂಪಮಿದಂ ಲಿಂಗಮಿತಿ ಯಸ್ಯ ಮನಸ್ಥಿತಿಃ
ಸ ಮುಕ್ತೋ ದೇಹಯೋಗೇಽಪಿ ಸ ಜ್ಞಾನೀ ಸ ಮಹಾಗುರುಃ ॥

ಒಂದೇಯಾದ ನಿಜಲಿಂಗವೆ ಪರಬ್ರಹ್ಮವೆಂದು ಪರಮುಕ್ತಿಸ್ಥಾನವೆಂದು ನಿರೂಪ ನಿತ್ಯಯಾ ವಾಚಯೆಂಬ ಶ್ರುತಿಯಿಂದಾರಂಭವಿವಕ್ಷಾಧ್ಯವಸಾಯೋಕ್ತಿಗಳಿಂ ಶಿವಶಕ್ತಿಮಯ ವಾದ ಕಾರಣ ನಿತ್ಯಮಾದ ಸಕಲ ನಿಗಮಾಗಮಾದಿ ಪ್ರಮಾಣಂಗಳಿಂ ತಿಳಿಯಲ್ಪಡುತ್ತಿಹುದು. ಈ ನಿಜಲಿಂಗವೆ ಮುಕ್ತಿಸ್ವರೂಪಮೆಂದು ಯಾವ ಪ್ರಾಣಲಿಂಗಿಗೆ ಮನಸ್ಥಿತಿಯುಂಟು ಆತಂ ನಿರ್ದೇಹಮಿರ್ದಡೂ ಮರಳಿ ಜನ್ಮಾಂತರವಿಲ್ಲದ ಕಾರಣದಿಂ ಜೀವನ್ಮುಕ್ತನು, ಆತನೆ ಶಿವಜ್ಞಾನ ಸಂಪನ್ನನು. ಶ್ರೀ ಗುರುಮೂರ್ತಿಯೆಂಬುದರ್ಥಂ॥೪೬॥ ಬಳಿಕೀ ಪ್ರಕಾರವಾದ ಲಿಂಗನಿಜಜ್ಞಾನವಿಲ್ಲದವರಿಗೆ ಮುಕ್ತಿ ಇಲ್ಲವೆಂದು ಪೇಳುತಿರ್ದಪಂ.

ಅನಾದಿನಿಧನಂ ಲಿಂಗಂ ಕಾರಣಂ ಜಗತಾಮಿತಿ
ಯೇ ನ ಜಾನಂತಿ ತೇ ಮೂಢಾಃ ಮೋಕ್ಷಮಾರ್ಗಬಹಿಷ್ಕೃತಾಃ ॥

ಉತ್ಪತ್ತಿ ವಿನಾಶಂಗಳಿಲ್ಲದ ಲಿಂಗವು ವಿಶ್ವಕಾರಣವೆಂದು ಯಾರು ಅರಿಯರು ಅವರು ಮೂಢರು. ಮೋಕ್ಷಮಾರ್ಗದಿಂದ ಹೊರಗಾಗಿ ಮಾಡಲ್ಪಟ್ಟವರೆಂಬುದರ್ಥಂ ॥೪೭॥ ಬಳಿಕೀ ಪ್ರಾಣಲಿಂಗಾರ್ಚನೆ ಮೊದಲಾದ ಧರ್ಮವುಳ್ಳ ಪ್ರಾಣಲಿಂಗಿಯೆ ಜ್ಞಾನ ಪರಿಪಾಕವಶದಿಂ ಶರಣನೆನಿಸಿಕೊಂಬನೆಂದು ಹೇಳಿ ಪ್ರಾಣಲಿಂಗಿಸ್ಥಲವಂ ಮುಗಿಸುತಿರ್ದಪಂ.

ಯಃ ಪ್ರಾಣಲಿಂಗಾರ್ಚನಭಾವಪೂರ್ವೈ
ರ್ಧರ್ಮೈರುಪೇತಶ್ಶಿವಭಾವಿತಾತ್ಮಾ

ಸ ಯೇವ ತುರ್ಯಃ ಪರಿಕೀರ್ತಿತೋऽಸೌ
ಸಂವಿದ್ವಿಪಾಕಾಚ್ಛರಣಾಭಿದಾನಃ ॥

ಪ್ರಾಣಲಿಂಗಪೂಜಾಚರಣ ಮೊದಲಾದ ಶಿವಧರ್ಮಗಳೊಡನೆ ಕೂಡಿದಾತನಾಗಿ ಲಿಂಗರೂಪದಿಂ ಭಾವಿಸಲ್ಪಟ್ಟ ಸ್ವಸ್ವರೂಪಮುಳ್ಳ ಭಕ್ತನಿನ್ನಾತನೆಯವನಾದ ಆ ಈ ಪ್ರಾಣಲಿಂಗಿಯು ಜ್ಞಾನಪರಿಪಾಕವಶದಿಂ ಶರಣನೆನಿಸಿಕೊಂಬನೆಂಬುದರ್ಥಂ ॥೫೦॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶೀವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಪ್ರಾಣಲಿಂಗಿನಂ ಪಂಚಸ್ಥಲ ಪ್ರಸಂಗೋನಾಮ ದ್ವಾದಶೀಯಃ ಪರಿಚ್ಛೇದಃ.

# ತ್ರಯೋದಶಪರಿಚ್ಛೇದ

## ಶರಣಸ್ಥಲ

ಬಳಿಕಾಗಸ್ತ್ಯಂ ಕೇಳುತಿರ್ದಪಂ. ಅಗಸ್ತ್ಯ ಉವಾಚ.

ಮಾಹೇಶ್ವರಃ ಪ್ರಸಾದೀತಿ ಪ್ರಾಣಲಿಂಗೀತಿ ಬೋಧಿತಃ
ಕಥಮೇಷ ಸಮಾದಿಷ್ಟಃ ಪುನಶ್ಶರಣಸಂಜ್ಞಕಃ ॥

ಮಾಹೇಶ್ವರನೆಂದು ಪ್ರಸಾದಿಯೆಂದು ತಿಳಿಹಲ್ಪಟ್ಟ ಈ ಪ್ರಾಣಲಿಂಗಿಯೆ ಮರಳಿ ಯಾವ ಪ್ರಕಾರದಿಂ ಶರಣನೆನಿಸಿಕೊಂಬನೆಂಬುದರ್ಥಂ ॥೧॥ ಇದಕ್ಕುತ್ತರಮಂ ಪೇಳುತಿರ್ದಪಂ. ಶ್ರೀರೇಣುಕ ಉವಾಚ

ಅಂಗಲಿಂಗೀ ಜ್ಞಾನರೂಪಸ್ಸತೀ ಜ್ಞೇಯಶ್ಶಿವಃ ಪತಿಃ
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್ ॥

ಶಿವಜ್ಞಾನವೆಸ್ವರೂಪವಾಗಿವುಳ್ಳ ಅಂಗಲಿಂಗಸಾಮರಸ್ಯಜ್ಞಾನಿಯಾದ ಪ್ರಾಣಲಿಂಗಿಯು ಸತಿಯೆಂದು ತಿಳಿಯಲ್ತಕ್ಕದು. ಶಿವಲಿಂಗ ಪತಿಯೆಂದು ತಿಳಿಯಲ್ತಕ್ಕದು. ಆ ಲಿಂಗರೂಪ ಸ್ತ್ರೀ ಪುರುಷರ ಸಮಾನಸಮರಸಯೋಗದಲ್ಲಿ ಯಥಾ ಯಾಸ್ತ್ರಿಸಂಪರಿಷ್ವ ಕೋ ನ ಬಾಹ್ಯಂ ಕಿಂಚನ ವೇದನಾಂತರವೆಂಬ ಬೃಹದಾರಣ್ಯಶ್ರುತಿ ಪ್ರಸಿದ್ಧವಾದ ಯಾವುದಾನೊಂದು ಸೌಖ್ಯಮುಂಟು. ಆ ಸೌಖ್ಯವುಳ್ಳವ ಶರಣನೆನಿಸಿಕೊಂಬನೆಂಬುದರ್ಥಂ. ॥೨॥ ಬಳಿಕೀ ಶರಣನಿಗೂ ಸ್ಥಲಭೇದಮುಂಟಾ ಯೇನೆಂಬಲ್ಲಿ ಪೇಳುತಿರ್ದಪಂ.

ಸ್ಥಲಮೇತತ್ಸಮಾಖ್ಯಾತಂ ಚತುರ್ಧಾ ಧರ್ಮಭೇದತಃ
ಆದೌ ಶರಣಮಾಖ್ಯಾತಂ ತತಸ್ತಾಮಸವರ್ಜನಮ್ ॥

ತತೋ ನಿರ್ದೇಶಮುದ್ದಿಷ್ಟಂ ಶೀಲಸಂಪಾದನಂ ತತಃ
ಕ್ರಮಾಲ್ಲಕ್ಷಣಮೇತೇಷಾಂ ಕಥಯಾಮಿ ನಿಶಮ್ಯತಾಮ್ ॥

ಈ ಶರಣಸ್ಥಲಮಾಚಾರಭೇದದಿಂ ನಾಲ್ಕುಪ್ರಕಾರವಾಗಿ ಪೇಳಲ್ಪಟ್ಟಿತ್ತು. ಅದೆಂತೆಂದಡೆ ಮೊದಲು ಶರಣಸ್ಥಲವು ಬಳಿಕ ತಾಮಸನಿರಸನ ಸ್ಥಲವು ಆಮೇಲೆ ನಿರ್ದೇಶಸ್ಥಲವು ತದನಂತರದಲ್ಲಿ ಶೀಲಸಂಪಾದನೆಸ್ಥಲವು ಉಪದೇಶಿಸಲ್ಪಟ್ಟಿತ್ತು. ಈ ನಾಲ್ಕು ಸ್ಥಲಂಗಳ ಭೇದಮಂ ಕ್ರಮದಿಂ ಪೇಳ್ವಪೆ ನಿನ್ನಿಂ ಕೇಳಲ್ಪಡಲೆಂಬುದರ್ಥಂ ॥೪॥ ಸತೀ ಚಾಹಂ ಪತಿರ್ಲಿಂಗಂ ಹೃದಿ ಯುಕ್ತಿಃ ಸ್ವಯಂಪ್ರಭುಃ ಪ್ರಾಪಂಚಿಕಸುಖಂ ನಾಸ್ತಿ ಶರಣಸ್ಥಲಮುತ್ತಮಮ್ ಹೀಗೆಂಬ ಶಂಕರಸಂಹಿತ ವಚನಾನುಸಾರದಿಂ ಶರಣಸ್ಥಲಮಂ ನಿರೂಪಿಸುತಿರ್ದಪಂ.

### ೩೭. ಶರಣಸ್ಥಲ

ಸತೀವ ರಮಣೇ ಯಸ್ತು ಶಿವೇ ಶಕ್ತಿಂ ವಿಭಾವಯನ್
ತದನ್ಯವಿಮುಖಸ್ಸೋಽಯಂ ಜ್ಞಾತಶ್ಶರಣನಾಮವಾನ್॥

ಪ್ರಾಣಕಾಂತನ ವಿಷಯದಲ್ಲಿ ಪತಿವ್ರತಾಸ್ತ್ರೀಯಂತೆ ಯಾವಾತಂ ಶಿವಲಿಂಗ ವಿಷಯದಲ್ಲಿ ತನ್ನ ಸ್ತ್ರೀಯನಾಗಿ ಭಾವಿಸುತ್ತ ಶಿವಲಿಂಗವಲ್ಲದ ದೇವತಾಂತರದಲ್ಲಿ ಅಡ್ಡಲಾದ ಮುಖವುಳ್ಳಾತನಾಗಿರುವನು ಆ ಈತಂ ಶರಣನೆಂಬ ಪೆಸರುಳ್ಳವನೆಂದು ತಿಳಿಯಲ್ತಕ್ಕನೆಂಬು ದರ್ಥಂ ॥೫॥ ಬಳಿಕ ಬಹುದೃಷ್ಟಾಂತರಪೂರ್ವಕನಾಗಿ ಶಿವಲಿಂಗಾಸಕ್ತನೆ ಶರಣನೆಂದು ಪ್ರತಿಪಾದಿಸುತಿರ್ದಪಂ.

ಪರಿಜ್ಞಾತೇ ಶಿವೇ ಸಾಕ್ಷಾತ್ಕೋಽನ್ಯಾನ್ಯಮಭಿಕಾಂಕ್ಷತಿ
ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇಽನ್ಯತಃ ॥

ಪರಶಿವನು ಪ್ರಸಿದ್ಧವಾದ ಶ್ರುತ್ಯಾದಿಪ್ರಮಾಣಂಗಳಿಂ ಬ್ರಹ್ಮಾದಿಗಳಿಂದಲೂ ದೊಡ್ಡವನೆಂದು ತಿಳಿಯಲ್ಪಡುತ್ತಿರಲಾಗಿ ದೊಡ್ಡ ನಿಧಾನ ಸಿಕ್ಕಿದವನು ಮತ್ತೊಬ್ಬನಿಂದ ಟಿಕ್ಕಿ ಹರಳ ಹೇಗೆ ಬಯಸುವನು ಹಾಗೆ ಮತ್ತೊಂದು ದೇವತಾಂತರವ ಬಯಸದವಂ ಶರಣನೆಂಬುದರ್ಥಂ ॥೬॥

ಶಿವಾನಂದಂ ಸಮಾಸಾದ್ಯ ಕೋಽವಾನ್ಯಮುಪತಿಷ್ಠತೇ
ಗಂಗಾಮೃತಂ ಪರಿತ್ಯಜ ಕಃ ಕಾಂಕ್ಷೇನ್ಮೃಗತೃಷ್ಣಿಕಾಮ್ ॥

ಶಿವಲಿಂಗಸುಖಮಂ ಪಡೆದು ದಾವಾತಂ ದೇವತಾಂತರವನಾಶ್ರೈಸಿಯಾನು. ಯಾವಾತನೂ ಆಶ್ರೈಸನು. ಅದೆಂತೆಂದಡೆ ಗಂಗಾಜಲಂ ಪ್ರಾಪ್ತಮಾಗಿರಲಾಗಿ ಮರೀಚಿಕಾ ಜಲವನೆಂತು ಬಯಸುವನು, ಹಾಗೆ ದೇವತಾಂತರವಿಮುಖನಾದಾತ ಶರಣನೆಂಬುದರ್ಥಂ ॥೭॥

ಸಂಸಾರತಿಮಿರಚ್ಛಿದೇ ವಿನಾ ಶಂಕರಭಾಸ್ಕರಮ್
ಪ್ರಭವಂತಿ ಕಥಂ ದೇವಾಃ ಖದ್ಯೋತಾ ಇವ ದೇಹಿನಾಮ್ ॥

ಹೊನ್ನೆ ಹುಳುಗಳು ಕತ್ತಲೆಯ ಕೆಡಿಸುವಲ್ಲಿ ಹೇಗೆ ಶಕ್ತರಲ್ಲ ಸೂರ್ಯಶಕ್ತನು ಹಾಗೆ ಸಂಸಾರವೆಂಬ ಕತ್ತಲೆಯ ಕೆಡಿಸುವಲ್ಲಿ ಶಂಕರಭಾಸ್ಕರ ಶಕ್ತನಲ್ಲದೆ ಬ್ರಹ್ಮಾದಿಗಳೂ ಶಕ್ತರಲ್ಲವೆಂದು ತಿಳಿದು ಶಿವನಿಂದನ್ಯವಾದ ಜೀವರುಗಳಲ್ಲಿ ವಿಮುಖನಾದವಂ ಶರಣನೆಂಬುದರ್ಥಂ ॥೮॥

ಸಂಸಾರಾರ್ತಶ್ಶಿವಂ ಯಾಯಾದಬ್ರಹ್ಮಾದ್ಯೈಃ ಕಿಂ ಫಲಂ ಸುರೈಃ
ಚಕೋರಸ್ತೃಷಿತಃ ಪಶ್ಯೇಚ್ಚಂದ್ರಂ ಕಿಂ ತಾರಕಾ ಅಪಿ ॥

ನೀರಡಸಿದ ಚಕೋರಪಕ್ಷಿಯು ಚಂದ್ರನನೆ ನೋಡುವದಲ್ಲದೆ ತಾರಕಿಗಳನೆಂತು ನೋಡದು ಹಾಗೆ ಸಂಸಾರದಿಂ ಬಳಲಿದವಂ ಬ್ರಹ್ಮಾದಿಗಳಿಂದೇನು ಫಲವೆಂದು ಅವರುಗಳಲ್ಲಿ ವಿಮುಖನಾಗಿ ಶಿವನಲ್ಲಿಯೆ ಎರಗಿದ ಚಿತ್ತವುಳ್ಳವಂ ಶರಣನೆಂಬುದರ್ಥಂ ॥೯॥

ಶಿವ ಯೇವ ಸಮಸ್ತಾನಾಂ ಶರಣ್ಯಃ ಶರಣಾರ್ಥಿನಾಮ್
ಸಂಸಾರಸರ್ಪದಷ್ಟಾನಾಂ ಸರ್ವಜ್ಞಸ್ಸರ್ವದೋಷಹಾ ॥

ಶಿವಜ್ಞಾನೇ ಸಮುತ್ಪನ್ನೇ ಪರಾನಂದಃ ಪ್ರಕಾಶತೇ
ತದಾಸಕ್ತಮನಾ ಯೋಗೀ ನಾನ್ಯತ್ರ ರಮತೇ ಸುಧೀಃ ॥

ಸಂಸಾರವೆಂಬ ಸರ್ಪಕಚ್ಚಿದ ಸಕಲವಾದ ಶರಣಾರ್ಥಿಗಳಿಗೆ ಸರ್ವಜ್ಞನಾಗಿ ಸರ್ವದೋಷವನು ಕೊಲ್ಲುವ ಶಿವನೆ ಗತಿಯೆಂಬ ಶಿವಮಾಹಾತ್ಮ್ಯಜ್ಞಾನಮುಂಟಾಗಲಾಗಿ ಪರಮಾನಂದಂ ಪ್ರಕಾಶಿಸೂದು. ಅಲ್ಲಿ ಆಸಕ್ತನಾದ ಶಿವಯೋಗಿಯು ದೇವತಾಂತರದಲ್ಲಿ ರಮಿಸನೆಂಬುದರ್ಥಂ ॥೧೧॥ ಬಳಿಕ ಹೇಳಿದರ್ಥವನು ಉಪಸಂಹರಿಸುವಾತನಾಗಿ ಶರಣ ಸ್ಥಲವ ಮುಗಿಸುತಿರ್ದಪಂ.

ತಸ್ಮಾತ್ಸರ್ವಪ್ರಯತ್ನೇನ ಶಂಕರಂ ಶರಣಂ ಗತಃ
ತದನಂತಸುಖಂ ಪ್ರಾಪ್ಯ ಮೋದತೇ ನಾನ್ಯಚಿಂತಯಾ ॥

ಅದುಕಾರಣವಾಗಿ ಶಿವನೆ ರಕ್ಷಕನೆಂದು ತಿಳಿದು ಮನೋವಾಕ್ಕಾಯಕರಣಂಗಳ ಮರೆಹೊಕ್ಕವನಾಗಿ ಶಿವನಿಂದನಂತಸುಖವಂ ಪಡೆದು ಸುಖಿಸುತ್ತಿಹನು. ದೇವತಾಂತರ ಚಿಂತೆಯಿಂ ಸುಖಿಯಾಗನೆಂಬುದರ್ಥಂ ॥೧೨॥

## ೩೮. ತಾಮಸನಿರಸನ ಸ್ಥಲ

ಬಳಿಕ ಶರಣನಿಂ ಮಾಡುವ ತಾಮಸನಿರಾಕರಣ ಸ್ಥಲಮಂ ನಿರೂಪಿಸುತಿರ್ದಪಂ.

ಶಿವಾಸಕ್ತಪರಾನಂದಮೋದಿನಾ ಗುರುಣಾ ಯತಃ
ನಿರಸ್ಯಂತೇ ತಮೋಭಾವಾ ಸ್ಸ ತಾಮಸನಿರಾಸಕಃ ॥

ಶಿವನಲ್ಲಿ ಆಸಕ್ತನಾಗಿ ಪರಾನಂದದಿಂ ಸುಖಿಸುತ್ತಿಹ ಶ್ರೇಷ್ಠನಾದ ಶರಣನಿಂದ ತಮೋವಿಕಾರಂಗಳು ಯಾವ ಕಾರಣದತ್ತಣಿಂ ನಿವಾರಿಸಲ್ಪಡುತ್ತಿಹವು ಆ ಕಾರಣದಿಂದಾತಂ ತಮೋನಿರಾಸಕನಹನೆಂಬುದರ್ಥಂ ॥೧೩॥ ಬಳಿಕ ತಮೋವಿಕಾರಂಗಳೇನು ಕಾರಣ ನಿರಾಕರಿಸಲ್ತಕ್ಕವೆಂಬಲ್ಲಿ ಪೇಳುತಿರ್ದಪಂ.

ಯಸ್ಯ ಜ್ಞಾನಂ ತಮೋಮಿಶ್ರಂ ನ ತಸ್ಯ ಗತಿರಿಷ್ಯತೇ
ಸತ್ವಂ ಹಿ ಜ್ಞಾನಯೋಗಸ್ಯ ನೈರ್ಮಲ್ಯಂ ವಿದುರುತ್ತಮಾಃ ॥

ಯಾವಾತನ ಜ್ಞಾನವು ತಮೋಮಿಶ್ರಮಾದಡೆ ಆತನಿಗೆ ಸದ್ಗತಿಯುಂಟಾಗದು. ಶ್ರೇಷ್ಠರಾದವರು ಜ್ಞಾನಯೋಗಕ್ಕೆ ಸತ್ವವನೆ ನಿರ್ಮಲವಾದ ಸಾಧನವನಾಗಿ ಪೇಳುವರು. ಅದುಕಾರಣದಿಂ ತಮೋವಿಕಾರಂಗಳು ನಿರಾಕರಿಸಲ್ತಕ್ಕವೆಂಬುದರ್ಥಂ ॥೧೪॥ ಬಳಿಕೀ ಪ್ರಸಂಗದಿಂ ಸತ್ವಾತ್ ಸುಖಂ ಚ ಜ್ಞಾನಂ ಚ ವೈರಾಗ್ಯಂ ಶೌಕಲ್ಯಮೇವ ಚ ದುಃಖಂ ಪ್ರವೃತ್ತಿ ರಾಗೌ ಚ ತಾತ್ಯಂ ರಜಸೋ ಭವೇತ್ ಮೋಹೀಭ್ರಾಂತಿಸ್ತಥ್ಯಾಲಸ್ಯಂ ಕಾರ್ಷ್ಣ್ಯಂ ಚ ರಜಸೋ ಭವೇತ್ ಹೀಗೆಂಬ ಸೂತಸಂಹಿತಾ ವಚನದಿಂ ಗುಣತ್ರಯಯುಕ್ತರಂ ಪ್ರಕಾಶಿಸುತಿರ್ದಪಂ.

ಶಮೋ ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ
ಕ್ಷಾಂತಿಃ ಕಾರುಣ್ಯಸಂಪತ್ತಿಶ್ಚ ್ರದ್ಧಾ ಸತ್ವಸಮುದ್ಭವಾ ॥

ಶಿವಭಕ್ತಿಃ ಪರೋ ಧರ್ಮಶ್ಶಿವಜ್ಞಾನಸ್ಯ ಬಾಂಧವಾಃ
ಯೇತ್ತೈರ್ಯುಕ್ತೋ ಮಹಾಯೋಗೀ ಸಾತ್ವಿಕಃ ಪರಿಕೀರ್ತಿತಃ ॥

ಅಂತರಿಂದ್ರಿಯ ನಿಗ್ರಹರೂಪವಾದ ಶಾಂತಿಯು ಬಾಹ್ಯೇಂದ್ರಿಯ ನಿಗ್ರಹವು. ನಿತ್ಯಾನಿತ್ಯವಸ್ತು ವಿವೇಕವು ವಿಷಯಂಗಳಲ್ಲಿ ವಿರಕ್ತಿಯು. ಅಖಂಡಧ್ಯಾನವು ಕ್ಷಮೆಯು. ಭೂತದಯೆಯು ಸತ್ಯದಿಂದುಂಟಾದ ವಿಶ್ವಾಸವು. ಶಿವಭಕ್ತಿಯು ಉತ್ಕೃಷ್ಟವಾದ ಶಿವಾಚಾರವು. ಇವಿಷ್ಟು ಶಿವಜ್ಞಾನಕ್ಕೆ ಸಂಬಂಧಿಗಳಾದ ದಶಗುಣಂಗಳಿಂ ಯುಕ್ತನಾದ ಮಹಾ ಯೋಗೀಶ್ವರಂ ಸಾತ್ವಿಕನೆಂದು ಕೊಂಡಾಡಲ್ಪಟ್ಟನೆಂಬುದರ್ಥಂ. ॥೧೬॥ ಬಳಿಕೀ ಪ್ರಕಾರವಾದ ಗುಣಗಳಿಂ ಕೂಡಿದ ಯೋಗೀಶ್ವರಂಗೆ ಒಂದು ಸಮಯದಲ್ಲಿಯಾದರೂ ಕಾಮ ಕ್ರೋಧಾದಿಗಳುಂಟಹವೋ ಏನೆಂಬಲ್ಲಿ ಪೇಳುತಿರ್ದಪಂ.

ಕಾಮಕ್ರೋಧಮಹಾಮೋಹಮದಮಾತ್ಸರ್ಯವಾರಣಾಃ
ಶಿವಜ್ಞಾನಮೃಗೇಂದ್ರಸ್ಯ ಕಥಂ ತಿಷ್ಠಂತಿ ಸನ್ನಿಧೌ ॥

ಮತ್ತ ಮನೋಗಜನಿಗ್ರಹಕ ರೂಪಮಾದ ಕಾರಣದಿಂ ಶಿವಜ್ಞಾನವೆಂಬ ಮೃಗೇಂದ್ರನ ಸನ್ನಿಧಿಯಲ್ಲಿ ಕಾಮಕ್ರೋಧಾದಿ ಗಜಗಳೆಂತಿರುವುವು ಇರಲಾರವೆಂಬುದರ್ಥಂ ॥೧೭॥ ಬಳಿಕ ರಜೋಗುಣಯುಕ್ತರಂ ಪ್ರಕಾಶಿಸುತಿರ್ದಪಂ.

ಯತ್ರ ಕುತ್ರಾಪಿ ವಾ ದ್ವೇಷ್ಟಿ ಪ್ರಪಂಚೇ ಶಿವರೂಪಿಣಿ
ಶಿವದ್ವೇಷೀ ಸ ವಿಜ್ಞೇಯೋ ರಜಸಾऽವಿಷ್ಟಮಾನಸಃ ॥

ಯಾವಾತಂ ರಜೋಗುಣಕಾರ್ಯವಾದ ಕಾಮ ಕ್ರೋಧಾದಿಗಳಿಂದಾವರಿಸಲ್ಪಟ್ಟ ಚಿತ್ತವುಳ್ಳವನಾಗಿ ಶಿವಸ್ವರೂಪವಾದ ಪ್ರಪಂಚನಲ್ಲಿ ದ್ವೇಷಿಸುತ್ತಿಹನು ಆತಂ ರಾಜಸನೆಂದು ತಿಳಿಯಲ್ತಕ್ಕನೆಂಬುದರ್ಥಂ ॥೧೮॥ ಬಳಿಕ ತಮೋಗುಣಯುಕ್ತರಂ ಕುರುಹಿಡುತಿರ್ದಪಂ.

ಯೋ ದ್ವೇಷ್ಟಿ ಸಕಲಾನ್ ಲೋಕಾನ್ ಯೋ ವ್ಯಾಹಂಕುರುತೇ ಸದಾ
ಯೋऽಸತ್ಯಭಾವನಾಯುಕ್ತಸ್ತಾಮಸ ಇತಿ ಸ್ಮೃತಃ ॥

ಯಾವಾತಂ ಸಕಲಲೋಕಮಂ ದ್ವೇಷಿಸುತ್ತಿಹನು ಅಹಂಕಾರಯುಕ್ತನಾಗಿಹನು ಅಸತ್ಯವನೆ ನೆನೆವನು ಆತಂ ತಾಮಸನೆಂದು ನೆನೆಯಲ್ತಕ್ಕನೆಂಬುದರ್ಥಂ ॥೧೯॥ ಬಳಿಕೀ ತಮೋಗುಣಂ ಶಿವಶರಣರ್ಗೆ ಇಲ್ಲವೆಂದು ಸೂತ್ರದ್ವಯದಿಂ ಪೇಳಿ ತಾಮಸನಿರಾಕರಣ ಸ್ಥಲಮಂ ಮುಗಿಸುತಿರ್ದಪಂ.

ತಮೋಮೂಲಾ ಹಿ ಸಂಜಾತಾ ರಾಗದ್ವೇಷಾದಿಪಾದಪಾಃ
ಶಿವಜ್ಞಾನಕುಠಾರೇಣ ಛೇದ್ಯಂತೇ ಹಿ ನಿರಂತರಮ್ ॥

ತಮೋಗುಣವೆ ಬೇರುಗಳುಳ್ಳವಾಗಿ ಹುಟ್ಟಿದ ಕಾಮಕ್ರೋಧಾದಿರಾಜಸವೃಕ್ಷಂಗಳು ಸಾತ್ವಿಕ ಶಿವಜ್ಞಾನವೆಂಬ ಕೊಡಲಿಯಿಂ ಛೇದಿಸಲ್ಪಡುತ್ತಿಹವೆಂಬುದು ಪ್ರಸಿದ್ಧಂ ॥೨೦॥ ಬಳಿಕ ತಮೋಗುಣ ಮೂಲದಿಂ ಪುಟ್ಟಿದ ರಾಗದ್ವೇಷಾದಿ ವೃಕ್ಷಂಗಳಿಗೆ ಶಿವಜ್ಞಾನ ಕುಠಾರದಿಂ

ಛೇದನವಾಗಲಿ. ಈ ರಾಗದ್ವೇಷಾದಿಗಳಿಗೆ ಕಾರಣವಾದ ತಮೋನಿವೃತ್ತಿ ಯಾತರಿಂದುಂಟಾಹುದು ತನ್ನಿವೃತ್ತಿ ಇಲ್ಲದಿರ್ದಡೆ ಪುನರುತ್ಪತ್ತಿ ಉಂಟಾಹದೆಂಬಲ್ಲಿ ಪೇಳುತಿರ್ದಪಂ.

ಶಿವಜ್ಞಾನೇ ಸಮುತ್ಪನ್ನೇ ಸಹಸ್ರಾದಿತ್ಯಸನ್ನಿಭೇ
ಕುತಸ್ತಮೋವಿಕಾರಾಃ ಸ್ಯುಃ ಮಹತಾಂ ಶಿವಯೋಗಿನಾಮ್ ॥

ಕೋಟಿಸೂರ್ಯ ಪ್ರಕಾಶವಾದ ಶಿವಜ್ಞಾನಮುಂಟಾಗುತ್ತಿರಲಾಗಿ ಮಹಾಪುರುಷರಾದ ಶಿವಶರಣರಿಗೆ ತಮೋ ವಿಕಾರಂಗಳು ಯಾವ ಕಾರಣದಿಂದುಂಟಾಹವು ಆ ಕಾರಣವಾದ ತಮೋಮೂಲವೆ ಕೆಟ್ಟುಹೋದ ಕಾರಣದಿಂದೆಂಬುದರ್ಥಂ ॥೨೧॥

## ೩೯. ನಿರ್ದೇಶಸ್ಥಲ

ಬಳಿಕ ತಾಮಸನಿರಾಕರಣದಿಂ ಪ್ರಕಾಶಿಸುವ ನಿರ್ದೇಶಸ್ಥಲಮಂ ನಿರೂಪಿಸುತಿರ್ದಪಂ.

ನಿರಾಕೃತ್ಯ ತಮೋಭಾಗಂ ಸಂಸಾರಸ್ಯ ಪ್ರವರ್ತಕಮ್
ನಿರ್ದಿಶ್ಯತೇ ತು ಯದ್ಜ್ಞಾನಂ ಸ ನಿರ್ದೇಶ ಇತಿ ಸ್ಮೃತಃ ॥

ಸಂಸಾರಪ್ರವೃತ್ತಿಗೆ ಮೂಲಕಾರಣವಾಗ ತಮೋಂಶವ ನಿರಾಕರಿಸಿ ಯಾವುದಾನೊಂದು ಜ್ಞಾನಮುಪದೇಶಿಸಲ್ಪಡುತ್ತಿಹದು, ಆ ಜ್ಞಾನಂ ನಿರ್ದೇಶಸ್ಥಲವೆಂದು ನೆನೆಯಲ್ಪಟ್ಟಿತೆಂಬುದರ್ಥಂ ॥೨೨॥ ಬಳಿಕಾಜ್ಞಾನಂ ಯಾರಿಂದುಪೇಶಿಸಲ್ಪಡುತ್ತಿಹದೆಂಬಲ್ಲಿ ಗುರುಸ್ವಾಮಿ ಎಂದು ಗುರುಮಹತ್ವಮಂ ಬಹಳವಾಗಿ ಪ್ರಕಾಶಿಸುತಿರ್ದಪಂ.

ಗುರುರೇವ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಮ್
ಕೋ ವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತತೇ ॥

ಲೋಕದಲ್ಲಿ ಸೂರ್ಯ ಹೊರತಾಗಿ ಕತ್ತಲೆಯ ತೊಲಗಿಸಿ ಪದಾರ್ಥಂಗಳ ಬೆಳಗುವಾತನೆಂತಿಲ್ಲವೋ ಹಾಗೆ ಗುರು ಹೊರತಾಗಿ ತಮೋಭಾಗನಿರಾಕರಣ ಮುಖದಿಂ ಪರತತ್ತ್ವ ಪ್ರಕಾಶವಿಲ್ಲವೆಂಬುದರ್ಥಂ ॥೨೩.॥ ಮರಳಿ ದೃಷ್ಟಾಂತರಮಂ ಪೇಳುತಿರ್ದಪಂ.

ಅಂತರೇಣ ಗುರುಂ ಸಿದ್ಧಂ ಕಥಂ ಸಂಸಾರನಿಷ್ಕೃತಿಃ
ನಿದಾನಜ್ಞಂ ವಿನಾ ವೈದ್ಯಂ ಕಿಂ ವಾ ರೋಗೋ ನಿವರ್ತತೇ ॥

ಈ ರೋಗಕ್ಕೆ ಇದು ಔಷಧವೆಂಬ ಚಿಕಿತ್ಸೆಯೆಂಬಲ್ಲಿ ವೈದ್ಯ ಹೊರತಾಗಿ ರೋಗ ನಿವೃತ್ತಿಯೆಂತಾಗದು ಹಾಗೆ ಜ್ಞಾನಸಿದ್ಧನಾದ ಗುರು ಹೊರತಾಗಿ ಭವರೋಗ ನಿವೃತ್ತಿಯಾಗದೆಂಬುದರ್ಥಂ ॥೨೪॥ ಬಳಿಕಾ ಪ್ರಕಾರವಾದ ಶ್ರೀ ಗುರುವನೆಂತು ತಿಳಿಯಬೇಕೆಂಬಲ್ಲಿ ಪೇಳುತಿರ್ದಪಂ.

ಅಜ್ಞಾನಮಲಿನಂ ಚಿತ್ತದರ್ಪಣಂ ಯೋ ವಿಶೋಧಯೇತ್
ಪ್ರಜ್ಞಾವಿಭೂತಿಯೋಗೇನ ತಮಾಹುರ್ಗುರುಸತ್ತಮಂ ॥

ಅಜ್ಞಾನವೆಂಬ ಮಲವುಳ್ಳ ಚಿತ್ತದರ್ಪಣಮಮಂ ಯಾವಾತಂ ಪ್ರಜ್ಞಾನಬ್ರಹ್ಮಾ

ಎಂಬಿವು ಮೊದಲಾದ ಶ್ರುತಿಪ್ರಸಿದ್ಧ ಶಿವಜ್ಞಾನವಿಭೂತಿಯ ಸಂಬಂಧದತ್ತಣಿಂ ನಿರ್ಮಲವ ಮಾಡುವನು ಆತನಂ ಗುರುಶ್ರೇಷ್ಠನಾಗಿ ಬಲ್ಲವರು ಪೇಳುವರೆಂಬುದರ್ಥಂ ॥೨೫॥ ಬಳಿಕಾ ಪ್ರಕಾರವಾದ ಗುರುಕಟಾಕ್ಷದಿಂ ಸಕಲ ಸಿದ್ಧಿಯಾಹದೆಂದು ಪೇಳುತಿರ್ದಪಂ.

ಅಪರೋಕ್ಷಿತತತ್ತ್ವಸ್ಯ ಜೀವನ್ಮುಕ್ತಸ್ವಭಾವಿನಃ
ಗುರೋಃ ಕಟಾಕ್ಷೇ ಸಂಸಿದ್ಧೇ ಕೋ ವಾ ಲೋಕೇಷು ದುರ್ಲಭಃ ॥

ಸ್ವಸ್ವರೂಪದಿಂ ಸಾಕ್ಷಾತ್ಕರಿಸಲ್ಪಟ್ಟು ಶಿವತತ್ತ್ವವುಳ್ಳ ವಿಕಲ್ಪರಹಿತಂ ಜ್ಞಾನಂ ನಿಷೇಧರಹಿತಾಕ್ರಿಯಾ ಅಲೋಕ ರಂಜಕಂ ರೂಪಂ ಜೀವನ್ಮುಕ್ತಸ್ಯ ಲಕ್ಷಣಮ್ ಎಂಬ ವಾಸಿಷ್ಠವಚನದಿಂ ಜೀವನ್ಮುಕ್ತರೂಪಮಂ ಧರಿಸಿದ ಸದ್ಗುರುವಿನ ಕೃಪಾಯುಕ್ತವಾದ ಕಡೆಗಣ್ಣ ನೋಟ ಸಿದ್ಧವಾಗುತ್ತಿರಲಾಗಿ ಈ ಲೋಕಂಗಳಲ್ಲಿ ದುರ್ಲಭವಾದುದಾವುದೂ ಇಲ್ಲ ಭೋಗ ಮೋಕ್ಷಪ್ರದವಾದ ಸಕಲ ಸಿದ್ಧಿಗಳೂ ಆಗುವದೆಂಬುದರ್ಥಂ ॥೨೬॥ ಬಳಿಕೀ ಪ್ರಕಾರವಾದ ಗುರುಗಳುಂಟೋ ಏನೋ ಎಂಬಲ್ಲಿ ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ ಶಿಷ್ಯಹೃತ್ತಾಪಹಾರಸ್ತು ಗುರುರೇಕೋsಪಿ ದುರ್ಲಭಃ ಹೀಗೆಂಬ ಶಿವರಹಸ್ಯ ವಚನಾನುಸಾರದಿಂ ನುಡಿವುತಿರ್ದಪಂ.

ಕೈವಲ್ಯಕಲ್ಪತರವೋ ಗುರವಃ ಕರುಣಾಲಯಾಃ
ದುರ್ಲಭಾ ಹಿ ಜಗತ್ಯಸ್ಮಿನ್ ಶಿವಾದ್ವೈತಪರಾಯಣಾಃ ॥

ಪರಾಪರಮುಕ್ತಿಯನೀವಲ್ಲಿ ಕಲ್ಪದ್ರುಮರಾದ ಕರುಣಾಸಮುದ್ರರಾದ ಶಿವಾದ್ವೈತದಲ್ಲಿ ಆಸಕ್ತರಾದ ಗುರುಗಳೀ ಜಗತ್ತಿನಲ್ಲಿ ದುರ್ಲಭರಲಾ ಎಂಬುದರ್ಥಂ ॥೨೭॥ ಅದು ಕಾರಣದಿಂ ಶಿವಲಿಂಗನಿಷ್ಠರಾದ ಗುರು ಪ್ರಾಕೃತಗುರುಗಳತ್ತಣಿಂ ಶ್ರೇಷ್ಠನೆಂದು ಪೇಳುತ್ತ ನಿರ್ದೇಶಸ್ಥಲಮಂ ಮುಗಿಸುತಿರ್ದಪಂ.

ಕ್ಷೀರಾಬ್ಧಿರಿವ ಸಿಂಧೂನಾಂ ಸುಮೇರುರಿವ ಭೂಭೃತಾಮ್
ಗ್ರಹಾಣಾಮಿವ ತಿಗ್ಮಾಂಶುರ್ಮಣೀನಾಮಿವ ಕೌಸ್ತುಭಃ ॥

ದ್ರುಮಾಣಾಮಿವ ಭದ್ರಶ್ರೀರ್ದೇವಾನಾಮಿವ ಶಂಕರಃ
ಗುರುಶ್ಶಿವಃ ಪರಃ ಶ್ಲಾಘ್ಯೋ ಗುರೂಣಾಂ ಪ್ರಾಕೃತಾತ್ಮನಾಮ್ ॥

ಸಮುದ್ರಂಗಳ ಮಧ್ಯದಲ್ಲಿ ಕ್ಷೀರಸಮುದ್ರದಂತೆ ಪರ್ವತಂಗಳೊಳಗೆ ಮಹಾಮೇರುವಿನಂತೆ ಗ್ರಹರೊಳಗೆ ಸೂರ್ಯನಂತೆ ರತ್ನಗಳೊಳಗೆ ಕೌಸ್ತುಭದಂತೆ ತರುಗಳೊಳಗೆ ಶ್ರೀಚಂದನವೃಕ್ಷದಂತೆ ದೇವರುಗಳೊಳಗೆ ಶಿವನಂತೆ ಪ್ರಾಕೃತಗುರುಗಳೊಳಗೆ ಶಿವಲಿಂಗ ನಿಷ್ಠರಾದ ಗುರು ಶ್ರೇಷ್ಠನೆಂಬುದರ್ಥಂ ॥೨೮॥

## ೪೦. ಶೀಲಸಂಪಾದನಸ್ಥಲ

ಬಳಿಕ ಶ್ರೀಗುರುವಿನಿಂದುಪದಿತವಾದ ಜ್ಞಾನಯೋಗದತ್ತಣಿಂ ಶಿವತತ್ತ್ವವ ತಿಳಿಯಬೇಕೆಂಬ ಇಚ್ಛೆಯೆ ಶೀಲವೆಂದು ಪೇಳಿ ಶೀಲವಂತನ ಸ್ವರೂಪವನೇಳುಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಜಿಜ್ಞಾಸಾ ಶಿವತತ್ತ್ವಸ್ಯ ಶೀಲಮಿತ್ಯುಚ್ಯತೇ ಬುಧೈಃ
ನಿರ್ದೇಶ್ಯಯೋಗಾದಾರ್ಯಾಣಾಂ ತದ್ವಾನ್ ಶೀಲೀತಿ ಕಥ್ಯತೇ ॥

ಪೂರ್ವದಲ್ಲಿ ಪೇಳಲ್ಪಟ್ಟ ಕುರುಹುಳ್ಳ ಆಚಾರ್ಯವರ್ಯರಿಂದುಪದೇಶಿಸುವ ಜ್ಞಾನಯೋಗದತ್ತಣಿಂ ಶಿವತತ್ತ್ವವ ತಿಳಿಯಬೇಕೆಂಬ ಇಚ್ಛೆಯೆ ಶೀಲವೆಂದು ಜ್ಞಾನಿಗಳಿಂ ಪೇಳಲ್ಪಡುತ್ತಿಹುದು. ಅಂಥಾ ಇಚ್ಛೆಯುಳ್ಳವನೆ ಶೀಲವಂತನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೨೯॥ ಬಳಿಕ ನಿಷ್ಕರ್ಮಂ ಪೇಳುತಿರ್ದಪಂ.

ಪ್ರಪನ್ನಾರ್ತಿಹರೇ ದೇವೇ ಪರಮಾತ್ಮನಿ ಶಂಕರೇ
ಭಾವಸ್ಯ ಸ್ಥಿರತಾಯೋಗಃ ಶೀಲಮಿತ್ಯುಚ್ಯತೇ ಬುಧೈಃ ॥

ರಕ್ಷಿಸೆಂದು ಶರಣಾಗತರಾದವರ ಕ್ಲೇಶಮಂ ಪರಿಹರಿಸುವಂಥ ಪರಬ್ರಹ್ಮ ಸ್ವರೂಪನಾದ ಶಿವನಲ್ಲಿ ಚಿತ್ತಸ್ಥಿರೀಕರಣವೆ ಶೀಲವೆಂದು ಶಿವಶಾಸ್ತ್ರವ ಬಲ್ಲವರಿಂ ಪೇಳಲ್ಪಡುತ್ತಿಹದೆಂಬುದರ್ಥಂ ॥೩೦॥ ಬಳಿಕ ಪ್ರಕಾರಾಂತರದಿಂ ಶೀಲಲಕ್ಷಣಮಂ ಪೇಳುತಿರ್ದಪಂ.

ಶೀಲಂ ಶಿವೈಕವಿಜ್ಞಾನಂ ಶಿವಧ್ಯಾನೈಕತಾನತಾ
ಶಿವಪ್ರಾಪ್ತಿಸಮುತ್ಕಂಠಾ ತದ್ಯೋಗೀ ಶೀಲವಾನ್ ಸ್ಮೃತಃ ॥

ಶಿವನಲ್ಲಿಯೆ ವಿಶೇಷಜ್ಞಾನವು, ಶಿವಧ್ಯಾನದಲ್ಲಿಯೆ ಚಿತ್ತಕ್ಕೆ ಪ್ರಸರಣವು. ಈ ಎರಡರ ಯೋಗವುಳ್ಳವ ಶಿವಾಭಿಗಮನ ಪ್ರೀತಿಯತ್ತಣಿಂ ಶೀಲವಂತನೆಂದು ನೆನೆಯಲ್ಪಕ್ಕನೆಂಬುದರ್ಥಂ ॥ ೩೧॥ ಬಳಿಕೀಯರ್ಥವನೆ ವಿಸ್ತರಿಸುತಿರ್ದಪಂ.

ಶಿವಾದನ್ಯತ್ರ ವಿಜ್ಞಾನೇ ವೈಮುಖ್ಯಂ ಯಸ್ಯ ಸುಸ್ಥಿರಮ್
ತದಾಸಕ್ತಮನೋವೃತ್ತಿಸ್ತಮಾಹುಶ್ಶೀಲಭಾಜನಮ್ ॥

ಶಿವಲಿಂಗದತ್ತಣಿಂದನ್ಯವಾದ ದೇವತಾಂತರ ವಿಶೇಷಜ್ಞಾನದಲ್ಲಿ ಅಡ್ಡ ಮೋರೆಯುಳ್ಳವನಹತನವು ಯಾವ ಶರಣಂಗೆ ಸ್ಥಿರವಾಗಿಹುದು, ಯಾವಾತನ ಮನೋವ್ಯಾಪಾರವು ಶಿವಲಿಂಗದಲ್ಲಿಯೆ ಎರಕವಾಗಿಹುದು ಆತನಂ ಶೀಲಭಾಜಕನಾಗಿ ಪೇಳುತ್ತಿಹರೆಂಬುದರ್ಥಂ ॥೩೨॥ ಇಲ್ಲಿ ದೃಷ್ಟಾಂತರಮಂ ಪೇಳುತಿರ್ದಪಂ.

ಪತಿವ್ರತಾಯಾ ಯಚ್ಛೀಲಂ ಪತಿರಾಗಾತ್ಪ್ರಶಸ್ಯತೇ
ತಥಾ ಶಿವಾನುರಾಗೇಣ ಸುಶೀಲೋ ಭಕ್ತ ಉಚ್ಯತೇ ॥

ಪ್ರತಿವ್ರತೆಯಾದಾಯಕನ ಪಾತಿವ್ರತ್ಯವು ಪುರುಷನಲ್ಲಿಯ ಪ್ರೀತಿಯತ್ತಣಿಂದೆಂತು ಕೊಂಡಾಡಲ್ಪಕ್ಕದಾಗಿರುವುದು ಹಾಗೆ ಶಿವನಮೇಲಣ ಪ್ರೀತಿಯಿಂ ವಿಯೋಗವಿಲ್ಲದ ಶರಣಂ ಶೋಭನವಾದ ಶೀಲವುಳ್ಳವನೆಂದು ಪೇಳಲ್ಪಡುತ್ತಿಹನು. ಶರಣನಿಗೂ ಶಿವಲಿಂಗಕ್ಕೂ ಸತಿಪತಿಭಾವ ಪೇಳಿದ ಕಾರಣದಿಂ ಪತಿವ್ರತಾ ದೃಷ್ಟಾಂತ ಪೇಳಲ್ಪಟ್ಟಿತೆಂಬುದರ್ಥಂ ॥೩೩॥ ಬಳಿಕೀಯರ್ಥವನೆ ಸ್ಫುಟೀಕರಿಸುತಿರ್ದಪಂ.

ಪತಿಂ ವಿನಾ ಯಥಾ ಸ್ತ್ರೀಣಾಂ ಸೇವ್ಯಾನ್ಯಸ್ಯತು ಗರ್ಹಣಾ
ಶಿವಂ ವಿನಾ ತಥ್ಯಾನ್ಯೇಷಾಂ ಸೇವಾ ನಿಂದಾ ಕೃತಾತ್ಮನಾಮ್ ॥

ಸ್ತ್ರೀಯರಿಗೆ ಪತಿ ಹೊರತಾಗಿ ಪರಪುರುಷರಸೇವೆಯೆಂತು ನಿಂದಿಸಲ್ಪಟ್ಟದು ಹಾಗೆ ಕೃತಕೃತ್ಯರಾದ ಶಿವಶರಣರಿಗೆ ಶಿವಲಿಂಗದಿಂದನ್ಯವಾದ ವಿಷ್ಣ್ವಾದಿ ದೇವತಾಂತರ ಸೇವೆಯು ನಿಂದಿಸಲ್ಪಟ್ಟಂಥಾದೆಂಬುದರ್ಥಂ ॥೩೪॥ ಬಳಿಕ ಪೇಳಿದರ್ಥಮಂ ಸಂಗ್ರಹಿಸಿ ಪೇಳುತಿರ್ದಪಂ.

ಬಹುನಾತ್ರ ಕಿಮುಕ್ತೇನ ಶಿವಜ್ಞಾನೈಕನಿಷ್ಠತಾ
ಶೀಲಮಿತ್ಯುಚ್ಯತೇ ಸದ್ಭಿಶ್ಶೀಲವಾಂಸ್ತತ್ಪರೋ ಮತಃ ॥

ಈ ಶೀಲವಿಷಯದಲ್ಲಿ ಬಹುಮಾತಿನಿಂದೇನು ಪ್ರಯೋಜನ ಶ್ರೀಗುರೂಪದಿಷ್ಟವಾದ ಶಿವಜ್ಞಾನ ಒಂದರಲ್ಲಿಯೆ ನಿಷ್ಠೆಯು ಶೀಲವೆಂದು ಸತ್ಪುರುಷರಿಂ ಪೇಳಲ್ಪಡುತ್ತಿಹುದು. ಆ ಶೀಲದಲ್ಲಿ ತತ್ಪರನಾದ ಶೀಲವಂತನೆಂದು ನೆನೆಯಲ್ತಕ್ಕದೆಂಬುದರ್ಥಂ ॥೩೫॥ ಬಳಿಕೀ ಪ್ರಕಾರವಾದ ಶೀಲವುಳ್ಳ ಶರಣನೆ ಶಿವಲಿಂಗೈಕ್ಯವೆಂದು ಶರಣಸ್ಥಲಮಂ ಮುಗಿಸುತಿರ್ದಪಂ.

ಶಿವಾತ್ಮಬೋಧೈಕರತಸ್ಸ್ಥಿರಾಶಯಃ
ಶಿವಂ ಪ್ರಪನ್ನೋ ಜಗತಾಮಧೀಶ್ವರಮ್
ಶಿವೈಕ್ಯನಿಷ್ಠಾಹಿತಶೀಲಭೂಷಣಃ
ಶಿವೈಕ್ಯವಾನೇಷ ಹಿ ಕಥ್ಯತೇ ಬುಧೈಃ ॥

ಲಿಂಗಾಂಗಜ್ಞಾನದಲ್ಲಿಯೆ ನಿಷ್ಠನಾಗಿ ಜಗದಧಿಪತಿಯಾದ ಶಿವನಂ ಕುರಿತು ರಕ್ಷಿಸೆಂದು ಮರೆ ಹೊಕ್ಕಂಥಾ ಶಿವಶರಣರಿಗೆ ದೃಢವಾದ ಸತಿಪತಿಭಾವದಿಂ ಕೂಡಿದ ಚಿತ್ತವುಳ್ಳಂಥಾ ಶಿವಲಿಂಗ ಒಂದರಲ್ಲಿಯೆ ನಿಷ್ಠೆಯಿಂ ಮಾಡಲ್ಪಟ್ಟ ಶೀಲವೆಂಬ ಅಲಂಕಾರವುಳ್ಳಂಥ ಈ ಶರಣನು ಶಿವಶಾಸ್ತ್ರಪ್ರವೀಣರಿಂ ಶಿವೈಕ್ಯವುಳ್ಳವನೆಂದು ಪೇಳಲ್ಪಡುತ್ತಿಹನೆಂದು ಪ್ರಸಿದ್ಧಂ॥೩೬॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೆ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಶರಣಸ್ಥಚತುರ್ವಿಧ ಸ್ಥಲ ಪ್ರಸಂಗೋನಾಮ ತ್ರಯೋದಶೀಯಃ ಪರಿಚ್ಛೇದಃ.

# ಚತುರ್ದಶಪರಿಚ್ಛೇದ

## ಐಕ್ಯಸ್ಥಲ

ಬಳಿಕಾಗಸ್ತ್ಯಂ ಶ್ರೀ ರೇಣುಕಾಚಾರ್ಯನಂ ಕುರಿತು ಪ್ರಶ್ನೆಯಂ ಮಾಡುತಿರ್ದಪಂ. ಅಗಸ್ತ್ಯ ಉವಾಚ

ತಾಮಸತ್ಯಾಗಸಂಬಂಧಾನಿರ್ದೇಶಾಚ್ಛೀಲತಸ್ತಥಾ
ಶರಣಾಖ್ಯಸ್ಯ ಭೂಯೋsಸ್ಯ ಕಥಮೈಕ್ಯನಿರೂಪಣಮ್ ॥

ತಮೋಭಾಗ ನಿರಾಕರಣದಿಂ ಜ್ಞಾನೋಪದೇಶದಿಂ ಶೀಲಸಂಪಾದನೆಯಿಂ ಶರಣನೆಂಬ ಪೆಸರುಳ್ಳಾತಂಗೆ ಎಷ್ಟು ಮಾತ್ರದಿಂದಲೆ ಐಕ್ಯನಿರೂಪಣಮೆಂತು ಘಟಿಪುದು ಲಿಂಗಾಂಗಂಗಳಿಗೆ ಭೇಧಮುಂಟಾಗಿರುವ ಕಾರಣದಿಂದೆಂಬುದು ಪ್ರಶ್ನಾರ್ಥಂ. ಬಳಿಕೀ ಪ್ರಶ್ನೆಗುತ್ತರಮಂ ಕೊಡುತ್ತಿರ್ದಪಂ ॥೧॥ ಶ್ರೀ ರೇಣುಕ ಉವಾಚ

ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್
ಶರಣಾಖ್ಯಶ್ಶಿವೇನೈಕ್ಯಭಾವನಾದೈಕ್ಯವಾನ್ಭವೇತ್ ॥

ಬಾಹ್ಯಲಿಂಗಪೂಜೆಯಲ್ಲಿ ವಿಮುಖನಾಗಿ ಪ್ರಾಣಲಿಂಗ ಪೂಜಾಧ್ಯಾನದಿಂ ಸುಖದ ಹೆಚ್ಚಿಗೆಯ ಪಡೆದ ಶರಣಂ ಶಿವನೊಡತನದೇಕತ್ವ ಚಿಂತೆಯಿಂ ಶಿವಲಿಂಗೈಕ್ಯವುಳ್ಳವನಾಹನೆಂಬುದರ್ಥಂ ॥೨॥ ಶಿವನೊಡತನದೇಕತ್ವಚಿಂತನೆಯೆಂತೆನೆ ಲಿಂಗಾತ್ಮರೀರ್ವರೂ ಚಿದೇಕರೂಪ ಕಾರಣದಿಂ ಭೇದ ಕೂಡದು. ಚಿದ್ರೂಪವಾದರೂ ವ್ಯಕ್ತಿಭೇದಮುಂಟಾಗಲಿ ಎಂದರೆ ಆ ಚಿದ್ರೂಪವನಾದಾತ್ಮನು ಸ್ವಪ್ರಕಾಶನೊ ಪರಾಧೀನಪ್ರಕಾಶನಾದರೆ ಘಟಾದಿಗಳಂತೆ ಜಡನಪ್ಪನು. ಸ್ವಪ್ರಕಾಶನಾದೊಡೆ ಪರಿಮಿತ ಪ್ರಕಾಶನೊ ಅಪರಿಮಿತ ಪ್ರಕಾಶನಾದರೆ ಘಟಪಟಾದಿ ಪ್ರಕಾಶಗಳಂತೆ ಸ್ವವಿಷಯ ಸ್ವಮಾತ್ರ ಪ್ರಕಾಶಕವಾಗಿ ಪರವಿಷಯ ಪರಸ್ವರೂಪದಲ್ಲಿ ಅಂಧಬಧಿರಪ್ರಾಯವಾಗಿ ಚೈತ್ರಂ ಮೈತ್ರನಿಂ ಭಿನ್ನನು ಮೈತ್ರಂ ಚೈತ್ರನಿಂ ಭಿನ್ನವೆಂಬ ಜ್ಞಾನವಿಲ್ಲದೆ ಪೋಪುದು. ಚೈತ್ರೋಹಮೆಂಬ ಪ್ರಕಾಶಂ ಚೈತ್ರಮಾತ್ರ ಪ್ರಕಾಶವಲ್ಲದೆ ಮೈತ್ರ ಪ್ರಕಾಶವಲ್ಲದ ಕಾರಣದಿಂ ಅಪರಿಚ್ಛಿನ್ನಪ್ರಕಾಶನಾದರೆ ಸೇವ್ಯಸೇವಕ ಭಾವಾದಿಗಳು ಕೂಡದ ಕಾರಣದಿಂ ಪ್ರಾಕಶದ್ವಯಾಂಗೀಕಾರಮನುಪಪನ್ನಮಾಗಿ ಪೂಜ್ಯಪೂಜಕಭಾವಾದಿ ಸಂಪತ್ತಿಗೋಸ್ಕರ ಸ್ವಾತಂತ್ರ್ಯ ಪರಿಕಲ್ಪಿತ ಭೇದವನಂಗೀಕರಿಸಬೇಕಾದ ಕಾರಣ ಮುಖ್ಯ ಪ್ರಕಾಶ ಒಂದೇ ಸರಿ. ಸರ್ವಜ್ಞತ್ವ ಕಿಂಚಿಜ್ಞತ್ವಂ ಮಾಯಾಕಾರ್ಯ ಕೋಟಿ ಪ್ರದಿಷ್ಟವೆಂಬುದರಿಂ ಜ್ಞತ್ವ ಕರ್ತೃತ್ವವೆ ಸ್ವಾಭಾವಿಕವು ಅಲ್ಲದಿರ್ದಡೆ ಜಡತ್ವಮುಂಟಪ್ಪದೆಂಬ ಯುಕ್ತಿ ಕಲಾಪ ಮಿಂತದಕೆ ತತ್ವಚಿಂತನೆಯತ್ತಣಿಂ ಐಕ್ಯವುಳ್ಳವನೆಂಬುಭಯಾರ್ಥಂ ॥೨॥ ಬಳಿಕೀ ಐಕ್ಯನಿಗೂ ಸ್ಥಲಭೇದಂಗಳುಂಟೋ ಏನೆಂಬಲ್ಲಿ ಪೇಳುತಿರ್ದಪಂ.

ಐಕ್ಯಸ್ಥಲಮಿದಂ ಪ್ರೋಕ್ತಂ ಚತುರ್ಧಾ ಮುನಿಪುಂಗವ
ಐಕ್ಯಮಾಚಾರಸಂಪತ್ತಿರೇಕಭಾಜನಮೇವ ಚ ॥
ಸಹಭೋಜನಮಿತ್ಯೇಷಾಂ ಕ್ರಮಾಲ್ಲಕ್ಷಣಮುಚ್ಯತೇ

ಅಹೋ ಮುನಿಶ್ರೇಷ್ಠನಾದ ಅಗಸ್ತ್ಯನೆ ಈ ಐಕ್ಯಸ್ಥಲಂ ಐಕ್ಯನೆಂದು ಆಚಾರ

ಸಂಪತ್ತಿಯೆಂದು ಏಕಭಾಜನವೆಂದು ಸಹಭೋಜನವೆಂದು ನಾಲ್ಕು ಪ್ರಕಾರವಾಗಿರುವುದು, ಈ ಸ್ಥಲಂಗಳಿಗೆ ಉದ್ದೇಶಕ್ರಮದಿಂ ಲಕ್ಷಣಂ ಪೇಳಲ್ಪಡುತ್ತದೆಯೆಂಬುದರ್ಥಂ ॥೩॥ ಬಳಿಕ ಏಕಮೇವ ತದ್ಭವತಿ ಅವಿಕಲ್ಪೋ ವಿಕಲ್ಪೋ ವ್ಯಾತ್ರ ಕಾಚನ ಭಿದ್ಯಾಸಿ ನೈವಾತ್ರ ಕಿಂಚನ ಭಿದಾಸ್ತ್ಯತ್ರಭಿದಾಮಿವ ಮನ್ಯಮಾನಃ ಶತಧಾ ಸಹಸ್ರಧಾ ಭಿನ್ನಃ ಮೃತ್ಯೋರ್ಮರ್ತ್ಯ ಮಾಪ್ನೋತಿ ತದೇವ ತದ್ವಯಂ ಸ್ವಪ್ರಕಾಶಮ್ ಏಕಮೇವ ತದ್ಭವತ್ಯವಿಕಲ್ಪೋ ವಾ ವಿಕಲ್ಪೋತ್ರ ಕಾಚನ ಭಿದಾಸ್ತಿಭಿದಾಮಿವ ಮನ್ಯಮಾನಃ ಶತಧಾ ಸಹಸ್ರಧಾಭಿನ್ನೋ ಮರ್ತ್ಯಮಾಪ್ನೋತಿ ತದೇಕಮದ್ವಯಂ ಸ್ವಪ್ರಕಾಶಮೆಂಬುತ್ತರತಾಪನೀಯ ಶ್ರುತ್ಯನುಸಾರದಿಂ ಪಂಚಸೂತ್ರಂಗಳಿಂ ಲಿಂಗೈಕ್ಯನಿಗೆ ಲಕ್ಷಣಮಂ ಪೇಳುತಿರ್ದಪಂ.

### ೪೧. ಐಕ್ಯಸ್ಥಲ

ವಿಷಯಾನಂದಕಣಿಕಾನಿಸ್ಪೃಹೋ ನಿರ್ಮಲಾಶಯಃ
ಶಿವಾನಂದಮಹಾಸಿಂಧುಮಜ್ಜನಾದೈಕ್ಯಮುಚ್ಯತೇ ॥

ಶಬ್ದಾದಿ ವಿಷಯಗಳಿಂದುಂಟಾದ ನಿತ್ಯವಲ್ಲದ ಸುಖಲೇಶಂಗಳಲ್ಲಿ ವಿರಕ್ತನಾಗಿ ನಿರ್ಮಲವಾದ ಚಿತ್ತವುಳ್ಳಾತನೆ ಶಿವಾನಂದಮಹಾಸಮುದ್ರದಲ್ಲಿ ತಾದಾತ್ಮ್ಯಾನುಪದೇಶದತ್ತಣಿಂ ಲಿಂಗೈಕ್ಯಸ್ಥಲಶಬ್ದವಾಚ್ಯನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೪॥ ಬಳಿಕೀ ಲಿಂಗೈಕ್ಯನಿಗೆ ಎಂಥವಗೆ ಘಟಿಸೂದೆಂಬಲ್ಲಿ ಪೇಳುತಿರ್ದಪಂ.

ನಿರ್ಧೂತಮಲಸಂಬಂಧೋ ನಿಷ್ಕಲಂಕಮನೋಗತಃ
ಶಿವೋಽಹಮಿತಿ ಭಾವೇನ ನಿರೂಢೋ ಹಿ ಶಿವೈಕ್ಯತಾಮ್ ॥

ಹಾರಿಸಲ್ಪಟ್ಟಾಣವಾದಿಮಲಸಂಬಂಧವುಳ್ಳ ಕಳಂಕಿಲ್ಲದ ಮನೋವ್ಯಾಪಾರವುಳ್ಳವಂ ಶಿವೋಹಮೆಂಬ ಪರಾಮರ್ಶದಿಂ ಲಿಂಗೈಕ್ಯಮಂ ಪಡುತ್ತಿಹನೆಂಬುದರ್ಥಂ ॥೫॥ ಬಳಿಕಾತನೇನಂ ಕಾಣುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಶಿವೇನೈಕ್ಯಂ ಸಮಾಪನ್ನಶ್ಚಿದಾನಂದಸ್ವರೂಪಿಣಾ
ನ ಪಶ್ಯತಿ ಜಗಜ್ಜಾಲಂ ಮಾಯಾಕಲ್ಪಿತವೈಭವಮ್ ॥

ಚಿದಾನಂದಸ್ವರೂಪಮುಳ್ಳ ಶಿವನೊಡನೆ ಏಕತ್ವಮಂ ಪಡೆವ ಮಾಯೆಯಿಂ ಕಲ್ಪಿಸಲ್ಪಟ್ಟ ಸಾರವುಳ್ಳ ಜಗತ್ಸಮೂಹಮಂ ಕಾಣದೆ ಇರುವನೆಂಬುದರ್ಥಂ॥೬॥ ಬಳಿಕದನೇನುಕಾರಣಂ ಕಾಣದಿರುವನೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮಾಂಡಬುದ್ಬುದೋದ್ಭೇದವಿಜೃಂಭೀ ತತ್ತ್ವ ವೀಚಿಮಾನ್
ಮಾಯಾಸಿಂಧುರ್ಲಯಂ ಯಾತಿ ಶಿವೈಕ್ಯ ಬಡಬಾನಲೇ॥

ಬ್ರಹ್ಮಾಂಡವೆಂಬ ಬುದ್ಬುದಗಳಾವಿರ್ಭಾವದಿಂ ಪೆಚ್ಚುತಿರ್ದ ಷಟ್ತ್ರಿಂಶತತ್ತ್ವಂಗಳೆಂಬ ತೆರೆಗಳುಳ್ಳ ಮಾಯಾಸಮುದ್ರಂ ಶಿವಲಿಂಗದೊಡತನದೇಕತ್ವವೆಂಬ ವಡಬಾಗ್ನಿಯಲ್ಲಿ ಲಯಮಂ ಪಡೆವುತ್ತಿಹುದು. ಆ ಕಾರಣದಿಂ ಪ್ರಪಂಚದರ್ಶನಮಿಲ್ಲ ಪ್ರಪಂಚಕ್ಕೆ ಮಾಯೆಯೆ ಉಪಾದಾನ ಕಾರಣಮಾದುದರಿಂ ತನ್ನಾಶಮಾಗಲಾಗಿ ಕಾರ್ಯದರ್ಶನಮಿಲ್ಲೆಂಬುದು ತಾತ್ಪರ್ಯಂ ॥೭॥ ಬಳಿಕದನೆ ವಿಸ್ತರಿಸುತಿರ್ದಪಂ.

7A

ಮಾಯಾಶಕ್ತಿತಿರೋಧಾನಾಚ್ಛಿವೇ ಭೇದವಿಕಲ್ಪನಾ
ಆತ್ಮನಸ್ತದ್ವಿನಾಶೇ ತು ನಾದ್ವೈತಾತ್ಕಿಂಚಿದಿಷ್ಯತೇ ॥

ಶಿವನಲ್ಲಿ ಮಾಯಾಶಕ್ತಿ ಪ್ರಸರಣದತ್ತಣಿಂ ಜೀವನಿಗೆ ಭೇದಜ್ಞಾನಮುಂಟಾಹದು ಆ ಮಾಯಾಪ್ರಸರಣಕೆ ನಾಶಮುಂಟಾಗಲಾಗಿ ಅದ್ವೈತದತ್ತಣಿಂ ಒಂದಿಷ್ಟಾದರೂ ಇಚ್ಛಾವಿಷಯವಾಗಿ ಮಾಡಲ್ಪಡುತ್ತಿರದೆಂಬುದರ್ಥಂ ॥೮॥ ಬಳಿಕ ಶಿವ ಜೀವರಿಗೆ ಪತಿ ಪಶು ರೂಪವಾದ ಭೇದಮುಂಟಾಗಿರುವುದರಿಂ ಚಿದ್ಭೇದವು ಇಲ್ಲವೆಂಬುದೆಂತೆಂಬಲ್ಲಿ ಅಹಮೇಕೋ ನ ಮೇ ಕಶ್ಚಿನ್ನಾಹಮನ್ಯಸ್ಯ ಕಸ್ಯಚಿತ್ ನ ತಂ ಪಶ್ಯಾಮಿ ಯಸ್ಯಾಹಂ ನ ತಂ ಪಶ್ಯಾಮಿ ಯೋ ಮಮ ಅಹಃ ಏಕೋನಮೇಕಶ್ಚಿಮನ್ಯಸ್ಯಚಿತ್ ನತಂ ಪಶ್ಯಾಮಿ ಯಸ್ಯಾಹಂ ನತಂ ಪಶ್ಯಾಮಿಯೋಮಮ ಎಂಬ ದೇವೀಕಾಲೋತ್ತರ ವಚನಾನುಸಾರದಿಂ ಶಿವಲಿಂಗೈಕ್ಯಂಗೆ ಪ್ರಸಿದ್ಧವಾದ ಶಿವಾದ್ವೈತವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಪಶುತ್ವಂ ಚ ಪತಿತ್ವಂ ಚ ಮಾಯಾಮೋಹವಿಕಲ್ಪಿತಮ್
ತಸ್ಮಿನ್ಪ್ರಲಯಮಾಪನ್ನೇ ಕಃ ಪಶುಃ ಕೋ ನು ವಾ ಪತಿಃ ॥

ಪಶುತ್ವವೂ ಪತಿತ್ವವೂ ಮಾಯಾರೂಪವಾದ ಅಜ್ಞಾನದಿಂದುಂಟಾಗಲ್ಪಟ್ಟದು. ಆ ಮಾಯೆ ನಷ್ಟವಾಗಲಾಗಿ ಪಶುವೂ ಇಲ್ಲ ಪತಿಯೂ ಇಲ್ಲವೆಂಬುದರ್ಥಂ ॥೯॥ ಬಳಿಕೀ ಸಂಸಾರಭೇದವಂ ಬಹುತ್ವವನಾಶ್ರೈಸಿರುವ ಸರ್ಪಸ್ವರೂಪವಾದ ಕಾರಣದಿಂ ಇದಕೇನೌಷಧಮೆಂಬಲ್ಲಿ ಪೇಳುತಿರ್ದಪಂ.

ಘೋರಸಂಸಾರಸರ್ಪಸ್ಯ ಭೇದವಲ್ಮೀಕಶಾಯಿನಃ
ಬಾಧಕಂ ಪರಮಾದ್ವೈತಭಾವನಾ ಪರಮೌಷಧಮ್ ॥

ಜಡಾಜಡಭೇದ ಜೀವಾಜೀವಭೇದ ಜೀವಜಡಭೇದ ಜೀವೇಶ್ವರಭೇದ ಜಡೇಶ್ವರ ಭೇದವೆಂಬ ಪಂಚವಿಧ ಭೇದ ವಿಶಿಷ್ಟವಾದ ಹುತ್ತದಲ್ಲಿ ಮಲಗಿರುವ ಜನನ ಮರಣಾದಿ ಮಹಾಭಯಂಕರವಾದ ಸಂಸಾರವೆಂಬ ಸರ್ಪಕ್ಕೆ ಘೃತಕೀಟನ್ಯಾಯದಿಂ ಜಡಚೇತನೈಕ್ಯ ಭಾವನೆಯೇ ಬಾಧಕಮಾದ ಪರಮೌಷಧಮೆಂಬುದರ್ಥಂ ॥೧೦॥ ಬಳಿಕೀ ಸಂಸಾರಭೇದ ಬುದ್ಧಿಯಿಂದುಂಟಾದ ಮಹಾಸಾಹಸಮಾದ ಕಾರಣದಿಂದಿನ್ನಾವ ಉಪಾಯದಿಂದಾವಾತಂ ದಾಟುವನೆಂಬಲ್ಲಿ ಪೇಳುತಿರ್ದಪಂ.

ಭೇದಬುದ್ಧಿಸಮುತ್ಪನ್ನಮಹಾಸಂಸಾರಸಾಗರಮ್
ಅದ್ವೈತಬುದ್ಧಿಪೋತೇನ ಸಮುತ್ತರತಿ ದೇಶಿಕಃ ॥

ಭೇದಬುದ್ಧಿಯಿಂದುಂಟಾದ ಮಹಾಸಂಸಾರಸಾಗರ ಸಮುದ್ರನು ಅದ್ವೈತ ಜ್ಞಾನವೆಂಬ ತೆಪ್ಪದಿಂ ಶಿವಲಿಂಗೈಕ್ಯದಿಂ ದಾಂಟುವನೆಂಬುದರ್ಥಂ ॥೧೧॥ ಬಳಿಕೀ ಸಂಸಾರಕಾಮವೆಂಬ ರಾಕ್ಷಸನ ಕ್ರಿಯೆಯನುಂಟುಮಾಡುವ ಕಾಳರಾತ್ರಿಯು ಇದೆಂತು ಕೆಡುವದೆಂಬಲ್ಲಿ ಪೇಳುತಿರ್ದಪಂ.

ಅಜ್ಞಾನತಿಮಿರೋದ್ರಿಕಾ ಕಾಮರಕ್ಷಃ ಕ್ರಿಯಾಕರೀ
ಸಂಸಾರಕಾಲರಾತ್ರಿಸ್ತು ನಶ್ಯೇದದ್ವೈತಭಾನುನಾ ॥

ಅಜ್ಞಾನವೆಂಬ ಕತ್ತಲೆಯಿಂದುನ್ನತವಾದಂಥಾದಾಗಿ ಕಾಮವೆಂಬ ರಾಕ್ಷಸನ ಕೃತ್ಯವ ಮಾಡುವಂಥಾ ಸಂಸಾರವೆಂಬ ಕಾಳರಾತ್ರಿಯು ಶಿವಾದ್ವೈತನೆಂಬ ಸೂರ್ಯನಿಂದ ಕೆಡವುದೆಂಬುದರ್ಥಂ ॥೧೨॥ ಬಳಿಕ ಪೇಳಿದರ್ಥವನುಪಸಂಹರಿಸುತಿರ್ದಪಂ.

ತಸ್ಮಾದದ್ವೈತಭಾವಸ್ಯ ಸದೃಶೋ ನಾಸ್ತಿ ಯೋಗಿನಾಮ್
ಉಪಾಯೋ ಘೋರಸಂಸಾರಮಹಾತಾಪನಿವೃತ್ತಯೇ ॥

ಅದು ಕಾರಣವಾಗಿ ಶಿವಯೋಗಿಗಳಾದವರಿಗೆ ಕ್ರೂರವಾದ ಸಂಸಾರದಲ್ಲಿ ತಾಪತ್ರಯನಿವೃತ್ತಿಗೋಸ್ಕರ, ಅದ್ವೈತಭಾವನೆಗೆ ಸಮಾನವಾದ ಉಪಾಯವಿಲ್ಲವೆಂಬುದರ್ಥಂ. ಬಳಿಕ ಶಿವಾದ್ವೈತಕ್ಕತಿಶಯಮಂ ಪೇಳಿ ಸೂತ್ರದ್ವಯದಿಂದೈಕ್ಯಸ್ಥಲಮಂ ಮುಗಿಸುತಿರ್ದಪಂ.

ಅದ್ವೈತಭಾವನಾಜಾತಂ ಕ್ಷಣಮಾತ್ರೇಽಪಿ ಯತ್ಸುಖಂ
ತತ್ಸುಖಂ ಕೋಟಿವರ್ಷೇಣ ಪ್ರಾಪ್ಯತೇ ನೈವ ಭೋಗಿಭಿಃ ॥

ಒಂದು ಕ್ಷಣಮಾತ್ರದಲ್ಲಿ ಶಿವಾದ್ವೈತಭಾವನೆಯಿಂದುಂಟಾದ ಸೌಖ್ಯಮಂ ಕೋಟಿ ವರ್ಷದಿಂದಾದರೂ ರಾಜ್ಯಭೋಗಿಗಳಾದ ಧರಣಿಪತಿಗಳೂ ಪಡೆಯಲಾರರೆಂಬುದರ್ಥಂ ॥೧೪॥ ಬಳಿಕ ಆ ಆನಂದವೆ ಮುಕ್ತಿಯೆಂದು ಪೇಳುತಿರ್ದಪಂ.

ಚಿತ್ತವೃತ್ತಿಸಮಾಲೀನಜಗತಃ ಶಿವಯೋಗಿನಃ
ಶಿವಾನಂದಪರಿಸ್ಫೂರ್ತಿರ್ಮುಕ್ತಿರಿತ್ಯಭಿಧೀಯತೇ ॥

ಶಿವಾದ್ವೈತಭಾವನೆಯಿಂ ಚಿತ್ತವೃತ್ತಿಯಲ್ಲಿ ಅಡಗಲ್ಪಟ್ಟ ವಿಶ್ವವುಳ್ಳ ಶಿವಯೋಗಿಗೆ ಶಿವಾನಂದದಾವಿರ್ಭಾವವೆ ಮುಕ್ತಿಯೆಂದು ಪೇಳಲ್ಪಡುತ್ತಿಹದೆಂಬುದರ್ಥಂ. ॥೧೫॥

## ೪೨. ಸರ್ವಾಚಾರಸಂಪತ್ತಿಸ್ಥಲ

ಬಳಿಕ ಯಥಾ ರವಿಸ್ಸರ್ವರಸಾನ್ ಪ್ರಭುಂಕ್ತೇ ಹುತಾಶನಶ್ಚಾಪಿ ಹಿ ಸರ್ವಭಕ್ಷಕಃ ತಥೈವ ಯೋಗೀ ವಿಷಯಾನ್ ಪ್ರಭುಂಕ್ತೇ ನ ಲಿಪ್ಯತೇ ಕರ್ಮ ಶುಭಾಶುಭೈಶ್ಚ ಎಂಬ ಶಿವರಹಸ್ಯ ವಚನಾನುಸಾರದಿಂ ಲಿಂಗೈಕ್ಯನಿಗೆ ಸದಾಚಾರಸಂಪತ್ತಿಯಂ ದ್ವಾದಶಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಶಿವೈಕಭಾವನಾಪನ್ನಶಿವತತ್ತ್ವೋ ದೇಹವಾನಪಿ
ದೇಶಿಕೋ ಹಿ ನ ಲಿಪ್ಯೇತ ಸ್ವಾಚಾರೈಸ್ಸೂತಕಾದಿಭಿಃ ॥

ಶಿವನೊಡತನದೇಕಭಾವನೆಯತ್ತಣಿಂ ಪಡೆಯಲ್ಪಟ್ಟ ಶಿವತತ್ತ್ವವುಳ್ಳ ಶಿವಲಿಂಗೈಕ್ಯಂ ದೇಹವುಳ್ಳವನಾದರೂ ಜೀವಾತ್ಮಕನಾಗಿ ಸೂತಕ ಮೊದಲಾದ ತನ್ನ ಸ್ವೈರಾಚಾರಂಗಳಿಂ ಮುಟ್ಟಲ್ಪಡನೆಂಬುದರ್ಥಂ ॥೧೬॥ ಅದೇನು ಕಾರಣವೆಂಬಲ್ಲಿ ಪೇಳುತಿರ್ದಪಂ.

ಶಿವಾದ್ವೈತಪರಿಜ್ಞಾನೇ ಸ್ಥಿತೇ ಸತಿ ಮನಸ್ವಿನಾಮ್
ಕರ್ಮಣಾ ಕಿಂ ನು ಭಾವ್ಯಂ ಸ್ಯಾದಕೃತೇನ ಕೃತೇನ ವಾ ॥

ಆ ಲಿಂಗೈಕ್ಯನಿಷ್ಠರಿಗೆ ಶಿವಾದ್ವೈತಜ್ಞಾನಂ ಸ್ಥಿರಮಾಗುತ್ತಿರಲಾಗಿ ಮಾಡಬಾರದ ದುಷ್ಕರ್ಮದಿಂದಲೂ ಮಾಡಬೇಕಾದ ಸತ್ಕರ್ಮದಿಂದಲೂ ಏನೂ ಆಗದೆಂಬುದರ್ಥಂ ॥೧೭॥ ಅದೇತರಿಂದ ಎಂಬಲ್ಲಿ ಪೇಳುತಿರ್ದಪಂ.

ಶಂಭೋರೇಕತ್ವಭಾವೇನ ಸರ್ವತ್ರ ಸಮದರ್ಶನಃ
ಕುರ್ವನ್ನಪಿ ಮಹಾಕರ್ಮ ನ ತತ್ಫಲಮವಾಪ್ನುಯಾತ್ ॥

ಮಣ್ಣಹೆಂಟೆ ಕಲ್ಲು ಕಾಂಚನ ಕಾಷ್ಠಾದಿಗಳಲ್ಲಿ ಸಮಾನವಾದ ಬುದ್ಧಿಯುಳ್ಳ ಶಿವಲಿಂಗೈಕ್ಯನು ಶಿವನೊಡನದೇಕಭಾವದಿಂ ಪುಣ್ಯಪಾಪವಾದ ಕರ್ಮಂಗಳಂ ಮಾಡುತ್ತಿದ್ದರೂ ಸುಖವನು ಶಿವಮಯವಾಗಿ ಕಾಬಕಾರಣದಿಂದ ಫಲವ ಪಡೆಯನು. ಕರ್ಮಶೇಷ ವಿಲ್ಲವೆಂಬುದರ್ಥಂ ॥೧೮॥ ಬಳಿಕ ಸರ್ವತ್ರ ಸಮಾನಬುದ್ಧಿಯುಳ್ಳವನೆಂಬುದನೆ ವಿಶೇಷಿಸುತಿರ್ದಪಂ.

ಸುಕೃತೀ ದುಷ್ಕೃತೀ ವ್ಯಾಪಿ ಬ್ರಾಹ್ಮಣೋವಾಂತ್ಯಜೋsಪಿ ವಾ
ಶಿವೈಕಭಾವಯುಕ್ತಾನಾಂ ಸದೃಶೋ ಭವತಿ ಧ್ರುವಮ್ ॥

ಸರ್ವತ್ರ ಶಿವಾಭೇದಜ್ಞಾನವುಳ್ಳ ಶಿವಲಿಂಗೈಕ್ಯರಿಗೆ ಪುಣ್ಯಾತ್ಮನಾಗಲಿ, ಪಾಪಾತ್ಮನಾಗಲಿ, ಚಂಡಾಲನಾಗಲಿ, ಶ್ವಪಚನಾಗಲಿ ಸಮಾನನೆ ಸರಿಯೆಂಬುದು ನಿಶ್ಚಯಂ ॥೧೯॥ ಬಳಿಕ ಶಿವಜ್ಞಾನಿಗಳಿಗಾದರೂ ವರ್ಣಾಶ್ರಮಪ್ರಾಪ್ತಧರ್ಮಂಗಳೆಂತು ಬಿಡಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ವರ್ಣಾಶ್ರಮಸದಾಚಾರೈಃ ಜ್ಞಾನಿನಾಂ ಕಿಂ ಪ್ರಯೋಜನಮ್
ಲೌಕಿಕಸ್ತು ಸದಾಚಾರಃ ಫಲಾಭಾವೇವಿರ್ಭಾವ್ಯತೇ ॥

ಬ್ರಾಹ್ಮಣಾದಿವರ್ಣ ಬ್ರಹ್ಮಚರ್ಯಾದ್ಯಾಶ್ರಮಂಗಳಲ್ಲಿ ಪ್ರಾಪ್ತವಾದ ಸಂಧ್ಯಾವಂದನಾದಿ ಸದಾಚಾರಂಗಳಿಂ ಶಿವಜ್ಞಾನಿಗಳಿಗೇನು ಪ್ರಯೋಜನವಿಲ್ಲ. ಅದೇತಕೆಂದಡೆ ಆ ನಿತ್ಯ ನೈಮಿತ್ತಿಕ ಸದಾಚಾರಂಗಳು ಫಲವಿಲ್ಲದೆ ವಿಧಿಸಲ್ಪಡುತ್ತಿಹವೆಂಬ ಕಾರಣದಿಂದೆಂಬುದರ್ಥಂ ॥೨೦॥ ಬಳಿಕ ಶಿವಜ್ಞಾನಿಗಳಿಗೂ ಶರೀರಸಂಬಂಧ ಮುಂಟಾಗಿರುವ ಕಾರಣದಿಂದಾ ನಿತ್ಯ ನೈಮಿತ್ತಕ ಕರ್ಮಂಗಳೆಂತು ಬಿಡಲ್ತಕ್ಕವು. ಬಿಟ್ಟರೆ ಪಾಪಶ್ರವಣಮುಂಟಾಗಿರುವದೆಂಬಲ್ಲಿ ಪೇಳುತಿರ್ದಪಂ.

ನಿರ್ದಗ್ಧಕರ್ಮಬೀಜಸ್ಯ ನಿರ್ಮಲಜ್ಞಾನವಹ್ನಿನಾ
ದೇಹಿವದ್ಭಾಸಮಾನಸ್ಯ ದೇಹಯಾತ್ರಾ ತು ಲೌಕಿಕೀ ॥

ನಿರ್ಮಲವಾದ ಶಿವಜ್ಞಾನಾಗ್ನಿಯಿಂ ಪುನರುತ್ಪತ್ತಿ ಶಂಕೆಯಿಲ್ಲದಂತೆ ಘಟ್ಟಿಯಾಗಿ ಸುಡಲ್ಪಟ್ಟ ಪುಣ್ಯ ಪಾಪರೂಪವಾದ ಕರ್ಮದ ಬೀಜವುಳ್ಳ ಶಿವಜ್ಞಾನಿಗೆ ಪ್ರತ್ಯವಾಯ ಸಂಬಂಧವಿಲ್ಲದೆ ದಗ್ಧಪಟನ್ಯಾಯದಿಂ ಶರೀರವುಳ್ಳವನಂತೆ ತೋರುವ ಶಿವಜ್ಞಾನಿಗೆ ಕರಚರಣ ಸಂಚಾಲನಾದಿ ವ್ಯವಹಾರವು ವಿದೇಹಕೈವಲ್ಯಪರ್ಯಂತರವಾಗಿ ಅನುವರ್ತಿಸುತ್ತಿಹ ಕಾರಣದಿಂ ಸ್ಥಿರವಲ್ಲಮೆಂಬುದರ್ಥಂ ॥೨೧॥ ಬಳಿಕ ಅಥ ತಸ್ಯ ತಾವದೇವ ಚಿರಂ

ವಿಮೋಕ್ಷ್ಯೇ ಅಥ ತಸ್ಯ ಪುತ್ರ ದಾಯಮುಪಯಂತಿ ಸುಹೃದಃ ಸಾಧುಕೃತ್ಯಾಂ ದ್ವಿಷಂತಃ ಪಾಪಕೃತ್ಯಾಮ್ ಯಥಾ ಪುಷ್ಕರ ಪಲಾಶಮಾಪ್ಪೋ ನ ಶ್ಲಿಷ್ಯಂತೇ ಏವಂ ವಿಧಿ ಹಿ ಪಾಪಂ ಕರ್ಮ ನ ಶ್ಲಿಷ್ಯಂತೇ ಸ ಉತ್ತಮಃ ಪುರುಷಃ ಸ ತತ್ರ ಪರ್ಯೇತಿ ಎಂಬ ಛಾಂದೋಗ್ಯಶ್ರುತ್ಯನು ಸಾರದಿಂ ಪೇಳುತಿರ್ದಪಂ.

ಶಿವಜ್ಞಾನಸಮಾಪನ್ನಸ್ಥಿರವೈರಾಗ್ಯಲಕ್ಷಣಃ
ಸ್ವಕರ್ಮಣಾ ನ ಲಿಪ್ಯೇತ ಪದ್ಮಪತ್ರಮಿವಾಂಭಸಾ ॥

ಜ್ಞಾನದಿಂ ಪಡೆಯಲ್ಪಟ್ಟ ದೃಢವಾದ ವೈರಾಗ್ಯದ ಚಿಹ್ನೆಯುನ್ನುಳ್ಳ ಶಿವಲಿಂಗೈಕ್ಯನು ಜಲದೊಳಗಣ ತಾವರೆಯಂತೆ ತನ್ನ ಸ್ವೇಚ್ಛೆದಿಂ ಲೇಪಿಸನೆಂಬುದರ್ಥಂ ॥೨೨॥ ಬಳಿಕ ಯಥಾ ವಾಯುಸ್ಸುಶೀಘ್ರೋsಪಿ ಮುಕ್ತಾಕಾಶಂ ನ ಗಚ್ಛತಿ ಎಂಬ ವಿಶ್ವಾಸಕಾರಿಕಾನುಸಾರದಿಂ ಶಿವಲಿಂಗನಿಷ್ಠನಿಗೆ ಸಕಲಕ್ರಿಯೆಯೂ ಶಿವಲಿಂಗಪೂಜಾರೂಪವೆ ಸರಿಯೆಂಬುದನದೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಗಚ್ಛನ್ ತಿಷ್ಠನ್ ಸ್ವಪನ್ವಾಪಿ ಜಾಗ್ರನ್ವಾಪಿ ಮಹಾಮತಿಃ
ಶಿವಜ್ಞಾನಸಮಾಯೋಗಾಚ್ಛಿವಪೂಜಾರತಸ್ಸದಾ ॥

ಮಹಾಬುದ್ಧಿಯುಳ್ಳ ಶಿವಲಿಂಗೈಕ್ಯನು ಗಮನಸಮಯದಲ್ಲಿಯೂ ಎಲ್ಲಾಗಳೂ ಶಿವಜ್ಞಾನಸಂಬಂಧದತ್ತಣಿಂ ಶಿವಲಿಂಗಪೂಜಾನಿಷ್ಠನೆ ಸರಿಯೆಂಬುದರ್ಥಂ ॥೨೩॥ ಬಳಿಕ ವಿಷಯದರ್ಶನ ಸಮಯದಲ್ಲೆಂತು ಶಿವಾನುಸಂಧಾನವೆಂಬಲ್ಲಿ ಪೇಳುತಿರ್ದಪಂ.

ಯದ್ಯತ್ಪಶ್ಯತಿ ಸಾಮೋದಂ ವಸ್ತು ಲೋಕೇಷು ದೇಶಿಕಃ
ಶಿವದರ್ಶನಸಂಪತ್ತಿಸ್ತತ್ರ ತತ್ರ ಮಹಾತ್ಮನಃ ॥

ಶಿವಲಿಂಗೈಕ್ಯನು ಲೋಕದಲ್ಲಿ ಯಾವ ಯಾವ ಘಟಾದಿವಸ್ತುವ ಪ್ರೀತಿಯುಕ್ತನಾಗಿ ನೋಡುತ್ತಿಹನು ಆಯಾವಸ್ತುವಿನಲ್ಲಿ ಆ ಮಹಾತ್ಮಂಗೆ ಶಿವನಿಂದನ್ಯವಾದ ಪದಾರ್ಥವಿಲ್ಲದ ಕಾರಣದಿಂ ಚಿದ್ರೂಪವೆಂಬ ಬುದ್ಧಿಯೆಯಹುದೆಂಬುದರ್ಥಂ ॥೨೪॥ ಬಳಿಕ ಆತ್ಮಾ ತ್ವಂ ಗಿರಿಜಾ ಮತಿಃ ಸಹಚರಾಃ ಪ್ರಾಣಾಃ ಶರೀರಂ ಗೃಹಮ್ ಪೂಜಾ ತೇ ವಿಷಯೋಪ ಭೋಗರಚನಾ ನಿದ್ರಾ ಸಮಾಧಿ ಸ್ಥಿತಿಃ ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರೋ ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್ ಎಂಬ ಅಭಿಯುಕ್ತ ವಚನಾನುಸಾರದಿಂ ತ್ರಿಕರಣಶುದ್ಧ ಶಿವಲಿಂಗಪೂಜೋಪಚಾರಮಂ ಮೂರುಸೂತ್ರಂಗಳಿಂ ಪೇಳುವಾತನಾಗಿ ಆಚಾರಸಂಪತ್ತಿ ಸ್ಥಲಮಂ ಮುಗಿಸುತ್ತಿರ್ದಪಂ.

ಯದ್ಯಚ್ಚಿಂತಯತೇ ಯೋಗೀ ಮನಸಾ ಶುದ್ಧಭಾವನಃ
ತತ್ತಚ್ಛಿವಮಯತ್ವೇನ ಶಿವಧ್ಯಾನಮುದಾಹೃತಮ್ ॥

ನಿರ್ಮಲವಾದ ಭಾವನೆಯುಳ್ಳ ಶಿವಯೋಗಿಶ್ವರಂ ಮನಸ್ಸಿನಿಂದ ಯಾವ ಯಾವದ ಚಿಂತಿಸುತ್ತಿಹನು ಅದಷ್ಟೂ ಶಿವಮಯವು ಆಹತನದಿಂ ಶಿವಧ್ಯಾನವೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೨೫॥

ಯತ್ಕಿಂಚಿದ್ಭಾಷಿತಂ ಲೋಕೇ ಸ್ವೇಚ್ಛಯಾ ಶಿವಯೋಗಿನಾ
ಶಿವಸ್ತೋತ್ರಮಿದಂ ಸರ್ವಂ ಯಸ್ಮಾತ್ಸರ್ವಾತ್ಮಕಃ ಶಿವಃ ॥

ಯಾವ ಕಾರಣದಿಂ ಶಿವನು ಸರ್ವಾತ್ಮಕನು ಆ ಕಾರಣದಿಂ ಲೋಕದಲ್ಲಿ ಶಿವಯೋಗಿಯಿಂದೇನು ಒಂದಿಷ್ಟು ನುಡಿಯಲ್ಪಟ್ಟಿತ್ತು. ಆ ಇದೆಲ್ಲಂ ಶಿವನವೆ ಸರಿಯೆಂಬುದರ್ಥಂ ॥೨೭॥

ಯಾ ಯಾ ಚೇಷ್ಟಾ ಸಮುತ್ಪನ್ನಾ ಜಾಯತೇ ಶಿವಯೋಗಿನಾಮ್
ಸಾ ಸಾ ಪೂಜಾ ಮಹೇಶಸ್ಯ ಸರ್ವದಾ ತದ್ಗತಾತ್ಮನಾ ॥

ಶಿವಲಿಂಗೈಕ್ಯರಿಗೆ ಯಾವಯಾವ ಕ್ರಿಯೆಯುಂಟಾಗುತ್ತಿಹುದು ಆಕ್ರಿಯೆಯೆಲ್ಲಂ ಶಿವಲಿಂಗದಲ್ಲಿ ಸಮಾನಸಮರಸಭಾವದಿಂ ಪ್ರವೇಶಿಸಲ್ಪಟ್ಟ ಸ್ವರೂಪಮುಳ್ಳ ಆ ಶಿವಲಿಂಗೈಕ್ಯರಿಗೆ ಎಲ್ಲಾಗಳೂ ಶಿವಲಿಂಗಪೂಜೆಯಂಬುದರ್ಥಂ ॥೨೭॥

## ೪೩. ಏಕಭಾಜನಸ್ಥಲ

ಬಳಿಕ ಪದವ್ಯಯೇ ಸರ್ವ ಯೇಕೀ ಭವಂತಿ ಎಂಬ ಮುಂಡಕೋಪನಿಷದ್ವಚನಾನುಸಾರದಿಂ ಸರ್ವಾಚಾರಸಂಪತ್ತಿಯುಳ್ಳ ಶಿವಲಿಂಗೈಕ್ಯಂಗೆ ಏಕಭಾಜನಸ್ಥಲವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ವಿಶ್ವಂ ಶಿವಮಯಂ ಚೇತಿ ಸದಾ ಭಾವಯತೋ ಧಿಯಾ
ಶಿವೈಕ್ಯಭಾಜನಾತ್ಮ ತದೇಕಭಾಜನಮುಚ್ಯತೇ ॥

ಸರ್ವೋ ವೈ ರುದ್ರಃ ಹೀಗೆಂಬ ಶ್ರುತಿಯಿಂ ಸಕಲ ವಿಶ್ವವೂ ಶಿವಲಿಂಗಮಯವೆಂದು ಪರಿಷ್ಟಬುದ್ಧಿಯಿಂ ಸದಾ ಭಾವಿಸುವ ಶಿವಲಿಂಗೈಕ್ಯನಿಗೆ ಶಿವನೊಬ್ಬನೆ ಆಶ್ರಯವಾಹತನ ದಿಂದೇಕಭಾಜನಸ್ಥಲವೆಂದು ಪೇಳಲ್ಪಡುತ್ತಿಹದೆಂಬುದರ್ಥಂ ॥೨೮॥ ಬಳಿಕಿದರಿಂದೇನಾ ಹದೆಂಬಲ್ಲಿ ಪೇಳುತಿರ್ದಪಂ.

ಸ್ವಸ್ಯ ಸರ್ವಸ್ಯ ಲೋಕಸ್ಯ ಶಿವಸ್ಯಾದ್ವೈತದರ್ಶನಾತ್
ಏಕಭಾಜನಯೋಗೇನ ಪ್ರಸಾದೈಕ್ಯಮತಿರ್ಭವೇತ್ ॥

ತನಗೂ ಸಕಲಜನರಿಗೂ ನಾನೆಂಬ ಚಿದೈಕ್ಯಮುಂಟಪ್ಪುದತ್ತಣಿಂದೇಕಕೂಟ ವಾಹತನದಿಂ ಶಿವಪ್ರಸಾದವೆ ತನ್ನ ಪ್ರಸಾದವು ತನ್ನ ಪ್ರಸಾದವೆ ಶಿವನ ಪ್ರಸಾದವು ಅದೇ ತನ್ನಿಂದನ್ಯನಂತೆ ತೋರುವ ಶಿವಭಕ್ತನ ಪ್ರಸಾದವೆಂದು ಪ್ರಸಾದೈಕ್ಯಬುದ್ಧಿಯುಂಟಹ ಕಾರಣದಿಂ ಚರಮೂರ್ತಿಪಾದೋದಕ ಪ್ರಸಾದಂಗಳು ಶಿವನಿಗೆ ಯೋಗ್ಯವಾದಂಥಾದೆಂಬುದು ಸೂಚಿಸಲ್ಪಟ್ಟಿತ್ತೆಂಬುದರ್ಥಂ ॥೨೯॥ ಬಳಿಕ ಶಿವನಿಗೂ ವಿಶ್ವಕ್ಕೂ ಐಕ್ಯಮಾದಡವಕ್ಕೇನು ಸ್ಥಿತಿಯೆಂಬಲ್ಲಿ ಪೇಳುತಿರ್ದಪಂ.

ಶಿವೇ ವಿಶ್ವಮಿದಂ ಸರ್ವಂ ಶಿವಸ್ಸರ್ವತ್ರ ಭಾಸತೇ
ಆಧಾರಾಧೇಯಭಾವೇನ ಶಿವಸ್ಯ ಜಗತಸ್ಥಿತಿಃ ॥

ಶಿವನಲ್ಲಿ ವಿಶ್ವವು ವಿಶ್ವದಲ್ಲಿ ಶಿವನೆಂದು ಬೀಜಾಂಕುರನ್ಯಾಯದಿಂದಾಧಾರಾಧೇಯ ಭಾವಸಂಪದದಿಂ ಸಮರಸಭಾವದಿಂ ಶಿವನಿಗೂ ಜಗತ್ತಿಗೂ ಸ್ಥಿತಿಯೆಂಬುದರ್ಥಂ ॥೩೦॥ ಬಳಿಕೀಪ್ರಕಾರದಿಂ ಚಿದೇಕಭಾಜನತ್ವಮಂ ಪಡೆದಾತಂಗೆ ಮಾಯಿಕಭೇದದಿಂ ಪ್ರಯೋಜನ ವಿಲ್ಲೆಂದು ಪ್ರತಿಪಾದಿಸುತಿರ್ದಪಂ.

ಚಿದೇಕಭಾಜನಂ ಯಸ್ಯ ಚಿತ್ತವೃತ್ತೇಃ ಶಿವಾತ್ಮಕಮ್
ನಾನ್ಯತ್ತಸ್ಯ ಕಿಮೇತೇನ ಮಾಯಾಮೂಲೇನ ವಸ್ತುನಾ ॥

ಯಾವನಾನೊರ್ವ ಲಿಂಗೈಕ್ಯನು ಮನೋವ್ಯಾಪಾರಕ್ಕೆ ಮನೋವ್ಯಾಪಾರರೂಪವಾದ ಜ್ಞಪ್ತಿಗೆ ಶಿವಸ್ವರೂಪವಾದ ಏಕಭಾಜನವಾಗಿರುವುದು ಮತ್ತೊಂದಿಲ್ಲವು. ಆ ಲಿಂಗೈಕ್ಯಂಗೆ ಮಾಯಾಕಲ್ಪಿತಭೇದದಿಂದೇನು ಪ್ರಯೋಜನಂ ಏನೂ ಪ್ರಯೋಜನವಿಲ್ಲವೆಂಬುದರ್ಥಂ ॥೩೧॥ ಬಳಿಕ ವಿಶ್ವಮೆಂತು ಶಿವಾತ್ಮಕವೆಂಬಲ್ಲಿ ಪೇಳುತಿರ್ದಪಂ.

ಚಿತ್ಪ್ರಕಾಶಯತೇ ವಿಶ್ವಂ ತದ್ವಿನಾ ನಾಸ್ತಿ ವಸ್ತು ಹಿ
ಚಿದೇಕನಿಷ್ಠಚಿತ್ತಾನಾಂ ಕಿಂ ಮಾಯಾಪರಿಕಲ್ಪಿತೈಃ ॥

ಘಟಾದಿಗಳಿಂ ಕುರುಹಿಡಲ್ಪಟ್ಟ ವಿಶ್ವಮಂ ಚಿತ್ತ ಪ್ರಕಾಶಿಸುತ್ತಿಹದು. ಆ ಕಾರಣದಿಂ ಚಿತ್ತ ಹೊರತಾಗಿ ವಿಶ್ವವಿಲ್ಲ ಉಂಟಾದರದು ಚಿತ್ತಿಗೆ ಹೊರಗಾಗಿ ತೋರದೆ ಹೋಗಬೇಕೆಂದು ಚಿದೇಕನಿಷ್ಠವಾದ ಚಿತ್ತವೃತ್ತಿಯುಳ್ಳವರ್ಗೆ ಮಾಯಾಕಲ್ಪಿತ ಪಂಚವಿಧಭೇದಗಳಿಂದೇನು ಪ್ರಯೋಜನಂ ಏನೂ ಪ್ರಯೋಜನವಿಲ್ಲವೆಂಬುದರ್ಥಂ ॥ ೩೨॥ ಬಳಿಕ ಏಕಭಾಜನ ಸ್ಥಲಮಂ ಮುಗಿಸುತಿರ್ದಪಂ.

ವೃತ್ತಿಶೂನ್ಯೇ ಸ್ವಹೃದಯೇ ಶಿವಲೀನೇ ನಿರಾಕುಲೇ
ಯಸ್ಸದಾ ವರ್ತತೇ ಯೋಗೀ ಸ ಮುಕ್ತೋ ನಾತ್ರ ಸಂಶಯಃ ॥

ಯಾವನೊಬ್ಬ ಶಿವಯೋಗಿಯು ವ್ಯಾಪಾರ ನಿಂತು ವ್ಯಾಕುಲವಿಲ್ಲದೆ ಶಿವನಲ್ಲಿ ಅಡಗಿದ ತನ್ನ ಹೃದಯದಲ್ಲಿ ನಿರುತರವು ಇರುವನು ಆತಂ ಜೀವನ್ಮುಕ್ತನೆ ಸರಿ ಸಂದೇಹವಿಲ್ಲ ವೆಂಬುದರ್ಥಂ ॥ ೩೩॥

## ೪೪. ಸಹಭೋಜನಸ್ಥಲ

ಬಳಿಕ ಅಗ್ರಾಹ್ಯಮಗ್ರಾಹ್ಯೇಣ ವಾಯುಂ ವಾಯಾವ್ಯೇನ ಸೋಮಂ ಸಾಮ್ಯೇ ನ ಗ್ರಸತಿ ಸ್ವೇನ ತೇಜಸಾ ತಸ್ಮಾದುಪಸಂಹರ್ತೇ ಮಹಾಗ್ರಾಸಾಯ ವೈ ನಮೋ ನಮಃ ಹೀಗೆಂಬ ಅಥರ್ವಶ್ರುತ್ಯನುಸಾರದಿಂದೇಕಭಾಜನನಿಷ್ಠನಿಗೆ ಸಹಭೋಜನಸ್ಥಲಮಂ ಪತ್ತು ಸೂತ್ರಂಗಳಿಂ ನಿರೂಪಿಸುತಿರ್ದಪಂ.

ಗುರೋಶ್ಶಿವಸ್ಯ ಶಿಷ್ಯಸ್ಯ ಸ್ವಸ್ವರೂಪತಯಾ ಸ್ಮೃತಿಃ
ಸಹಭೋಜನಮಾಖ್ಯಾತಂ ಸರ್ವಗ್ರಾಸಾತ್ಮಭಾವತಃ ॥

ಶ್ರೀ ಗುರುವಿಗೂ ಶಿವಲಿಂಗಕ್ಕೂ ಶಿಷ್ಯನಿಗೂ ಅಹಮೆಂದೇಕರೂಪತ್ವಮುಂಟಾಗಿ ಅದೆಯೆಂಬಸ್ಮೃತಿಯು ಘಟಮಯನಿಂ ತಿಳಿಯಲ್ಪಟ್ಟಿತ್ತು, ಚೈತ್ತನೂಯಸ್ಮಂ ತಿಳಿಯಲ್ಪಟ್ಟನೆಂಬ

ವಿಶ್ವಭೇದಮಂ ಗ್ರಹಿಸುವಾತ್ಮರೂಪನಾಹತನದಿಂ ಪೂರ್ವಾನುಭೂತ ಪದಾರ್ಥಕ್ಕೆ ಮರಳಿ ಸ್ವಾತ್ಮವಿಶ್ರಾಂತಿಯಹತನದಿಂ ಪರಾಮರ್ಶನರೂಪವಾದ ಸಹಭೋಜನಮೆಂಬುದರ್ಥಂ ||೩೪|| ಬಳಿಕ ನಿಷ್ಕರ್ಷಮಂ ಪೇಳುತಿರ್ದಪಂ.

ಶಿವಂ ವಿಶ್ವಂ ಗುರುಂ ಸಾಕ್ಷಾದ್ಯೋಜಯೇನ್ನಿತ್ಯಮಾತ್ಮನಿ
ಏಕತ್ವೇನ ಚಿದಾಕಾರೇ ತದಿದಂ ಸಹಭೋಜನಮ್ ||

ಅಸ್ಮದ್ರೂಪಕ್ಕೆ ವ್ಯತಿರಿಕ್ತವಲ್ಲದಂಥಾದವನಾಗಿ ಎಲ್ಲಾಗಳು ಪರಾಮರ್ಶಗೈವುದುಂಟು ಆಯಿದ ಸಹಭೋಜನವೆಂಬುದರ್ಥಂ ||೩೫|| ಇಲ್ಲಿ ವಿಶ್ವಮಿದಂತಾಕಾರದಿಂ ತೋರುವ ಕಾರಣದಿಂ ಜಡಮೆಂತು ಅಸ್ಮದ್ರೂಪದಿಂ ಪರಾಮರ್ಶಮಂ ಮಾಡಲ್ತಕ್ಕದೆಂದು ಶಂಕಿಸಲಾಗದು. ಅದು ಸ್ಮೃತ್ಯನುಸಂಧಾನುಪಪತ್ತಿಯಿಂ ಸಂಸ್ಕಾರಮುಖದಿಂ ಸ್ವಾತ್ಮಲೀನವಾಗಿರುವದೆಂಬ ಕಾರಣದಿಂ ಬಳಿಕದರಿಂದಲೂ ನಿಷ್ಕರ್ಮಮಂ ಪೇಳುತಿರ್ದಪಂ.

ಅಯಂ ಶಿವೋ ಗುರುಶ್ಚೈಷ ಜಗದೇತಚ್ಚರಾಚರಮ್
ಅಹಂ ಚೇತಿ ಮತಿರ್ಯಸ್ಯ ನಾಸ್ತ್ಯಸೌ ವಿಶ್ವಭೋಜಕಃ ||

ಈತಂ ಶಿವಂ ಈತಂ ಗುರುಸ್ವಾಮಿ ಇದು ಸ್ಥಾವರಜಂಗಮಾತ್ಮಕವಾದ ವಿಶ್ವಂ ನಾನು ಒಬ್ಬಂ ಹೀಗೆಂಬ ಭೇದಬುದ್ಧಿ ಯಾವಾತಂಗಿಲ್ಲಂ ಆ ಶಿವಲಿಂಗೈಕ್ಯಂ ಜಗದ್ಭೇದ ಭಕ್ಷಕನೆಂಬುದರ್ಥಂ ||೩೬|| ಬಳಿಕಿವರಿಂದಲೂ ನಿಷ್ಕರ್ಮಮಂ ಪೇಳುತಿರ್ದಪಂ.

ಅಹಂ ಭೃತ್ಯಶ್ಶಿವಸ್ವಾಮಿ ಶಿಷ್ಯೋಽಹಂ ಗುರುರೇವ ವೈ
ಇತಿ ಯಸ್ಯ ಮತಿರ್ನಾಸ್ತಿ ಸ ಚಾದ್ವೈತಪದೇ ಸ್ಥಿತಃ ||

ತಾನು ಸೇವಕಂ ಶಿವ ಕರ್ತಂ, ತಾನು ಶಿಷ್ಯಂ ಈತ ಗುರುವೆಂದು ಯಾವಾತಂಗೆ ಭೇದಬುದ್ಧಿಯುಂಟಾಗಿರದು ಆ ಶಿವಲಿಂಗೈಕ್ಯಂ ವಿಶ್ವಭೇದಮಂ ನುಂಗುವ ಶಿವಾದ್ವೈತ ಸ್ಥಾನದಲ್ಲಿರುವನೆಂಬುದರ್ಥಂ ||೩೭|| ಬಳಿಕೀ ಪ್ರಕಾರವಾದ ಸಹಭೋಜನಸಂಪನ್ನನೆ ವಿಶ್ವಹೋಮಿಯೆಂದು ನಿರೂಪಿಸುತಿರ್ದಪಂ.

ಪರಾಹಂತಾಮಯೇ ಸ್ವಾತ್ಮಪಾವಕೇ ವಿಶ್ವಭಾಸ್ವತಿ
ಇದಂತಾ ಹವ್ಯಹೋಮೇನ ವಿಶ್ವೋಽಹೋಮೀತಿ ಕಥ್ಯತೇ ||

ವಿಶ್ವಮಂ ಬೆಳಗುವ ವಿಶ್ವದತ್ತಣಿಂದುತ್ಕೃಷ್ಟಮಾದ ಮೂಲಾಹಂಕಾರಮಯವಾದ ಸ್ವಾತ್ಮಾಗ್ನಿಯಲ್ಲಿ ಇದ್ದಂಥಾ ರೂಪದ ನಾನಾ ದ್ರವ್ಯಹೋಮದಿಂ ವಿಶ್ವಹೋಮಿಯಂಬುದರ್ಥಂ ||೩೮|| ಬಳಿಕಾ ಪರಾಹಂತೆ ಯಾವುದೆಂಬಲ್ಲಿ ಪೇಳುತಿರ್ದಪಂ.

ಅಹಂ ಶಿವೋ ಗುರುಶ್ಚಾಹಮಹಂ ವಿಶ್ವಂ ಚರಾಚರಂ
ಯಯಾ ವಿಜ್ಞಾಯತೇ ಸಮ್ಯಕ್ ಪೂರ್ಣಾಹಂತೇತಿ ಸಾ ಸ್ಮೃತಾ ||

ನಾನು ಶಿವನು ನಾನು ಗುರು, ನಾನು ಚರಾಚರರೂಪವಾದ ಜಗತ್ತು ಎಂದು ಯಾವ ಚಿತಿಯಂ ಪೇಳಲ್ಪಡುವುದು ಆ ಚಿತಿಯು ಪ್ರತ್ಯವಮರ್ಶಾತ್ಮಾಸಾ ಚಿತಿಃ ಸರಸಾವಾಹಿನಿ ಪರಾವಾಗ್ಯ ಆದ್ಯಂತ ಪ್ರತ್ಯಾಹತ ವರ್ಣಗಣಾಸತ್ಯ ಹಂತಾ ಸಾ ಎಂಬ

ಶ್ರೀ ಮದ್ವಿರೂಪಾಕ್ಷ ಪಂಚಾಶಿಕಾಶಾಸ್ತ್ರ ಸ್ಥಿತಿಯಿಂದೆ ಶಕಲಾಕಾರಕೃತಸಂಕೋಚವಿಲ್ಲದೆ ತದ್ವಾಚಕಮಾದ ಪಂಚಾಶದ್ವರ್ಣಂಗಳಂ ನುಂಗಿಕೊಂಡಿರುವ ಪ್ರತ್ಯಾಹಾರರೂಪಮಾದ ಅಕಾರ ಹಕಾರಗಳ ಸಮ್ಮೇಳನೆಯಿಂದುಂಟಾಗಿ ತದಂತರ್ಗತಮಾದ ವೇದ್ಯಸಂಸ್ಕಾರಮಯ ಬಿಂದುಸ್ಪಂದದಿಂ ಸ್ಫುರಿಸುವನಂ ಶಕ್ತಿಶಿವಾತ್ಮಕವಾಗಿ ಸ್ಥೂಲ ಪ್ರಪಂಚೋತ್ಪತ್ತಿನಿಂದಲೂ ಪೂರ್ವದಲ್ಲಿ ಅದಕ್ಕೆ ಕಾರಣವಾಗಿ ಅಂಡರಸನ್ಯಾಯದಿಂ ಸಾಮಾನ್ಯವ್ಯಾಮಿಶ್ರಮಸ್ವತಂತ್ರಂ ಭೇದಾಶಕ್ತ್ಯಾವಭಾಸನಂ ಪ್ರತಿಬಿಂಬಮೆಂಬಪ್ರತಿಬಿಂಬಲಕ್ಷಣ ಯೋಗವಿರುವುದರಿಂ ಪ್ರತಿಬಿಂಬ ಜಗತಿಯಿಂದ ವಿಶ್ವಮಯವಾಗಿ ಸ್ವತಂತ್ರತೆಯಿಂ ತೋರುವ ಪೂರ್ಣಾಹಂತೆ ಎಂದು ನೆನೆಯಲ್ತಕ್ಕದೆಂಬುದರ್ಥಂ ॥೩೯॥ ಬಳಿಕೀ ಪೇಳಿದ ಕುರುಹುಳ್ಳ ವಿಶ್ವಹೋಮಿಯೆ ಜ್ಞಾನಯೋಗದೀಕ್ಷಿತನೆಂದು ಪೇಳುತಿರ್ದಪಂ.

ಆಧಾರವಹ್ನೌ ಚಿದ್ರೂಪೇ ಭೇದಜಾತಂ ಜಗದ್ಧವಿಃ
ಜುಹೋತಿ ಜ್ಞಾನಯಜ್ವಾಯಸ್ಸ ಜ್ಞೇಯೋವಿಶ್ವಹವ್ಯಭುಕ್ ॥

ಜ್ಞಾನಸ್ವರೂಪಮಾದ ಆಜ್ಞಾಚಕ್ರಗತವಹ್ನಿಯಲ್ಲಿ ಮಾಯಾಕಲ್ಪಿತಭೇದಾಭಾಸಾತ್ಮಕವಾದ ವಿಶ್ವವೆಂಬ ಹವಿಸ್ಸನು ಯಾವಾತಂ ಹೋಮವ ಮಾಡುತ್ತಿಹನು ಆತಂ ವಿಶ್ವಹವಿರ್ಭೋಕ್ತೃವಾದ ಜ್ಞಾನಯಜ್ಞ ದೀಕ್ಷಿತನೆಂದು ನೆನೆಯಲ್ತಕ್ಕನೆಂಬುದರ್ಥಂ ॥೪೦॥ ಬಳಿಕ ಪ್ರತ್ಯಕ್ಷವಹ್ನಿಯಲ್ಲಿ ತದ್ವ್ಯತಿರಿಕ್ತಮಾದ ಕಾಷ್ಠಾದಿಗಳಂ ಸಮರ್ಪಿಸಲಾಗಿ ಅದಕ್ಕೆ ನಾಶಮುಂಟಾಗಿರುತ್ತದೆ ಜ್ಞಾನಾಗ್ನಿಯಲ್ಲಿ ಸಮರ್ಪಿಸಿದ ವಿಶ್ವಕ್ಕೆ ನಾಶಂ ಕಾಬುದಿಲ್ಲವೆಂಬಲ್ಲಿ ಪೇಳುತಿರ್ದಪಂ.

ಚಿದಾಕಾರೇ ಪರಾಕಾಶೇ ಪರಮಾನಂದ ಭಾಸ್ವತಿ
ವಿಲೀನಚಿತ್ತವೃತ್ತೀನಾಂ ಕಾ ವಾ ವಿಶ್ವಕ್ರಮಸ್ಥಿತಿಃ ॥

ಚಿದ್ರೂಪವಾದ ಊರ್ಧ್ವಹೃತ್ಕಮಲಕರ್ಣಿಕಾವಿವರದಲ್ಲಿ ನಿತ್ಯಾನಂದ ಸ್ವರೂಪಮಾದ ಮಹಾಲಿಂಗಮ ಸೂರ್ಯನಲ್ಲಿ ಅಡಗಿರ್ದ ಚಿತ್ತ ವ್ಯಾಪಾರವುಳ್ಳ ಲಿಂಗೈಕ್ಯರಿಗೆ ವಿಶ್ವವ್ಯಾಪಾರದ ವರ್ತನೆ ಯಾವುದುಂಟು ಯಾವುದು ಇಲ್ಲವೆಂಬುದರ್ಥಂ ॥೪೧॥ ಬಳಿಕ ಸಹಭೋಜನಸಂಪನ್ನನಾದಲ್ಲಿ ಲಿಂಗೈಕ್ಯನ ಮುಕ್ತಿ ಸ್ವರೂಪಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ನಿರಸ್ತವಿಶ್ವಸಂಬಾಧೇ ನಿಷ್ಕಲಂಕೇ ಚಿದಂಬರೇ
ಭಾವಯೇಲ್ಲೀನಮಾತ್ಮಾನಂ ಸಾಮರಸ್ಯಸ್ವಭಾವತಃ ॥

ಸೈಷಾ ವಿದ್ಯಾ ಪರಾ ಜ್ಞೇಯಾ ಸತ್ತಾನಂದಪ್ರಕಾಶಿನೀ
ಮುಕ್ತಿರಿತ್ಯುಚ್ಯತೇ ಸದ್ಭಿರ್ಜಗನ್ಮೋಹ ನಿವರ್ತಿನೀ ॥

ನಿವಾರಿಸಲ್ಪಟ್ಟ ಜನನ ಮರಣಾದಿ ಕ್ಲೇಶಗಳುಳ್ಳ ಅದರಿಂದಲೆ ದೋಷರಹಿತವಾದ ಚಿದಾಕಾಶಮಹಾಲಿಂಗದಲ್ಲಿ ಅಂಗಶಬ್ದವಾಚ್ಯನಾದ ಆತ್ಮನಂ ಸ್ವರೂಪ ಹಾನಿ ವೃದ್ಧಿಯಿಲ್ಲದೆ ಸ್ವಜಾತಿಯ ಸಮಾನದ ಸಮರಸಭಾವದಿಂ ಸ್ಥಿರ ಸಿದ್ಧಿಯುಳ್ಳಾತನನಾಗಿ ಚಿಂತಿಸೂದು ಆಚಿಂತನೆಯೆ ಸಚ್ಚಿದಾನಂದ ಸ್ವರೂಪಮಂ ಪ್ರಕಾಶಿಸುವ ಪರಾವಿದ್ಯೆಯೆಂದು ತಿಳಿಯಲು ಯೋಗ್ಯವಾದಂಥಾದು ಆ ಈ ವಿಶ್ವಭೇದ ಭ್ರಾಂತಿಯಂ ನಿವಾರಿಸುವ ಪರಾಪರ ಮುಕ್ತಿ

ಎಂದು ಸತ್ಪುರುಷರಿಂ ಪೇಳಲ್ಪಡುತ್ತಿಹದೆಂಬುದರ್ಥಂ ॥೪೩॥ ಬಳಿಕೀ ಶಿವಲಿಂಗೈಕ್ಯನಿಗೆ ಮೋಕ್ಷಲಕ್ಷ್ಮಿಗೆ ನಿವಾಸಸ್ಥಾನವಾದವನೆಂದು ಪೇಳಿ ಸಹಭೋಜನಸ್ಥಲಮಂ ವೃತ್ತದಿಂ ಮುಗಿಸುತಿರ್ದಪಂ.

ಭಕ್ತಾದಿನಾಮ್ನಾಪರಧರ್ಮಯೋಗಾತ್
ಪ್ರಾಪ್ತೈಕಭಾವಃ ಪರಮಾದ್ಭುತೇನ
ಶಿವೇನ ಚಿದ್ವ್ಯೋಮಮಯೇನ ಸಾಕ್ಷಾ
ನ್ಮೋಕ್ಷಶ್ರಿಯೋ ಭಾಜನತಾಮುಪೈತಿ ॥

ಊರ್ಧ್ವಹೃತ್ಕಮಲಮಧ್ಯದೊಳಿರುವ ಚಿದಾಕಾಶಸ್ವರೂಪರಾದ ಅತ್ಯಾಶ್ಚರ್ಯ ರೂಪವುಳ್ಳದಾದ ಶಿವಲಿಂಗದೊಡನೆ ಸ್ವರೂಪಹಾನಿವೃದ್ಧಿಯಿಲ್ಲದೆ ಸಮಾನ ಸಮರಸಭಾವದಿಂ ಪಡೆಯಲ್ಪಟ್ಟ ಏಕತ್ವವುಳ್ಳ ಶಿವಲಿಂಗೈಕ್ಯನು ಭಕ್ತಾದಿಸ್ಥಲಂಗಳನ್ನೈದಿದ ಸದಾಚಾರ ಸಂಬಂಧದತ್ತಣಿಂ ಪ್ರತ್ಯಕ್ಷ ಮೋಕ್ಷಲಕ್ಷ್ಮಿಗಾಶ್ರಯವಾಹತನಮಂ ಪಡೆವುತ್ತಿಹನೆಂಬು ದರ್ಥಂ ॥೪೪॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗಿಶ ಸಂಗ್ರಹೀತೆ ವೇದಾಗಮಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತ ಶಿಖಾಮಣೌ ಶಿವಲಿಂಗೈಕ್ಯಸ್ಯ ಚತುರ್ವಿಧಸ್ಥಲ ಪ್ರಸಂಗೋನಾಮ ಚತುರ್ದಶೀಯಃ ಪರಿಚ್ಛೇದಃ

## ಪಂಚದಶಪರಿಚ್ಛೇದ

### ಲಿಂಗಸ್ಥಲ-೫೭

ಬಳಿಕ ಭಕ್ತಾದಿ ಶಿವಲಿಂಗೈಕ್ಯಾಂತಮಾದ ಷಟ್‌ಸ್ಥಲೋಕ್ತ ಪಿಂಡಾದಿ ಸಹಭೋಜನಾಂತರವಾದ ನಾಲ್ವತ್ತನಾಲ್ಕವಾಂತರ ಸ್ಥಲಂಗಳಲ್ಲಿ ಪೇಳಲ್ಪಟ್ಟ ಸದಾಚಾರ ಸಂಪನ್ನನಾದ ಲಿಂಗೈಕ್ಯನಿಗೆ ವರ್ಣಾಶ್ರಮಾದಿ ಸಂಕಲ್ಪ ವಿಕಲ್ಪಂಗಳಿಲ್ಲದಕಾರಣದಿಂ ಪ್ರಾಕೃತಾಂಗಾಚಾರವಳಿದು ಸಹಭೋಜನಸಂಪನ್ನನಾದ ಕಾರಣ ಲಿಂಗಸ್ವರೂಪನಾದುದರಿಂದಾತನಿಂದಾಚರಿಸಲ್ಪತಕ್ಕ ಲಿಂಗಾಚಾರಸ್ಥಲಂಗಳಂ ಶ್ರೀ ರೇಣುಕಾಚಾರ್ಯಂ ನಿರೂಪಿಸುತಿರ್ದಪಂ.

ಷಟ್ಸ್ಥಲೋಕ್ತಸದಾಚಾರಸಂಪನ್ನಸ್ಯ ಯಥಾಕ್ರಮಮ್
ಲಿಂಗಸ್ಥಲಾನಿ ಕಥ್ಯಂತೇ ಜೀವನ್ಮುಕ್ತಿಪರಾಣಿ ಚ ॥

ಅಂಗ ಷಟ್‌ಸ್ಥಲಂಗಳಲ್ಲಿ ಪೇಳಲ್ಪಟ್ಟ ಸದಾಚಾರ ಸಂಪನ್ನನಾದ ಶಿವಲಿಂಗೈಕ್ಯಂಗೆ ಕ್ರಮದಿಂ ಜೀವನ್ಮುಕ್ತಿಯನೀವ ಲಿಂಗ ಷಟ್‌ಸ್ಥಲಂಗಳು ಪೇಳಲ್ಪಡುತ್ತವೆ ಎಂಬುದರ್ಥಂ॥೧॥ ಬಳಿಕಾಗಸ್ತ್ಯ ಪ್ರಶ್ನೆಯಂ ಮಾಡುತಿರ್ದಪಂ. ಅಗಸ್ತ್ಯ ಉವಾಚ

ಭಕ್ತಾದ್ಯೈಕ್ಯಾವಸ್ಥಾನಾನಿ ಷಡುಕ್ತಾನಿ ಸ್ಥಲಾನಿ ಚ
ಲಿಂಗಸ್ಥಲಾನಿಕಾನೀಹ ಕಥ್ಯಂತೇ ಕತಿ ವಾ ಪುನಃ ॥

ಭಕ್ತನೆ ಮೊದಲಾಗಿ ಲಿಂಗೈಕ್ಯನೆ ಕಡೆಯಾದ ಷಟ್‌ಸ್ಥಲಂಗಳು ಪೇಳಲ್ಪಟ್ಟವು ಈ ಷಟ್‌ಸ್ಥಲಂಗಳಲ್ಲಿ ಲಿಂಗಸ್ಥಲಂಗಳಾವುವು, ಮರಳಿ ಅವೆಷ್ಟೆಂದು ಪೇಳಲ್ಪಡುವ ದೆಂಬುದರ್ಥಂ ॥೨॥ ಶ್ರೀ ರೇಣುಕ ಉವಾಚ– ಬಳಿಕೀ ಪ್ರಶ್ನೆಗುತ್ತರಮಂ ಶ್ರೀ ರೇಣುಕಾಚಾರ್ಯಂ ನಿರೂಪಿಸುತಿರ್ದಪಂ.

ಗುರ್ವಾದಿ ಜ್ಞಾನಶೂನ್ಯಾಂತಾ ಭಕ್ತಾದಿಸ್ಥಲಸಂಶ್ರಿತಾಃ
ಸ್ಥಲಭೇದಾಃ ಪ್ರಕೀರ್ತ್ಯಂತೇ ಪಂಚಾಶತ್ಸಪ್ತ ಚಾಧುನಾ ॥

ಭಕ್ತ ಮೊದಲಾಗಿ ಐಕ್ಯ ಕಡೆಯಾದ ಷಟ್‌ಸ್ಥಲಂಗಳನಾಶ್ರೈಸಿಕೊಂಡಿರುವ ದೀಕ್ಷಾಗುರು ಮೊದಲಾಗಿ ವೃತ್ತಿಜ್ಞಾನಶೂನ್ಯಾಂತರವಾದ ಐವತ್ತೇಳು ಲಿಂಗಸ್ಥಲಭೇದಂಗಳೀಗ ಪೇಳಲ್ಪಡುತ್ತವೆ ಎಂಬುದರ್ಥಂ ॥೩॥ ಬಳಿಕ ಭಕ್ತಸ್ಥಲವನ್ನೈದಿದ ಲಿಂಗಸ್ಥಲಂಗಳೊಂಬತ್ತುಂಟು ಎಂದು ನಿರೂಪಿಸುತಿರ್ದಪಂ.

ಆದೌ ನವಸ್ಥಲಾನೀಹ ಭಕ್ತಸ್ಥಲಸಮಾಶ್ರಯಾತ್
ಕಥ್ಯಂತೇ ಗುಣಸಾರೇಣ ನಾಮಾನ್ಯೇಷಾಂ ಪೃಥಕ್ ಶೃಣು ॥

ಈ ಲಿಂಗ ಷಟ್‌ಸ್ಥಲದಲ್ಲಿ ಭಕ್ತಸ್ಥಲವನಾಶ್ರೈಸಿಕೊಂಡಿರುವದತ್ತಣಿಂ ನೋಡಲು ಒಂಬತ್ತು ಸ್ಥಲಂಗಳುಂಟು. ಈ ಸ್ಥಲಂಗಳ ಪೆಸರು ಬೇರೆ ಬೇರೆ ಶ್ರೇಷ್ಠವಾಗಿ ಪೇಳಲ್ಪಡುತ್ತದೆ ಕೇಳೆಂಬುದರ್ಥಂ ॥೪॥ ಬಳಿಕಾ ಸ್ಥಲಂಗಳನುದ್ದೇಶಿಸುತಿರ್ದಪಂ.

ದೀಕ್ಷಾಗುರುಸ್ಥಲಂ ಪೂರ್ವಂ ತತಶ್ಶಿಕ್ಷಾಗುರುಸ್ಥಲಮ್
ಪ್ರಜ್ಞಾಗುರುಸ್ಥಲಂ ಚಾಥ ಕ್ರಿಯಾಲಿಂಗಸ್ಥಲಂ ತತಃ ॥

ಭಾವಲಿಂಗಸ್ಥಲಂ ಚಾಥ ಜ್ಞಾನಲಿಂಗಸ್ಥಲಂ ತತಃ
ಸ್ವಯಂ ಪರಂ ಚರಂ ಚೇತಿ ತೇಷಾಂ ಲಕ್ಷಣಮುಚ್ಯತೇ ॥

ಮೊದಲು ದೀಕ್ಷಾಗುರುಸ್ಥಲಂ ಬಳಿಕ ಶಿಕ್ಷಾಗುರುಸ್ಥಲಂ ಆಮೇಲೆ ಪ್ರಜ್ಞಾಗುರುಸ್ಥಲಂ ಅನಂತರದಲ್ಲಿ ಕ್ರಿಯಾಲಿಂಗಸ್ಥಲವು ಬಳಿಕ ಭಾವಲಿಂಗಸ್ಥಲಂ ತರುವಾಯದಲ್ಲಿ ಜ್ಞಾನಲಿಂಗಸ್ಥಲಂ ಆಮೇಲೆ ಸ್ವಯಪರಚರವೆಂದು ಮೂರು ಸ್ಥಲಂ ಈ ಪ್ರಕಾರದಿಂ ಒಂಬತ್ತು ಸ್ಥಲಂಗಳೆಂಬುದರ್ಥಂ ॥೬॥ ಬಳಿಕ ದೀಯತೇ ಚ ಯಯಾ ಜ್ಞಾನಂ ಕ್ಷೀಯತೇ ಚ ಮಲತ್ರಯಮ್ ಸಾ ದೀಕ್ಷಾ ಸಂಜ್ಞಿತಾ ತಸ್ಯಾಂ ಗುರುರ್ದೀಕ್ಷಾ ಗುರುರ್ಮತಃ ಹೀಗೆಂಬ ವಾತುಲೋತ್ತರ ವಚನಾನುಸಾರದಿಂ ಶಿವಲಿಂಗೈಕ್ಯನಿಗೆ ದೀಕ್ಷಾಗುರುವೆಂದು ನಿರೂಪಿಸುತಿರ್ದಪಂ.

## ೧. ದೀಕ್ಷಾಗುರುಸ್ಥಲ

ದೀಯತೇ ಪರಮಂ ಜ್ಞಾನಂ ಕ್ಷೀಯತೇ ಪಾಶಬಂಧನಮ್
ಯಯಾ ದೀಕ್ಷೇತಿ ಸಾ ತಸ್ಯಾಂ ಗುರುರ್ದೀಕ್ಷಾಗುರುಃ ಸ್ಮೃತಃ ॥

ಯಾವುದರಿಂದ ಉತ್ಕೃಷ್ಟವಾದ ಶಿವಜ್ಞಾನಂ ದಾ ದಾನೆಯೆಂಬ ಧಾತುಗತಿಯಿಂ ಕೊಡಲ್ಪಡುತ್ತಿಹುದು ಮಲ ಮಾಯಾದಿ ಪಾಶಬಂಧನಂ ಕ್ಷಿಕ್ಷಯೇ ಎಂಬ ಧಾತುಗತಿಯಿಂ ಕ್ಷಯಿಸಲ್ಪಡುತ್ತಿಹುದು ಅದು ದೀಕ್ಷೆಯೆಂದು ನೆನೆಯಲ್ತಕ್ಕದು ಆ ಜ್ಞಾನಕ್ರಿಯಾರೂಪವಾದ ದೀಕ್ಷೆಯಲ್ಲಿ ಗೄನಿಗರಣೇ ಎಂಬ ಧಾತುಗತಿಯಿಂದುಪದೇಶಂಗೈವ ಶಿವಲಿಂಗೈಕ್ಯಂ ದೀಕ್ಷಾಗುರುವೆಂದು ನೆನೆಯಲ್ತಕ್ಕನೆಂಬುದರ್ಥಂ ॥೭॥ ಬಳಿಕ ಗುರುಸ್ವರೂಪಮಂ ವಿವರಿಸುತಿರ್ದಪಂ.

ಗುಣಾತೀತಂ ಗುಕಾರಂ ಚ ರೂಪಾತೀತಂ ರುಕಾರಕಮ್
ಗುಣಾತೀತಮರೂಪಂ ಚ ಯೋ ದದ್ಯಾತ್ಸಗುರುಃ ಸ್ಮೃತಃ ॥

ಗುಕಾರಂ ಪ್ರಾಕೃತಗುಣಂಗಳಂ ಹೀರಿದಂಥಾದು ರುಕಾರಮಶುದ್ಧ ಮಾಯಾರೂಪವ ಮೀರಿದಂಥಾದು ಮಂಡಲತ್ರಯಾತ್ಮಕವಾದ ಗುಣತ್ರಯಮಂ ಜ್ಯೋತಿರ್ಮಯ ಬೈಂದವಕಲಾಶೂನ್ಯಮಾದ ಚಿನ್ಮಯವಸ್ತುವಂ ಯಾವಾತನುಪದೇಶಂಗೈದನು ಆತಂ ಗುರುವೆಂದು ನೆನೆಯಲ್ತಕ್ಕನೆಂಬುದರ್ಥಂ ॥೮॥ ಬಳಿಕ ಪ್ರಸಂಗದತ್ತಣಿಂದಾಚಾರ್ಯನ ಸ್ವರೂಪವನು ವಿವರಿಸುತಿರ್ದಪಂ.

ಆಚಿನೋತಿ ಚ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಲಂ
ಸ್ವಯಮಾಚರತೇ ಯಸ್ಮಾದಾಚಾರ್ಯಸ್ತೇನ ಚೋಚ್ಯತೇ ॥

ವೀರಶೈವ ಶಾಸ್ತ್ರಾರ್ಥಂಗಳ ಪ್ರಕಟಿಸಿ ಪೇಳುತ್ತಿಹನು ವೀರಶೈವಾಚಾರದಲ್ಲಿ ಶಿಷ್ಯರಂ ಅಧಿಕಭಾವದಿಂ ಸ್ಥಾಪಿಸುವನು ತಾನು ಯಾವುದಾನೊಂದು ಕಾರಣವಾಗಿ ವೀರಶೈವಾಚಾರಂ

ಗಳನಾಚರಿಸುತ್ತಿಹನು ಆ ಕಾರಣದಿಂ ಆಚಾರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ ಎಂಬ ಕಠವಲ್ಲಿ ಶ್ರುತ್ಯನುಸಾರದಿಂದಾಚಾರ್ಯನೆಂದು ಪೇಳಲ್ಪಡುವನೆಂಬುದರ್ಥಂ ॥೯॥ ಬಳಿಕ ದೇಶಿಕ ಶಬ್ದ ನಿರ್ವಚನವ ಮಾಡಿ ಶಿವಲಿಂಗೈಕ್ಯನೆ ಜಗದ್ಗುರುವೆಂದು ಸೂತ್ರದ್ವಯದಿಂ ಪೇಳಿ ದೀಕ್ಷಾಗುರುಸ್ಥಲಮಂ ಮುಗಿಸುತಿರ್ದಪಂ.

ಷಡಧ್ವಾತೀತಯೋಗೇನ ಯತತೇ ಯಸ್ತು ದೇಶಿಕಃ
ಮಾಯಾಬ್ಧಿತಾರಣೋಪಾಯಹೇತುರ್ವಿಶ್ವಗುರುಶ್ಶಿವಃ ॥

ಜ್ಞಾನಾನ್ಮುಕ್ತಿಂ ದಿಶತಿಯಃ ಸಃ ದೇಶಿಕ ಇತಿ ಸ್ಮೃತಃ ಹೀಗೆಂಬ ಕಾಮಿಕ ವಾಕ್ಯ ಪ್ರಸಿದ್ಧನಾದ ಯಾವ ದೇಶಿಕಂ ಅಧ್ವಾನಾಮಧ್ವಪತೇ ಶ್ರೇಷ್ಠ್ಯಾದ್ವನಃ ಪಾರಮಶೀಯ ಯೆಂಬ ಶ್ರುತಿಪ್ರಸಿದ್ಧವಾದ ವರ್ಣಪದಾದಿ ಷಡಧ್ವಾತೀತಯೋಗದಿಂದುದ್ಯೋಗವುಳ್ಳವನಾಗಿರುವನು ಆ ಶಿವಲಿಂಗೈಕ್ಯಂ ಮಾಯಾಸಮುದ್ರವ ದಾಟುವುದಕ್ಕೆ ಉಪಾಯವಾದ ಜಗದ್ಗುರುವೆಂಬುದರ್ಥಂ ॥೧೦॥ ಬಳಿಕೀತನೆಂತು ಜಗದ್ಗುರುವೆಂಬಲ್ಲಿ ಪೇಳುತಿರ್ದಪಂ.

ಅಖಂಡಂ ಯೇನ ಚೈತನ್ಯಂ ವ್ಯಜ್ಯತೇ ಸರ್ವವಸ್ತುಷು
ಆತ್ಮಯೋಗಪ್ರಭಾವೇನ ಸ ಗುರುರ್ವಿಶ್ವಭಾಸಕಃ ॥

ನೀಲ ಪೀತಾದಿ ಸಕಲಪದಾರ್ಥಂಗಳಲ್ಲಿ ಅಹಮೆಂಬಖಂಡಚೈತನ್ಯವನು ವರ್ತಿಸುತ್ತಿಹುದು ಇಲ್ಲದಿರ್ದಡೆ ವೇದ್ಯ ದರ್ಶನವೆ ಇಲ್ಲದೆ ಪೋಪುದೆಂಬ ಸ್ವಾನುಭಾವದಿಂ ಸಚ್ಚಿದಾನಂದಾತ್ಮಕವಾದ ಅಖಂಡ ಚೈತನ್ಯಂ ಯಾವಾತನಿಂ ಸ್ಫುಟೀಕರಿಸಲ್ಪಡುತ್ತಿಹುದು ಆತಂ ವಿಶ್ವಪ್ರಕಾಶಕನೆಂಬುದರ್ಥಂ ॥೧೧॥ ಬಳಿಕ ಬೋಧ್ಯ ಬೋಧಕ ಭಾವೇನ ಜ್ಞಾನದ್ವಾರೇಣ ಶಾಸ್ಯತೇ ಶಿಷ್ಯೋ ಹಿ ಯೇನ ಗುರುಣಾ ಸ ಶಿಕ್ಷಾ ಗುರುಚ್ಯತೇ ಎಂಬ ವಾತುಲೋತ್ತರ ವಚನಾನುಸಾರದಿಂ ಶಿಕ್ಷಾಗುರುಸ್ಥಲಮಂ ನಿರೂಪಿಸುತಿರ್ದಪಂ.

## ೨. ಶಿಕ್ಷಾಗುರುಸ್ಥಲ

ದೀಕ್ಷಾಗುರುರಸೌ ಶಿಕ್ಷಾಹೇತುಶ್ಶಿಷ್ಯಸ್ಯ ಬೋಧಕಃ
ಪ್ರಶ್ನೋತ್ತರಪ್ರವಕ್ತಾ ಚ ಶಿಕ್ಷಾಗುರುರಿತೀರ್ಯತೇ ॥

ಈ ದೀಕ್ಷಾಗುರುವೆ ಶಿಷ್ಯನಂ ಬೋಧಿಸುವಾತನಾಗಿ ಶಿಷ್ಯ ಮಾಡಿದ ಪ್ರಶ್ನೆಗುತ್ತರವ ಕೊಟ್ಟು ಶಿಕ್ಷೆಗೆ ಕಾರಣವಾಗಿ ಶಿಕ್ಷಾಗುರುವೆಂದು ಪೇಳಲ್ಪಡುವನೆಂಬುದರ್ಥಂ ॥೧೨॥ ಬಳಿಕೀಯರ್ಥವನೆ ಸ್ಫುಟೀಕರಿಸುತಿರ್ದಪಂ.

ಬೋಧಕೋಽಯಂ ಸಮಾಖ್ಯಾತೋ ಬೋಧ್ಯಮೇತದಿತಿ ಸ್ಫುಟಮ್
ಶಿಷ್ಯೇ ನಿಯುಜ್ಯತೇ ಯೇನ ಸ ಶಿಕ್ಷಾಗುರುರುಚ್ಯತೇ ॥

ಈ ಶಿವಸಿದ್ಧಾಂತ ಪರತತ್ತ್ವ ಪ್ರಕಾಶವಾದಂಥಾದು ಗುರೂಪದೇಶದಿಂ ಸ್ಫುಟವಾದ ಈ ಶಿವಯೋಗಜ್ಞಾನಂ ತಿಳಿಯಲರ್ಹ್ಯಂಥಾದೆಂದು ಯಾವ ಗುರುವಿನಿಂ ಶಿಷ್ಯಬೋಧಿತವಾಗಿ ನಿಯಮಿಯಸಲ್ಪಡುತ್ತಿಹನು ಆತಂ ಶಿಕ್ಷಾಗುರುವೆಂದು ಪೇಳಲ್ಪಡುವನೆಂಬುದರ್ಥಂ ॥೧೩॥ ಆಮೇಲೆ ಆಚಾರ್ಯಃ ಪೂರ್ವರೂಪಮ್ ಅಂತೇವಾಸ್ಯುತ್ತರರೂಪಮ್ ವಿದ್ಯಾ ಸಂಧಿಃ

ಆಚಾರ್ಯೋಽಂತೇವಾಸಿನಮನುಶಾಸ್ತಿ ಎಂಬ ಶ್ರುತ್ಯನುಸಾರದಿಂ ಬಹುವಿಧವಾಗಿ ತತ್ಸ್ವರೂಪಮಂ ವರ್ಣಿಸುತಿರ್ದಪಂ.

ಸಂಸಾರತಿಮಿರೋನ್ಮಾಥಿ ಶರಚ್ಚಂದ್ರಮರೀಚಯಃ
ವಾಚೋ ಯಸ್ಯ ಪ್ರವರ್ತಂತೇ ತಂ ಆಚಾರ್ಯಂ ಪ್ರಚಕ್ಷತೇ ॥

ಯಾವಾತನ ಉಪದೇಶವಾಕ್ಯಂಗಳು ಸಂಸಾರವೆಂಬ ಕತ್ತಲೆಯ ಕೆಡಿಸುವಲ್ಲಿ ಶರಚ್ಚಂದ್ರ ಕಿರಣಗಳೋಪಾದಿಯಲ್ಲಿರುವವು, ಆತನಂ ಸತ್ಪುರುಷರಾದವರು ಆಚಾರ್ಯನಾಗಿ ಪೇಳುತ್ತಿಹರೆಂಬುದರ್ಥಂ ॥೧೪॥

ದದಾತಿ ಯಃ ಪತಿಜ್ಞಾನಂ ಜಗನ್ಮಾಯಾನಿವರ್ತಕಮ್
ಅದ್ವೈತವಾಸನೋಪಾಯಂ ತು ಆಚಾರ್ಯವರಂ ವಿದುಃ ॥

ದಾವಾತಂ ಪ್ರಪಂಚದ ಸಂಬಂಧವಾದ ಭೇದ ಭ್ರಾಂತಿಯ ಕೆಡಿಸುವಂಥಾ ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮಚ್ಯುತಮ್ ಎಂಬ ಶ್ರುತಿ ಪ್ರಸಿದ್ಧ ಸ್ವಾತ್ಮಾಭಿನ್ನ ಶಿವಜ್ಞಾನವಮಂ ಪ್ರಕಾಶಿಸುತ್ತಿಹನು ಆತಂ ಆಚಾರ್ಯಶ್ರೇಷ್ಠನಾದಂಥವನಾಗಿ ತಿಳಿದಿಹರೆಂಬುದರ್ಥಂ ॥೧೫॥ ಬಳಿಕ ಶಿವಾದ್ವೈತಜ್ಞಾನಸಂಪನ್ನನಾಗಿ ಶಿಷ್ಯನ ಸಂದೇಹವ ನಿವಾರಿಸುವಾತನ ಗುರುಶ್ರೇಷ್ಠನೆಂದು ಪೇಳುತಿರ್ದಪಂ.

ಪೂರ್ವಪಕ್ಷಂ ಸಮಾದಾಯ ಜಗದ್ಭೇದವಿಕಲ್ಪನಮ್
ಅದ್ವೈತ ಕೃತಸಿದ್ಧಾಂತೋ ಗುರುರೇಷ ಗುಣಾಧಿಕಃ ॥

ಪ್ರಾಪಂಚಿಕ ಭೇದ ಬಾಹುಲ್ಯಮಂ ಪೂರ್ವಪಕ್ಷವನಾಗಿ ಮಾಡಿಕೊಂಡು ಶಿವಾದ್ವೈತವನಾಗಿ ಮಾಡಲ್ಪಟ್ಟ ಸಿದ್ಧಾಂತವುಳ್ಳ ಈ ಗುರು ಶ್ರೇಷ್ಠನೆಂಬುದರ್ಥಂ ॥೧೬॥

ಸಂದೇಹವನಸಂದೋಹಸಮುಚ್ಛೇದಕುಠಾರಿಕಾ
ಯತ್ಸೂಕ್ತಿಧಾರಾ ವಿಮಲಾ ಸ ಗುರೂಣಾಂ ಶಿಖಾಮಣಿಃ ॥

ಯಾವನಾನೊರ್ವ ಗುರುವಿನ ನಿರ್ಮಲವಾದ ಉಪದೇಶವಾಕ್ಯಧಾರೆಯು ಸಂಶಯ ಎಂಬ ಆ ಅಟವಿಯಂ ಛೇದಿಸುವಲ್ಲಿ ಕೊಡಲಿಯಾದಂಥಾದು ಆತಂ ಗುರುಗಳಿಗೆಲ್ಲಾ ಶ್ರೇಷ್ಠನೆಂಬುದರ್ಥಂ ॥೧೭॥ ಬಳಿಕೀಯರ್ಥವನೆ ಸೂತ್ರದ್ವಯದಿಂ ವಿಶೇಷಿಸುತಿರ್ದಪಂ.

ಯತ್ಸೂಕ್ತಿದರ್ಪಣಾಭೋಗೇ ನಿರ್ಮಲೇ ದೃಶ್ಯತೇ ಸದಾ
ಮೋಕ್ಷಶ್ರೀರ್ಬಿಂಬರೂಪೇಣ ಸ ಗುರುರ್ಭವತಾರಕಃ ॥

ಯಾವಾತನ ಉಪದೇಶವಾಕ್ಯವೆಂಬ ನಿರ್ಮಲದರ್ಪಣಮಂಡಲದಲ್ಲಿ ಮೋಕ್ಷಲಕ್ಷ್ಮಿಯು ಎಲ್ಲಾಗಳೂ ಪ್ರತಿಬಿಂಬರೂಪದಿಂ ಕಾಣುತ್ತಿಹಳು ಆತಂ ಸಂಸಾರವೆಂಬ ಸಮುದ್ರವ ದಾಟಿಸುವಾತನೆಂಬುದರ್ಥಂ ॥ ೧೮॥

ಶಿಷ್ಯಾಣಾಂ ಹೃದಯಾಲೇಖ್ಯಂ ಪ್ರದ್ಯೋತಯತಿ ಯಃ ಸ್ವಯಮ್
ಜ್ಞಾನದೀಪಿಕಯಾನೇನ ಗುರುಣಾ ಕಃ ಸಮೋ ಭವೇತ್ ॥

ಯಾವನಾನೊಬ್ಬ ಶ್ರೀಗುರುಸ್ವಾಮಿಯು ಶಿಷ್ಯರ ಹೃದಯಕಮಲದಲ್ಲಿರುವ ನಿಜರೂಪ ಚಿತ್ತಮಂ ಜ್ಞಾನದೀಪದಿಂ ಪ್ರಕಾಶಿಸುತ್ತಿಹನು ಆತಂಗೆ ಸಮಾನವಾದವನೋರ್ವನೂ ಇಲ್ಲವೆಂಬುದರ್ಥಂ ॥ ೧೯॥ ಬಳಿಕಿಂಥಾ ಗುರುವುಂಟೆ ಎಂಬಲ್ಲಿ ದುರ್ಲಭನೆಂದು ಪೇಳಿ ಶಿಕ್ಷಾಗುರುಸ್ಥಲಮಂ ಮುಗಿಸುತಿರ್ದಪಂ.

ಪರಮಾದ್ವೈತವಿಜ್ಞಾನಪರಮೌಷಧಿದಾನತಃ
ಸಂಸಾರರೋಗನಿರ್ಮಾಥೀ ದೇಶಿಕಃ ಕೇನ ಲಭ್ಯತೇ ॥

ಚರಾಚರಾದ್ವೈತ ಜ್ಞಾನವೆಂಬ ಪರಮೌಷಧವ ಕೊಡುವದತ್ತಣಿಂ ಸಂಸಾರರೋಗವ ಹೋಗಲಾಡಿಸುವ ಗುರುಸ್ವಾಮಿಯು ಶಿವಕಾರುಣ್ಯ ರಹಿತರಿಗೆ ದುರ್ಲಭನು ಅನುವುಳ್ಳವರಿಗೆ ಸುಲಭನೆಂಬುದರ್ಥಂ ॥೨೦॥

## ೩.ಜ್ಞಾನಗುರುಸ್ಥಲ

ಶಿವರೂಪಾನುಸಂಧಾಯಿ ಜ್ಞಾನಂ ಯೇನೋಪದಿಶ್ಯತೇ ಮುಮುಕ್ಷೋರ್ಮೋಕ್ಷ ಸಿದ್ಧ್ಯರ್ಥಂ ಸಃ ಜ್ಞಾನಗುರುರುಚ್ಯತೇ ಎಂಬ ವಾತುಲೋತ್ತರವಚನಾನುಸಾರದಿಂ ಜ್ಞಾನಗುರು ಸ್ಥಲಮಂ ನಿರೂಪಿಸುತಿರ್ದಪಂ.

ಉಪದಿಷ್ಟೋಪದೇಶಾನಾಂ ಸಂಶಯಚ್ಛೇದಕಾರಕಃ
ಸಮ್ಯಜ್ಞಾನಪ್ರದಸ್ಸಾಕ್ಷಾದೇಷ ಜ್ಞಾನಗುರುಃ ಸ್ಮೃತಃ ॥

ರಹಸ್ಯಾರ್ಥಗಳನ್ನು ಉಪದೇಶಿಸುತ್ತಾ ಶಿಷ್ಯನ ಸಂದೇಹವತೊಲಗಿಸುವೀ ಶಿಕ್ಷಾಗುರುವೆ ಒಳಿತಾಗಿ ಪ್ರತ್ಯಕ್ಷವಾದ ಶಿವಜ್ಞಾನಮಂ ಕೊಡುವಾತನಾಗಿ ಜ್ಞಾನಗುರುವೆಂದು ನೆನೆಯಲ್ಪಡುವನೆಂಬುದರ್ಥಂ ॥೨೧॥ ಬಳಿಕ ಶಿವಜ್ಞಾನವೆಂಥಾದು ಅದನೆಂತು ಪ್ರತ್ಯಕ್ಷೀಕರಿಸುವನೆಂಬಲ್ಲಿ ಪೇಳುತಿರ್ದಪಂ.

ನಿರಸ್ತ ವಿಶ್ವಸಂಭೇದಂ ನಿರ್ವಿಕಾರಂ ಚಿದಂಬರಮ್
ಸಾಕ್ಷಾತ್ಕರೋತಿ ಯೋ ಯುಕ್ತ್ಯಾ ಸ ಜ್ಞಾನಗುರುರುಚ್ಯತೇ ॥

ನ ಕಿಂಚಿದವೇದಿಷತ್ ಎಂಬ ಶೂನ್ಯಪ್ರತಿಬಿಂಬ ಬಲದಿಂ ನಿವಾರಿಸಲ್ಪಟ್ಟ ವಿಶ್ವ ಭೇದವುಳ್ಳ ವಿಕಾರರಹಿತವಾದ ಚಿದಾಕಾಶಮಂ ಸ್ಫುಟತರಭಾಸಮಾನಾನಿಲ ಸುಖಾದಿ ಪ್ರಮಾತೃನ್ವೇಷಣದ್ವಾರಾ ಪಾರಮಾರ್ಥಿಕ ಪ್ರಮಾತೃಲಾಭ ಇಹೋಪದಿಷ್ಯತಿ ಎಂಬ ಶಿವಾದ್ವೈತಶಾಸ್ತ್ರೋಕ್ತ ಸ್ವಾನುಭವತಿಯುಕ್ತಿಯಿಂದಾವಾತಂ ಪ್ರತ್ಯಕ್ಷವಾಗಿ ಮಾಡುತ್ತಿಹನು ಆತಂ ಜ್ಞಾನಗುರುವೆಂಬುದರ್ಥಂ ॥೨೨॥ ಬಳಿಕ ಸೂತ್ರದ್ವಯದಿಂ ಕೊಂಡಾಡುತಿರ್ದಪಂ.

ಕಲಂಕವಾನಸೌ ಚಂದ್ರಃ ಕ್ಷಯವೃದ್ಧಿಪರಿಪ್ಲುತಃ
ನಿಷ್ಕಲಂಕಃಸ್ಥಿತೋಜ್ಞಾನಚಂದ್ರಮಾಃ ನಿರ್ವಿಕಾರವಾನ್ ॥

ವೃದ್ಧಿಕ್ಷಯಗಳಿಂ ಪೀಡಿಸಲ್ಪಟ್ಟ ಈ ಚಂದ್ರ ಕಳಂಕ ಉಳ್ಳವಂ ಚಿಚ್ಚಂದ್ರಂ ಕ್ಷಯವೃದ್ಧಿಗಳಿಲ್ಲದೆ ಕಳಂಕರಹಿತನಾಗಿರುವನೆಂಬುದರ್ಥಂ ॥೨೩॥

ಪಾರ್ಶ್ವಸ್ಥತಿಮಿರಂ ಹಂತಿ ಪ್ರದೀಪೋ ಮಣಿನಿರ್ಮಿತಃ
ಸರ್ವಗಾಮೀ ತಮೋ ಹಂತಿ ಬೋಧದೀಪೋ ನಿರಂಕುಶಃ ॥

ರತ್ನದಿಂ ನಿರ್ಮಿಸಲ್ಪಟ್ಟ ದೀಪಂ ಎಡಬಲದಲ್ಲಿರುವ ಕತ್ತಲೆಯಂ ಕೆಡಿಸೂದು. ತಡೆಯಿಲ್ಲದೆ ಚಿದ್ದೀಪವೆಲ್ಲ ಕಡೆಯಲ್ಲೂ ಇರುವ ಕತ್ತಲೆಯಂ ಕೆಡಿಸೂದೆಂಬುದರ್ಥಂ ॥೨೪॥ ಬಳಿಕ ಶಿವಜ್ಞಾನವನುಪದೇಶಿಸುವ ಶ್ರೀ ಗುರುವಂ ಸೂತ್ರದ್ವಯದಿಂ ಸ್ತುತಿ ಮಾಡುತಿರ್ದಪಂ.

ಸರ್ವಾರ್ಥಸಾಧಕಜ್ಞಾನ ವಿಶೇಷಾದೇಶತತ್ಪರಃ
ಜ್ಞಾನಾಚಾರ್ಯಸ್ಸಮಸ್ತಾನಾಮನುಗ್ರಹಕರಶ್ಶಿವಃ ॥

ಭೋಗಮೋಕ್ಷ ಪ್ರದಮಾದ ಸಕಲ ಪ್ರಯೋಜನವನೂ ಸಾಧಿಸುವಂಥಾ ಶಿವಜ್ಞಾನ ವಿಶೇಷೋಪದೇಶ ತತ್ಪರನಾದ ಜ್ಞಾನಗುರುವೆ ಸಮಸ್ತವಾದ ಮೋಕ್ಷಾರ್ಥಿಗಳಿಗೂ ಅನುಗ್ರಾಹಕನಾದ ಪ್ರತ್ಯಕ್ಷ ಶಿವನೆಂಬುದರ್ಥಂ ॥೨೫॥

ಕಟಾಕ್ಷಚಂದ್ರಮಾ ಯಸ್ಯ ಜ್ಞಾನಸಾಗರವರ್ಧನಃ
ಸಂಸಾರತಿಮಿರಚ್ಛೇದೀ ಸ ಗುರುರ್ಜ್ಞಾನಪಾರಗಃ ॥

ಯಾವ ಆಚಾರ್ಯನ ಕಟಾಕ್ಷವೆಂಬ ಚಂದ್ರನು ಶಿವಜ್ಞಾನೋದಧಿಯ ವರ್ಧಿಸುತ್ತಾ ಸಂಸಾರವೆಂಬ ಕತ್ತಲೆಯಂ ಛೇದಿಸುವಂ ಆ ಶ್ರೀಗುರುಂ ಜ್ಞಾನಪಾರಂಗತನೆಂಬುದರ್ಥಂ ॥೨೬॥ ಬಳಿಕ ಗುರುವನೆ ಸೂರ್ಯನನಾಗಿ ವರ್ಣಿಸುತ್ತಾ ಆತನಿಂದ ಆಧಿಕ್ಯಮಂ ಪ್ರತಿಪಾದಿಸುತಿರ್ದಪಂ

ಬಹಿಸ್ತಿಮಿರವಿಚ್ಛೇತ್ತಾ ಭಾನುರೇಷ ಪ್ರಕೀರ್ತಿತಃ
ಬಹಿರಂತಸ್ತಮುಚ್ಛೇದೀ ವಿಭುರ್ದೇಶಿಕಭಾಸ್ಕರಃ ॥

ಈ ಸೂರ್ಯಂ ಹೊರಗಣ ಕತ್ತಲೆಯಂ ಕೆಡಿಸುವನು. ಚಿದ್ರೂಪನಾದುದರಿಂ ವ್ಯಾಪಕನಾದ ಜ್ಞಾನಾಚಾರ್ಯ ಸೂರ್ಯಂ ವಾಯಂ ಶಿವಃ ಎಂಬ ವಿಷಯ ಗತ ಜ್ಞಾನವನೂ ನಾಹಂ ಶಿವ ಎಂಬ ಅಂತರ್ಗತ ಜ್ಞಾನವನೂ ಛೇದಿಸುತ್ತಿಹನೆಂದು ಪೇಳಿಸಿಕೊಂಬನೆಂಬು ದರ್ಥಂ ॥೨೭॥ ಬಳಿಕ ಶಿವನಂ ಪ್ರಕಾಶಿಸುವ ಜ್ಞಾನಮಂ ಸೂಚಿಸಿ ಜ್ಞಾನಗುರುಸ್ಥಲಮಂ ಸೂತ್ರದ್ವಯದಿಂ ಮುಗಿಸುತಿರ್ದಪಂ.

ಕಟಾಕ್ಷಲೇಶಮಾತ್ರೇಣ ವಿನಾ ಧ್ಯಾನಾದಿಕಲ್ಪನಮ್
ಶಿವತ್ವಂ ಭಾವಯೇದ್ಯತ್ರ ಸವೇದಶ್ಶಾಂಭವೋ ಮತಃ ॥

ಧ್ಯಾನಧಾರಣಾದಿ ಸಂಕಲ್ಪವಿಲ್ಲದೆ ಶ್ರೀಗುರುವಿನ ಕಟಾಕ್ಷಮಾತ್ರದಿಂ ಶಿವತ್ವಂ ಸ್ಫುಟಮಾಗುವುದು ಆ ವೇಧೆಯು ಶಾಂಭವವೆಂದು ಸಮ್ಮತವೆಂಬುದರ್ಥಂ ॥೨೮॥

ಶಿವವೇಧಕರೇ ಜ್ಞಾನೇ ದತ್ತೇ ಯೇನ ಸುನಿರ್ಮಲೇ
ಜೀವನ್ಮುಕ್ತೋ ಭವೇಚ್ಛಿಷ್ಯಃ ಸ ಗುರುರ್ಜ್ಞಾನಸಾಗರಃ ॥

ಯಾವನಾನೊಬ್ಬ ಶ್ರೀ ಗುರುವಿನಿಂ ಸ್ವಾತ್ಮಶಿವತಾ ಸ್ಫುಟೀಕರಣ ಪ್ರವೀಣವಾದ ನಿರ್ಮಲಜ್ಞಾನಂ ಕೊಡಲ್ಪಡಲಾಗಿ ಆ ಶಿಷ್ಯಂ ಜೀವನ್ಮುಕ್ತಂ. ಆ ಗುರು ಜ್ಞಾನಸಾಗರ ನೆಂಬುದರ್ಥಂ ॥೨೯॥

## ೪. ಕ್ರಿಯಾಲಿಂಗಸ್ಥಲ

ಬಳಿಕ ಇಷ್ಟಮೂರ್ಜಂ ತಪಸಾನಿಯಚ್ಛತಿಯೆಂಬಾಥರ್ವಣ ಶ್ರುತಿಗೆ ವ್ಯಾಖ್ಯಾನ ರೂಪವಾದ ಸಕಲಂ ದೃಕ್ಕಲಾ ಗ್ರಾಹ್ಯಮಿಷ್ಟಲಿಂಗಸ್ಥಲಂ ಮಹತ್ ಇಷ್ಟಾವಾಪ್ತಿಕರಂ ಸಾಕ್ಷಾದನಿಷ್ಟಪರಿಹಾರಕಮ್ ಇಷ್ಟಮೂರ್ಜಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ ಚ ಇಷ್ಟಲಿಂಗಮಿತಿ ಪ್ರಾಹ ತಸ್ಮಾದಾಥರ್ವಣಿಶ್ರುತಿಃ ಎಂಬ ವಾತುಲೋತ್ತರ ವಚನಾನು ಸಾರದಿಂ ಜ್ಞಾನರೂಪದಿಷ್ಟವಾದ ಕ್ರಿಯೆಯು ಯಾವಲ್ಲಿ ಲಯವನ್ನೈದುತ್ತಿಹುದು ಅದು ಕ್ರಿಯಾಲಿಂಗಸ್ಥಲವೆಂದು ಸಪ್ತಸೂತ್ರಂಗಳಿಂ ವಿವರಿಸುತಿರ್ದಪಂ.

ಗುರೋರ್ವಿಜ್ಞಾನಯೋಗೇನ ಕ್ರಿಯಾ ಯತ್ರ ವಿಲೀಯತೇ
ತತ್ಕ್ರಿಯಾಲಿಂಗಮಾಖ್ಯಾತಂ ಸರ್ವೈರಾಗಮಪಾರಗೈಃ ॥

ಜ್ಞಾನಗುರುವಿನಲ್ಲಿ ವಿಶೇಷ ಜ್ಞಾನಯೋಗದಿಂ ಕ್ರಿಯೆಯು ಯಾವ ಅಧಿಕರಣದಲ್ಲಿ ಲಯವಂ ಪಡುತ್ತಿಹುದು. ಅದು ಕ್ರಿಯಾರ್ಥಕವಾದ ಇಷ್ಟಲಿಂಗವೆಂದು ಶಿವಸಿದ್ಧಾಂತ ಪಾರಂಗತರಾದ ಸಮಸ್ತ ವೀರಶೈವಾಚಾರ್ಯರಿಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೩೦॥ ಬಳಿಕಾ ಲಿಂಗಸ್ವರೂಪಮೆಂತೆನೆ ಪೇಳುತಿರ್ದಪಂ.

ಪರಾನಂದಚಿದಾಕಾರಂ ಪರಬ್ರಹ್ಮೈವ ಕೇವಲಮ್
ಲಿಂಗಂ ಸದ್ರೂಪತಾಪನ್ನಂ ಲಕ್ಷ್ಯತೇ ವಿಶ್ವಸಿದ್ಧಯೇ ॥

ನಿತ್ಯಾನಂದಸ್ವರೂಪವಾಗಿ ಅಂತರ್ಮುಖಜ್ಞಾನಸ್ವರೂಪವಾಗಿ ಅಸ್ತಿತಾರೂಪ ವನ್ನೈದಿದ ಬಚ್ಚಬರಿಯ ಪರಬ್ರಹ್ಮವೆ ಸಕಲ ಸತ್ಕ್ರಿಯಾ ಸಿದ್ಧ್ಯರ್ಥವಾಗಿ ಇಷ್ಟ ಲಿಂಗವೆಂದು ಕುರುಹಿಡಲ್ಪಡುತ್ತಿತ್ತಹುದೆಂಬುದರ್ಥಂ ॥೩೧॥ ಬಳಿಕಾ ಸತ್ಕ್ರಿಯಾಸಿದ್ಧಿಯಂತಪ್ಪದೆಂಬಲ್ಲಿ ಪೇಳುತಿರ್ದಪಂ.

ಲಿಂಗಮೇವ ಪರಂಜ್ಯೋತಿರ್ಭವತಿ ಬ್ರಹ್ಮಕೇವಲಮ್
ತಸ್ಮಾತ್ತತ್ಪೂಜನಾದೇವ ಸರ್ವಕರ್ಮಫಲೋದಯಃ ॥

ಪರಂಜ್ಯೋತಿ ಸ್ವರೂಪವಾದ ಬಚ್ಚಬರಿಯ ಬ್ರಹ್ಮವೆ ಕ್ರಿಯಾರ್ಥಕವಾದ ಲಿಂಗವಾಗುತ್ತಿಹುದು. ಅದು ಕಾರಣವಾಗಿ ಆ ಲಿಂಗದ ಪೂಜೆಯತ್ತಣಿಂದಲೆ ಸಕಲ ಸತ್ಕರ್ಮ ಫಲಾವಿರ್ಭಾವಮುಂಟಪ್ಪುದೆಂಬುದರ್ಥಂ ॥೩೨॥ ಅದು ಕಾರಣವಾಗಿ ಲಿಂಗವೆ ಶ್ರೇಷ್ಠಮೆಂದು ನುಡಿವುತಿರ್ದಪಂ.

ಪರಿತ್ಯಜ್ಯ ಕ್ರಿಯಾಸ್ಸರ್ವಾಃ ಲಿಂಗಜ್ಞಾನೈಕತತ್ಪರಾಃ
ವರ್ತಂತೇ ಯೋಗಿನಸ್ಸರ್ವೇ ತಸ್ಮಾಲ್ಲಿಂಗಂ ವಿಶಿಷ್ಯತೇ ॥

ಸನಕಾದಿ ಸಮಸ್ತಯೋಗಿಗಳೂ ಸಮಸ್ತಯಾಗಾದಿ ಕ್ರಿಯೆಗಳಂ ಬಿಟ್ಟು ಲಿಂಗ ಪೂಜೆ ಒಂದರಲ್ಲಿಯೇ ನಿಷ್ಠರಾಗಿ ಇರುವರು. ಅದು ಕಾರಣವಾಗಿ ಕ್ರಿಯಾಲಿಂಗವೆ ಶ್ರೇಷ್ಠವೆಂಬುದರ್ಥಂ ॥೩೩॥ ಬಳಿಕ ಏನುಕಾರಣ ಸನಕಾದಿಗಳೂ ಯಜ್ಞಾದಿಗಳಂ ಬಿಟ್ಟರೆಂಬಲ್ಲಿ ಪೇಳುತಿರ್ದಪಂ.

ಯಜ್ಞಾದಯಃ ಕ್ರಿಯಾಸ್ಸರ್ವಾಃ ಲಿಂಗಪೂಜಾಂಶಸಮ್ಮಿತಾಃ
ಇತಿ ಯತ್ಪೂಜ್ಯತೇ ಸಿದ್ಧೈಃ ತತ್ಕ್ರಿಯಾಲಿಂಗಮುಚ್ಯತೇ ॥

ಯಜ್ಞಾದಿ ಕ್ರಿಯೆಗಳೆಲ್ಲಂ ಲಿಂಗಪೂಜೆಯ ಒಂದಂಶಕ್ಕೆ ಸಮಾನವಾದಂಥಾ ವೆಂದು ತಿಳಿದು, ಸನಕಾದಿಗಳಿಂ ಭೋಗಮೋಕ್ಷಪ್ರದಮಾಗಿ ಯಾವುದಾನೊಂದು ಲಿಂಗ ಪೂಜಿಸಲ್ಪ ಡುತ್ತಿಹುದು ಅದು ಕಾರಣವಾಗಿ ಸಕಲಕ್ರಿಯಾತ್ಮಕವಾದ ಲಿಂಗವೆಂದು ಪೇಳಲ್ಪಡುತ್ತಿ ಹುದೆಂಬುದರ್ಥಂ ॥೩೪॥ ಅದು ಕಾರಣವಾಗಿ ಲಿಂಗಪೂಜಾ ಸಂಪನ್ನನಿಗೆ ಯಾವ ಕ್ರಿಯೆಯು ಬೇಡವೆಂದು ಉಪದೇಶಿಸುತ್ತಿರ್ದಪಂ.

ಕಿಂ ಯಜ್ಞೈರಗ್ನಿಹೋತ್ರಾದ್ಯೈಃ ಕಿಂ ತಪೋಭಿಶ್ಚ ದುಶ್ಚರೈಃ
ಲಿಂಗಾರ್ಚನರತಿರ್ಯಸ್ಯ ಸ ಸಿದ್ಧಸ್ಸರ್ವಕರ್ಮಸು ॥

ಯಾವಾತಂಗೆ ಲಿಂಗ ಪೂಜೆಯಲ್ಲಿ ಪ್ರೀತಿಯುಂಟಾಗಿರುವುದು ಆತಂಗೆ ಅಗ್ನಿಹೋತ್ರ ಮೊದಲಾದ ಯಜ್ಞಗಳಿಂದಲೂ ಅತಿಕ್ರೂರವಾದ ತಪಸ್ಸುಗಳಿಂದಲೂ ಏನೂ ಪ್ರಯೋಜನ ವಿಲ್ಲಂ ಆ ಲಿಂಗಪೂಜಾನಿಷ್ಠನು ಸಕಲಕರ್ಮ ವಿಷಯದಲ್ಲೂ ಸಿದ್ಧಿಯುಳ್ಳವನೆಂಬುದರ್ಥಂ ॥೩೫॥ ಬಳಿಕ ಮತ್ತೇನ ಕೇಳಿ ಬ್ರಹ್ಮಾದಿಗಳೂ ಇಷ್ಟಲಿಂಗಪೂಜಾ ಮಹಿಮೆಯಿಂದಲೆ ವಿಶ್ವನಿರ್ಮಾಣಾದಿ ಸಿದ್ಧಿಯುಳ್ಳವರಾಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಶೋಭಿಸುತ್ತಿಹರೆಂದು ಪೇಳಿ ಕ್ರಿಯಾಲಿಂಗಸ್ಥಲಮಂ ಮುಗಿಸುತಿರ್ದಪಂ.

ಬ್ರಹ್ಮವಿಷ್ಣ್ವಾದಯಸ್ಸರ್ವೇ ವಿಬುಧಾಃ ಲಿಂಗಮಾಶ್ರಿತಃ
ಸಿದ್ಧಾಃ ಸ್ವಸ್ವಪದೇ ಭಾಂತಿ ಜಗತ್ತಧಿಕಾರಿಣಃ ॥

ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೂ ಸಿದ್ಧರುಗಳೂ ಶಿವಲಿಂಗವನಾಶ್ರೈಸಿ ವಿಶ್ವಸೃಷ್ಟಿ ಮೊದಲಾದ ಕೃತ್ಯಂಗಳಿಗಧಿಕಾರಿಯಾಗಿ ತಮ್ಮತಮ್ಮ ಸತ್ಯಲೋಕ ವೈಕುಂಠಾದಿ ಸ್ಥಾನಂಗಳಲ್ಲಿ ಒಪ್ಪುತ್ತಿಹುದೆಂಬುದರ್ಥಂ॥ ೩೬॥

## ೫. ಭಾವಲಿಂಗಸ್ಥಲ

ಬಳಿಕ ಭಾವಗ್ರಾಹ್ಯಮನೀಡಾಖ್ಯಂ ಭಾವಾ ಭಾವಕರಂ ಪರಮ್ ಕಲ್ಪಸರ್ಗಕರಂ ದೇವಂ ಯೇವಿದುಸ್ತೇ ಜಹುಸ್ತನುಂ ಎಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ನಿಷ್ಕಲಂ ಭಾವಲಿಂಗಂ ಸ್ಯಾದ್ಭಾವಗ್ರಾಹ್ಯಂ ಪರಾತ್ಪರಮೆಂಬ ವಾತುಳತಂತ್ರ ವಚನಾನುಸಾರದಿಂದಲೂ ಕ್ರಿಯೆಯಂತೆ ಭಾವವೂ ಎಲ್ಲಿ ಲಯವನೆಯ್ದುತ್ತಿಹುದು ಅದು ಭಾವಲಯಕ್ಕೆ ಕಾರಣಮಾದ ಪ್ರಾಣಲಿಂಗವೆಂದು ಭಾವಲಿಂಗಸ್ಥಲಮಂ ನಿರೂಪಿಸುತಿರ್ದಪಂ.

ಕ್ರಿಯಾ ಯಥಾ ಲಯಂ ಪ್ರಾಪ್ತಾ ತಥಾ ಭಾವೋಽಪಿ ಲೀಯತೇ
ಯತ್ರ ತದ್ದೇಶಿಕೈರುಕ್ತಂ ಭಾವಲಿಂಗಮಿತಿ ಸ್ಫುಟಮ್ ॥

ಕ್ರಿಯಾಲಿಂಗಸ್ಥಾನಮೆಂದು ಕ್ರಿಯಾಲಿಂಗವೆನಿಸಿಕೊಂಬುದು ಹಾಗೆ ಭಾವಲಯ ಸ್ಥಾನವೆ ಭಾವಲಯಕ್ಕೆ ಕಾರಣವಾದ ಪ್ರಾಣಲಿಂಗವೆಂದು ದೇಶಿಕರಿಂ ಸ್ಫುಟಮಾಗಿ ಪೇಳಲ್ಪಟ್ಟಿತೆಂಬುದರ್ಥಂ ॥೩೭॥ ಬಳಿಕೀ ಕ್ರಿಯಾಭಾವಲಿಂಗಗಳೊಳಗೆ ಯಾವುದು ಶ್ರೇಷ್ಠಮೆಂಬಲ್ಲಿ ಭಾವಲಿಂಗಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಭಾವೇನ ಗೃಹ್ಯತೇ ದೇವೋ ಭಗವಾನ್ ಪರಮಃಶಿವಃ
ಕಿಂ ತೇನ ಕ್ರಿಯತೇ ತಸ್ಯ ನಿತ್ಯಪೂರ್ಣೋ ಹಿ ಸಸ್ಮೃತಃ ॥

ಷಡ್ಗುಣೈಶ್ವರ್ಯ ಸಂಪನ್ನನಾದ ಪರಮೇಶ್ವರಂ ನಿರ್ಮಲಾಂತಃಕರಣ ವೃತ್ತಿಯಿಂ ಪ್ರಕಾಶಿಸಲ್ಪಡುವನು. ಆಕಾರಣದಿಂ ಬಾಹ್ಯಕ್ರಿಯಾಲಯದಿಂದೇನು ಪ್ರಯೋಜನಂ ಯಾಕೆಂದಡೆ ಆ ಪರಮೇಶ್ವರಂ ಯಾವುದಾನೊಂದು ಕಾರಣದಿಂ ನಿತ್ಯತೃಪ್ತನೆಂದು ನೆನೆಯಲ್ಪಟ್ಟನು, ಆ ಕಾರಣದಿಂ ಕ್ರಿಯಾಪೂಜೆಯಿಂ ಪ್ರಯೋಜನವಿಲ್ಲಮೆಂಬುದರ್ಥಂ ॥೩೮॥

ಅಖಂಡಪರಮಾನಂದಬೋಧರೂಪಃ ಪರಃ ಶಿವಃ
ಭಕ್ತಾನಾಮುಪಚಾರೇಣ ಭಾವಯೋಗಾತ್ ಪ್ರಸೀದತಿ ॥

ಅಪರಿಮಿತಾನಂದ ಚಿದ್ರೂಪನಾದ ಪರಮೇಶ್ವರಂ ತನ್ನ ಭಕ್ತರ ಭಕ್ತಿಪೂರ್ವೋಕ್ತಮಾದ ಮಾನಸೋಪಚಾರದಿಂ ಮನಸ್ಥಿರಕರೀಕರಣದತ್ತಣಿಂ ಪ್ರಸನ್ನನಾಗುವನೆಂಬುದರಿಂ ಭಾವಲಿಂಗಂ ಶ್ರೇಷ್ಠವೆಂಬುದು ತಾತ್ಪರ್ಯಂ ಅದು ಕಾರಣದಿಂ ಭಾವಲಿಂಗವೇ ಪ್ರಶಸ್ತ ಎಂದು ಕಠೋಕ್ತಿಯಂ ಪೇಳುತಿರ್ದಪಂ॥೩೯॥

ಮೃಚ್ಛಿಲಾವಿಹಿತಾಲ್ಲಿಂಗಾದ್ಭಾವಲಿಂಗಂ ವಿಶಿಷ್ಯತೇ
ನಿರಸ್ತ ಸರ್ವದೋಷತ್ವಾದ್ ಜ್ಞಾನಮಾರ್ಗಪ್ರವೇಶನಾತ್ ॥

ಮೃಚ್ಛಿಲಾದಿಗಳಿಂ ನಿರ್ಮಿಸಲ್ಪಟ್ಟ ಲಿಂಗಗಳತ್ತಣಿಂ ಭಾವಲಯಕ್ಕೆ ಕಾರಣಮಾದ ಪ್ರಾಣಲಿಂಗವು ಶ್ರೇಷ್ಠವು ಅದೆಂತೆಂದಡೆ ಛೇದನಭೇದನಾಗಿ ದೋಷದ ಸೋಂಕಿಲ್ಲದ ಕಾರಣದಿಂ ಜ್ಞಾನಮಾರ್ಗದಲ್ಲಿ ಪ್ರವಿಷ್ಟರಾದ ಕಾರಣದಿಂದೆಂಬುದರ್ಥಂ ಬಳಿಕ ಭಾವಲಿಂಗಿಯಂ ಪೇಳುತಿರ್ದಪಂ ॥೪೦॥

ವಿಹಾಯ ಬಾಹ್ಯಲಿಂಗಾನಿ ಚಲ್ಲಿಂಗಂ ಮನಸಿ ಸ್ಮರನ್
ಪೂಜಯೇದ್ಭಾವಪುಷ್ಪೈರ್ಯೋ ಭಾವಲಿಂಗೀತಿ ಕಥ್ಯತೇ ॥

ಯಾವಾತಂ ಮೃಚ್ಛಿಲಾದಿ ನಿರ್ಮಿತ ಬಾಹ್ಯಲಿಂಗಂಗಳಂ ಬಿಟ್ಟು ತತ್ಪ್ರಾಣೇಷ್ಟಂ ತರ್ಮನಸೋ ಲಿಂಗಮಾಹುಃ ಎಂಬ ಅಥರ್ವಣಶ್ರುತಿ ಪ್ರಸಿದ್ಧಮಾದ ಚಿನ್ಮಯ ಪ್ರಾಣಲಿಂಗಮಂ ಹೃತ್ಕಮಲದಲ್ಲಿ ಸ್ಮರಿಸುವಾತನಾಗಿ ಭಾವಕಲ್ಪಿತಮಾದ ಅಹಿಂಸಾದ್ಯಷ್ಟ ಪುಷ್ಪಂಗಳಿಂ ಪೂಜಿಸುವನು ಆತ ಭಾವಕ್ಕೆ ಗೋಚರಿಸುವ ಪ್ರಾಣಲಿಂಗವುಳ್ಳವನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೪೧॥ ಬಳಿಕ ಪ್ರಾಣಲಿಂಗ ಪೂಜಕನೆ ಶಿವಯೋಗಿಯೆಂದು

ಮೂಲಾಧಾರೇಽಥ ವಾ ಚಿತ್ತೇ ಭ್ರೂಮಧ್ಯೇ ವಾ ಸುನಿರ್ಮಲಮ್
ದೀಪಾಕಾರಂ ಯಜನ್ ಲಿಂಗಂ ಭಾವದ್ರವ್ಯೈಸ್ಸಯೋಗವಾನ್ ॥

ಮೂಲಕಮಲದಲ್ಲಿ ಅಲ್ಲದಿರ್ದಡೆ ಮಧ್ಯ ಹೃದಯದಲ್ಲಿ ಅಲ್ಲದಿರ್ದಡೆ ಊರ್ಧ್ವ ಹೃದಯವಾದ ಭ್ರೂಮಧ್ಯದಲ್ಲಿ ಹೃದಯ ಕಮಲ ಮಧ್ಯೇ ದೀಪವದ್ವೇದಸಾರಂ ಪ್ರಣವ ಮತರ್ಕ್ಯಂ ಯೋಗಿಭಿರ್ಧ್ಯಾನಗಮ್ಯಂ ಎಂದು ಯೋಗಶಾಸ್ತ್ರ ಪ್ರಸಿದ್ಧ ದೀಪೋಪಮಾಕಾರವಾದ ಅತ್ಯಂತ ನಿರ್ಮಲವಾದ ಪ್ರಾಣಲಿಂಗಮಂ ಪೂರ್ವೋಕ್ತಭಾವ ದ್ರವ್ಯಂಗಳಿಂದಾವಾತಂ ಪೂಜಿಸುತ್ತಿಹನು ಆತಂ ಶಿವಯೋಗವುಳ್ಳವನೆಂಬುದರ್ಥಂ ॥೪೨॥ ಬಳಿಕ ಭಾವ ಪೂಜೆಯನೆ ವಿಶೇಷಿಸಿ ಶಿವಯೋಗಿಯಾದವಂ ಕ್ರಿಯಾಲಿಂಗನಿಷ್ಠನಲ್ಲೆಂದು ಪೇಳುತಿರ್ದಪಂ.

ಸ್ವಾನುಭೂತಿಪ್ರಮಾಣೇನ ಜ್ಯೋತಿರ್ಲಿಂಗೇನ ಸಂಯುತಃ
ಶಿಲಾಮೃದ್ದಾರು ಸಂಭೂತಂ ನ ಲಿಂಗಂ ಪೂಜಯತ್ಯಸೌ ॥

ಈ ಶಿವಯೋಗೀಶ್ವರಂ ಅಹಮಸ್ಮೀಯಥ್ಬಿ ಕಿಂ ಕರ್ಮಕ ಸ್ವಾನುಭಾವ ಪ್ರಮಾಣ ಬಂಧಿಂ ಚಿನ್ಮಯ ಪ್ರಾಣಲಿಂಗದೊಡನೆ ಕೂಡಿದಾತನಾಗಿ ಪಾಷಾಣ ಮೃತ್ಕಾಷ್ಠ ನಿರ್ಮಿತ ಕ್ರಿಯಾಲಿಂಗಮಂ ಪೂಜಿಸುವನೆಂಬುದರ್ಥಂ ॥೪೩॥ ಬಳಿಕ ಭಾವಸಿದ್ಧವಾದ ಜ್ಯೋತಿರ್ಲಿಂಗ ಪೂಜೆಯಂ ವಿಶೇಷಿಸಿ ಭಾವಲಿಂಗಮಂ ಮುಗಿಸುತಿರ್ದಪಂ

ಕ್ರಿಯಾರೂಪಾ ತು ಯಾ ಪೂಜಾ ಸಾ ಜ್ಞೇಯಾ ಸ್ವಲ್ಪಸಂವಿದಾಮ್
ಅಂತರಾ ಭಾವಪೂಜಾ ತು ಶಿವಸ್ಯ ಜ್ಞಾನಿನಾಂ ಮತಾ ॥

ಶಿವಲಿಂಗದ ಸಂಬಂಧವಾದ ಕರ್ಮಕಾಂಡ ಪ್ರಸಿದ್ಧ ಕ್ರಿಯಾಲಿಂಗ ಪೂಜೆ ಯಾವುದುಂಟು ಅದು ಅಜ್ಞಾನಿಗಳಿಗೆ ಸಮ್ಮತವಾದಂಥಾದಾಗಿ ತಿಳಿಯಲ್ತಕ್ಕದು. ಜ್ಞಾನಕಾಂಡ ಪ್ರಸಿದ್ಧವಾದ ಅಂತರಪೂಜೆಯು ಪರಿಪೂರ್ಣ ಶಿವಜ್ಞಾನಿಗಳಿಗೆ ಸಮ್ಮತವಾದಂಥಾ ದೆಂಬುದರ್ಥಂ ॥೪೪॥

## ೬. ಜ್ಞಾನಲಿಂಗಸ್ಥಲ

ಬಳಿಕ ಅಚಿಂತ್ಯಂ ಚಾs ಪ್ರಮೇಯಂ ಚ ವ್ಯಕ್ತಾವ್ಯಕ್ತಪರಂ ಚ ಯತ್ ಸೂಕ್ಷ್ಮಾತ್ಸೂಕ್ಷ್ಮತರಂ ಜ್ಞಾನಂ ತನ್ಮೇ ಮನಶ್ಶಿವಸಂಕಲ್ಪಮಸ್ತು ಎಂಬ ಶಿವಸಂಕಲ್ಪ ಶ್ರುತ್ಯನುಸಾರದಿಂ ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಲಿಂಗಂ ತದುಚ್ಯತೇ ಭಾವನಾತೀತಮವ್ಯಕ್ತಂ ಪರಂ ಬ್ರಹ್ಮ ಶಿವಾಭಿಧಮೆಂಬ ವಾತುಲೋತ್ತರತಂತ್ರ ವಚನಾನುಸಾರದಿಂದಲೂ ಭಾವಲಿಂಗ ಪ್ರಕಾಶಕವಾದ ಜ್ಞಾನಲಯಸ್ಥಾನವೇ ತೃಪ್ತಿಲಿಂಗಾಪರ ಪರ್ಯಾಯ ಜ್ಞಾನಲಿಂಗಸ್ಥಲವೆಂದು ಪೇಳುತಿರ್ದಪಂ॥೪೫॥

ತದ್ಭಾವಜ್ಞಾಪಕಜ್ಞಾನಂ ಲಯಂ ಯತ್ರ ಸಮಶ್ನುತೇ
ತಜ್ಜ್ಞಾನಲಿಂಗಮಾಖ್ಯಾತಂ ಶಿವತತ್ತ್ವಾರ್ಥಕೋವಿದೈಃ ॥

ಭಾವಲಿಂಗಪ್ರಕಾಶವಾದ ಜ್ಞಾನವು ಯಾವ ಸ್ಥಾನದಲ್ಲಿ ಲಯವನ್ನೈದುತ್ತಿಹುದು ಈ ಜ್ಞಾನಕ್ಕಾಧಾರವಾದ ತೃಪ್ತಿಲಿಂಗವೆಂದು ಶಿವತತ್ತ್ವರಹಸ್ಯಾರ್ಥಂ ಬಲ್ಲ ವೀರಶೈವರಿಂ ಪೇಳಲ್ಪಟ್ಟಿತ್ತೆಂಬುದರ್ಥಂ ||೪೬|| ಬಳಿಕಿದನೆ ವಿವರಿಸುತಿರ್ದಪಂ.

ತ್ರಿಮೂರ್ತಿಭೇದನಿರ್ಮುಕ್ತಂ ತ್ರಿಗುಣಾತೀತವೈಭವಮ್
ಬ್ರಹ್ಮಯದ್ಬೋಧ್ಯತೆ ತತ್ತು ಜ್ಞಾನಲಿಂಗಮುದಾಹೃತಮ್ ||

ಬ್ರಹ್ಮ, ವಿಷ್ಣು ರುದ್ರರೆಂಬ ಮೂರ್ತಿತ್ರಯ ಭೇದರಹಿತವಾದ ಸತ್ವರಜಸ್ತಮೋ ಗುಣಂಗಳ ಮೀರಿದ ತುರ್ಯ, ತುರ್ಯಾತೀತ ಸಂಪತ್ತಿಯುಳ್ಳ ಯಾವುದಾನೊಂದು ಪರಬ್ರಹ್ಮಂ ಶ್ರೀ ಗುರು ಸ್ವಾನುಭವಂಗಳಿಂ ಪ್ರಕಾಶಿಸಲ್ಪಡುತ್ತಿಹುದು ಅದು ಜ್ಞಾನಕ್ಕಾಶ್ರಯವಾದ ತೃಪ್ತಿಲಿಂಗವೆಂದು ಪೇಳಲ್ಪಡುತ್ತಿಹದೆಂಬುದರ್ಥಂ ||೪೭|| ಬಳಿಕಾ ಜ್ಞಾನಲಿಂಗಮಂ ಸೂತ್ರದ್ವಯದಿಂ ವಿಶೇಷಿಸುತಿರ್ದಪಂ.

ಸ್ಥೂಲೇ ಕ್ರಿಯಾಸಮಾಪತ್ತಿಸ್ಸೂಕ್ಷ್ಮೇಭಾವಸ್ಯ ಸಂಭವಃ
ಸ್ಥೂಲಸೂಕ್ಷ್ಮಪದಾತೀತೇ ಜ್ಞಾನಮೇವ ಪರಾತ್ಮನಿ ||

ಸ್ಥೂಲರೂಪವಾದ ಇಷ್ಟಲಿಂಗದಲ್ಲಿ ಕ್ರಿಯಾರೂಪವಾದ ಪೂಜಾಸಂಪತ್ತಿಯುಂಟಾಗಿರುವುದು. ಸೂಕ್ಷ್ಮರೂಪಮಾದ ಪ್ರಾಣಲಿಂಗದಲ್ಲಿ ಮನೋನೈರ್ಮಲ್ಯಮುಂಟಾಗಿಹುದು. ತೃಪ್ತಿಲಿಂಗರೂಪಮಾದ ಪರಮಾತ್ಮನಲ್ಲಿ ಜ್ಞಾನವೆ ಪ್ರಕಾಶಿಸುತ್ತಿಹುದೆಂಬುದರ್ಥಂ||೪೮|| ಬಳಿಕ ಉಪಾಸನಾರ್ಥವಾಗಿ ಶಿವನಿಗೆ ಸೂಕ್ಷ್ಮಕರ್ಮಂಗಳವಶ್ಯಕಮೆಂಬಲ್ಲಿ ಪೇಳುತಿರ್ದಪಂ.

ಕಲ್ಪಿತಾನಿ ಹಿ ರೂಪಾಣಿ ಸ್ಥೂಲಾನಿ ಪರಮಾತ್ಮನಃ
ಸೂಕ್ಷ್ಮಾಣ್ಯಪಿ ಚ ತೈಃ ಕಿಂ ವಾ ಪರಬೋಧಂ ಸಮಾಚರೇತ್ ||

ಪರಮಾತ್ಮಂಗೆ ಸ್ಥೂಲಸೂಕ್ಷ್ಮರೂಪಂಗಳು ಮಾಯಾಕಲ್ಪಿತಮಾದ ಕಾರಣದಿಂ ಕೇವಲಮುಮುಕ್ಷುಗಳಾದವರಿಗೆ ಆ ರೂಪಂಗಳಿಂ ಪ್ರಯೋಜನವಿಲ್ಲದ ಕಾರಣದತ್ತಣಿಂ ಪರಬ್ರಹ್ಮಸ್ವರೂಪವಾದ ತೃಪ್ತಿಲಿಂಗವನೆ ಉತ್ಕೃಷ್ಟವಾದವನಾಗಿ ತಿಳಿವುದೆಂಬುದರ್ಥಂ ||೪೯|| ಬಳಿಕ ಸರ್ವೋತ್ಕೃಷ್ಟವಾದ ಪರಬೋಧೆಯಂ ತಿಳಿದಾತನೆ ಜ್ಞಾನಲಿಂಗಿ ಎಂದು ಪೇಳುತಿರ್ದಪಂ.

ಪರಾತ್ಪರಂ ತು ಯದ್ಬ್ರಹ್ಮ ಪರಮಾನಂದಲಕ್ಷಣಮ್
ಶಿವಾಖ್ಯಂ ಜ್ಞಾಯತೇ ಯೇನ ಜ್ಞಾನಲಿಂಗೀತಿ ಕಥ್ಯತೇ ||

ವಿಶ್ವಕ್ಕಿಂತಲೂ ಉತ್ಕೃಷ್ಟವಾದ ಶಕ್ತಿ ತತ್ತ್ವಕ್ಕಾಶ್ರಯವಾದ ಕಾರಣದಿಂದ ದಕ್ಕಿದಂಥಾ ಉತ್ಕೃಷ್ಟವಾದ ಪರಮಾನಂದಸ್ವರೂಪಮಾದ ಶಿವನೆಂಬ ಪೆಸರುಳ್ಳ ಯಾವುದಾನೊಂದು ಪರಬ್ರಹ್ಮ ಉಂಟು. ಅದು ಯಾವಾತನಿಂ ತಿಳಿಯಲ್ಪಡುತ್ತಿಹುದು ಆತಂ ಜ್ಞಾನಲಿಂಗಿ ಎಂದು ಪೇಳಲ್ಪಡುವನೆಂಬುದರ್ಥಂ ||೫೦|| ಬಳಿಕ ಜ್ಞಾನಲಿಂಗಿಯೆ ಪರಮುಕ್ತನೆಂದು ಪೇಳಿ ಜ್ಞಾನಲಿಂಗಸ್ಥಲಮಂ ಮುಗಿಸುತಿರ್ದಪಂ.

ಬಾಹ್ಯಕ್ರಿಯಾಂ ಪರಿತ್ಯಜ್ಯ ಚಿಂತಾಮಪಿ ಚ ಮಾನಸೀಮ್
ಅಖಂಡಜ್ಞಾನರೂಪತ್ವಂ ಯೋ ಭಜೇನ್ಮುಕ್ತ ಏವ ಸಃ ॥

ಯಾವಾತಂ ತನ್ನಿಷ್ಟಲಿಂಗದ ಸಂಬಂಧವಾದ ಬಾಹ್ಯಕ್ರಿಯಾಪೂಜೆಯಂ ಪ್ರಾಣಲಿಂಗದ ಸಂಬಂಧಮಾದ ಮನಸ್ಸು ಚಿಂತೆಯನೂ ಬಿಟ್ಟು ಪರಿಪೂರ್ಣವಾದ ತೃಪ್ತಿ ಲಿಂಗವನೂ ಭಜಿಸುವನು ಆತಂ ಮುಕ್ತನೆ ಎಂಬುದರ್ಥಂ ॥೫೧॥

## ೭. ಸ್ವಯಲಿಂಗಸ್ಥಲ

ಬಳಿಕ ಪರಂಜ್ಯೋತಿರೂಪ ಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಉತ್ತಮಃ ಪುರುಷಃ ತತ್ರ ಪರ್ಯೇತಿ ಎಂಬ ಛಾಂದೋಗ್ಯ ಶ್ರುತಿಯಿಂದಲೂ ಪ್ರಾಣಲಿಂಗಪರಿಜ್ಞಾನಾನಂದಃ ಸ ಶಿವಲಾಂಛನಃ ಬಾಹ್ಯಕರ್ಮಪರಿತ್ಯಾಗೀ ಸ ಸ್ವಯಂ ಲಿಂಗಮುಚ್ಯತೇ ಎಂಬ ವಾತುಲೋತ್ತರ ವಚನಾನುಸಾರದಿಂದಲೂ ಜ್ಞಾನಲಿಂಗಿಯೆ ಸ್ವಯಸ್ಥಲಸಂಪನ್ನನೆಂದು ನಿರೂಪಿತಿರ್ದಪಂ.

ತದ್ಭಾವಜ್ಞಾಪಕಜ್ಞಾನಂ ಯತ್ರ ಜ್ಞಾನೇ ಲಯಂ ವ್ರಜೇತ್
ತದ್ಭಾನೇಷ ಸಮಾಖ್ಯಾತ ಸ್ವಾಭಿಧಾನೋ ಮನೀಷಿಭಿಃ ॥

ಆ ಭಾವಜ್ಞಾಪಕಮಾದ ಜ್ಞಾನವು ಯಾವ ಜ್ಞಾನದಲ್ಲಿ ಲಯವನೈದುತ್ತಿಹುದು ಆ ಜ್ಞಾನಲಯಸ್ಥಾನವುಳ್ಳ ಈ ಜ್ಞಾನಲಿಂಗಿಯೆ ಸ್ವಯಲಿಂಗವೆಂಬ ಪೆಸರುಳ್ಳವನೆಂದು ಶಿವಜ್ಞಾನಿಗಳಿಂ ಪೇಳಲ್ಪಟ್ಟನೆಂಬುದರ್ಥಂ ॥೫೨॥ ಬಳಿಕಾತನಾಚಾರಮಂ ನಾಲ್ಕು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಸ್ವಚ್ಛಂದಾಚಾರಸಂತುಷ್ಟೋ ಜ್ಯೋತಿರ್ಲಿಂಗಪರಾಯಣಃ
ಆತ್ಮಸ್ಥಸಕಲಾಕಾರಃ ಸ್ವಾಭಿಧೋ ಮುನಿಸತ್ತಮಃ ॥

ಬಾಹ್ಯಲಿಂಗದಲ್ಲಿ ವಿಮುಖನಾಗಿ ಚಿಲ್ಲಿಂಗನಿಷ್ಠನಾದ ಸ್ವೇಚ್ಛಾಚಾರಸಂತುಷ್ಟನಾದ ಶಿವರೂಪನಾದ ತನ್ನಲ್ಲಿ ಇರುವ ಸಕಲಾಕಾರವುಳ್ಳ ಮುನಿಶ್ರೇಷ್ಠನೆ ಸ್ವಯಲಿಂಗವೆಂಬ ಪೆಸರುಳ್ಳನೆಂಬುದರ್ಥಂ ॥೫೩॥

ನಿರ್ಮಮೋ ನಿರಹಂಕಾರೋ ನಿರಸ್ತಕ್ಲೇಶಪಂಚಕಃ
ಭಿಕ್ಷಾಶೀ ಸಮಬುದ್ಧಿಶ್ಚ ಮುಕ್ತಪ್ರಾಯೋ ಮುನಿರ್ಭವೇತ್ ॥

ವಿಷಯಂಗಳಲ್ಲಿ ಮಮತೆಯಿಲ್ಲದ ಶರೀರಾದಿಗಳಲ್ಲಿ ನಾನೆಂಬಭಿಮಾನವಿಲ್ಲದ ಅವಿದ್ಯಾದಿ ಪಂಚಕ್ಲೇಶಂಗಳಿಲ್ಲದ ಭಿಕ್ಷಾನ್ನಭೋಕ್ತೃವಾದ ಮಣ್ಣಹೆಂಟೆ ಪಾಷಾಣ ಸಕಲ ಕಾಂಚನಂಗಳಲ್ಲಿ ಸಮಾನವಾದ ಬುದ್ಧಿಯುಳ್ಳ ಸ್ವಯಲಿಂಗವೆಂಬ ಪೆಸರುಳ್ಳ ಯತೀಶ್ವರಂ ಚರಮದೇಹಿಯಾದ ಕಾರಣದಿಂ ಮುಕ್ತನಿಗೆ ಸದೃಶನಹನೆಂಬುದರ್ಥಂ ॥೫೪॥

ಯದೃಚ್ಛಾಲಾಭಸಂತುಷ್ಟೋ ಭಸ್ಮನಿಷ್ಠೋ ಜಿತೇಂದ್ರಿಯಃ
ಸಮವೃತ್ತಿರ್ಭವೇದ್ಯೋಗೀ ಭಿಕ್ಷುಕೇ ವಾ ನೃಪೇಽಥ ವಾ ॥

ಶಿವಯೋಗಿಯು ಯಥಾಲಾಭಸಂತುಷ್ಟನಾಗಿ ಭಸ್ಮಸ್ನಾನಾದಿಗಳಲ್ಲಿ ನಿಷ್ಠನಾಗಿ ಜಿತೇಂದ್ರಿಯನಾಗಿ ಭಿಕ್ಷುಕನಲ್ಲಿಯೂ ರಾಜನಲ್ಲಿಯೂ ಸಮಾನವಾದ ಬುದ್ಧಿಯುಳ್ಳವನಾಗಿ ಹದೆಂಬುದರ್ಥಂ ॥೫೫॥

ಪಶ್ಯನ್ಸರ್ವಾಣಿ ಭೂತಾನಿ ಸಂಸಾರಸ್ಥಾನಿ ಸರ್ವಶಃ
ಸ್ಮಯಮಾನಃ ಪರಾನಂದೇ ಲೀನಾತ್ಮಾ ವರ್ತತೇ ಸುಧೀಃ ॥

ಶೋಭನವಾದಬುದ್ಧಿಯುಳ್ಳ ಸ್ವಯಲಿಂಗಯತೀಶ್ವರಂ ಎಲ್ಲಾ ಕಡೆಯಲ್ಲೂ ಸಂಸಾರ ಚಕ್ರದಲ್ಲಿ ಸಂಚರಿಸುತ್ತಿಹ ಸಕಲಪ್ರಾಣಿಗಳಂ ಕಾಣುತ್ತ ಆಶ್ಚರ್ಯವುಳ್ಳವನಾಗಿ ಪರಮಾನಂದಮಯವಾದ ಮಹಾಲಿಂಗದಲ್ಲಿ ಅಡಗಿದನಾಗಿರುವನೆಂಬುದರ್ಥಂ ॥೫೬॥ ಬಳಿಕ ಯತೀಶ್ವರಂಗೆ ನಿತ್ಯವೂಮಾಡುವ ಕೃತ್ಯಮಂ ಪೇಳಿ ಸ್ವಯಲಿಂಗಮಂ ಮುಗಿಸುತಿರ್ದಪಂ.

ಧ್ಯಾನಂ ಶೈವಂ ತಥಾ ಜ್ಞಾನಂ ಭಿಕ್ಷಾ ಚೈಕಾಂತಶೀಲತಾ
ಯತೇಶ್ಚತ್ವಾರಿ ಕರ್ಮಾಣಿ ನ ಪಂಚಮಮಿಹೇಷ್ಯತೇ ॥

ಶಿವಾಧಿಕ್ಯಜ್ಞಾನವು ಶಿವಚಿಂತನೆಯು ಭಿಕ್ಷಾಹಾರವು ಏಕಾಂತವಾಸವು ಈ ನಾಲ್ಕು ಸ್ವಯಲಿಂಗ ಯೋಗಿಗೆ ವಿಹಿತವಾದಂಥಾವು ಐಯ್ದನೆಯದಂ ಇಚ್ಛೈಸಲ್ಪಡದೆಂಬುದರ್ಥಂ ॥ ೫೭॥

## ೮. ಚರಲಿಂಗ ಸ್ಥಲ

ಬಳಿಕ ಆತ್ಮರತಿರಾತ್ಮಕ್ರೀಡಃ ಆತ್ಮಮಿಥುನಮಾತ್ಮಾನಂದಃ ಸ್ವ ಸ್ವರಾಟ್ ಭವತಿ ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ ಎಂಬ ಛಾಂದೋಗ್ಯ ಶ್ರುತಿಯಿಂ ಅಹಂ ಮಮತ್ವಶೂನ್ಯಾತ್ಮಾನ್ನಿಜಬೋಧೈಕರೂಪದೃಕ್ ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಸ್ಮೃತಃ ಹೀಗೆಂಬ ವಾತುಲೋತ್ತರ ವಚನದಿಂದಲೂ ಆ ಸ್ವಯಲಿಂಗ ಸಂಪನ್ನನು ತಾನೆ ಆಗಿ ಚರಿಸುತ್ತಿಹನೆಂದು ಚರಸ್ಥಲಮಂ ನಿರೂಪಿಸುತಿರ್ದಪಂ.

ಸ್ವರೂಪಜ್ಞಾನಸಂಪನ್ನೋ ಧ್ವಸ್ತಾಹಂ ಮಮತಾಕೃತಿಃ
ಸ್ವಯಮೇವ ಸ್ವಯಂಭೂತ್ವಾ ಚರತೀತಿ ಚರಾಭಿದಃ ॥

ನಿವಾರಿಸಲ್ಪಟ್ಟ ಅಹಂಕಾರ ಮಮಕಾರ ಸ್ಥಲವನಾಗಿ ಸ್ವರೂಪಜ್ಞಾನಸಂಪನ್ನನಾದ ಸ್ವಯಂಲಿಂಗಿಯು ತಾನೆ ತಾನಾಗಿ ಸಂಚರಿಸುತ್ತಿಹುದರಿಂ ಚರಲಿಂಗವೆನಿಸಿಕೊಂಬನೆಂಬುದರ್ಥಂ ॥೫೮॥ ಬಳಿಕಾ ಚರಲಿಂಗಿಯ ಆಚಾರವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಕಾಮಕ್ರೋಧಾದಿನಿರ್ಮುಕ್ತಃ ಶಾಂತಿದಾಂತಿ ಸಮನ್ವಿತಃ
ಸಮಬುದ್ಧ್ಯಾ ಚರೇದ್ಯೋಗೀ ಸರ್ವತ್ರ ಶಿವಬುದ್ಧಿಮಾನ್ ॥

ಕಾಮಕ್ರೋಧಾದಿ ಅರಿಷಡ್ವರ್ಗಶೂನ್ಯನಾಗಿ ಅಂತರ್ಬಾಹ್ಯೇಂದ್ರಿಯ ನಿಗ್ರಹವುಳ್ಳವನಾಗಿ ಸಕಲಪ್ರಪಂಚವೂ ಶಿವಸ್ವರೂಪವೆ ಎಂಬ ಬುದ್ಧಿಯುಳ್ಳವನಾಗಿ ಶತ್ರು ಮಿತ್ರರಲ್ಲಿ ಸಮಾನವಾದ ಬುದ್ಧಿಯುಳ್ಳವನೆಂಬುದರ್ಥಂ ॥೫೯॥

ಇದಂ ಮುಖ್ಯಮಿದಂ ಹೀನಮಿತಿ ಚಿಂತಾಮಕಲ್ಪಯನ್
ಸರ್ವತ್ರ ಸಂಚರೇದ್ಯೋಗೀ ಸರ್ವಂ ಬ್ರಹ್ಮೇತಿಭಾವಯನ್ ॥

ಶಿವಯೋಗಿಯಾದವಂ ಇದು ಶ್ರೇಷ್ಠಮಿದು ನಿಕೃಷ್ಟವೆಂಬ ಬುದ್ಧಿಯಂ ಮಾಡದೆ ಸಕಲವೂ ಬ್ರಹ್ಮವೆಂದು ಚಿಂತಿಸುವಾತನಾಗಿ ಎಲ್ಲ ಕಡೆಯಲ್ಲೂ ಸಂಚರಿಸುತ್ತಿಹನೆಂಬುದರ್ಥಂ ॥೬೦॥

ನ ಸಮ್ಮಾನೇಷು ಸಂಪ್ರೀತಿಂ ನಾವಮಾನೇಷು ಚ ವ್ಯಥಾಮ್
ಕುರ್ವಾಣಃ ಸಂಚರೇದ್ಯೋಗೀ ಕೂಟಸ್ಥೋ ಸ್ವಾತ್ಮನಿ ಸ್ಥಿತಃ ॥

ತುರ್ಯಸಾಕ್ಷಿಕಪ್ರತ್ಯಗಾತ್ಮನಿಜಸ್ವರೂಪದಲ್ಲಿ ಇರುತ್ತಿಹ ಶಿವಯೋಗೀಶ್ವರಂ ಸನ್ಮಾನಂಗಳಲ್ಲಿ ಪ್ರೀತಿಯಂ ಅವಮಾನಂಗಳಲ್ಲಿ ದುಃಖಮಂ ಮಾಡದೆ ಸಂಚರಿಸುತ್ತಿಹನೆಂಬುದರ್ಥಂ॥೬೧॥

ಅಪ್ರಾಕೃತೈರ್ಗುಣೈಃ ಸ್ವೀಯೈಃ ಸರ್ವಂ ವಿಸ್ಮಾಪಯನ್ ಜನಮ್
ಅದ್ವೈತಪರಮಾನಂದಮುದಿತೋ ದೇಹಿವಚ್ಚರೇತ್ ॥

ಶಿವಾದ್ವೈತಜ್ಞಾನದಿಂದಾವಿರ್ಭೂತವಾದ ಪರಮಾನಂದದಿಂ ವಂದಿತನಾದ ಶಿವಯೋಗೀಶ್ವರಂ ಲೋಕೋತ್ತರಮಾದ ತನ್ನ ಗುಣಗಳಿಂ ಹೊಗಲ್ಪಟ್ಟ ವಿಷಮಬುದ್ಧಿಯುಳ್ಳ ಸ್ಥಿರಚಿತ್ತವಾದ ಶಿವಯೋಗಿಶ್ವರಂ ದೇಹವಿದ್ದರೂ ಪ್ರಾಕೃತಜನರಂತೆ ಜಗತ್ತಿನಲ್ಲಿ ಚರಿಸನು ಪುಣ್ಯ ಕೃತ್ಯದಲ್ಲಿಯೂ ಚರಿಸನು ಪಾಪ ಕೃತ್ಯಂಗಳಲ್ಲಿಯೂ ಚರಿಸನೆಂಬುದರ್ಥಂ ॥೬೨॥ ಬಳಿಕ ಚರಲಿಂಗಸ್ಥಲಮಂ ಮುಗಿಸುತಿರ್ದಪಂ.

ನ ಪ್ರಪಂಚೇ ನಿಜೇ ದೇಹೇ ನ ಧರ್ಮೇ ನ ಚ ದುಷ್ಕೃತೇ
ನ ಚ ವೈಷಮ್ಯಧೀರ್ಧೀರೋ ಯತಿಶ್ಚರತಿ ದೇಹಿವತ್ ॥

ನ ಪ್ರಪಂಚೇ- ಪ್ರಪಂಚವಿಲ್ಲದಿರ್ದ, ನಿಜದೇಹೇ- ತನ್ನ ದೇಹದಲ್ಲಿ, ನಧರ್ಮೇ ನ ಚ ದುಷ್ಕೃತೇ- ಪುಣ್ಯಪಾಪವಿಲ್ಲದಿಹುದರಿಂದ, ಗತ ವೈಷಮ್ಯಾದಿಃ- ವಿಷಮ ಬುದ್ಧಿ ಇಲ್ಲದಾತನಾಗಿ, ಯೋಗಿಃ- ಯೋಗಿಯು, ನಿತ್ಯಂ- ಆವಾಗಲೂ, ದೇಹಿವತ್- ಶರೀರಿಯೋಪಾದಿಯಲ್ಲಿ, ಚರತಿ- ಚರಿಸುತ್ತಂ ಇಹನು ॥೬೩॥*

ಪ್ರಾಕೃತೈಶ್ವರ್ಯಸಂಪತ್ತಿಪರಾಙ್ಮುಖಮನಸ್ಥಿತಿಃ
ಚಿದಾನಂದ ನಿಜಾತ್ಮಸ್ಥೋ ಮೋದತೇ ಮುನಿಪುಂಗವಃ ॥

ಪ್ರಕೃತಿತತ್ತ್ವದಿಂದುಂಟಾದ ಬ್ರಹ್ಮಾದಿಗಳ ಐಶ್ವರ್ಯದಲ್ಲಿ ಅಡ್ಡಲಾದ ಚಿತ್ತ ವೃತ್ತಿಯುಳ್ಳ ಯತೀಶ್ವರಂ ಚಿದಾನಂದಮಯವಾದ ನಿಜಸ್ವರೂಪನಿಷ್ಠನಾಗಿ ಸುಖಿಸುತ್ತಿಹನೆಂಬುದರ್ಥಂ ॥೬೪॥

---

*ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

## ೯. ಪರಲಿಂಗಸ್ಥಲ

ಬಳಿಕ ತದ್ಬ್ರಹ್ಮಾಹಮಿತಿ ಜ್ಞಾತ್ವಾ ಬ್ರಹ್ಮ ಸಂಪದ್ಯತೇ ಪರಮೆಂಬ ಅಮೃತಬಿಂದು ಶ್ರುತಿಯಿಂ ಸ್ವಯಂ ಸ್ವಯತ್ವಮಾಸಾದ್ಯ ಚರತೋ ನ ಪರಃ ಸ್ಮೃತಃ ಅಸೌ ತತೋಽ ತೀತವರ್ಣಾಶ್ರಮತ್ವೇನ ಪರಃ ಸ್ಮೃತಃ ಎಂಬ ವಾತುಲೋತ್ತರ ವಚನದಿಂದಲೂ ಸ್ವರೂಪಸಿದ್ಧನಾಹತನದಿಂ ಸಂಚರಿಸುವ ಶಿವಯೋಗಿಶ್ವರಂಗೆ ಪರವಿಲ್ಲವೆಂಬ ಜ್ಞಾನಕ್ಕೆ ಪರಲಿಂಗಸ್ಥಲತ್ವಮಂ ಸಪ್ತಸೂತ್ರಗಳಿಂ ಪ್ರತಿಪಾದಿಸುತಿರ್ದಪಂ.

ಸ್ವಯಮೇವ ಸ್ವಯಂ ಭೂತ್ವಾ ಚರತಃ ಸ್ವಸ್ವರೂಪತಃ
ಪರಂ ನಾಸ್ತೀತಿ ಬೋಧಸ್ಯ ಪರತ್ವಮಭಿಧೀಯತೇ ॥

ತಾನೆ ತಾನಾಗಿ ಸಂಚರಿಸುವ ಶಿವಯೋಗೀಶ್ವರನ ಸ್ವರೂಪದತ್ತಣಿಂ ಪರವಿಲ್ಲವೆಂಬ ಜ್ಞಾನಕ್ಕೆ ಪರತ್ವ ಪೇಳಲ್ಪಡುತ್ತದೆ ಎಂಬುದರ್ಥಂ ॥೬೫॥ ಬಳಿಕಾತನ ಸ್ಥಿತಿ ಪ್ರಕಾರಮಂ ಪೇಳುತಿರ್ದಪಂ.

ಸ್ವತಂತ್ರಃ ಸರ್ವಕೃತ್ಯೇಷು ಸ್ವಂ ಪರತ್ವೇನ ಭಾವಿತಃ
ತೃಣೀಕುರ್ವನ್ ಜಗಜ್ಜಾಲಂ ವರ್ತತೇ ಶಿವಯೋಗಿರಾಟ್ ॥

ಸಕಲಕಾರ್ಯಂಗಳಲ್ಲಿಯೂ ಸ್ವತಂತ್ರನಾಗಿ ವಿಶ್ವಸಮೂಹಮಂ ತೃಣವಾಗಿ ಮಾಡುತ್ತಿಹನೆಂಬುದರ್ಥಂ ॥೬೬॥ ಬಳಿಕಾತನೆಂತು ಸುಖಿಸುತ್ತಿಹನೆಂಬಲ್ಲಿ ಪೇಳುತಿರ್ದಪಂ.

ವರ್ಣಾಶ್ರಮ ಸದಾಚಾರಮಾರ್ಗನಿಷ್ಠಾಪರಾಙ್ಮುಖಃ
ಸರ್ವೋತ್ಕೃಷ್ಟಂ ಸ್ವಮಾತ್ಮಾನಂ ಪಶ್ಯನ್ ಯೋಗೀ ತು ಮೋದತೇ॥

ಶಿವಯೋಗೀಶ್ವರಂ ಬ್ರಾಹ್ಮಣಾದಿವರ್ಣ ಬ್ರಹ್ಮಚರ್ಯಾದ್ಯಾಶ್ರಮಂಗಳಲ್ಲಿಯ ಸದಾಚಾರ ನಿಷ್ಠೆಯಲ್ಲಿ ಅಡ್ಡಲಾದ ಮುಖವುಳ್ಳಾತನಾಗಿ ತನ್ನಂ ಪರಾಧಿಕನಾಗಿ ತಿಳಿವುತ್ತ ಸುಖಿಸುತ್ತಿಹನೆಂಬುದರ್ಥಂ ॥೬೭॥ ಬಳಿಕ ಸರ್ವೋತ್ಕೃಷ್ಟವೆಂದರೇನೆಂಬಲ್ಲಿ ಪೇಳುತಿರ್ದಪಂ.

ವಿಶ್ವಾತೀತಂ ಪರಂ ಬ್ರಹ್ಮ ಶಿವಾಖ್ಯಂ ಚಿತ್ಸ್ವರೂಪಕಮ್
ತದೇವಾಹಮಿತಿ ಜ್ಞಾನೀ ಸರ್ವೋತ್ಕೃಷ್ಟಃ ಸ ಉಚ್ಯತೇ ॥

ಚಿದಾನಂದಸ್ವರೂಪವಾದ ಶಿವನೆಂಬ ಪೆಸರುಳ್ಳ ಪರಬ್ರಹ್ಮ ಸರ್ವೋತ್ಕೃಷ್ಟ ವಾದಂಥಾದ್ದು ಆ ಬ್ರಹ್ಮವೆ ತಾನೆಂಬ ಜ್ಞಾನವುಳ್ಳವಂ ಸರ್ವೋತ್ಕೃಷ್ಟನೆಂದು ಪೇಳಲ್ಪಡುವ ನೆಂಬುದರ್ಥಂ ॥೬೮॥ ಬಳಿಕಾ ಯೋಗಿಶ್ವರಂ ಬ್ರಹ್ಮಸ್ವರೂಪನಾದಡೆ ಬ್ರಹ್ಮವನ್ಮುಕ್ತನಾಗ ಬೇಕೆಂಬ ಶಂಕೆಗೆ ಉತ್ತರಮಂ ಪೇಳುತಿರ್ದಪಂ.

ಅಚಲಂ ಧ್ರುವಮಾತ್ಮಾನಮನುಪಶ್ಯನ್ನಿರಂತರಮ್
ನಿರಸ್ತವಿಶ್ವವಿಭ್ರಾಂತಿರ್ಜೀವನ್ಮುಕ್ತೋ ಭವೇನ್ಮುನಿಃ ॥

ಚಂಚಲವಲ್ಲದ ನಿತ್ಯವಾದ ಸ್ವರೂಪಮಂ ಎಲ್ಲಾಗಳು ಖಂಡಿತತ್ವವಲ್ಲದಂಥಾ

ದನಾಗಿ ನೋಡುವ ಶಿವಯೋಗೀಶ್ವರಂ ನಿವಾರಿಸಲ್ಪಟ್ಟ ಪ್ರಾಪಂಚಿಕ ಭ್ರಾಂತಿಯುಳ್ಳವನಾಗಿ ಆಹಾರ ವ್ಯವಹಾರಗಳಿಂ ಬದುಕಿದ್ದವನಾದರೂ ಮರಳಿ ಜನ್ಮಾಂತರವಿಲ್ಲದ ಕಾರಣದಿಂ ಮುಕ್ತನೆಂಬುದರ್ಥಂ ॥೬೯॥ ಬಳಿಕ ವರ್ಣಾಶ್ರಮಾಚಾರ ಪರಿತ್ಯಾಗದಿಂ ಕರ್ಮದೇವತೆಗಳು ಕುಪಿತರಾಹರು ಅದರಿಂದೆಂತು ಜೀವನ್ಮುಕ್ತನಹನೆಂಬಲ್ಲಿ ಪೇಳುತಿರ್ದಪಂ.

ಬ್ರಹ್ಮಾದ್ಯಾಃ ಕಿಂ ನು ಕುರ್ವಂತಿ ದೇವತಾಃ ಕರ್ಮಮಾರ್ಗಗಾಃ
ಕರ್ಮಾತೀತಪದಸ್ಥಸ್ಯ ಸ್ವಯಂ ಬ್ರಹ್ಮಸ್ವರೂಪಿಣಃ॥

ತಾನೇ ಬ್ರಹ್ಮ ಸ್ವರೂಪವಾಗಿ ಪುಣ್ಯಪಾಪವಾದ ಕರ್ಮಕಾಂಡಸ್ಥಾನವ ಮೀರಿದ ಶಿವಯೋಗೀಶ್ವರಂಗೆ ಬ್ರಹ್ಮಾದಿ ವಿಷ್ಣು ಮೊದಲಾದ ಕರ್ಮಮಾರ್ಗನಿಷ್ಠರಾದ ದೇವತೆಗಳೂ ಏನ ಮಾಡಲಾಪರು ಏನನೂ ಮಾಡಲಾರರೆಂಬುದರ್ಥಂ ॥ ೭೦॥ ಬಳಿಕ ಶಿವಯೋಗೀಶ್ವರಂ ಮೂಢರನೂ ಮುಕ್ತರಂ ಮಾಡುತ್ತಿಹನೆಂದು ಪೇಳುತಿರ್ದಪಂ.

ಸ್ವೇಚ್ಛಯಾ ಸಂಚರೇದ್ಯೋಗಿ ವಿಮುಂಚನ್ ದೇಹಮಾನಿತಾಮ್
ದರ್ಶನೈಃ ಸ್ಪರ್ಶನೈಃ ಸರ್ವಾನಜ್ಞಾನಪಿ ವಿಮೋಚಯೇತ್॥

ದೇಹಾಭಿಮಾನವಂ ಬಿಟ್ಟು ಶಿವಯೋಗೀಶ್ವರಂ ತನ್ನಿಚ್ಛೆಯಿಂ ಚರಿಸುವಾತನಾದರೂ ದರ್ಶನ ಸ್ಪರ್ಶನಗಳಿಂ ಸಮಸ್ತವಾದ ಪ್ರಾಕೃತಜನರಂ ಮುಕ್ತರಂ ಮಾಡುವನೆಂಬುದರ್ಥಂ ॥೭೧॥ ಬಳಿಕ ನಿರಂಜನಃ ಪರಮಂ ಸಾಮ್ಯಮುಪೈತಿ ದಿವ್ಯಮೆಂಬ ಶ್ರುತಿಯಿಂ ಪರಲಿಂಗರೂಪನಾದ ಶಿವಯೋಗೀಶ್ವರನೆ ಶಿವಭಾವಸಂಪನ್ನನಾದ ಕಾರಣದತ್ತಣಿಂ ಜೀವನ್ಮುಕ್ತನೆಂದು ಪೇಳಿ ಪರಸ್ಥಲಮಂ ಮುಗಿಸುತಿರ್ದಪಂ.

ನಿತ್ಯೇ ನಿರ್ಮಲಭಾವನೇ ನಿರುಪಮೇ ನಿರ್ಧೂತವಿಶ್ವಭ್ರಮೇ
ಸತ್ತಾನಂದಚಿದಾತ್ಮಕೇ ಪರಶಿವೇ ಸಾಮ್ಯಂ ಗತಃ ಸಂಯಮಿಾ
ಪ್ರಧ್ವಸ್ತಾಶ್ರಮವರ್ಣ ಧರ್ಮನಿಗಲಃ ಸ್ವಚ್ಛಂದಸಂಚಾರವಾನ್
ದೇಹೀವಾಗದ್ಭುತವೈಭವೋ ವಿಜಯತೇ ಜೀವನ್ವಿಮುಕ್ತಃಸುಧೀಃ॥

ನಿತ್ಯನಿರ್ಮಲ ಸ್ವರೂಪವಾದ ಉಪಮಾತೀತವಾದ ನಿವಾರಿಸಲ್ಪಟ್ಟ ಸಕಲ ದೋಷವುಳ್ಳ ಸಚ್ಚಿದಾನಂದ ಸ್ವರೂಪವಾದ ಪರಶಿವನಲ್ಲಿ ಜ್ಞಾತೃಕತೃತ್ವಯೋಗದಿಂ ಸಾಮ್ಯವನೈದಿದ ನಿವಾರಿಸಲ್ಪಟ್ಟ ವರ್ಣಾಶ್ರಮಧರ್ಮವೆಂಬ ಸಂಕಲೆಯುಳ್ಳ ಸ್ವೇಚ್ಛಾಚಾರವುಳ್ಳವನಾದರೂ ಆಶ್ಚರ್ಯವಾದ ಮಹತ್ವದ ಸಂಪತ್ತಿಯುಳ್ಳವನಾಗಿ ಸರ್ವೋತ್ಕೃಷ್ಟನಾಗಿಹನೆಂಬುದರ್ಥಂ ॥೭೨॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವ ಧರ್ಮ ನಿರ್ಣಯ ಸಿದ್ಧಾಂತಶಿಖಾಮಣೌ ಲಿಂಗಸ್ಥಲೆ ಭಕ್ತಸ್ಥಲಗತ ನವವಿಧಲಿಂಗಸ್ಥಲಪ್ರಸಂಗೋನಾಮ ಪಂಚದಶೀಯಃ ಪರಿಚ್ಛೇದಃ

## ಷೋಡಶಪರಿಚ್ಛೇದ

### ಮಾಹೇಶ್ವರಸ್ಥಲ

ಬಳಿಕಾಗಸ್ತ್ಯಂ ಪ್ರಶ್ನೆಯಂ ಮಾಡುತಿರ್ದಪಂ,- ಅಗಸ್ತ್ಯ ಉವಾಚ

ಸ್ಥಲಾನಾಂ ನವಕಂ ಪ್ರೋಕ್ತಂ ಭಕ್ತಸ್ಥಲಸಮಾಶ್ರಯಮ್
ಮಾಹೇಶ್ವರಸ್ಥಲೇ ಸಿದ್ಧಂ ಸ್ಥಲಭೇದಂ ವದಸ್ವ ಮೇ ॥

ಭಕ್ತಸ್ಥಲವನಾಶ್ರಯಿಸಿದಲ್ಲಿ ಲಿಂಗಸ್ಥಲ ಒಂಬತ್ತು ಪೇಳಲ್ಪಟ್ಟಿತ್ತು ಇನ್ನು ಮಾಹೇಶ್ವರ ಸ್ಥಲ ಸಿದ್ಧಮಾದ ಲಿಂಗಸ್ಥಲಭೇದಮಂ ಎನಗೋಸ್ಕರ ಪೇಳಬೇಕೆಂಬುದರ್ಥಂ ॥೧॥ ಬಳಿಕ ಶ್ರೀ ರೇಣುಕಾಚಾರ್ಯಂ ಪ್ರತ್ಯುತ್ತರಮಂ ನಿರೂಪಿಸುತಿರ್ದಪಂ,- ಶ್ರೀ ರೇಣುಕ ಉವಾಚ

ಮಾಹೇಶ್ವರಸ್ಥಲೇ ಸಂತಿ ಸ್ಥಲಾನಿ ನವ ತಾಪಸ
ಕ್ರಿಯಾಗಮಸ್ಥಲಂ ಪೂರ್ವಂ ತತೋ ಭಾವಾಗಮಸ್ಥಲಮ್ ॥

ಜ್ಞಾನಾಗಮಸ್ಥಲಂ ಚಾಥ ಸಕಾಯಸ್ಥಲಮೀರಿತಮ್
ತತೋಽಕಾಯಸ್ಥಲಂ ಪ್ರೋಕ್ತಂ ಪರಕಾಯಸ್ಥಲಂ ತತಃ ॥

ಧರ್ಮಾಚಾರಸ್ಥಲಂ ಚಾಥ ಭಾವಾಚಾರಸ್ಥಲಂ ತತಃ ॥
ಜ್ಞಾನಾಚಾರಸ್ಥಲಂ ಚೇತಿ ಕ್ರಮಾದೇಶಾಂ ಭಿದೋಚ್ಯತೇ ॥

ಭೋ ಅಗಸ್ತ್ಯನೆ, ಮಾಹೇಶ್ವರಸ್ಥಲದಲ್ಲಿ ಒಂಬತ್ತು ಸ್ಥಲಂಗಳುಂಟು ಮೊದಲು ಕ್ರಿಯಾಗಮಸ್ಥಲವು ಆಮೇಲೆ ಭಾವಾಗಮಸ್ಥಲವು ಬಳಿಕ ಜ್ಞಾನಾಗಮಸ್ಥಲವು ಆಮೇಲೆ ಸಕಾಯ ಸ್ಥಲವು ಮರಳಿ ಅಕಾಯಸ್ಥಲವು ತದನಂತರದಲ್ಲಿ ಪರಕಾಯಸ್ಥಲವು ಆಮೇಲೆ ಧರ್ಮಾಚಾರಸ್ಥಲವು ಬಳಿಕ ಭಾವಾಚಾರಸ್ಥಲವು ಆಮೇಲೆ ಜ್ಞಾನಾಚಾರಸ್ಥಲವೆಂದು ಕ್ರಮದಿಂದಿವರುಗಳ ಭೇದ ಪೇಳಲ್ಪಡುತ್ತದೆ ಎಂಬುದರ್ಥಂ ॥೪॥

### ೧೦. ಕ್ರಿಯಾಗಮಸ್ಥಲ

ಬಳಿಕ ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತಾನಿ ನೋ ಇತರಾಣಿ ಎಂಬ ಶ್ರುತಿಯಿಂ ಅಲ್ಪಕ್ರಿಯಾ ಬಹುಫಲಂ ವೀರಶೈವಂ ಮಾಹೇಶ್ವರೀಯೆಂಬ ವಾತುಲೋತ್ತರ ವಚನದಿಂದಲೂ ಪೂರ್ವೋಕ್ತ ಪರಸ್ಥಲ ಸಂಪನ್ನನಾದ ಶಿವಯೋಗೀಶ್ವರಗೆ ಶಿವನು. ಆತನ ಪೂಜೆಯೆ ಕ್ರಿಯೆಯು ತತ್ಪರವಾದ ಆಗಮಮೆ ಕ್ರಿಯಾಗಮಸ್ಥಲವೆಂದು ನಿರೂಪಿಸುತಿರ್ದಪಂ.

ಶಿವೋ ಹಿ ಪರಮಸ್ಸಾಕ್ಷಾತ್ಪೂಜಾ ತಸ್ಯಕ್ರಿಯೋಚ್ಯತೇ
ತತ್ಪರಾ ಆಗಮ ಯಸ್ಮಾತ್ತದುಕ್ತೋಽಯಂ ಕ್ರಿಯಾಗಮಃ ॥

ಪೂರ್ವೋಕ್ತ ಪರಲಿಂಗಶಿವಯೋಗಿಗೆ ಪ್ರತ್ಯಕ್ಷವಾದ ಶಿವನಲಾ ಆತನ ಪೂಜೆಯೆ ಎಂದು ಪೇಳಲ್ಪಡುತ್ತಿಹುದು. ಆಗಮಂಗಳು ಯಾವ ಕಾರಣದಿಂ ಕ್ರಿಯಾಪ್ರಧಾನ

ವಾದಂಥಾದವು ಆ ಕಾರಣದಿಂದ ಕ್ರಿಯಾಗಮವೆಂದು ಪೇಳಲ್ಪಡುವದೆಂಬುದರ್ಥಂ ॥೫॥ ಬಳಿಕ ಪೂಜಾರೂಪಮಾದ ಕ್ರಿಯೆಯನ್ನೈದು ಸೂತ್ರಂಗಳಿಂ ವಿಶೇಷಿಸುತಿರ್ದಪಂ

ಪ್ರಕಾಶತೇ ಯಥಾ ನಾಗ್ನಿರರಣ್ಯಾಂ ಮಥನಂ ವಿನಾ
ಕ್ರಿಯಾಂ ವಿನಾ ತಥಾಂತಸ್ಥೋ ನ ಪ್ರಕಾಶೋ ಭವೇಚ್ಛಿವಃ॥

ದಾರುಪಾತ್ರೆಯಲ್ಲಿ ವಹ್ನಿಯು ಮಂಥನ ಹೊರತಾಗಿ ಹೇಗೆ ಪ್ರಕಾಶಿಸದು ಹಾಗೆ ಪೂಜಾಕ್ರಿಯೆಯಿಲ್ಲದೆ ಲಿಂಗಮಧ್ಯಸ್ಥನಾದ ಶಿವನು ಪ್ರಕಾಶಿಸನೆಂಬುದರ್ಥಂ॥೬॥ ಬಳಿಕಾ ಪೂಜೆಯೆಂತು ಮಾಡಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ನ ಯಥಾ ವಿಧಿಲೋಪಃ ಸ್ಯಾದ್ಯಥಾ ದೇವಃ ಪ್ರಸೀದತಿ
ಯಥಾಗಮಃ ಪ್ರಮಾಣಂ ಸ್ಯಾತ್ತಥಾ ಕರ್ಮಸಮಾಚರೇತ್ ॥

ಇತಿ ಕರ್ತವ್ಯತಾರೂಪವಾದ ನಿಯಮಲೋಪವಾದರೆ ಶಿವಂ ಪ್ರಸನ್ನನಾಗದಿರ್ದಡೆ ಆಗಮಕ್ಕೆ ಅಪ್ರಾಮಾಣ್ಯಮುಂಟಾಹುದು. ಆ ಕಾರಣದಿಂ ವಿಧಿಲೋಪವಾಗದಂತೆ ಶಿವಂ ಪ್ರಸನ್ನನಾಗುವಂತೆ ಆಗಮಪ್ರಾಮಾಣ್ಯಮಪ್ಪಂತೆ ಪೂಜೆ ಮಾಡಲ್ತಕ್ಕದೆಂಬುದರ್ಥಂ ॥೭॥ ಬಳಿಕ ಶಿವಪೂಜೆಯ ಮಾಡಬೇಕೆಂಬಲ್ಲಿ ಪೇಳುತಿರ್ದಪಂ.

ವಿಧಿಶ್ಶಿವನಿಯೋಗೋsಯಂ ತಸ್ಮಾದ್ವಿಹಿತಕರ್ಮಣಿ
ಶಿವಾರಾಧನಬುದ್ಧ್ಯೈವ ನಿರತಃ ಸ್ಯಾದ್ವಿಚಕ್ಷಣಃ ॥

ಶಾಸ್ತ್ರೋಕ್ತ ಕರ್ಮಣದಲ್ಲಿ ಶಿವಪೂಜೆಯ ಮಾಡಬೇಕೆಂಬುದು ಶಿವನ ಆಜ್ಞಾರೂಪ ವಾದ ವಿಧಿಯು. ಅದುಕಾರಣವಾಗಿ ಪ್ರವೀಣನಾದವಂ ಶಿವಾರಾಧನಬುದ್ಧಿಯಲ್ಲಿ ಆಸಕ್ತನಾಗಿ ರುವುದು. ಇಲ್ಲದಿರ್ದಡೆ ಶಿವನ ಆಜ್ಞೆಯ ಮೀರಿದ ಕಾರಣದಿಂ ನರಕವನ್ನೈದುವನೆಂಬುದರ್ಥಂ ॥೮॥ ಬಳಿಕ ಶಿವಪೂಜಾ ಪ್ರಕಾರಮೆಂದು ತಿಳಿಯಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ಗುರೋರಾದೇಶಮಾಸಾದ್ಯ ಪೂಜಯೇತ್ಪರಮೇಶ್ವರಮ್
ಪೂಜಿತೇ ಪರಮೇಶಾನೇ ಪೂಜಿತಾಸ್ಸರ್ವದೇವತಾಃ ॥

ಗುರೂಪದೇಶವ ಪಡೆದು ಆ ಪ್ರಕಾರದಿಂ ಶಿವಲಿಂಗವಂ ಪೂಜಿಸೂದು. ಶಿವನು ಸರ್ವದೇವಮಯನಾದ ಕಾರಣ ಶಿವನನ್ನು ಪೂಜಿಸುತ್ತಿರಲಾಗಿ ಸಕಲ ದೇವತೆಗಳೂ ಪೂಜಿಸಲ್ಪಟ್ಟವರಾಹರೆಂಬುದರ್ಥಂ ॥೯॥ ಬಳಿಕ ಪೂಜೆಗೇನುಫಲವೆಂಬಲ್ಲಿ ಪೇಳುತಿರ್ದಪಂ.

ಸದಾ ಶಿವಾರ್ಚನೋಪಾಯಸಾಮಗ್ರೀ ವ್ಯಗ್ರಮಾನಸಃ
ಶಿವಯೋಗರತೋ ಯೋಗೀ ಮುಚ್ಯತೇ ನಾತ್ರ ಸಂಶಯಃ ॥

ಎಲ್ಲಾಗಳು ಶಿವಲಿಂಗ ಪೂಜೆಗೆ ಉಪಾಯವಾದ ಸಾಮಗ್ರಿ ಸಂಪಾದನ ರೂಪವಾದ ಶಿವಯೋಗನಿಷ್ಠನಾದ ಶಿವಯೋಗೀಶ್ವರಂ ಮಲ ಮಾಯಾದಿ ಪಾಶಮುಕ್ತನಾಗುವ ನೀಯರ್ಥದಲ್ಲಿ ಸಂದೇಹವಿಲ್ಲಮೆಂಬುದರ್ಥಂ ॥೧೦॥ ಬಳಿಕ ಜ್ಞಾನಾದೇವ ತು ಕೈವಲ್ಯವೆಂಬಿವು ಮೊದಲಾದ ವಚನವ್ರಾತದಿಂ ಜ್ಞಾನಕ್ಕೆ ಮೋಕ್ಷಸಾಧನತ್ವಂ ಕೇಳಲ್ಪಡುತ್ತದೆ ಕರ್ಮಕ್ಕಿಲ್ಲವೆ ಎಂದು ಶಂಕಿಸಿದ ನ ಕ್ರಿಯಾರಹಿತಂ ಜ್ಞಾನಂ ನ ಜ್ಞಾನರಹಿತಾಕ್ರಿಯಾ

ಅಪಶ್ಯನ್ನಂಧಕೋ ದಗ್ಧೋऽ ಗಚ್ಛನ್ಪಂಗುಶ್ಚ ದಹ್ಯತೇಯೆಂಬಲ್ಲಿ ಶಿವರಹಸ್ಯ ವಚನಾನುಸಾರದಿಂ ಸಮಾಧಾನ ಮಾಡುತಿರ್ದಪಂ.

ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೋಃ
ಫಲೋತ್ಪತ್ತೌ ವಿರಕ್ತಸ್ಯ ತಸ್ಮಾತ್ತದ್ವಯಮಾಚರೇತ್ ॥

ಜ್ಞಾನಕ್ರಿಯೆಗಳಿಗೆ ಅಂಧಪಂಗುನ್ಯಾಯದಿಂ ಪರಸ್ಪರಾಪೇಕ್ಷೆಯುಂಟಾಗಲಾಗಿ ಅವೆರಡನೂ ಅದು ಕಾರಣವಾಗಿ ಪರಾಪರಮುಕ್ತಿಫಲವನೀವಲ್ಲಿ ವಿರಕ್ತನಾದಾತ ನಾಚರಿಸೂದೆಂಬುದರ್ಥಂ ॥೧೧॥ ಬಳಿಕ ಸಿದ್ಧಜ್ಞಾನಿಗಳಿಗೆ ಕರ್ಮದಿಂ ಪ್ರಯೋಜನ ವಿಲ್ಲವಲ್ಲ ಎಂಬಲ್ಲಿ ಪೇಳುತಿರ್ದಪಂ.

ಜ್ಞಾನೇ ಸಿದ್ಧೇऽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ
ಫಲಾಭಿಸಂಧಿರಹಿತಂ ತಸ್ಮಾತ್ಕರ್ಮ ನ ಸಂತ್ಯಜೇತ್ ॥

ಕರ್ಮಣಾ ಎಂಬ ಶೃತಿಯು ಕಾಮ್ಯಕರ್ಮಪರವಾದುದರಿಂದ ವಿದ್ವಾಂಸರಿಗೆ ಜ್ಞಾನಸಿದ್ಧವಾದರೂ ವೇದಾಂತದಲ್ಲಿ ಅಗ್ನಿಹೋತ್ರಾದಿಗಳಂತೆ ಫಲಾಪೇಕ್ಷೆಯಿಲ್ಲದೆ ಕರ್ಮವು ವಿಧಿಸುತ್ತಲಿ ಇಹುದು. ತತ್ತದಾಶ್ರಮವಿಹಿತಕರ್ಮವ ಬಿಟ್ಟರೆ ಪತಿತನಹನು. ಅದು ಕಾರಣದಿಂ ಜ್ಞಾನಂ ಪ್ರಧಾನಂ ನ ತು ಕರ್ಮಹೀನಂ ಕರ್ಮಪ್ರಧಾನಂ ನ ತು ಚಿದ್ವಿಹೀನಮ್ ತಸ್ಮಾದ್ವ ಯೋರೇವ ಭವೇತ್ಪ್ರಸಿದ್ಧಿರ್ನಹ್ಯೇಕಪಕ್ಷೋ ವಿಹಗಃ ಪ್ರಯಾತಿ ಎಂಬ ಅಭಿಯುಕ್ತೋಕ್ತಿಯಿಂ ನಿಷ್ಕಾಮಕರ್ಮಾನುಷ್ಠಾನವಶ್ಯಂ ಮಾಡಲ್ತಕ್ಕದೆಂಬುದರ್ಥಂ ॥೧೨॥ ಬಳಿಕ ಸದಾಚಾರಕ್ಕೆ ಆಧಿಕ್ಯಮಂ ಪ್ರತಿಪಾದಿಸುತಿರ್ದಪಂ.

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪ್ಯತೇ
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ ॥

ಆಗಮೋಕ್ತವಾದ ಸತ್ಕ್ರಿಯಾಚರಣೆಯೆ ಸಕಲರಿಗೂ ಅಲಂಕಾರಕ್ಕೋಸ್ಕರ ವಾಗುತ್ತಿಹುದು. ಆಚಾರಲಿಂಗದ ಪುರುಷನು ಲೋಕದಲ್ಲಿ ನಿಂದಿತಹನೆಂಬುದರ್ಥಂ ॥೧೩॥ ಅದು ಕಾರಣವಾಗಿ ಸಿದ್ಧನೂ ವಿದೇಹಕೈವಲ್ಯಪರ್ಯಂತವಾಗಿ ವಿಹಿತಸತ್ಕರ್ಮಾಚರಣೆ ಯುಳ್ಳವನಾಹದೆಂದು ಪೇಳಿ ಕ್ರಿಯಾಗಮಸ್ಥಲಮಂ ಮುಗಿಸುತಿರ್ದಪಂ.

ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್ ॥

ಪರಮೇಶ್ವರಂ ಸದಾಚಾರ ಸಂಯುಕ್ತವಾದ ಜ್ಞಾನದಿಂ ಪ್ರಸನ್ನನಹನು. ಅದು ಕಾರಣದಿಂ ಜ್ಞಾನಿಯಾದಾತಂ ದೇಹಾವಸಾನ ಪರ್ಯಂತರವಾಗಿ ಸದಾಚಾರ ಸಂಯುಕ್ತನಾಗಿಹದೆಂಬುದರ್ಥಂ ॥೧೪॥

## ೧೧. ಭಾವಾಗಮಸ್ಥಲ

ಬಳಿಕ ಯಂ ಯಥೋಪಾಸತೇ ತದೇವ ಭವತಿ ಯದ್ಭಾವಂ ತದ್ಭವತಿ ಯಥಾಕಾರೀ ತಥಾಚಾರೀ ತಥಾ ಭವತಿಯೆಂಬ ಬೃಹದಾರಣ್ಯ ಶ್ರುತಿಯಿಂ ಶಿವಭಾವಾನುಸಂಧಾನಾ

ಚ್ಛಿವೋ ಭಾವೇ ಪ್ರಕಾಶತೇ ಎಂಬ ಯೋಗಜಾಗಮ ವಚನದಿಂದಲೂ ನಿಷ್ಕಾಮಕರ್ಮಾನು ಷ್ಠಾನವುಳ್ಳ ವಿರಕ್ತನ ಭಾವಚಿಹ್ನವೆ ಭಾವಾಗಮಸ್ಥಲವೆಂದು ನಿರೂಪಿಸುತಿರ್ದಪಂ.

ಭಾವಚಿಹ್ನಾನಿ ವಿದುಷೋ ಯಾನಿ ಸಂತಿ ವಿರಾಗಿಣಃ
ತಾನಿ ಭಾವಾಗಮತ್ವೇನ ವರ್ತಂತೇ ಸರ್ವದೇಹಿನಾಮ್

ಆ ಸತ್ಕ್ರಿಯೆಯಲ್ಲಿ ವಿರಕ್ತನಾದ ಶಿವಯೋಗಿಗೆ ಯಾವ ಭಾವಚಿಹ್ನೆಗಳುಂಟು ಅವು ಸಕಲ ಪ್ರಾಕೃತಪ್ರಾಣಿಗಳಿಗೂ ಭಾವಾಗಮವಾಹತನದಿಂದಿರುವನೆಂಬುದರ್ಥಂ ॥೧೫॥ ಬಳಿಕ ಪೂರ್ವೋಕ್ತ ಜ್ಞಾನಾಚಾರಾಪೇಕ್ಷೆಯಿಂ ಭಾವವೆ ಶ್ರೇಷ್ಠವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಶಿವೋऽಹಮಿತಿ ಭಾವೋऽಪಿ ಶಿವತಾಪತ್ತಿಕಾರಣಮ್
ನ ಜ್ಞಾನಮಾತ್ರಂ ನಾಚಾರೋ ಭಾವಯುಕ್ತಃ ಶಿವೋ ಭವೇತ್॥

ಶಿವೋಹಯೆಂಬ ಭಾವವೂ ಶಿವತತ್ತ್ವದ ಪ್ರಾಪ್ತಿಗೆ ಕಾರಣಮಾದಂಥಾದು. ಜ್ಞಾನ ಸೂತ್ರವು ಕೇವಲ ಸತ್ಕ್ರಿಯಾಚಾರವು ಶಿವತತ್ತ್ವಪ್ರಾಪ್ತಿಗೆ ಕಾರಣವಲ್ಲ, ಮತ್ತೇನೆಂದರೆ ಶಿವೋಹಮೆಂಬ ಭಾವಯುಕ್ತನೆ ಶಿವಸ್ವರೂಪನಹನೆಂಬುದರ್ಥಂ ॥೧೬॥ ಬಳಿಕ ಜ್ಞಾನ ಭಾವಂಗಳಿಗೆ ಭೇದವೇನೆಂಬಲ್ಲಿ ಪೇಳುತಿರ್ದಪಂ.

ಜ್ಞಾನಂ ವಸ್ತುಪರಿಚ್ಛೇದೋ ಧ್ಯಾನಂ ತದ್ಭಾವಕಾರಣಮ್
ತಸ್ಮಾತ್ ಜ್ಞಾತೇ ಮಹಾದೇವೇ ಧ್ಯಾನಯುಕ್ತೋ ಭವೇತ್ಸುಧೀಃ ॥

ಇದು ಇಂಥಾದೆಂಬ ವಸ್ತುಸ್ವರೂಪ ನಿರ್ಣಾಯಕವಾದಂಥಾದು ಜ್ಞಾನವು. ನಿರ್ಣೀತ ವಸ್ತುವಿನ ಧರ್ಮಲಾಭಕ್ಕೆ ಕಾರಣವಾದಂಥಾದು ಅದೆ ನಾನೆಂಬ ಚಿಂತನೆಯು. ಅದು ಕಾರಣದಿಂ ಶಿವಸ್ವರೂಪವು ತಿಳಿಯಲಾಗಿ ಸುಜ್ಞಾನಿಯಾದವಂ ಭಾವದೊಡನೆ ಕೂಡಿದಾತನಾಹನೆಂಬುದರ್ಥಂ ॥೧೭॥ ಬಳಿಕದೆಂತು ಭಾವಿಸಬೇಕೆಂಬಲ್ಲಿ ಪೇಳುತಿರ್ದಪಂ.

ಅಂತರ್ಬಹಿಶ್ಚ ಸರ್ವತ್ರ ಪರಿಪೂರ್ಣಂ ಮಹೇಶ್ವರಮ್
ಭಾವಯೇತ್ಪರಮಾನಂದಲಬ್ಧಯೇ ಪಂಡಿತೋತ್ತಮಃ ॥

ಜ್ಞಾನಿಗಳಿಗೆ ಶ್ರೇಷ್ಠವಾದ ಯೋಗೀಶ್ವರಂ ಪರಮಾನಂದ ಪ್ರಾಪ್ತಿಗೋಸ್ಕರ ಶಿವನಂ ಶರೀರದ ಒಳ ಹೊರಗೆ ಎಲ್ಲಾ ಕಡೆಯಲ್ಲೂ ಪರಿಪೂರ್ಣನಾಗಿ ಧ್ಯಾನಿಸೂದೆಂಬುದರ್ಥಂ ॥೧೮॥ ಬಳಿಕ ಕ್ರಿಯಾಪೂಜನಂ ಭಾವಹೀನವಾಗದೆ ವ್ಯರ್ಥವೆಂದು ದೃಷ್ಟಾಂತರ ಪೂರ್ವಕವಾಗಿ ಸೂತ್ರದ್ವಯದಿಂ ಪೇಳುತಿರ್ದಪಂ.

ಅರ್ಥಹೀನಾ ಯಾಥಾ ವಾಣೀ ಪತಿಹೀನಾ ಯಥಾ ಸತೀ
ಶ್ರುತಿಹೀನಾ ಯಥಾ ಬುದ್ಧಿರ್ಭಾವಹೀನಾ ತಥಾ ಕ್ರಿಯಾ ॥

ನಿರರ್ಥಕವಾದ ವಾಕ್ಯವು, ಗಂಡನಿಲ್ಲದ ಸತಿಯು, ವೇದ ಶ್ರುತಿ ಸಮ್ಮತಿಯಿಲ್ಲದ ಜ್ಞಾನವು ಹೇಗೆ ವ್ಯರ್ಥವು ಹಾಗೆ ಭಾವಹೀನವಾದ ಕ್ರಿಯೆಯು ವ್ಯರ್ಥವೆಂಬುದರ್ಥಂ ॥೧೯॥

ಚಕ್ಷುರ್ಹೀನೋ ಯಥಾ ರೂಪಂ ನ ಕಿಂಚಿದ್ವೀಕ್ಷಿತುಂ ಕ್ಷಮಃ
ಭಾವಹೀನಸ್ತಥಾ ಯೋಗೀ ನ ಶಿವಂ ದ್ರಷ್ಟುಮೀಶ್ವರಃ ॥

ಕಣ್ಣಿಲ್ಲದವಂ ನೀಲ ಪೀತಾದಿ ರೂಪಂಗಳನೆಂತು ತಿಳಿವಲ್ಲಿ ಸಮರ್ಥನಲ್ಲ ಹಾಗೆ ಭಾವಹೀನನಾದ ಯೋಗಿಯು ಶಿವನಂ ಕಾಣಲು ಸಮರ್ಥನಲ್ಲವೆಂಬುದರ್ಥಂ ॥೨೦॥ ಅದು ಕಾರಣವಾಗಿ ಭಾವಶುದ್ಧವಾದ ಚಿತ್ತದಿಂ ಶಿವನಂ ಪೂಜಿಸೂದೆಂದು ಪೇಳುತಿರ್ದಪಂ.

ಭಾವಶುದ್ಧೇನ ಮನಸಾ ಪೂಜಯೇತ್ಪರಮೇಷ್ಠಿನಮ್
ಭಾವಹೀನಾಂ ನ ಗೃಹ್ಣಾತಿ ಪೂಜಾಂ ಸುಮಹತೀಮಪಿ ॥

ಧ್ಯಾನದಿಂ ಶುದ್ಧವಾದ ಚಿತ್ತದಿಂ ಪೂಜಿಸೂದು ಭಾವಹೀನವಾದ ಮಹಾಪೂಜಿಯನಾದರೂ ಆ ಶಿವಂ ತೆಗೆದುಕೊಳ್ಳನೆಂಬುದರ್ಥಂ ॥೨೧॥ ಬಳಿಕ ಭ್ರಮದ್ಭ್ರಮರ ಚಿಂತಾಯಾಂ ಕೀಟೋಽಪಿ ಭ್ರಮರಾಯತೇ ಶಿವಚಿಂತಾಸಮಾಕ್ರಾಂತಃ ಶಿವರೂಪೀ ಭವೇದ್ಧ್ರುವಮೆಂಬ ವೀರಾಗಮವಚನಾನುಸಾರದಿಂ ಭಾವಮಹತ್ವಮಂ ಪ್ರಕಾಶಿಸುತಿರ್ದಪಂ.

ನೈರಂತರ್ಯೇಣ ಸಂಪನ್ನೇ ಭಾವೇ ಧ್ಯಾತುಂ ಶಿವಂ ಪ್ರತಿ
ತದ್ಭಾವೋ ಜಾಯತೇ ಯದ್ವತ್ಕ್ರಿಮೇಃ ಕೀಟಸ್ಯ ಚಿಂತನಾತ್ ॥

ಕೀಟಂ-ಭ್ರಮರಕೀಟದ ಚಿಂತನೆಯತ್ತಣಿಂದೆಂತು ಭ್ರಮರಕೀಟದ ಸ್ವರೂಪವುಳ್ಳದಾಗುವುದು ಹಾಗೆ ಚಿತ್ತ ವಿಶಿಷ್ಟನಾದ ಶಿವಯೋಗಿಯು ಶಿವನ ಕುರಿತು ಧ್ಯಾನಿಸಲೋಸ್ಕರ ನಿರಂತರವುಳ್ಳವನಾಗಲಾಗಿ ಶಿವಸ್ವರೂಪನೆ ಆಗುವನೆಂಬುದರ್ಥಂ ॥೨೨॥ ಎತ್ತಲಾನು ನಿರ್ಮಲಶಿವಚಿಂತನೆಯಲ್ಲಿ ಸರ್ವ ಸಮರ್ಥನಲ್ಲದಡೆ ಆತನ ವಿಭೂತಿಯನಾದರೂ ಚಿಂತಿಸೂದೆಂದು ಪೇಳಿ ಭಾವಾಗಮಸ್ಥಲಮಂ ನಿರೂಪಿಸಿ ಮುಗಿಸುತಿರ್ದಪಂ.

ನಿಷ್ಕಲಂಕಂ ನಿರಾಕಾರಂ ಪರಬ್ರಹ್ಮಶಿವಾಭಿಧಮ್
ನಿರ್ಧ್ಯಾತುಮಸಮರ್ಥೋಽಪಿ ತದ್ವಿಭೂತಿಂ ವಿಭಾವಯೇತ್ ॥

ದೋಷವಿಲ್ಲ ಪ್ರಾಕೃತನಿಲ್ಲ ಪೀತಾದ್ಯಾಕಾರಶೂನ್ಯವಾದ ಶಿವನೆಂಬ ಪೆಸರುಳ್ಳ ಪರಬ್ರಹ್ಮಮಂ ಚೆನ್ನಾಗಿ ಧ್ಯಾನಿಸಲು ಸಮರ್ಥನಲ್ಲದಿರ್ದಡೆ ಆತನ ಸರ್ವಜ್ಞತ್ವಾದಿ ಮಹದೈಶ್ವರ್ಯಮಂ ಚಿಂತಿಸೂದೆಂಬುದರ್ಥಂ ॥೨೩॥

## ೧೨. ಜ್ಞಾನಾಗಮಸ್ಥಲ

ಬಳಿಕ ಜ್ಞಾನೀವಿಜ್ಞಾನ ತತ್ವರಃ ಎಂಬ ಅಮೃತ ಬಿಂದು ಶ್ರುತಿಯಿಂ ಜ್ಞಾನಮೇತಚ್ಛಿವಸಂಸ್ಥಮೆಂಬ ಪರಾತಂತ್ರ ವಚನದಿಂದಲೂ ಆ ಭಾವಾಗಮಸಂಪನ್ನನಾದ ಪರಯೋಗಿಯ ಜ್ಞಾನಚಿಹ್ನವೆ ಜ್ಞಾನಾಗಮಸ್ಥಲವೆಂದು ಪ್ರತಿಪಾದಿಸುತಿರ್ದಪಂ.

ಪರಸ್ಯ ಜ್ಞಾನಚಿಹ್ನಾನಿ ಯಾನಿ ಸಂತಿ ಶರೀರಿಣಾಮ್
ತಾನಿ ಜ್ಞಾನಾಗಮತ್ವೇನ ಪ್ರವರ್ತಂತೇ ವಿಮುಕ್ತಯೇ ॥

ಭಾವಾಗಮಸಂಪನ್ನನಾದ ಪರಶಿವಯೋಗಿಯ ಜ್ಞಾನಚಿಹ್ನಂಗಳೆ ಪ್ರಾಕೃತರಾದ ಪಶುಜನರ ಸದ್ಗತಿಗೋಸ್ಕರ ಜ್ಞಾನಾಗಮವಾಹತನದಿಂ ಪ್ರವರ್ತಿಸುತ್ತಿಹವೆಂಬುದರ್ಥಂ

॥೨೪॥ ಬಳಿಕ ಯಥೇಹ ಕರ್ಮಚಿತ್ತೋ ಲೋಕಃ ಕ್ಷೀಯತೇ ಏವಮೇವಾಮುತ್ರ ಪುಣ್ಯ ಚಿತ್ತೋ ಲೋಕಃ ಕ್ಷೀಯತೇ ಜ್ಞಾತ್ವಾ ದೇವಂ ಮೃತ್ಯುಪಾಶಾನ್ ಛಿನತ್ತಿ ಎಂಬ ಶ್ರುತ್ಯನು ಸಾರದಿಂ ಪುರ್ವೋಕ್ತ ಬಚ್ಚ ಬರಿಯ ಭಾವಕರ್ಮಗಳಿಂ ಫಲವಿಲ್ಲವೆಂದು ಪೇಳಿ ಜ್ಞಾನವನೆ ಪಂಚಸೂತ್ರಂಗಳಿಂ ವಿಶೇಷಿಸುತಿರ್ದಪಂ.

ಭಾವೇನ ಕಿಂ ಫಲಂ ಪುಂಸಾಂ ಕರ್ಮಣಾ ವಾ ಕಿಮಿಷ್ಯತೇ
ಭಾವಕರ್ಮ ಸಮಾಯುಕ್ತಂ ಜ್ಞಾನಮೇವ ವಿಮುಕ್ತಿದಮ್ ॥

ಶಿವಯೋಗಿಗಳಾದವರಿಗೆ ಬರಿಯ ಅಂತರಜ್ಞಾನದಿಂದಲೂ ಬಾಹ್ಯಕರ್ಮ ದಿಂದಲೂ ಏನೂ ಪ್ರಯೋಜನವಿಲ್ಲ, ಭಾವಕರ್ಮಗಳಿಂ ಕೂಡಿದ ಅಹಂಬ್ರಹ್ಮಾಸ್ಮಿ ಎಂಬ ಅಪರೋಕ್ಷಜ್ಞಾನವೆ ಮುಕ್ತಿಪ್ರದವೆಂಬುದರ್ಥಂ ॥೨೫॥

ಕೇವಲಂ ಕರ್ಮಮಾತ್ರೇಣ ಜನ್ಮಕೋಟಿಶತೈರಪಿ
ನಾತ್ಮನಾಂ ಜಾಯತೇ ಮುಕ್ತಿರ್ಜ್ಞಾನಂ ಮುಕ್ತೇರ್ಹಿಕಾರಣಮ್ ॥

ಆತ್ಮರಿಗೆ ನ ಕರ್ಮಣಾ ಎಂಬ ಶ್ರುತಿಯಿಂ ಕೇವಲ ಕರ್ಮಮಾತ್ರದಿಂದ ಅನಂತ ಕೋಟಿ ಜನ್ಮಂಗಲಿಂದಲೂ ಆಗದು. ತರತಿ ಶೋಕಮಾತ್ಮವಿತ್ ಎಂಬಿದು ಮೊದಲಾದ ಶ್ರುತಿಗಳಿಂ ಜ್ಞಾನವೆ ಮೋಕ್ಷಕ್ಕೆ ಕಾರಣವೆಂಬುದರ್ಥಂ ॥೨೬॥ ಬಳಿಕ ಕರ್ಮದಿಂ ಮುಕ್ತಿ ಇಲ್ಲವೆಂಬುದು ಮಾತ್ರವೆ ಅಲ್ಲ ಮತ್ತೇನೆಂದರೆ ಕರ್ಮಜ್ಞಾನಹೀನವಾದಡೆ ಮರಳಿ ಸಂಸಾರಕ್ಕೂ ಕಾರಣವಾಗೂದೆಂದು ಪೇಳುತಿರ್ದಪಂ.

ಜ್ಞಾನಹೀನಂ ಸದಾ ಕರ್ಮ ಪುಂಸಾಂ ಸಂಸಾರಕಾರಣಮ್
ತದೇವ ಜ್ಞಾನಯೋಗೇನ ಸಂಸಾರವಿನಿವರ್ತಕಮ್॥

ಜ್ಞಾನಹೀನವಾದ ಕರ್ಮ ಸದಾ ಸಂಸಾರ ಕಾರಣವಾದಂಥಾದು ಆ ಕರ್ಮವೆ ಜ್ಞಾನಯೋಗದಿಂದ ಸಂಸಾರಮಂ ನಿವಾರಿಸೂದೆಂಬುದರ್ಥಂ ॥೨೭॥ ಬಳಿಕ ಜ್ಞಾನಹೀನವಾದ ಕರ್ಮವೆಂತು ಮರಳಿ ಸಂಸಾರಕ್ಕೆ ಕಾರಣವೆಂಬಲ್ಲಿ ಪೇಳುತಿರ್ದಪಂ.

ಫಲಂ ಕ್ರಿಯಾವತಾಂ ಪುಂಸಾಂ ಸ್ವರ್ಗಾದ್ಯಂ ನಶ್ವರಂ ಯತಃ
ತಸ್ಮಾತ್ ಸ್ಥಾಯಿಫಲಪ್ರಾಪ್ತ್ಯೈಃ ಜ್ಞಾನಮೇವ ಸಮಭ್ಯಸೇತ್ ॥

ತೇ ತ್ವಂ ಭುಕ್ತಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇಪುಣ್ಯೇ ಮರ್ತ್ಯ ಲೋಕಂ ವಿಶಂತಿ ಎಂಬಿವು ಮೊದಲಾದ ವಚನ ಬಲದಿಂ ಕೇವಲ ಕ್ರಿಯಾನಿಷ್ಠರಾದ ಪುರುಷರಿಗೆ ಸ್ವರ್ಗ ಮೊದಲಾದ ಫಲವು ನಾಶವಾಗುವಂಥಾದಾದ ಕಾರಣದಿಂ ಸ್ಥಿರವಾದ ಫಲ ಪ್ರಾಪ್ತಿಗೋಸ್ಕರ ಜ್ಞಾನಾಭ್ಯಾಸವನೆ ಮಾಡೂದೆಂಬುದರ್ಥಂ ॥೨೮॥ ಬಳಿಕ ಜ್ಞಾನವೆಂತಭ್ಯಾಸಂ ಮಾಡಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ಶಾಸ್ತ್ರಾಭ್ಯಾಸಾದಿ ಯತ್ನೇನ ಸದ್ಗುರೋರುಪದೇಶತಃ
ಜ್ಞಾನಮೇವ ಸಮಭ್ಯಸೇತ್ಕಿಮನ್ಯೇನ ಪ್ರಯೋಜನಮ್ ॥

ನಿಗಮಾಗಮಾದಿ ಸ್ಥಿರ ಸಿದ್ಧವಾದ ವೀರಶೈವಶಾಸ್ತ್ರಾಭ್ಯಾಸ ಮೊದಲಾದ ಪ್ರಯತ್ನದಿಂ ಸದ್ಗುರುವಿನುಪದೇಶದತ್ತಣಿಂ ಶಿವಜ್ಞಾನವನೆ ಚೆನ್ನಾಗಿ ಅಭ್ಯಾಸಂ ಮಾಡೂದು. ಸಾಂಖ್ಯಾದಿ ಶಾಸ್ತ್ರಾಭ್ಯಾಸದಿಂ ಏನು ಪ್ರಯೋಜನವಿಲ್ಲವೆಂಬುದರ್ಥಂ ॥೨೯॥ ಬಳಿಕ ಜ್ಞಾನವೆಂಥಾದೆಂಬಲ್ಲಿ ತತ್ಸರೂಪಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಜ್ಞಾನಂ ಪರಶಿವಾದ್ವೈತಪರಿಪಾಕವಿನಿಶ್ಚಯಃ
ಯೇನ ಸಂಸಾರಸಂಬಂಧವಿನಿವೃತ್ತಿರ್ಭವೇತ್ಸತಾಮ್ ॥

ಪರಬ್ರಹ್ಮಲಿಂಗದತ್ತಣಿಂ ಬೇರೊಂದು ಪದಾರ್ಥವಿಲ್ಲವೆಂಬ ಪರಿಪಕ್ವ ನಿಶ್ಚಯವೆ ಜ್ಞಾನವು. ಯಾವುದಾನೊಂದು ಜ್ಞಾನದಿಂದ ಸತ್ಪುರುಷರ್ಗೆ ಸಂಸಾರದ ಬಾಧೆ ನಿವೃತ್ತಿಯಾಗೂದೆಂಬುದರ್ಥಂ ॥೩೦॥ ಬಳಿಕದನೆ ವಿಸ್ತರಿಸುತಿರ್ದಪಂ.

ಶಿವಾತ್ಮಕಮಿದಂ ಸರ್ವಂ ಶಿವಾದನ್ಯನ್ನವಿದ್ಯತೇ
ಶಿವೋऽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್ ॥

ಈ ಸಕಲಪ್ರಪಂಚವೆಲ್ಲಂ ಶಿವಮಯವಾದಂಥಾದು. ಶಿವನಿಂದನ್ಯವಾದ ಪದಾರ್ಥವೆ ಇಲ್ಲ, ತಾನು ಶಿವನೆಂಬ ಬುದ್ಧಿ ಯಾವುದುಂಟು ಅದೇ ಶ್ರೇಷ್ಠವಾದ ಜ್ಞಾನವೆಂಬುದರ್ಥಂ ॥೩೧॥ ಬಳಿಕಾ ಜ್ಞಾನದ ಮಹತ್ವಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಅಂಧೋ ಯಥಾ ಪುರಸ್ಥಾನಿ ವಸ್ತೂನಿ ಚ ನ ಪಶ್ಯತೇ
ಜ್ಞಾನಹೀನಸ್ತಥಾ ದೇಹೀ ನಾತ್ಮಸ್ಥಂ ವೀಕ್ಷತೇ ಶಿವಮ್ ॥

ಕುರುಡನಾದವಂ ಮುಂದಿದ್ದ ವಸ್ತುವನೆಂತು ಕಾಣನು ಹಾಗೆ ಜ್ಞಾನಹೀನನಾದ ಪುರುಷಂ ತನ್ನೊಳಗಿರುವ ಶಿವನಂ ಕಾಣಲರಿಯನೆಂಬುದರ್ಥಂ ॥೩೨॥ ಬಳಿಕ ಶಿವನ ದರ್ಶನದಿಂದೇನು ಪ್ರಯೋಜನ ಅದು ಯಾರಿಗುಂಟಾಹದೆಂಬಲ್ಲಿ ಪೇಳುತಿರ್ದಪಂ.

ಶಿವಸ್ಯ ದರ್ಶನಾತ್ಪುಂಸಾಂ ಜನ್ಮರೋಗನಿವರ್ತನಮ್
ಶಿವದರ್ಶನಮಪ್ಯಾಹುಸ್ಸುಲಭಂ ಜ್ಞಾನಚಕ್ಷುಷಾಮ್ ॥

ಜನರಿಗೆ ಶಿವದರ್ಶನದಿಂ ಜನ್ಮರೋಗ ನಿವೃತ್ತಿಯಾಹದು. ಜ್ಞಾನದೃಷ್ಟಿಯುಳ್ಳವರಿಗೆ ಶಿವದರ್ಶನ ಅದು ಸುಲಭವೆಂದು ಶಾಸ್ತ್ರಜ್ಞರು ಪೇಳುವರೆಂಬುದರ್ಥಂ ॥೩೩॥ ಬಳಿಕ ಜ್ಞಾನದಿಂದಲ್ಲದೆ ಅಜ್ಞಾನನಿವೃತ್ತಿಯಾಗದೆಂದು ಪೇಳಿ ಜ್ಞಾನಾಗಮಸ್ಥಲಮಂ ಮುಗಿಸುತಿರ್ದಪಂ.

ದೀಪಂ ವಿನಾ ಯಥಾ ಗೇಹೇ ನಾಂಧಕಾರೋ ನಿವರ್ತತೇ
ಜ್ಞಾನಂ ವಿನಾ ತಥಾ ಚಿತ್ತೇ ಮೋಹೋऽಪಿ ನ ನಿವರ್ತತೇ ॥

ದೀಪವಿಲ್ಲದ ಮನೆಯೊಳಗಣ ಕತ್ತಲೆಯೆಂತು ಹೋಗದು ಹಾಂಗೆ ಪೂರ್ವೋಕ್ತ ಲಕ್ಷ ಶಿವಜ್ಞಾನವಿಲ್ಲದೆ ಅಜ್ಞಾನಾಂಧಕಾರ ಹೋಗದೆಂಬುದರ್ಥಂ ॥೩೪॥

## ೧೩. ಸಕಾಯಸ್ಥಲ

ಬಳಿಕ ಶರೀರಮಾದ್ಯಂ ಖಲು ಧರ್ಮಸಾಧನಮೆಂಬ ವಚನಾನುಸಾರದಿಂದಾ ಶಿವಜ್ಞಾನಸಂಪನ್ನನಾದ ಶಿವಯೋಗಿಯ ಶರೀರವು ಕ್ರಿಯಾಭಾವಜ್ಞಾನಿಗಳಿಗೆ ಕಾರಣ ವಾದುದರಿಂದೀ ಲೋಕವು ಸಕಾಯವೆಂದಾರು ಸೂತ್ರಂಗಳಿಂ ಸಕಾಯಸ್ಥಲಮಂ ನಿರೂಪಿಸುತಿರ್ದಪಂ.

ಪರಸ್ಯ ಯಾ ತನುರ್ಜ್ಞೇಯ್ಯಾದೇಹಕರ್ಮಾಭಿಮಾನಿನಃ
ತಯಾ ಸಕಾಯೋ ಲೋಕೋಽಯಂ ತದಾತ್ಮತ್ವನಿರೂಪಣಾತ್ ॥

ನಾ ಸ್ಥೂಲನೂ ಮಾಡೂದೇನೆಂಬ ದೇಹಕರ್ಮಾಭಿಮಾನವಿಲ್ಲದ ಪೂರ್ವೋಕ್ತ ಶಿವಜ್ಞಾನಸಂಪನ್ನನಾದ ಶಿವಯೋಗಿಯು ಪರರಿಂ ತಿಳಿಯಲ್ಪಟ್ಟ ಯಾವ ಶರೀರಮುಂಟು ಆ ಶರೀರದಿಂದ ಅದಕ್ಕೆ ಆತ್ಮತ್ತ್ವವ ಪೇಳುವುದರಿಂದೀಲೋಕವು ಸಕಾಯವೆನಿಸಿ ದೇಹಾಭಿಮಾನವಿಲ್ಲದ ಪರಯೋಗಿಗೆ ಕಾಯ ಏಕೆಂಬುದೆಂಬುದರ್ಥಂ ॥೩೫॥ ಬಳಿಕ ಪೇಕ್ಷೆ ಏತಕೆಂಬಲ್ಲಿ ಪೇಳುತಿರ್ದಪಂ.

ಕಾಯಂ ವಿನಾ ಸಮಸ್ತಾನಾಂ ನ ಕ್ರಿಯಾ ನ ಚ ಭಾವನಾ
ನ ಜ್ಞಾನಂ ಯತ್ತತೋ ಯೋಗೀ ಕಾಯವಾನೇವ ಸಂಚರೇತ್ ॥

ಯಾವುದಾನೊಂದು ಕಾರಣದಿಂ ಸಕಲರಿಗೂ ಕಾಯವಿಲ್ಲದೆ ಕ್ರಿಯಾ ಧ್ಯಾನ ಜ್ಞಾನಂ ಗಳುಂಟಾಗದ ಕಾರಣದಿಂ ಶಿವಜ್ಞಾನಸಂಪನ್ನನಾದ ಯೋಗೀಶ್ವರಂ ಕಾಯ ಉಳ್ಳವನಾಗಿಯೆ ಸಂಚರಿಸೂದೆಂಬುದರ್ಥಂ ॥೩೬॥ ಬಳಿಕೀ ಯೋಗಿಗೆ ಶಿವಜ್ಞಾನಮುಂಟಾಗುವುದರಿಂ ಕಾಯಾಪೇಕ್ಷೆ ಎಂಬಲ್ಲಿ ಪೇಳುತಿರ್ದಪಂ.

ಶಿವೈಕಜ್ಞಾನಯುಕ್ತಸ್ಯ ಯೋಗಿನೋಽಪಿ ಮಹಾತ್ಮನಃ
ಕಾಯಯೋಗೇನ ಸಿದ್ಧ್ಯಂತಿ ಭೋಗಮೋಕ್ಷಾದಯಸ್ಸದಾ ॥

ಮೋಕ್ಷಕ್ಕೆ ಜ್ಞಾನವೆ ಮೂಲವಾದ ಕಾರಣದಿಂದ ಜ್ಞಾನಕ್ಕೆ ಕಾಯವೆ ಕಾರಣವಾಗ ಲಾಗಿ ಕಾಯವಿಡಿದು ದೈಹಿಕಾಮುಷ್ಮಿಕ ಭೋಗಮೋಕ್ಷಂಗಳು ಉಂಟಾಹವೆಂಬುದರಿಂ ಮಹಾತ್ಮನಾದ ಶಿವಯೋಗಿಗೂ ಕಾಯ ಬೇಕೆಂಬುದು ತಾತ್ಪರ್ಯಂ ॥೩೭॥ ಬಳಿಕಿಲ್ಲಿ ದೃಷ್ಟಾಂತರಮಂ ಪೇಳತಿರ್ದಪಂ.

ಕಾಷ್ಠಂ ವಿನಾ ಯಥಾ ವಹ್ನಿರ್ಜಾಯತೇ ನ ಪ್ರಕಾಶವಾನ್
ಮೂರ್ತಿಂ ವಿನಾ ತಥಾ ಯೋಗಿನಾತ್ಮತತ್ತ್ವಪ್ರಕಾಶವಾನ್ ॥

ಕಾಷ್ಠವಿಲ್ಲದೆ ಹೇಗೆ ಅಗ್ನಿ ಪ್ರಕಾಶವಾಗನು ಹಾಗೆ ಶರೀರವಿಲ್ಲದೆ ಯೋಗೀಶ್ವರಂ ಸ್ವಾತ್ಮತತ್ತ್ವ ಪ್ರಕಾಶವುಳ್ಳವನಾಗದೆಂಬುದರ್ಥಂ ॥೩೮॥ ಮತ್ತೂ ಒಂದು ದೃಷ್ಟಾಂತರಮಂ ಪೇಳುತಿರ್ದಪಂ.

ಮೂರ್ತ್ಯಾತ್ಮನ್ಯೈವ ದೇವಸ್ಯ ಯಥಾ ಪೂಜ್ಯತ್ವಕಲ್ಪನಾ
ತಥಾ ದೇಹಾತ್ಮನ್ಯೈವಾಸ್ಯ ಪೂಜ್ಯತ್ವಂ ಪರಯೋಗಿನಃ ॥

ಕ್ರೀಡಾಶೀಲನಾದ ಶಿವನಿಗೆ ಮೂರ್ತಿಯಿಂದಲೆ ಪೂಜ್ಯತ್ವವೆಂತುಮುಂಟಾಗಿರುವುದೋ ಹಾಗೆ ಈ ಶಿವಯೋಗಿಗೆ ದೇಹದಿಂದಲೆ ಪೂಜ್ಯತ್ವಮುಂಟಾಗಿರುವುದೆಂಬುದರ್ಥಂ ॥೩೯॥ ಬಳಿಕ ಮತ್ತೇನು ಶಿವನು ಮೂರ್ತಿಯುಳ್ಳವನಾಗಿಯೆ ಸೃಷ್ಟ್ಯಾದಿ ಕರ್ಮಂಗಳಂ ಮಾಡುತ್ತಿಹನೆಂದು ಪೇಳುತಿರ್ದಪಂ.

ನಿಷ್ಕಲೋಹಿ ಮಹಾದೇವಃ ಪರಿಪೂರ್ಣಸ್ಸದಾಶಿವಃ
ಜಗತ್ಸೃಷ್ಟ್ಯಾದಿ ಸಂಸಿದ್ಧ್ಯೈಮೂರ್ತಿಮಾನೇವ ಭಾಸತೇ ॥

ನಿರವಯನಾಗಿ ವ್ಯೋಮದಂತೆ ವ್ಯಾಪಕನಾದ ಪರಮೇಶ್ವರಂ ಸದಾ ವಿಶ್ವಸೃಷ್ಟಿ ಸ್ಥಿತಿ ಸಂಹಾರಾದಿಗಳಂ ಮಾಡಲೋಸ್ಕರ ಚಂದ್ರಶೇಖರಾದಿಮೂರ್ತಿಯುಳ್ಳವನಾಗಿಯೆ ಪ್ರಕಾಶಿಸುತ್ತಿಹನು ಹಾಗೆ ಭಕ್ತಾನುಗ್ರಹಾರ್ಥವಾಗಿ ಸಕಾಯನಾಗಿ ಸಂಚರಿಸುವನೆಂಬುದರ್ಥಂ ॥೪೦॥ ಬಳಿಕ ಬ್ರಹ್ಮಾದಿ ದಿವ್ಯ ಜ್ಞಾನಿಗಳೂ ಕಾಯವಂತರಾಗಿಯೆ ಇರುವರೆಂದು ಪೇಳುತಿರ್ದಪಂ.

ಬ್ರಹ್ಮಾದ್ಯಾ ದೇವತಾಸ್ಸರ್ವಾಃ ಮುನಯೋಽಪಿ ಮುಮುಕ್ಷವಃ
ಕಾಯವಂತೋ ಹಿ ಕುರ್ವಂತಿ ತಪಸ್ಸರ್ವಾರ್ಥಸಾಧಕಮ್ ॥

ಬ್ರಹ್ಮಾದಿ ದಿವ್ಯಾಜ್ಞಾನಿಗಳಾದ ಸಕಲ ದೇವರುಗಳು ಬಯಸುವ ನಾರದಾದಿ ಮುನಿಗಳೂ ಕಾಯವುಳ್ಳವರಾಗಿಯೆ ಇಷ್ಟಾರ್ಥವನೀವ ತಪಮಂ ಮಾಡುತ್ತಿಹರೆಂಬುದರ್ಥಂ ॥೪೧॥ ಬಳಿಕ ವೈರಾಗ್ಯೇಣ ವಪುಸ್ತ್ಯಾಗಃ ನೈವ ಕಾರ್ಯಂ ಮನೀಷಿಭಿಃ ಎಂಬ ದೇವೀ ಕಾಲೋತ್ತರ ವಚನಾನುಸಾರದಿಂದಲೂ ಶರೀರವೆ ಸಕಲ ಸಿದ್ಧಿಗಳಿಗೂ ಕಾರಣವಾದುದರಿಂ ಶರೀರಮಂ ಬಿಡಲಾಗದೆಂದು ಪೇಳಿ ಸಕಾಯಸ್ಥಲಮಂ ಮುಗಿಸುತಿರ್ದಪಂ.

ತಪೋ ಹಿ ಮೂಲಂ ಸರ್ವಾಸಾಂ ಸಿದ್ಧೀನಾಂ ಯಜ್ಜಗತ್ತ್ರಯೇ
ತಪಸ್ತತ್ಕಾಯಮೂಲಂ ಹಿ ತಸ್ಮಾತ್ಕಾಯಂ ನ ಸಂತ್ಯಜೇತ್ ॥

ಲೋಕದಲ್ಲಿ ಸಕಲ ಸಿದ್ಧಿಗಳಿಗೂ ತಪಸ್ಸೆ ಕಾರಣವಾದಂಥದು ಆ ತಪಸ್ಸಿಗೆ ಶರೀರವೆ ಮೂಲವೆಂದು ಕಾರಣವಾಗಿ ಶರೀರವ ಬಿಡಲಾಗದೆಂಬುದರ್ಥಂ ॥೪೨॥

## ೧೪. ಅಕಾಯಸ್ಥಲ

ಆಮೇಲೆ ಅಚ್ಛಾಯಮಶರೀರಮೆಂಬ ಶ್ರುತಿಯಿಂ ಪರಯೋಗಿಗೆ ದೇಹಾಭಿಮಾನ ವಿಲ್ಲದಾತನಾದ ಕಾರಣದಿಂದೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಔಪಚಾರಿಕದೇಹಿತ್ವಾಜ್ಜಗದಾತ್ಮತ್ವಭಾವನಾತ್
ಮಾಯಾಸಂಬಂಧರಾಹಿತ್ಯಾದಕಾಯೋ ಹಿ ಪರಃ ಸ್ಮೃತಃ ॥

ಪೇಳಲ್ಪಟ್ಟ ಲಕ್ಷಣವುಳ್ಳ ಸಕಾಯನೆಂಬ ಪರಯೋಗಿಯು ದೇಹಾಭಿಮಾನವಿಲ್ಲದ ಕಾರಣದಿಂ ವಿಶ್ವವೆಲ್ಲಂ ಶಿವಚಿತ್ಕ್ರಿಯೆಗೆ ವಿಷಯವಾದ ಕಾರಣ ತನ್ಮಯವೆ ಸರಿ. ಅಲ್ಲದಿರ್ದರೆ ಚಿತ್ಕ್ರಿಯಾಬಾಹ್ಯವಾಗಿ ಅಪ್ರಮೇಯತ್ವವೂ ಆಹದೆಂದು ಚಿಂತಿಸುವುದರತ್ತಣಿಂ

ಭೇದಬುದ್ಧಿಯಿಲ್ಲದ ಕಾರಣ ಅಕಾಯನೆಂದು ಪ್ರಸಿದ್ಧನೆಂಬುದರ್ಥಂ ॥೪೩॥ ಬಳಿಕೀ ಪರಯೋಗಿಗೆ ದೇಹಾಭಿಮಾನವಿಲ್ಲದಿರ್ದಡೆ ದೇಹಸಂಬಂಧವಿರುವುದರಿಂದುಂಟಾದ ವಿಕಾರಮುಂಟೋ ಏನೆಂಬಲ್ಲಿ ಪೇಳುತಿರ್ದಪಂ.

ಪರಸ್ಯ ದೇಹಯೋಗೇऽಪಿ ನ ದೇಹಾಶ್ರಯವಿಕ್ರಿಯಾ
ಶಿವಸ್ಯೇವ ಯತಸ್ತಸ್ಮಾದಕಾಯೋऽಯಂ ಪ್ರಕೀರ್ತಿತಃ ॥

ಶಿವನಿಗೆ ದೇಹಸಂಬಂಧವಿಲ್ಲದಿರ್ದಡೂ ತತ್ಪ್ರಯುಕ್ತವಾದ ಕಾಮಾದಿವಿಕಾರಂಗಳೆಂತಿಲ್ಲವ್ರೋ ಹಾಗೆ ಪರಯೋಗಿಯು ಶಿವಸಮಾನಕಾರಣದಿಂ ದೇಹಪ್ರಯುಕ್ತವಾದ ಕಾಮಾದಿ ವಿಕಾರಂಗಳಿಲ್ಲವೆಂಬುದರ್ಥಂ ॥೪೪॥ ಹಾಗಾದಡೀ ಅಕಾಯಂಗೆ ಸಕಾಯನಾಗಿ ತೋರುಹವೇತರಿಂದೆಂಬಲ್ಲಿ ಪೇಳುತಿರ್ದಪಂ.

ಪರಲಿಂಗೇ ವಿಲೀನಸ್ಯ ಪರಮಾನಂದ ಚಿನ್ಮಯೇ
ಕುತೋ ದೇಹೇನ ಸಂಬಂಧೋ ದೇಹಿವದ್ಭಾಸನಂ ಭ್ರಮಃ ॥

ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮಲಿಂಗದಲ್ಲಿ ಅಡಗಿದ ಪರಯೋಗಿಗೆ ದೇಹದೊಡನೆ ಸಂಬಂಧವೆತ್ತಣದು ದೇಹಿಯಂತೆ ತೋರುಹವು ನೋಡುವರ ಭ್ರಮೆಯೆಂಬುದರ್ಥಂ ॥೪೫॥ ಬಳಿಕ ದೇಹಸಂಬಂಧವಿರ್ದಡೂ ಅದರಿಂ ಬಾಧಕಮಿಲ್ಲೆಂದು ಪೇಳುತಿರ್ದಪಂ.

ದೇಹಾಭಿಮಾನಹೀನಸ್ಯ ಶಿವಭಾವೇ ಸ್ಥಿತಾತ್ಮನಃ
ಜಗದೇತಚ್ಛರೀರಂ ತಸ್ಯಾದೇಹೇನ್ಯೇಕೇನ ಕಾ ವ್ಯಥಾ ॥

ಪರಿಚ್ಛಿನ್ನ ದೇಹಾಭಿಮಾನವಿಲ್ಲದೆ ಶಿವಭಾವದಲ್ಲಿದ್ದ ಪರಯೋಗಿಗೆ ಶಿವನಂತೆ ವಿಶ್ವವೆ ಶರೀರವಾಹದರಿಂದೇಕ ದೇಹಸಂಬಂಧದಿಂದೇನು ವ್ಯಥೆಯೇನು ಇಲ್ಲವೆಂಬುದರ್ಥಂ ॥೪೬॥ ಬಳಿಕ ಶಿವಯೋಗಿಗೆ ಶಿವನಂತೆ ಸ್ವಾತಂತ್ರ್ಯವಿಲ್ಲದ ಕಾರಣದಿಂದಾ ವ್ಯಥೆ ಏಕಿಲ್ಲವೆಂಬಲ್ಲಿ ಪೇಳುತಿರ್ದಪಂ.

ಶಿವಜ್ಞಾನೈಕನಿಷ್ಠಸ್ಯ ನಾಹಂಕಾರಭವಭ್ರಮಃ
ನ ಚೇಂದ್ರಿಯ ಭವಂ ದುಃಖಂ ತ್ಯಕ್ತದೇಹಾಭಿಮಾನಿನಃ ॥

ಶಿವನೆ ತಾನೆಂಬ ನಿಶ್ಚಯನಿಷ್ಠನಾದ ಪರಯೋಗಿಗೆ ಪರಿಮಿತ ದೇಹಾಹಂಕಾರ ವಿಲ್ಲದ ಕಾರಣದಿಂ ತತ್ಪ್ರಕಾರಯುಕ್ತವಾದ ನಾಹಮೀಶ್ವರನೆಂಬ ಭ್ರಾಂತಿಯೂ ಇಂದ್ರಿಯ ಜನ್ಯವಾದ ದುಃಖವೂ ಇಲ್ಲವೆಂಬುದರ್ಥಂ॥೪೭॥ ಬಳಿಕ ಪೇಳಿದರ್ಥವನೆ ಸ್ಫುಟೀಕರಿಸಿ ಅಕಾಯ ಸ್ಥಲಮಂ ಮುಗಿಸುತಿರ್ದಪಂ.

ಮನುಷ್ಯೋ ನ ದೇವೋऽಹಂ ನ ಯಕ್ಷೋನ ನೈವ ರಾಕ್ಷಸಃ
ಶಿವೋऽಹಮಿತಿ ಯೋ ಬುದ್ಧ್ಯಾತ್ತಸ್ಯ ಕಿಂ ದೇಹಕರ್ಮಣಾ ॥

ಯಾವನಾನೊಬ್ಬ ಪರಯೋಗೀಶ್ವರಂ ತಾನು ಮನುಷ್ಯನಲ್ಲ, ದೇವನೂ ಅಲ್ಲ, ಯಕ್ಷನೂ ಅಲ್ಲ ಮತ್ತೇನೆಂದಡೆ ಶಿವ ತಾನೆಂಬ ಬುದ್ಧಿಯೊಡನೆ ಕೂಡಿದಾತನಾದ ಕಾರಣಂ

ದೇಹಪ್ರಯುಕ್ತವಾದ ಕರಚರಣಾದಿ ಚಾಲನೆಯಿಂದೇನು ಬಾಧಕಂ ಏನೂ ಬಾಧಕ ಮಿಲ್ಲವೆಂಬುದರ್ಥಂ ॥೪೮॥

## ೧೫. ಪರಕಾಯಸ್ಥಲ

ಬಳಿಕ ಸ ಏವೈತ್ಪರಮಂ ಬ್ರಹ್ಮಧಾಮ ಎಂಬ ಮಾಯಾಮಾರ್ಗಾತೀತವರ್ತನಾತ್

ವಶೀಕೃತತ್ವಾತ್ಪ್ರಕೃತೇರ್ಮಾಯಾಮಾರ್ಗಾತಿವರ್ತನಾತ್
ಪರಕಾಯೋಽಯಮಾಖ್ಯಾತಸ್ಸತ್ಯಜ್ಞಾನಸುಖಾತ್ಮಕಃ ॥

ಈಯಕಾಯನಾದ ಪರಯೋಗಿಶ್ವರಂ ಪ್ರಕೃತಿಯಿಂ ತನ್ನೊಶವಾಗಿ ಮಾಡಿಕೊಂಡ ಕಾರಣದಿಂ ಮಾಯಾಮಾರ್ಗವ ಮೀರಿದ ಕಾರಣದಿಂ ಸಚ್ಚಿದಾನಂದಗಳೆ ಸ್ವರೂಪವಾಗಿ ಉಳ್ಳವನೆಂದು ಪೇಳಲ್ಪಟ್ಟನೆಂಬುದರ್ಥಂ ॥೪೯॥ ಬಳಿಕೀ ಪ್ರಕಾರದಿಂ ಪರಕಾಯತ್ವ ಪೇಳಲ್ಪಟ್ಟರೂ ಸ್ಥೂಲಶರೀರವಿರುವ ಕಾರಣದಿಂದೀಗಲೆ ಪರಕಾಯತ್ವಮೆಂತುಟೆಂಬಲ್ಲಿ ಪೇಳುತಿರ್ದಪಂ.

ಪರಬ್ರಹ್ಮವಪುರ್ಯಸ್ಯ ಪ್ರಬೋಧಾನಂದಭಾಸುರಮ್
ಪ್ರಾಕೃತೇನ ಶರೀರೇಣ ಕಿಮೇತೇನಾಸ್ಯ ಜಾಯತೇ ॥

ಚಿದಾನಂದಗಳಿಂ ಪ್ರಕಾಶಿಸುವ ಪರಬ್ರಹ್ಮವೆ ಯಾವಾತಂಗೆ ಶರೀರಮಾಗುತ್ತಿಹುದು ಆ ಈ ಪರಕಾಯಂಗೆ ಪ್ರಕೃತಿವಿಕಾರಮಾದೀ ಶರೀರದಿಂದೇನು ಬಾಧಕಂ ಪ್ರಕೃತಿಯಂ ತನ್ನ ಅಧೀನವ ಮಾಡಿಕೊಂಡು ಮಾಯಾಮಯವ ಮೀರಿರುವುದರಿಂ ಮಾಯಾಕಾರ್ಯ ರೂಪವಾದ ಪ್ರಕೃತಿಯಿಂದುಂಟಾದ ಶರೀರ ದಿಂದೇನು ಬಾಧಕವು ಇಲ್ಲವೆಂಬುದರ್ಥಂ ॥೫೦॥ ಬಳಿಕ ಹಾಗಾದರೂ ಶರೀರವೆ ಬಾಧಕವೆಂಬಲ್ಲಿ ಪೇಳುತಿರ್ದಪಂ.

ಸಮ್ಯಕ್ ಜ್ಞಾನಾಗ್ನಿಸಂದಗ್ಧಜನ್ಮಬೀಜಕಲೇವರಃ
ಶಿವತತ್ತ್ವಾವಲಂಬೀ ಯಃ ಪರಕಾಯಸ್ಸವುಚ್ಯತೇ ॥

ದೃಢತರವಾದ ಶಿವಜ್ಞಾನವೆಂಬ ವಹ್ನಿಯಿಂ ಪುನರುತ್ಪತ್ತಿ ಶಂಕೆಯಿಲ್ಲದಂತೆ ಸುಡಲ್ಪಟ್ಟ ಸೂಕ್ಷ್ಮಶರೀರವುಳ್ಳವನಾಗಿ ಶಿವತತ್ತ್ವ ಸ್ವರೂಪನಾದವನಾವನುಂಟು ಆತಂ ಪರಕಾಯನೆಂದು ಪೇಳಲ್ಪಡುವನೆಂಬುದರ್ಥಂ. ಜನ್ಮರೋಗ ಪ್ರವರ್ತಕವಾದ ಸೂಕ್ಷ್ಮಶರೀರಂ ನಷ್ಟವಾದ ಕಾರಣದಿಂ ಸ್ಥೂಲಶರೀರವಿರ್ದಡೂ ಬಾಧಕವಿಲ್ಲವೆಂಬುದರ್ಥಂ ॥೫೧॥ ಬಳಿಕ ಶರೀರವಿರುವುದರಿಂ ಇಂದ್ರಿಯವ್ಯಾಪಾರಮುಂಟಾಗಿರುವುದು ಅದರಿಂ ಬಾಧಕಮುಂಟೆಂಬಲ್ಲಿ ಪೇಳುತಿರ್ದಪಂ.

ಇಂದ್ರಿಯಾಣಿ ಮನೋವೃತ್ತಿರ್ವಾಸನಾಃ ಕರ್ಮಸಂಭವಾಃ
ಯತ್ರ ಯಾಂತಿ ಲಯಂ ತೇನ ಸಕಾಯೋಽಯಂ ಪರಾತ್ಮನಾ ॥

ಕರ್ಮಪಾಶದಿಂದುಂಟಾದ ಮಾನಸಿಕೇಂದ್ರಿಯಾರ್ಥ ವಾಸನೆಗಳೂ ದಶೇಂದ್ರಿಯ ವ್ಯಾಪಾರಂಗಳೂ ಯಾವಲ್ಲಿ ಲಯವನ್ನೈದುತ್ತಿಹುದು ಆ ಪರಬ್ರಹ್ಮದಿಂದೀ ಪರಕಾಯಂ

ಕಾಯದೊಡನೆ ಕೂಡಿದಾತನಾಗಿರುವನು. ಅಕಾಯವು ಪರಬ್ರಹ್ಮಮಯವೆಂಬುದರ್ಥಂ ॥ ೫೨॥ ಬಳಿಕ ಶರೀರಕ್ಕೆಂತು ಪರಬ್ರಹ್ಮತ್ವಮೆಂಬಲ್ಲಿ ಪೇಳುತಿರ್ದಪಂ.

ಪರಾಹಂತಾಮನುಪ್ರಾಪ್ಯ ಪಶ್ಯೇದ್ವಿಶ್ವಂ ಚಿದಾತ್ಮಕಮ್
ಸ ದೇಹೋಽಸ್ತಿ ಭ್ರಮಸ್ತಸ್ಯ ನಿಶ್ಚಿತಾ ಹಿ ಶಿವಾತ್ಮತಾ ॥

ಪೂರ್ಣಾಹಂಭಾವಮಂ ಪಡೆದು ವಿಶ್ವವೆಲ್ಲಂ ಪರಶಿವಸ್ವಭಾವಮಾದಚಿತ್ಕ್ರಿಯಾಂತರ್ಗತಮಾದುದರಿಂ ತನ್ನವಯವಮಂ ಯಾವಾತಂ ನೋಡುತ್ತಿಹನು ಆತನಿಗೆ ದೇಹದೊಡನೆ ಕೂಡಿಹವು. ನೋಡುವಂಥಾ ಪ್ರಾಕೃತರಿಗೆ ಭ್ರಾಂತಿಯು ಆ ಶರೀರಕ್ಕೆ ಶಕ್ತಿಮಯವಾಹತನದಿ ಶಿವಾತ್ಮತ್ವಂ ನಿಶ್ಚೈಸಲ್ಪಟ್ಟಿತ್ತೆಂಬುದರ್ಥಂ ॥೫೩॥ ಬಳಿಕ ಪರಕಾಯನಾದ ಶಿವಯೋಗೀಶ್ವರಂ ಶಿವನಂತೆ ಪರಮುಕ್ತನೆ ಆಗಲಿ ಎಂಬಲ್ಲಿ ಪೇಳುತಿರ್ದಪಂ.

ಸ್ವ ಸ್ವರೂಪಂ ಚಿದಾಕಾರಂ ಜ್ಯೋತಿಸ್ಸಾಕ್ಷಾದ್ವಿಚಿಂತಯನ್
ದೇಹವಾನಪಿ ನಿರ್ದೇಹೋ ಜೀವನ್ಮುಕ್ತೋ ಹಿ ಸಾಧಕಃ॥

ಸ್ವಸ್ವರೂಪಮಂ ಪ್ರತ್ಯಕ್ಷಚಿದಾಕಾರವಾದ ಪರಂಜ್ಯೋತಿಯನಾಗಿ ಚಿಂತಿಸುತ್ತಿಹ ಸಾಧಕಂ ದೇಹವುಳ್ಳವನಾವದು ಮರಳಿ ಮತ್ತೊಂದು ದೇಹವಿಲ್ಲದ ಕಾರಣದಿಂ ನಿರ್ದೇಹನಾಗಿ ಜೀವನ್ಮುಕ್ತನೆಂಬುದು ಪ್ರಸಿದ್ಧಂ ॥೫೪॥ ಅವನೆ ಮರಳಿ ಪ್ರತಿಪಾದಿಸುತಿರ್ದಪಂ.

ದೇಹಸ್ತಿಷ್ಠತು ವಾ ಯಾತು ಯೋಗಿನಃ ಸ್ವಾತ್ಮಬೋಧಿನಃ
ಜೀವನ್ಮುಕ್ತಿರ್ಭವೇತ್ಸದ್ಯಶ್ಚಿದಾನಂದ ಪ್ರಕಾಶಿನೀ ॥

ಸ್ವತತ್ವಜ್ಞಾನವುಳ್ಳ ಶಿವಯೋಗೀಶ್ವರಂಗೆ ದೇಹವಿರಲಿ ಹೋಗಲಿ ಆ ಕ್ಷಣದಲ್ಲಿಯೆ ಚಿದಾನಂದಗಳ ಪ್ರಕಾಶಿಸುವಂಥಾ ಜೀವನ್ಮುಕ್ತಿ ಎಂಬುದರ್ಥಂ ॥೫೫॥ ಬಳಿಕಿಲ್ಲಿ ದೃಷ್ಟಾಂತರಮಂ ಪೇಳುತಿರ್ದಪಂ.

ಆತ್ಮಜ್ಞಾನಾವಸಾನಂ ಹಿ ಸಂಸಾರ ಪರೀಪಿಡನಮ್
ಸೂರ್ಯೋದಯೇಽಪಿ ಕಿಂ ಲೋಕಸ್ತಿಮಿರೇಣೋಪರುಧ್ಯತೇ ॥

ಪ್ರಾಣಸಮೂಹವು ಸೂರ್ಯೋದಯವಾಗುತ್ತಿಹಲಾಗಿ ಹೇಗೆ ಕತ್ತಲೆಯಿಂ ವ್ಯಾಪಿಸಲ್ಪಡುವುದಿಲ್ಲವೋ ಹಾಗೆ ಆತ್ಮಜ್ಞಾನೋದಯ ಪರ್ಯಂತರವಾಗಿಯೆ ಸಂಸಾರ ಪೀಡನೆಯುಂಟಾಗಿರುವುದು ಆಮೇಲೆ ಇಲ್ಲವೆಂಬುದರ್ಥಂ ॥೫೬॥ ಬಳಿಕ ಪರಕಾಯ ಸ್ಥಲಮಂ ಮುಗಿಸುತಿರ್ದಪಂ.

ದೇಹಾಭಿಮಾನನಿರ್ಮುಕ್ತಃ ಕಲಾತೀತಪದಾಶ್ರಯಃ
ಕಥಂ ಯಾತಿ ಪರಿಚ್ಛೇದಂ ಶರೀರೇಷು ಮಹಾಬುಧಃ ॥

ಶರೀರಕಲಾಭಿಮಾನವಿಲ್ಲದಾತನಾಗಿ ಶರೀರವೆಂಬುದು ಪಾಂಚಭೌತಿಕವಪ್ಪುವದರಿಂದ ಪಂಚಭೂತಂಗಳಿಗೆ ಕಾರಣವಾದ ನಿವೃತ್ತ್ಯಾದಿ ಕಳೆಗಳಿಂ ಮೀರಿದ ಪರಬ್ರಹ್ಮ ಪದವನಾಶ್ರಯಿಸಿದ ಪರಮಜ್ಞಾನಿಯಾದ ಪರಕಾಯಂ ಶರೀರಂಗಳಲ್ಲಿ ಪರಿಮಿತನಾಹತನವನೆಂತು ಪಡೆವಂ ಯಾವ ಪ್ರಕಾರದಿಂದಲೂ ಪಡೆಯನೆಂಬುದರ್ಥಂ ॥೫೭॥

## ೧೬. ಧರ್ಮಾಚಾರಸ್ಥಲ

ಬಳಿಕ ಯದ್ವೇದ ವಿದ್ಯಾಧಿಗಮಃ ಸ್ವಧರ್ಮಸ್ಯಾನುಚರಣಂ ಸ್ವಾಶ್ರಮೇಷ್ವಿವಾನುಕರಣಂ ಸ್ವಧರ್ಮ ಏವ ಸರ್ವಂ ಧತ್ತೇ ಸ್ತಂಭಶಾಖೇವೇತರಾಣಿ ಅನೇನೋರ್ಧ್ವಭಾಗ್ ಭವತಿ ಎಂಬ ಮೈತ್ರೇಯಶ್ರುತಿಯಿಂದ ಪರಕಾಯನಾದ ಶಿವಯೋಗೀಶ್ವರನ ಆಚಾರವೆ ಸಕಲ ಜನರಿಗೂ ಧರ್ಮಾಚಾರಸ್ಥಲಮಂ ನಿರೂಪಿಸುತಿರ್ದಪಂ.

ತಸ್ಯೈವ ಪರಕಾಯಸ್ಯ ಸಮಾಚಾರೋ ಯ ಇಷ್ಯತೇ
ಸ ಧರ್ಮಸ್ಸರ್ವಲೋಕಾನಾಮುಪಕಾರಾಯ ಕಲ್ಪ್ಯತೇ ॥

ಆ ಪರಬ್ರಹ್ಮಕಾಯನಾದ ಶಿವಯೋಗಿಯ ಯಾವುದಾನೊಂದು ಆಚಾರವಿಚ್ಛಾ ವಿಷಯಮಾಗಲ್ಪಡುತ್ತಿಹುದು ಅದೇ ಧರ್ಮವಾಗಿ ಸಕಲ ಜನರಿಗೂ ಉಪಕಾರಕೋಸ್ಕರ ವಾಗುತ್ತಿಹರೆಂಬುದರ್ಥಂ ॥೫೮॥ ಬಳಿಕ ಧರ್ಮಾಚಾರಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ ॥

ಪ್ರಾಣಿಗಳನ್ನು ಹಿಂಸಿಸದಿಹುದು, ಹುಸಿಯಂ ನುಡಿಯದಿರುವುದು, ಕಳವಿಲ್ಲ ದಿರುವುದು, ಪರಸ್ತ್ರೀಯಿಲ್ಲದಿರುವುದು, ಭೂತದಯೆಯು, ತಾಳುವಿಕೆ, ಸಹಜದಾನ, ಶಿವಲಿಂಗಪೂಜೆ, ತಚ್ಚಿಂತನೆ, ಶೈವಪಂಚಾಕ್ಷರಾಭ್ಯಾಸಮೆಂಬಿವು ಧರ್ಮಗಳೆಂಬುದರ್ಥಂ ॥೫೯॥ ಬಳಿಕ ಧರ್ಮಾಚರಣೆ ಏನು ಕಾರಣಂ ಮಾಡಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ಶಿವೇನ ವಿಹಿತೋ ಯಸ್ಮಾದಾಗಮೈರ್ಧರ್ಮಸಂಗ್ರಹಃ
ತಸ್ಮಾತ್ತಮಾಚರನ್ವಿದ್ವಾನ್ ತತ್ಪ್ರಸಾದಾಯ ಕಲ್ಪ್ಯತೇ ॥

ವೇದಾಗಮ ಪುರಾಣಂಗಳಿಂ ಧರ್ಮಸಮೂಹಂ ಶಿವನಿಂ ವಿಧಿಸಲ್ಪಟ್ಟುದರಿಂ ಧರ್ಮವನಾಚರಿಸಬೇಕು. ಅದು ಕಾರಣದಿಂ ಧರ್ಮಾಚಾರವುಳ್ಳವಂ ಶಿವಪ್ರಸಾದಕ್ಕೆ ಪಾತ್ರನಾಗುವನು. ಅಲ್ಲದಿರ್ದಡೆ ಶಿವಪ್ರಸಾದಶೂನ್ಯನಾಗಿ ನರಕವನ್ನೈದುವನೆಂಬುದರ್ಥಂ ॥೬೦॥ ಬಳಿಕ ಧರ್ಮವೆಂತು ಮಾಡಲ್ತಕ್ಕದೆಂಬಲ್ಲಿ ಪೇಳುತಿರ್ದಪಂ.

ಅಧರ್ಮಂ ನ ಸ್ಪೃಶೇತ್ಕಿಂಚಿದ್ವಿಹಿತಂ ಧರ್ಮಮಾಚರೇತ್
ತಂ ಚ ಕಾಮವಿನಿರ್ಮುಕ್ತಂ ತಮಪಿ ಜ್ಞಾನಪೂರ್ವಕಮ್ ॥

ಅಧರ್ಮವನೊಂದಿಷ್ಟನು ಮಾಡದೆ ವಿಹಿತವಾದ ಅಹಿಂಸಾಧರ್ಮಂಗಳಂ ನಿಷ್ಕಾಮನೆಯಿಂ ಜ್ಞಾನಪೂರ್ವಕಮಾಗಿ ಮಾಡೂದೆಂಬುದರ್ಥಂ ॥೬೧॥ ಬಳಿಕಾ ಜ್ಞಾನವೆಂಥಾದೆಂಬಲ್ಲಿ ಮಾತೃವತ್ಪರದಾರಾಣಿ ಪರದ್ರವ್ಯಾಣಿ ಲೋಷ್ಟವತ್ ಆತ್ಮವತ್ಸರ್ವ ಭೂತಾನಿ ಯಃ ಪಶ್ಯತಿ ಸ ಧರ್ಮಿರಾಟ್ ಹೀಗೆಂಬ ಶ್ರುತ್ಯನುಸಾರದಿಂ ತತ್ಸ್ವರೂಪಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಆತ್ಮವತ್ಸರ್ವಭೂತಾನಿ ಸಂಪಶ್ಯೇದ್ಯೋಗವಿತ್ತಮಃ
ಜಗದೇಕಾತ್ಮತಾಭಾವಾನ್ನಿಗ್ರಹಾದಿ ವಿರೋಧತಃ ॥

ಯೋಗೀಶ್ವರನಾದಾತಂ ವಿಶ್ವಕ್ಕೆ ಪ್ರಕಾಶೈಕತ್ವರೂಪಮಂ ಚಿಂತಿಸೂದು. ಅದರತ್ತಣಿಂ ನಿಗ್ರಹಾನುಗ್ರಹಗಳಿಗವಕಾಶವಿಲ್ಲದ ಕಾರಣದಿಂ ಸಕಲ ಪ್ರಾಣಿಗಳನೂ ತನ್ನಂತೆ ಪಕ್ಷಪಾತವಿಲ್ಲದೆ ನೋಡೂದೆ ಜ್ಞಾನವೆಂಬುದರ್ಥಂ ॥೬೨॥ ಬಳಿಕೀ ಪ್ರಕಾರದಿಂ ನೋಡುವ ಶಿವಯೋಗೀಶ್ವರನಿಗೆ ನನ್ನದೆಂಬ ಅಭಿಮಾನವಿಲ್ಲವೆಂದು ಪೇಳುತಿರ್ದಪಂ.

ಏಕ ಏವ ಶಿವಸ್ಸಾಕ್ಷಾಜ್ಜಗದೇತದಿತಿ ಸ್ಫುಟಮ್
ಪಶ್ಯತಃ ಕಿಂ ನ ಜಾಯೇತ ಮಮಕಾರೋ ಹಿ ವಿಭ್ರಮಃ ॥

ಶಿವ ಒಬ್ಬನೆ ಈ ಜಗದ್ರೂಪನೆಂದು ಸ್ಫುಟವಾಗಿ ನೋಡುವಾತಂಗೆ ಏನಾಗದು ಸಕಲ ಸಿದ್ಧಿಗಳೂ ಅಹವು. ಆ ಜಗತ್ತಿನೊಳಗೇಕದೇಶದಲ್ಲಿ ತನ್ನದೆಂಬ ಭೇದ ಭ್ರಾಂತಿಯಿಲ್ಲದೆ ಸಕಲವೂ ಶಿವಮಯಮೆಂಬ ನಿಶ್ಚಯವೆ ಜ್ಞಾನವೆಂಬುದರ್ಥಂ ॥೬೩॥ ಬಳಿಕೀ ಪ್ರಕಾರವಾದ ಧರ್ಮಾಚರಣೆಯಂ ವಿರಕ್ತನು ಬಿಡಲಾಗದೆಂದು ಪೇಳುತಿರ್ದಪಂ.

ಧರ್ಮ ಏವ ಸಮಸ್ತಾನಾಂ ಯತಃ ಸಂಸಿದ್ಧಿಕಾರಣಮ್
ನಿಸ್ಪೃಹೋಽಪಿ ಮಹಾಯೋಗೀ ಧರ್ಮಮಾರ್ಗಂ ಚ ನ ತ್ಯಜೇತ್ ॥

ಯಾವುದಾನೊಂದು ಕಾರಣದಿಂ ಸಕಲರಿಗೂ ಧರ್ಮವೇ ಭೋಗ ಮೋಕ್ಷ ರೂಪವಾದ ಸಿದ್ಧಿಗೆ ಕಾರಣವಾದಂಥಾದು. ಆ ಕಾರಣದಿಂ ಶಿವಯೋಗೀಶ್ವರಂ ನಿಸ್ಪೃಹನಾದರೂ ಅಹಿಂಸಾದಿ ಧರ್ಮಂಗಳನಾಚರಿಸುವುದೆಂಬುದರ್ಥಂ ॥೬೪॥ ಬಳಿಕ ಜ್ಞಾನಿಗೆ ಧರ್ಮಾಚರಣೆಯಿಂದೇನು ಪ್ರಯೋಜನವೆಂಬಲ್ಲಿ ಪೇಳುತಿರ್ದಪಂ.

ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥

ಮಹಾಯೋಗೀಶ್ವರಂ ಶಿವಜ್ಞಾನಾಮೃತದಿಂ ತೃಪ್ತನಾದರೂ ಲೋಕಹಿತಾರ್ಥವಾಗಿ ಧರ್ಮಾಚರಣೆಯಂ ಮಾಡೂದು. ದೊಡ್ಡವರ ಆಚರಣೆಯ ಕಂಡು ಲೌಕಿಕರು ಧರ್ಮದಲ್ಲಿ ಪ್ರವೃತ್ತರಾಗಿ ಸದ್ಗತಿಯಂ ಪಡೆವರೆಂಬ ಕಾರಣದಿಂದೆಂಬುದರ್ಥಂ ॥೬೫॥ ಬಳಿಕ ಕಾರಣಾಂತರವನೂ ಪೇಳುತಿರ್ದಪಂ.

ಸದಾಚಾರಪ್ರಿಯಶ್ಶಂಭುಸ್ಸದಾಚಾರೇಣ ಪೂಜ್ಯತೇ
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ ॥

ಶಿವನು ಸದಾಚಾರದಲ್ಲಿ ಪ್ರೀತಿಯುಳ್ಳವನು. ಆ ಕಾರಣದಿಂ ಸದಾಚಾರದಿಂದಲೆ ಪೂಜಿಸಲ್ಪಡುವನು. ಸದಾಚಾರವಿಲ್ಲದಿರ್ದಡೆ ಶಿವಪ್ರಸಾದವಾಗದು. ಆ ಕಾರಣದಿಂ ಧರ್ಮಾಚರಣಮಾವಶ್ಯಕವೆಂಬುದರ್ಥಂ ॥೬೬॥

## ೧೭. ಭಾವಾಚಾರಸ್ಥಲ

ಬಳಿಕ ಜ್ಯೋತಿರೂಪಂ ಶಿವಂ ಪೂರ್ಣಂ ವಿಶ್ವತೇಜೋನಿವರ್ತಕಂ ಆಶಯಂ ಭಾಸಯಂತಂ ಚ ಭಾವಯಾಸ್ತ ತನ್ಮಯೋ ಭವೇತ್ ಹೀಗೆಂಬ ಕಾಮಿಕ ವಚನಾನುಸಾರದಿಂ ಧರ್ಮಾಚಾರ ಪ್ರಸನ್ನನಾದ ಶಿವಯೋಗಿಯ ಭಾವವೆ ಸಕಲ ಜನರಿಗೂ ಭಾವಾಚಾರವೆಂದು ನಿರೂಪಿಸುತಿರ್ದಪಂ.

ಭಾವ ಏವಾಸ್ಯ ಸರ್ವೇಷಾಂ ಭಾವಾಚಾರಃ ಪ್ರಕೀರ್ತಿತಃ
ಭಾವೋ ಮಾನಸಚೇಷ್ಟಾತ್ಮಾ ಪರಿಪೂರ್ಣಶ್ಶಿವಾಶ್ರಯಃ ॥

ಈ ಧರ್ಮಾಚಾರ ಸಂಪನ್ನನಾಗಿ ಶಿವಯೋಗಿಯ ಭಾವವೆ ಸಮಸ್ತವಾದ ಪ್ರಾಕೃತ ಜನರಿಗೆ ಭಾವಾಚಾರವೆಂದು ಪೇಳಲ್ಪಟ್ಟಿತು. ಒಳಗೆ ಹೊರಗೆ ಎಲ್ಲಾ ಕಡೆಯಲ್ಲೂ ಪರಿ ಪೂರ್ಣನಾದ ಶಿವನೆ ಆಶ್ರಯವಾಗಿ ಉಳ್ಳ ಮನೋವ್ಯಾಪಾರವೆ ವಿಶೇಷದಿಂ ಭಾವವೆನಿಸಿಕೊಂಬುದರ್ಥಂ ॥೬೭॥ ಬಳಿಕ ಭಾವಯುಕ್ತವಾದ ಕರ್ಮಮಂ ಸೂತ್ರದ್ವಯದಿಂ ವಿಶೇಷಿಸುತಿರ್ದಪಂ.

ಭಾವನಾವಿಹತಂ ಕರ್ಮ ಪಾವನಾದಪಿ ಪಾವನಮ್
ತಸ್ಮಾದ್ಭಾವನಯಾ ಯುಕ್ತಂ ಪರಧರ್ಮಂ ಸಮಾಚರೇತ್ ॥

ಭಾವನೆಯಿಂದ ಮಾಡಿದ ಸತ್ಕರ್ಮವು ಪವಿತ್ರಮಾದುದರತ್ತಣಿಂದವು ಪವಿತ್ರಮಾದಂಥಾದು. ಅದು ಕಾರಣವಾಗಿ ಶಿವಭಾವನೆಯೊಡನೆ ಕೂಡಿದ ಉತ್ಕೃಷ್ಟ ಧರ್ಮವನೆ ಮಾಡೂದೆಂಬುದರ್ಥಂ ॥೬೮॥ ಬಳಿಕಾ ಭಾವದಿಂದೇನು ಪ್ರಯೋಜನ ವೆಂಬಲ್ಲಿ ಪೇಳುತಿರ್ದಪಂ.

ಭಾವೇನ ಹಿ ಮನಶ್ಶುದ್ಧಿರ್ಭಾವಶುದ್ಧಿಶ್ಚ ಕರ್ಮಣಾ
ಇತಿ ಸಂಚಿಂತ್ಯ ಮನಸಾ ಯೋಗೀ ಭಾವಂ ನ ಸಂತ್ಯಜೇತ್ ॥

ಭಾವದಿಂ ಚಿತ್ತಶುದ್ಧಿಯುಂಟಪ್ಪುದು ಭಾವದಿಂ ಕರ್ಮಸಿದ್ಧಿಯುಂಟಪ್ಪದು. ಹೀಗೆಂದು ಮನಸ್ಸಿನಿಂ ಭಾವಿಸಿ ಯೋಗೀಶ್ವರಂ ಭಾವಮಂ ಮಾಡಲಾಗದೆಂಬುದರ್ಥಂ ॥೬೯॥ ಬಳಿಕಾ ಭಾವದಿಂ ಕರ್ಮಸಿದ್ಧಿಯಾದಡೆ ಪ್ರತಿಬಂಧಕ ಆಗದೆಂಬಲ್ಲಿ ಪೇಳುತಿರ್ದಪಂ.

ಶಿವಭಾವನಯಾ ಸರ್ವಂ ನಿತ್ಯನೈಮಿತ್ತಿಕಾದಿಕಮ್
ಕುರ್ವನ್ನಪಿ ಮಹಾಯೋಗೀ ಗುಣದೋಷೈರ್ನ ಬಾಧ್ಯತೇ ॥

ತರ್ಕಾಕಾರಯುಕ್ತಾ ಕರ್ಮ ಸಕಲವೂ ಶಿವಮಯವೆಂಬ ಭಾವನೆಯಿಂ ನಿತ್ಯ ನೈಮಿತ್ತಿಕಕರ್ಮಂಗಳ ಮಾಡುವ ಶಿವಯೋಗೀಶ್ವರಂ ಪುಣ್ಯಾಪಾಪರೂಪವಾದ ಗುಣದೋಷಂಗಳಿಂ ಬಂಧಿಸಲ್ಪಡನೆಂಬುದರ್ಥಂ ॥೭೦॥ ಬಳಿಕಿಲ್ಲಿ ಪರಯೋಗೀಶ್ವರಂಗೆ ನಿತ್ಯ ನೈಮಿತ್ತಿಕಕರ್ಮಸಂಗವಿಲ್ಲದ ಕಾರಣದಿಂದ್ಯೆದುಂ ತದಾಚರಣಮಂ ನಿರಾಕರಿಸಲ್ಪಟ್ಟಿ ತ್ತೆಂಬಲ್ಲಿ ಪೇಳುತಿರ್ದಪಂ.

ಅಂತಃ ಪ್ರಕಾಶಮಾನಸ್ಯ ಸಂವಿತ್ಸೂರ್ಯಸ್ಯ ಸಂತತಮ್
ಭಾವೇನ ಯದುಪಸ್ಥಾನಂ ತತ್ಸಂಧ್ಯಾವಂದನಂ ವಿದುಃ ॥

ಊರ್ಧ್ವ ಹೃತ್ಕಮಲದಲ್ಲೀ ಕಾರಣದಿಂ ನಿರಂತರವು ಪ್ರಕಾಶಿಸುವಂಥಾ ಚಿದಾದಿತ್ಯನ ಭಾವದಿಂದನುವರ್ತನವಾವುದುಂಟು ಅದು ಸಂಧ್ಯಾವಂದನವೆಂದು ವೀರಶೈವಾಚಾರ್ಯರು ತಿಳಿದಿಹದೆಂಬುದರ್ಥಂ ॥೭೧॥ ಹಾಗಾದಡೆ ಹೋಮವೂ ಆವಶ್ಯಕವಾದ ಕಾರಣದಿಂದೆಂಥಾದೆಂಬಲ್ಲಿ ಪೇಳುತಿರ್ದಪಂ.

ಆತ್ಮಜ್ಯೋತಿಷಿ ಸರ್ವೇಷಾಂ ವಿಷಯಾಣಾಂ ಸಮರ್ಪಣಮ್
ಅಂತರ್ಮುಖೇನ ಭಾವೇನ ಹೋಮಕರ್ಮೇತಿ ಗೀಯತೇ ॥

ಚಿದಗ್ನಿಯಲ್ಲಿ ಅಂತರ್ಮುಖವಾದ ಭಾವದಿಂದ ಸಕಲ ವಿಷಯಗಳಿಗೂ ಸಾಗರತರಂಗ ನ್ಯಾಯದಿಂ ಲಯಚಿಂತನೆ ಯಾವುದುಂಟು ಅದು ಹೋಮಕರ್ಮವೆಂದು ಪೇಳಲ್ಪಡುತ್ತಿಹುದೆಂಬುದರ್ಥಂ ॥೭೨॥ ಈ ಪ್ರಕಾರದಿಂ ನಿತ್ಯ ನೈಮಿತ್ತಿಕಾದಿ ಕರ್ಮಂಗಳಂ ಭಾವಿಸುವಾತಂ ಸಂಗರಹಿತನೆಂದು ಪೇಳುತಿರ್ದಪಂ.

ಭಾವಯೇತ್ಸರ್ವಕರ್ಮಾಣಿ ನಿತ್ಯನೈಮಿತ್ತಿಕಾನಿ ಚ
ಶಿವಪ್ರೀತಿಕರಾಣ್ಯೇವ ಸಂಗರಾಹಿತ್ಯಸಿದ್ಧಯೇ ॥

ಸಂಗರಾಹಿತ್ಯಸಿದ್ಧ್ಯರ್ಥವಾಗಿ ನಿತ್ಯ ನೈಮಿತ್ತಿಕಾದಿಕರ್ಮಂಗಳೆಲ್ಲವಂ ಶಿವಪ್ರೀತಿಕರವಾದಂಥಾವನಾಗಿ ಭಾವಿಸೂದೆಂಬುದರ್ಥಂ ॥೭೩॥ ಬಳಿಕ ಕರ್ಮವೆಂಬುದು ಸಂಗಕ್ಕೆ ಕಾರಣವಾದುದರಿಂ ಸಂಗರಾಹಿತ್ಯಕ್ಕದೆಂತು ಕಾರಣಮಪ್ಪುದೆಂಬಲ್ಲಿ ಪೇಳುತಿರ್ದಪಂ.

ಶಿವೇ ನಿವೇಶ್ಯ ಸಕಲಂ ಕಾರ್ಯಾಕಾರ್ಯಂ ವಿವೇಕತಃ
ವರ್ತತೇ ಯೋ ಮಹಾಭಾಗಃ ಸ ಸಂಗರಹಿತೋ ಭವೇತ್ ॥

ಕರ್ತಾ ಕಾರಯಿತಾ ಕರ್ಮತತ್ಫಲ ಸಹ ಶಿವನೆ ಎಂಬ ವಿವೇಕದಿಂ ಮಾಡಲ್ತಕ್ಕದೆಲ್ಲದನೂ ಶಿವನಲ್ಲಿ ಸಮರ್ಪಿಸಿ ಯಾವ ಮಹಾಪುರುಷನಿರುವನು ಆತಂ ಭವಸಂಗರಹಿತನೆಂಬುದರ್ಥಂ ॥೭೪॥ ಬಳಿಕ ಭವಸಂಗರಾಹಿತ್ಯವು ಶಿವದರ್ಶನದಿಂದಲ್ಲದೆ ಆಗದೆಂಬುದ ಪೇಳುತಿರ್ದಪಂ.

ಆತ್ಮಾನಮಖಿಲಂ ವಸ್ತು ಶಿವಮಾನಂದಚಿನ್ಮಯಮ್
ಏಕಭಾವೇನ ಸತತಂ ಸಂಪಶ್ಯನ್ನೇವ ಪಶ್ಯತಿ ॥

ತನ್ನನೂ ಸಕಲವಾದ ದೃಶ್ಯ ವಸ್ತುಗಳಿಂ ಚಿದಾನಂದಮಯವಾದ ಶಿವನು ಚಿತ್ಕ್ರಿಯೆ ವ್ಯಾಪ್ತವಾದುದರಿಂ ಚಿದ್ರೂಪವಾದುದರಿಂ ಶಿವನೆ ಎಂದು ಎಲ್ಲಾಗಳು ಕಾಂಬಾತನೆ ಶಿವನಂ ಕಾಂಬಾತನೆಂಬುದರ್ಥಂ ॥೭೫॥

## ೧೮. ಜ್ಞಾನಾಚಾರಸ್ಥಲ

ಬಳಿಕ ಸತ್ಯಂ ಜ್ಞಾನಮನಂತಂ ಬ್ರಹ್ಮ ಎಂಬ ಶ್ರುತಿಯಿಂ ಆ ಭಾವಾಚಾರ ಸಂಪನ್ನನಾದ ಶಿವಯೋಗಿಯ ಜ್ಞಾನಾಚಾರವೆ ಸಕಲಪ್ರಾಣಿಗಳಿಗೂ ಜ್ಞಾನಾಚಾರವೆಂದು ನಿರೂಪಿಸು ತಿರ್ದಪಂ.

ಅಸ್ಯ ಜ್ಞಾನಸಮಾಚಾರೋ ಯೋಗಿನಸ್ಸರ್ವದೇಹಿನಾಮ್
ಜ್ಞಾನಾಚಾರೋ ಯದುಕ್ತೋsಯಂ ಜ್ಞಾನಾಚಾರಸ್ಸ ಕಥ್ಯತೇ ॥

ಪೂರ್ವೋಕ್ತ ಭಾವಾಚಾರ ಸಂಪನ್ನನಾದ ಶಿವಯೋಗೀಶ್ವರನ ಜ್ಞಾನಸಮಾಚಾರವೆ ಸಕಲಪ್ರಾಣಿಗಳಿಗೂ ಜ್ಞಾನಾಚಾರವೆಂದು ಯಾವ ಕಾರಣದಿಂ ಪೇಳಲ್ಪಟ್ಟಿತ್ತು ಆ ಕಾರಣದಿಂದಾ ಇದು ಜ್ಞಾನಾಚಾರವೆಂದು ಪೇಳಲ್ಪಡುತ್ತಿಹುದೆಂಬುದರ್ಥಂ ॥೭೬॥

ಶಿವಾದ್ವೈತಪರಂ ಜ್ಞಾನಂ ಜ್ಞಾನಮಿತ್ಯುಚ್ಯತೇ ಬುಧೈಃ
ಸಿದ್ಧೇನ ವಾಪ್ಯಸಿದ್ಧೇನ ಫಲಂ ಜ್ಞಾನಾಂತರೇಣ ಕಿಮ್ ॥

ಶಿವಾದ್ವೈತವೇ ಪ್ರಧಾನವಾಗಿ ಉಳ್ಳದು ಜ್ಞಾನವೆಂದು ಶಾಸ್ತ್ರಜ್ಞರಿಂ ಪೇಳಲ್ಪಡುವುದು ಶಾಸ್ತ್ರಸಿದ್ಧವಾದುದಂಥಾದು. ಆ ಸಿದ್ಧವಾದುದಾದರೂ ಭೇದಜ್ಞಾನದಿಂದೇನು ಫಲ ಏನೂ ಇಲ್ಲವೆಂಬುದರ್ಥಂ ॥೭೭॥ ಬಳಿಕದೆಂತೆಂದಡೆ ಪೇಳುತಿರ್ದಪಂ.

ನಿರ್ಮಲಂ ಹಿ ಶಿವಜ್ಞಾನಂ ನಿಶ್ರೇಯಸಕರಂ ಪರಮ್
ರಾಗದ್ವೇಷಾದಿಕಲುಷಂ ಭೂಯಸ್ಸಂಸೃತಿ ಕಾರಣಮ್ ॥

ಶಿವಾದ್ವೈತಜ್ಞಾನವು ಆಣವಾದಿ ಮಲತ್ರಯ ರಹಿತವಾದಂಥಾದಾಗಿ ಸರ್ವೋತ್ಕೃಷ್ಟ ವಾದಂಥಾದು ತದ್ವ್ಯತಿರಿಕ್ತವಾದುದರಿಂದ ಭೇದಜ್ಞಾನವು ರಾಗದ್ವೇಷಾದಿಗಳಿಂ ಕೂಡಿದಂಥಾ ದಾಗಿ ಮರಳಿ ಮರಳಿ ಯಾತಾಯಾತನಂಗಳಿಗೆ ಕಾರಣವಾದಂಥಾದೆಂದು ಪ್ರಸಿದ್ಧ ವೆಂಬುದರ್ಥಂ ॥ ೭೮॥ ಈ ಪ್ರಕಾರದಿಂ ಜ್ಞಾನರೂಪಮಂ ಪೇಳಿದಾತಾಚಾರಸ್ವರೂಪಮಂ ಪೇಳುತಿರ್ದಪಂ.

ಪರಿಪೂರ್ಣಂ ಮಹಾಜ್ಞಾನಂ ಪರತತ್ತ್ವಪ್ರಕಾಶಕಮ್
ಅವಲಂಬ್ಯ ಪ್ರವೃತ್ತೋ ಯಃ ಜ್ಞಾನಾಚಾರಸ್ಸ ಉಚ್ಯತೇ ॥

ಪರಶಿವತತ್ತ್ವ ಪ್ರಕಾಶಕಮಾದ ಅಖಂಡಶಿವಾದ್ವೈತಜ್ಞಾನವನಾಶ್ರಯಿಸಿ ಯಾವ ಆಚಾರಂ ಪ್ರವೃತ್ತವಾಗಿರುವುದು ಅದು ಜ್ಞಾನಾಚಾರವೆಂದು ಪೇಳಲ್ಪಡುವದೆಂಬುದರ್ಥಂ ॥೭೯॥ ಬಳಿಕ ಜ್ಞಾನಾಚಾರಂ ಉಳ್ಳಾತನಂ ತೋರಿಸುತಿರ್ದಪಂ.

ನಿರ್ವಿಕಲ್ಪೇ ಪರೇ ಧಾಮ್ನಿ ನಿಷ್ಕಲೇ ಶಿವನಾಮನಿ
ಜ್ಞಾನೇನ ಯೋಜಯೇತ್ಸರ್ವಂ ಜ್ಞಾನಾಚಾರೀ ಪ್ರಕೀರ್ತಿತಃ ॥

ಅವಯವಶೂನ್ಯವಾದ ಭೇದವಿಲ್ಲ ಶಿವನೆಂಬ ಪೆಸರುಳ್ಳ ಪರಬ್ರಹ್ಮವೆಂಬ ಸ್ಥಲದಲ್ಲಿ ಸಕಲಪ್ರಪಂಚನೂ ಅಭೇದಜ್ಞಾನದಿಂದ ಯಾವಾತಂ ಕೂಡಿಸುವನು ಆತಂ ಜ್ಞಾನಾಚಾರಿ ಯೆಂದು ಪೇಳಲ್ಪಡುವನೆಂಬುದರ್ಥಂ ॥೮೦॥ ಬಳಿಕ ಜ್ಞಾನಾಚಾರಿಗೆ ಕರ್ಮಕಾರ್ಪಣ್ಯ ವಿಲ್ಲವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಜ್ಞಾನಂ ಮುಕ್ತಿಪ್ರದಂ ಪ್ರಾಪ್ಯ ಗುರುದೃಷ್ಟಿಪ್ರಸಾದತಃ
ಕಃ ಕುರ್ಯಾತ್ಕರ್ಮಕಾರ್ಪಣ್ಯೇ ವಾಂಛಾಂ ಸಂಸಾರವರ್ಧನೇ ॥

ಪರಮೋಕ್ಷಪ್ರದಮಾದ ಶಿವಜ್ಞಾನಮಂ ಗುರುಕೃಪಾದೃಷ್ಟಿ ಪ್ರಸನ್ನತೆಯಿಂದ ಪಡೆದು ಸಂಸಾರವ ಹೆಚ್ಚಿಸುವ ಕರ್ಮಕಾರ್ಪಣ್ಯದಲ್ಲಿ ಯಾವಾತನಿಚ್ಛೈಸರೆಂಬುದರ್ಥಂ ॥೮೧॥ ಅದೇನು ಕಾರಣವೆಂಬಲ್ಲಿ ಪೇಳುತಿರ್ದಪಂ.

> ಕರ್ಮಜ್ಞಾನಾಗ್ನಿನಾ ದಗ್ಧಂ ನ ಪುರೋಹೇತ್ವಥಂಚನ
> ಯದಾಹುಸ್ಸಂಸ್ಕೃತೇರ್ಮೂಲಂ ಪ್ರವಾಹಾನುಗತಂ ಬುಧಾಃ ॥

ಬಲ್ಲವರಾದವರು ಯಾವದಾನೊಂದು ಕರ್ಮವಂ ಸಂಸಾರಕ್ಕೆ ಮೂಲಕಾರಣವನಾಗಿ ಜಲಪ್ರವಾಹನ್ಯಾಯದಿಂದನಾದಿಯಾಗಿ ಶರೀರವನ್ಯೈದಿದಂಥಾವನಾಗಿ ಪೇಳುವರು. ಆ ಕರ್ಮಬಂಧನವು ಶಿವಜ್ಞಾನಾಗ್ನಿಯಿಂ ಸುಡಲ್ಪಟ್ಟವಾಗಿ ಯಾವ ಪ್ರಕಾರದಿಂದಲೂ ಮೊಳೆದೋರಲಾರದೆಂಬುದರ್ಥಂ ॥೮೨॥ ಹಾಗಾದಡೆ ಕರ್ಮಬಂಧನ ವಾರಿಗೆಂಬಲ್ಲಿ ಪೇಳುತಿರ್ದಪಂ.

> ಜ್ಞಾನೇನ ಹೀನಃ ಪುರುಷಃ ಕರ್ಮಣಾ ಬಧ್ಯತೇ ಸದಾ
> ಜ್ಞಾನಿನಃ ಕರ್ಮಸಂಕಲ್ಪಾ ಭವಂತಿ ಕಿಲ ನಿಷ್ಫಲಾಃ ॥

ಶಿವಜ್ಞಾನಶೂನ್ಯವಾದ ಪುರುಷಂ ಸದಾ ಕರ್ಮಬಂಧನಕ್ಕೊಳಗಹನು. ಶಿವಜ್ಞಾನವುಳ್ಳ ಮಹಾಪುರುಷಗೆ ಕರ್ಮಸಂಕಲ್ಪಗಳು ಜ್ಞಾನಾಗ್ನಿಯಿಂ ದಗ್ಧವಾದ ಕಾರಣ ಫಲವ ಕೊಡಲಾರ ವೆಂಬುದರ್ಥಂ ॥೮೩॥ ಬಳಿಕ ಜ್ಞಾನಾಚಾರಸ್ಥಲಮಂ ಮುಗಿಸುತಿರ್ದಪಂ.

> ಶುದ್ಧಾಚಾರೇ ಶುದ್ಧಭಾವೋ ವಿವೇಕೀ
> ಜ್ಯೋತಿಃ ಪಶ್ಯನ್ ಸರ್ವತಶ್ಶೈವಮೇಕಮ್
> ಜ್ಞಾನಧ್ವಸ್ತಪ್ರಾಕೃತಾತ್ಮಪ್ರಪಂಚೋ
> ಜೀವನ್ಮುಕ್ತಶ್ಚೇಷ್ಟತೇ ದಿವ್ಯಯೋಗೀ ॥

ನಿರ್ಮಲವಾದ ಜ್ಞಾನಾಚಾರದಲ್ಲಿ ನಿರ್ಮಲವಾದ ಭಾವವುಳ್ಳ ವಿವೇಕಿಯು ಎರಡಿಲ್ಲದ ಶಿವನ ಸಂಬಂಧವಾದ ತೇಜಸ್ಸನ್ನು ಎಲ್ಲಾ ಕಡೆಯಲ್ಲೂ ನೋಡುವಾತನಾಗಿ ಶಿವಾದ್ವೈತಜ್ಞಾನದಿಂ ಕೆಡಿಸಲ್ಪಟ್ಟ ಪ್ರಾಕೃತದೇಹಕ್ಷಯಭುವನ ಪ್ರಪಂಚುಳ್ಳ ಸ್ವಯಂ ಪ್ರಕಾಶನಾದ ಶಿವಯೋಗೀಶ್ವರಂ ಜೀವನ್ಮುಕ್ತನಾಗಿ ಲೌಕಿಕನಂತೆ ವ್ಯವಹರಿಸುತ್ತಿಹನೆಂಬುದರ್ಥಂ ॥೮೪॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗಿಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವ ಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಮಾಹೇಶ್ವರ ಸ್ಥಲಾಶ್ರಿತ ನವವಿಧಲಿಂಗಪ್ರಸಂಗೋನಾಮ ಷೋಡಶೀಯಃ ಪರಿಚ್ಛೇದಃ

# ಸಪ್ತದಶಪರಿಚ್ಛೇದ

## ಪ್ರಸಾದಿಯ ನವಲಿಂಗಸ್ಥಲ

ಬಳಿಕಾಗಸ್ತ್ಯಂ ಪ್ರಶ್ನೆಯಂ ಮಾಡುತಿರ್ದಪಂ,- ಅಗಸ್ತ್ಯ ಉವಾಚ

ಸ್ಥಲಾನಿ ತಾನಿ ಚೋಕ್ತಾನಿ ಯಾನಿ ಮಾಹೇಶ್ವರಸ್ಥಲೇ
ವದಸ್ವ ಸ್ಥಲಭೇದಂ ಮೇ ಪ್ರಸಾದಿಸ್ಥಲ ಸಂಶ್ರಿತಮ್ ॥

ಮಾಹೇಶ್ವರಸ್ಥಲದಲ್ಲಿ ಯಾವ ಸ್ಥಲಂಗಳುಂಟು ಆ ಸ್ಥಲಂಗಳು ಮಹಾಪುರುಷನಾದ ನಿನ್ನಿಂದ ನಿರೂಪಿಸಲ್ಪಟ್ಟವು ಇನ್ನು ಪ್ರಸಾದಿಸ್ಥಲವನಾಶ್ರಯಿಸಿದ ಭೇದವ ನನಗೋಸ್ಕರವಾಗಿ ಉಪದೇಶಿಸೆಂಬುದರ್ಥಂ ॥೧॥ ಬಳಿಕಾ ಪ್ರಶ್ನೆಗುತ್ತರಮಂ ಶ್ರೀ ರೇಣುಕಾಚಾರ್ಯಂ ನಿರೂಪಿಸುತಿರ್ದಪಂ,- ಶ್ರೀ ರೇಣುಕ ಉವಾಚ

ಸ್ಥಲಭೇದಾ ನವ ಪ್ರೋಕ್ತಾಃ ಪ್ರಸಾದಿಸ್ಥಲ ಸಂಶ್ರಿತಾಃ
ಕಾಯಾನುಗ್ರಹಣಂ ಪೂರ್ವಮಿಂದ್ರಿಯಾನುಗ್ರಹಂ ತತಃ ॥

ಪ್ರಾಣಾನುಗ್ರಹಣಂ ಪಶ್ಚಾತ್ತತಃ ಕಾಯಾರ್ಪಿತಂ ಮತಮ್
ಕರಣಾರ್ಪಿತಮಾಖ್ಯಾತಂ ತತೋ ಭಾವಾರ್ಪಿತಂ ಮತಮ್ ॥

ಶಿಷ್ಯಸ್ಥಲಂ ತತಃ ಪ್ರೋಕ್ತಂ ಶುಶ್ರೂಷಾಸ್ಥಲಮೇವ ಚ
ತತಸ್ಸೇವ್ಯಸ್ಥಲಂ ಚೈಷಾಂ ಕ್ರಮಶಃ ಶೃಣು ಲಕ್ಷಣಮ್ ॥

ಪ್ರಸಾದಿಸ್ಥಲವನಾಶ್ರಯಿಸಿದ ಸ್ಥಲಭೇದಂಗಳೊಂಬತ್ತು ಪೇಳಲ್ಪಟ್ಟವು, ಅವಾವೆಂದೊಡೆ ಮೊದಲು ಕಾಯಾನುಗ್ರಹಸ್ಥಲವು ಬಳಿಕ ಇಂದ್ರಿಯಾನುಗ್ರಹಸ್ಥಲವು ಆಮೇಲೆ ಪ್ರಾಣಾನುಗ್ರಹಸ್ಥಲವು ಅನಂತರದಲ್ಲಿ ಕಾಯಾರ್ಪಿತಸ್ಥಲವು ತರುವಾಯದಲ್ಲಿ ಕರಣಾರ್ಪಿಸ್ಥಲವು ಆಮೇಲೆ ಭಾವಾರ್ಪಿತಸ್ಥಲವು ಬಳಿಕ ಶಿಷ್ಯಸ್ಥಲವು ಬಳಿಕ ಶುಶ್ರೂಷಾಸ್ಥಲವು ಆಮೇಲೆ ಸೇವ್ಯಸ್ಥಲವು ಈ ಗುರುತುಗಳಂ ಕ್ರಮದಿಂ ಪೇಳ್ದ ಅನುಗ್ರಹಿಂಸುತಿಹನೆಂಬ ಕಾರಣದಿಂ ಕಾಯಾನುಗ್ರಾಹಕನೆಂದು ಸೂತ್ರದ್ವಯದಿಂ ನಿರೂಪಿಸುತಿರ್ದಪಂ ॥೪॥

## ೧೯. ಕಾಯಾನುಗ್ರಹಸ್ಥಲ

ಅನುಗೃಹ್ಣಾತಿ ಯಲ್ಲೋಕಾನ್ ಸ್ವಕಾಯಂ ದರ್ಶಯನ್ನಸೌ
ತಸ್ಮಾದೇವ ಸಮಾಖ್ಯಾತಃ ಕಾಯಾನುಗ್ರಹನಾಮಕಃ ॥

ಈ ಜ್ಞಾನಾಚಾರಸಂಪನ್ನನಾದ ಶಿವಯೋಗೀಶ್ವರಂ ಯಾವುದಾನೊಂದು ಕಾರಣದಿಂ ತನ್ನ ಶರೀರಮಂ ತೋರಿಸುವಾತನಾಗಿ ಪ್ರಾಕೃತಜನರಂ ಅನುಗ್ರಹಿಸುತ್ತಿಹನು. ಆ ಕಾರಣದಿಂದೀತಂ ಕಾಯಾನುಗ್ರಹವೆಂಬ ಪೆಸರುಳ್ಳನೆಂದು ಪೇಳಲ್ಪಟ್ಟನೆಂಬುದರ್ಥಂ ॥೫॥ ಅದೆಂತೆಂದಡೆ ದೃಷ್ಟಾಂತರಮಂ ಪೇಳುತಿರ್ದಪಂ.

ಯಥಾ ಶಿವೋऽನುಗೃಹ್ಣಾತಿ ಮೂರ್ತಿಮಾವಿಶ್ಯ ದೇಹಿನಃ
ತಥಾ ಯೋಗೀ ಶರೀರಸ್ಥಸ್ಸರ್ವಾನುಗ್ರಾಹಕೋ ಭವೇತ್ ॥

ಶಿವನೆಂತು ಚಂದ್ರಶೇಖರಾದಿ ಮೂರ್ತಿಯಂ ಪ್ರವೇಶಿಸಿ ಪ್ರಾಣಿಗಳಾದವರ ಕುರಿತು ಅನುಗ್ರಹವಂ ಮಾಡುತ್ತಿಹನು ಹಾಗೆ ಯೋಗಿಯು ಶಿವದೀಕ್ಷೆಯಿಂ ಸಂಸ್ಕರಿಸಲ್ಪಟ್ಟ ದಿವ್ಯ ಶರೀರದಲ್ಲಿದ್ದವನಾಗಿ ಸರ್ವಾನುಗ್ರಾಹಕನಾಹನೆಂಬುದರ್ಥಂ ॥೬॥ ಬಳಿಕ ಶಿವಯೋಗೀಶ್ವರಂ ಶಿವನಂತೆ ಸಂಗರಹಿತನೂ ಆಗಿರುವನೆಂದು ಪೇಳುತಿರ್ದಪಂ.

> ಶಿವಶ್ಶರೀರಯೋಗೇऽಪಿ ಯಥಾ ಸಂಗವಿವರ್ಜಿತಃ
> ತಥಾ ಯೋಗೀ ಶರೀರಸ್ಥೋ ನಿಸ್ಸಂಗೋ ವರ್ತತೇ ಸದಾ ॥

ಶರೀರದೊಡನೆ ಸಂಬಂಧವಿರ್ದಡೂ ಶಿವನಂತೆ ಸುಖದುಃಖಾದಿ ಸಂಗರಹಿತನು ಹಾಗೆ ಶಿವಯೋಗಿಯು ಶರೀರದೊಡನೆ ಕೂಡಿದಾತನಾದರೂ ಎಲ್ಲಾಗಳು ಸುಖದುಃಖಾದಿ ಸಂಗರಹಿತನಾಗಿರುವನೆಂಬುದರ್ಥಂ ॥೭॥

ಬಳಿಕೀ ಪ್ರಕಾರದಿಂ ಶಿವಯೋಗಿಗೆ ಶಿವಸಮಾನತ್ವಮಂ ಪೇಳಿ ಆತನಿಗೆ ಮಾಯಾ ಪ್ರಪಂಚದರ್ಶನವಿಲ್ಲವೆಂಬುದರಿಂ ಶಿವನೆ ಸರಿಯೆಂದೈದು ಸೂತ್ರಂಗಳಿಂ ಪ್ರತಿಪಾದಿಸು ತಿರ್ದಪಂ.

> ಶಿವಭಾವನಯಾ ಯುಕ್ತಃ ಸ್ಥಿರಯಾ ನಿರ್ವಿಕಲ್ಪಯಾ
> ಶಿವೋ ಭವತಿ ನಿರ್ಧೂತಮಾಯಾವೇಶ ಪರಿಪ್ಲವಃ ॥

ಭೇದವಿಲ್ಲದ ದೃಢವಾದ ಶಿವೋಹಂಭಾವನೆಯೊಡನೆ ಕೂಡಿದ ಶಿವಯೋಗೀಶ್ವರಂ ನಿವಾರಿಸಲ್ಪಟ್ಟ ಮಾಯಾವೇಶದ ಉಪದ್ರವವುಳ್ಳವನಾಗಿ ಶಿವನೆ ಆಗುತ್ತಿಹನೆಂಬುದರ್ಥಂ ॥೮॥ ಬಳಿಕ ಶಿವಯೋಗಿಗೆಂತು ಮಾಯಾವೇಶದಿಂದುಂಟಾದ ಉಪಪ್ಲವವಿಲ್ಲವೆಂಬಲ್ಲಿ ಪೇಳುತಿರ್ದಪಂ.

> ಚಿತ್ತವೃತ್ತಿಷು ಲೀನಾಸು ಶಿವೇ ಚಿತ್ಸುಖಸಾಗರೇ
> ಅವಿದ್ಯಾಕಲ್ಪಿತಂ ವಸ್ತು ನಾನ್ಯತ್ಪಶ್ಯತಿ ಸಂಯಮೀ ॥

ಜ್ಞಾನಾನಂದಂಗಳಿಗೆ ಸಮುದ್ರನಾದ ಪರಶಿವನಲ್ಲಿ ಮನೋವ್ಯಾಪಾರಂಗಳು ಲಯಪಡುತ್ತಿರಲಾಗಿ ಶಿವಯೋಗೀಶ್ವರಂ ಮಾಯೆಯಿಂದುಂಟಾದ ವಸ್ತ್ವಂತರವಂ ಕಾಣದಿರುವನೆಂಬುದರ್ಥಂ ॥೯॥ ಬಳಿಕಿಲ್ಲಿ ದೃಷ್ಟಾಂತರಮಂ ಪೇಳುತಿರ್ದಪಂ.

> ನೇದಂ ರಜತಮಿತ್ಯುಕ್ತೇ ಯಥಾ ಶುಕ್ತಿಃ ಪ್ರಕಾಶತೇ
> ನೇದಂ ಜಗದಿತಿ ಜ್ಞಾತೇ ಶಿವತತ್ತ್ವಂ ಪ್ರಕಾಶತೇ ॥

ಇದು ರಜತವಲ್ಲವೆಂದು ತಿಳಿಯಲಾಗಿ ಚಿಪ್ಪು ಹೇಗೆ ತೋರುತ್ತಿಹುದು ಹಾಗೆ ಇದು ಜಗತ್ತಲ್ಲವೆಂದು ತಿಳಿಯಲಾಗಿ ಶಿವತತ್ತ್ವ ಪ್ರಕಾಶಿಸುತ್ತಿಹುದೆಂಬುದರ್ಥಂ ॥೧೦॥ ಬಳಿಕ ಮತ್ತೂ ದೃಷ್ಟಾಂತರಮಂ ಪೇಳುತಿರ್ದಪಂ.

ಯಥಾ ಸ್ವಪ್ನಕೃತಂ ವಸ್ತು ಪ್ರಬೋಧೇನೈವ ಶಾಮ್ಯತಿ
ತಥಾ ಶಿವಸ್ಯ ವಿಜ್ಞಾನೇ ಸಂಸಾರಂ ನೈವ ಪಶ್ಯತಿ ॥

ಸ್ವಪ್ನಕಲ್ಪಿತವಾದ ವಸ್ತುವೆಂತು ಎಚ್ಚರಿಕೆಯಿಂ ಕೆಡುವುದು ಹಾಗೆ ಶಿವಜ್ಞಾನ ಉಂಟಾಗಲಾಗಿ ಈ ಶಿವಯೋಗೀಶ್ವರಂ ಸಂಸಾರಮಂ ಕಾಣದಿರುವನೆಂಬುದರ್ಥಂ ॥೧೧॥ ಬಳಿಕ ಮತ್ತೂ ದೃಷ್ಟಾಂತರಮಂ ಪೇಳುತಿರ್ದಪಂ.

ಅಜ್ಞಾನಮೇವ ಸರ್ವೇಷಾಂ ಸಂಸಾರಭ್ರಮಕಾರಣಮ್
ತನ್ನಿವೃತ್ತೌ ಕಥಂ ಭೂಯಸ್ಸಂಸಾರಭ್ರಮದರ್ಶನಮ್ ॥

ಭಕ್ತಿವಿಷಯಕವಾದ ಅಜ್ಞಾನವೆಂತು ರಜತಭ್ರಾಂತಿಗೆ ಕಾರಣವಾದಂಥಾದು ಹಾಗೆ ಶಿವವಿಷಯಕವಾದ ಅಜ್ಞಾನವು ಸಂಸಾರಭ್ರಾಂತಿಗೆ ಕಾರಣವು. ಅಶಕ್ಯಜ್ಞಾನ ನಿವೃತ್ತಿಯಾಗಲಾಗಿ ಹೇಗೆ ರಜತಭ್ರಮೆ ಹೋಗುತ್ತದೋ ಹಾಗೆ ಶಿವವಿಷಯಕವಾದ ಅಜ್ಞಾನಂ ಸಂಸಾರಿಕ ಭೇದಭ್ರಾಂತಿದರ್ಶನವಿಲ್ಲವೆಂಬುದರ್ಥಂ. ಹೇಗೆ ಶುಕ್ತಿಯೆ ರಜತಾಕಾರವಾಗಿ ತೋರುವುದು ಹಾಗೆ ಶಿವನೆ ವಿಶ್ವಾಕಾರಮಾಗಿ ತೋರುವನೆಂಬುದು ತಾತ್ಪರ್ಯಂ ॥೧೨॥ ಅದು ಕಾರಣದಿಂದೀ ಶಿವಯೋಗೀಶ್ವರಂ ಜೀವನ್ಮುಕ್ತನೆಂದು ನುಡಿವುತ್ತ ಕಾಯಾನುಗ್ರಹ ಸ್ಥಲಮಂ ಮುಗಿಸುತಿರ್ದಪಂ.

ಗಲಿತಾಹಂಕೃತಿಗ್ರಂಥಿಃ ಕ್ರೀಡಾಕಲ್ಪಿತವಿಗ್ರಹಃ
ಜೀವನ್ಮುಕ್ತಶ್ಚರೇದ್ಯೋಗೀ ದೇಹಿವನ್ನಿರುಪಾಧಿಕಃ ॥

ಸಡಿಲಿದ ಶರೀರಾದ್ಯಹಂಕಾರ ಗ್ರಂಥಿಯುಳ್ಳ ತನ್ನ ಕ್ರೀಡೆಗೋಸ್ಕರ ಸ್ವೇಚ್ಛೆಯಿಂ ಪರಿಕಲ್ಪಿಸಲ್ಪಟ್ಟ ಶರೀರವುಳ್ಳ ಆ ಕಾರಣದಿಂದಲೆ ಪ್ರತಿಬಂಧವಿಲ್ಲದ ಶಿವಯೋಗೀಶ್ವರಂ ಜೀವನ್ಮುಕ್ತನಾಗಿ ದೇಹವುಳ್ಳವನಂತೆ ಸಂಚರಿಸುವನೆಂಬುದರ್ಥಂ. ॥೧೩॥

## ೨೦. ಇಂದ್ರಿಯಾನುಗ್ರಹಸ್ಥಲ

ಬಳಿಕ ತ್ರಿರುನ್ನತಂ ಸ್ಥಾಪ್ಯ ಸಮಂ ಶರೀರಂ ಹೃದೀಂದ್ರಿಯಾಣಿ ಮನಸಾ ಸಂನಿವೇಶ್ಯ ಎಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂದ ಕಾಯಾನುಗ್ರಹ ಸಂಪನ್ನನಾದ ಶಿವಯೋಗಿಯ ಇಂದ್ರಿಯವಿವೇಕವೆ ಸಕಲರಿಗೂ. ಇಂದ್ರಿಯಾನುಗ್ರಹಸ್ಥಲಮಂ ನಿರೂಪಿತಿರ್ದಪಂ.

ದರ್ಶನಾತ್ಪರಕಾಯಸ್ಯ ಕರಣಾನಾಂ ವಿವೇಕತಃ
ಇಂದ್ರಿಯಾನುಗ್ರಹಃ ಪ್ರೋಕ್ತಸ್ಸರ್ವೇಷಾಂ ತತ್ತ್ವವೇದಿಭಿಃ ॥

ಸರ್ವೋತ್ಕೃಷ್ಟನಾದ ಶಿವಯೋಗೀಶ್ವರದರ್ಶನದಿಂದುಂಟಾದ ಇಂದ್ರಿಯಂಗಳ ವಿವೇಕದತ್ತಣಿಂ ಸಮಸ್ತವಾದ ಪ್ರಾಕೃತರಿಗೂ ಇಂದ್ರಿಯಾನುಗ್ರಹವೆಂದು ತತ್ತ್ವಜ್ಞಾನಿಗಳಿಂ ಪೇಳಲ್ಪಟ್ಟಿತ್ತೆಂಬುದರ್ಥಂ ॥ ೧೪॥ ಬಳಿಕದೆಂತೆಂಬಲ್ಲಿ ಆ ಶಿವಯೋಗಿಯ ಇಂದ್ರಿಯ ವ್ಯಾಪಾರವನ್ನೈದು ಸೂತ್ರಂಗಳಿಂ ವರ್ಣಿಸುತಿರ್ದಪಂ.

ಇಂದ್ರಿಯಾಣಾಂ ಸಮಸ್ತಾನಾಂ ಸ್ವಾರ್ಥೇಷು ಸತಿ ಸಂಗಮೇ
ರಾಗೋ ವಾ ಜಾಯತೇ ದ್ವೇಷಸ್ತೌ ಯೋಗೀ ಪರಿವರ್ಜಯೇತ್ ॥

ಲೋಕದಲ್ಲಿ ಸಮಸ್ತವಾದ ಶ್ರೋತ್ರೇಂದ್ರಿಯಂಗಳಿಗೆ ವಿಷಯಂಗಳಲ್ಲಿ ಸಂಬಂಧ ಮುಂಟಾಗಲಾಗಿ ಪ್ರೀತಿಯಾಗಲಿ ದ್ವೇಷವಾಗಲಿ ಉಂಟಾಗುವುದು ಶಿವಯೋಗಿಯಾದಾತನ ವೆರಡನೂ ಬಿಡುವನು. ಹೀಗಿರಲಾಗಿ ಯೋಗಿಯ ಇಂದ್ರಿಯವ್ಯಾಪಾರವು ಲೋಕೋತ್ತರ ವಾದ ಕಾರಣದಿಂದನುಗ್ರಹಕರಮೆಂಬುದು ತಾತ್ಪರ್ಯಂ॥೧೫॥

ಇಂದ್ರಿಯಾಣಾಂ ಬಹಿರ್ವೃತ್ತಿಃ ಪ್ರಪಂಚಸ್ಯ ಪ್ರಕಾಶಿನೀ
ಅಂತಶ್ಶಿವೇ ಸಮಾವೇಶೋ ನಿಷ್ಪ್ರಪಂಚಸ್ಯ ಕಾರಣಮ್ ॥

ಇಂದ್ರಿಯಂಗಳ ಬಾಹ್ಯವ್ಯಾಪಾರವೆ ಪ್ರಪಂಚಂ ಪ್ರಕಾಶಿಸುವುದು ತನ್ನೊಳಗಿರುವ ಶಿವನಲ್ಲಿ ಪ್ರವೇಶವೆ ನಿಷ್ಪ್ರಪಂಚಕ್ಕೆ ಕಾರಣವೆಂಬುದರ್ಥಂ ॥೧೬॥ ಹೀಗಿರಲಾಗಿ

ಕ್ಷಣಮಂತಶ್ಶಿವಂ ಪಶ್ಯನ್ ಕೇವಲೇನೈವ ಚೇತಸಾ
ಬಾಹ್ಯಾರ್ಥಾನಾಮನುಭವಂ ಕ್ಷಣಂ ಕುರ್ವನ್ ದೃಗಾದಿಭಿಃ ॥

ಸರ್ವೇಂದ್ರಿಯನಿರೂಢೋಽಪಿ ಸರ್ವೇಂದ್ರಿಯವಿಹೀನವಾನ್
ಶಿವಾಹಿತಮನಾಯೋಗೀ ಶಿವಂ ಪಶ್ಯತಿ ನಾಪರಮ್ ॥

ಅಂತರ್ಮುಖವಾಗಿ ಬಾಹ್ಯೇಂದ್ರಿಯಸಂಗರಹಿತವಾದ ಚಿತ್ತದಿಂ ಒಂದು ಕ್ಷಣ ಶಿವನಂ ನೋಡುತ್ತಾ ಒಂದು ಕ್ಷಣ ಚಕ್ಷುರಾದಿ ಬಾಹ್ಯೇಂದ್ರಿಯಗಳಿಂ ಶಬ್ದಾದಿ ಬಾಹ್ಯ ವಿಷಯಂಗಳ ಅನುಭವಮಂ ಮಾಡುತ್ತಾ ಶಿವನಲ್ಲಿ ಪ್ರವೇಶಿಸಲ್ಪಟ್ಟ ಚಿತ್ತವೃತ್ತಿಯುಳ್ಳ ಪರಯೋಗಿಯು ಸರ್ವೇಂದ್ರಿಯಾಸಕ್ತನಾದರೂ ಸರ್ವೇಂದ್ರಿಯರಹಿತನಾಗಿ ಒಳಗೆ ಹೊರಗೆ ಶಿವನಿಗೆ ಕಾಣುತ್ತಿಹನು ಮತ್ತೊಂದ ಕಾಣದನೆಂಬುದರಿಂದಾತನ ಇಂದ್ರಿಯವಿವೇಕ ಮನುಗ್ರಹಕರಮೆಂಬುದರ್ಥಂ ॥೧೮॥ ಹಾಗಾದಡೆ ಒಳಗೆ ಹೊರಗೆ ಶಿವನಂ ಕಾಣುತ್ತಿಹ ಶಿವಯೋಗಿಗೂ ಪ್ರಾಕೃತಜನರಂತೆ ಜರಾಮರಣಮುಂಟಾಗಿರುವುದರಿಂ ಲೋಕಾನುಗ್ರಹ ಕತ್ವವೆಂತು ಘಟಿಸೂದೆಂಬಲ್ಲಿ ಪೇಳುತಿರ್ದಪಂ.

ನ ಜರಾ ಮರಣಂ ನಾಸ್ತಿ ನ ಪಿಪಾಸಾ ನ ಚ ಕ್ಷುಧಾ
ಶಿವಾಹಿತೇಂದ್ರಿಯಸ್ಯಾಸ್ಯ ನಿರ್ಮಾನಸ್ಯ ಮಹಾತ್ಮನಃ ॥

ಶಿವನಲ್ಲಿ ಇರಿಸಲ್ಪಟ್ಟ ಇಂದ್ರಿಯವ್ಯಾಪಾರವುಳ್ಳ ದೇಹಾಹಂಭಾವವಿಲ್ಲದ ಮಹಾ ಪುರುಷನಾದ ಶಿವಯೋಗಿಗೆ ಜರೆಯೂ ಇಲ್ಲ ಮರಣವೂ ಇಲ್ಲ ಅವೆರಡೂ ಶರೀರ ಧರ್ಮವಾದ ಕಾರಣದಿಂ. ಹಸಿವೂ ಇಲ್ಲ ತೃಷೆಯೂ ಇಲ್ಲ ಅವೆರಡೂ ಪ್ರಾಣಧರ್ಮವಾದ ಕಾರಣದಿಂದೆಂಬುದರ್ಥಂ ॥೧೯॥ ಬಳಿಕ ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ ಸರ್ವೇಂದ್ರಿಯಾಣಿ ನಯನಂ ಪ್ರಧಾನಮ್ ಇಂದ್ರಿಯಾಣಾಂ ಮನೋನಾಥೋ ಮನೋ ನಾಥಸ್ತು ಮಾರುತಃ ಹೀಗೆ ಪುರಾಣವಚನಾನುಸಾರದಿಂ ಸರ್ವೇಂದ್ರಿಯ ವ್ಯಾಪಾರಕ್ಕೂ ಕಾರಣವಾದ ಮನೋಮಾರುತ ನಿಗ್ರಹಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಮನೋ ಯತ್ರ ಪ್ರವರ್ತೇತ ತತ್ರ ಸರ್ವೇಂದ್ರಿಯ ಸ್ಥಿತಿಃ
ಶಿವೇ ಮನಸಿ ಸಲ್ಲೀನೇ ಕ್ವ ಚೇಂದ್ರಿಯವಿಚಾರಣಾ ॥

ಎಲ್ಲಿ ಮನಸ್ಸಿರುವುದು ಅಲ್ಲಿ ಸರ್ವೇಂದ್ರಿಯಂಗಳು ಉಂಟಾಗಿರುವುವು. ಮನಸ್ಸು ಶಿವನಲ್ಲಿ ಲಯವಾಗಲಾಗಿ ಇಂದ್ರಿಯವ್ಯಾಪಾರವೆಲ್ಲಿಯದು ಇಲ್ಲ ವೆಂಬುದರ್ಥಂ ॥೨೦॥

ಯದ್ಯತ್ಪಶ್ಯನ್ ದೃಶಾ ಯೋಗೀ ಮನಸಾ ಚಿಂತಯತ್ಯಪಿ
ತತ್ತತ್ಸರ್ವಂ ಶಿವಾಕಾರಂ ಸಂವಿದ್ರೂಪಂ ಪ್ರಕಾಶತೇ॥

ಶಿವಯೋಗೀಶ್ವರನು ದೃಷ್ಟಿಯಿಂದ ಯಾವುದಂ ನೋಡುತ್ತಿಹನು ಮನಸ್ಸಿನಿಂದ ಧ್ಯಾನಿಸುತ್ತಿಹನು ಅವನೆಲ್ಲಂ ಚಿದ್ರೂಪವಾದ ಶಿವಾಕಾರನಾಗಿಯೆ ತಿಳಿವುತ್ತಿಹನೆಂಬುದರ್ಥಂ ಇದರಿಂದ ಅಂತರ್ಬಾಹ್ಯೇಂದ್ರಿಯ ನಿಗ್ರಹ ಪ್ರಕಾರ ಪೇಳಲ್ಪಟ್ಟಿತು ॥೨೧॥ ಬಳಿಕ ಪ್ರಾಣನಿಗ್ರಹ ಪ್ರಕಾರಮಂ ಪೇಳುತಿರ್ದಪಂ.

ಕರಣೈಸ್ಸಹಿತಂ ಪ್ರಾಣಂ ಮನಸ್ಯಾಧಾಯ ಸಂಯಮೀ
ಯೋಜಯೇತ್ಸಚ್ಛಿವಂ ಸಾಕ್ಷಾದ್ಯತ್ರ ನಾಸ್ತಿ ಜಗದ್ಭ್ರಮಃ॥

ನೇತ್ರಾದಿಕರಣಂಗಳಿಂ ಯುಕ್ತವಾದ ಪ್ರಾಣವಾಯುವಂ ಮನಸ್ಸಿನಲ್ಲಿ ಇರಿಸಿ ಯಾವನಾನೊಬ್ಬನು ಶಿವಯೋಗಿಯು ಯಾವ ಬ್ರಹ್ಮದಲ್ಲಿ ಕೂಡಿಸುವನು, ಅದೆಂತೆಂದಡೆ ನೇತ್ರಾದಿಕರಣಂಗಳಿಗೆ ಮನವೆ ಪ್ರಾಣವು. ಮನಸ್ಸು ವೇಗಧರ್ಮವುಳ್ಳ ಕಾರಣದಿಂ ವಾಯುರೂಪವು ಲೋಕದಲ್ಲಿ ಒಂದುಲಕ್ಷದಲ್ಲಿ ನೇತ್ರವು ಚಂಚಲವಾದಡೆ ಪ್ರಾಣವಾಯು ನಿರೋಧ ದ್ವಾರದಿಂ ಮನೋಲಯಮನುಭವಸಿದ್ಧವಾದುದರಿಂ ಮೂರಕ್ಕೂ ಐಕ್ಯಮುಂಟಾ ದುದರಿಂ ಸಾಮರಸ್ಯದಿಂ ಕೂಡಿಸುವನು ಆತಂ ಸಾಕ್ಷಾಚ್ಛಿವನೆ ಸರಿ. ಚಿತ್ತವೃತ್ತಿಯು ಬ್ರಹ್ಮದಲ್ಲಿ ಅಡಗಲಾಗಿ ಬಾಹ್ಯೇಂದ್ರಿಯ ವ್ಯಾಪಾರ ನಿಂತ ಕಾರಣದಿಂ ವಿಶ್ವಭೇದಭ್ರಾಂತಿ ಇಲ್ಲವೆಂಬುದರ್ಥಂ ॥೨೨॥ ಬಳಿಕ ಇಂದ್ರಿಯಾನುಗ್ರಹಸ್ಥಲಮಂ ಮುಗಿಸುತಿರ್ದಪಂ.

ಸರ್ವೇಂದ್ರಿಯಪ್ರವೃತ್ತ್ಯಾ ಚ ಬಹಿರಂತಃ ಶಿವಂ ಯಜನ್
ಸ್ವಚ್ಛಂದಚಾರೀ ಸರ್ವತ್ರ ಸುಖೀಭವತಿ ಸಂಯಮೀ॥

ಶಿವಯೋಗಿಯು ಅಂತರ್ಬಾಹ್ಯೇಂದ್ರಿಯ ಪ್ರವರ್ತನೆಯಿಂ ಇಷ್ಟ ಪ್ರಾಣರೂಪ ಶಿವಲಿಂಗಮಂ ಪೂಜಿಸುತ್ತಾ ಎಲ್ಲಾ ಕಡೆಯಲ್ಲೂ ಸ್ವೇಚ್ಛಾಚಾರಿಯಾಗಿ ಸುಖಿಸುತ್ತಿಹನೆಂಬು ದರ್ಥಂ ॥೨೩॥

## ೨೧. ಪ್ರಾಣಾನುಗ್ರಹಸ್ಥಲ

ಬಳಿಕ ಪ್ರಾಣಾನ್ ಪ್ರಪೀಡ್ಯೇಹ ಸಂಯುಕ್ತ ಚೇಷ್ಟಃ ಕ್ಷೀಣೇ ಪ್ರಾಣೇ ನಾಸಿಕಯೋ ಚ್ಛ್ವಸೀತಯೆಂಬ ಶ್ವೇತಾಶ್ವತರಶ್ರುತ್ಯನುಸಾರದಿಂದ ಇಂದ್ರಿಯಾನುಗ್ರಹ ಸಂಪನ್ನನಾದ ಶಿವಯೋಗಿಯು ತಾತ್ಪರ್ಯಾವಲೋಕನವೆ ಸಕಲ ಪ್ರಾಣಾನುಗ್ರಹವೆಂದು ಪ್ರಾಣಾನುಗ್ರಹ ಸ್ಥಲಮಂ ನಿರೂಪಿಸುತಿರ್ದಪಂ.

ಶಿವಸ್ಯ ಪರಕಾಯಸ್ಯ ಯತ್ತಾತ್ಪರ್ಯಾವಲೋಕನಮ್
ತತ್ಪ್ರಾಣಾನುಗ್ರಹಃ ಪ್ರೋಕ್ತಸ್ಸರ್ವೇಷಾಂ ತತ್ತ್ವದರ್ಶಿಭಿಃ ॥

ಪರಬ್ರಹ್ಮವೆ ಕಾಯವಾಗಿ ಉಳ್ಳ ಶಿವಯೋಗೀಶ್ವರನ ಪ್ರಾಣವಾಯುನಿರೋಧದಿಂ ದುಂಟಾದ ಯಾವುದಾನೊಂದು ತಾತ್ಪರ್ಯಾವಲೋಕನವುಂಟು ಅದೇ ಸಕಲರಿಗೂ

ಪ್ರಾಣಾನುಗ್ರಹವೆಂದು ತತ್ತ್ವಜ್ಞಾನಿಗಳಿಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೨೪॥ ಬಳಿಕಾ ತಾತ್ಪರ್ಯಾವಲೋಕನವೆಂಥಾದೆಂಬಲ್ಲಿ ಪೇಳುತಿರ್ದಪಂ.

ಪ್ರಾಣೋ ಯಸ್ಯ ಲಯಂ ಯಾತಿ ಶಿವೇ ಪರಮಕಾರಣೇ
ಕುತಸ್ತಸ್ಯೇಂದ್ರಿಯಸ್ಫೂರ್ತಿಃ ಕುತಸ್ಸಂಸಾರದರ್ಶನಮ್ ॥

ಯಾವನಾನೊಬ್ಬ ಶಿವಯೋಗಿಯ ಪ್ರಾಣವಾಯುವಾದ ಬ್ರಹ್ಮಾದಿಗಳಿಗೂ ಕಾರಣನಾದ ಶಿವನಲ್ಲಿ ಲಯವನ್ನೈದುತ್ತಿಹುದು ಆ ಶಿವಯೋಗಿಗೆ ಇಂದ್ರಿಯ ವ್ಯಾಪಾರವೆತ್ತಣದು ಸಂಸಾರದರ್ಶನವು ಎತ್ತಣದು ಇಲ್ಲವೆಂಬುದರ್ಥಂ ಹೀಗಿರಲಾಗಿ ನಿಷ್ಪ್ರಪಂಚ ಶಿವಲಿಂಗದರ್ಶನವೆ ಆತನ ತಾತ್ಪರ್ಯಾವಲೋಕನವೆಂಬುದು ತಾತ್ಪರ್ಯಂ ॥೨೫॥ ಬಳಿಕದೆಂತೆಂದಡೆ ಪೇಳುತಿರ್ದಪಂ.

ಕರಣೇಷು ನಿವೃತ್ತೇಷು ಸ್ವಾರ್ಥಸಂಗಾತ್ಪ್ರಯತ್ನತಃ
ತೈಸ್ಸಮಂ ಪ್ರಾಣಮಾರೋಪ್ಯ ಸ್ವಾಂತೇ ಶಾಂತಮತಿಃ ಸ್ವಯಮ್ ॥

ಕೇವಲ ಕುಂಭಕದಿಂದ ಪ್ರಾಣವಾಯುವು ಶಿವನಲ್ಲಿ ಲಯವನ್ನೈದುತ್ತಿರಲಾಗಿ ಚಕ್ಷುರಾದಿಕರಣಂಗಳು ಶಬ್ದಾದಿ ವಿಷಯಸಂಬಂಧದತ್ತಣಿಂ ಪ್ರಯತ್ನದಿಂ ತಾವೆ ನಿವೃತ್ತ ವಾಗುತ್ತಿರಲಾಗಿ ಮನಸ್ಸಿನಲ್ಲಿ ಆ ಇಂದ್ರಿಯಂಗಳೊಡನೆ ಪ್ರಾಣವನೊಂದುಗೂಡಿಸಿ ರಾಗ ದ್ವೇಷರಹಿತನಾಗುವನು ॥೨೬॥ ಹೀಗಿರಲಾಗಿ

ಶಾಂತತ್ವಾತ್ಪ್ರಾಣವೃತ್ತೀನಾಂ ಮನಃ ಶಾಮ್ಯತಿವೃತ್ತಿಭಿಃ
ತಚ್ಛಾಂತೌ ಯೋಗಿನಾಂ ಕಿಂ ಚಿಚ್ಛಿವಾದನ್ಯನ್ನ ದೃಶ್ಯತೇ ॥

ರೇಚಕ ರೂಪಕ ರೂಪವಾದ ಪ್ರಾಣವೃತ್ತಿಗಳೂ ಕೇವಲ ಕುಂಭಕದಿಂ ನಿವೃತ್ತಿಯಾಗ ಲಾಗಿ ಮನಸ್ಸು ಸಂಕಲ್ಪ ವಿಕಲ್ಪರೂಪವಾದ ವೃತ್ತಿಗಳೊಡನೆ ಕೂಡಿ ಲಯವ ಪಡುತ್ತಿಹುದು. ಆ ಮನಸ್ಸು ಶಾಂತವಾಗಲಾಗಿ ಯೋಗಿಗಳಿಗೆ ಶಿವನಿಂದನ್ಯವಾದುದೊಂದಿಪ್ಪು ಕಾಣಲ್ಪಡ ದೆಂಬುದರ್ಥಂ ॥೨೭॥ ಬಳಿಕಿಲ್ಲಿ ಶಂಕೆಯಂ ಸೂತ್ರದ್ವಯದಿಂದ ಉದ್ಭವಿಸಿ ಮೂರನೆ ಸೂತ್ರದಿಂ ನಿರಾಕರಿಸುತಿರ್ದಪಂ.

ಪ್ರಾಣ ಏವ ಮನುಷ್ಯಾಣಾಂ ದೇಹಧಾರಣಕಾರಣಮ್
ತದಾಧಾರಃ ಶಿವಃ ಪ್ರೋಕ್ತಃ ಸರ್ವಕಾರಣಕಾರಣಮ್ ॥

ನಿರಾಧಾರಃ ಶಿವಸ್ಸಾಕ್ಷಾತ್ ಪ್ರಾಣಸ್ತೇನ ಪ್ರತಿಷ್ಠಿತಃ
ತದಾಧಾರಃ ತನುರ್ಜ್ಞೇಯಾ ಜೀವೋ ಯೇನೈವ ಚೇಷ್ಟತೇ ॥

ಮನುಷ್ಯರಿಗೆ ದೇಹಧಾರಣಕ್ಕೆ ಕಾರಣವಾದಂಥಾದು ಪ್ರಾಣವೆ ಸರಿ. ಆ ಪ್ರಾಣಕ್ಕಾಧಾರವಾದಂಥ ಬ್ರಹ್ಮಾದಿಗಳಿಗೂ ಕಾರಣವಾದ ಶಿವನು ಆ ಶಿವನು ನಿರಾಧಾರನೆಂದು ಪೇಳಲ್ಪಟ್ಟನು. ಆ ಕಾರಣದಿಂ ಪ್ರಾಣವು ಪ್ರತ್ಯಕ್ಷವಾದ ಶಿವನಲ್ಲಿ ಇರಿಸಲ್ಪಟ್ಟಿತ್ತು. ಆ ಪ್ರಾಣಕ್ಕಾಧಾರವಾದ ಕಾಯವು ಯಾವುದಾನೊಂದು ಪ್ರಾಣದಿಂದಲೆ ಜೀವನು ಚೇಷ್ಟಿಸುತ್ತಿಹನೆಂದು ಸರ್ವಸಮ್ಮತವಾದುದರಿಂ ಶಿವನಲ್ಲಿ ಪ್ರಾಣಲೀನವಾದ ಕಾರಣದಿಂ ದೇಹಮೆಂತಿರುವುದು ಶಂಕೆ. ಇದಕ್ಕುತ್ತರಮಂ ಪೇಳುತಿರ್ದಪಂ ॥೨೯॥

ಶಿವೇ ಪ್ರಾಣೋ ವಿಲೀನೋಽಪಿ ಯೋಗಿನೋ ಯೋಗಮಾರ್ಗತಃ
ಸ್ವಶಕ್ತಿವಾಸನಾಯೋಗಾದ್ಧಾರಯಂತ್ಯೇವ ವಿಗ್ರಹಮ್ ॥

ಶಿವಯೋಗಿಗಳು ಕೇವಲ ಕುಂಭಕರೂಪವಾದ ಯೋಗಮಾರ್ಗದತ್ತಣಿಂ ಪ್ರಾಣವು ಶಿವನಲ್ಲಿ ಅಡಗಿದಂಥಾದಾದರೂ ನಿಜಶಕ್ತಿ ಸಂಸಾರಬಲದಿಂ ಶರೀರವಂ ಧರಿಸಿಹರೆಂಬುದರ್ಥಂ ಹಾಗಾದಡೆ ಯೋಗಿಯು ಎಂತಿರುವನೆಂಬಲ್ಲಿ ಸೂತ್ರದ್ವಯದಿಂ ಪೇಳುತಿರ್ದಪಂ॥೩೦॥

ಸ ಚಾಭ್ಯಾಸವಶಾದ್ಭೂಯಸ್ಸರ್ವತತ್ತ್ವಾತಿವರ್ತಿನೀ
ನಿಷ್ಕಲಂಕೇ ನಿರಾಕಾರೇ ನಿರಸ್ತಾಶೇಷ ವಿಕ್ಲವೇ ॥

ಚಿದ್ವಿಲಾಸಪರಿಸ್ಫೂರ್ತಿಪರಿಪೂರ್ಣಸುಖಾದ್ವಯೇ
ಶಿವೇ ವಿಲೀನಸ್ಸರ್ವಾತ್ಮಾ ಯೋಗೀ ಚಲತಿ ನ ಕ್ವಚಿತ್ ॥

ಆ ಜೀವಾತ್ಮನಿಗಾಶ್ರಯವಾದ ಪ್ರಾಣವು ಅಭ್ಯಾಸ ಬಾಹುಲ್ಯದಿಂ ಮೂವತ್ತಾರು ತತ್ತ್ವಂಗಳು ಮೀರಿ ಇರುವ ಜರಾಮರಣಾದಿ ದೋಷರಹಿತವಾದ ಆ ಕಾರಣದಿಂದಲೆ ಪ್ರಾಕೃತ ನೀಲ ಪೀತಾದ್ಯಾಕಾರ ಶೂನ್ಯವಾದ ನಿವಾರಿಸಲ್ಪಟ್ಟ ಸಕಲ ಭಾದೆಯುಳ್ಳ ಚಿದ್ವಿಲಾಸ ಬಹುತ್ವದಿಂ ಪರಿಪೂರ್ಣಾನಂದ ಸ್ವರೂಪದಿಂದ ಎರಡಿಲ್ಲದೆ ಪರಶಿವನಲ್ಲಿ ಲಯವಾದ ಸರ್ವವ್ಯಾಪಾರವುಳ್ಳದಾಗುತ್ತಿರಲಾಗಿ ಶಿವಲಿಂಗೇಶ್ವರಂ ಒಂದೆಡೆಯಲ್ಲೂ ಒಂದು ಕಾಲದಲ್ಲಿಯೂ ಚರಿಸದೆ ಇರುವನೆಂಬುದರ್ಥಂ ॥೩೨॥ ಬಳಿಕ ಯಾತರೋಪಾದಿಯಲ್ಲಿ ಚರಿಸದಿರುವನೆಂಬಲ್ಲಿ ಪೇಳುತಿರ್ದಪಂ

ಪ್ರಧ್ವಸ್ತವಾಸನಾಸಂಗಾತ್ ಪ್ರಾಣವೃತ್ತಿಪರಿಕ್ಷಯಾತ್
ಶಿವೈಕೀಭೂತಸರ್ವಾತ್ಮಾ ಸ್ಥಾಣುವದ್ಭಾತಿ ಸಂಯಮಿ ॥

ಶಿವಲಿಂಗಯೋಗೀಶ್ವರನು ನಷ್ಟವಿಷಯವಾಸನಾಸಂಪರ್ಕದತ್ತಣಿಂ ಪ್ರಾಕೃತ ವೈಕೃತರೂಪವಾದ ಪ್ರಾಣವೃತ್ತಿ ಕ್ಷಯಿಸಲಾಗಿ ಶಿವಲಿಂಗದೊಳಗೇಕರಸವಾದ ಸರ್ವೇಂದ್ರಿಯ ವ್ಯಾಪಾರವುಳ್ಳವನಾಗಿ ಕಾಷ್ಠದಂತೆ ನಿಶ್ಚೈಸನಾಹತನದಿಂ ಪ್ರಕಾಶಿಸುವನೆಂಬುದರ್ಥಂ ॥೩೩॥

## ೨೨. ಕಾಯಾರ್ಪಿತಸ್ಥಲ

ಬಳಿಕ ಯದಾ ಶಿವಾಯ ಸ್ವಾತ್ಮಾನಂ ದತ್ತ ವಾನ್ ದೇಶಿಕಾತ್ಮನೇ ತದಾ ಶೈವೋ ಭವೇದ್ದೇವಿ ನ ತತೋsಸ್ತಿ ಪುನರ್ಭವಃ ಎಂಬ ಯೋಗಜಾಗಮ ವಚನಾನುಸಾರದಿಂ ಪ್ರಾಣಾನುಗ್ರಹಸಂಪನ್ನನಾದ ಶಿವಯೋಗಿಗೆ ಯೋಗ್ಯನಾದ ಕಾಯಾರ್ಪಿತಸ್ಥಲಮಂ ನಿರೂಪಿಸುತಿರ್ದಪಂ.

ಶಿವಸ್ಯ ಪರರೂಪಸ್ಯ ಸರ್ವಾನುಗ್ರಾಹಿಣೋಽರ್ಚನೇ
ತ್ಯಾಗೋ ದೇಹಾಭಿಮಾನಸ್ಯ ಕಾಯಾರ್ಪಿತಮುದಾಹೃತಮ್ ॥

ಸರ್ವಾನುಗ್ರಾಹಕನಾಗಿ ಪರಬ್ರಹ್ಮಕಾಯನಾಗಿ ಪರೇ ಪ್ರಾಣಾನುಗ್ರಹ ಸಂಪನ್ನನಾದ ಪರಯೋಗಿಗೆ ಶಿವಲಿಂಗಪೂಜಾವಿಷಯದಲ್ಲಿ ದೇಹಾಭಿಮಾನ ಬಿಡುವುದೆ ಕಾಯಾರ್ಪಿತ

ಸ್ಥಲವೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೩೪॥ ಬಳಿಕಿದರಿಂದೇನಾಹದೆಂಬಲ್ಲಿ ಪೇಳುತಿರ್ದಪಂ.

ಯದಾ ಯೋಗೀ ನಿಜಂ ದೇಹಂ ಶಿವಾಯ ವಿನಿವೇದಯೇತ್
ತದಾ ಭವತಿ ತದ್ರೂಪಂ ಶಿವರೂಪಂ ನ ಸಂಶಯಃ ॥

ಯಾವಾಗ ಶಿವಯೋಗೀಶ್ವರಂ ಶಿವನಿಗೋಸ್ಕರ ತನ್ನ ನಿಜ ಶರೀರಮಂ ಸಮರ್ಪಿಸುವನು ಆವಾಗ ಆತನ ರೂಪವು ಶಿವಸ್ವರೂಪನೆ ಆಗುತ್ತಿಹನು ಸಂದೇಹವಿಲ್ಲ ವೆಂಬುದರ್ಥಂ ॥೩೫॥ ಬಳಿಕ ಶಿವನಿಗೆ ಸ್ವಶರೀರ ಮಾತ್ರವೆ ಸಮರ್ಪಿಸಲ್ತಕ್ಕದೋ ಮತ್ತೇನಾದರೂ ಉಂಟೋ ಎಂಬಲ್ಲಿ ಪೇಳುತಿರ್ದಪಂ.

ಇಂದ್ರಿಯಪ್ರೀತಿಹೇತೂನಿ ವಿಷಯಾಸಂಗಜಾನಿ ಚ
ಸುಖಾನಿ ಸುಖಚಿದ್ರೂಪೇ ಶಿವಯೋಗೀ ನಿವೇದಯೇತ್ ॥

ಇಂದ್ರಿಯಂಗಳಿಗೆ ಕಾರಣವಾದ ವಿಷಯಸಂಬಂಧದಿಂದುಂಟಾದ ಸುಖಮಂ ಚಿದಾನಂದ ಶಿವನಲ್ಲಿ ಸಮರ್ಪಿಸೂದೆಂಬುದರ್ಥಂ ॥೩೬॥ ಬಳಿಕ ಅದಾವ ಸುಖವೆಂಬಲ್ಲಿ ಪೇಳುತಿರ್ದಪಂ.

ದರ್ಶನಾತ್ಸ್ಪರ್ಶನಾದ್ಭುಕ್ತೇಃ ಶ್ರವಣಾತ್ ಘ್ರಾಣನಾದಪಿ
ವಿಷಯೇಭ್ಯೋ ಯದುತ್ಪನ್ನಂ ಶಿವೇ ತತ್ಸುಖಮರ್ಪಯೇತ್ ॥

ದರ್ಶನ ಸ್ಪರ್ಶನ ಆಸ್ವಾದನ ಶ್ರವಣ ಘ್ರಾಣದತ್ತಣಿಂ ವ್ಯತಿರಿಕ್ತವಾದ ವಸ್ತ್ರಾಭರಣಾದಿ ವಿಷಯಂಗಳಿಂದುಂಟಾದ ಯಾವುದಾನೊಂದು ಸುಖವುಂಟು ಅದನೂ ಶಿವನಲ್ಲಿ ಸಮರ್ಪಿಸೂದೆಂಬುದರ್ಥಂ ॥೩೭॥ ಬಳಿಕ ದೇಹದ್ವಾರದಿಂದಾವ ಸುಖ ಪ್ರಾಪ್ತವಹುದು ಆಯಾ ಸುಖವನೆಲ್ಲಂ ಶಿವಲಿಂಗಕ್ಕೋಸ್ಕರ ಸಮರ್ಪಿಸೂದೆಂದು ಪೇಳಿ ಕಾಯಾರ್ಪಿತ ಸ್ಥಲಮಂ ಮುಗಿಸುತಿರ್ದಪಂ.

ದೇಹದ್ವಾರೇಣ ಯದ್ಯತ್ಸ್ಯಾತ್ಸುಖಂ ಪ್ರಾಸಂಗಮಾತ್ಮನಃ
ತತ್ತನ್ನಿವೇದಯನ್ ಶಂಭೋರ್ಯೋಗೀ ಭವತಿ ನಿರ್ಮಲಃ ॥

ದೇಹದಲ್ಲಿ ಸಂಬಂಧಿಸಿಹ ದಶೇಂದ್ರಿಯದ್ವಾರದಿಂ ಯಾವ ಸುಖಂ ತನಗೆ ಪ್ರಸಕ್ತವಾಗೂದು ಆ ಈ ಸುಖವನೆಲ್ಲಂ ಶಿವಲಿಂಗಕ್ಕೆ ಸಮರ್ಪಿಸುವಾತನಾಗಿ ಶಿವಯೋಗೀಶ್ವರಂ ನಿರ್ಲೇಪನಾಗಿ ಸಂಚರಿಸುತ್ತಿಹನೆಂಬುದರ್ಥಂ ಕಾಯಕಸುಖ ಸಮರ್ಪಣವೆ ಕಾಯಾರ್ಪಣವೆಂಬುದು ತಾತ್ಪರ್ಯಂ ॥೩೮॥

## ೨೩. ಕರಣಾರ್ಪಿತಸ್ಥಲ

ಬಳಿಕ ಯಸ್ತು ವಿಜ್ಞಾನವಾನ್ಭವತಿ ಯುಕ್ತೇನ ಮನಸಾ ಸದಾ ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ಹೀಗೆಂಬ ಕಠವಲ್ಲಿಶ್ರುತ್ಯನುಸಾರದಿಂ ಕಾಯಾರ್ಪಿತ ಸಂಪನ್ನನಾದ ಶಿವಯೋಗೀಶ್ವರಂಗೆ ಕರಣಾರ್ಪಿತಸ್ಥಲಮಂ ನಿರೂಪಿಸುತಿರ್ದಪಂ.

ಆಸಂಜನಂ ಸಮಸ್ತಾನಾಂ ಕರಣಾನಾಂ ಪರಾತ್ಪರೇ
ಶಿವೇ ಯತ್ತದಿದಂ ಪ್ರೋಕ್ತಂ ಕರಣಾರ್ಪಿತಮಾಗಮೇ ॥

ವಿಶ್ವೋತ್ಕೃಷ್ಟವಾದ ಪರಾಶಕ್ತಿನಿಂದಲೂ ಉತ್ಕೃಷ್ಟವಾದ ಲಿಂಗದಲ್ಲಿ ಸಮಸ್ತವಾದ ಅಂತರ್ಬಾಹ್ಯಕರಣಂಗಳಿಗೆ ಯಾವುದಾನೊಂದು ಸಂಯೋಜನಕರ್ತೃತ್ವಮುಂಟು ಆ ಇದು ಕರಣಾರ್ಪಿತವೆಂದು ವೀರಶೈವಸಿದ್ಧಾಂತದಲ್ಲಿ ಪೇಳಲ್ಪಟ್ಟಿತ್ತೆಂಬುದರ್ಥಂ ॥೩೯॥ ಬಳಿಕ ಕರಣಾರ್ಪಕನಂ ಪೇಳುತಿರ್ದಪಂ.

ಯದ್ಯತ್ಕರಣಮಾಲಂಬ್ಯ ಭುಙ್ಕ್ತೇ ವಿಷಯಜಂ ಸುಖಮ್
ತತ್ತಚ್ಛಿವೇ ಸಮರ್ಪೇಷ ಕರಣಾರ್ಪಕ ಉಚ್ಯತೇ॥

ಯಾವ ಕರಣವನಾಶ್ರಯಿಸಿ ವಿಷಯಸುಖವನಾವನನುಭವಿಸುತ್ತಿಹನು ಆಯಾ ಕರಣಸಂಬಂಧ ವಿಷಯಸುಖಮಂ ಶಿವಲಿಂಗದಲ್ಲಿ ಸಮರ್ಪಿಸಿ ಈ ಕಾಯಾರ್ಪಣಾ ಸಂಪನ್ನನು ಕರಣಾರ್ಪಿತನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೪೦॥ ಬಳಿಕೀ ಪ್ರಕಾರವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಅಹಂಕಾರಮದೋದ್ರಿಕ್ತಮಂತಃಕರಣವಾರಣಮ್
ಬಧ್ನೀಯಾದ್ಯಃ ಶಿವಾಲಾನೇ ಸ ಧೀರಃ ಸರ್ವಸಿದ್ಧಿಮಾನ್ ॥

ಅಹಂಕಾರವಾದ ಮದಮತ್ತಮನೋಬುದ್ಧ್ಯಹಂಕಾರಂತಃಕರಣರೂಪದ ಮಹಾಗಜಮಂ ಶಿವಲಿಂಗಮೆಂಬ ಬಂಧನಸ್ತಂಭದಲ್ಲಿ ಯಾವಾತ ಕಟ್ಟುವನು ಆತಂ ಸರ್ವಸಿದ್ಧಿಯುಳ್ಳ ಧೀರನೆಂಬುದರ್ಥಂ ॥೪೧॥ ಬಳಿಕಿಲ್ಲಿ ಇಂದ್ರಿಯಂಗಳು ಬಹಳವಾಗಿರುವುದರಿಂದ ಮನೋಮಾತ್ರ ಬಂಧನದಿಂದ ಧೀರನೆಂತಹನೆಂಬಲ್ಲಿ ಪೇಳುತಿರ್ದಪಂ.

ಇಂದ್ರಿಯಾಣಾಂ ಸಮಸ್ತಾನಾಂ ಮನಃ ಪ್ರಥಮಮುಚ್ಯತೇ
ವಶೀಕೃತೇ ಶಿವೇ ತಸ್ಮಿನ್ ಕಿಮನ್ಯೈಸ್ತದ್ವಶಾನುಗೈಃ ॥

ಸಮಸ್ತೇಂದ್ರಿಯಂಗಳಿಗೂ ಮನವೆಂಬುದು ಮುಖ್ಯಕಾರಣವಾದಂಥಾದು ಇಂದ್ರಿಯಾಣಾಂ ಮನೋನಾಥಃ ಎಂದು ಶ್ರುತಿಯುಂಟಾಗಿರುವುದು ಆ ಮನಸ್ಸು ಸ್ಥಿರವಾಗಲಾಗಿ ಆ ಮನೋಧೀನವಾದ ಇಂದ್ರಿಯಂಗಳಿಂದೇನು ಪ್ರಯೋಜನವಿಲ್ಲವೆಂಬುದರ್ಥಂ ॥೪೨॥ ಬಳಿಕಿದರಿಂದೇನಾಯಿತೆಂಬಲ್ಲಿ ಪೇಳುತಿರ್ದಪಂ.

ಇಂದ್ರಿಯಾಣಾಂ ವಶೀಕಾರೋ ನಿವೃತ್ತಿರಿತಿ ಗೀಯತೇ
ಲಕ್ಷೀಕೃತೇ ಶಿವೇ ತೇಷಾಂ ಕುತಃ ಸಂಸಾರಗಾಹನಮ್ ॥

ಇಂದ್ರಿಯವಶೀಕರಣವೆ ನಿವೃತ್ತಿ ಎಂದು ವಿದ್ವಾಂಸರಿಂ ಪೇಳಲ್ಪಡುತ್ತಿಹುದು. ಆ ಇಂದ್ರಿಯಂಗಳಿಗೆ ಶಿವಲಿಂಗವು ಲಕ್ಷೀಕರಿಸಲ್ಪಡುತ್ತಿರಲಾಗಿ ಸಂಸಾರದಲ್ಲಿ ಮುಳುಗುಹವೆತ್ತಣದು ಇಲ್ಲವೆಂಬುದರ್ಥಂ ॥೪೩॥ ಬಳಿಕಿಂದ್ರಿಯವಶೀಕಾರಮಾತ್ರದಿಂ ಸಂಸಾರ ನಿವೃತ್ತಿಯೆಂತಿಹುದೆಂಬಲ್ಲಿ ಪೇಳುತಿರ್ದಪಂ.

ಸಂಸಾರವಿಷಕಾಂತಾರಸಮುಚ್ಛೇದಕುಠಾರಿಕಾ
ಉಪಶಾಂತಿರ್ಭವೇತ್ಪುಂಸಾಮಿಂದ್ರಿಯಾಣಾಂ ವಶೀಕೃತೌ ॥

ಇಂದ್ರಿಯಂಗಳು ವಶವರ್ತಿಗಳಾದಲ್ಲಿ ಪುರುಷರಿಗೆ ಸಂಸಾರವೆಂಬ ವಿಷಾಟವಿ ಛೇದಿಸುವಲ್ಲಿ ಕೊಡಲಿಯಾದ ನಿರಪೇಕ್ಷೆಯುಂಟಾಹದೆಂಬುದರ್ಥಂ ॥೪೪॥ ಬಳಿಕ ನಿರಪೇಕ್ಷ ಮಾತ್ರದಿಂದೆಂತು ಕರ್ಮಬಂಧನಿವೃತ್ತಿಯಹದೆಂಬಲ್ಲಿ ಪೇಳುತಿರ್ದಪಂ.

ಇಂದ್ರಿಯೈರೇವ ಜಾಯಂತೇ ಪಾಪಾನಿ ಸುಕೃತಾನಿ ಚ
ತೇಷಾಂ ಸಮರ್ಪಣಾದೀಶೇ ಕುತಃ ಕರ್ಮನಿಬಂಧನಮ್ ॥

ಪುಣ್ಯಪಾಪಂಗಳು ಇಂದ್ರಿಯಂಗಳಿಂದಲೆ ಉಂಟಾಹವು. ಆ ಪುಣ್ಯಪಾಪಂಗಳಂ ಶಿವನಲ್ಲಿ ಸಮರ್ಪಿಸುವುದರತ್ತಣಿಂ ಕರ್ಮಬಂಧನವೆಲ್ಲಿಯದು ಇಲ್ಲವೆಂಬುದರ್ಥಂ ॥೪೫॥ ಹಾಗಾದಡೆ ಶಿವನಲ್ಲಿ ಸಮರ್ಪಿಸಿದ ಪದಾರ್ಥಗಳಿಗೆ ಅಭಿವೃದ್ಧಿ ಕೇಳುವುದರಿಂ ಪುಣ್ಯ ಪಾಪಗಳಿಗೆ ಅಭಿವೃದ್ಧಿ ಉಂಟಾಗಬೇಕೆಂಬಲ್ಲಿ ಪೇಳುತಿರ್ದಪಂ.

ಪ್ರಕಾಶಮಾನೇ ಚಿದ್ವಹ್ನೌ ಬಹಿರಂತರ್ಜಗನ್ಮಯೇ
ಸಮರ್ಪ್ಯ ವಿಷಯಾನ್ ಸರ್ವಾನ್ ಮುಕ್ತವಜ್ಜಾಯತೇ ಜನಃ ॥

ವಹ್ನಿಯಲ್ಲಿ ಇರಿಸಲ್ಪಟ್ಟ ಪದಾರ್ಥಂಗಳಿಗೆ ನಾಶವುಂಟಾಹದರಿಂ ಒಳಗೂ ಹೊರಗೂ ಪ್ರಕಾಶಿಸುವಂಥಾ ವಿಶೇಷರೂಪವಾದ ಚಿದಗ್ನಿಯೆಂಬ ಶಿವಲಿಂಗದಲ್ಲಿ ಸಮರ್ಪಿಸಿದ ಪದಾರ್ಥಗಳಿಗೂ ನಾಶಮಂಗೀಕರಿಸಲ್ತಕ್ಕದಾದರಿಂ ವೃದ್ಧಿಯಿಲ್ಲವಾಗಲಾಗಿ ಸಕಲ ಪದಾರ್ಥಂಗಳನೂ ಶಿವಲಿಂಗದಲ್ಲಿ ಸಮರ್ಪಿಸಿ ಜನನ ಮರಣ ಪರಿಪೀಡಿತವಾದ ಜನವು ಮುಕ್ತನೆಂತಾಗುವನೆಂಬುದರ್ಥಂ ॥೪೬॥ ಬಳಿಕ ಸಮರ್ಪಣಂ ಹೋಮರೂಪವಾದ ಕಾರಣದಿಂದದಕ್ಕೆ ಸಾಧನವಾವುದೆಂಬಲ್ಲಿ ಪೇಳುತಿರ್ದಪಂ.

ಚಿತ್ತದ್ರವ್ಯಂ ಸಮಾದಾಯ ಜಗಜ್ಜಾಲಂ ಮಹಾಹವಿಃ
ಚಿದ್ವಹ್ನೌ ಜುಹ್ವತಾಮಂತಃ ಕುತಸ್ಸಂಸಾರವಿಪ್ಲವಃ ॥

ಜಗತ್ತೆಂಬುದು ತನ್ಮಾತ್ರ ರೂಪವಾದುದರಿಂ ಶಬ್ದಾದಿ ವಿಷಯ ರೂಪವಾದ ಹವಿಸ್ಸನು ಚಿತ್ತವೆಂಬ ದರ್ವಿಯಲ್ಲಿ ತೆಗೆದುಕೊಂಡು ಹೃತ್ಕಮಲದಲ್ಲಿರುವ ಚಿದ್ವಹ್ನಿಯಲ್ಲಿ ಹವನವ ಮಾಡುವ ಶಿವಯೋಗಿಗಳಿಗೆ ಸಂಸಾರಬಾಧೆ ಯತ್ತಣದು ಇಲ್ಲವೆಂಬುದರ್ಥಂ ॥೪೭॥ ಬಳಿಕೀ ಪ್ರಕಾರವಾದ ವಿಶ್ವಹವನದಿಂ ಮುಕ್ತನಂತಾಹ ಜನಮೆಂಥಾದೆಂಬಲ್ಲಿ ಪೇಳುತಿರ್ದಪಂ.

ಆತ್ಮಜ್ಯೋತಿಷಿ ಚಿದ್ರೂಪೇ ಪ್ರಾಣವಾಯುನಿಬೋಧಿತೇ
ಜುಹ್ವನ್ ಸಮಸ್ತವಿಷಯಾನ್ ತನ್ಮಯೋ ಭವತಿ ಧ್ರುವಮ್ ॥

ಪ್ರಾಣವಾಯುವಿನಿಂ ಪ್ರಕಾಶಿಸಲ್ಪಟ್ಟ ಚಿದ್ರೂಪವಾದ ಆತ್ಮಜ್ಯೋತಿಯೆಂಬ ಶಿವಾಗ್ನಿಯಲ್ಲಿ ತತ್ತತ್ಕರಣಜನ್ಯ ಸುಖಾದಿವಿಷಯಂಗಳಂ ಸಮರ್ಪಿಸುವ ಶಿವಯೋಗಿಯಲ್ಲಿಯು ಚಿನ್ಮಯಸ್ವರೂಪನೆ ಅಹನೆಂಬುದು ನಿಶ್ಚಯಂ ॥೪೮॥ ಬಳಿಕ ಕರಣಂಗಳು ಪ್ರಾಕೃತಮಪ್ಪುದರಿಂ ತಜ್ಜನ್ಯ ಸುಖಾದಿಗಳೆಂತು ಶಿವನಿಗೆ ಸಮರ್ಪಿಸಲ್ತಕ್ಕವೆಂಬಲ್ಲಿ ಪೇಳುತಿರ್ದಪಂ.

ಇಂದ್ರಿಯಾಣಿ ಸಮಸ್ತಾನಿ ಶರೀರಂ ಭೋಗಸಾಧನಮ್
ಶಿವಪೂಜಾಂಗಭಾವೇನ ಭಾವಯನ್ಮುಕ್ತಿಮಾಪ್ನುಯಾತ್ ॥

ಸಮಸ್ತವಾದ ಇಂದ್ರಿಯಂಗಳು ಸುಖದುಃಖಗಳಿಗೆ ಸಾಧನವಾದ ಶರೀರವು ಇವೆಲ್ಲಂ ಶಿವಪೂಜೆಗೆ ಅಂಗವೆಂದು ಭಾವಿಸುವಾತಂ ಮುಕ್ತಿಯಂ ಪಡೆವನು. ಶರೀರಾದಿಗಳೆಲ್ಲಂ ಶಿವಪೂಜಾಂಗವಾದ ಕಾರಣದಿಂ ತಜ್ಜನ್ಯಸುಖಾದಿಗಳೂ ಶಿವಸಮರ್ಪಣ ಯೋಗ್ಯವೆ ಸರಿಯೆಂಬುದರ್ಥಂ ॥ ೪೯॥ ಈ ಕರಣಾರ್ಪಣವು ಕಾಯಾರ್ಪಣಸ್ಥಲದಲ್ಲಿ ಪೇಳಲ್ಪಟ್ಟವಾದ ಕಾರಣ ಪುನರುಕ್ತ್ಯಮಿಲ್ಲಂ.

## ೨೪. ಭಾವಾರ್ಪಿತಸ್ಥಲ

ಬಳಿಕ ತಸ್ಮಾತ್ಪ್ರಪಂಚಸಂಬಂಧಭಾವಂ ಹಿತ್ವಾ ಶಿವಾತ್ಮಕಂ ಭಾವಮಾಶ್ರಿತ್ಯ ಯತ್ನೇನ ಕುರ್ಯಾದ್ವ್ಯಾಪ್ನುತಿಮೀಶ್ವರೇ ಎಂಬ ಯೋಗಜಾಗಮ ವಚನಾನುಸಾರದಿಂ ಕರಣಾರ್ಪಿತ ಸಂಪನ್ನನಾದ ಶಿವಯೋಗಿಗೆ ವಿಧಿಸುವಂಥಾ ಭಾವಾರ್ಪಣಸ್ಥಲಮಂ ನಿರೂಪಿಸುತಿರ್ದಪಂ.

ಶಿವೇ ನಿಶ್ಚಲಭಾವೇನ ಭಾವಾನಾಂ ಯತ್ಸಮರ್ಪಣಮ್
ಭಾವಾರ್ಪಿತಮಿದಂ ಪ್ರೋಕ್ತಂ ಶಿವಸದ್ಭಾವವೇದಿಭಿಃ ॥

ಶಿವಲಿಂಗ ವಿಷಯದಲ್ಲಿ ಸ್ಥಿರಭಾವದಿಂದ ಭಾವಂಗಳ ಸಮರ್ಪಣವಾವುದುಂಟು ಇದು ಭಾವಾರ್ಪಣವೆಂದು ಶಿವ ಸದ್ಭಾವವ ಬಲ್ಲವರಿಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೫೦॥ ಬಳಿಕ ಭಾವವೆಂದಡೇನೆಂಬಲ್ಲಿ ಪೇಳುತಿರ್ದಪಂ.

ಚಿತ್ತಸ್ಥಸಕಲಾರ್ಥಾನಾಂ ಮನನಂ ಯತ್ತು ಮಾನಸೇ
ತದರ್ಪಣಂ ಶಿವೇ ಸಾಕ್ಷಾನ್ಮಾನಸೋ ಭಾವ ಉಚ್ಯತೇ ॥

ವಿಕಾರೋ ಮನಸೋ ಭಾವಃ ಎಂಬ ಅಮರವಚನದಿಂ ಮನೋವಿಕಾರವು ಭಾವವೆನಿಸಿಕೊಂಬುದು. ಆ ಮನೋವಿಕಾರವಾದ ಭಾವದಲ್ಲಿ ಚಿತ್ತದಲ್ಲಿರುವ ಸಕಲ ಪದಾರ್ಥಂಗಳ ಅನುಭವರೂಪವಾದ ಚಿಂತನವಾವದುಂಟು ಅದು ಪ್ರತ್ಯಕ್ಷವಾದ ಶಿವಲಿಂಗದಲ್ಲಿ ಅರ್ಪಿತವೆಂದು ಪೇಳಲ್ಪಡುವದೆಂಬುದರ್ಥಂ ॥೫೧॥ ಬಳಿಕ ಭಾವಸ್ವರೂಪ ವನ್ನೈದುಸೂತ್ರಂಗಳಿಂ ವಿಶೇಷಿಸುತಿರ್ದಪಂ.

ಭಾವ ಏವ ಹಿ ಜಂತೂನಾಂ ಕಾರಣಂ ಬಂಧಮೋಕ್ಷಯೋಃ
ಭಾವಶುದ್ಧೌ ಭವೇನ್ಮುಕ್ತಿರ್ವಿಪರೀತೇ ತು ಸಂಸೃತಿಃ ॥

ಪ್ರಾಣಿಗಳಿಗೆ ಬಂಧಮೋಕ್ಷಕ್ಕೆ ಕಾರಣವಾದಂಥಾದು ಭಾವವೇ ಸರಿ. ಭಾವಶುದ್ಧ ವಾದಲ್ಲಿ ಮೋಕ್ಷವು ಇಲ್ಲದಿದ್ದರೆ ಬಂಧವೆಂಬುದರ್ಥಂ ॥೫೨॥ ಬಳಿಕ ಭಾವಶುದ್ಧಿ ಎಂದರೇ ನೆಂಬಲ್ಲಿ ಪೇಳುತಿರ್ದಪಂ.

ಭಾವಸ್ಯ ಶುದ್ಧಿರಾಖ್ಯಾತಾ ಶಿವೋಽಹಮಿತಿ ಯೋಜನಾ
ವಿಪರೀತ ಸಮಾಯೋಗೇ ಕುತೋ ದುಃಖನಿವರ್ತನಮ್ ॥

ಶಿವೋಹಮೆಂದು ಸ್ವಸ್ವರೂಪಾನುಭವಯೋಗವೆ ಭಾವಕ್ಕೆ ಶುದ್ಧಿ ಎಂದು ವಿದ್ವಾಂಸರಿಂ ಪೇಳಲ್ಪಟ್ಟಿತ್ತು. ತಾನು ಶಿವನಲ್ಲವೆಂಬ ವಿಪರೀತಯೋಗವುಂಟಾಗಲಾಗಿ ದುಃಖ ನಿವೃತ್ತಿಯೆತ್ತಣದು ಇಲ್ಲವೆಂಬುದರ್ಥಂ ||೫೩|| ಬಳಿಕ ಇದವೆಂದು ತೋರುವ ವಿಶ್ವವೆಂತು ಭಾವಿಸಲ್ತಕ್ಕದೆಂಬಲ್ಲಿ ಭೋಕ್ತಾ ಭೋಜ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮ ಚೈತತ್ ಹೀಗೆಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ಪೇಳುತಿರ್ದಪಂ.

ಭೋಕ್ತಾ ಭೋಜ್ಯಂ ಭೋಜಯಿತಾ ಸರ್ವಮೇತಚ್ಚರಾಚರಮ್
ಭಾವಯನ್ ಶಿವರೂಪೇಣ ಶಿವೋ ಭವತಿ ವಸ್ತುತಃ ||

ಸುಖ ದುಃಖಗಳ ಭುಂಜಿಸುವವನು ಭುಂಜಿಸಲು ಯೋಗ್ಯವಾದ ಪದಾರ್ಥವು ಭೋಗಪ್ರದನಾದ ಶಿವನು ಚರಾಚರಾತ್ಮಕವಾದ ಈ ಸಕಲವೂ ತನ್ನ ನಿಜ ಸ್ವಭಾವಮಾದ ಚಿತ್ಕ್ರಿಯಾಶಕ್ತಿಕಾರ್ಯವಾದುದರಿಂ ಶಿವಸ್ವರೂಪದಿಂ ಭಾವಿಸುವ ಯೋಗೀಶ್ವರಂ ಪರಮಾರ್ಥದಿಂ ಮುಕ್ತನಹನು. ವಸ್ತುತಃ ಎಂದು ಪೇಳಿದ ಕಾರಣದಿಂದಿದು ಮುಖ್ಯ ಪಕ್ಷವೆಂದು ಸೂಚಿಸಲ್ಪಟ್ಟಿತ್ತು ||೫೪|| ಬಳಿಕ ಪಕ್ಷಾಂತರದ ಭಾವನೆಯಂ ಪೇಳುತಿರ್ದಪಂ.

ಮಿಥ್ಯೇತಿ ಭಾವಯನ್ವಿಶ್ವಂ ವಿಶ್ವಾತೀತಂ ಶಿವಂ ಸ್ಮರನ್
ಸತ್ತಾನಂದಚಿದಾಕಾರಂ ಕಥಂ ಬದ್ಧುಮಿಹಾರ್ಹತಿ ||

ವಿಶ್ವಂ ತನ್ನಿಂದನ್ಯವಾದ ಅದ್ಯಾ ಸ್ವರೂಪ ವಿದ್ಯಾಕಾರ್ಯವಾದುದರಿಂದ ಪುಸಿಯೆಂದು ಭಾವಿಸುತ್ತಾ ವಿಶ್ವಾತೀತನಾದ ಶಿವನಂ ನಿತ್ಯಪರಿಪೂರ್ಣಸಚ್ಚಿದಾನಂದಾಕಾರನಾಗಿ ಸ್ಮರಿಸುವಾತಂ ದಾವ ಪ್ರಕಾರದಿಂ ಮಲ ಮಾಯಾದಿ ಪಾಶಂಗಳಿಂ ಕಟ್ಟಲ್ಪಡುವ ನೆಂಬುದರ್ಥಂ ||೫೫|| ಬಳಿಕ ಭಾವನಾಂತರಮಂ ಪೇಳುತಿರ್ದಪಂ.

ಸರ್ವಂ ಕರ್ಮಾರ್ಚನಂ ಶಂಭೋರ್ವಚನಂ ತಸ್ಯ ಕೀರ್ತನಮ್
ಇತಿ ಭಾವಯತೋ ನಿತ್ಯಂ ಕಥಂ ಸ್ಯಾತ್ಕರ್ಮಬಂಧನಮ್ ||

ತಾ ಮಾಡುವ ಸಕಲ ಕರ್ಮವೂ ಶಿವಲಿಂಗ ಪೂಜೆಯೆ. ನುಡಿದ ವಚನವೆಲ್ಲಂ ಶಿವಲಿಂಗ ಸ್ತುತಿಯೆ ಸರಿ ಹೀಗೆಂದು ಎಲ್ಲಾಗಳು ಭಾವಿಸುವಾತಂಗೆ ಕರ್ಮಬಂಧನವಾವ ಪ್ರಕಾರದಿಂದುಂಟಾಹದು. ಆಗದೆಂಬುದರ್ಥಂ ||೫೬|| ಜೀವನ್ಮುಕ್ತಿಯನೀವ ಭಾವನೆಯಂ ಪೇಳುತ ಭಾವಾರ್ಪಿತಸ್ಥಲಮಂ ಮುಗಿಸುತಿರ್ದಪಂ.

ಸರ್ವೇಂದ್ರಿಯಗತಂ ಸೌಖ್ಯಂ ದುಃಖಂ ವಾ ಕರ್ಮಸಂಭವಮ್
ಶಿವಾರ್ಥಂ ಭಾವಯನ್ ಯೋಗೀ ಜೀವನ್ಮುಕ್ತೋ ಭವಿಷ್ಯತಿ ||

ಶ್ರೋತ್ರಾದಿ ಸರ್ವೇಂದ್ರಿಯಗತವಾದ ಸುಖಮಂ ಪಾಪಕರ್ಮದಿಂದುಂಟಾದ ದುಃಖವನಾದರೂ ಶಿವಲಿಂಗಾರ್ಪಿತ ಪದಾರ್ಥವನಾಗಿ ಭಾವಿಸುವ ಶಿವಯೋಗೀಶ್ವರಂ ಜೀವನ್ಮುಕ್ತನಹನೆಂಬುದರ್ಥಂ ||೫೭||

## ೨೫. ಶಿಷ್ಯಸ್ಥಲ

ಬಳಿಕ ಯಥಾ ಸಿದ್ಧರಸಸ್ಪರ್ಶಾತ್ತಾಮ್ರಂ ಭವತಿ ಕಾಂಚನಮ್ ಗುರೂಪದಿಷ್ಟ ಶ್ರವಣಾಚ್ಛಿಷ್ಯಸ್ತತ್ತ್ವಮಯ ಸ್ತಥಾ ಎಂಬ ಯೋಗಜಾಗಮ ವಚನಾನುಸಾರದಿಂದ ಆ ಭಾವಾರ್ಪಿತಸಂಪನ್ನನಾದ ಶಿವಯೋಗಿಯಿಂದ ಶಿಕ್ಷಿಸಲು ಯೋಗ್ಯವಾದ ಶಿಷ್ಯಸ್ಥಲಮಂ ನಿರೂಪಿಸುತಿರ್ದಪಂ.

ಶಾಸನೀಯೋ ಭವೇದ್ಯಸ್ತು ಪರಕಾಯೇನ ಸರ್ವದಾ
ತತ್ಪ್ರಸಾದಾತ್ತು ಮೋಕ್ಷಾರ್ಥೀ ಸ ಶಿಷ್ಯ ಇತಿ ಕೀರ್ತಿತಃ ॥

ಪರಬ್ರಹ್ಮಕಾಯವಾಗಿ ಭಾವಾರ್ಪಿತಸಂಪನ್ನನಾದ ಶಿವಯೋಗಿಯಿಂ ಯಾವಾತಂ ಸದಾ ಶಿಕ್ಷಿಸಲು ಯೋಗ್ಯನಹನು ಆ ಭಾವಾರ್ಪಿತಸಂಪನ್ನನಾದ ಶಿವಯೋಗಿಯು ಪ್ರಸನ್ನತೆಯತ್ತಣಿಂ ದಾವಾತ ಪರಾಪರಮೂರ್ತಿಯಾಗಿರುವನು ಆತಂ ಶಿಷ್ಯನೆಂದು ಪೇಳಲ್ಪಡುವನೆಂಬುದರ್ಥಂ ॥೫೮॥ ಬಳಿಕ ಮತ್ತೊಂದು ಪ್ರಕಾರದಿಂ ಶಿಷ್ಯನ ಲಕ್ಷಣಮಂ ಪೇಳುತಿರ್ದಪಂ.

ಭಾವೋ ಯಸ್ಯ ಸ್ಥಿರೋ ನಿತ್ಯಂ ಮನೋವಾಕ್ಕಾಯಕರ್ಮಭಿಃ
ಗುರೌ ನಿಜೇ ಗುಣೋದಾರೇ ಸ ಶಿಷ್ಯ ಇತಿ ಗೀಯತೇ ॥

ಯಾವಾತನ ಭಾವವು ಜ್ಞಾನ ವೈರಾಗ್ಯಾದಿ ಗುಣಗಳಿಂದುನ್ನತವಾದಂಥಾದಾಗಿ ನಿಜಗುರುವಿನಲ್ಲಿ ಧ್ಯಾನಿಸುತ್ತಾ ಪೂಜಾರೂಪವಾದ ಮನೋವಾಕ್ಕಾಯ ಕರ್ಮಂಗಳಿಂ ಎಲ್ಲಾಗಳು ದೃಢಚಿತ್ತನಾಗಿರುವನು ಆತಂ ಶಿಷ್ಯನೆಂದು ಪೇಳಲ್ಪಡುವನೆಂದುದರ್ಥಂ ॥೫೯॥ ಬಳಿಕ ಮುಖ್ಯಶಿಷ್ಯ ಲಕ್ಷಣಮಂ ಪೇಳುತಿರ್ದಪಂ.

ಶಾಂತೋ ದಾಂತಸ್ತಪಶೀಲಸ್ಸತ್ಯವಾಕ್ಸಮದರ್ಶನಃ
ಗುರೌ ಶಿವೇ ಸಮಾನಸ್ಥಸ್ಸಶಿಷ್ಯಾಣಾಮಿಹೋತ್ತಮಃ ॥

ಯಾವಾತಂ ಅಂತರಿಂದ್ರಿಯ ಬಾಹ್ಯೇಂದ್ರಿಯ ನಿಗ್ರಹವುಳ್ಳವನಾಗಿ ಯಮ ನಿಯಮಾದ್ಯಷ್ಟಾಂಗ ಯೋಗರೂಪವಾದ ತಪೋಯೋಗನಿಷ್ಠಾಗಿ ಯಥಾರ್ಥವಾದಿ ಯಾಗಿ ಮಣ್ಣು ಹೆಂಟೆ ಸುವರ್ಣಾದಿಗಳಲ್ಲಿ ಸಮಾನಬುದ್ಧಿಯುಳ್ಳವನಾಗಿರುವನು ಆತನೀಲೋಕದಲ್ಲಿ ಶಿಷ್ಯರುಗಳಿಗೆ ಶ್ರೇಷ್ಠನೆಂಬುದರ್ಥಂ ॥೬೦॥ ಬಳಿಕ ಶಿಷ್ಯಾಚಾರಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಗುರುಮೇವ ಶಿವಂ ಪಶ್ಯೇಚ್ಛಿವಮೇವ ಗುರುಂ ತಥಾ
ನೈತಯೋರಂತರಂ ಕಿಂಚಿದ್ವಿಜಾನೀಯಾದ್ವಿಚಕ್ಷಣಃ ॥

ಗುರುವೇ ಶಿವನು. ಶಿವನೇ ಗುರು. ಇವರೀರ್ವರಿಗೂ ಒಂದಿಷ್ಟು ಅಂತರವು ಇಲ್ಲವೆಂದು ಯಾವಾತ ತಿಳಿವನು ಆತಂ ಕುಶಲನಾದ ಶಿಷ್ಯನೆಂಬುದರ್ಥಂ ॥೬೧॥

ಶಿವಾಚಾರೇ ಶಿವಧ್ಯಾನೇ ಶಿವಜ್ಞಾನೇ ಚ ನಿರ್ಮಲೇ
ಗುರೋರಾದೇಶಮಾತ್ರೇಣ ಪರಾಂ ನಿಷ್ಠಾಮವಾಪ್ನುಯಾತ್ ॥

ಶಿವಾಚಾರದಲ್ಲಿ ಶಿವಧ್ಯಾನದಲ್ಲಿ ನಿರ್ಮಲವಾದ ಶಿವಾದ್ವೈತಜ್ಞಾನದಲ್ಲಿ ಗುರೂಪದೇಶ ಮಾತ್ರದಿಂದ ಅತ್ಯಂತ ವಿಶ್ವಾಸವುಳ್ಳವಂ ಶಿಷ್ಯನೆಂಬುದರ್ಥಂ ॥೬೨॥ ಬಳಿಕ ಶ್ರೀ ಗುರುಕೃಪಾಕಟಾಕ್ಷ ಮಹತ್ವಮಂ ಸೂತ್ರದ್ವಯದಿಂ ಪೇಳುತಿರ್ದಪಂ

ಬ್ರಹ್ಮಾಂಡಬುದ್ಬುದೋದ್ಭೂತಂ ಮಾಯಾಸಿಂಧುಂ ಮಹತ್ತರಮ್
ಗುರೋಃ ಕಬಲಯತ್ಯಾಶು ಕಟಾಕ್ಷಬಡಬಾನಲಃ ॥

ಬ್ರಹ್ಮಾಂಡಗುಳ್ಳೆಗಳ ಉದ್ಭವನಮುಂಟಾಗಿರುವನು ಮಾಯಾಸಮುದ್ರಮಂ ಗುರುವಿನ ಕಟಾಕ್ಷವೆಂಬ ವಡಬಾಗ್ನಿಯು ಶೀಘ್ರದಲ್ಲಿ ನುಂಗುತ್ತಿಹನೆಂಬುದರ್ಥಂ ॥೬೩॥

ಗುರೋಃ ಕಟಾಕ್ಷವೇಧೇನ ಶಿವೋ ಭವತಿ ಮಾನವಃ
ರಸವೇಧಾದ್ಯಥಾ ಲೋಹಃ ಹೇಮತಾಂ ಪ್ರತಿಪದ್ಯತೇ ॥

ಸಿದ್ಧರಸಲೇಪದಿಂದ ಲೋಹವೆಂತು ಚಿನ್ನವಾಗುವುದು ಶ್ರೀ ಗುರುವಿನ ಕಟಾಕ್ಷ ವೇಧದಿಂದ ಶಿಷ್ಯ ಜನವು ಶಿವನಹನೆಂಬುದರ್ಥಂ ॥೬೪॥ ಬಳಿಕೀ ಪ್ರಕಾರವಾದ ಗುರು ಮಹತ್ವ ಜ್ಞಾನವುಳ್ಳವಂ ಶ್ರೀ ಗುರುವಿನಾಜ್ಞೆಯಂ ಮೀರಬಾರದೆಂದು ಪೇಳುತಿರ್ದಪಂ.

ನ ಲಂಘಯೇದ್ಗುರೋರಾಜ್ಞಾಂ ಜ್ಞಾನಮೇವ ಪ್ರಕಾಶಯನ್
ಶಿವಾಸಕ್ತೇನ ಮನಸಾ ಸರ್ವಸಿದ್ಧಿಮವಾಪ್ನುಯಾತ್ ॥

ಶ್ರೀ ಗುರುವಿನಾಜ್ಞೆಯ ಮೀರದೆ ಶಿವಧ್ಯಾನ ನಿಷ್ಠವಾದ ಮನಸ್ಸಿನಿಂದ ಶಿವಾದ್ವೈತ ಜ್ಞಾನವೆ ಪ್ರಕಟಿಸುವಂಥಾದ್ದೇ ಭೋಗಮೋಕ್ಷರೂಪವಾದ ಸಕಲ ಸಿದ್ಧಿಗಳ ಪಡೆವನೆಂಬುದರ್ಥಂ ॥೬೫॥ ಬಳಿಕ ಗುರೂಪದೇಶರಹಸ್ಯಮಂ ಪೂಜಿಸುತಿರ್ದಪಂ.

ಶಿವಾದನ್ಯಜ್ಜಗನ್ಮಿಥ್ಯಾ ಶಿವಃ ಸಂವಿತ್ಸ್ವರೂಪಕಃ
ಶಿವಸ್ತ್ವಮಿತಿ ನಿರ್ದಿಷ್ಟೋ ಗುರುಣಾ ಮುಕ್ತ ಏವ ಸಃ॥

ವಿಶ್ವವು ಶಿವನಿಂದನ್ಯಮೆಂಬುದು ಹುಸಿ. ಶಿವಸ್ವರೂಪವೆ ಸರಿ. ಶಿವಂ ಚಿದ್ರೂಪನು. ಏತದಾತ್ಮ್ಯಮಿದಂ ಸರ್ವಂ ತತ್ಸ್ಯಾಂ ಸ ಆತ್ಮಾ ತತ್ವಮಸಿ ಶ್ವೇತಕೇತೋಃ ಎಂಬ ಶ್ರುತ್ಯುಕ್ತ ಪ್ರಕಾರದಿಂ ಚಿದ್ರೂಪನಪ್ಪುದರಿಂ ನೀನೆ ಶಿವಸ್ವರೂಪನೆಂದು ಶ್ರೀ ಗುರುವಿನಿಂದು ಪದೇಶಿಸಲ್ಪಟ್ಟ ಶಿಷ್ಯಂ ಜೀವನ್ಮುಕ್ತನೆಂಬುದರ್ಥಂ ॥೬೬॥ ಬಳಿಕ ಶಿಷ್ಯಸ್ಥಲಮಂ ಮುಗಿಸುತಿರ್ದಪಂ.

ಗುರೋರ್ಲಬ್ಧ್ವಾ ಮಹಾಜ್ಞಾನಂ ಸಂಸಾರಾಮಯಭೇಷಜಮ್
ಮೋದತೇ ಯಸ್ಸುಖೀ ಶಾಂತಃ ಸ ಜೀವನ್ಮುಕ್ತ ಏವ ಹಿ ॥

ಯಾವನಾನೊಬ್ಬ ಶಿಷ್ಯನು ಗುರುವಿನತ್ತಣಿಂ ಸಂಸಾರವೆಂಬ ರೋಗಕ್ಕೆ ಔಷಧವಾದ

ಶಿವಾದ್ವೈತಜ್ಞಾನವ ಪಡೆದು ನಿತ್ಯ ಸುಖಿಸುತ್ತಿಹನು ಆತಂ ರಾಗದ್ವೇಷರಹಿತನಾದ ಜೀವನ್ಮುಕ್ತನೆಂದು ಪ್ರಸಿದ್ಧಮೆಂಬುದರ್ಥಂ ॥೬೭॥

## ೨೬. ಶುಶ್ರೂಷಾಸ್ಥಲ

ಬಳಿಕ ತಸ್ಮಾದುಪಾಶ್ರಿತಾತ್ಮಸಮ್ಯಕ್ಸಹಜಂ ಪ್ರಾಪ್ಯ ಸದ್ಗುರೋಃ ಅನಾಯಾಸೇನ ಸತತಮಾತ್ಮಾಭ್ಯಾಸರತೋ ಭವೇತ್ ಹೀಗೆಂಬ ಯೋಗಜಾಗಮ ವಚನಾನುಸಾರದಿಂ ಆ ಶಿಷ್ಯನೆ ಗುರುಸೇವಾತತ್ಪರನಾಗಿ ರಹಸ್ಯಾರ್ಥವ ತಿಳಿಯಲಿಚ್ಛೆಯುಳ್ಳಾತಂ ಶುಶ್ರೂಷುವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಬೋಧ್ಯಮಾನಸ್ಸ ಗುರುಣಾ ಪರಕಾಯೇನ ಸರ್ವದಾ
ತಚ್ಛುಶ್ರೂಷಾರತಶ್ಶಿಷ್ಯಃ ಶುಶ್ರೂಷುರಿತಿ ಕೀರ್ತ್ಯತೇ ॥

ಪರಬ್ರಹ್ಮಕಾಯನಾದ ಶ್ರೀ ಗುರುವಿನಿಂದ ಎಲ್ಲಾಗಳು ತಿಳುಹಲ್ಪಟ್ಟ ಶಿಷ್ಯನು ಆತನಿಂ ಕೇಳಬೇಕೆಂಬ ಇಚ್ಛೆಯಲ್ಲಿ ಲಂಪಟನಾಗಿ ಶುಶ್ರೂಷುವೆನಿಸಿಕೊಂಬನೆಂಬುದರ್ಥಂ ॥೬೮॥ ಬಳಿಕೀ ಪ್ರಕಾರಮಂ ಪೇಳುತಿರ್ದಪಂ.

ಕಿಂ ಸತ್ಯಂ ಕಿಂ ನು ವಾಽಸತ್ಯಂ ಕ ಆತ್ಮ ಕಃ ಪರಶ್ಶಿವಃ
ಇತಿ ಶ್ರವಣಸಂಸಕ್ತೋ ಗುರೋಶ್ಶಿಷ್ಯೋ ವಿಶಿಷ್ಯತೇ ॥

ನಿತ್ಯವಾದುದಾವುದು ಅನಿತ್ಯವಾದುದಾವುದು ಜೀವನೆಂಬವರಾರು ಪರಮಾತ್ಮನಾರೆಂಬುದಕ್ಕೆ ಶ್ರೀ ಗುರುವಿನತ್ತಣಿಂದುತ್ತರ ವಾಕ್ಯವ ಕೇಳುವಲ್ಲಿ ಲಂಪಟನಾದ ಕಾರಣದಿಂ ಶುಶ್ರೂಷುವೆನಿಸಿಕೊಂಬ ಶಿವನೆ ಬಚ್ಚುಬರಿಯ ಸೇವಾಸಕ್ತ ಶಿಷ್ಯನಿಂದಲೂ ಶ್ರೇಷ್ಠನೆಂಬುದರ್ಥಂ ॥೬೯॥ ಬಳಿಕವನೆಂತು ಶ್ರೇಷ್ಠನೆಂಬಲ್ಲಿ ಪೇಳುತಿರ್ದಪಂ.

ಶ್ರುತ್ವಾ ಶ್ರುತ್ವಾ ಗುರೋರ್ವಾಕ್ಯಂ ಶಿವಸ್ಸಾಕ್ಷಾತ್ಕ್ರಿಯಾವಹಮ್
ಉಪಶಾಮ್ಯತಿ ಯಃ ಸ್ವಾಂತೇ ಸ ಮುಕ್ತಿಪದಮಾಪ್ನುಯಾತ್ ॥

ಯಾವನಾನೊಬ್ಬ ಶುಶ್ರೂಷುವಾದ ಶಿಷ್ಯನಂ ಶಿವ ಪ್ರತ್ಯಕ್ಷಕರಣಕ್ರಿಯೆಯುಳ್ಳ ಶ್ರುತಿಸಮ್ಮತವಾದ ಉಪದೇಶ ವಾಕ್ಯಮಂ ಶ್ರೀ ಗುರುವಿನತ್ತಣಿಂ ಬಹಳ ಸಾರಿ ಕೇಳಿ ಚಿತ್ತದಲ್ಲಿ ಶಾಂತನಾಗುತ್ತಿಹನು ಆತನು ಮುಕ್ತಿಪದವ ಪಡೆವನೆಂಬುದರ್ಥಂ ॥೭೦॥ ಬಳಿಕ ಗುರುಸೇವೆಮಾತ್ರದಿಂದಲೆ ಮುಕ್ತನೇಕಾಗನೆಂಬಲ್ಲಿ ಪೇಳುತಿರ್ದಪಂ.

ನ ಬುಧ್ಯತಿ ಗುರೋರ್ವಾಕ್ಯಂ ವಿನಾ ಶಿಷ್ಯಸ್ಯ ಮಾನಸಮ್
ತೇಜೋ ವಿನಾ ಸಹಸ್ರಾಂಶೋಃ ಕಥಂ ಸ್ಫುರತಿ ಪಂಕಜಮ್ ॥

ಸೂರ್ಯನ ಕಾಂತಿಯಿಲ್ಲದೆ ಕಮಲವೆಂತರಳದು ಹಾಗೆ ಗುರುರಾಯನ ಉಪದೇಶ ವಾಕ್ಯವಿಲ್ಲದೆ ಶಿಷ್ಯನ ಹೃತ್ಕಮಲವರಳದೆಂಬುದರ್ಥಂ ॥೭೧॥ ಮರಳಿ ದೃಷ್ಟಾಂತರಮಂ ಪೇಳುತಿರ್ದಪಂ.

ಸೂರ್ಯಸ್ಯೋದಯಮಾತ್ರೇಣ ಸೂರ್ಯಕಾಂತಃ ಪ್ರಕಾಶತೇ
ಗುರೋರಾಲೋಕಮಾತ್ರೇಣ ಶಿಷ್ಯೋ ಬೋಧೇನ ಭಾಸತೇ ॥

ಸೂರ್ಯೋದಯ ಮಾತ್ರದಿಂದ ಸೂರ್ಯಕಾಂತಶಿಲೆಯೆಂತು ಪ್ರಕಾಶಿಸುವುದು ಹಾಗೆ ಗುರೂಪದೇಶವಾಕ್ಯಪ್ರಕಾಶಮಾತ್ರದಿಂದ ಶಿಷ್ಯನು ಜ್ಞಾನಯುಕ್ತನಾಗಿ ಪ್ರಕಾಶಿಸುವ ನೆಂಬುದರ್ಥಂ॥೭೨॥ ಬಳಿಕ ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮಿತಿ ಎಂಬ ಮುಂಡಕಶ್ರುತ್ಯನುಸಾರದಿಂ ಆ ಶ್ರವಣಾರ್ಥವಾಗಿ ಗುರುವನಾಶ್ರಯಿಸುವ ಪ್ರಕಾರಮಂ ಪೇಳುತಿರ್ದಪಂ.

ಅದ್ವೈತಪರಮಾನಂದ ಪ್ರಬೋಧೈಕಪ್ರಕಾಶಕಮ್
ಉಪಾಯಂ ಶ್ರುಣುಯಾಚ್ಛಿಷ್ಯಃಸದ್ಗುರುಂ ಪ್ರಾಪ್ಯ ಸಾಂಜಲಿಃ ॥

ಕೈಗಾಣಿಕೆಯುಕ್ತನಾಗಿ ಸದ್ಗುರುವನ್ನೈದಿ ಕೈ ಮುಗಿದುಕೊಂಡು ಎರಡಿಲ್ಲದ ಪರಮಾನಂದ ಪ್ರಬೋಧವನೆ ಮುಖವಾಗಿ ಪ್ರಕಾಶಿಸುವ ಉಪದೇಶರಹಸ್ಯರೂಪೋಪಾಯಮಂ ಶಿಷ್ಯಂ ಪ್ರಶ್ನಪೂರ್ವಕವಾಗಿ ಕೇಳೋದೆಂಬುದರ್ಥಂ ॥೭೩॥

ಕಿಂ ತತ್ತ್ವಂ ಪರಮಂ ಜ್ಞೇಯಂ ಕೇನ ಸರ್ವೇ ಪ್ರತಿಷ್ಠಿತಾ
ಕಸ್ಯ ಸಾಕ್ಷಾತ್ಕ್ರಿಯಾಮುಕ್ತಿಃ ಕಥಯೇತಿ ಸಮಾಸತಃ ॥

ಭೋ ಶ್ರೀ ಗುರುವೆ ತಿಳಿಯಲ್ತಕ್ಕ ಪರತತ್ತ್ವವಾವುದು ಯಾತರಿಂದೀ ಚರಾಚರ ಪ್ರಪಂಚವೆಲ್ಲ ಇರುವುದು. ಯಾರ ಸಾಕ್ಷಾತ್ಕಾರದಿಂದ ಪರಾಪರ ಮೋಕ್ಷವಾಹದು. ಇದನೆಲ್ಲವನು ಸಂಗ್ರಹದಿಂದ ಉಪದೇಶಿಸೆಂಬುದರ್ಥಂ ॥೭೪॥ ಬಳಿಕ ತಸ್ಮೈ ಸ ವಿದ್ವಾನುಪಪನ್ನಾಯ ಸಮ್ಯಕ್ಪ್ರಶಾಂತ ಚಿತ್ತಾಯ ಸಮನ್ವಿತಾಯ ಯೇನಾಕ್ಷರಂ ಪುರುಷಂ ವೇದಸತ್ಯಂ ಪ್ರೋವಾಚತಾಂ ತತ್ತ್ವತೋ ಬ್ರಹ್ಮವಿದ್ಯಾಮಿತಿಯೆಂಬ ಮುಂಡಕ ಶ್ರುತ್ಯನುಸಾರದಿಂದ ಪ್ರಶ್ನೋತ್ತರವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಇತಿ ಪ್ರಶ್ನೀಕೃತೇ ಪೂರ್ವಂ ಶಿಷ್ಯೇಣ ನಿಯತಾತ್ಮನಾ
ಬ್ರೂಯಾತ್ತತ್ತ್ವಂ ಗುರುಸ್ತಸ್ಮೈಯೇನ ಸ್ಯಾತ್ಸಂಸೃತೇರ್ಲಯಃ ॥

ಏಕಾಗ್ರಚಿತ್ತನಾದ ಶಿಷ್ಯನಿಂದೀ ಪ್ರಕಾರದಿಂ ಪ್ರಶ್ನೆ ಮಾಡಲ್ಪಡಲಾಗಿ ಆತನಿಗೋಸ್ಕರ ಗುರುವಾದಾತಂ ಯಾವುದರಿಂದ ಸಂಸಾರಕ್ಕೆ ಲಯವಾಹದು ಆ ತತ್ತ್ವವನು ಉಪದೇಶಿಸೂ ದೆಂಬುದರ್ಥಂ॥೭೫॥ ಬಳಿಕ ಮಾಡಿದ ಪ್ರಶ್ನೆಗೆ ಕ್ರಮದಿಂದುತ್ತರಮಂ ನಿರೂಪಿಸುತಿರ್ದಪಂ.

ಶಿವ ಏವ ಪರಂ ತತ್ತ್ವಂ ಚಿದಾನಂದ ಸದಾಕೃತಿಃ
ಸ ಯಥಾರ್ಥಸ್ತದನ್ಯಸ್ಯ ಜಗತೋ ನಾಸ್ತಿ ನಿತ್ಯತಾ ॥

ಸಚ್ಚಿದಾನಂದಂಗಳೆ ಆಕಾರವಾಗಿ ಉಳ್ಳ ಶಿವನೆ ತಿಳಿಯಲ್ತಕ್ಕ ಪರತತ್ತ್ವವು ಆತನೆ ನಿತ್ಯನು. ಮುಖ್ಯ ಚಿದ್ವಿಜಾತೀಯಮಾಗಿ ತೋರುವೀ ವಿಷ್ಣ್ವಾದಿ ವಿಶ್ವಕ್ಕೆ ಶಿವನಂತೆ ಸನಾತನತ್ವ ವಿಲ್ಲವೆಂಬುದರ್ಥಂ ॥೭೬॥ ಬಳಿಕ ಯಾತರಿಂದೀ ವಿಶ್ವವದೆ ಎಂಬ ಪ್ರಶ್ನೆಗುತ್ತರಮಂ ಪೇಳುತಿರ್ದಪಂ.

ಅಯಥಾರ್ಥಪ್ರಪಂಚೋऽಯಂ ಪ್ರತಿತಿಷ್ಠತಿ ಶಂಕರೇ
ಸದಾತ್ಮನಿ ಯಥಾ ಶುಕ್ತೌ ರಜತತ್ವಂ ವ್ಯವಸ್ಥಿತಮ್ ॥

ಜ್ಞಾನಕ್ರಿಯಾಶಕ್ತಿರೂಪವಾದ ಉಭಯೇಂದ್ರಿಯಂಗಳಿಗೆ ಗೋಚರಮಪ್ಪುದರಿಂ ವ್ಯಾವಹಾರಿಕ ಸದ್ರೂಪನಾದ ಚಿಪ್ಪಿನಲ್ಲಿ ಜ್ಞಾನೇಂದ್ರಿಯ ಮಾತ್ರಕ್ಕೆ ಗೋಚರವಾದ ಉತ್ತರ ಕ್ಷಣದಲ್ಲಿ ಬೋಧಿಸಿ ಹೋಗುವ ಪ್ರಾಚೀತಿಕರಜತಮೆಂತಿರುವುದು ಹಾಗೆ ನಿತ್ಯವಾದ ಶಿವನಲ್ಲಿ ಅನಿತ್ಯಪ್ರಪಂಚವಿರುವುದೆಂಬುದರ್ಥಂ ।।೭೭।। ಬಳಿಕ ಯಾರ ಸಾಕ್ಷಾತ್ಕಾರದಿಂದ ಮುಕ್ತಿಯಹದೆಂಬುದಕ್ಕೆ ಉತ್ತರಮಂ ಪೇಳಲ್ಪಡುತಿರ್ದಪಂ.

ಶಿವೋऽಹಮಿತಿ ಭಾವೇನ ಶಿವೇ ಸಾಕ್ಷಾತ್ಕೃತೇ ಸ್ಥಿರಮ್
ಮುಕ್ತೋಭವತಿ ಸಂಸಾರಾನ್ಮೋಹಗ್ರಂಥೇರ್ವಿಭೇದತಃ ।।

ತಾನೆ ಶಿವನೆಂಬ ದೃಢಭಾವದಿಂ ಶಿವನು ಪ್ರತ್ಯಕ್ಷೀಕರಿಸುತ್ತಿರಲಾಗಿ ಅತ್ಯಂತ ಭೇದವುಳ್ಳ ಸಂಸಾರವೆಂಬ ಅಜ್ಞಾನಗ್ರಂಥಿಯತ್ತಣಿಂ ಬಿಡುಗಡೆಯಂ ಪಡೆವನೆಂಬುದರ್ಥಂ ।।೭೮।। ಬಳಿಕೀ ಪ್ರಕಾರದಿಂ ಪೇಳುತಿರ್ದಡಲ್ಲಿ ಶಿಷ್ಯನಿಂ ನಿಯಾಮಿಸುತಿರ್ದಪಂ.

ಶಿವಂ ಭಾವಯ ಚಾತ್ಮಾನಂ ಶಿವಾದನ್ಯಂ ನ ಚಿಂತಯ
ಏವಂ ಸ್ಥಿರೇ ಶಿವಾದ್ವೈತೇ ಜೀವನ್ಮುಕ್ತೋ ಭವಿಷ್ಯಸಿ ।।

ಭೋ ಶಿಷ್ಯನೆ ನೀನು ನಿನ್ನ ಶಿವನನಾಗಿ ಭಾವಿಸೂ ಆತ್ಮತ್ವ ಸಮಾನವಾದುದರಿಂ ಇದಮೆಂದಂಗುಲಿನಿರ್ದೇಶ್ಯವಾಗಿ ತೋರುವ ವಿಶ್ವವನೂ ಶಿವನಿಂ ಧನ್ಯವಾದುದನಾ ನೀ ನೆನೆಯಲ್ಬೇಡ ಶಿವಭಾವವಾದ ಚಿತ್ಕ್ರಿಯಾಂತರ್ಗತವಾದ ಕಾರಣದಿಂ ಸಾಗರತರಂಗ ನ್ಯಾಯದಿಂ ಶಿವಸ್ವರೂಪವನಾಗಿಯೆ ಚಿಂತಿಸು. ಈ ಪ್ರಕಾರದಿಂ ಶಿವಾದ್ವೈತವು ಸ್ಥಿರವಾಗುತ್ತಿರಲಾಗಿ ಜೀವನ್ಮುಕ್ತನಹ ಎಂಬುದರ್ಥಂ।।೭೮।। ಬಳಿಕ ಶುಶ್ರೂಷಸ್ಥಲಮಂ ಮುಗಿಸುತಿರ್ದಪಂ.

ಏವಂ ಪ್ರಬೋಧಿತಃ ಶಿಷ್ಯಃ ಗುರುಣಾ ಗುಣಶಾಲಿನಾ
ಶಿವಮೇವ ಜಗತ್ಪಶ್ಯನ್ ಜೀವನ್ಮುಕ್ತೋऽಭಿಜಾಯತೇ ।।

ಈ ಪ್ರಕಾರದಿಂ ಜ್ಞಾನವೈರಾಗ್ಯಾದಿ ಗುಣಸಂಪನ್ನನಾದ ಶ್ರೀ ಗುರುವಿನಿಂದ ಉತ್ಕರ್ಷದಿಂ ಬೋಧಿಸಲ್ಪಟ್ಟ ಶಿಷ್ಯನು ವಿಶ್ವವೆಲ್ಲಂ ಶಿವಸ್ವಭಾವ ಭೂತವಾದ ಚಿತ್ಕ್ರಿಯಾ ಶಕ್ತಿಮಯವಾಗಿ ನೋಡುತ್ತ ಜೀವನ್ಮುಕ್ತನಾಗುತ್ತಿಹನೆಂಬುದರ್ಥಂ ।।೮೦।।

## ೨೭. ಸೇವ್ಯಸ್ಥಲ

ಬಳಿಕ ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ ಎಂಬ ಮುಂಡಕೋ ಜೀವನ್ಮುಕ್ತ ಸದ್ವಚನಾನುಸಾರದಿಂ ದೃಷ್ಟಿಃ ಸ್ಥಿರಾ ಯಸ್ಯ ವಿನೈವ ದೃಶ್ಯಂ ವಾಯುಃ ಸ್ಥಿರೋ ಯಸ್ಯ ವಿನಾ ಪ್ರಯತ್ನಂ ಚಿತ್ತಂ ಸ್ಥಿರಂ ಯಸ್ಯ ವಿನ್ಯಾವಲಂಬಂ ಸ ಏವ ಯೋಗೀ ಸ ಗುರುಃ ಸ ಸೇವ್ಯಃ ಹೀಗೆಂಬ ವಚನಾನುಸಾರದಿಂದಲೂ ಗುರೂಪದೇಶಸ್ಥಿರವಾದ ಶುಶ್ರೂಷುವೆ ಸೇವ್ಯನೆಂದು ಆತನ ಸ್ಥಲಮಂ ನಿರೂಪಿಸುತಿರ್ದಪಂ.

ಗುರುವಾಕ್ಯಾಮೃತಾಸ್ವಾದಾತ್ಪ್ರಾಪ್ತಬೋಧಮಹಾಫಲಃ
ಶುಶ್ರೂಷುರೇವ ಸರ್ವೇಷಾಂ ಸೇವ್ಯತ್ವಾತ್ಸೇವ್ಯ ಉಚ್ಯತೇ ॥

ಗುರೂಪದೇಶವಾಕ್ಯಾಮೃತ ಸ್ವಾದದಿಂ ಪ್ರಾಪ್ತವಾದ ಮಹಾಫಲವುಳ್ಳ ಶುಶ್ರೂಷುವೆ ಸಕಲರಿಂದಲೂ ಸೇವ್ಯವಾದ ಕಾರಣ ಸೇವ್ಯನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೮೧॥ ಬಳಿಕಾ ಸೇವ್ಯನೆ ಗುರುವಿನಂತೆ ಪೂಜಿಸಲ್ತಕ್ಕನೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಗುರೂಪದಿಷ್ಟೇ ವಿಜ್ಞಾನೇ ಚೇತಸಿ ಸ್ಥಿರತಾಂ ಗತೇ
ಸಾಕ್ಷಾತ್ಕೃತಶ್ಶಿವಶ್ಶಿಷ್ಯೋ ಗುರುವತ್ಪೂಜ್ಯತೇ ಸದಾ ॥

ಶಿವಾದ್ವೈತರೂಪವಾದ ವಿಶೇಷಜ್ಞಾನವು ಚಿತ್ತದಲ್ಲಿ ಸ್ಥಿರತ್ವವನೈದುತ್ತಿರಲಾಗಿ ಪ್ರತ್ಯಕ್ಷೀಕರಿಸಲ್ಪಟ್ಟ ಶಿವನುಳ್ಳ ಶಿಷ್ಯನು ಗುರುವಿನಂತೆ ಸದಾ ಪೂಜಿಸಲ್ಪಡುವನೆಂಬುದರ್ಥಂ ॥೮೨॥ ಹಾಗಾದಡಾ ಸೇವ್ಯ ಪೂಜಿಸಲ್ತಕ್ಕವನಾಗಲೀ ಗುರುವಿನಂತದೇನು ಕಾರಣ ಪೂಜಿಸಲ್ತಕ್ಕನೆಂಬಲ್ಲಿ ಪೇಳುತಿರ್ದಪಂ.

ಜ್ಞಾನಾದಾಧಿಕ್ಯಸಂಪತ್ತಿರ್ಗುರೋರ್ಯಸ್ಮಾದುಪಸ್ಥಿತಾ
ತಸ್ಮಾದ್ ಜ್ಞಾನಾಗಮಾಚ್ಛಿಷ್ಯೋ ಗುರುವತ್ಪೂಜ್ಯತಾಂ ವ್ರಜೇತ್ ॥

ಶ್ರೀ ಗುರುವಿನಿಂದುಂಟಾದ ಯಾವಜ್ಞಾನದಿಂದ ಅಧಿಕಸಂಪತ್ತಿಯು ಪ್ರಾಪ್ತವಾಯಿತು ಆ ಜ್ಞಾನಾಗಮದತ್ತಣಿಂ ಶಿಷ್ಯನು ಗುರುವಿನಂತೆ ಪೂಜ್ಯತ್ವವನೈದುವನೆಂಬುದರ್ಥಂ ॥೮೩॥ ಬಳಿಕ ಕಾರಣಾಂತರಮಂ ಪೇಳುತಿರ್ದಪಂ.

ಶಿವೋಽಹಮಿತಿಭಾವಸ್ಯ ನೈರಂತರ್ಯಾದ್ವಿಶೇಷತಃ
ಶಿವಭಾವೇ ಸಮುತ್ಪನ್ನೇ ಶಿವವತ್ಪೂಜ್ಯ ಏವ ಸಃ ॥

ತಾನೆ ಶಿವನೆಂಬ ಭಾವವು ಅವಕಾಶವಿಲ್ಲದ ಅಭ್ಯಾಸವಿಶೇಷ ಬಲದಿಂದ ಶಿವಭಾವಸ್ಫುಟವಾಗಲಾಗಿ ಆ ಶುಶ್ರೂಷುವಾದ ಶಿಷ್ಯನು ಶಿವನಂತೆ ಪೂಜ್ಯನೆಂಬುದರ್ಥಂ ॥೮೪॥ ಬಳಿಕೀ ಸೇವ್ಯಂ ಸ ಸಂಗನು ಶಿವಾರ್ತಸಂಗ ರಹಿತನು ಶಿವನಂತೆ ಪೂಜ್ಯ ನೆಂತಪ್ಪನೆಂಬಲ್ಲಿ ಪೇಳುತಿರ್ದಪಂ.

ವಿಷಯಾಸಕ್ತಚಿತ್ತೋಽಪಿ ವಿಷಯಾಸಂಗವರ್ಜಿತಃ
ಶಿವಭಾವಯುತೋ ಯೋಗೀ ಸೇವ್ಯಶ್ಶಿವ ಇವಾಪರಃ ॥

ಶುಶ್ರೂಷುವಾದ ಶಿವಯೋಗಿಯು ವಿಷಯನಿಷ್ಠ ಚಿತ್ತವುಳ್ಳವನಾದರೂ ಶಿವಭಾವ ದಾರ್ಢ್ಯದಿಂದ ವಿಷಯ ಸಂಗರಹಿತನೆ ಸರಿ ಅದು ಕಾರಣದಿಂದೆರಡನೆ ಶಿವನಂತೆ ಸೇವ್ಯನು ಪೂಜ್ಯನೆ ಸರಿಯೆಂಬುದರ್ಥಂ ॥೮೫॥

ಮುಕ್ತಸ್ಸಂಶಯಪಾಶತಃ ಸ್ಥಿರಮನಾ ಬೋಧೇ ಚ ಮುಕ್ತಿಪ್ರದೇ
ಮೋಹಂ ದೇಹಭೃತಾಂ ದೃಶಾ ವಿಘಟಯನ್ ಮೂಲಂ ಮಹಾ ಸಂಸೃತೇಃ

ಸತ್ತಾನಂದಚಿದಾತ್ಮಕೇ ನಿರುಪಮೇ ಶೈವೇ ಪರಸ್ಮಿನ್ಪದೇ
ಲೀನಾತ್ಮಾ ಕ್ಷಯಿತಪ್ರಪಂಚವಿಭವೋ ಯೋಗೀ ಜನೈಸ್ಸೇವ್ಯತೇ ॥

ಶಿವನಹುದೋ ಅಲ್ಲವೋ ಎಂಬ ಸಂದೇಹಪಾಶದಿಂ ಬಿಡಲ್ಪಟ್ಟ ಪರಾಪರ ಮುಕ್ತಿಯ ನೀವ ಶಿವಾದ್ವೈತಜ್ಞಾನದಲ್ಲಿ ಸ್ಥಿರವಾದ ಚಿತ್ತವುಳ್ಳ ಸಂಸಾರಕ್ಕೆ ಮೂಲಕಾರಣವಾದ ಪ್ರಾಣಿಗಳ ಅಜ್ಞಾನಮಂ ಕೃಪಾದೃಷ್ಟಿಯಿಂ ತೊಲಗಿಸುತ್ತ ಸಚ್ಚಿದಾನಂದಸ್ವರೂಪನಾದ ಉಪಮಾತೀತವಾದ ಶಿವನ ಮಹಾಪದದಲ್ಲಿ ಸಮರಸವಾದ ನಿಜರೂಪವುಳ್ಳ ಶಿವಯೋಗೀಶ್ವರಂ ಸ್ವಾತ್ಮಶಕ್ತಿಯಲ್ಲಿ ಅಡಗಿಸಲ್ಪಟ್ಟ ಸಕಲಪ್ರಪಂಚವಿಸ್ತಾರವುಳ್ಳವನಾಗಿ ಜನರಿಂ ಪೂಜಿಸಲ್ಪಡುವನೆಂಬುದರ್ಥಂ ॥೮೭॥ ಈ ಪ್ರಸಾದಿಯ ಅಂಗತ್ರಯಕ್ಕೆ ಈ ಲಿಂಗತ್ರಯವ ಕ್ರಮದಿಂ ಸಂಗಗೊಳಿಸೂದೆಂಬುದು ಸಂಪ್ರದಾಯಂ.

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗೃಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವ ಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಪ್ರಸಾದಿಸ್ಥಲಾಶ್ರಿತ ನವಲಿಂಗಪ್ರಸಂಗೋನಾಮ ಸಪ್ತದಶೀಯಃ ಪರಿಚ್ಛೇದಃ

# ಅಷ್ಟಾದಶಪರಿಚ್ಛೇದ

## ಪ್ರಾಣಲಿಂಗಸ್ಥಲ

ಬಳಿಕ ಅಗಸ್ತ್ಯಂ ಪ್ರಶ್ನೆಯಂ ಮಾಡುತಿರ್ದಪಂ

ಪ್ರಸಾದಿಸ್ಥಲಸಂಬಂಧಾಃ ಸ್ಥಲಭೇದಾಃ ಪ್ರಕೀರ್ತಿತಾಃ
ಪ್ರಾಣಲಿಂಗಿಸ್ಥಲಾರೂಢಾನ್ ಸ್ಥಲಭೇದಾನ್ವದಸ್ವ ಮೇ ॥

ಪ್ರಸಾದಿಸ್ಥಲದಲ್ಲಿ ಸಂಬಂಧಿಸಿಕೊಂಡಿರುವ ಲಿಂಗಸ್ಥಲಭೇದಂಗಳು ಪೇಳಲ್ಪಟ್ಟವು ಇನ್ನು ಪ್ರಾಣಲಿಂಗಿಸ್ಥಲ ರೂಢವಾದ ಲಿಂಗಸ್ಥಲ ಭೇದಂಗಳ ಎನಗೋಸ್ಕರ ಉಪದೇಶಂ ಮಾಡೂದೆಂಬುದರ್ಥಂ ॥೧॥ ಬಳಿಕ ಶ್ರೀ ರೇಣುಕಾಚಾರ್ಯಂ ತದ್ಭೇದಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಸ್ಥಲಾನಾಂ ನವಕಂ ಪ್ರೋಕ್ತಂ ಪ್ರಾಣಲಿಂಗಿಸ್ಥಲಾಶ್ರಿತಮ್
ಆದೌ ಆತ್ಮಸ್ಥಲಂ ಪ್ರೋಕ್ತಮಂತರಾತ್ಮಸ್ಥಲಂ ತತಃ ॥

ಪರಮಾತ್ಮಸ್ಥಲಂ ಪಶ್ಚಾನ್ನಿರ್ದೇಹಾಗಮಸಂಜ್ಞಕಮ್
ನಿರ್ಭಾವಾಗಮಸಂಜ್ಞಂ ಚ ತತೋ ನಷ್ಟಾಗಮಸ್ಥಲಮ್ ॥

ಆದಿಪ್ರಸಾದನಾಮಾಥ ತತೋsಪ್ಯಂತ್ಯಪ್ರಸಾದಕಮ್
ಸೇವ್ಯಪ್ರಸಾದಕಂ ಚಾಥ ಶೃಣು ತೇಷಾಂ ಚ ಲಕ್ಷಣಮ್ ॥

ಪ್ರಾಣಲಿಂಗಿಸ್ಥಲವನಾಶ್ರಯಿಸಿದ ಸ್ಥಲಂಗಳು ಒಂಬತ್ತುಂಟೆಂದು ಪೇಳಲ್ಪಟ್ಟವು. ಅಲ್ಲಿ ಮೊದಲು ಆತ್ಮಸ್ಥಲಂ ಪೇಳಲ್ಪಟ್ಟಿತ್ತು. ಬಳಿಕ ಅಂತರಾತ್ಮಸ್ಥಲವು ಆಮೇಲೆ ಪರಮಾತ್ಮ ಸ್ಥಲವು ತರುವಾಯದಲ್ಲಿ ನಿರ್ದೇಹಾಗಮಸ್ಥಲವು ತದನಂತರದಲ್ಲಿ ಆದಿಪ್ರಸಾದಿಸ್ಥಲವು ಆಮೇಲೆ ಅಂತ್ಯಪ್ರಸಾದಿಸ್ಥಲವು ನಿರ್ಭಾವಾಗಮಸ್ಥಲವು ಆಮೇಲೆ ನಷ್ಟಾಗಮಸ್ಥಲವು ಸೇವ್ಯಪ್ರಸಾದಿಸ್ಥಲವು ಈ ಪ್ರಕಾರವಾದ ನಾಮಧೇಯವುಳ್ಳ ಆ ಒಂಬತ್ತು ಸ್ಥಲಂಗಳ ಅಸಾಧಾರಣ ಧರ್ಮಮಂ ಪೇಳ್ವುದೆನೆ ಕೇಳೆಂಬುದರ್ಥಂ ॥೪॥ ಬಳಿಕ ಯೇಷ ಆತ್ಮಾ ಅಪಹತ ಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಘತ್ಸೋಽಪಿಪಾಸಸ್ಸತ್ಯಕಾಮಃ ಸತ್ಯಸಂಕಲ್ಪಃ ಹೀಗೆಂಬ ಛಾಂದೋಗ್ಯಶ್ರುತ್ಯನುಸಾರದಿಂ ಸೇವ್ಯನೆ ಆತ್ಮನೆಂದು ಪೇಳಲ್ಪಟ್ಟಂ.

### ೨೮. ಆತ್ಮಸ್ಥಲ

ಜೀವಭಾವಂ ಪರಿತ್ಯಜ್ಯ ಯದಾ ತತ್ತ್ವಂ ವಿಭಾವ್ಯತೇ
ಗುರ್ವೋಶ ಬೋಧಯೋಗೇನ ತದಾತ್ಮಾಯಂ ಪ್ರಕೀರ್ತಿತಃ ॥

ಈ ಸೇವ್ಯನೆ ಶ್ರೀ ಗುರುವಿನ ಶಿವಜ್ಞಾನಸಂಬಂಧದಿಂ ಜೀವಭಾವವಂ ಬಿಟ್ಟು ಯಾವಾಗ ಪರತತ್ತ್ವ ಭಾವಿಸಲ್ಪಡುತ್ತಿಹುದು, ಆಗ ಆತ್ಮನೆಂದು ಪೇಳಲ್ಪಟ್ಟನೆಂಬುದರ್ಥಂ ॥೫॥ ಬಳಿಕ ಜೀವನಾರೆಂಬಲ್ಲಿ ಪೇಳುತಿರ್ದಪಂ. ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ ಭಾಗೋ ಆತ್ಮಾ ಸವಿಜ್ಞೇಯಃ ಸ ಚಾನಂತ್ಯಾಯ ಕಲ್ಪತೇ ಎಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ಜೀವಸ್ವರೂಪವನೈದುಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ವಾಲಾಗ್ರಶತಭಾಗೇನ ಸದೃಶೋ ಹೃದಯಸ್ಥಿತಃ
ಅಶ್ನನ್ ಕರ್ಮಫಲಂ ಸರ್ವಮಾತ್ಮಾ ಸ್ಫುರತಿ ದೀಪವತ್ ॥

ಕೂದಲಿನ ತುದಿಯ ಸಹಸ್ರಭಾಗದೊಳಗೆ ಒಂದು ಭಾಗಕೆ ಸಮಾನವಾಗಿ ತಾ ಮಾಡಿದ ಪುಣ್ಯ ಪಾಪಂಗಳಂ ಭುಂಜಿಸುತ್ತಾ ಹೃದಯಕಮಲದಲ್ಲಿರುವನು. ಹಾಗಾದಡೆ ಶರೀರೈಕ್ಯಾದೇಶನಿಷ್ಠನಾದುದರಿಂ ಸರ್ವಾಂಗದೊಳಗಣ ಸುಖ ದುಃಖಾನುಭಾವಮೆಂತು ತಿಳಿವುದೆಂಬಲ್ಲಿ ದೀಪದೃಷ್ಟಾಂತರಮಂ ಪೇಳುತಿರ್ದಪಂ. ದೀಪಂ ಗೃಹದೊಳಗೊಂದು ಕಡೆಯಲ್ಲಿದ್ದರೂ ತನ್ನ ಪ್ರಭೆಯಿಂದ ಗೃಹವನ್ನೆಲ್ಲ ವ್ಯಾಪಿಸಿಕೊಂಡು ಒಳಗಿರುವ ಸಕಲ ವಸ್ತುಗಳನೂ ಪ್ರಕಾಶಿಸುವಂತೆ ಜೀವಂ ಶರೀರೈಕನಿಷ್ಠನಾದರೂ ಪ್ರಜ್ಞಯಾ ಶರೀರಂ ಸಮಾರುಹ್ಯ ಎಂಬ ಶ್ರುತಿಯಿಂ ಬುದ್ಧಿ ವ್ಯಾಪಕವಾದ ಕಾರಣ ಸರ್ವಾಂಗದಲ್ಲಿಯ ಸುಖದುಃಖಾನುಭವುಳ್ಳವನಾಗಿ ಸ್ಫುರಿಸುತ್ತಿಹನೆಂಬುದರ್ಥಂ ॥೬॥ ಬಳಿಕ ಜೀವಂಗೀ ಪ್ರಕಾರವಾದ ರೂಪವು ಸ್ವಾಭಾವಿಕವೋ ಏನೆಂಬಲ್ಲಿ ಪೇಳುತಿರ್ದಪಂ.

ಆತ್ಮಾಪಿ ಸರ್ವಭೂತಾನಾಮಂತಃಕರಣಮಾಶ್ರಿತಃ
ಅಣುಭೂತೋ ಮಲಾಸಂಗಾದಾದಿ ಕರ್ಮನಿಯಂತ್ರಿತಃ ॥

ಪರಮಾರ್ಥಪರಮಾಣುವಿನಂತತಿ ಸೂಕ್ಷ್ಮವಾಗಿ ಪ್ರಾಚೀನಕರ್ಮಪಾಶ ಬದ್ಧನಾಗಿ ಅಹಂಕಾರವನಾಶ್ರಯಿಸಿದನೆಂಬುದರ್ಥಂ ॥೭॥ ಬಳಿಕೀ ಪ್ರಕಾರದಿಂದಹಂಕಾರ ಸಂಬಂಧಮುಂಟಾದುದರಿಂ ದೇಹಸಂಬಂಧವು ಬಂತೆಂದು ಪೇಳುತಿರ್ದಪಂ.

ಜಪಾಯೋಗಾದ್ಯಥಾ ರಾಗಃ ಸ್ಫಟಿಕಸ್ಯ ಮಣೇರ್ಭವೇತ್
ತಥ್ಯಾಹಂಕಾರಸಂಬಂಧಾದಾತ್ಮನೋ ದೇಹಮಾನಿತಾ ॥

ದಾಸಾಳದಹೂವಿನ ಸಂಬಂಧದಿಂದ ಸ್ಫಟಿಕಮಣಿಗೆಂತು ರಕ್ತವರ್ಣಮುಂಟಾಹದು ಹಾಗೆ ಪರಿಮಿತಾಹಂಕಾರ ಸಂಬಂಧದತ್ತಣಿಂದಾತ್ಮನಿಗೆ ದೇಹ ಸಂಬಂಧ ಪ್ರಾಪ್ತಮಾಯಿ ತೆಂಬುದರ್ಥಂ ॥೮॥ ಬಳಿಕ ದೋಷರಹಿತನಾದಾತ್ಮನಿಗುತ್ತರಪ್ರಕಾರದಿಂ ಶರೀರ ಸಂಬಂಧವೆಂತೆನೆ ಪೇಳುತಿರ್ದಪಂ

ಅಶರೀರೋsಪಿ ಸರ್ವತ್ರ ವ್ಯಾಪಕೋsಪಿ ನಿರಂಜನಃ
ಆತ್ಮಾಮಾಯಾಶರೀರಸ್ಥಃ ಪರಿಭ್ರಮತಿ ಸಂಸೃತೌ ॥

ಅಯಮಾತ್ಮಾಬ್ರಹ್ಮ ಎಂಬ ಶ್ರುತಿಯಿಂ ಪರಾಪರ ಮೋಕ್ಷಕ್ಕೆ ಕಾರಣವಾದಂಥ ದ್ದಾಗಿಯೆ ಶರೀರವಾಗಿ ಉಳ್ಳವನಾದುದರಿಂ ಶರೀರವಿಲ್ಲದವನಾದರೂ ಪರಿಚ್ಛೇದವಿಲ್ಲದ ಕಾರಣದಿಂ ವ್ಯಾಪಕನಾದರೂ ದೋಷರಹಿತನಾದುದರಿಂ ನಿರಂಜನನಾದರೂ ಕಲಾದೀಕ್ಷೀತಿ ಪರ್ಯಂತರವಾದ ಮೂವತ್ತು ತತ್ತ್ವಕ್ಕೆ ಕಾರಣವಾದ ತನ್ನ ಅಧೋಮಾಯಾಶಕ್ತಿ ಕಲ್ಪಿತವಾದ ಚಂದ್ರಕಲಾವಿಶಿಷ್ಟಶರೀರವುಳ್ಳವನಾಗಿ ಸಂಸಾರದಲ್ಲಿ ತಿರುಗುತ್ತಿಹನೆಂಬುದರ್ಥಂ. ॥೯॥ ಬಳಿಕೀ ಪ್ರಕಾರವಾದರೂಪವುಳ್ಳ ಜೀವನಿಗಾತ್ಮತ್ವಪ್ರಾಪ್ತಿಯಾಹ ಪ್ರಕಾರಮಂ ಪೇಳುತಿರ್ದಪಂ.

ಆತ್ಮಸ್ವರೂಪವಿಜ್ಞಾನಂ ದೇಹೇಂದ್ರಿಯ ವಿಭಾಗತಃ
ಅಖಂಡಬ್ರಹ್ಮರೂಪೇಣ ತದಾತ್ಮಪ್ರಾಪ್ತಿರುಚ್ಯತೇ ॥

ಉಕ್ತರೂಪ ಮಾಯಿಕ ಸತ್ವಾದಿಗುಣ ಕಾರ್ಯವಾದ ಶರೀರೇಂದ್ರಿಯ ವ್ಯತಿರಿಕ್ತವಾದ ಅಪರಿಚ್ಛಿನ್ನ ಬ್ರಹ್ಮರೂಪದಿಂ ಸ್ವಸ್ವರೂಪ ಜ್ಞಾನವಾವಾಗಮುಂಟಪ್ಪುದಾಗಲಿ ಆತ್ಮಲಾಭಾನ್ನ ಪರಂ ವಿದ್ಯತೇ ನೇತಿ ನೇತ್ಯಾತ್ಮಾ ಸಂಗೃಹ್ಯಃ ಎಂಬ ಶ್ರುತಿಪ್ರಮಾಣದಿಂದ ಆತ್ಮತ್ವಲಾಭ ಮುಂಟಪ್ಪದೆಂದು ಪೇಳಲ್ಪಡುವದೆಂಬುದರ್ಥಂ ll೧೦ll ಬಳಿಕ ಪರಿಚ್ಛೇದವಿಲ್ಲ ಪರಬ್ರಹ್ಮವು ಪರಿಚ್ಛಿನ್ನ ಶರೀರವುಳ್ಳದೇನು ಕಾರಣಮಾಯಿತೆಂಬಲ್ಲಿ ಪೇಳುತಿರ್ದಪಂ.

ನ ಚಾಸ್ತಿ ದೇಹಸಂಬಂಧೋ ನಿರ್ದೇಹಸ್ಯ ಸ್ವಭಾವತಃ
ಅಜ್ಞಾನಕರ್ಮಯೋಗೇನ ದೇಹೀ ಭವತಿ ಭುಕ್ತಯೇ ll

ಅಶರೀರನಾದ ಪರಮಾತ್ಮನಿಗೆ ಪರಮಾರ್ಥದಿಂ ಶರೀರಸಂಬಂಧವಿಲ್ಲವೆ ಹಾಗಾದರೂ ಯಥಾ ನೃಪಃ ಸಾರ್ವಭೌಮಃ ಪ್ರಭಾವಮೋದ ಬೃಂಹಿತಃ ಕ್ರೀಡನ್ಕರೋತಿ ಪದಾತಿ ಧರ್ಮಾಸ್ತ ಧರ್ಮಧರ್ಮಿತಃ ಹೀಗೆಂಬ ಶಿವದೃಷ್ಟಿ ಶಾಸ್ತ್ರೋಕ್ತ ದೃಷ್ಟಾಂತರದಿಂದ ಖಂಡರಸಾಸ್ವಾದನದಿಂದುಬ್ಬಿದ ಪರಮಾತ್ಮನು ರಾತ್ರಿಯಲ್ಲಿ ಛತ್ರಚಾಮರಾದಿಗಳಂ ಪರಿಹರಿಸಿ ತನ್ನ ಪ್ರಭಾಮೋದದಿಂ ಸದಾಚಾರಿಯಾಗಿ ಸಂಚರಿಸುವ ಸಾರ್ವಭೌಮನಂತಖಂಡ ರಸಾಸ್ವಾದನದಲ್ಲಿ ಇಚ್ಛೆಯುಂಟಾಗಲಾಗಿ ತನ್ನ ಸ್ವತಂತ್ರತೆಯಿಂ ಕಲ್ಪಿಸಲ್ಪಟ್ಟ ಆಣವಾದಿ ಮಲಸಂಬಂಧದಿಂ ಘೃತಕೀಟನ್ಯಾಯದಿಂದೇಕದೇಶದಲ್ಲಿ ಶರೀರವುಳ್ಳವನಾಗಿಹನು. ಅದು ಕಾರಣದಿಂದಂಶೀಭೂತನಿಗೆ ಅಜ್ಞಾನಾದಿಮಲಸಂಬಂಧವುಂಟಾದ ಕಾರಣ ಸಾರ್ವಭೌಮನಂತೆ ನಾನು ಶಿವನೆಂಬ ಜ್ಞಾನಮಿಲ್ಲವಾಯಿತೆಂದು ತಿಳಿವುದು. ಈ ಅರ್ಥದಲ್ಲಿ ಸ ವೈನ್ಯವಂತಸ್ಮಾದೇಕಾಕೀ ನ ರಮತೇ ಸ ದ್ವಿತೀಯಮೈಚ್ಛತ್ ಸ ಯೇತಾವಾನಾಸತ್ಸ ಷ್ಟಾತದೇವಾನುಪ್ರಾವಿಶ ತತದನುಪ್ರವಿಶ್ಯ ಸಚ್ಚತ್ಯತ್ವಚ್ಚಾಭವೇತ್ ಎಂಬ ಶ್ರುತಿಯೂ ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ ಹೀಗೆಂಬ ಭಗವದ್ವಾಕ್ಯವು ಉಂಟಾಗಿರುವುದು. ಶಿವನು ನಿರಂಶನಾದರೂ ಸ್ವತಂತ್ರನಪ್ಪುದರಿಂ ತಂತ್ರಪರಿಕಲ್ಪಿತಾಂಶಭೇದಂ ವತ್ಸಾಪಹರಣ ದೃಷ್ಟಾಂತರದಿಂದುಂಟಾಗಿರುವುದು. ಕರ್ತೃ ನಿರೂಪಿತವಾದ ನಿರ್ಮಾಣಾದಿ ಕ್ರಿಯೆಯು ಘಟಾದಿ ಕರ್ಮದಲ್ಲಿಯೆ ವಿಶ್ರಾಂತಿಯ ಪಡೆವುದಲ್ಲದೆ ಕುಲಾಲಾದ ಕರ್ತೃಗಳಲ್ಲಿ ವಿಶ್ರಾಂತಿಯ ಪಡೆಯದೆಂಬುದರಿಂದಲೂ ಯೋಗಿದೃಷ್ಟಾಂತರದಿಂದಲೂ ಕಾರ್ಯಕೋಟಿ ಪ್ರವಿಷ್ಟನಾದ ಜೀವರಿಗೆ ಬಂಧವಲ್ಲದೆ ಶಿವನಿಗೆ ಬಂಧವಿಲ್ಲವೆಂಬುದು ತಾತ್ಪರ್ಯಂ. ಪರಮಾರ್ಥ ವಿಚಾರದಿಂದಾದಡೆ ಆತ್ಮವಾ ಇದಮೇಕಮೇವಾಗ್ರ ಆಸೀತೆಂಬ ಶ್ರುತಿಯಿಂ ಕಲಾಸಪ್ತದಶಂ ಜ್ಞೇಯಾ ಸ್ವಾಂತರ್ಲೀನ ಚರಾಚರಂ ಎಂಬಾಗಮೋಕ್ತಿಯಿಂದಂ ಪೂರ್ವಂ ಜಗತ್ಸರ್ವಂ ಪ್ರಲಯೇ ಪರಮೇಶ್ವರಮಾಯಾಭಿನ್ನೇ ಸ್ವಮಾಯಾಖ್ಯಕಾರಣಾ ಭೇದರೂಪಕಂ ವರ್ತತೇ ವಾಸನಾ ರೂಪಿಣ್ಯೇವ ನಾನಾ ಭಾವರೂಪತಃ – ಹೀಗೆಂಬ ಪುರಾಣವಚನದಿಂದಲೂ ಸಮಸ್ತವಾದ ವಿಶ್ವವು ಶಿಖಂಡ್ಯಂಡರಸನ್ಯಾಯದಿಂ ಸ್ವಾತ್ಮಸಮವೇತಚಿತ್ಕ್ರಿಯಾ ಸಾಮರಸ್ಯರೂಪ ಚಿದಂಬರಶಕ್ತಿಯಲ್ಲಿ ತಾದಾತ್ಮ್ಯದಿಂದಿರುವುದೆಂಬುದರಿಂ ವಹ್ನಿಯ ಕಿಡಿಗಳಂತೆ ತನ್ನೊಳಡಗಿರುವ ಚಿತ್ಕಣಗಳಂ ತತ್ಕರ್ಮಾನುಸಾರದಿಂ ಸೃಷ್ಟಿಸಿ ರಕ್ಷಿಸಿ ಸಂಹರಿಸಿ ಮೋಹಿಸಿ ಅನುಗ್ರಹಿಸುತ್ತಿರುವನೆಂದು ಮುಂದೆ ಪರಮಾತ್ಮಸ್ಥಲದಲ್ಲಿ ಪೇಳುವ

ಪ್ರಕಾರದಿಂದಾವ ಶಂಕಾಕಳಂಕವೂ ಇಲ್ಲವೆಂಬುದು ರಹಸ್ಯಂ ॥೧೧॥ ಹಾಗಾದಡಿವಗೆ ಪೆಸರೇನೆಂಬಲ್ಲಿ ಪೇಳುತಿರ್ದಪಂ.

ನಾಸೌ ದೇವೋ ನ ಗಂಧರ್ವೋ ನ ಯಕ್ಷೋ ನೈವ ರಾಕ್ಷಸಃ
ನ ಮನುಷ್ಯೋ ನ ತಿರ್ಯಕ್ಚ ನ ಚ ಸ್ಥಾವರವಿಗ್ರಹಃ
ತತ್ತಚ್ಛರೀರಯೋಗೇನ ತತ್ತನ್ನಾಮ್ನಾ ವಿರಾಜತೇ ॥

ಈ ಜೀವನು ದೇವನೂ ಅಲ್ಲ ಗಂಧರ್ವನೂ ಅಲ್ಲ ಯಕ್ಷನೂ ಅಲ್ಲ ರಾಕ್ಷಸನೂ ಅಲ್ಲ ಮನುಷ್ಯನೂ ಅಲ್ಲ ಮೃಗ ಪಕ್ಷಿ ಮೊದಲಾದ ತಿರ್ಯಕ್ಪ್ರಾಣಿಯೂ ಅಲ್ಲ ವೃಕ್ಷ ಮೊದಲಾದ ಸ್ಥಾವರಪ್ರಾಣಿಯೂ ಅಲ್ಲ ಮತ್ತೇನೆಂದರೆ ಆಯಾ ಶರೀರಸಂಬಂಧದಿಂದಾಯಾ ನಾಮಂಗಳಿಂ ಶೋಭಿಸುತ್ತಿಹನೆಂಬುದರ್ಥಂ ॥೧೨॥ ಹಾಗಾದಡೀ ಜೀವನೆಂಥವನೆಂಬಲ್ಲಿ ಸ್ವಸ್ವಕೃತಸುಕೃತದುಷ್ಕೃತ ಕರ್ಮಣಾ ಪರಮೇಶ್ವರ ಪ್ರೇರಣಯಾ ಬದ್ಧಾಃ ಸಂಸಾರಿಣೋ ಜೀವಾಃ ಹೀಗೆಂಬ ವೃದ್ಧಜಾಬಾಲಶ್ರುತ್ಯನುಸಾರದಿಂ ದೃಗ್ಯುಗ್ಮೈಕ್ಯಾವಲೋಕನದಂತೆದ್ವೈತಾದ್ವೈತ ಸಾಮರಸ್ಯಾತ್ಮಕನಾದ ಶಿವನ ತಂತ್ರತೆಯಿಂ ಕಲ್ಪಿಸಲ್ಪಟ್ಟ ಜೀವೋಪಾಧಿಯಂ ನಾನಾ ರೂಪವಾಗಿ ಶಿವನ ಕ್ರೀಡಾಭಾಂಡರೂಪನೆಂದು ಪೇಳುತಿರ್ದಪಂ.

ನಾನಾಕರ್ಮವಿಪಾಕಾಶ್ಚ ನಾನಾಯೋನಿ ಸಮಾಶ್ರಿತಾಃ
ನಾನಾಯೋಗಸಮಾಪನ್ನಾ ನಾನಾಬುದ್ಧಿವಿಚೇಷ್ಟಿತಾಃ ॥

ನಾನಾಮಾರ್ಗಸಮಾರೂಢಾ ನಾನಾ ಸಂಕಲ್ಪಕಾರಿಣಃ
ಅಸ್ವತಂತ್ರಾಶ್ಚ ಕಿಂಚಿಜ್ಞಾಃ ಕಿಂಚಿತ್ಕರ್ತೃತ್ವಹೇತವಃ

ಲೀಲಾಭಾಜನತಾಂ ಪ್ರಾಪ್ತಾಃ ಶಿವಸ್ಯ ಪರಮಾತ್ಮನಃ॥

ನಾನಾ ರೂಪವಾದ ಪ್ರಾಚೀನ ಕರ್ಮಪರಿಪಾಕವಶದಿಂ ದೇವಾಃ ಷೋಡಶ ಲಕ್ಷಾಣಿಯೆಂದು ಪೂರ್ವದಲ್ಲಿ ಉದಾಹರಿಸಿದ ಸ್ಕಾಂದಪುರಾಣ ವಚನಾನುಸಾರದಿಂ ದೇವ ತಿರ್ಯಙ್ಮನುಷ್ಯಾದಿ ನಾನಾಯೋನಿಗಳನೈದಿ ನಾನಾ ವಿಧವಾದ ಸ್ವಭೇದೋಪಾಯ ಚಿಂತಕರಾಗಿ ಹಲವು ಬುದ್ಧಿಗಳುಳ್ಳವರಾಗಿ ವೈಷ್ಣವಾದಿ ನಾನಾದರ್ಶನ ಪ್ರವಿಷ್ಟರಾಗಿ ನಾನಾ ಸಂಕಲ್ಪಯುಕ್ತರಾಗಿ ಕಿಂಚಿಜ್ಞರಾಗಿ ಕಿಂಚಿತ್ಕರ್ತೃತ್ವಕ್ಕೆ ಕಾರಣರಾಗಿ ಸ್ವತಂತ್ರತೆ ಇಲ್ಲದ ಜೀವರು ಶಿವನ ಲೀಲಾಭಾಂಡವಾಹತನವ ಪಡೆದಿಹರೆಂಬುದರ್ಥಂ ॥೧೫॥ ಬಳಿಕೀ ಜೀವದೇನ ನೈದುದೆಂಬಲ್ಲಿ ಪೇಳುತಿರ್ದಪಂ.

ಚೋದಿತಾಃ ಪರಮೇಶೇನ ಸ್ವಸ್ವಕರ್ಮಾನುರೂಪತಃ
ಸ್ವರ್ಗಂ ವಾ ನರಕಂ ವ್ಯಾಪಿ ಪ್ರಾಣಿನೋ ಯಾಂತಿ ಕರ್ಮಿಣಃ ॥

ಕರ್ಮಪಾಶಬದ್ಧರಾದ ಪ್ರಾಣಿಗಳು ತಮ್ಮ ತಮ್ಮ ಕರ್ಮಾನುಸಾರದಿಂ ಶಿವನಿಂ ಪ್ರೇರಕರಾಗಿ ಸ್ವರ್ಗವನಾಗಲಿ ನರಕವನಾಗಲಿಯೈದುವರೆಂಬುದರ್ಥಂ ॥೧೬॥ ಬಳಿಕಾ ಜೀವರಿಗೆ ಸ್ವರ್ಗನರಕಗಳಲ್ಲಿಯಾದರೂ ಸ್ಥೈರ್ಯಮುಂಟೋ ಇಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ಪುನಃ ಕರ್ಮಾವಶೇಷೇಣ ಜಾಯಂತೇ ಗರ್ಭಕೋಟರಾತ್
ಜಾತಾ ಮೃತಾಃ ಪುನರ್ಜಾತಾಃ ಪುನರ್ಮರಣಭಾಜಿನಃ ॥

ಭ್ರಮಂತಿ ಘೋರಸಂಸಾರೇ ವಿಶ್ರಾಂತಿಕಥಯಾ ವಿನಾ ।

ಮರಳಿ ತಮ್ಮ ಕರ್ಮಶೇಷದಿಂ ಮಾತೃಗರ್ಭಕೋಟರದಿಂ ಪುಟ್ಟಿ ಸತ್ತು ಮರಳಿ ಹುಟ್ಟಿ ಮತ್ತೆ ಮರಣವನ್ನೈದಿ ಸ್ವಸ್ವರೂಪದ ವಿಶ್ರಾಂತಿವಾರ್ತೆಯೂ ಇಲ್ಲದೆ ಘೋರ ಸಂಸಾರದಲ್ಲಿ ತಿರುಗುತ್ತಿಹರೆಂಬುದರ್ಥಂ ॥೧೭॥ ಹಾಗಾದಡೀ ಸಂಸಾರಚಕ್ರ ಪರಿಭ್ರಮಣವು ನಿತ್ಯವೋ ಏನೆಂಬಲ್ಲಿ ಪೇಳುತಿರ್ದಪಂ

ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್
ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶತೇ ॥

ಜೀವತ್ವಮಾಣವಾದಿ ಮಲಕಲ್ಪಿತವಾದಂಥಾದು. ಅದು ಕಾರಣದಿಂ ದುಃಖ ಸರ್ವ ಸ್ವರೂಪವು. ಆ ಈ ಜೀವತ್ವವು ಗುರೂಪದಿಷ್ಟ ಶಿವಾದ್ವೈತಬೋಧೆಯತ್ತಣಿಂ ನಿರಾಕರಿಸಿ ದಂಥಾದಾಗಿ ಸ್ವಸ್ವರೂಪಜ್ಞಾನಶಕ್ತಿಸಾಮರ್ಥ್ಯಂ ಪ್ರಕಾಶಿಸಲ್ಪಡುತ್ತಿಹುದೆಂಬುದರ್ಥಂ ॥೧೮॥

## ೨೯. ಅಂತರಾತ್ಮಸ್ಥಲ

ಬಳಿಕ ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ನ ಲಿಪ್ಯತೇ ಚಾಕ್ಷುಷೈರ್ಬಾಹ್ಯ ದೋಷೈಃ ಏಕಸ್ತಥಾ ಸರ್ವಭೂತಾಂತರಾತ್ಮಾ ನ ಲಿಪ್ಯತೇ ಲೋಕಸುಖೇನ ಬಾಹ್ಯಃ ಎಂಬ ಕಠವಲ್ಲಿ ಶ್ರುತ್ಯನುಸಾರದಿಂ ನಿರಾಕರಿಸಲ್ಪಟ್ಟ ಜೀವಭಾವವುಳ್ಳ ಆತ್ಮನಿಗೆ ಅಂತರಾತ್ಮತ್ವ ಉಂಟಹುದೆಂದು ನಿರೂಪಿಸುತಿರ್ದಪಂ.

ಯದಾ ನಿರಸ್ತಂ ಜೀವತ್ವಂ ಭವೇದ್ಗುರ್ವನುಬೋಧತಃ
ತದಾಂತರಾತ್ಮಭಾವೋಽಪಿ ನಿರಸ್ತಸ್ಯ ಭವೇದ್ಧ್ರುವಮ್ ॥

ಗುರೂಪದೇಶದತ್ತಣಿಂ ಜೀವಭಾವವು ಯಾವಾಗ ನಿವಾರಿಸಲ್ಪಟ್ಟಿತ್ತು ಆಗ ನಿರಾಕರಿಸಲ್ಪಟ್ಟ ಜೀವಭಾವವುಳ್ಳಾತ್ಮನಿಗೆ ಅಂತರಾತ್ಮಭಾವಮುಂಟಾಹದೆಂಬುದು ನಿಶ್ಚಯ ವೆಂಬುದರ್ಥಂ ॥೧೯॥ ಬಳಿಕ ಅಂತರಾತ್ಮಸ್ವರೂಪಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ದೇಹಸ್ಥಿತೋಽಪ್ಯಯಂ ಜೀವಃ ದೇಹಸಂಗವಿವರ್ಜಿತಃ
ಬೋಧಾತ್ಪರಾತ್ಮಭಾವಿತ್ವಾದಂತರಾತ್ಮೇತಿ ಕೀರ್ತಿತಃ ॥

ಈ ಜೀವಂ ದೇಹದಲ್ಲಿದ್ದವನಾಗಲಿ ಸ್ವಸ್ವರೂಪಜ್ಞಾನದತ್ತಣಿಂ ಪರಮಾತ್ಮ ಭಾವವುಳ್ಳವನಾಹತನದಿಂದಂತರಾತ್ಮನೆಂದು ಪೇಳಲ್ಪಡುತ್ತಿಹನೆಂಬುದರ್ಥಂ॥೨೦॥ ಬಳಿಕೀ ಪ್ರಕಾರಾಂತರದಿಂ ಪೇಳುತಿರ್ದಪಂ.

ಆತ್ಮಾಂತರಾಲವರ್ತಿತ್ವಾತ್ ಜೀವಾತ್ಮಪರಮಾತ್ಮನೋಃ
ಯೋಗಾದುಭಯಧರ್ಮಾಣಾಮಂತರಾತ್ಮೇತಿ ಕೀರ್ತಿತಃ॥

ನಿರಾಕರಿಸಲ್ಪಟ್ಟ ಜೀವಭಾವವುಳ್ಳ ಸೇವ್ಯನು ಶಿಷ್ಯೋಪದೇಶ ಸಮಯದಲ್ಲಿ ಜೀವಾತ್ಮ

ಪರಮಾತ್ಮರ ಮಧ್ಯದಲ್ಲಿರುವುದರಿಂದಾಗ ಶಿಷ್ಯಬುದ್ಧಿ ಶಿಕ್ಷಕನಾಗಿ ಅಂತರ್ಯಾಮಿ ಯಾಹತನದಿಂ ಶಿವಧರ್ಮಯೋಗಮುಂಟಾದ ಕಾರಣದಿಂ ಆಹ ವ್ಯವಹಾರಗಳಿಂ ಜೀವಧರ್ಮಯೋಗವಿರುವುದರಿಂದುಭಯಧರ್ಮಸಂಬಂಧದತ್ತಣಿಂ ಅಂತರಾತ್ಮನೆಂದು ಪೇಳಲ್ಪಟ್ಟನೆಂಬುದರ್ಥಂ ॥೨೧॥ ಬಳಿಕ ಪ್ರಕಾರಾಂತರದಿಂ ಪೇಳುತಿರ್ದಪಂ.

ಅಹಂಕಾರಸ್ಥ್ಯಸಂಬಂಧಾನ್ಮನುಷ್ಯತ್ವಾದಿವಿಭ್ರಮಃ
ನ ಸ್ವಭಾವ ಇತಿ ಜ್ಞಾನದಂತರಾತ್ಮೇತಿ ಕಥ್ಯತೇ ॥

ಪರಿಚ್ಛಿನ್ನಾಹಂಭಾವವಶದಿಂ ಮನುಷ್ಯತ್ವಾದಿ ಭ್ರಾಂತಿಯುಂಟಾಹದು ಸ್ವಾಭಾವಿಕವಲ್ಲಮೆಂಬ ಜ್ಞಾನದಿಂದಂತರಾತ್ಮನೆಂದು ಪೇಳಲ್ಪಡುವನೆಂಬುದರ್ಥಂ ॥೨೨॥ ಬಳಿಕೀ ಸೇವ್ಯನಿಗೆ ಶರೀರಸಂಬಂಧಮುಂಟೋ ಇಲ್ಲವೋ ಎಂಬಲ್ಲಿ ದೃಷ್ಟಾಂತರಪೂರ್ವಕವಾಗಿ ಸೂತ್ರತ್ರಯದಿಂ ಪೇಳುತಿರ್ದಪಂ.

ಯಥಾ ಪದ್ಮಪಲಾಶಸ್ಯ ನ ಸಂಗೋ ವಾರಿಣಾ ಭವೇತ್
ತಥಾ ದೇಹಜುಷೋಽಪ್ಯಸ್ಯ ನ ಶರೀರೇಣ ಸಂಗತಿಃ॥

ಪದ್ಮಪತ್ರ ಉದಕದೊಳಗಿದ್ದರೂ ತಲ್ಲೇಪವೆಂತಿಲ್ಲವೋ ಹಾಗೆ ದೇಹದೊಳಗಿದ್ದ ಈ ಸೇವ್ಯನಿಗೆ ದೇಹಪ್ರಯುಕ್ತವಾದ ಬಾಧೆ ಇಲ್ಲವೆಂಬುದರ್ಥಂ ॥೨೩॥ ಮರಳಿ ದೃಷ್ಟಾಂತರಮಂ ಪೇಳುತಿರ್ದಪಂ.

ನೀಡಸ್ಥಿತೋ ಯಥಾ ಪಕ್ಷೀ ನೀಡಾದ್ಭಿನ್ನಃ ಪ್ರದೃಶ್ಯತೇ
ದೇಹಸ್ಥಿತಸ್ತಥಾತ್ಮಾಽಯಂ ದೇಹಾದನ್ಯಃ ಪ್ರಕಾಶ್ಯತೇ ॥

ಗೂಡಿನೊಳಗಿರುವ ಪಕ್ಷಿಯು ಗೂಡಿನಿಂ ಭಿನ್ನವಾಗಿ ಹೇಗೆ ತೋರುತ್ತಿಹುದು ಹಾಗೆ ದೇಹದೊಳಗಿರುವ ಈ ಆತ್ಮನು ದೇಹದಿಂ ಭಿನ್ನವಾಗಿ ತೋರುತ್ತಿಹನೆಂಬುದರ್ಥಂ ॥೨೪॥ ಮತ್ತುಂ ಒಂದು ದೃಷ್ಟಾಂತರಮಂ ಪೇಳುತಿರ್ದಪಂ.

ಆಚ್ಛಾದ್ಯತೇ ಯಥಾ ಚಂದ್ರೋ ಮೇಘೈರಾಸಂಗವರ್ಜಿತೈಃ
ತಥಾಽಽತ್ಮಾ ದೇಹಸಂಘಾತೈರಸಂಗಪರಿವೇಷ್ಟಿತಃ ॥

ಚಂದ್ರನು ತನಗೆ ಸರ್ವತ್ರ ಸಂಗರಹಿತವಾದ ಮೇಘಗಳಿಗೆಂತು ಮುಚ್ಚಲ್ಪಡುವನು ಹಾಗೆ ಹೋಗಲ್ಪಟ್ಟ ಜೀವಭಾವವುಳ್ಳ ಸೇವ್ಯನು ಸ್ಥೂಲದೇಹಸಮೂಹಂಗಳಿಂ ಸಂಗರಹಿತನಾಗಿ ಪರಿವೇಷ್ಟಿಸಲ್ಪಡುವನೆಂಬುದರ್ಥಂ ॥೨೫॥ ಹಾಗಾದಡೀ ಸೇವ್ಯನೇನ ಮಾಡುತ್ತಿಹನೆಂಬಲ್ಲಿ ಪೇಳುತಿರ್ದಪಂ.

ನಿರ್ಮಮೋ ನಿರಹಂಕಾರೋ ನಿರಸ್ತೋಪಾಧಿವಿಪ್ಲವಃ
ದೇಹಸ್ಥೋಽಪಿ ಸದಾ ಹ್ಯಾತ್ಮಾ ಶಿವಂ ಪಶ್ಯತಿ ಯೋಗತಃ ॥

ನಾನು ನನ್ನದೆಂಬ ಅಭಿಮಾನವಿಲ್ಲದ ನಿವಾರಿಸಲ್ಪಟ್ಟ ಸಕಲೋಪಾಧಿಬಾಧೆಯುಳ್ಳ ಸೇವ್ಯನು ದೇಹಮಧ್ಯಗತನಾಗಿದ್ದರೂ ತನ್ನ ಆತ್ಮಜ್ಞಾನಯೋಗಸಾಮರ್ಥ್ಯದಿಂದೆಲ್ಲಾಗಳೂ ಶಿವನ ಕಾಣುತ್ತಿಹನೆಂಬುದರ್ಥಂ ॥೨೬॥ ಹಾಗಾದಡೆ ಶಿವನುಂ ಕಾಣುತ್ತಿಹರುವೀ ಸೇವ್ಯನೆಂತು

ಪ್ರಕಾಶಿಸುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಭೋಕ್ತೃಭೋಜ್ಯಪರಿತ್ಯಾಗಾತ್ ಪ್ರೇರಕಸ್ಯ ಪ್ರಸಾದತಃ
ಭೋಕ್ತೃತಾಭಾವಗಲಿತಃ ಸ್ಫುರತ್ಯಾತ್ಮಾ ಸ್ವಭಾವತಃ ॥

ಭೋಕ್ತೃವಾದ ಜೀವನೊಡನೆ ಭೋಜ್ಯವಿಷಯ ಪರಿತ್ಯಾಗದತ್ತಣಿಂ ಪ್ರೇರಕನಾದೀಶ್ವರನ ಪ್ರಸಾದವಶದಿಂ ಭೋಕ್ತೃಭಾವ ಸಡಿಲಿದಾತನಾಗಿ ಜೀವಭಾವಸಡಿಲಿದಾತನಾಗಿ ಎಂಬುದರ್ಥಂ. ಜೀವೇಶ್ವರಸಾಧಾರಣವಾದ ಆತ್ಮತ್ವದಿಂ ಪ್ರಕಾಶಿಸುತ್ತಿಹನೆಂಬುದರ್ಥಂ ॥೨೭॥ ಬಳಿಕಂತರಾತ್ಮಸ್ಥಲಮಂ ಮುಗಿಸುತಿರ್ದಪಂ.

ಸರ್ವೇಷಾಂ ಪ್ರೇರಕತ್ವೇನ ಶಂಭುರಂತಸ್ಥಿತಸ್ಸದಾ
ತತ್ಪರಜ್ಞಾನಯೋಗೇನ ಯೋಗೀ ನಂದತಿ ಮುಕ್ತವತ್ ॥

ಪ್ರೇರಕನಾದ ಶಿವನು ಸಕಲರೊಳಗೂ ಸದಾ ಇರುವನು. ಆ ಶಿವಪರವಾದ ಜ್ಞಾನಯೋಗದಿಂ ಶಿವಯೋಗಿಯು ಜೀವನ್ಮುಕ್ತನೆಂತು ಸುಖಿಸುತ್ತಿಹನೆಂಬುದರ್ಥಂ ॥೨೮॥

## ೩೦. ಪರಮಾತ್ಮಸ್ಥಲ

ಬಳಿಕ ಏವಂ ವಿದಿತ್ವಾ ಪರಮಾತ್ಮರೂಪಂ ಗುಹಾಶಯಂ ನಿಷ್ಕಲಮದ್ವಿತೀಯಮ್ ಸಮಸ್ತ ಸಾಕ್ಷಿಂ ಸದಸದ್ವಿಹೀನಂ ಪ್ರಯಾತಿ ಶುದ್ಧಂ ಪರಮಾತ್ಮ ರೂಪಮ್ ಹೀಗೆಂಬ ಕೈವಲ್ಯಶ್ರುತ್ಯನುಸಾರದಿಂ ಈ ಅಂತರಾತ್ಮನೆ ನಿರ್ಮಲನಾಹತನದಿಂ ಪರಮಾತ್ಮನೆಂದು ಪೇಳಲ್ಪಡುವನೆಂಬುದರ್ಥಂ ॥೨೯॥ ಬಳಿಕ

ನಿರ್ಧೂತೇ ತತ್ವಬೋಧೇನ ಮಲೇ ಸಂಸಾರ ಕಾರಣೇ
ಸಾಮರಸ್ಯಾತ್ಪರಾತ್ಮಸ್ಥಾತ್ಪರಮ್ಯಾತ್ಮಾಯ ಮುಚ್ಯತೇ ॥

ಸಂಸಾರಕ್ಕೆ ಕಾರಣವಾದ ಮಲವು ನಿವಾರಿಸಲ್ಪಡುತ್ತಿರಲಾಗಿ ಪರಮಾತ್ಮನಿಷ್ಠವಾದ ಸಮರಸ ಭಾವದತ್ತಣಿಂದೀಯಂತರಾತ್ಮನೆ ಪರಮಾತ್ಮನೆಂದು ಪೇಳಲ್ಪಡುವನೆಂಬುದರ್ಥಂ ॥೩೦॥ ಬಳಿಕ ಪರಮಾತ್ಮನೆಂದರಾರೆಂಬಲ್ಲಿ ಪೇಳುತಿರ್ದಪಂ.

ಸರ್ವೇಷಾಮಾತ್ಮಭೇದಾನಾಮುತ್ಕೃಷ್ಟತ್ವಾತ್ಸ್ವತೇಜಸಾ
ಪರಮಾತ್ಮಾ ಶಿವಃ ಪ್ರೋಕ್ತಸ್ಸರ್ವಗೋಽಪಿ ಪ್ರಕಾಶವಾನ್ ॥

ತನ್ನ ನಿಜಪ್ರಕಾಶದಿಂ ಸರ್ವವ್ಯಾಪಕವಾದ ಕಾಂತಿಯುಳ್ಳವನಾದರೂ ಶಿವನು ಸಮಸ್ತವಾದ ಆತ್ಮಭೇದಂಗಳಿಗೂ ಉತ್ಕೃಷ್ಟವಾಹತನದಿಂ ಪರಮಾತ್ಮನೆಂದು ಪೇಳಲ್ಪಡುವನೆಂಬುದರ್ಥಂ ॥೩೧॥ ಬಳಿಕಾಂತರದಿಂ ಪರಮಾತ್ಮಲಕ್ಷಣಮಂ ಪೇಳುತಿರ್ದಪಂ.

ಬ್ರಹ್ಮಾಂಡಬುದ್ಬುದಸ್ತೋಮಾ ಯಸ್ಯ ಮಾಯಾಮಹೋದಧೌ
ಉನ್ಮಜ್ಜಂತಿ ನಿಮಜ್ಜಂತಿ ಪರಮಾತ್ಮಾ ಸ ಉಚ್ಯತೇ ॥

ಬ್ರಹ್ಮಾಂಡಗಳೆಂಬ ಗುಳ್ಳೆಗಳ ಸಮೂಹವು ಯಾವಾತನ ಮಾಯೆಯೆಂಬ

ಸಮುದ್ರದಲ್ಲಿಯೆ ಏಳುತ್ತಿಹವು ಮುಳುಗುತ್ತಿಹವು ಆತಂ ಪರಮಾತ್ಮನೆಂದು ಪೇಳಲ್ಪಡುವನೆಂಬುದರ್ಥಂ ॥೩೨॥ ಬಳಿಕಾ ಸ್ವರೂಪವನೆ ದೃಷ್ಟಾಂತರಪೂರ್ವಕವಾಗಿ ಸೂತ್ರತ್ರಯದಿಂ ಪೇಳುತಿರ್ದಪಂ.

ಯಸ್ಮಿನ್ ಜ್ಯೋತಿರ್ಗಣಾಸ್ಸರ್ವೇ ಸ್ಫುಲಿಂಗಾ ಇವ ಪಾವಕಾತ್
ಉತ್ಪತ್ಯ ವಿಲಯಂ ಯಾಂತಿ ತದ್ರೂಪಂ ಪರಮಾತ್ಮನಃ ॥

ಯಾವ ವಸ್ತುವಿನಲ್ಲಿ ಸಮಸ್ತವಾದ ಜೀವರಾಶಿಗಳೆಂಬ ತೇಜಃಕಣಗಳು ವಹ್ನಿಯಿಂ ಕಿಡಿಗಳಂತೆ ಹುಟ್ಟಿ ಹೊಂದುತ್ತಿಹವು ಅದು ಪರಮಾತ್ಮನ ರೂಪವೆಂಬುದರ್ಥಂ ॥೩೩॥ ಬಳಿಕ ಪ್ರಕಾರಾಂತರದಿಂ ತತ್ಸ್ವರೂಪಮಂ ಪೇಳುತಿರ್ದಪಂ.

ಯಸ್ಮಿನ್ ಸಮಸ್ತವಸ್ತೂನಿ ಕಲ್ಲೋಲಾ ಇವ ವಾರಿಧೌ
ಸಂಭೂಯ ಲಯಮಾಯಾಂತಿ ತದ್ರೂಪಂ ಪರಮಾತ್ಮನಃ ॥

ಯಾವ ವಸ್ತುವಿನಲ್ಲಿ ಭೂಮ್ಯಾದಿ ಸಮಸ್ತ ತತ್ತ್ವಂಗಳೂ ಸಮುದ್ರದಲ್ಲಿ ಮಹಾತೆರೆಗಳಂತೆ ಹುಟ್ಟಿ ಹೊಂದುತ್ತಿಹವು ಅದು ಪರಮಾತ್ಮನ ರೂಪವೆಂಬುದರ್ಥಂ ॥೩೪॥ ಮತ್ತೊಂದು ಪ್ರಕಾರದಿಂ ಪೇಳುತಿರ್ದಪಂ.

ನಿರಸ್ತಮಲಸಂಬಂಧಂ ನಿಶ್ಶೇಷಜಗದಾತ್ಮಕಮ್
ಸರ್ವತತ್ತ್ವೋಪರಿ ಪ್ರೋಕ್ತಂ ಸ್ವರೂಪಂ ಪರಮಾತ್ಮನಃ ॥

ನಿವಾರಿಸಲ್ಪಟ್ಟ ಆಣವಾದಿಮಲಸಂಬಂಧವುಳ್ಳ ನಾಮರೂಪಾತ್ಮಕ ಸಕಲ ಜಗ ಜೀವನವಾದ ಪರಮಾತ್ಮನ ರೂಪವು ಭೂಮ್ಯಾದಿ ಶಿವಾಂತವಾದ ಸಕಲತತ್ತ್ವಂಗಳ ಮೇಲೆ ಪೇಳಲ್ಪಟ್ಟಿತ್ತೆಂಬುದರ್ಥಂ ॥೩೫॥ ಬಳಿಕಾ ಪರಮಾತ್ಮನೆಂತು ಪ್ರಕಾಶಿಸಲ್ಪಡುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಯಥಾ ವ್ಯಾಪ್ಯ ಜಗತ್ಸರ್ವಂ ಸ್ವಭಾಸಾ ಭಾತಿ ಭಾಸ್ಕರಃ
ತಥಾ ಸ್ವಶಕ್ತಿಭಿರ್ವ್ಯಾಪ್ಯ ಪರಮಾತ್ಮಾ ಪ್ರಕಾಶತೇ ॥

ಸೂರ್ಯನು ತನ್ನ ಕಾಂತಿಯಿಂದ ಜಗತ್ತನ್ನೆಲ್ಲಾ ವ್ಯಾಪಿಸಿಕೊಂಡು ಹೇಗಿರುವನು ಹಾಗೆ ಪರಮಾತ್ಮನು ತನ್ನ ಧೂಮವತ್ಯಾದಿ ಶಕ್ತಿಗಳಿಂ ವಿಶ್ವವನ್ನೆಲ್ಲ ವ್ಯಾಪಿಸಿಕೊಂಡು ಪ್ರಕಾಶಿಸುತ್ತಿಹನು. ಅದೆಂತೆಂದಡೆ ಧೂಮವತ್ಯಾಂ ಪೃಥಿವ್ಯಾಂ ಹ್ಲಾದಾಪ್ಸು ಶುಚೌ ತು ಭಾಸ್ವತಿ ಪ್ರಥತೇ ವಾಯೌ ಸ್ಪಂದಾವಿಭ್ವಿನ್ನಭಸಿ ವ್ಯಾಪ್ತಂ ಜಗತಾಭಿಃ ಧೂಮವತ್ಯಾಂ ತಿರೋಧೌ ಭಾಸ್ವತ್ಯವಭಾಸನೇದ್ವನಾಂ ಶಕ್ತಿಃ ಕ್ಷೋಭೇ ಸ್ಪಂದಾ ವ್ಯಾಪ್ತೌ ವಿಭ್ವೀ ಹ್ಲಾದಾಚ ಪುಷ್ಟೌ ಸ್ಯಾತ್ ಎಂಬ ಪಂಚಾಶಿಕಾಶಾಸ್ತ್ರ ಸ್ಥಿತಿಯಿಂ ಇದಪ್ರತ್ಯಯಣ ಚರವಾದ ವಿಶ್ವವೆಲ್ಲಂ ಪಾಂಚಭೌತಿಕವಾದ ಕಾರಣ ಭೂಮಿಯಲ್ಲಿ ಧೂಮವತಿ ಎಂಬ ಪೆಸರನ್ನುಳ್ಳ ತಿರೋಧಾನ ಶಕ್ತಿ ವ್ಯಾಪಿಸಿಕೊಂಡಿರುವುದು. ಜಲದಲ್ಲಿ ಪುಷ್ಟಿರೂಪವಾದ ಪಾಲನಶಕ್ತಿ ಇರುವುದು. ತೇಜಸ್ಸಿನಲ್ಲಿ ವಿಶ್ವ ಪ್ರಕಾಶಮಂ ಮಾಡುವ ಸೃಷ್ಟಿಶಕ್ತಿ ಇರುವುದು. ವಾಯುವಿನಲ್ಲಿ ಶೋಷಣ ರೂಪವಾದ ಸಂಹಾರಶಕ್ತಿ ಇರುವುದು. ವ್ಯೋಮದಲ್ಲಿ ವ್ಯಾಪಕ ಶಿವೈಕೀಕರಣ ಪ್ರವೀಣೆಯಾದ ವಿಭ್ವಿಶಕ್ತಿ ಇರುವುದು. ಈ ಪ್ರಕಾರವಾದ ಸ್ವಶಕ್ತಿಗಳಿಂ ವಿಶ್ವಮಂ ವ್ಯಾಪಿಸಿಕೊಂಡಿರುವನೆಂಬುದು

ತಾತ್ಪರ್ಯಂ ॥೩೬॥ ಬಳಿಕೀ ಪ್ರಕಾರದಿಂ ವಿಶ್ವವ್ಯಾಪಕನಾದ ಪರಮಾತ್ಮನಿಗೆ ವಿಶ್ವಗತವಾದ ವಿಕಾರವೇನು ಕಾರಣಂ ಸಂಭವಿಸೂದೆಂಬಲ್ಲಿ ಉತ್ತರಮಂ ಪೇಳುತ್ತ ಪರಮಾತ್ಮಸ್ಥಲಮಂ ಮುಗಿಸುತಿರ್ದಪಂ.

ವಿಶ್ವತೋ ಭಾಸಮಾನೋಽಪಿ ವಿಶ್ವಮಾಯಾ ವಿಲಕ್ಷಣಃ
ಪರಮಾತ್ಮಾ ಸ್ವಯಂಜ್ಯೋತಿರೂಪೋ ಜೀವಾತ್ಮನಾಂ ಭವೇತ್ ॥

ಪರಮಾತ್ಮನು ವಿಶ್ವದಲ್ಲಿ ಸರ್ವತ್ರ ಪ್ರಕಾಶಿಸುತ್ತಿರುವಾತನಾದರೂ ವಿಶ್ವೋಪಾದಾನ ಕಾರಣವಾದ ವ್ಯೋಮದಂತೆ ವಿಶ್ವಗತವಾದ ಷಡ್ಭಾವವಿಕಾರರಹಿತನಾಗಿ ಸಚ್ಚಿದಾನಂದ ಸ್ವರೂಪದಿಂ ಸಂಸಾರದಲ್ಲಿ ಹೇಯಬುದ್ಧಿ ಉಳ್ಳ ಜೀವಾತ್ಮರಿಗೆ ಬುದ್ಧಿ ಪ್ರಕಾಶನಾಗಿರುವ ನೆಂಬುದರ್ಥಂ ॥ ೩೭॥

## ೩೧. ನಿರ್ದೇಹಾಗಮಸ್ಥಲ

ಬಳಿಕ ಆಶ್ರಯೋ ದ್ವಂದ್ವಮಿತ್ಯುಕ್ತಂ ದ್ವಂದ್ವತ್ಯಾಗಾತ್ಪರೋ ಮದಃ ಜೀವನ್ಮುಕ್ತಿಃ ಸದಾ ಯೋಗೀ ದೇಹತ್ಯಾಗಾದ್ವಿಮುಚ್ಯತೇಎಂಬ ದೇವೀಕಾಲೋತ್ತರ ವಚನಾನುಸಾರದಿಂ ದೇಹಧರ್ಮವ ನಿರಾಕರಿಸಿ ಪರಮಾತ್ಮನೆ ಉಂಟಾದ ಶಿವಯೋಗಿಗೆ ನಿರ್ದೇಹಾಗಮ ಸ್ಥಲಮಂ ನಿರೂಪಿಸುತಿರ್ದಪಂ.

ದೇಹಿನೋಽಪಿ ಪರಾತ್ಮತ್ವಭಾವಿನೋ ನಿರಹಂಕೃತೇಃ
ನಿರಸ್ತದೇಹಧರ್ಮಸ್ಯ ನಿರ್ದೇಹಾಗಮ ಉಚ್ಯತೇ ॥

ಪರಮಾತ್ಮತ್ವ ಭಾವನೆಯುಳ್ಳ ಅಹಂಕಾರ ಮಮಕಾರವಿಲ್ಲದ ನಿವಾರಿಸಲ್ಪಟ್ಟ ಸ್ಥೂಲತ್ವಾದಿದೇಹಧರ್ಮವುಳ್ಳ ದೇಹಯುತನಾದ ಶಿವಯೋಗಿಗೆ ನಿರ್ದೇಹಪ್ರಾಪ್ತಿ ಪೇಳಲ್ಪಡುತ್ತಿಹದೆಂಬುದರ್ಥಂ ॥೩೮॥ ಬಳಿಕ ಪರಮಾತ್ಮಭಾವವುಳ್ಳ ಶಿವಯೋಗಿಗೆ ದೇಹಸಂಬಂಧವಿಲ್ಲವೆಂದಾರು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಗಲಿತೇ ಮಮತ್ಯಾಹಂತೇ ಸಂಸಾರಭ್ರಮಕಾರಣೇ
ಪರ್ಯಾಹಂತಾಂ ಪ್ರವಿಷ್ಟಸ್ಯ ಕುತೋ ದೇಹಃ ಕುತೋ ರತಿಃ ॥

ಚಿದಹಂತೆಯಂ ಪ್ರವೇಶಿಸಿದ ಶಿವಯೋಗಿಗೆ ಸಂಸಾರಭ್ರಾಂತಿಗೆ ಕಾರಣವಾದ ಅಹಂಕಾರ ಮಮಕಾರಗಳು ಸಡಿಲಿಹೋಗಲಾಗಿ ದೇಹವೆತ್ತಣದು. ಆ ದೇಹದಲ್ಲಿ ಪ್ರೀತಿಯೆತ್ತಣದೆಂಬುದರ್ಥಂ ॥೩೯॥

ಕೇವಲೇ ನಿಷ್ಪ್ರಪಂಚೌಘೇ ಗಂಭೀರೇ ಚಿನ್ಮಹೋದಧೌ
ನಿಮಗ್ನಮಾನಸೋ ಯೋಗೀ ಕಥಂ ದೇಹಂ ವಿಚಿಂತಯೇತ್ ॥

ನಿವಾರಿಸಲ್ಪಟ್ಟ ಚರಾಚರಪ್ರಪಂಚಸಮೂಹವುಳ್ಳ ನೆಲೆಯಿಲ್ಲದ ಚಿತ್ಸಮುದ್ರದಲ್ಲಿ ಮುಳುಗಿದ ಚಿತ್ತವುಳ್ಳ ಶಿವಯೋಗಿಯು ದೇಹಮುಂಟೆಂದಾವ ಪ್ರಕಾರದಿಂದಲೂ ಚಿಂತಿಸಲಾರನೆಂಬುದರ್ಥಂ ॥೪೦॥

ಅಪರಿಚ್ಛೇದ್ಯಮಾತ್ಮಾನಂ ಚಿದಂಬರಮಿತಿ ಸ್ಮರನ್
ದೇಹಯೋಗೇऽಪಿ ದೇಹಸ್ಥೈರ್ವಿಕಾರೈರ್ನ ವಿಲಿಪ್ಯತೇ ॥

ತನ್ನ ಪರಿಚ್ಛೇದವಿಲ್ಲದ ಚಿದಾಕಾಶವನಾಗಿ ನೆನೆವುತ್ತಿಹ ಶಿವಯೋಗೀಶ್ವರಂ ದೇಹವಿದ್ದರೂ ದೇಹದಲ್ಲಿರುವ ಇಂದ್ರಿಯವಿಕಾರಂಗಳಿಂ ಲೇಪಿಸಲ್ಪಡುವನೆಂಬುದರ್ಥಂ ॥೪೧॥

ಅಖಂಡಸಂವಿದಾಕಾರಮದ್ವಿತೀಯಂ ಸುಖಾತ್ಮಕಮ್
ಪರಮಾಕಾಶಮಾತ್ಮಾನಂ ಮನ್ವಾನಃ ಕುತ್ರಮುಹ್ಯತಿ ॥

ತನ್ನನು ಅಖಂಡಾದ್ವಿತೀಯ ಚಿದಾನಂದಾಕಾರವಾದ ಮಹದಾಕಾಶವನಾಗಿ ಆಕಾಶ ಶರೀರಂ ಬ್ರಹ್ಮ ಎಂಬ ಶ್ರುತ್ಯನುಸಾರದಿಂ ತಿಳಿವ ಶಿವಯೋಗೀಶ್ವರನಾದ ಠಾವಿನಲ್ಲಿ ಪರಿಚ್ಛಿನ್ನಶರೀರವುಳ್ಳವನೆಂದು ಭ್ರಮಿಸಿಯಾನು. ಬ್ರಹ್ಮಾತಿರಿಕ್ತದೇಶವಿಲ್ಲದ ಕಾರಣದಿಂದೆಲ್ಲಿಯೂ ಭ್ರಮಿಸಲಾರನೆಂಬುದರ್ಥಂ ॥೪೨॥ ಬಳಿಕಾಕಾಶಕ್ಕೂ ಘಟಾದ್ಯುಪಾಧಿಯಿಂ ಪರಿಚ್ಛೇದ ಕಾಣುತ್ತದೆಯಲ್ಲಾ ಎಂಬಲ್ಲಿ ಪೇಳುತಿರ್ದಪಂ.

ಉಪಾಧಿವಿಹಿತಾ ಭೇದಾ ದೃಶ್ಯಂತೇ ಚೈಕವಸ್ತುನಿ
ಇತಿ ಯಸ್ಯ ಮತಿಸ್ಸೋऽಯಂ ಕಥಂ ದೇಹಮಿತೋ ಭವೇತ್ ॥

ಸಕಲವಸ್ತುಗಳಲ್ಲಿಯೂ ಉಪಾಧಿಕಲ್ಪಿತವಾದ ಭೇದಗಳು ಕಾಣುತ್ತಿಹವೆಂದು ಯಾವಾತಂಗೆ ಬುದ್ಧಿಯುಂಟಾಗಿರುವುದು ಆ ಈತನೆಂದು ದೇಹಾಪರಿಮಿತನಹನು ಆಗನೆಂಬುದರ್ಥಂ ॥೪೩॥ ಬಳಿಕದೇನು ಕಾರಣದಿಂದೆಂಬಲ್ಲಿ ಪೇಳುತಿರ್ದಪಂ.

ಭೇದಬುದ್ಧಿಸ್ಸಮಸ್ತಾನಾಂ ಪರಿಚ್ಛೇದಸ್ಯ ಕಾರಣಮ್
ಅಭೇದಬುದ್ಧೌ ಜಾತಾಯಾಂ ಪರಿಚ್ಛೇದಸ್ಯ ಕಾ ಕಥಾ ॥

ಸಕಲರಿಗೂ ವಸ್ತು ಪರಿಚ್ಛೇದಕ್ಕೆ ಕಾರಣವಾದುದು ಭೇದಬುದ್ಧಿಯು. ಅದು ಘಟಾಕಾಶ ದೃಷ್ಟಾಂತರದಿಂದೌಪಾಧಿಕವೆಂದು ತಿಳಿಯಲಾಗಿ ಭೇದಬುದ್ಧಿ ನಷ್ಟವಾಗಿ ಅಭೇದಬುದ್ಧಿ ದೃಢವಾದಲ್ಲಿ ಪರಿಚ್ಛೇದದ ವಾರ್ತೆಯು ಇಲ್ಲವೆಂಬುದರ್ಥಂ ॥೪೪॥ ಬಳಿಕ ತದದ್ವೈತಮಂ ಪ್ರಕಟಿಸಿ ನಿರ್ದೇಹಾಗಮಸ್ಥಲಮಂ ಮುಗಿಸುತಿರ್ದಪಂ.

ಶಿವೋऽಹಮಿತಿ ಯಸ್ಯಾಸ್ತಿ ಭಾವನಾ ಸರ್ವಗಾಮಿನೀ
ತಸ್ಯ ದೇಹೇನ ಸಂಬಂಧಃ ಕಥಂ ಸ್ಯಾದಮಿತಾತ್ಮನಃ ॥

ಶಿವನೆ ತಾನೆಂಬ ಸರ್ವವ್ಯಾಪಕನಾದ ಶಿವಾದ್ವೈತಭಾವನೆಯು ಯಾವ ಶಿವಯೋಗಿಗುಂಟು ಆಯಾ ಪವಿತ್ರಾತ್ಮನಿಗೆ ಪರಿಚ್ಛಿನ್ನ ಶರೀರದಿಂದುಂಟಾದ ನಿರ್ಬಂಧಮೆಂತಹದು ಇಲ್ಲವೆಂಬುದರ್ಥಂ॥೪೫॥

## ೩೨. ನಿರ್ಭಾವಾಗಮಸ್ಥಲ

ಬಳಿಕ ನೈವೋರ್ಧ್ವಂ ಧಾರಯೇಚ್ಚಿತ್ತಂ ನ ಮಧ್ಯಂ ನಾಪ್ಯಧಃ ಕ್ವಚಿತ್ ಅಂತರ್ಭಾವ ವಿನಿರ್ಮುಕ್ತಂ ಸದಾ ಕುರ್ಯಾನ್ನಿರಾಶ್ರಯಮೆಂಬ ದೇವೀಕಾಲೋತ್ತರ ವಚನಾನುಸಾರದಿಂ

ನಿರ್ದೇಹಾಗಮಸಂಪನ್ನನಾದ ಶಿವಯೋಗೀಶ್ವರನಿಗೆ ನಿರ್ಭಾವಾಗಮಸ್ಥಲಮಂ ನಿರೂಪಿಸುತಿರ್ದಪಂ.

ವ್ಯತಿರೇಕಾತ್ಸ್ವರೂಪಸ್ಯ ಭಾವಾಂತರ ನಿರಾಕೃತೇಃ
ಭಾವೋ ವಿಕಾರನಿರ್ಮುಕ್ತೋ ನಿರ್ಭಾವಾಗಮ ಉಚ್ಯತೇ ॥

ನಿರ್ದೇಹಸ್ವರೂಪಕ್ಕೆ ವ್ಯತಿರಿಕ್ತವಾದ ಭಾವಾಂತರವ ನಿರಾಕರಿಸುವದರತ್ತಣಿಂ ಇಂದ್ರಿಯವಿಕಾರದಿಂ ಬಿಡಲ್ಪಟ್ಟ ಮನೋಭಾವವು ನಿರ್ಭಾವಾಗಮವೆಂದು ಪೇಳಲ್ಪಡುವನೆಂಬುದರ್ಥಂ ॥೪೬॥ ಬಳಿಕಾ ನಿರ್ಭಾವಲಕ್ಷಣವನ್ನೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಅಹಂ ಬ್ರಹ್ಮೇತಿ ಭಾವಸ್ಯ ವಸ್ತುದ್ವಯಸಮಾಶ್ರಯಃ
ಏಕೀಭೂತಸ್ಯ ಚಿದ್ವ್ಯೋಮ್ನಿ ತದಭಾವೋ ವಿನಿಶ್ಚಿತಃ ॥

ಅಹಂ ಬ್ರಹ್ಮ ಎಂಬ ಭಾವಕ್ಕೆ ನಾನು ಬ್ರಹ್ಮವೆಂಬ ವಸ್ತುದ್ವಯಾಕ್ಷೇಪಮುಂಟಾಹದು. ಚಿದಾಕಾಶದೊಳೇಕರಸವಾದ ಭಾವಕ್ಕೆ ವಸ್ತುದ್ವಯಾಪೇಕ್ಷೆ ಇಲ್ಲವೆಂಬುದರ್ಥಂ ॥೪೭॥ ಬಳಿಕ ಅಹಂ ಬ್ರಹ್ಮ ಎಂಬ ಭಾವಕ್ಕೆ ವಸ್ತುದ್ವಯಾಕ್ಷೇಪಮುಂಟಾದ ಕಾರಣದಿಂದಹವೆಂಬೇಕ ಭಾವದಲ್ಲಿದ್ದಾತಂಗೆ ಮಾಯಿಕಜಾತಿಭೇದಾದಿ ವಾಸನೆಯಿಲ್ಲವೆಂದು ಪೇಳುತಿರ್ದಪಂ.

ಏಕಭಾವನಿರೂಢಸ್ಯ ನಿಷ್ಕಲಂಕೇ ಚಿದಂಬರೇ
ಕ್ವ ಜಾತಿವಾಸನಾ ಯೋಗಃ ಕ್ವ ದೇಹಿತ್ವಂ ಪರಿಭ್ರಮಃ ॥

ದೋಷವಿಲ್ಲದ ಚಿದಾಕಾಶದಲ್ಲಿ ತಾದಾತ್ಮ್ಯದಿಂದಾರೂಢನಾದ ಶಿವಯೋಗಿಗೆ ಜಾತಿವರ್ಣಾಶ್ರಮವಾಸನಾ ಸಂಬಂಧವೂ ಸಂಸಾರಚಕ್ರಪರಿಭ್ರಮಣವೂ ಎತ್ತಣದು ಇಲ್ಲವೆಂಬುದರ್ಥಂ ॥೪೮॥ ಹಾಗಾದಡೆ ಧ್ಯಾನಾದಿಗಳಿಗೇನು ಗತಿಯೆಂಬಲ್ಲಿ ಪೇಳುತಿರ್ದಪಂ.

ಶೂನ್ಯೇ ಚಿದಂಬರೇ ಸ್ಥಾನೇ ದೂರೇ ವಾಙ್ಮನಸಾದ್ವನಃ
ವಿಲೀನಾತ್ಮಾ ಮಹಾಯೋಗೀ ಕೇನ ಕಿಂ ವ್ಯಾಪಿ ಭಾವಯೇತ್ ॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ಎಂಬ ಶ್ರುತಿಯಿಂ ವಾಙ್ಮನೋಮಾರ್ಗಕ್ಕೆ ಗೋಚರವಲ್ಲದ ನೀಲ ಪೀತಾದ್ಯಾಕಾರವಿಲ್ಲದ ಚಿದಾಕಾಶ ಸ್ಥಾನದಲ್ಲಿ ಅಭೇದವನ್ನೈದಿದ ಶಿವಯೋಗಿಯು ಯಾವ ಪ್ರಕಾರದಿಂ ಯಾವ ವಸ್ತುವ ಭಾವಿಸಿಯಾನು. ಯಾವ ಪ್ರಕಾರದಿಂದಲೂ ಈ ವಸ್ತುವು ಭಾವನಾಯೋಗ್ಯವಾಗದೆಂಬುದರ್ಥಂ॥೪೯॥ ಬಳಿಕ ಹೀಗಾದಡೆ ವಿಧಿನಿಷೇಧವಿಲ್ಲದೆ ನಿಂದೆಯುಂಟಾಹದೆಂಬಲ್ಲಿ ಪೇಳುತಿರ್ದಪಂ.

ಕುತೋ ಭಾವಃ ಕುತಶ್ಚಿತ್ತಂ ಸಂಕಲ್ಪವಾಸನಾ
ನಿಸ್ತರಂಗೇ ಚಿದಂಬೋಧೌ ವಿಲೀನಸ್ಯ ಮಹಾತ್ಮನಃ ॥

ನಿಸ್ತರಂಗೇ-ಷಡೂರ್ಮಿರಹಿತವಾಗಿರ್ದಂಥಾ, ಚಿದಂಬೋಧೌ-ಜ್ಞಾನಸಾಗರದಲ್ಲಿ, ವಿಲೀನಸ್ಯ-ಏಕೀಭೂತನಾಗಿರ್ದಂಥ, ಮಹಾತ್ಮನಃ-ಶಿವಯೋಗಿಗೆ, ಕುತೋ

ಭಾವಃ-ವಿಕಾರವೆತ್ತಣದು, ಕುತಶ್ಚಿತ್ತಂ-ಚಿತ್ತವೆತ್ತಣದು, ಕುತಃ ಸಂಕಲ್ಪವಾಸನಾ-ಸಂಕಲ್ಪವಾಸನೆ ಎತ್ತಣದು ॥ ೫೦ ॥

ಅಹಂ ಬ್ರಹ್ಮೇತಿ ಭಾವಸ್ಯ ವಸ್ತುದ್ವಯ ಸಮಾಶ್ರಯಃ
ಏಕೀಭೂತಸ್ಯ ಚಿದ್ವ್ಯೋಮ್ನಿ ತದಭಾವೋ ವಿನಿಶ್ಚಿತಃ ॥

ಅಹಂ ಬ್ರಹ್ಮೇತಿ ಭಾವಸ್ಯ- ತಾನೆ ಬ್ರಹ್ಮವೆಂಬ ಭಾವನೆಯು, ವಸ್ತುದ್ವಯ ಸಮಾಶ್ರಯಃ- ಜೀವೇಶ್ವರರೆಂಬ ಎರಡು ವಸ್ತುವನು ಆಶ್ರಯಿಸುವುದು, ಚಿದ್ವ್ಯೋಮ್ನಿ-ಜ್ಞಾನಾಕಾಶದಲ್ಲಿ, ಏಕೀಭೂತಸ್ಯ-ಏಕವಾಗಿರ್ದಂಥಾತಂಗೆ, ತದಭಾವಂ-ಎರಡು ವಸ್ತುಗಳೆಂಬ ಭೇದ ಆವವು, ವಿನಿಶ್ಚಿತಃ-ಶಾಸ್ತ್ರಂಗಳಲ್ಲಿ ನಿಶ್ಚಿತವಾಯಿತ್ತು ॥ ೫೧ ॥

ಏಕಭಾವಸ್ಯರೂಢಸ್ಯ ನಿಷ್ಕಲಂಕೇ ಚಿದಂಬರೇ
ಕ್ವ ಜಾತಿವಾಸನಾಯೋಗಃ ಕ್ವ ದೇಹಿತ್ವಂ ಪರಿಭ್ರಮಃ ॥

ನಿಷ್ಕಲಂಕ-ಕಳಂಕ ರಹಿತನಾಗಿರ್ದಂಥ, ಚಿದಂಬರೇ- ಜ್ಞಾನಾಕಾಶದಲ್ಲಿ, ರೂಢಸ್ಯ-ಸ್ಥಿರವಾಗಿರ್ದಂಥ, ಏಕಭಾವಸ್ಯ-ಐಕ್ಯ ಭಾವನೆಯುಳ್ಳಂಥಾತಂಗೆ, ಕ್ವ ಜಾತಿವಾಸನಾ ಯೋಗಃ -ಬ್ರಾಹ್ಮಣ್ಯಾದಿ ಜಾತಿಯೋಗವೆತ್ತಣದು, ಕ್ವ ದೇಹಿತ್ವ ಪರಿಭ್ರಮಃ-ದೇಹಿ ಎಂಬ ಭ್ರಮೆ ತಾನೆತ್ತಣದು ॥೫೨॥*

ಅವಿಶುದ್ಧೇ ವಿಶುದ್ಧೇ ವಾ ಸ್ಥಲೇ ದೀಪ್ತಿರ್ಯಥಾ ರವೇಃ
ಪತತ್ಯೇವಂ ಸದಾದ್ವೈತೀ ಸರ್ವತ್ರ ಸಮವೃತ್ತಿಮಾನ್ ॥

ಸೂರ್ಯನ ಪ್ರಕಾಶವು ಶುದ್ಧಸ್ಥಲದಲ್ಲಿಯೂ ಅಶುದ್ಧಸ್ಥಲದಲ್ಲಿಯೂ ಹೇಗೆ ಬೀಳುತ್ತಿಹುದು ಈ ಪ್ರಕಾರದಿಂದಲೆ ಶಿವಾದ್ವೈತಿಯು ಎಲ್ಲಾಗಳು ಎಲ್ಲಾ ಠಾವಿನಲ್ಲಿಯೂ ಸಮಾನವಾದ ಬುದ್ಧಿಯುಳ್ಳವನಾಗಿ ಸಂಚರಿಸುವನೆಂಬುದರ್ಥಂ ॥೫೩॥ ಬಳಿಕದೆಂತು ಸಂಚರಿಸುವನೆಂಬಲ್ಲಿ ಪೇಳುತಿರ್ದಪಂ.

ನ ಬಿಭೇತಿ ಜರಾಮೃತ್ಯೋರ್ನ ಕ್ಷುಧಾಯಾ ವಶಂ ವ್ರಜೇತ್
ಪರಿಪೂರ್ಣನಿಜಾನಂದಂ ಸಮಾಸ್ವಾದಾನ್ಮಹಾಸುಖೀ ॥

ಜರಾಮರಣಂಗಳಿಗೆ ಬೇಕಾಗನು. ಹಸಿವು ತೃಷೆಗಳ ವಶವಾಗನು. ಪರಿಪೂರ್ಣವಾದ ನಿಜಾನಂದವನಾಸ್ವಾದಿಸುವಲ್ಲಿತ್ತ ಮಹಾಸುಖಿಯಾಗಿ ಸಂಚರಿಸುವ ನೆಂಬುದರ್ಥಂ ॥೫೪॥

## ೩೩. ನಷ್ಟಾಗಮಸ್ಥಲ

ಬಳಿಕೀ ಪ್ರಕಾರದಿಂ ನಿರ್ಭಾವಾಗಮಸಂಪನ್ನನಾದ ಶಿವಯೋಗೀಶ್ವರಂಗೆ ಭೇದಜ್ಞಾನವಿಲ್ಲದ ಕಾರಣದಿಂ ತನ್ನಷ್ಟಾಗಮಸ್ಥಲಮಂ ನಿರೂಪಿಸುತಿರ್ದಪಂ.

---

*ಈ ಮೂರು ಶ್ಲೋಕ ಮತ್ತು ಟೀಕುಗಳನ್ನು ಅಜ್ಞಾತ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ಭೇದಶೂನ್ಯೇ ಮಹಾಬೋಧೇ ಜ್ಞಾತ್ರಾದಿತ್ರಯಹೀನತಃ
ಜ್ಞಾನಸ್ಯ ನಷ್ಟಭಾವೇನ ನಷ್ಟಾಗಮ ಇಹೋಚ್ಯತೇ ॥

ದ್ವೈತಶೂನ್ಯವಾದ ಮಹಾಶಿವಜ್ಞಾನದಲ್ಲಿ ಜ್ಞಾತೃ ಜ್ಞಾನ ಜ್ಞೇಯವೇಯಾತ್ಮಕವಾದ ತ್ರಿಪುಟಿಮಯ ಪ್ರಪಂಚವಿಲ್ಲದ ಕಾರಣದಿಂ ನಿರ್ಭಾವಾಗಮಸಂಪನ್ನನಾದ ಶಿವಯೋಗಿಯ ವಿಷಯದಲ್ಲಿ ಭೇದಜ್ಞಾನ ನಷ್ಟವಾದ ಕಾರಣದಿಂ ನಷ್ಟಾಗಮವೆಂದು ಪೇಳಲ್ಪಡುವದೆಂಬುದರ್ಥಂ ||೫೫|| ಬಳಿಕ ಶಿವಯೋಗಿಗೆಂತು ತ್ರಿಪುಟಿಮಯಪ್ರಪಂಚವಿಲ್ಲವೆಂಬಲ್ಲಿ ಪೇಳುತಿರ್ದಪಂ.

ಅದ್ವೈತವಾಸನಾವಿಷ್ಟಚೇತಸಾಂ ಪರಯೋಗಿನಾಮ್
ಪಶ್ಯತಾಮಂತರಾತ್ಮಾನಂ ಜ್ಞಾತೃತ್ವಂ ಕಥಮನ್ಯಥಾ ॥

ಅದ್ವೈತಸಂಸ್ಕಾರದಿಂ ವ್ಯಾಪಿಸಲ್ಪಟ್ಟ ಚಿತ್ತವುಳ್ಳವರಾಗಿ ಹೃದಯದಲ್ಲಿ ಆತ್ಮನಂ ನೋಡುವ ಶಿವಯೋಗಿಗಳಿಗೆ ಸ್ವಾತಿರಿಕ್ತಪದಾರ್ಥಾಂತರದರ್ಶನವೆಂತಹದು ಆಗದೆಂಬುದರ್ಥಂ ||೫೬|| ಬಳಿಕಾತಂಗೆ ಅನ್ಯಥಾಜ್ಞಾತೃತ್ವವಿಲ್ಲದಡೆ ಮತ್ತೇನು ತೋರುವುದೆಂಬಲ್ಲಿ ಪೇಳುತಿರ್ದಪಂ.

ಅಕರ್ತಾऽಹಮವೇತ್ತಾऽಹಮದೇಹೋऽಹಂ ನಿರಂಜನಃ
ಇತಿ ಚಿಂತಯತಸ್ಸಾಕ್ಷಾತ್ಸಂವಿದೇವ ಪ್ರಕಾಶತೇ ॥

ತಾನು ಕರ್ತೃವಲ್ಲ ಜ್ಞಾತೃವಲ್ಲ ದೇಹಿಯಲ್ಲ. ಮತ್ತೇನೆಂದರೆ ನಿರಂಜನನೆಂದು ಚಿಂತಿಸುವ ಶಿವಯೋಗಿಗೆ ಜ್ಞಾತೃ ಜ್ಞಾನ ಜ್ಞೇಯ ವಿಹೀನೋಪಿ ಸದಾಜ್ಞಃ ಎಂಬ ಶ್ರುತಿಯಿಂ ತ್ರಿಪುಟಿಮಯಪ್ರಪಂಚಮಂ ನಾಶವಂ ಮಾಡಿ ಶಿವಾದ್ವೈತಜ್ಞಾನವೆ ಪ್ರಕಾಶಿಸುತ್ತಿಹುದು. ಇದೇ ನಷ್ಟಾಗಮಪ್ರಕಾಶವೆಂಬುದು ತಾತ್ಪರ್ಯಂ ||೫೭|| ಬಳಿಕಾ ಶಿವಯೋಗಿಗೆ ಜ್ಞೇಯಾಂತರವು ಇಲ್ಲವೆಂದು ಪೇಳುತಿರ್ದಪಂ.

ನಿರಸ್ತಭೇದಜಲ್ಪಸ್ಯ ನಿರೀಹಸ್ಯ ಪ್ರಶಾಮ್ಯತಃ
ಸ್ವೇ ಮಹಿಮ್ನಿ ವಿಲೀನಸ್ಯ ಕಿಮನ್ಯತ್ ಜ್ಞೇಯಮುಚ್ಯತೇ॥

ದ್ವಿತೀಯಾದ್ಭಯಮೇವ ಪಶ್ಯಂತಿ ಎಂಬ ಬೃಹದಾರಣ್ಯ ಶ್ರುತಿಯಿಂದಲೂ ಯುಕ್ತಿಯಿಂದಲೂ ನಿರಾಕರಿಸಲ್ಪಟ್ಟದ್ವೈತವಾಕ್ಯವುಳ್ಳ ರಾಗದ್ವೇಷರಹಿತನಾಗಿ ತನ್ನ ವಿಮರ್ಶದಲ್ಲಿಯೆ ವಿಶ್ರಾಂತಿಯುಳ್ಳ ವಿರಕ್ತನಾದ ಶಿವಯೋಗಿಗೆ ತಿಳಿಯಲ್ತಕ್ಕ ಮತ್ತೊಂದು ವಸ್ತುವಾವುದುಂಟು. ಯಾವುದೂ ಇಲ್ಲವೆಂಬುದರ್ಥಂ. ಇಲ್ಲಿ ಯುಕ್ತಿ ಯಾವುದೆಂದಡೆ ನಾವು ಮಾಡಿದ ಸಂಸ್ಕೃತ ವ್ಯಾಖ್ಯಾನದಲ್ಲಿ ಭೇದವನಾರು ಪ್ರಕಾರದಿಂ ವಿಕಲ್ಪಿಸಿ ಖಂಡಿಸಿ ಅದೇ ಅದು ವಿದ್ವಾಂಸರಿಗೆ ಗಮ್ಯವೆಂಬುದರಿಂದಿಲ್ಲಿ ಕಿಂಚಿನ್ಮಾತ್ರಂ ಕೇಳಲ್ಪಡುತ್ತದೆ. ಭೇದವೆಂಬುದು ಸ್ವತಃಸಿದ್ಧವೊ ಪರತಸಿದ್ಧವೊ ಎಂಬಲ್ಲಿ ಸ್ವತಃಸಿದ್ಧವಾದಡೆ ಬ್ರಹ್ಮದಂತೆ ಸ್ವತಂತ್ರ ಸ್ವಪ್ರಕಾಶವಾಗಬೇಕು ಬಳಿಕ ಬ್ರಹ್ಮವೂ ಮಾನಾಂತರಸಿದ್ಧವಾದುದರಿಂ ಸ್ವತಃ ಸಿದ್ಧವಲ್ಲವೆಂದಡೆ ಮಾನಾಂತರದಿಂದುಂಟಾದ ಸಿದ್ಧಿಯು ಉತ್ಪತ್ತಿ ಸಿದ್ಧಿಯೋ ಜ್ಞಾಪ್ತ ಸಿದ್ಧಿಯೋ

ಎಂಬ ವಿಕಲ್ಪದಲ್ಲಿ ಬ್ರಹ್ಮ ನಿತ್ಯವಾದುದರಿಂದುತ್ಪತ್ತಿ ಸಿದ್ಧಿ ಕೂಡದು. ಸ್ವಪ್ರಕಾಶವಾದುದರಿಂ ಜ್ಞಾಪ್ತಿಸಿದ್ಧಿಯೂ ಕೂಡದು. ಅನ್ಯಥಾ ಘಟದಂತೆ ಬ್ರಹ್ಮವು ಮಾನಾಂತರವೇದ್ಯವಾಗಿ ಜಡವಪ್ಪುದು. ಅದು ಕಾರಣದಿಂ ಬ್ರಹ್ಮ ಪರತಸಿದ್ಧವಾದ ಸ್ವರೂಪವುಳ್ಳದಲ್ಲ. ಇನ್ನು ಭೇದಂ ಪರತಸಿದ್ಧವಾದಡೆ ಘಟದಂತಾಂತರಾಳಿಕವಾಗಿ ಅಭೇದಸ್ಥಿರವಹುದೆಂಬುದು ರಹಸ್ಯ ||೫೮|| ಬಳಿಕ ಪೂರ್ವೋಕ್ತ ಸೂತ್ರತ್ರಯಾರ್ಥವನೆ ವಿಶೇಷಿಸುತಿರ್ದಪಂ.

ಏಕೀಭೂತೇ ನಿಜಾಕಾರೇ ಸಂವಿದಾ ನಿಷ್ಪ್ರಪಂಚಯಾ
ಕೇನ ಕಿಂ ವೇದನೀಯಂ ಸ್ಯಾದ್ವೇತ್ತಾ ಕಃ ಪರಿಭಾಷ್ಯತೇ ||

ಸ್ವಸ್ವರೂಪವು ಪ್ರಪಂಚವಿಲ್ಲದ ಶಿವಾದ್ವೈತಜ್ಞಾನದೊಡನೆ ಏಕಲೋಲೀಭೂತವಾಗಲಾಗಿ ಯಾತರಿಂದಾವ ವಸ್ತು ತಿಳಿಯಲು ಯೋಗ್ಯವಹುದು. ಜ್ಞಾನದಿಂ ಜ್ಞೇಯವ ತಿಳಿವವನಾರೆಂದು ಪೇಳಲ್ಪಡುವುದು. ನಾತಃಪರಂ ವೇದಿತವ್ಯಂ ಕಿಂಚಿತೆಂಬ ಶ್ರುತಿಯುಂಟಾಗಿರುವುದು ವೇದಿತವ್ಯಂ ನ ಕಿಂಚ ನ ಎಂಬಾಗಮ ವಾಕ್ಯವುಂಟಾಗಿರುವುದು. ಅದರಿಂದ ನ್ಯೋನ್ಯಾ ಭಾವಘಟಿತವಾದ ಮಾಯಿಕಭೇದದರ್ಶನವು ಶಿವಯೋಗಿಗಿ ಲ್ಲವೆಂಬುದರ್ಥಂ ||೫೯|| ಹಾಗಾದಡೆ ಎಂಥಾ ಪ್ರಪಂಚದರ್ಶನಮುಂಟಾಹದೆಂಬದ ಪೇಳುವಾತನಾಗಿ ನಷ್ಟಾಗಮಸ್ಥಲಮಂ ಮುಗಿಸುತಿರ್ದಪಂ.

ಮಹಾಸತ್ತಾ ಮಹಾಸಂವಿದ್ವಿಶ್ವರೂಪಾ ಪ್ರಕಾಶತೇ
ತದ್ವಿನಾ ನಾಸ್ತಿವಸ್ತ್ವೇಕಂ ಭೇದಬುದ್ಧಿಂ ವಿಮುಂಚತಃ ||

ಆತಯುಕ್ತವಾದ ಗಗನಕುಸುಮಗಳಿಗೆ ಸಮ್ಮೇಳನರೂಪವಾದ ಸಮಾಸಯೋಗದಿಂದಲೂ ಅದರ ಮೇಲೆ ವಿಭಕ್ತಿಯೋಗಮುಂಟಾಗಿರುವುದರಿಂದಲೂ ಗಗನ ಕುಸುಮವನಂಗೀಕರಿಸಬೇಕಾಗಿ ಸದಸತ್ಸಕಲವಸ್ತು ವ್ಯಾಪಕವಾದುದರಿಂ ಮಹಾಸತ್ತೆ ಎನಿಸಿಕೊಂಬುದು. ಹೃದಯೋಲ್ಲೇಖವಿಲ್ಲದೆ ಗಗನಕುಸುಮವೆಂಬ ವ್ಯಾಹಾರ ಕೂಡದ ಕಾರಣದಿಂ ಮಹಾಸಂವಿತ್ತೆಂದು ಪೇಳಿಸಿಕೊಂಬುದು ಈ ಪ್ರಕಾರದಿಂ ಸ್ವಶಿರಚ್ಛಾಯೆಯಂತೆ ಇರಲೂ ಕೂಡದೆ ವಿಶ್ವವ್ಯಾಪಕನಾದ ಪರಬ್ರಹ್ಮ ಚೈತನ್ಯವೆ ಜಗದ್ರೂಪದಿಂ ತೋರುತ್ತಿಹುದಲ್ಲದೆ ಮತ್ತೊಂದಿಲ್ಲದೆಂದು ಭೇದಬುದ್ಧಿಯಂ ಬಿಡುತ್ತಿರುವ ಶಿವಯೋಗಿಗೆ ಮಹಾಸತ್ತಾ ಸ್ಫುರತಾತ್ಮಕ ಚೈತನ್ಯ ಹೊರತಾಗಿ ಮತ್ತೊಂದು ವಸ್ತುವಿಲ್ಲ. ಸಾಗರತರಂಗ ನ್ಯಾಯದಿಂದಾತನ ಬುದ್ಧಿಯ ಭೇದದಲ್ಲಿ ವಿಶ್ರಾಂತಿಯ ಪಡೆದಿಹುದೆಂಬುದರ್ಥಂ ||೬೦||

## ೩೪. ಆದಿಪ್ರಸಾದಿಸ್ಥಲ

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ಎಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ನಷ್ಟಾಗಮಸಂಪನ್ನನಾದ ಶಿವಯೋಗಿಯೆ ಸರ್ವಾದಿಭೂತ ಶಿವಪ್ರಸಾದವುಳ್ಳವನೆಂಬ ಕಾರಣದಿಂದಾದಿಪ್ರಸಾದಿಯೆಂದು ಪೇಳಲ್ಪಡುವನೆಂದು ತತ್ಸಂಬಂಧವಾದ ಸ್ಥಲಮಂ ನಿರೂಪಿಸುತಿರ್ದಪಂ.

ಸರ್ವಾಧಿಷ್ಠಾತೃಕಶ್ಶಂಭುರಾದಿಸ್ತಸ್ಯ ಪ್ರಸಾದತಃ
ಆದಿಪ್ರಸಾದೀತ್ಯುಕ್ತೋಽಯಂ ನಿರ್ವಿಕಾರಪದೇ ಸ್ಥಿತಃ ॥

ವಿಶ್ವಾಧಾರಭೂಮಿಯಪ್ಪುದರಿಂ ಶಿವನು ಸೃಷ್ಟ್ಯಾದಿಪಂಚಕೃತ್ಯಂಗಳಿಗೆ ಮೂಲಕಾರಣನಾದನು. ಆ ಸರ್ವಕಾರಣನಾದ ಪ್ರಸಾದದತ್ತಣಿಂ ವಿಕಾರವಿಲ್ಲದ ನಷ್ಟಾಗಮ ಸ್ಥಲದಲ್ಲಿರುವ ಶಿವಯೋಗಿಯು ಆದಿಪ್ರಸಾದವುಳ್ಳವನೆಂಬುದರ್ಥಂ ॥೬೧॥ ಬಳಿಕಾತನ ಮಹತ್ವಮಂ ನಾಲ್ಕುಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಅನೇಕಜನ್ಮಶುದ್ಧಸ್ಯ ನಿರಹಂಕಾರಭಾವಿನಃ
ಅಪ್ರಪಂಚಸ್ಸಾದಿದೇವಃ ಪ್ರಸೀದತಿ ವಿಮುಕ್ತಯೇ ॥

ಅನೇಕ ಜನ್ಮಗಳಿಂ ಶುದ್ಧನಾದ ಪರಿಚ್ಛಿನ್ನಶರೀರಾದ್ಯಹಂಕಾರವಿಲ್ಲದ ಪ್ರಾಪಂಚಿಕ ಭೇದಶೂನ್ಯನಾದ ಶಿವಯೋಗಿಗೆ ಸರ್ವಾಧಿದೇವನಾದ ಶಿವನು ಪರಮುಕ್ತಿಗೋಸ್ಕರ ಪ್ರಸನ್ನಹನೆಂಬುದರ್ಥಂ ॥೬೨॥

ಶಿವಪ್ರಸಾದ ಸಂಪತ್ತ್ಯಾ ಶಿವಭಾವಮುಪೇಯುಷಿ
ಶಿವಾದನ್ಯಜ್ಜಗಜ್ಜಾಲಂ ದೃಶ್ಯತೇ ನ ಚ ದೃಶ್ಯತೇ ॥

ಶಿವಪ್ರಸಾದ ಉಂಟಾದುದರಿಂ ಶಿವತ್ವಮಂ ಪಡೆದವರ ವಿಷಯದಲ್ಲಿ ವಿಶ್ವ ಸಮೂಹವು ಶಿವನಿಂದನ್ಯವಾಗಿ ಇದ್ದಂತಹ ಕಾರಣದಿಂ ಕಾಣಲ್ತಕ್ಕದಾಗಿ ಕಾಣಲ್ಪಡದು. ಭೇದವಂ ನಿರಾಕರಿಸಿದ ಕಾರಣದಿಂ ಸಾಗರತರಂಗ ನ್ಯಾಯದಿಂ ಭೇದವಿಲ್ಲದೆ ತೋರುವ ದೆಂಬುದರ್ಥಂ ॥೬೩॥ ಬಳಿಕ

ಶಂಭೋಃ ಶಿವಪ್ರಸಾದೇನ ಸಂಸಾರಚ್ಛೇದಕಾರಿಣಾ
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ ॥

ನಿತ್ಯಾನಿತ್ಯ ವಿವೇಕಿಗಳಾದವರು ಸಂಸಾರಚ್ಛೇದನವ ಮಾಡುವ ಶಿವಪ್ರಸಾದದಿಂದಲೆ ಅಜ್ಞಾನಗ್ರಂಥಿಯಂ ಸೀಳಿ ಪರಮೋಕ್ಷವನ್ನೈದುತ್ತಿಹರೆಂಬುದರ್ಥಂ ॥೬೪॥ ಬಳಿಕ ಶಿವಪ್ರಸಾದದಿಂದಲ್ಲದೆ ಮುಕ್ತಿಯಿಲ್ಲವೋ ಏನೆಂಬಲ್ಲಿ ಪೇಳುತಿರ್ದಪಂ.

ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೇ
ವಿನಾ ಸೂರ್ಯೋದಯಂ ಲೋಕೇ ಕುತಸ್ಸ್ಯಾತ್ತಮಸೋ ಲಯಃ ॥

ಶಿವಪ್ರಸಾದವಿಲ್ಲದೆ ಸಂಸಾರ ನಿವೃತ್ತವಾಗದು. ಅದೆಂತೆಂದಡೆ ಲೋಕದಲ್ಲಿ ಸೂರ್ಯೋದಯವಿಲ್ಲದೆ ತಮೋಲಯವೆಂತಿಲ್ಲವೋ ಹಾಗೆ ಎಂಬುದರ್ಥಂ ॥೬೫॥ ಬಳಿಕ ಶಿವನಿಗೆ ಸಕಲಾತ್ಮರಲ್ಲಿಯೂ ಪಕ್ಷಪಾತವಿಲ್ಲದೆ ಕೃಪಾಪ್ರಸಾದವ ಸೂಚಿಸಿ ಆದಿಪ್ರಸಾದಿ ಸ್ಥಲಮಂ ಮುಗಿಸುತಿರ್ದಪಂ

ಸರ್ವಾನುಗ್ರಾಹಕಶ್ಶಂಭುಃ ಕೇವಲಂ ಕೃಪಯಾ ಪ್ರಭುಃ
ಮೋಚಯೇತ್ಸಕಲಾನ್ ಜಂತೂನ್ನ ಕಿಂಚಿದಿಹ ಕಾರಣಮ್ ॥

ಸ್ವತಂತ್ರನಾಗಿ ಸರ್ವಹಿತೈಷಿಯಾದ ಶಿವನು ಬಚ್ಚಬರಿಯ ಕೃಪೆಯಿಂದಲೆ ಸಕಲ

ಪ್ರಾಣಿಗಳನೂ ಪಾಶದಿಂ ಮುಕ್ತರನ್ನಾಗಿ ಮಾಡುವನು. ಈ ಪಾಶವಿಮೋಚನ ವಿಷಯದಲ್ಲಿ ಶಿವನಿಗೆ ಮತ್ತೇನು ಕಾರಣವಿಲ್ಲ, ಸರ್ವಾನುಗ್ರಾಹಕತ್ವವಾತಗೆ ಸ್ವಭಾವವಾದುದರಿಂ ದೆಂಬುದರ್ಥಂ ॥೬೬॥

## ೩೫. ಅಂತ್ಯಪ್ರಸಾದಿಸ್ಥಲ

ಬಳಿಕ ಅಣೋರಣೀಯಾನ್ಮಹತೋ ಮಹೀಯಾನ್ ಆತ್ಮಾಸ್ಯ ಜಂತೋರ್ನಿ ಹಿಂತೋ ಗುಹಾಯಾಂ ತಮಕ್ರತುಂ ಪಶ್ಯತಿ ವೀತಶೋಕೋ ಪ್ರಸಾದಾನ್ಮಹಿಮಾನಮಾತ್ಮನಃ ಹೀಗೆಂಬ ಕಠವಲ್ಲಿ ಶ್ರುತ್ಯುಕ್ತ ಪ್ರಕಾರದಿಂದ ಆದಿಪ್ರಸಾದಿಯೆ ಸರ್ವಾಶ್ರಯನಾಗಿ ಅಂತ್ಯನಾದ ಶಿವನ ಅನುಭವಪ್ರಸಾದವುಳ್ಳನೆಂಬುದರಿಂದಂತ್ಯಪ್ರಸಾದಿ ಎಂದು ಪೇಳುತಿರ್ದಪಂ.

ಲಯಸ್ಸರ್ವಪದಾರ್ಥಾನಾಮಂತ್ಯ ಇತ್ಯುಚ್ಯತೇ ಬುಧೈಃ
ಪ್ರಸಾದೋಽನುಭವಸ್ತಸ್ಯ ತದ್ವಾನಂತ್ಯಪ್ರಸಾದವಾನ್ ॥

ಭೂಮ್ಯಾದಿ ಶಿವಾಂತಪದಾರ್ಥಂಗಳ ಲಯಕ್ಕಾಶ್ರಯವಾದ ಪರಶಿವನೆ ಸರ್ವಾಂತ್ಯ ನೆಂದು ಬಲ್ಲವರಿಂ ಪೇಳಲ್ಪಡುವನು. ಆ ಸರ್ವಾಂತ್ಯನಾದ ಶಿವನ ಸಾಕ್ಷಾತ್ಕೃತಿ ಪ್ರಸಾದವು ಆ ಸಾಕ್ಷಾತ್ಕಾರರೂಪವಾದ ಅನುಭವಪ್ರಸಾದವುಳ್ಳ ಆದಿಪ್ರಸಾದಿಯೆ ಅಂತ್ಯಪ್ರಸಾದಿಯೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೬೭॥ ಬಳಿಕ ಸರ್ವಪದಾರ್ಥಲಯ ಪ್ರಕಾರಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ದೇವತಿರ್ಯಙ್ಮನುಷ್ಯಾದಿ ವ್ಯವಹಾರವಿಕಲ್ಪನಾ
ಮಾಯಾಕೃತಾ ಪರೇ ತತ್ತ್ವೇ ತಲ್ಲಯೇ ತತ್ ಕ್ಷಯೋ ಭವೇತ್ ॥

ದೇವತಿರ್ಯಙ್ಮನುಷ್ಯನೆಂಬಿವು ಮೊದಲಾದ ವ್ಯವಹಾರಭೇದವು ಪರಬ್ರಹ್ಮದಲ್ಲಿ ಮಾಯಾಕಲ್ಪಿತವಾದಂಥಾದು. ಆ ಮಾಯೆ ಲಯವಾದಲ್ಲಿ ಆ ಭೇದವೂ ಲಯವಾಹ ದೆಂಬುದರ್ಥಂ ॥೬೮॥ ಬಳಿಕಾ ಮಾಯಾಕ್ಷಯವೆಂತಹುದೆಂಬಲ್ಲಿ ಪೇಳುತಿರ್ದಪಂ.

ಪದಾರ್ಥಾಃ ಸ್ವಪ್ನ ಸಂದೃಷ್ಟಾಃ ಯಥಾ ಬೋಧೇ ಲಯಂ ಗತಾಃ
ತಥಾ ಸಂಸಾರಜಾಃ ಭಾವಾಃ ಲೀಯಂತೇ ಬ್ರಹ್ಮಬೋಧತಃ ॥

ಸ್ವಪ್ನ ಸಂದೃಷ್ಟಾ–ಸ್ವಪ್ನದಲ್ಲಿ ಕಾಣಲ್ಪಟ್ಟಂಥಾ, ಪದಾರ್ಥಃ–ಪದಾರ್ಥಗಳು, ಬೋಧೇ– ಜಾಗರದಲ್ಲಿ, ಯಥಾ ಲಯಂ ಗತಾಃ– ಹೆಂಗೆ ಲಯವನೆಯ್ದುವುದು, ತಥಾ– ಹಾಂಗೆ, ಸಂಸಾರಜಾಃ ಭಾವಃ– ಸಂಸಾರದಲ್ಲಿ ಉಂಟಾಗಿರ್ದಂಥಾ ಭಾವಗಳು, ಬ್ರಹ್ಮ ಬೋಧತಃ ಬ್ರಹ್ಮಜ್ಞಾನದಿಂದ, ಲೀಯಂತೇ–ಲಯವನ್ನೈದುವದು ॥೬೯॥*

ಸಾಕ್ಷಾತ್ಕೃತೇ ಪರೇ ತತ್ತ್ವೇ ಸಚ್ಚಿದಾನಂದಲಕ್ಷಣೇ
ಕ್ವ ಪದಾರ್ಥಪರಿಜ್ಞಾನಂ ಕುತೋ ಜ್ಞಾತೃತ್ವಸಂಭವಃ॥

---

* ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತ ವಿರಚಿತ ಸಿದ್ಧಾಂತಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮತತ್ತ್ವವು ಪ್ರತ್ಯಕ್ಷೀಕರಿಸಲಾಗಿ ಮಾಯೆ ನಾಶವನೈದಲಾಗಿ ಆ ಮಾಯಾಕಲ್ಪಿತ ಪದಾರ್ಥಪರಿಜ್ಞಾನವು ಜ್ಞೇಯಾಜ್ಞಾನಾತಿರಿಕ್ತವಾದ ಜ್ಞಾತೃತ್ವದಲ್ಲಿ ಆವಿರ್ಭಾವ ಎತ್ತಣದು. ಜ್ಞೇಯಾಜ್ಞಾನಾಪೇಕ್ಷೆಯಿಂ ಜ್ಞಾತೃತ್ವಂ ಕಲ್ಪಿತ ಎಂಬ ಕಾರಣದಿಂದೆಂಬುದರ್ಥಂ ॥೭೦॥ ಬಳಿಕಿಲ್ಲಿ ದೃಷ್ಟಾಂತರಮಂ ಪೇಳುತಿರ್ದಪಂ.

ಸುಷುಪ್ತಸ್ಯ ಯಥಾ ವಸ್ತು ನ ಕಿಂಚಿದಪಿ ಭಾಸತೇ
ತಥಾ ಮುಕ್ತಸ್ಯ ಜೀವಸ್ಯ ನ ಕಿಂಚಿದ್ವಸ್ತು ದೃಶ್ಯತೇ ॥

ಸುಷುಪ್ತಿಯಂ ಪಡೆದವಗೆ ಹೇಗೆ ಯಾವ ವಸ್ತುವು ಕಾಬುದಿಲ್ಲವೋ ಹಾಗೆ ಜೀವನ್ಮುಕ್ತಂಗೆ ಶಿವಾಭಿನ್ನವಾಗಿ ಕಾಬುದರಿಂ ಮಾಯಿಕಮಾಗಿ ಒಂದಿಷ್ಟು ವಸ್ತುವೂ ಕಾಣುದಿಲ್ಲವೆಂಬುದರ್ಥಂ ॥೭೧॥ ಬಳಿಕ ಜೀವನ್ಮುಕ್ತನ ಸ್ವರೂಪವೆಂಥಾದೆಂಬಲ್ಲಿ ಪೇಳುತಿರ್ದಪಂ.

ಯಥ್ಯಾಕಾಶಮವಿಚ್ಛಿನ್ನಂ ನಿರ್ವಿಕಾರಂ ಸ್ವರೂಪತಃ
ತಥಾ ಮುಕ್ತಸ್ಯ ಜೀವಸ್ಯ ಸ್ವರೂಪಮವಶಿಷ್ಯತೇ ॥

ಆಕಾಶವೂ ವಿಕಾರವಿಲ್ಲದ ತನ್ನ ಸ್ವರೂಪದಿಂದ ಹೇಗೆ ಪರಿಚ್ಛೇದವಿಲ್ಲದಿರುವುದು ಹಾಗೆ ಜೀವನ್ಮುಕ್ತ ಸ್ವರೂಪವು ಪ್ರಕಾಶಿಸುತ್ತಿಹದೆಂಬುದರ್ಥಂ ॥೭೨॥ ಬಳಿಕ ಜೀವನ್ಮುಕ್ತನು ಏನ ತಿಳಿವುತ್ತ ಏನ ಮಾಡುತ್ತ ಹೇಗಿರುವನೆಂಬಲ್ಲಿ ಪೇಳುತಿರ್ದಪಂ.

ನ ಕಿಂಚಿದಪಿ ಮುಕ್ತಸ್ಯ ದೃಶ್ಯಂ ಕರ್ತವ್ಯಮೇವ ವಾ
ಸುಖಸ್ಫೂರ್ತಿಸ್ವರೂಪೇಣ ನಿಶ್ಚಲಾ ಸ್ಥಿತಿರುಚ್ಯತೇ ॥

ಜೀವನ್ಮುಕ್ತನಿಗೆ ಕಾಣಲ್ತಕ್ಕದೂ ಮಾಡಲ್ತಕ್ಕದೂ ಒಂದಿಷ್ಟು ಇಲ್ಲ. ಸುಖ ಸ್ಫೂರ್ತಿ ರೂಪದಿಂ ನಿಶ್ಚಲವಾದ ಸ್ಥಿತಿ ಪೇಳಲ್ಪಡುವುದೆಂಬುದರ್ಥಂ ॥೭೩॥ ಬಳಿಕ ಜೀವನ್ಮುಕ್ತನಿಗೆ ದೃಶ್ಯವೂ ಕರ್ತವ್ಯವೂ ಏನು ಕಾರಣವಿಲ್ಲವೆಂಬುದಂ ಪೇಳುತ್ತ ಅಂತ್ಯಪ್ರಸಾದಿಸ್ಥಲಮಂ ಮುಗಿಸುತಿರ್ದಪಂ.

ಶಿವಾದ್ವೈತಪರಿಜ್ಞಾನಶಿಥಿಲಾಶೇಷವಸ್ತುನಃ
ಕೇವಲಂ ಸಂವಿದುಲ್ಲಾಸದರ್ಶಿನಃ ಕೇನ ಕಿಂ ಭವೇತ್॥

ಶಿವಾದ್ವೈತಜ್ಞಾನದಿಂ ನಿವೃತ್ತವಾದ ಸಕಲಭೇದವಸ್ತುವುಳ್ಳ ಆ ಕಾರಣದಿಂದಲೆ ಬಚ್ಚಬರಿಯ ಚಿದ್ವಿಲಾಸವನೆ ನೋಡುವ ಶಿವಯೋಗಿಗೆ ಜ್ಞಾನ ಕರ್ಮೇಂದ್ರಿಯ ವ್ಯಾಪಾರ ದಿಂದಲೂ ಮತ್ತೇತರಿಂದಲೂ ಏನೂ ಪ್ರಯೋಜನವಿಲ್ಲವೆಂಬುದರ್ಥಂ. ಈಯಾದ್ಯಂತ ಪ್ರಸಾದಗಳಿಗೆ ಉಪಕ್ರಮೋಪಸಂಹಾರನ್ಯಾಯದಿಂದೈಕ್ಯಂ ತಿಳಿಯಲ್ತಕ್ಕದು ॥೭೪॥

## ೩೬. ಸೇವ್ಯಪ್ರಸಾದಿಸ್ಥಲ

ಬಳಿಕ ಅಂತಶ್ಶರೀರ ಏ ವಾಯಂ ಬಾಹ್ಯ ಏವ ನ ಸಂಸ್ಥಿತಃ ಮಹಾನಂದ ಪ್ರಸಾದೋಽಯಂ ಸರ್ವತ್ರೈವಾವಭಾಸತೇ ಎಂಬ ಸರ್ವಜ್ಞಾನೋತ್ತರ ವಚನಾನುಸಾರದಿಂ

ಸೇವ್ಯ ಶಿವ ಗುರುಪ್ರಸಾದ ಸಂಪನ್ನನಾದ ಅಂತ್ಯಪ್ರಸಾದಿಯೆ ಸೇವ್ಯಪ್ರಸಾದಿ ಎಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಸೇವ್ಯೋ ಗುರುಸ್ಸಮಸ್ತಾನಾಂ ಶಿವ ಏವ ನ ಸಂಶಯಃ
ಪ್ರಸಾದೋಽಸ್ಯ ಪರಾನಂದಪ್ರಕಾಶಃ ಪರಿಕೀರ್ತ್ಯತೇ ॥

ಸಕಲರಿಗೂ ಸೇವ್ಯನಾದ ಗುರುರೂಪನಾದ ಶ್ರೀ ಗುರುವೇ ಸರಿ ಸಂದೇಹವಿಲ್ಲ. ಈ ಶ್ರೀಗುರ್ರುಪ್ರಸಾದವೆ ಪರಾನಂದ ಪ್ರಕಾಶ್ಯವೆಂದು ಪೇಳಲ್ಪಡುವುದೆಂಬುದರ್ಥಂ ॥೭೫॥

ಸೇವ್ಯೋ ಗುರುಸ್ಸ್ಮೃತ್ಯೋಹ್ಯಸ್ಯ ಪ್ರಸಾದೋಽನುಭವೋ ಮತಃ
ತದೇಕಾವೇಶರೂಪೇಣ ತದ್ವಾನ್ ಸೇವ್ಯಪ್ರಸಾದವಾನ್॥

ಶಿವಸ್ವರೂಪವಾದ ಶ್ರೀ ಗುರುವೇ ಸೇವ್ಯನೆಂದು ನೆನೆಯಲ್ತಕ್ಕನು. ಈ ಶಿವರೂಪನಾದ ಗುರುವಿನ ಉಪದೇಶಾನುಭವವೆ ಪ್ರಸಾದವೆಂದು ಸಮ್ಮತವು. ಆ ಶಿವಗುರು ತತ್ಪ್ರಸಾದಗಳ ಏಕೀಭಾವದಿಂದ ಪ್ರಸಾದವುಳ್ಳಾಂತ್ಯಪ್ರಸಾದಿಯ ಸೇವ್ಯಪ್ರಸಾದಿ ಎಂಬುದು ಪ್ರಸಿದ್ಧವೆಂಬು ದರ್ಥಂ॥೭೬॥

ಗರುರೇವ ಪರಂ ತತ್ತ್ವಂ ಪರತತ್ತ್ವಂ ಗುರುಸ್ಸ್ಮೃತಃ
ತದೇಕತ್ವಾನುಭಾವೇನ ನ ಕಿಂಚಿದವಶಿಷ್ಯತೇ ॥

ಗುರುಶಿವನಿಗೆ ಶಕ್ತಿ ಉದ್ಭವವುಂಟಾಗಿರುವುದರಿಂದೆ ತಾನು ಸಂಧಾನಮುಂಟಾಗ ಲಾಗಿ ತದ್ವ್ಯತಿರಿಕ್ತವಾಗಿ ತಿಳಿಯಲ್ತಕ್ಕದೊಂದಿಷ್ಟೂ ಇಲ್ಲ. ವಿಶ್ವವು ಶಿವಶಕ್ತಿಮಯವೆಂಬ ಕಾರಣದಿಂದೆಂಬುದರ್ಥಂ ॥೭೭॥ ಬಳಿಕ ಪರಮಾನಂದಾನುಭವವುಳ್ಳ ಸೇವ್ಯಪ್ರಸಾದಿಗೆ ಎಲ್ಲಿಯೂ ಪ್ರೀತಿಯಿಲ್ಲವೆಂದು ಸೂತ್ರತ್ರಯದಿಂ ಪೇಳುತಿರ್ದಪಂ.

ಅಪರಿಚ್ಛೇದ್ಯಮಾತ್ಮಸ್ಥಮವಾಙ್ಮಾನಸ ಗೋಚರಮ್
ಆನಂದಂ ಪಶ್ಯತಾಂ ಪುಂಸಾಂ ರತಿರನ್ಯತ್ರ ಕಾ ಭವೇತ್ ॥

ಖಂಡಿತವಿಲ್ಲದ ಮನೋವಚನಂಗಳಿಗೆ ಗೋಚರವಲ್ಲದ ಸ್ವಸ್ವರೂಪವಾದ ಪರಮಾನಂದಮಂ ಪ್ರತ್ಯಕ್ಷವಾಗಿ ಕಾಬ ಶಿವಯೋಗಿಗಳಿಗೆ ವಿಷಯಾಂತರಗಳಲ್ಲಿ ಅಭಿಲಾಷೆ ಯಾವದು. ಯಾವುದು ಇಲ್ಲವೆಂಬುದರ್ಥಂ ॥೭೮॥

ಜ್ಞಾನಾಮೃತೇನ ತೃಪ್ತಸ್ಯ ಕಿಮನ್ಯೈರ್ಭೋಜ್ಯವಸ್ತುಭಿಃ
ಜ್ಞಾನಾದೇವ ಪರಾನಂದಂ ಪ್ರಕಾಶಯತಿ ಸಚ್ಛಿವಃ ॥

ಜ್ಞಾನಾಮೃತದಿಂ ತೃಪ್ತನಾದ ಶಿವಯೋಗಿಗೆ ತದ್ವ್ಯತಿರಿಕ್ತವಾದ ಭೋಜ್ಯವಸ್ತು ಗಳಿಂದೇನು. ಏನೂ ಇಲ್ಲವೆಂಬುದರ್ಥಂ. ಅಗ್ನಿಗೆ ಉಷ್ಣತ್ವ ಪ್ರಕಾಶತತ್ತ್ವಂಗಳಂತೆ ಶಿವನಿಗೆ ಸಚ್ಚಿದಾನಂದಂಗಳು ಸ್ವಭಾವವಾದಂಥಾದು. ಅಂಥಾ ಸದ್ಗುರುಶಿವನು ನಿಜಜ್ಞಾನದಿಂದಲೆ ತನ್ನ ಸ್ವರೂಪವಾದ ನಿತ್ಯಾನಂದಮಂ ಪ್ರಕಾಶಿಸುತ್ತಿಹನೆಂಬ ಕಾರಣದಿಂದೆಂಬುದರ್ಥಂ ॥೭೯॥ ಬಳಿಕದನು ಸ್ಫುಟೀಕರಿಸುತಿರ್ದಪಂ.

ಮುಕ್ತಿರೇವ ಪರಾ ತೃಪ್ತಿಸ್ಸಚ್ಚಿದಾನಂದ ಲಕ್ಷಣಾ
ನಿತ್ಯತೃಪ್ತಸ್ಯ ಮುಕ್ತಸ್ಯ ಕಿಮನ್ಯೈರ್ಭೋಗಸಾಧನೈಃ ॥

ಸಚ್ಚಿದಾನಂದ ಸ್ವರೂಪವಾದ ಮುಕ್ತಿಯೆ ಪರತೃಪ್ತಿ ಎನಿಸಿಕೊಂಬುದು. ಆ ನಿತ್ಯ ತೃಪ್ತನಾದ ಶಿವಯೋಗಿಗೆ ಭೋಗಸಾಧನವಾದ ತದನ್ಯಪದಾರ್ಥಗಳಿಂದೇನು ಪ್ರಯೋಜನ ವಿಲ್ಲವೆಂಬುದರ್ಥಂ ॥೮೦॥ ಬಳಿಕ ಮುಕ್ತನಿಗೆ ಒಳಗೆ ಹೊರಗೆ ಏನೂ ಕರ್ಮವಿಲ್ಲವೆಂದು ಪೇಳುತ್ತಿರ್ದಪಂ.

ನ ಬಾಹ್ಯಕರ್ಮ ತಸ್ಯಾಸ್ತಿ ನ ಚಾಂತರ್ನೈವ ಕುತ್ರಚಿತ್
ಶಿವೈಕ್ಯಜ್ಞಾನ ರೂಢಸ್ಯ ದೇಹಭ್ರಾಂತಿಂ ವಿಮುಂಚತಃ ॥

ಸ್ವರೂಪಹಾನಿ ವೃದ್ಧಿಯಿಲ್ಲದೆ ಸ್ವಜಾತಿಯ ಸಮಾನ ಸಮರಸಭಾವದಿಂ ಶಿವೈಕ್ಯ ಜ್ಞಾನವನೇರಿ ದೇಹಾಹಂಭಾವಮಂ ಬಿಟ್ಟ ಆ ಸೇವ್ಯಪ್ರಸಾದಿಗೆ ಬಹಿರಂಗದಲ್ಲಿ ಮಾಡುವ ಪೂಜಾಕರ್ಮವೂ ಇಲ್ಲ. ಅಂತರಂಗದಲ್ಲಿ ಮಾಡುವ ಧ್ಯಾನಾದಿ ಕರ್ಮವೂ ಇಲ್ಲ. ಬಿಂದು ತಿರೋಭಾವಮಲಮಾಯಾದ್ಯುಪಲಕ್ಷಿತವಾದ ಕರ್ಮಪಾಶವೂ ಇಲ್ಲವೆಂಬುದರ್ಥಂ ॥೮೧॥ ಬಳಿಕ ಪ್ರಸಾದಿಸ್ಥಲಮಂ ಮುಗಿಸುತಿರ್ದಪಂ.

ನ ಕರ್ಮಬಂಧೇ ನ ತಪೋವಿಶೇಷೇ
ನ ಮಂತ್ರಯೋಗಾಭ್ಯಸನೇ ತಥೈವ
ಧ್ಯಾನೇನ ಬೋಧೇಚ ತದಾತ್ಮತತ್ತ್ವೇ
ಮನಃ ಪ್ರವೃತ್ತಿಃ ಪರಯೋಗಭಾಜಾಮ್ ॥

ಸರ್ವೋತ್ಕೃಷ್ಟವಾದ ಶಿವಯೋಗವ ಭಜಿಸುವ ಸೇವ್ಯಪ್ರಸಾದಿಗಳಿಗೆ ಚಿತ್ತವೃತ್ತಿಯು ಸೋಹಂ ರೂಪವಾದ ಅಜಪಾಗಾಯತ್ರಿಮಂತ್ರಾಭ್ಯಾಸದಲ್ಲಿಯೂ ಇಲ್ಲ. ಹಾಗೆ ಷಟ್ಕರ್ಮ ಬಂಧತ್ರಯರೂಪವಾದ ಹಠಯೋಗದಲ್ಲಿಯೂ ಇಲ್ಲ. ಯೋಗಗಳಿಗೆ ಶ್ರೇಷ್ಠವಾದ ರಾಜಯೋಗದಲ್ಲಿಯೂ ಇಲ್ಲ. ಅನಾಹತಬ್ರಹ್ಮಧ್ಯಾನ ರೂಪವಾದ ಲಯಯೋಗದಲ್ಲಿಯೂ ಇಲ್ಲ ಮತ್ತೇನೆಂದರೆ ಈ ಯೋಗಚತುಷ್ಟಯಚೈತನ್ಯಸ್ವರೂಪವಾದ ಸ್ವಸ್ವರೂಪದಲ್ಲಿ ಮನಃ ಪ್ರವೃತ್ತಿಯುಂಟಾಗಿರುವುದೆಂಬುದರ್ಥಂ. ಈ ಲಿಂಗತ್ರಯವ ಪ್ರಾಣಲಿಂಗಿಯ ಅಂಗತ್ರಯಕ್ಕೆ ಕ್ರಮದಿಂ ಸಂಬಂಧಿಸೂದು. ॥೮೨॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗೃಹೀತೇವೇದಾಗಮ ಪುರಾಣಾದಿ ಸಾರಭೂತೇ ವೀರಶೈವ ಧರ್ಮನಿರ್ಣಯೆ ಸಿದ್ಧಾಂತ ಶಿಖಾಮಣೌ ಪ್ರಾಣಲಿಂಗಿನ ವಿಷಯ ನವವಿಧಲಿಂಗಪ್ರಸಂಗೋನಾಮಷ್ಟಾದಶೀಯಃ ಪರಿಚ್ಛೇದಃ.

# ಏಕೋನವಿಂಶತಿಪರಿಚ್ಛೇದ

## ಶರಣಸ್ಥಲ

ಬಳಿಕಾಗಸ್ತ್ಯಂ ಪ್ರಶ್ನೆಯಂ ಮಾಡುತಿರ್ದಪಂ.

ಸ್ಥಲಭೇದಾಸ್ಸಮಾಖ್ಯಾತಾಃ ಪ್ರಾಣಲಿಂಗಿಸ್ಥಲಾಶ್ರಯಾಃ
ಕಥಯ ಸ್ಥಲಭೇದಂ ಮೇ ಶರಣಸ್ಥಲಸಂಶ್ರಿತಮ್ ॥

ಪ್ರಾಣಲಿಂಗಿಸ್ಥಲವನಾಶ್ರಯಿಸಿದ ಲಿಂಗಸ್ಥಲಭೇದಂಗಳು ಪೇಳಲ್ಪಟ್ಟವು. ಇನ್ನು ಶರಣಸ್ಥಲವನಾಶ್ರಯಿಸಿದ ಲಿಂಗಭೇದವನುಪದೇಶಿಸೆಂಬುದರ್ಥಂ ॥೧॥ ಬಳಿಕೀ ಪ್ರಶ್ನೆಗೆ ಶ್ರೀ ರೇಣುಕಾಚಾರ್ಯನುತ್ತರಮಂ ಪೇಳುತಿರ್ದಪಂ.

ಶರಣಸ್ಥಲಮಾಶ್ರಿತ್ಯ ಸ್ಥಲಂ ದ್ವಾದಶಕಂ ಮಯಾ
ಉಚ್ಯತೇ ನಾಮ ಸರ್ವೇಷಾಂ ಸ್ಥಲಾನಾಂ ಶೃಣು ತಾಪಸ ॥

ಅಹೋ ತಪಸ್ವಿಯಾದ ಅಗಸ್ತ್ಯನೆ ಎನ್ನಿಂ ಶರಣಸ್ಥಲವನಾಶ್ರಯಿಸಿದ ಸ್ಥಲಂಗಳು ಹನ್ನೆರಡು ಪೇಳಲ್ಪಡುತ್ತದೆ. ಆ ಹನ್ನೆರಡು ಸ್ಥಲಂಗಳ ಪೆಸರು ಕೇಳೆಂಬುದರ್ಥಂ ॥೨॥ ಬಳಿಕಾ ಸ್ಥಲಗಳಂ ಸೂತ್ರತ್ರಯದಿಂದುಪದೇಶಿಸುತಿರ್ದಪಂ.

ದೀಕ್ಷಾಪಾದೋದಕಂ ಪೂರ್ವಂ ಶಿಕ್ಷಾಪಾದೋದಕಂ ತತಃ
ಜ್ಞಾನಪಾದೋದಕಂ ಚಾಥ ಕ್ರಿಯಾನಿಷ್ಪತ್ತಿಕಂ ತತಃ ॥

ಭಾವನಿಷ್ಪತ್ತಿಕಂ ಚಾಥ ಜ್ಞಾನನಿಷ್ಪತ್ತಿಕಂ ತತಃ
ಪಿಂಡಾಕಾಶಸ್ಥಲಂ ಚಾಥ ಬಿಂದ್ವಾಕಾಶಸ್ಥಲಂ ತತಃ ॥

ಮಹಾಕಾಶಸ್ಥಲಂ ಚಾಥ ಕ್ರಿಯಾಯಾಶ್ಚ ಪ್ರಕಾಶನಮ್
ಭಾವಪ್ರಕಾಶನಂ ಪಶ್ಚಾತ್ತತೋ ಜ್ಞಾನಪ್ರಕಾಶನಮ್ ॥
ಸ್ವರೂಪಂ ಪೃಥಗೇತೇಷಾಂ ಕಥಯಾಮಿ ಯಥಾಕ್ರಮಮ್।

ಮೊದಲದು ದೀಕ್ಷಾಪಾದೋದಕಸ್ಥಲವು. ಆಮೇಲೆ ಶಿಕ್ಷಾಪಾದೋದಕಸ್ಥಲವು. ಆಮೇಲೆ ಜ್ಞಾನಪಾದೋದಕಸ್ಥಲವು. ಆಮೇಲೆ ಕ್ರಿಯಾನಿಷ್ಪತ್ತಿಸ್ಥಲವು. ಆಮೇಲೆ ಭಾವನಿಷ್ಪತ್ತಿ ಸ್ಥಲವು. ಬಳಿಕ ಜ್ಞಾನನಿಷ್ಪತ್ತಿಸ್ಥಲವು. ಅನಂತರದಲ್ಲಿ ಪಿಂಡಾಕಾಶಸ್ಥಲವು. ಬಳಿಕ ಬಿಂದ್ವಾಕಾಶ ಸ್ಥಲವು. ಬಳಿಕ ಮಹದಾಕಾಶಸ್ಥಲವು. ತರ್ವಾಯದಲ್ಲಿ ಕ್ರಿಯಾಪ್ರಕಾಶಸ್ಥಲವು ಆಮೇಲೆ ಭಾವಪ್ರಕಾಶಸ್ಥಲವು ಬಳಿಕ ಜ್ಞಾನಪ್ರಕಾಶಸ್ಥಲವು ಈ ಪ್ರಕಾರವಾದ ನಾಮಧೇಯವುಳ್ಳ ಹನ್ನೆರಡು ಸ್ಥಲಂಗಳ ಸ್ವರೂಪಮಂ ಭಿನ್ನಭಿನ್ನವಾಗಿ ಕ್ರಮದಿಂ ಪೇಳುತಿರ್ದಪನೆಂಬುದರ್ಥಂ ॥೫॥ ಬಳಿಕ ಆಚಾರ್ಯಃ ಪೂರ್ವರೂಪಮ್ ಅಂತೇವಾಸ್ಯುತ್ತರರೂಪಮ್ ವಿದ್ಯಾಸಂಧಿಃ ಹೀಗೆಂಬ ಶ್ರುತ್ಯುಕ್ತ ಪ್ರಕಾರದಿಂ ಅಸ್ಮಾತ್ತ್ರಿವಿತತಾದ್ಬಂಧಾತ್ಪರಸಂಸ್ಥಾ ನಿರೋಧಕಾತ್ ದೀಕ್ಷೈನು ಮೋಚಯೇತ್ಪೂರ್ವಂ ಶೈವಂ ಧಾಮ ನ ಯತ್ಯಪಿ ಎಂಬ ಸ್ವಾಯಂಭುವವಚನಾನು ಸಾರದಿಂದಲೂ ಸೇವ್ಯಪ್ರಸಾದಿಗೆ ಸುಲಭವಾದ ದೀಕ್ಷಾಪಾದೋದಕಸ್ಥಲಮಂ ನಿರೂಪಿಸುತಿರ್ದಪಂ.

## ೩೭. ದೀಕ್ಷಾಪಾದೋದಕಸ್ಥಲ

ದೀಕ್ಷಯಾಽಪಗತದ್ವೈತಂ ಯದ್ ಜ್ಞಾನಂ ಗುರುಶಿಷ್ಯಯೋಃ
ಆನಂದಸ್ಯೈಕ್ಯಮೇತೇನ ದೀಕ್ಷಾಪಾದೋದಕಂ ಸ್ಮೃತಮ್ ॥

ಗುರು ಶಿಷ್ಯರ ನಿಜಾನಂದದೊಳಗೇಕವಾದ ಜ್ಞಾನದಾನಮಲಕ್ಷಯರೂಪಚಿತ್ಕ್ರಿಯಾ ದೀಕ್ಷೆಯಿಂ ನಿವಾರಿಸಲ್ಪಟ್ಟದ್ವೈತವುಳ್ಳ ಯಾವುದಾನೊಂದು ಜ್ಞಾನವುಂಟು ಆ ಜ್ಞಾನದಿಂದ ಸೇವ್ಯಪ್ರಸಾದಿಗೆ ಸುಲಭವಾದ ದೀಕ್ಷಾಪಾದೋದಕವೆಂದು ನೆನೆಯಲ್ಪಟ್ಟಿತ್ತು. ದೀಕ್ಷೆಯಿಂ ತೊಲಗಲ್ಪಟ್ಟದ್ವೈತಜ್ಞಾನವುಳ್ಳ ಗುರುಶಿಷ್ಯನಿಜಾನಂದೈಕ್ಯವೇ ದೀಕ್ಷಾಪಾದೋದಕವೆಂಬುದು ತಾತ್ಪರ್ಯಂ ॥೬॥ ಬಳಿಕ ದೀಕ್ಷೆಯಿಂದುಂಟಾದ ಗುರುಶಿಷ್ಯೈಕ್ಯವೆ ದೀಕ್ಷಾಪಾದೋದಕವೆಂದು ಪಕ್ಷಾಂತರದಿಂ ಪೇಳುತಿರ್ದಪಂ.

ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ
ಶಿಷ್ಯಶ್ಚೋದಕಶಬ್ದೇನ ತಯೋರೈಕ್ಯಂ ತು ದೀಕ್ಷಯಾ ॥

ಮೊದಲು ಪೇಳಿದ ಪಕ್ಷವಲ್ಲದೆ ಪಾದಶಬ್ದದಿಂ ಶ್ರೀಗುರುವೆ ಪೇಳಲ್ಪಡುವನು. ಉದಕಶಬ್ದದಿಂ ಶಿಷ್ಯನು ಪೇಳಲ್ಪಡುವನು. ನಿಜಕರಸಂಜಾತಶಿಷ್ಯಮಸ್ತಕಾಘ್ರಾಣನ ರೂಪವಾದ ದೀಕ್ಷಾವಿಶೇಷದಿಂದವರೀರ್ವರಿಗೂ ಐಕ್ಯವಾದುದುಂಟು. ಅದು ದೀಕ್ಷಾ ಪಾದೋದಕವೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ॥೭॥ ಬಳಿಕ ದೀಕ್ಷೆಯಿಂ ಪ್ರಕಾಶಿಸಲ್ಪಟ್ಟ ಸತ್ಯಜ್ಞಾನಾನಂದೈಕ್ಯವೇ ದೀಕ್ಷಾಪಾದೋದಕವೆಂದು ಪಕ್ಷಾಂತರದಿಂ ಪೇಳುತಿರ್ದಪಂ.

ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ
ಜ್ಞಾನಂ ಚೋದಕಶಬ್ದೇನ ತಯೋರೈಕ್ಯಂ ತು ದೀಕ್ಷಯಾ ॥

ಪಾದಶಬ್ದದಿಂ ಬ್ರಹ್ಮಸ್ವರೂಪಜ್ಞಾನಂ ಪೇಳಲ್ಪಡುತ್ತಿಹುದು. ಹೃತ್ಕಮಲಮಧ್ಯಸ್ಥವಾದ ದೀಕ್ಷೆಯಿಂ ವಿಜ್ಞಾನಮಾನಂದಂ ಬ್ರಹ್ಮ ಎಂಬ ಶ್ರುತಿಪ್ರಮಾಣದಿಂ ಧರ್ಮಿ ಧರ್ಮರೂಪಾ ನಂದಜ್ಞಾನೈಕ್ಯಂ ದೀಕ್ಷಾಪಾದೋದಕವೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ॥೮॥ ಬಳಿಕ ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ ಎಂಬ ಬ್ರಹ್ಮೋಪನಿಷದ್ವಾಕ್ಯಾನುಸಾರದಿಂದ ಜ್ಞಾನಾನಂದವನೆ ವಿಶೇಷಿಸುತಿರ್ದಪಂ.

ಪರಸಂವಿತ್ಪ್ರಕಾಶಾತ್ಮಾ ಪರಮಾನಂದಭಾವನಾಮ್
ಅಧಿಗಮ್ಯ ಮಹಾಯೋಗೀ ನ ಭೇದಂ ಕ್ವಾಪಿ ಪಶ್ಯತಿ ॥

ಆ ಪಾದೋದಕದೀಕ್ಷಾಸಂಪನ್ನನಾದ ಶಿವಯೋಗಿಯೂ ಪರಬ್ರಹ್ಮಸ್ವರೂಪನಾದ ಜ್ಞಾನವೇ ತಾನೆಂಬ ಪ್ರಕಾಶವುಳ್ಳವನಾಗಿ ಪರಮಾನಂದಭಾವನೆಯನೈದಿ ನಿತ್ಯಪೂರ್ಣ ಜ್ಞಾನಾನಂದಭೇದವನೆಲ್ಲಿಯೂ ಕಾಣನು. ಬ್ರಹ್ಮಬಾಹ್ಯಸ್ಥಲವಿಲ್ಲದ ಕಾರಣದಿಂದೆಂಬುದರ್ಥಂ. ॥೯॥ ಆ ಕಾರಣದಿಂದಲೆ ಮತ್ತೊಂದನು ಬಯಸನೆಂದು ಪೇಳುತಿರ್ದಪಂ.

ದೇಶಕಾಲಾದ್ಯವಚ್ಛೇದ ವಿಹೀನಂ ನಿತ್ಯನಿರ್ಮಲಮ್
ಆನಂದಂ ಪ್ರಾಪ್ಯ ಬೋಧೇನ ನಾನ್ಯತ್ಕಾಂಕ್ಷತಿ ಸಂಯಮೀ ॥

ಶಿವಯೋಗೀಶ್ವರಂ ದೇಶಾಕಾಲಾದಿಗಳಿಂ ಪರಿಚ್ಛೇದವಿಲ್ಲದ ನಿತ್ಯನಿರ್ಮಲವಾದ ಬ್ರಹ್ಮಾನಂದಮಂ ಬ್ರಹ್ಮಜ್ಞಾನದಿಂದಲೆ ಪಡೆದು ಮತ್ತೊಂದಂ ಬಯಸರು ತದ್ವ್ಯತಿರಿಕ್ತ ವಸ್ತುವಿಲ್ಲದ ಕಾರಣದಿಂದೆಂಬುದರ್ಥಂ ॥೧೦॥ ಬಳಿಕಾ ದೀಕ್ಷಾಪಾದೋದಕಸ್ಥಲಮಂ ಮುಗಿಸುತಿರ್ದಪಂ.

ಜ್ಞಾನಾಮೃತಮಪಿ ಸ್ವಚ್ಛಂ ಗುರುಕಾರುಣ್ಯಸಂಭವಮ್
ಆಸ್ವಾದ್ಯ ರಮತೇ ಯೋಗೀ ಸಂಸಾರಾಮಯವರ್ಜಿತಃ ॥

ಗುರುಕೃಪೆಯಿಂದುಂಟಾದ ನಿರ್ಮಲಬ್ರಹ್ಮಜ್ಞಾನಾಮೃತಮಂ ಆಸ್ವಾದಿಸಿ ದೀಕ್ಷಾಪಾದೋದಕಮಂ ಸಂಪನ್ನನಾದ ಶಿವಯೋಗೀಶ್ವರನು ಭವರೋಗದಿಂ ಮುಕ್ತನಾಗಿ ತನ್ನ ಸ್ವರೂಪದಲ್ಲಿ ಕ್ರೀಡಿಸುತ್ತಿಹನೆಂಬುದರ್ಥಂ ॥೧೧॥

## ೩೮. ಶಿಕ್ಷಾಪಾದೋದಕಸ್ಥಲ

ಬಳಿಕ ಮಾಯಾಮಾತ್ರಮಿದಂ ದ್ವೈತಂ ಅದ್ವೈತಂ ಪರಮಾರ್ಥತಃ ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ ಉಪದೇಶಾದಯಂ ವಾದಃ ಜ್ಞಾತೇ ದ್ವೈತಂ ನ ವಿದ್ಯತೇ ಎಂಬ ಮುಂಡಕೋಪನಿಷದ್ವಚನಾನುಸಾರದಿಂದಾ ದೀಕ್ಷಾಪಾದೋದಕ ಸಂಪನ್ನನಾದ ಶಿವಯೋಗಿಶ್ವರಂಗೆ ಶಿಕ್ಷಾಪಾದೋದಕಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಗುರುಶಿಷ್ಯಮಯಂ ಜ್ಞಾನಂ ಶಿಕ್ಷಾಯೋಗಿನಮೀರ್ಯತೇ
ತಯೋಸ್ಸಮರಸತ್ವಂ ಹಿ ಶಿಕ್ಷಾಪಾದೋದಕಂ ಸ್ಮೃತಮ್ ॥

ಯಾವುದಾನೊಂದು ಶಿಕ್ಷೆಯು ಪೂರ್ವೋಕ್ತ ಪ್ರಕಾರದಿಂ ಪಾದೋದಕಶಬ್ದ ವಾಚ್ಯ, ಗುರುಶಿಷ್ಯೈಕ್ಯಜ್ಞಾನವೂ ಆ ದೀಕ್ಷಾಪಾದೋದಕಸಂಪನ್ನನಾದ ಶಿವಯೋಗಿಯಂ ಪ್ರೇರಿಸುತ್ತಿಹುದು. ಆ ಶಿಕ್ಷಾಜ್ಞಾನಗಳ ಸಮರಸತ್ವವಾವುದುಂಟು ಅದು ಶಿಕ್ಷಾಪಾದೋದಕ ವೆಂದು ನೆನೆಯಲ್ಪಟ್ಟಿತ್ತೆಂಬುದರ್ಥಂ ॥೧೨॥ ಬಳಿಕೀ ಪ್ರಕಾರವಾದ ಜ್ಞಾನಾಮೃತವು ಯಾರಿಂದ ಯಾತರಿಂದ ಯಾವಕಾರಣದಿಂ ಪಡೆಯಲ್ಪಡುವದೆಂಬಲ್ಲಿ ಪೇಳುತಿರ್ದಪಂ.

ಮಥಿತಾಚ್ಛಾಸ್ತ್ರಜಲಧೇರ್ಯುಕ್ತಿಮಂಥಾನ ವೈಭವಾತ್
ಗುರುಣಾ ಲಭ್ಯತೇ ಭೋಧಸುಧಾ ಸುಮನಸಾಂ ಗಣೈಃ ॥

ಯುಕ್ತಿ ಎಂಬ ಕಡೆಗೋಲಸಾಮರ್ಥ್ಯದತ್ತಣಿಂ ಕಡೆಯಲ್ಪಟ್ಟ ನಿಗಮಾಗಮರೂಪ ವೀರಶೈವಶಾಸ್ತ್ರಸಮುದ್ರದತ್ತಣಿಂ ಶಿಕ್ಷಾಚಾರ್ಯನಾದ ಗುರುವಿನಿಂ ಶಿವಾದ್ವೈತಜ್ಞಾನಾಮೃತವು ದೀಕ್ಷಾಪಾದೋದಕ ಸ್ವೀಕಾರದಿಂ ಶುದ್ಧಾಂತಃಕರಣರಾದ ಶಿವಯೋಗಿಗಳ ಸಮೂಹಂಗಳಿಂ ಸುರಗುರುವಿನ ಸಮುದ್ರಮಥನ ವಿಚಾರದಿಂ ಸುರರಿಗಮೃತಪ್ರಾಪ್ತಮಾದಂತೆ ಪಡೆಯಲ್ಪಡುವದೆಂಬುದರ್ಥಂ ॥೧೩॥ ಬಳಿಕಾ ಶಿವಯೋಗೀಶ್ವರ ಧರ್ಮಧರ್ಮಿ ಸ್ವರೂಪವಾದ ಚಿದಾನಂದಕತ್ವಮಂ ಸೂತ್ರತ್ರಯದಿಂ ವಿಶೇಷಿಸುತಿರ್ದಪಂ.

ಜ್ಞಾನಚಂದ್ರಸಮುದ್ಭೂತಾಂ ಪರಮಾನಂದಚಂದ್ರಿಕಾಮ್
ಪಶ್ಯಂತಿ ಪರಮಾಕಾಶೇ ಮುಕ್ತಿರಾತ್ರೌ ಮಹಾ ಧಿಯಃ ॥

ಸೂಕ್ಷ್ಮದೃಷ್ಟಿಯುಳ್ಳ ಶಿವಯೋಗಿಗಳು ಪರಾಪರಮುಕ್ತಿ ಎಂಬ ಗಾಢಾಂಧಕಾರ ಉಳ್ಳ ಪರಬ್ರಹ್ಮದ ಸದ್ರೂಪವಾದ ಹೃದಯಾಕಾಶದಲ್ಲಿ ಜ್ಞಾನಚಂದ್ರನಿಂದುಂಟಾದ ಪರಮಾನಂದವೆಂಬ ಬೆಳ್ದಿಂಗಳಿಂ ಸ್ವಸ್ವರೂಪವಾಹತನದಿಂ ನೋಡುತ್ತಿಹರೆಂಬುದರ್ಥಂ ॥೧೪॥ ಬಳಿಕ ಈ ಪ್ರಕಾರವಾದ ಪರಮಾನಂದಚಂದ್ರಿಕೆಯಂ ಕಂಡಲ್ಲಿ ಮತ್ತೊಂದು ಕಾಣಲ್ತಕ್ಕದು ಕೇಳಲ್ತಕ್ಕದಿಲ್ಲವೆಂದು ಪೇಳುತಿರ್ದಪಂ.

ದೃಷ್ಟೇ ತಸ್ಮಿನ್ಪರಾನಂದೇ ದೇಶಕಾಲಾದಿ ವರ್ಜಿತೇ
ದ್ರಷ್ಟವ್ಯಂ ವಿದ್ಯತೇ ನಾನ್ಯತ್ ಶ್ರೋತವ್ಯಂ ಜ್ಞೇಯಮೇವ ವಾ ॥

ದೇಶ ಕಾಲಾದಿಗಳಿಂ ಖಂಡಿತವಿಲ್ಲದ ಆ ಪರಾನಂದಪ್ರಕಾಶವು ಕಾಣುತ್ತಿರಲಾಗಿ ಮತ್ತೊಂದು ಚಕ್ಷುಸ್ಸಿನಿಂದ ತಿಳಿಯಲ್ತಕ್ಕದೂ ಇಲ್ಲ. ಸಕಲವೂ ತತ್ಕಾರ್ಯವಾದುದರಿಂ ತದ ಭಿನ್ನವೆ ಆದುದರತ್ತಣಿಂದೆಂಬುದರ್ಥಂ ॥೧೫॥ ಬಳಿಕ ಮತ್ತೊಂದನು ಬಯಸನೆಂದು ಪೇಳುತಿರ್ದಪಂ.

ಆತ್ಮಾನಂದೇನ ತೃಪ್ತಸ್ಯ ಕಾ ಸ್ಪೃಹಾ ವಿಷಯೇ ಸುಖೇ
ಗಂಗಾಜಲೇನ ತೃಪ್ತಸ್ಯ ಕೂಪತೋಯೇ ಕುತೋ ರತಿಃ ॥

ಗಂಗಾಜಲದಿಂ ತೃಪ್ತನಾದಾತಂಗೆ ಕೂಪೋದಕದಲ್ಲಿ ಹೇಗೆ ಪ್ರೀತಿಯಿಲ್ಲವೋ ಹಾಗೆ ನಿಜಾನಂದದಿಂ ತೃಪ್ತನಾದ ಶಿವಯೋಗಿಗೆ ವಿಷಯದಲ್ಲಿ ಇಚ್ಛೆ ಯಾವದುಂಟು. ಯಾವುದು ಇಲ್ಲವೆಂಬುದರ್ಥಂ ॥೧೬॥ ಬಳಿಕ ನಿಜಾನಂದದಿಂ ತೃಪ್ತನಾದ ಪರಮಯೋಗಿಗೆ ಪರಿಮಿತತೆಯುಂಟೋ ಇಲ್ಲವೋ ಎಂಬಲ್ಲಿ ಪೇಳುತಿರ್ದಪಂ.

ಯಸ್ಮಿನ್ನಪ್ರಾಪ್ತಕಲ್ಲೋಲೇ ಸುಖಸಿಂಧೌ ನಿಮಜ್ಜತಿ
ಸಾಮರಸ್ಯಾನ್ಮಹಾಯೋಗೀ ತಸ್ಯ ಸೀಮಾ ಕುತೋ ಭವೇತ್ ॥

ತರಂಗವಿಲ್ಲದ ಯಾವುದಾನೊಂದು ಚಿದಾನಂದಸಮುದ್ರದಲ್ಲಿ ಮಹಾಯೋಗಿಯು ಸಾಮರಸ್ಯದಿಂ ಮುಳುಗಿಹನು. ಆತಗೆ ಪರಿಮಿತಿ ಎತ್ತಣದು ಇಲ್ಲವೆಂಬುದರ್ಥಂ ॥೧೭॥ ಬಳಿಕೀ ಯೋಗಿಗೆ ಒಂದು ಸಮಯದಲ್ಲಿ ಒಂದು ಠಾವಿನಲ್ಲಿಯಾದರೂ ಭ್ರಾಂತಿಯುಂಟಾಗಿರುವುದೋ ಏನೆಂಬಲ್ಲಿ ಪೇಳುತ್ತೀ ಶಿಕ್ಷಾಪಾದೋದಕಸ್ಥಲಮಂ ಮುಗಿಸುತಿರ್ದಪಂ.

ಗುರುಪ್ರಸಾದಚಂದ್ರೇಣ ನಿಷ್ಕಲಂಕೇನ ಚಾರುಣಾ
ಯನ್ಮನಃ ಕುಮುದಂ ನಿತ್ಯಂಬೋಧಿತಂ ತಸ್ಯ ಕೋ ಭ್ರಮಃ ॥

ಕಳಂಕಿಲ್ಲದ ಮನೋಹರವಾದ ಗುರುಪ್ರಸಾದವೆಂಬ ಚಂದ್ರದಿಂದ ಯಾವ ಯೋಗಿಯ ಮನಸ್ಸೆಂಬ ಕನ್ನೈದಲು ನಿರಂತರವೂ ಅರಳಲ್ಪಟ್ಟಿರುವುದು ಆತನಿಗೆ ಭ್ರಾಂತಿ ದಾವದು ಇಲ್ಲವೆಂಬುದರ್ಥಂ ॥೧೮॥

## ೩೯. ಜ್ಞಾನಪಾದೋದಕಸ್ಥಲ

ನಾಧ್ಯಕ್ಷ ನಾಪಿ ತಲ್ಲೈಂಗಂ ನ ಶಾಬ್ದಮಪಿ ಶಾಂಕರಮ್ ಜ್ಞಾನಮಾಭಾತಿ ವಿಮಲಂ ಸರ್ವಥಾ ಸರ್ವವಸ್ತುಷು ವಚನಾನುಸಾರದಿಂದ ಶಿಕ್ಷಾಪಾದೋದಕ ಸಂಪನ್ನನಿಗೆ ಸುಲಭವಾದ ಜ್ಞಾನಪಾದೋದಕಸ್ಥಲಮಂ ಪ್ರಕಾಶಿಸುತಿರ್ದಪಂ.

ತದೈಕ್ಯ ಸಂಪದಾನಂದಜ್ಞಾನಂ ಜ್ಞಾನಗುರುರ್ಮತಃ
ತತ್ಸಾಮರಸ್ಯಂ ಶಿಷ್ಯಸ್ಯ ಜ್ಞಾನಪಾದೋದಕಂ ವಿದುಃ ॥

ವಿಜ್ಞಾನಮಾನಂದಂ ಬ್ರಹ್ಮ ಎಂಬ ಶ್ರುತಿಪ್ರಸಿದ್ಧವಾದ ಪಾದೋದಕ ಶಬ್ದ ವಾಚ್ಯವಾದ ಆನಂದಜ್ಞಾನವೇ ಜ್ಞಾನಗುರುವೆಂದು ಸಮ್ಮತವು. ಆ ಜ್ಞಾನಾನಂದಂಗಳ ಏಕತ್ವದಿಂ ತದೇಕಲ್ಲೋಲ ಭಾವಮಂ ಶಿಕ್ಷಾಪಾದೋದಕ ಸಂಪನ್ನನಾದ ಶಿವಯೋಗಿಗೆ ಜ್ಞಾನಪಾದೋದಕವನಾಗಿ ಬಲ್ಲವರು ತಿಳಿದಿಹರೆಂಬುದರ್ಥಂ ॥೧೯॥ ಬಳಿಕ ಜ್ಞಾನಚಂದ್ರನ ಪ್ರಕಾಶಮಂ ಸೂತ್ರದ್ವಯದಿಂ ಪೇಳುತಿರ್ದಪಂ.

ಅವಿದ್ಯಾರಾಹುನಿರ್ಮುಕ್ತೋ ಜ್ಞಾನಚಂದ್ರಸ್ಸುನಿರ್ಮಲಃ
ಪ್ರಕಾಶತೇ ಪರಾಕಾಶೇ ಪರಾನಂದ ಮಹಾದ್ಯುತಿಃ ॥

ನಿರ್ಮಲವಾದ ಶಿವಜ್ಞಾನವೆಂಬ ಚಂದ್ರನು ಅವಿದ್ಯಾ ಎಂಬ ರಾಹುವಿನಿಂದ ಬಿಡಲ್ಪಟ್ಟವನಾಗಿ ಪರಮಾನಂದರೂಪವಾದ ಮಹಾಕಲೆ ಪ್ರಕಾಶವುಳ್ಳವನಾಗಿ ಸರ್ವೋತ್ಕೃಷ್ಟವಾದ ಹೃದಯಾಕಾಶದಲ್ಲಿ ಒಪ್ಪುತ್ತಿಹನೆಂಬುದರ್ಥಂ ॥೨೦॥ ಹಾಗಾದಡೀ ಜ್ಞಾನವೇನಂ ಪೆಚ್ಚಿಸುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಅಜ್ಞಾನಮೇಘನಿರ್ಮುಕ್ತಃ ಪೂರ್ಣಜ್ಞಾನಸುಧಾಕರಃ
ಆನಂದಜಲಧೇರ್ವೃದ್ಧಿಮನುಪಶ್ಯನ್ನಿಭಾಸತೇ ॥

ತಾನು ಶಿವನಲ್ಲವೆಂಬ ಅಜ್ಞಾನಾವರಣದಿಂ ಬಿಡಲ್ಪಟ್ಟವನಾಗಿ ಅಂಡರಸನ್ಯಾಯದಿಂದಹವೆಂದು ವಿಶ್ವತಃ ಪರಿಪೂರ್ಣನಾದ ಜ್ಞಾನಚಂದ್ರನು ಸ್ವತಂತ್ರತಾರೂಪವಾದ ನಿಜಾನಂದಸಮುದ್ರದ ವೃದ್ಧಿಯಂ ನೋಡುತ್ತ ಪ್ರಕಾಶಿಸುತ್ತಿಹನೆಂಬುದರ್ಥಂ ॥೨೧॥ ಬಳಿಕೀ ಪ್ರಕಾರವಾದ ಜ್ಞಾನಚಂದ್ರೋದಯದಲ್ಲಿ ಯಾರು ಏನು ಕಾಬರೆಂಬಲ್ಲಿ ಪೇಳುತಿರ್ದಪಂ.

ಜ್ಞಾನಚಂದ್ರೋದಯೋ ಜಾತೇ ಧ್ವಸ್ತಮೋಹತಮೋಭರಾಃ
ಪಶ್ಯಂತಿ ಪರಮಾಂ ಕಾಷ್ಠಾಂ ಯೋಗಿನಃ ಸುಖರೂಪಿಣೀಮ್ ॥

ಜ್ಞಾನಚಂದ್ರೋದಯವಾಗಲಾಗಿ ಹೋಗಲ್ಪಟ್ಟ ಅಜ್ಞಾನಾಂಧಕಾರದ ಮೊತ್ತವುಳ್ಳ ಶಿವಯೋಗಿಗಳು ಪರಮಾನಂದರೂಪವಾದ ಸ್ವಸ್ವರೂಪಸ್ಥಿತಿಯ ಕಾಣುತ್ತಿಹರೆಂಬುದರ್ಥಂ ॥೨೨॥ ಬಳಿಕೀ ಪ್ರಕಾರದಿಂ ಚಂದ್ರನನಾಗಿ ವರ್ಣಿಸಿದ ಶಿವಜ್ಞಾನಮಂ ಸೂರ್ಯನಾಹತನದಿಂ ವರ್ಣಿಸುತ್ತ ವಿಚಿತ್ರಮಂ ತೋರಿಸುತಿರ್ದಪಂ.

ಮಾಯಾರಜನ್ಯಾ ವಿರಮೇ ಬೋಧಸೂರ್ಯೇ ಪ್ರಕಾಶಿತೇ
ನಿರಸ್ತಸರ್ವವ್ಯಾಪಾರಶ್ಚಿತ್ರಂ ಸ್ವಪಿತಿ ಸಂಯಮೀ ॥

ಲೋಕದಲ್ಲಿ ನಿಶಾವಸಾನದಲ್ಲಿ ಸೂರ್ಯೋದಯವಾಗಲಾಗಿ ಸಕಲಲೋಕವು ನಿದ್ರೆಯಿಂದ ಬಿಡಲ್ಪಟ್ಟವರಾಗಿ ವ್ಯಾಪಾರಮುಕ್ತರಾಗಿಹದು. ಮಾಯೆಯೆಂಬ ಗಾಢಾಂಧಕಾರಕ್ಕವಸಾನದಲ್ಲಿ ಶಿವಜ್ಞಾನಸೂರ್ಯಂ ಪ್ರಕಾಶಿಸುತ್ತಿರಲಾಗಿ ಶಿವಯೋಗೀಶ್ವರಂ ಬಿಡಲ್ಪಟ್ಟ

ವ್ಯಾಪಾರವುಳ್ಳವನಾಗಿಹನೆಂಬುದರ್ಥಂ ॥೨೩॥ ಬಳಿಕೀ ಯೋಗಿಗೆ ನಿರುಪಾಧಿಕ ಪರಮಾನಂದನಿರ್ಭಾವವ ಪ್ರಕಾಶಿಸುವಾಗ ಎಂಬಲ್ಲಿ ಪೇಳುತಿರ್ದಪಂ.

ಅನಾದ್ಯವಿದ್ಯಾವಿಚ್ಛಿತ್ತಿವೇಲಾಯಾಂ ಪರಯೋಗಿನಃ
ಪ್ರಕಾಶತೇ ಪರಾನಂದಃ ಪ್ರಪಂಚೇನ ವಿನಾ ಕೃತಃ ॥

ಅನಾದ್ಯವಿದ್ಯಾನಿವೃತ್ತಿ ಸಮಯದಲ್ಲಿ ಮಾಯೆಯೆಂಬ ಕಾರ್ಗತ್ತಲೆ ಹರವಾಗಲು ಪರಶಿವಯೋಗಿಗೆ ನಿರುಪಾಧಿಕ ಪರಮಾನಂದಾವಿರ್ಭಾವಂ ಪ್ರಕಾಶಿಸುತ್ತಿಹದೆಂಬುದರ್ಥಂ ॥೨೪॥ ಬಳಿಕ ಶಿವಯೋಗಿಗೂ ಪ್ರಪಂಚದರ್ಶನವಿರುವುದರಿಂದೆಂತು ನಿರುಪಾಧಿಕಾ ವಿರ್ಭಾವಮುಂಟಪ್ಪುದೆಂಬಲ್ಲಿ ಪೇಳುತಿರ್ದಪಂ.

ನಿತ್ಯಾನಂದೇ ನಿಜಾಕಾರೇ ವಿಮಲೇ ಪರತೇಜಸಿ
ವಿಲೀನಚೇತಸಾಂ ಪುಂಸಾಂ ಕುತೋ ವಿಶ್ವವಿಕಲ್ಪನಾ ॥

ನಿತ್ಯಾನಂದಸ್ವರೂಪನಾಗಿ ನಿರ್ಮಲವಾದ ನಿಜಾಕಾರವುಳ್ಳ ಚಿದಾದಿತ್ಯನಲ್ಲಿ ಅಡಗಿದ ಚಿತ್ತವೃತ್ತಿಯುಳ್ಳ ಸತ್ಪುರುಷರಾದ ಶಿವಯೋಗಿಗಳಿಗೆ ವಿಶ್ವವಿಕಲ್ಪವೆತ್ತಣದೆಂಬುದರ್ಥಂ ॥೨೫॥ ಬಳಿಕ ಜ್ಞಾನಪಾದೋದಕಸಂಪನ್ನನಾದ ಶಿವಯೋಗಿಯ ಪುಣ್ಯಾನಂದಕ್ಕೆ ಬ್ರಹ್ಮಾದಿಗಳ ಆನಂದವು ಸಮವಲ್ಲವೆಂದು ಸೂತ್ರದ್ವಯದಿಂ ಪೇಳುತಿರ್ದಪಂ

ಕುತೋ ಬ್ರಹ್ಮಾ ಕುತೋ ವಿಷ್ಣುಃ ಕುತೋ ರುದ್ರಃ ಕುತೋ ರವಿಃ
ಸಾಕ್ಷಾತ್ಕೃತಪರಾನಂದಜ್ಯೋತಿಷಃ ಸಾಮ್ಯಕಲ್ಪನಾ ॥

ಶಿವಯೋಗಿಗೆ ಭೇದವಿಲ್ಲದ ಕಾರಣದಿಂ ಅಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಮುಪಜೀವಂತಿ ಎಂಬ ಶ್ರುತಿಯಿಂ ಬ್ರಹ್ಮಾದಿಗಳ ಆನಂದವು ಸಾಕ್ಷಾತ್ಕರಿಸಲ್ಪಟ್ಟ ಪರಾನಂದ ಪ್ರಕಾಶವುಳ್ಳ ಶಿವಯೋಗಿಯ ಆನಂದಾಂಶಲೇಶಂಗಳೆಂಬುದರಿಂದೀ ಯೋಗಿಯ ಆನಂದಕ್ಕೆ ಸಾಮ್ಯ ಕಲ್ಪಿಸುವಲ್ಲಿ ಬ್ರಹ್ಮ ವಿಷ್ಣು ರುದ್ರ ರವಿಗಳೂ ಎಣೆಯಿಲ್ಲವೆಂಬುದರ್ಥಂ ॥೨೬॥ ಬಳಿಕೀ ಅರ್ಥವನೆ ಸ್ಫುಟೀಕರಿಸುತಿರ್ದಪಂ.

ಅಪರೋಕ್ಷಪರಾನಂದವಿಲಾಸಸ್ಯ ಮಹಾತ್ಮನಃ
ಬ್ರಹ್ಮವಿಷ್ಣ್ವಾದಯೋ ದೇವಾ ವಿಶೇಷಾಸ್ಸುಖಬಿಂದವಃ ॥

ಪ್ರತ್ಯಕ್ಷವಾದ ಪರಮಾನಂದವಿಲಾಸವುಳ್ಳ ಜ್ಞಾನಪಾದೋದಕಸಂಪನ್ನನಾದ ಶಿವಯೋಗಿಯೆ ಸುಖವಿಶೇಷ ಲೇಶಂಗಳು ಬ್ರಹ್ಮ ವಿಷ್ಣ್ವಾದಿ ದೇವರ್ಕಳೆಂಬುದರ್ಥಂ ॥೨೭॥

ಯನ್ಮಾತ್ರಾಸಹಿತಂ ಲೋಕೇ ವಾಂಛಂತಿ ವಿಷಯಂ ನರಾಃ
ತದಪ್ರಮೇಯಮಾನಂದಂ ಪರಮಂ ಕೋ ನ ವಾಂಛತಿ ॥

ಈ ಲೋಕದಲ್ಲಿ ನರರು ಯಾವ ಪರಬ್ರಹ್ಮದ ಚಿದಾನಂದಾಂಶದೊಡನೆ ಕೂಡಿದ ವಿಷಯಸುಖಮಂ ಬಯಸುತ್ತಿಹರು ಆ ವಿಷಯಜ್ಞಾನಸುಖಕಿಂದಾ ಅಪರಿಮಿತ

ಬ್ರಹ್ಮಾನಂದಮೆಂದಾವಾತ ಬಯಸನು. ಸಕಲ ಲೋಕವೂ ಬಯಸುವದೆಂಬುದರ್ಥಂ ॥೨೮॥

## ೪೦. ಕ್ರಿಯಾನಿಷ್ಪತ್ತಿಸ್ಥಲ

ಅದ್ವೈತಭಕ್ತಿಯುಕ್ತಸ್ಯ ಯೋಗಿನಃ ಸಕಲಾ ಕ್ರಿಯಾ ಆಸ್ತೇ ದಗ್ಧ ಪಟನ್ಯಾಯಾತ್ಕ್ರಿಯಾ ಮಾತ್ರಂ ಹಿ ನ ಕ್ರಿಯಾ ಎಂಬ ವೀರತಂತ್ರ ವಚನಾನುಸಾರದಿಂ ಜ್ಞಾನಪಾದೋದಕ ಸಂಪನ್ನನೆ ರಜ್ಜುಸರ್ಪನ್ಯಾಯದಿಂ ಕಲ್ಪಿತಕ್ರಿಯಾನಿಷ್ಪತ್ತಿಯುಳ್ಳವನೆಂದು ಕ್ರಿಯಾನಿಷ್ಪತ್ತಿ ಸ್ಥಲಮಂ ಮುಗಿಸುತಿರ್ದಪಂ.

ಪರಕಾಯೇ ಕ್ರಿಯಾಪತ್ತಿಃ ಕಲ್ಪಿತೈವ ಪ್ರಕಾಶತೇ
ರಜ್ಜೌ ಭುಜಂಗವದ್ಯಸ್ಮಾತ್ಕ್ರಿಯಾನಿಷ್ಪತ್ತಿಮಾನಯಮ್ ॥

ಪರಬ್ರಹ್ಮಕಾಯನಾದ ಜ್ಞಾನಪಾದೋದಕಸಂಪನ್ನನಾದ ಶಿವಯೋಗಿಯಲ್ಲಿ ಕ್ರಿಯೆಯೆಂಬ ರಜ್ಜುವಿನಲ್ಲಿ ಸರ್ಪತ್ವದಂತೆ ಯಾವುದಾನೊಂದು ಕಾರಣದಿಂ ಜ್ಞಾನಪಾದೋದಕ ಸಂಪನ್ನನಾದ ಶಿವಯೋಗಿಯು ಕ್ರಿಯಾನಿಷ್ಪತ್ತಿಯುಳ್ಳವನೆಂಬುದರ್ಥಂ ॥೨೯॥ ಬಳಿಕಾ ಕಾರಣದಿಂದಲೆ ಜ್ಞಾನಿಗೆ ಕರ್ಮಫಲವಿಲ್ಲೆಂದಾರುಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಜ್ಞಾನಿನೋ ಯಾನಿ ಕರ್ಮಾಣಿ ತಾನಿ ನೋ ಜನ್ಮಹೇತವಃ
ಅಗ್ನಿದಗ್ಧಾನಿ ಬೀಜಾನಿ ಯಥಾ ನಾಂಕುರ ಕಾರಣಮ್ ॥

ಜ್ಞಾನಿಗೆ ಯಾವ ಕರ್ಮಗಳುಂಟು ಅವಷ್ಟು ಅಗ್ನಿದಗ್ಧ ಬೀಜದಂತೆ ಆ ಕರ್ಮಂಗಳು ಫಲೋತ್ಪತ್ತಿಗೆ ಕಾರಣವಾಗವು. ಈ ಅರ್ಥದಲ್ಲಿ ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಾಸಾಕುರು ತೇರ್ಜುನ ಎಂದು ಗೀತಾವಾಕ್ಯವುಂಟಾಗಿರುವುದು ॥೩೦॥ ಅದು ಕಾರಣದಿಂ ಜ್ಞಾನಿ ಕರ್ಮ ಮಾಡಿದರೂ ಪ್ರಯೋಜನವಿಲ್ಲೆಂದು ಪೇಳುತಿರ್ದಪಂ.

ಕರ್ಮಣಾ ಕಿಂ ಕೃತೇನಾಪಿ ಜ್ಞಾನಿನೋ ನಿರಹಂಕೃತೇಃ
ವಿಕ್ರಿಯಾ ಪ್ರತಿಬಿಂಬಸ್ಥಾ ಕಿಂ ಕರೋತಿ ಹಿಮದ್ಯುತೇಃ॥

ನಾ ಮಾಡುತ್ತೇನೆಂಬ ಮೂಲಾಹಂಕಾರವಿಲ್ಲದ ಶಿವಜ್ಞಾನಿಗೆ ಮಾಡಿದ ಕರ್ಮಂದಿದಲೂ ಏನೂ ಪ್ರಯೋಜನವಿಲ್ಲ. ಅದೆಂತೆಂದಡೆ ಪ್ರತಿಬಿಂಬಗತವಾದ ವಿಕಾರವು ಬಿಂಬರೂಪನಾದ ಚಂದ್ರನಿಗೆಂತಿಲ್ಲ ಹಾಗೆ ಜ್ಞಾನಿಯು ನಿರುಪಾಧಿಕಚಿದ್ರೂಪನಾದುದರಿಂ ಕರ್ಮವಿಕಾರವಿಲ್ಲವೆಂಬುದರ್ಥಂ ॥೩೧॥ ಬಳಿಕ ಜ್ಞಾನಿಯಲ್ಲಿ ತೋರುವ ಕ್ರಿಯೆಯು ಕಲ್ಪಿತವೆಂಬಲ್ಲಿ ದೃಷ್ಟಾಂತರಮಂ ಪೇಳುತಿರ್ದಪಂ.

ಚಂದ್ರಸ್ಯ ಮೇಘಸಂಬಂಧಾದ್ಯಥಾ ಗಮನಕಲ್ಪನಾ
ತಥಾ ದೇಹಸ್ಯ ಸಂಬಂಧಾದಾರೋಪ್ಯಾ ಸ್ಯಾತ್ಕ್ರಿಯಾತ್ಮನಃ ॥

ಚಂದ್ರನಿಗೆ ಮೇಘಸಂಬಂಧದತ್ತಣಿಂದೆಂತು ಗಮನಕಲ್ಪನೆಯುಂಟಾಗಿರುವುದು ಹಾಗೆ ಮಹಾತ್ಮನಾದ ಶಿವಯೋಗಿಗೆ ದೇಹಸಂಬಂಧದಿಂ ಕ್ರಿಯೆಯು ಕಲ್ಪಿತವಾಹದೆಂಬುದರ್ಥಂ

||೩೨|| ಬಳಿಕ ಜ್ಞಾನಿ ಕರ್ಮವಮಾಡಿದರೂ ಕರ್ಮಲೇಪವಿಲ್ಲವೆಂಬಲ್ಲಿ ದೃಷ್ಟಾಂತರವಂ ಪೇಳುತಿರ್ದಪಂ.

ಜ್ಞಾನೀ ಕರ್ಮನಿರೂಢೋಽಪಿ ಲಿಪ್ಯತೇ ನ ಕ್ರಿಯಾಫಲೈಃ
ಘೃತಾದಿನಾ ಯಥಾ ಜಿಹ್ವಾ ಭೋಕ್ತ್ರೀ ಚಾಪಿ ನ ಲಿಪ್ಯತೇ ||

ಜ್ಞಾನಿಯಾದಾತನು ಕರ್ಮತತ್ಪರನಾದರೂ ಕರ್ಮಫಲದಿಂದ ಲೇಪಿಸಲ್ಪಡನು ಅದೆಂತೆಂದಡೆ ಜಿಹ್ವೆಯು ಘೃತಾದಿಗಳ ಭುಂಜಿಸುವಂಥಾದಾದರೂ ತದ್‌ಘೃತದ ಲೇಪವಿಲ್ಲದಂತೆ ಎಂಬುದರ್ಥಂ ||೩೩|| ಬಳಿಕಿಲ್ಲಿ ಜಿಹ್ವೆಯೆಂಬುದು ಜಲತತ್ತ್ವಮಯವಾದುದರಿಂ ದಾಂಗಲಾದಿಗಳಂತೆ ಲೇಪವಿಲ್ಲ. ಜ್ಞಾನಿಗೇನು ಕಾರಣಂ ಕರ್ಮಲೇಪವೆಂಬಲ್ಲಿ ಪೇಳುತಿರ್ದಪಂ.

ನಿರಸ್ತೋಪಾಧಿಸಂಬಂಧೇ ಜೀವೇ ಯಾ ಯಾ ಕ್ರಿಯಾಸ್ಥಿತಿಃ
ಸಾ ಸಾ ಪ್ರತೀತಿಮಾತ್ರೇಣ ನಿಷ್ಫಲಾ ಚಾತ್ರ ಲೀಯತೇ ||

ನಿವಾರಿಸಲ್ಪಟ್ಟ ಮೂಲಾಹಂಕಾರ ಸಂಬಂಧವುಳ್ಳ ಜೀವನ್ಮುಕ್ತನಿಗೆ ಯಾವ ಯಾವ ಕ್ರಿಯೆಯುಂಟು ಅದಷ್ಟು ದಗ್ಧರಜ್ಜುನ್ಯಾಯದಿಂ ತೋರಿಕೆ ಮಾತ್ರ ಉಂಟಾಗಿ ನಿತ್ಯನಲ್ಲಿಯೆ ಲಯವನ್ನೈದುತ್ತಿಹದು. ಕರ್ಮಲೇಪಕ್ಕೆ ಅಹಂಕಾರವೇ ಮೂಲವೆಂಬುದರಿಂ ಜೀವನ್ಮುಕ್ತನಿಗದಿಲ್ಲದ ಕಾರಣದಿಂ ಕರ್ಮಲೇಪವಿಲ್ಲವೆಂಬುದು ತಾತ್ಪರ್ಯಂ ||೩೪|| ಬಳಿಕ ಜ್ಞಾನಿಗೆ ಕರ್ಮಲೇಪವಿಲ್ಲವೆಂಬ ಹಾಗೆ ಕರ್ಮವೇ ಇಲ್ಲವೆಂಬ ಹಾಗೆ ಕರ್ಮವೆ ಇಲ್ಲವೆನ್ನಬಾರದೆಂಬಲ್ಲಿ ಪೇಳುತಿರ್ದಪಂ.

ಗಚ್ಛನ್ ತಿಷ್ಠನ್ ಸ್ವಪನ್ವಾಪಿ ನ ನಿಷ್ಕರ್ಮಾಸ್ತಿ ಕಶ್ಚನ
ಸ್ವಭಾವೋ ದೇಹಿನಾಂ ಕರ್ಮಜ್ಞಾನಿನಾಂ ತತ್ತು ನಿಷ್ಫಲಮ್ ||

ನಡೆವುತ್ತಿದ್ದರೂ ಕುಳಿತಿದ್ದರೂ ಮಲಗಿದ್ದರೂ ಕರ್ಮವಿಲ್ಲದವನೊಬ್ಬನೂ ಇಲ್ಲ ದೇಹಿಗಳಾದವರಿಗೆ ಕರ್ಮ ಸಹಜವೆ ಸರಿ. ಜ್ಞಾನಿಗಳಿಗುಂಟಾಗಿರುವ ಕರ್ಮಫಲ ಶೂನ್ಯವೆಂಬುದರ್ಥಂ ಇದರಿಂದ ಜ್ಞಾನಿಯಲ್ಲಿ ಕರ್ಮನಿಷ್ಪತ್ತಿಯು ರಜ್ಜುಭುಜಂಗ ನ್ಯಾಯದಿಂದಾರೋಪಿತವೆಂಬುದು ಪ್ರತ್ಯುಕ್ತವಾಯಿತೆಂದು ತಿಳಿವುದು ಕರ್ಮದೇಹಿಗಳಿಗೆ ಸ್ವಭಾವವೆಂದಂಗೀಕರಿಸಿದರಿಂದ ||೩೫|| ಬಳಿಕ ಕ್ರಿಯಾನಿಷ್ಪತ್ತಿಯು ಸರ್ವದೇಹಿಗಳ ಸ್ವಭಾವವಾದರೂ ಜ್ಞಾನಿಗೆ ಕರ್ಮಲೇಪವಿಲ್ಲವೆಂದು ಪೇಳುವಾತನಿಗೆ ಕ್ರಿಯಾನಿಷ್ಪತ್ತಿ ಸ್ಥಲಮಂ ಮುಗಿಸುತಿರ್ದಪಂ.

ಪರಿಪೂರ್ಣಮಹಾನಂದಭಾವಿನಶ್ಶುದ್ಧಚೇತಸಃ
ನ ಭವೇತ್ಕರ್ಮಕಾರ್ಪಣ್ಯಂ ನಾನಾಭೋಗಫಲಪ್ರದಮ್ ||

ನಿರ್ಮಲಾಂತಃಕರಣನಾಗಿ ನಿತ್ಯಪರಿಪೂರ್ಣಾನಂದ ಸ್ವರೂಪ ಪರಬ್ರಹ್ಮ ಭಾವವುಳ್ಳ ಶಿವಯೋಗಿಗೆ ನಾನಾಭೋಗಪ್ರದಮಾದ ಪುಣ್ಯಪಾಪವೆಂಬ ಕರ್ಮಪೀಡನ ಇಲ್ಲವೆಂಬುದರ್ಥಂ ||೩೬||

## ೪೧. ಭಾವನಿಷ್ಪತ್ತಿಸ್ಥಲ

ಬಳಿಕ ಚಿ ರೇಣ ಸಾಧ್ಯಮಾನಸ್ಯ ಭಾವೈಕ್ಯರ್ವಿಗತಶ್ರಮೈಃ ಸ್ಥಿರಭಾವೋ ಹಿ ಭಾವಸ್ಯ ಭಾವನಿಷ್ಪತ್ತಿರುಚ್ಯತೇ ಕಿರಣತಂತ್ರವಚನಾನುರೋಧದಿಂದಾ ಕ್ರಿಯಾನಿಷ್ಪತ್ತಿಯುಳ್ಳ ಶಿವಯೋಗಿಯು ಶುಕ್ತಿರಜತನ್ಯಾಯದಿಂ ಭಾವನಿಷ್ಪತ್ತಿಯುಳ್ಳವನೆಂದು ಪ್ರತಿಪಾದಿಸುತಿರ್ದಪಂ

ಭಾವಃ ಪ್ರತೀಯಮಾನೋऽಪಿ ಪರಕಾಯೇ ತು ಕಲ್ಪಿತಃ
ಶುಕ್ತೌ ರಜತವದ್ಯಸ್ಮಾದ್ಭಾವನಿಷ್ಪತ್ತಿಮಾನಯಮ್ ॥

ಕ್ರಿಯಾನಿಷ್ಪತ್ತಿಯುಳ್ಳ ಚಿತ್ಕಾಯವಿನಲ್ಲಿ ತೋರುವಂಥಾ ಭಾವವು ಯಾವ ಕಾರಣದಿಂ ಶುಕ್ತಿರಜತದಂತೆ ಕಲ್ಪಿಸಲ್ಪಟ್ಟದು ಆ ಕಾರಣದಿಂದೀ ಕ್ರಿಯಾನಿಷ್ಪತ್ತಿಯುಳ್ಳ ಶಿವಯೋಗಿಯು ಭಾವನಿಷ್ಪತ್ತಿಯುಳ್ಳವನೆಂಬುದರ್ಥಂ ॥೩೭॥ ಬಳಿಕ ಜ್ಞಾನಯೋಗಿಗೆ ಭಾವದೊಡನೆ ಸಂಬಂಧವಿಲ್ಲದಿರ್ದರೂ ಸಚ್ಚಿದಾನಂದಸ್ವರೂಪನಾದ ಪರಶಿವನಲ್ಲಿ ಭಾವವಿರಿಸಲ್ತಕ್ಕದೆಂದೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಭಾವೇನ ನಾಸ್ತಿ ಸಂಬಂಧಃ ಕೇವಲಜ್ಞಾನಯೋಗಿನಃ
ತಥಾಪಿ ಭಾವಂ ಕುರ್ವೀತ ಶಿವೇ ಸಂಸಾರಮೋಚಕೇ ॥

ಬಚ್ಚಬರಿಯ ಜ್ಞಾನಯೋಗಿಗೆ ಭಾವದೊಡನೆ ಸಂಬಂಧವಿಲ್ಲ. ಹಾಗಾದಡೂ ದುಃಖವಿಮೋಚಕನಾದ ಶಿವನಲ್ಲಿ ಭಾವವನಿರಿಸೂದೆಂಬುದರ್ಥಂ ॥೩೮॥ ಬಳಿಕ ಪೂರ್ಣಜ್ಞಾನಿಗೆ ಭಾವದಿಂದೇನು ಪ್ರಯೋಜನವೆಂಬಲ್ಲಿ ಪೇಳುತಿರ್ದಪಂ.

ಪರಿಪೂರ್ಣಪ್ರಬೋಧೇऽಪಿ ಭಾವಂ ಶಂಭೌ ನ ವರ್ಜಯೇತ್
ಭಾವೋ ಹಿ ನಿಹಿತಸ್ತಸ್ಮಿನ್ ಭವಸಾಗರತಾರಕಃ ॥

ಪರಿಪೂರ್ಣಾನಂದಸ್ವರೂಪನಾದ ಶಿವನಲ್ಲಿ ಭಾವವ ಚರ್ಚಿಸಲಾಗದು. ಏಕೆಂದಡೆ ಆ ಶಿವನಲ್ಲಿ ಇರಿಸಲ್ಪಟ್ಟ ಭಾವವು ಸಂಸಾರಸಮುದ್ರಂ ದಾಂಟಿಸುವುದೆಂದು ಪ್ರಸಿದ್ಧವಾದ ಕಾರಣದಿಂದೆಂಬುದರ್ಥಂ. ಇದರಿಂದ ಭಾವಾರ್ಥಕ್ರಿಯಾಕಾರಿಯಾದ ಕಾರಣದಿಂ ಶುಕ್ತಿ ರಜತ ವೈಲಕ್ಷಣ್ಯಂ ಸೂಚಿಸಲ್ಪಟ್ಟಿತ್ತು ॥೩೯॥ ಹಾಗಾದಡಾ ಭಾವವು ನಿತ್ಯವೋ ಏನೆಂಬಲ್ಲಿ ಪೇಳುತಿರ್ದಪಂ.

ನಿವರ್ತ್ಯ ಜನ್ಮಜಂ ದುಃಖಂ ಭಾವಃ ಶೈವೋ ನಿವರ್ತತೇ
ಯಥಾಕಾಷ್ಠಾದಿಕಂ ದಗ್ಧ್ವಾ ಸ್ವಯಂ ಶಾಮ್ಯತಿ ಪಾವಕಃ ॥

ವಹ್ನಿಯೆಂತು ಕಾಷ್ಠಾದಿಗಳಿಂ ದಹಿಂಸಿ ತಾನು ಶಾಂತವಾಹದು ಹಾಗೆ ಶಿವನಲ್ಲಿ ಇರಿಸಲ್ಪಟ್ಟ ಭಾವವು ಜನನ ಮರಣಗಳಿಂದುಂಟಾದ ದುಃಖವ ಕೆಡಿಸಿ ತಾನೂ ಕೆಡುವುದು. ಇದರಿಂದ ಭಾವಕ್ಕೆ ಅನಿತ್ಯತ್ವಂ ಸೂಚಿಸಲ್ಪಟ್ಟಿತೆಂಬುದು ತಾತ್ಪರ್ಯಂ ॥೪೦॥ ಬಳಿಕ ಭವರೋಗನಿವೃತ್ತ್ಯಾನಂತರದಲ್ಲಿ ಭಾವಕ್ಕೆ ಪ್ರಯೋಜನವಿಲ್ಲವೇ ಎಂಬಲ್ಲಿ ಪೇಳುತಿರ್ದಪಂ.

ಪ್ರಕಾಶಿತೇ ಶಿವಾನಂದೇ ತದ್ಭಾವೈಃ ಕಿಂ ಪ್ರಯೋಜನಮ್
ಸಿದ್ಧೌ ಸಾಧ್ಯೇ ಚಿರೇಣಾಪಿ ಸಾಧನೈಃ ಕಿಂ ಪ್ರಯೋಜನಮ್ ॥

ಬಹುಕಾಲದಿಂದ ಸಾಧ್ಯವು ಸಿದ್ಧವಾಗಲಾಗಿ ಸಾಧನಗಳಿಂದೆಂತು ಪ್ರಯೋಜನ ವಿಲ್ಲವೋ ಹಾಗೆ ಭವರೋಗ ನಿವೃತ್ತ್ಯಾನಂತರದಲ್ಲಿ ಭಾವಕ್ಕೆ ಪ್ರಯೋಜನವಿಲ್ಲವೆ ಎಂಬಲ್ಲಿ ಪೇಳುತಿರ್ದಪಂ. ಪ್ರಕಾಶತೇ ನಿತ್ಯಾನಂದ ನಿರ್ಭಾವವಾಗಲಾಗಿ ಶಿವಭಾವಗಳಿಂ ಪ್ರಯೋಜನ ವಿಲ್ಲವೆಂಬುದರ್ಥಂ ॥೪೧॥ ಹಾಗಾದಡೆ ಭಾವಲಯವಾದ ಮೇಲೆ ಯೋಗಿಯಾದಾತಂ ಪ್ರಕಾಶಿಸುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಏಕೀಕೃತೇ ಶಿವೇ ಭಾವೇ ಜ್ಞಾನೇನ ಸಹ ಸಂಯಮೀ
ವಿಸ್ಮಿತಾತ್ಮಸಮಾವೇಶಶ್ಶಿವಭಾವೇ ವಿಭಾಸತೇ ॥

ಘಟವು ನಷ್ಟವಾದರೆ ಪರಂಪರೆಯಿಂ ಪರಮಾಣುರೂಪದಿಂದಿರುವಂತೆ ಕಾರ್ಯನಾಶವು ಕಾರಣಾಕಾರದಿಂ ಸ್ಥಿತಿಯೆ ಆದ ಕಾರಣ ಭಾವವು ವೃತ್ತಿಜ್ಞಾನದೊಡನೆ ಶಿವನಲ್ಲಿ ಏಕೀಭೂತವಾಗಲಾಗಿ ಆ ಭಾವನಿಷ್ಪತ್ತಿಯುಳ್ಳ ಶಿವಯೋಗಿಯು ಆಶ್ಚರ್ಯದಿಂ ಕೂಡಿದ ಸ್ವರೂಪಸಮಾವೇಶವುಳ್ಳವನಾಗಿ ಶಿವೋಹಂಭಾವದಿಂ ಪ್ರಕಾಶಿಸುವನೆಂಬುದರ್ಥಂ ॥೪೨॥ ಬಳಿಕ ಭಾವಜ್ಞಾನಗಳಿಗೆ ಅಭೇದವನುಪಪಾದಿಸಿ ಭಾವನಿಷ್ಪತ್ತಿಸ್ಥಲಮಂ ಮುಗಿಸುತಿರ್ದಪಂ.

ನ ಭಾವೇನ ವಿನಾ ಜ್ಞಾನಂ ನ ಭಾವೋ ಜ್ಞಾನಮಂತರಾ
ಮೋಕ್ಷಾಯ ಕಾರಣಂ ಪ್ರೋಕ್ತಂ ತಸ್ಮಾದುಭಯಮಾಶ್ರಯೇತ್ ॥

ಭಾವವಿಲ್ಲದೆ ಜ್ಞಾನವಿಲ್ಲ, ಜ್ಞಾನವಿಲ್ಲದೆ ಭಾವವಿಲ್ಲವೆಂಬುದರಿಂದದೆಂತೂ ಅನ್ಯೋನ್ಯ ಕಾರಣತ್ವಮುಂಟಾಗಲಾಗಿ ಮೋಕ್ಷಕ್ಕೋಸ್ಕರವೆರಡನೂ ಆಶ್ರಯಿಸೂದೆಂಬುದರ್ಥಂ ॥೪೩॥

## ೪೨. ಜ್ಞಾನನಿಷ್ಪತ್ತಿಸ್ಥಲ

ಬಳಿಕ ಯಥಾ ಮನಃ ಪರೇ ತತ್ತ್ವೇ ಲಬ್ಧಲಕ್ಷ್ಯಂ ವಿಲೀಯತೇ ತಥಾ ಹ್ಯಶೇಷ ವಿಜ್ಞಾನಂ ವಿನಾಶಮುಪಗಚ್ಛತಿ ಎಂಬ ನಿಶ್ವಾಸಕಾರಿಕಾನುಸಾರದಿಂದ ಈ ಭಾವನಿಷ್ಪನ್ನನೆ ಸ್ವಪ್ನದಂತೆ ಜ್ಞಾನನಿಷ್ಪತ್ತಿಯುಳ್ಳವನೆಂದು ಪೇಳುತಿರ್ದಪಂ.

ಜ್ಞಾನಸ್ಯ ವ್ಯವಹಾರ್ಯೇಽಪಿ ಜ್ಞೇಯಾಭಾವಾತ್ಸ್ವಭಾವತಃ
ಸ್ವಪ್ನವಜ್ಜ್ಞಾನನಿಷ್ಪತ್ತ್ಯಾ ಜ್ಞಾನನಿಷ್ಪನ್ನ ಇತ್ಯಸೌ॥

ವಿಶ್ವವ್ಯವಹಾರದಲ್ಲಿ ವೃತ್ತಿಜ್ಞಾನಕ್ಕೆ ಸ್ಥಿರವಾದ ವಿಷಯವಿಲ್ಲದ ಕಾರಣದಿಂ ಭಾವನಿ ಷ್ಪತ್ತಿಯುಳ್ಳ ಶಿವಯೋಗಿಯು ಅಸ್ಥಿರವಾದ ಸ್ವಪ್ನಕ್ಕೆ ಸಮಾನವಾದ ಜ್ಞಾನನಿಷ್ಪತ್ತಿಯಿಂ ಜ್ಞಾನನಿಷ್ಪತ್ತಿ ಯುಳ್ಳವನೆಂದು ಪೇಳಲ್ಪಡುತ್ತಿಹನೆಂಬುದರ್ಥಂ ॥೪೪॥ ಬಳಿಕದನೆ ಪ್ರತಿಪಾದಿಸುತಿರ್ದಪಂ.

ಸ್ವಪ್ನಜಾತಂ ಯಥಾ ಜ್ಞಾನಂ ಸಹ ಸ್ವಾರ್ಥೈರ್ನಿವರ್ತತೇ
ತಥಾತ್ಮನಿ ಪ್ರಕಾಶೇ ತು ಜ್ಞಾನಂ ಜ್ಞೇಯಂ ನಿವರ್ತತೇ ॥

ಸ್ವಪ್ನೋತ್ಪನ್ನಜ್ಞಾನವೆಂತು ಸ್ವವಿಷಯದೊಡನೆ ಕೂಡಿ ನಾಶವಂ ಪಡೆವ ಹಾಗೆ ಸ್ವಸ್ವರೂಪವು ಪ್ರಕಾಶಿಸುತ್ತಿರಲಾಗಿ ಜಾಗ್ರದ್ದಶಾಜ್ಞಾನದೊಡನೆ ವಿಶ್ವವೂ ಸಡಿಲಿ ಹೋಗೋ

ದೆಂಬುದರ್ಥಂ ॥೪೫॥ ಬಳಿಕಾ ಸ್ವಸ್ವರೂಪಜ್ಞಾನಮುಂಟಾದರೆ ವಿಷಯವೇನು ಕಾರಣ ನಪ್ಪವಾಹದೆಂಬಲ್ಲಿ ಪೇಳುತಿರ್ದಪಂ.

ಪರಿಪೂರ್ಣೇ ಮಹಾನಂದೇ ಪರಮಾಕಾಶಲಕ್ಷಣೇ
ಶಿವೇ ವಿಲೀನಚಿತ್ತಸ್ಯ ಕುತೋ ಜ್ಞೇಯಾಂತರೇ ಕಥಾ ॥

ಪರಿಪೂರ್ಣಾನಂದಮಯವಾದ ಚಿದಾಕಾಶರೂಪ ಶಿವಲಿಂಗದಲ್ಲಿ ಅಡಗಿದ ಚಿತ್ತ ವೃತ್ತಿಯುಳ್ಳ ಮಹಾತ್ಮನಿಗೆ ವಿಷಯಾಂತರದಲ್ಲಿಯೂ ಪ್ರಸಂಗವೆತ್ತಣದು ಇಲ್ಲವೆಂಬುದರ್ಥಂ ॥೪೬॥ ಬಳಿಕ ಜ್ಞಾನನಿಷ್ಪತ್ತಿಯುಳ್ಳ ಶಿವಯೋಗಿಯ ಜ್ಞಾನವೆಂಥಾದೆಂಬಲ್ಲಿ ಪೇಳುತಿರ್ದಪಂ.

ಅಖಂಡಾನಂದಸಂವಿತ್ತಿಸ್ವರೂಪಂ ಬ್ರಹ್ಮಕೇವಲಮ್
ಮಿಥ್ಯಾ ತದನ್ಯದಿತ್ಯೇಷಾಂ ಸ್ಥಿತಿರ್ಜ್ಞಾನಮಿಹೋಚ್ಯತೇ ॥

ಪರಶಿವನೆಂಬ ಪೆಸರುಳ್ಳ ಪರಬ್ರಹ್ಮವು ಬಚ್ಚಬರಿಯ ಅಖಂಡಾನಂದಸಂವಿದ್ರೂಪ ವಾದಂಥಾದು. ತದ್ವ್ಯತಿರಿಕ್ತವಾಗಿ ಇಂಥ ರೂಪದಿಂ ತೋರುವೀ ವಿಶ್ವವು ಮೃಷೆಯೆಂಬೀ ಸ್ಥಿತಿಯು ಜ್ಞಾನವೆಂದೀ ಜ್ಞಾನನಿಷ್ಪತ್ತಿಸ್ಥಲದಲ್ಲಿ ಪೇಳಲ್ಪಡುತ್ತಿಹದೆಂಬುದರ್ಥಂ ॥೪೭॥ ಬಳಿಕ ವಿಶೇಷಲಕ್ಷಣಮಂ ಪೇಳುತಿರ್ದಪಂ.

ಸತ್ತಾತ್ಮನ್ಯಾನುವೃತ್ತಂ ಯದ್ಘಟಾದಿಷು ಪರಂ ಹಿ ತತ್
ವ್ಯಾವರ್ತಮಾನಾ ಮಿಥ್ಯೇತಿ ಸ್ಥಿತಿರ್ಜ್ಞಾನಮಿಹೋಚ್ಯತೇ ॥

ಸ ದೇವ ಸೌಮ್ಯ ಇದಮಗ್ರ ಆಸೀತಿತಿಯೆಂಬ ಶ್ರುತಿಯಿಂ ಸದ್ರೂಪವಾದ ಬ್ರಹ್ಮದಿಂ ಪರವಾದ ಘಟಾದಿಗಳಲ್ಲಿ ಅನುಸ್ಯೂತವಾದ ಯಾವುದಾನೊಂದು ನಾಮರೂಪ ಪ್ರಪಂಚವುಂಟು ಅದು ಮಿಥ್ಯೆಯೆಂದು ನಿವಾರಿಸುವ ಸ್ಥಿತಿಯು ಮಿಥ್ಯೆಯೆಂದೀ ಜ್ಞಾನ ನಿಷ್ಪತ್ತಿ ಸ್ಥಲದಲ್ಲಿ ಪೇಳಲ್ಪಡುತ್ತಿಹುದೆಂಬುರ್ಥಂ ॥೪೮॥ ಹಾಗಾದಡಾ ವಿದ್ಯಕ ಬ್ರಹ್ಮೋದ್ವೈತಾ ಪೇಕ್ಷೆಯಿಂದೀ ಶಿವಾದ್ವೈತಸಿದ್ಧಾಂತಕ್ಕೆ ವಿಶೇಷವೇನೆಂಬಲ್ಲಿ ಪೇಳುತಿರ್ದಪಂ.

ಅಕಾರಣಮಕಾರ್ಯಂ ಯದಶೇಷೋಪಾಧಿವರ್ಜಿತಮ್
ತದ್ಬ್ರಹ್ಮ ತದಹಂ ಚೇತಿ ನಿಷ್ಠಾಜ್ಞಾನಮುದೀರ್ಯತೇ ॥

ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ ಎಂಬ ಶ್ರುತಿಯಿಂ ಯಾವುದಾನೊಂದು ವಸ್ತುವು ಕಾರ್ಯಕಾರಣ ಶೂನ್ಯನಾಗಿ ಅವಿದ್ಯಾದಿ ಸಕಲೋಪಾಧಿಶೂನ್ಯವಾದಂಥಾದ ಆ ಬ್ರಹ್ಮವೆ ತಾನು ಚಕಾರದಿಂ ಸೂಚಿಸಲ್ಪಟ್ಟ ನಾಮರೂಪ ಪ್ರಪಂಚವು ಬ್ರಹ್ಮವೆಂಬ ದಾರ್ಢ್ಯವೆ ಜ್ಞಾನವೆಂದು ಪೂರ್ವೋಕ್ತ ಭಾವನೆಯಂತೆ ಪಕ್ಷದ್ವಯದಿಂ ಪೇಳಲ್ಪಟ್ಟಿತೆಂದು ಅನುಸಂಧಾನಿಸೂದು ॥೪೯॥ ಬಳಿಕೀ ಪ್ರಕಾರದಿಂ ಚಿದ್ರೂಪಬ್ರಹ್ಮದಲ್ಲಿ ಸಾಮರಸ್ಯಜ್ಞಾನನಿಷ್ಪತ್ತಿಯುಳ್ಳ ಶಿವಯೋಗಿಗೆ ಸ್ವಾತಿರಿಕ್ತವಾದ ತ್ರಿಪುಟಿಯ ಪ್ರಪಂಚ ವ್ಯವಹಾರವಿಲ್ಲವೆಂದು ಜ್ಞಾನನಿಷ್ಪತ್ತಿ ಸ್ಥಲಮಂ ಮುಗಿಸುತಿರ್ದಪಂ.

ಜ್ಞಾತ್ವಾಪ್ಯಹಂ ಜ್ಞೇಯಮಿದಮಿತಿ ವ್ಯವಹೃತಿಃ ಕುತಃ
ಅಭೇದಬ್ರಹ್ಮಸ್ವಾರಸ್ಯೇ ನಿರಸ್ತಾಖಿಲವಸ್ತುನಿ ॥

ನೇಹನಾ ನಾಸ್ತಿಯೆಂಬ ಶ್ರುತಿಯಿಂ ಪ್ರಾಪಂಚಿಕ ಭೇದಶೂನ್ಯವಾದ ಅದ್ವಿತೀಯ ಬ್ರಹ್ಮಸಾಮರಸ್ಯವುಂಟಾದಲ್ಲಿ ನಾನು ಜ್ಞಾತನು ಇದು ಜ್ಞೇಯವೆಂಬ ವ್ಯವಹಾರಕ್ಕೆ ಉತ್ತಾದು ಇಲ್ಲವೆಂಬುದರ್ಥಂ ॥೫೦॥

೪೩. ಪಿಂಡಾಕಾಶಸ್ಥಲ

ಬಳಿಕ ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರಮಃ ಹೀಗೆಂಬ ಅಮೃತಬಿಂದೂಪನಿಷದ್ವಚನಾನುಸಾರದಿಂ ಜ್ಞಾನನಿಷ್ಪತ್ತಿಯುಳ್ಳಾತಂಗೆ ಸುಲಭವಾದ ಪಿಂಡಾಕಾಶಸ್ಥಲಮಂ ಸೂತ್ರತ್ರಯದಿಂ ಪೇಳುತಿರ್ದಪಂ.

ಯಥಾ ಪಿಂಡಸ್ಥ ಆಕಾಶಸ್ತಥಾತ್ಮಾ ಪೂರ್ಣ ಉಚ್ಯತೇ
ಏತದರ್ಥ ವಿವೇಕೋ ಯಃ ಪಿಂಡಾಕಾಶಸ್ಥಲಂ ವಿದುಃ ॥

ಪೂರ್ಣವಾದ ಆಕಾಶವೆಂತು ಪಿಂಡದಲ್ಲಿರುವುದೋ ಹಾಗೆ ಪಿಂಡದಲ್ಲಿರುವ ಆತ್ಮನು ಪೂರ್ಣನೆಂಬ ವಿವೇಕವಾವದುಂಟು ಅದನ್ನು ಜ್ಞಾನನಿಷ್ಪತ್ತಿಸಂಪನ್ನನಿಗೆ ಪಿಂಡಾಕಾಶ ಸ್ಥಲವನಾಗಿ ತಿಳಿದಿಹರೆಂಬುದರ್ಥಂ ॥೫೧॥ ಬಳಿಕ ವ್ಯತಿರೇಕಮುಖದಿಂ ಪೇಳುತಿರ್ದಪಂ.

ಘಟೋಪಾದಿರ್ಯಥಾಕಾಶಃ ಪರಿಪೂರ್ಣಃ ಸ್ವರೂಪತಃ
ತಥಾ ಪಿಂಡಸ್ಥಿತೋಽಪ್ಯಾತ್ಮಾ ಪರಿಪೂರ್ಣಃ ಪ್ರಕಾಶತೇ ॥

ಘಟೋಪಾದಿವಿಶಿಷ್ಟಾಕಾಶವೆಂತು ಸ್ವರೂಪದಿಂ ಪೂರ್ಣವು ಹಾಗೆ ಶರೀರಸ್ಥನಾದ ಆತ್ಮನು ತನ್ನ ಸಚ್ಚಿದಾನಂದಸ್ವರೂಪದತ್ತಣಿಂ ಪೂರ್ಣನಾಗಿ ಪ್ರಕಾಶಿಸುತ್ತಿಹನೆಂಬುದರ್ಥಂ ॥೫೨॥ ಬಳಿಕಾ ಪಿಂಡಾಕಾಶವಿವೇಕವುಳ್ಳನಂ ಪೇಳುತಿರ್ದಪಂ.

ಅಂತಃಸ್ಥಿತಂ ಪರಾಕಾಶಂ ಶಿವಮದ್ವೈತಲಕ್ಷಣಮ್
ಭಾವಯೇದ್ಯಸ್ಸುಮನಸಾ ಪಿಂಡಾಕಾಶಃ ಸ ಉಚ್ಯತೇ ॥

ಹೃದಯಾಕಾಶದಲ್ಲಿರುವ ಮಹಾಕಾಶಸ್ವರೂಪವನೆರಡಲ್ಲದ ಶಿವನನ್ನಾಗಿ ನಿರಾಲಂಬ ವಾದ ಚಿತ್ತದಿಂದಾವಾತಂ ಧ್ಯಾನಿಸುತ್ತಿಹನು ಆತಂ ಪಿಂಡಾಕಾಶಸ್ವರೂಪನೆಂದು ಪೇಳಲ್ಪಡುವ ನೆಂಬುದರ್ಥಂ ॥೫೩॥ ಬಳಿಕ ದೇಹೋ ಶಿವಾಲಯಸ್ಸಾಕ್ಷಾತ್ತತ್ರಾಸ್ತೇ ಪರಮಶ್ಶಿವಃ ಇತಿ ನಿಶ್ಚಯ ಸದ್ಭಾವಃ ಪಿಂಡಜ್ಞೋ ಲಿಂಗಮುಚ್ಯತೇ ಎಂಬ ವಾತುಲೋತ್ತರ ವಚನಾನುಸಾರದಿಂದ ಧ್ಯಾನಿಸುವಾತನ ಶರೀರವೆ ಶಿವಾಲಯವು. ಆತನಿಗೆ ಶಿವ ತೋರುವನೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಶಿವಾಗಾರಮಿದಂ ಪ್ರೋಕ್ತಂ ಶರೀರಂ ಬೋಧದೀಪಿತಮ್
ಷಟ್ತ್ರಿಂಶತ್ತತ್ತ್ವಘಟಿತಂ ಸುಮನಃ ಪದ್ಮಪೀಠಕಮ್ ॥

ಶಿವಾದಿಭೂಮ್ಯಂತವಾದ ಮೂವತ್ತಾರುತತ್ತ್ವಂಗಳೆಂಬ ಸ್ತಂಭ ಕುಡ್ಯಾದಿಗಳಿಂ ನಿರ್ಮಿತವಾದ ಹೃತ್ಕಮಲವೆಂಬ ಪದ್ಮಪೀಠದಿ ಯುಕ್ತವಾಗಿ ಜ್ಞಾನದೀಪದಿಂ ಪ್ರಕಾಶಿಸುವ ಈ ಶರೀರವೆ ಶಿವಾಲಯವೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೫೪॥

ಪರಾಕಾಶಸ್ವರೂಪೇಣ ಪ್ರಕಾಶಃ ಪರಮೇಶ್ವರಃ
ಹೃದಾಕಾಶಗುಹಾಲೀನೋ ದೃಶ್ಯತೇಽಂತಶ್ಶರೀರಿಣಾಮ್ ॥

ಚಿದಾಕಾಶರೂಪದಿಂ ಪ್ರಕಾಶಿಸುವ ಪರಮೇಶ್ವರನು ಪ್ರಾಣಿಗಳ ಹೃದಯವೆಂಬ ಗುಹೆಯಲ್ಲಿ ಅಡಗಿ ದೇವನಾಗಿ ಉಪದೇಶ ಸಿದ್ಧರಿಂ ಕಾಣಲ್ಪಡುವನೆಂಬುದರ್ಥಂ ॥೫೫॥ ಹೇಗೆ ತೋರುವನೆಂಬಲ್ಲಿ ಪಕ್ಷಾಂತರದಿಂ ಪೇಳುತಿರ್ದಪಂ.

ಏತಚ್ಛಿವಪುರಂ ಪ್ರೋಕ್ತಂ ಸಪ್ತಧಾತು ಸಮಾವೃತಮ್
ಅತ್ರ ಹೃತ್ಪಂಕಜಂ ವೇಶ್ಮ ಸೂಕ್ಷ್ಮಾಂಬರಮನೋಹರಮ್ ॥

ತತ್ರ ಸನ್ನಿಹಿತಂ ಸಾಕ್ಷಾತ್ಸಚ್ಚಿದಾನಂದ ಲಕ್ಷಣಮ್
ನಿತ್ಯಸಿದ್ಧಃ ಪ್ರಕಾಶಾತ್ಮಾ ಜಲಸ್ಥಾಕಾಶವಚ್ಛಿವಃ ॥

ಸಪ್ತಧಾತುಗಳಿಂ ಪೂರ್ಣವಾದ ಕಾರಣ ಸ್ವಶರೀರವೆ ಶಿವಪುರವು. ಅಲ್ಲಿ ಸೂಕ್ಷ್ಮವಾದ ಅಂತರಾಕಾಶದಿಂ ಶೋಭಿಸುವ ಹೃತ್ಕಮಲವೇ ಅಂತಃಪುರವು. ಅಲ್ಲಿ ನಿತ್ಯ ಪೂರ್ಣನಾಹ ತನದಿಂ ಸಿದ್ಧನಾಗಿ ಸಚ್ಚಿದಾನಂದ ಸ್ವರೂಪನಾದ ಪರಶಿವನ ಹೃದಯವು ಸ್ವಚ್ಛವಾದ ಕಾರಣದಿಂ ಜಲಾಂತರ್ಗತವಾದ ಆಕಾಶದಂತೆ ಪ್ರತ್ಯಕ್ಷನಾಗಿರುವನೆಂಬುದರ್ಥಂ ॥೫೭॥ ಹಾಗಾದಡೆ ಅಪರಿಚ್ಛಿನ್ನವಾದ ಪರಮೇಶ್ವರನೆಂತು ಪರಿಚ್ಛಿನ್ನಹೃತ್ಕಮಲದಲ್ಲಿರುವನೆಂಬುದಂ ಪೇಳುವಾತನಾಗಿ ಪಿಂಡಾಕಾಶಸ್ಥಲಮಂ ಮುಗಿಸುತಿರ್ದಪಂ.

ಅಂತರಾಕಾಶಬಿಂಬಸ್ಥಮಶೇಷೋಪಾಧಿವರ್ಜಿತಮ್
ಘಟಾಕಾಶ ಇವಚ್ಛಿನ್ನಂ ಭಾವಯೇಚ್ಚಿನ್ಮಯಂ ಶಿವಮ್ ॥

ಹೃದಯಾಕಾಶವೆಂಬ ಪೀಠದಲ್ಲಿ ಸಕಲೋಪಾಧಿರಹಿತನಾಗಿ ಇರುವ ಚಿನ್ಮಯನಾದ ಶಿವನಂ ಘಟಾಕಾಶದಂತೆ ಭಿನ್ನವಾದವನಾಗಿ ಭಾವಿಸೂದೆಂಬುದರ್ಥಂ ॥೫೮॥

## ೪೪. ಬಿಂದ್ವಾಕಾಶಸ್ಥಲ

ಬಳಿಕ ಸದಾಶಿವಾದಿ ತತ್ತ್ವಾನಾಂ ಕಾರಣಂ ವ್ಯಾಪಕಃ ಪರಃ ಬಿಂದುರೂಪಶ್ಶಿವೋ ಧ್ಯೇಯಃ ಬಿಂದ್ವಾಕಾಶ ಇತೀರ್ಯತೇ ಎಂಬ ಕಿರಣಾಗಮ ವಚನಾನುಸಾರದಿಂದಾ ಪಿಂಡಾಕಾಶ ಸ್ಥಲ ಸಂಪನ್ನನಿಗೆ ಸುಲಭವಾದ ಬಿಂದ್ವಾಕಾಶಸ್ಥಲಮಂ ಪೇಳುತಿರ್ದಪಂ.

ಯಥ್ಯಾಕಾಶೋ ವಿಭುರ್ಜ್ಞೇಯಸ್ಸರ್ವಪ್ರಾಣ್ಯುಪರಿ ಸ್ಥಿತಃ
ತಥಾತ್ಮೇತ್ಯುಪಮಾನಾರ್ಥಂ ಬಿಂದ್ವಾಕಾಶಸ್ಥಲಂ ವಿದುಃ ॥

ಸಮಸ್ತವಾದ ಪ್ರಾಣಿಗಳ ಮೇಲಿರುವ ಆಕಾಶವೆಂತು ವಿಭುವಾಗಿ ತಿಳಿಯಲು ಯೋಗ್ಯವಂಥಾದು ಹಾಗೆ ಈ ಪಿಂಡಾಕಾಶಸ್ಥಲ ಸಂಪನ್ನನಾದ ಶಿವಯೋಗಿಯ ಆತ್ಮನು ಸರ್ವಪ್ರಾಣಿಪರಿವರ್ತಿಯಾದ ಆಕಾಶದಂತೆ ವ್ಯಾಪಕನಾಗಿ ತಿಳಿಯಲು ಯೋಗ್ಯನೆಂದು ಉಪಮಾನಾರ್ಥನಾಗಿಯೆ ಬಿಂದ್ವಾಕಾಶಸ್ಥಲಮಂ ತಿಳಿದಿಹದೆಂಬುದರ್ಥಂ ॥೫೯॥ ವಾಯುರ್ಯಥೈಕೋ ಭುವನಂ ಪ್ರವಿಷ್ಟಃ ರೂಪಂ ರೂಪಂ ಪ್ರತಿರೂಪೋ ಬಭೂವ ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚಯೆಂಬ

ಕಠವಲ್ಲಿಶ್ರುತ್ಯುಕ್ತ ದೃಷ್ಟಾಂತರಪೂರ್ವಕವಾಗಿ ನಾಲ್ಕುಸೂತ್ರಂಗಳಿಂದದನೆ ಪ್ರತಿಪಾದಿಸುತಿರ್ದಪಂ ॥೬೦॥

ಯಥೈಕೋ ವಾಯುರಾಖ್ಯಾತಸ್ಸರ್ವಪ್ರಾಣಿಗತೋ ವಿಭುಃ
ತಥಾತ್ಮಾ ವ್ಯಾಪಕಸ್ಸಾಕ್ಷಾತ್ಸರ್ವಪ್ರಾಣಿಗತಸ್ಸ್ವಯಮ್ ॥

ಸಮಸ್ತವಾದ ಪ್ರಾಣಿಗಳ ಪ್ರಾಣರೂಪವನ್ನೈದಿದ ವಾಯು ಒಂದೇ ವ್ಯಾಪಕನಾಗಿ ಪೇಳಲ್ಪಟ್ಟನು. ಹಾಗೆ ಆಹಮೆಂದು ವಡಬಕಾಲಾಗ್ನಿರೂಪದಿಂ ವಿಶ್ವವ್ಯಾಪಕನಾಗಿ ತೋರುತ್ತಿಹನು. ಹಾಗೆ ಸರ್ವೈಚೈತನ್ಯಾತ್ಮಕ ಚಿದ್ವಹ್ನಿರೂಪ ಪರಮೇಶ್ವರ ಒಬ್ಬನೆ ದೇವ ದಾನವ ಮಾನವ ತಿರ್ಯಕ್ ಸ್ಥಾವರ ರೂಪ ಚರಾಚರ ಪ್ರಾಣಿಗಳಲ್ಲಿ ನಾನೆಂದು ವ್ಯಕ್ತಾವ್ಯಕ್ತರೂಪದಿಂ ವ್ಯಾಪಕನಾಗಿ ಪ್ರಕಾಶಿಸುತ್ತಿಹನೆಂಬುದರ್ಥಂ ॥೬೧॥

ಯಥಾ ವಹ್ನಿರಮೇಯಾತ್ಮಾ ಸರ್ವತ್ರೈಕೋಽಪಿ ಭಾಸತೇ
ತಥಾ ಶಂಭುಸ್ಸಮಸ್ತಾತ್ಮಾ ಪರಿಚ್ಛೇದವಿವರ್ಜಿತಃ ॥

ಅಮೇಯಾತ್ಮಾ-ಅಪ್ರಮೇಯವಾಗಿರ್ದಂಥಾ, ವಹ್ನಿಃ- ಅಗ್ನಿ ಪುರುಷನು, ತೇಜಸಾ- ತೇಜಸ್ಸಿನಿಂದ, ಸರ್ವತ್ರೋ ಯಥಾ ಭಾತಿ-ಸರ್ವತ್ರ ಹೇಗೆ ಒಪ್ಪುತ್ತ ಇಹನು, ತಥಾ-ಹಾಂಗೆ, ಶಿವಃ- ಶಿವನು, ಶಕ್ತಿ ಭೇದೇನ-ಶಕ್ತಿ ವಿಶೇಷದಿಂದ, ಸರ್ವಗತೋಭವೇತ್- ಸರ್ವಗತನಾಗಿ ಒಪ್ಪುವನು ॥೬೨॥*

ಸರ್ವೇಷಾಂ ದೇಹಿನಾಮಂತಶ್ಚಿತ್ತೇತೋಯಂ ಪ್ರಕಾಶತೇ
ತಸ್ಮಿನ್ಪ್ರತಿಫಲತ್ಯಾತ್ಮಾ ಶಿವೋ ದರ್ಪಣವದ್ವಿಭುಃ॥

ಸಮಸ್ತವಾದ ಪ್ರಾಣಿಗಳೊಳಗೆ ಚಿತ್ತಂ ತು ಚೇತೋ ಹೃದಯಂ ಕಮಲಂ ಸಲಿಲಂ ಜಲಮೆಂದು ಕೋಶಪ್ರಸಿದ್ಧ ಹೃದಯಕಮಲವು ದರ್ಪಣದಂತೆ ಪ್ರಕಾಶಿಸುತ್ತಿಹುದು ಆ ಚಿತ್ತದರ್ಪಣದಲ್ಲಿ ವ್ಯಾಪಕನಾದ ಶಿವನು ಆತ್ಮನಾಗಿ ಪ್ರತಿಫಲಿಸುತ್ತಿಹನೆಂಬುದರ್ಥಂ ॥೬೩॥

ಏಕೋ ವಶೀಕೃತಸ್ಸಂವಿತ್ಪ್ರಕಾಶಾತ್ಮಾ ಪರಾತ್ಪರಃ
ಸರ್ವಪ್ರಾಣಿಗತೋ ಭಾತಿ ತಥಾಪಿ ವಿಭುರುಚ್ಯತೇ ॥

ವಿಶ್ವೋತ್ಕೃಷ್ಟವಾದ ಪರಾಶಕ್ತಿಗಿಂತಲೂ ಶ್ರೇಷ್ಠನಾದ ಚಿತ್ಪ್ರಕಾಶಾತ್ಮಕನಾದ ಶಿವನೊರ್ವನೆ ಸರ್ವಪ್ರಾಣಿಗಳ ಹೃದಯಕಮಲವನ್ನೈದಿ ತತ್ತ್ಪರಮಿತನಾಗಿ ತೋರುತ್ತಿಹನು ಹಾಗಾದರೂ ಸರ್ವಾನುಸ್ಯೂತನಾದುದರಿಂ ವಿಭುವೆಂದು ಪೇಳಲ್ಪಡುವನೆಂಬುದು ಪೂರ್ವೋಕ್ತ ಗ್ರಂಥದ ಮೇಲೆ ಬಂದ ಶಂಕೆಗುತ್ತರಂ ॥೬೪॥ ಬಳಿಕ ಬಿಂದ್ವಾಕಾಶ ಸ್ಥಲಮಂ ಮುಗಿಸುತಿರ್ದಪಂ.

ಏಕ ಏವ ಯಥಾ ಸೂರ್ಯಸ್ತೇಜಸಾ ಭಾತಿ ಸರ್ವಗಃ
ತಥಾತ್ಮಾ ಶಕ್ತಿಭೇದೇನ ಶಿವಸ್ಸರ್ವಗತೋ ಭವೇತ್ ॥

ಸೂರ್ಯನೊಬ್ಬನೆ ತನ್ನ ಸಂಬಂಧವಾದ ವೃಷ್ಟಿ ಹಿಮೋಷ್ಣ ಕಿರಣಂಗಳ ತೇಜಸ್ಸಿ

---

*ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ನಿಂದೆಂತು ವ್ಯಾಪಕನಾಗಿ ತೋರುತ್ತಿಹನು ಹಾಗೆ ಶಿವಸ್ವರೂಪನಾದ ಆತನು ತನ್ನದಾದ ಇಚ್ಛಾಜ್ಞಾನಾದಿ ಶಕ್ತಿಗಳಿಂ ವಿಶ್ವಮಂ ವ್ಯಾಪಿಸಿಕೊಂಡಿಹನೆಂಬುದರ್ಥಂ ॥೬೫॥

### ೪೫. ಮಹಾಕಾಶಸ್ಥಲ

ಬಳಿಕ ವ್ಯೋಮಾಕಾರಂ ಮಹಾಸೂಕ್ಷ್ಮಂ ವ್ಯಾಪಕಮ್ ಯೋ ನ ಭಾವಯೇತ್ ಸಂಸಾರೀ ಸ ಭವೇಲ್ಲೋಕೇ ಬೀಜಕೋಶ ಕ್ರಿಮಿರ್ಯಥಾ ಇತಿ ದೇವೀಕಾಲೋತ್ತರ ವಚನಾನುಸಾರದಿಂದ ಪೂರ್ವೋಕ್ತ ಬಿಂದ್ವಾಕಾಶಸ್ಥಲ ಸಂಪನ್ನನಾದ ಶಿವಯೋಗಿಗೆ ಸುಲಭವಾದ ಮಹಾಕಾಶಸ್ಥಲಮಂ ನಿರೂಪಿಸುತಿರ್ದಪಂ.

ಪಿಂಡಾಂಡಸ್ಥಂ ಯಥ್ಯಾಕಾಶಂ ನ ಭಿನ್ನಂ ತದ್ವದಾತ್ಮನಃ
ಅಭಿನ್ನಃ ಪರಮಾತ್ಮೇತಿ ಮಹಾಕಾಶಸ್ಥಲಂ ವಿದುಃ ॥

ಬ್ರಹ್ಮಾಂಡ ಪಿಂಡಾಂಡಗತವಾದ ಆಕಾಶವೆಂತು ಭಿನ್ನವಲ್ಲದಂಥಾದು ಹಾಗೆ ಬಿಂದ್ವಾಕಾಶಸಂಪನ್ನನಾದ ಶಿವಯೋಗಿಯ ಚೈತನ್ಯದತ್ತಣಿಂ ಪರಮಾತ್ಮ ಭಿನ್ನವಲ್ಲವೆಂಬ ಅಭೇದವನೆ ಮಹಾಕಾಶಸ್ಥಲವನಾಗಿ ತಿಳಿದಿಹರೆಂಬುದರ್ಥಂ ॥೬೬॥

ಯಥಾ ನ ಭಿನ್ನಮಾಕಾಶಂ ಘಟೇಷು ಚ ಮಠೇಷು ಚ
ತಥಾಂಡೇಷು ಚ ಪಿಂಡೇಷು ಸ್ಥಿತೋಽಹ್ಯಾತ್ಮಾ ನ ಭಿದ್ಯತೇ ॥

ಘಟ ಮಠಾದಿಗಳಲ್ಲಿ ಇರುವ ಆಕಾಶವೆಂತು ಒಂದೇ ಸರಿ ಹಾಗೆ ಬ್ರಹ್ಮಾಂಡ ಪಿಂಡಾಂಡಗಳಲ್ಲಿರುವ ಆತ್ಮನು ಒಬ್ಬನೆ ಸರಿ ಎಂಬುದರ್ಥಂ ॥೬೭॥

ಅನಿರ್ದೇಶ್ಯಮನೌಪಮ್ಯಮವಾಙ್ಮಾನಸಗೋಚರಮ್
ಸರ್ವತೋಮುಖ ಸಂಪನ್ನಂ ಸತ್ಯಾನಂದಂ ಚಿದಾತ್ಮಕಮ್ ॥

ಕಾಲಾತೀತಂ ಕಲಾತೀತಂ ಕ್ರಮಯೋಗಾದಿವರ್ಜಿತಮ್
ಸ್ವಾನುಭೂತಿಪ್ರಮಾಣಸ್ಥಂ ಜ್ಯೋತಿಷಾಮುದಯಸ್ಥಲಮ್ ॥

ಶಿವಾಖ್ಯಂ ಪರಮಂ ಬ್ರಹ್ಮ ಪರಮಾಕಾಶಲಕ್ಷಣಮ್
ಲಿಂಗಮಿತ್ಯುಚ್ಯತೇ ಸದ್ಭಿರ್ಯದ್ವಿನಾ ನ ಜಗತ್ಸ್ಥಿತಿಃ ॥

ಕುರುಹಿಡಲು ಶಕ್ಯವಲ್ಲದ ಉಪಮೆ ಇಲ್ಲದ ವಾಕ್ಯಕ್ಕೂ ಮನಸ್ಸಿಗೂ ಗೋಚರವಲ್ಲದ ಸರ್ವತೋಮುಖವುಳ್ಳ ಸಚ್ಚಿದಾನಂದಾತ್ಮಕವಾದ ಅಷ್ಟತ್ರಿಂಶತ್ತತ್ವಗಳಂ ಮೀರದ ಉತ್ಪತ್ಯಾದಿ ಕ್ರಮಯೋಗವಿಲ್ಲದ ಅರ್ಕಾದಿ ತೇಜಸ್ಸುಗಳಿಂದುತ್ಪತ್ತಿ ಸ್ಥಾನವಾದ ಅಹಮೆಂಬ ಸ್ವಾನುಭೂತಿ ಪ್ರಮಾಣಗೋಚರವಾದ ಮಹಾಕಾಶ ಸ್ವರೂಪವಾದ ಶಿವನೆಂಬ ಪೆಸರುಳ್ಳ ಪರಬ್ರಹ್ಮವು ಸತ್ಪುರುಷ ಲಿಂಗವೆಂದು ಪೇಳಲ್ಪಡುವುದು. ಯಾವುದಾನೊಂದು ಶಿವಲಿಂಗವಲ್ಲದೆ ಜಗತ್ತಿನ ಸ್ಥಿತಿ ಇಲ್ಲವೆಂಬುದರ್ಥಂ ॥೭೦॥ ಬಳಿಕ ಪೇಳಿದರ್ಥವನೆ ಸೂತ್ರದ್ವಯದಿಂ ವಿಶೇಷಿಸುತಿರ್ದಪಂ.

ಪರಮಾಕಾಶಮವ್ಯಕ್ತಂ ಪ್ರಬೋಧಾನಂದಲಕ್ಷಣಮ್
ಲಿಂಗಂಜ್ಯೋತಿರ್ಮಯಂ ಪ್ರಾಹುರ್ಲೀಯಂತೇ ಯತ್ರ ಯೋಗಿನಃ॥

ಯಾವುದಾನೊಂದು ಮಹಾಕಾಶದಲ್ಲಿ ಶಿವಯೋಗಿಗಳು ಲಯವನ್ನೈದುತ್ತಿಹರೆಂದು ಆ ಮಹಾಕಾಶಮಂ ಮಂದಭಾಗ್ಯರಿಂ ತಿಳಿಯಲು ಶಕ್ಯವಲ್ಲದ ಸಚ್ಚಿದಾನಂದರೂಪ ಜ್ಯೋತಿರ್ಮಯಲಿಂಗವಾಗಿ ಸತ್ಪುರುಷರು ಪೇಳುತ್ತಿಹರೆಂಬುದರ್ಥಂ ॥೭೧॥

ಸಂವಿದೇವ ಪರಾಕಾಷ್ಠಾ ಪರಮಾನಂದರೂಪಿಣೀ
ತಾಮಾಹುಃ ಪರಮಾಕಾಶಂ ಮುನಯೋ ಮುಕ್ತಸಂಶಯಾಃ ॥

ಹೋಗಲ್ಪಟ್ಟಸಂಶಯವುಳ್ಳ ವಸಿಷ್ಠಾದಿಮುನಿಗಳು ಯಾವುದಾನೊಂದು ಪರಮಾಕಾಶಮಂ ಪೇಳುವರು. ಏನೆಂದು ಪೇಳುವರೆಂದರೆ ಸಚ್ಚಿದಾನಂದ ರೂಪನಾಗಿ ಸರ್ವೋತ್ಕೃಷ್ಟವಾದ ಸಂಪತ್ತೆಂದು ಪೇಳುವರೆಂಬುದರ್ಥಂ ॥೭೨॥ ಬಳಿಕ ಮಹಾಕಾಶದಲ್ಲಿ ಜಗಜ್ಜಾಲಕ್ಕೆ ಅಭೇದಮಂ ದೃಷ್ಟಾಂತರಪೂರ್ವಕವಾಗಿ ಪೇಳುತಿರ್ದಪಂ.

ತರಂಗಾದಿ ಯಥಾ ಸಿಂಧೋಃ ಸ್ವರೂಪಾನ್ನಾತಿರಿಚ್ಯತೇ
ತಥಾ ಶಿವಾಚ್ಚಿದಾಕಾಶಾದ್ವಿಶ್ವಮೇ ತನ್ನಭಿದ್ಯತೇ ॥

ತರಂಗ ಬುದ್ಬುದಾದಿಗಳೆಂತು ಸಮುದ್ರದತ್ತಣಿಂ ಭಿನ್ನವಲ್ಲವೊ ಹಾಗೆ ಚಿದಾಕಾಶ ಸ್ವರೂಪನಾದ ಶಿವನತ್ತಣಿಂದೀ ವಿಶ್ವ ಭಿನ್ನವಲ್ಲಮೆಂಬುದರ್ಥಂ ॥೭೩॥ ಬಳಿಕ ಮತ್ತೊಂದು ದೃಷ್ಟಾಂತರಮಂ ಪೇಳುತಿರ್ದಪಂ.

ಯಥಾ ಪುಷ್ಪಪಲಾಶಾದಿ ವೃಕ್ಷರೂಪಾನ್ನಭಿದ್ಯತೇ
ತಥಾ ಶಿವಾತ್ಪರಾಕಾಶಾಜ್ಜಗತೋ ನಾಸ್ತಿ ಭಿನ್ನತಾ ॥

ಪುಷ್ಪ ಪತ್ರೆ ಮುಂತಾದುದೆಂತು ವೃಕ್ಷದತ್ತಣಿಂ ಭಿನ್ನವಲ್ಲವ್ರೋ ಹಾಗೆ ಮಹಾಕಾಶ ರೂಪನಾದ ಶಿವನತ್ತಣಿಂ ವಿಶ್ವಕ್ಕೆ ಭೇದವಿಲ್ಲವೆಂಬುದರ್ಥಂ ॥೭೪॥ ಬಳಿಕ ಚಿದಾಕಾಶಂ ನಿರವಯವಾದ ಕಾರಣದಿಂದಲ್ಲಿ ವಿಶ್ವವೆಂತು ತೋರೂದೆಂಬಲ್ಲಿ ಪೇಳುತಿರ್ದಪಂ.

ಯಥಾ ಜ್ಯೋತೀಂಷಿ ಭಾಸಂತೇ ಭೂತಾಕಾಶೇ ಪೃಥಕ್ ಪೃಥಕ್
ತಥಾ ಭಾಂತಿ ಪರಾಕಾಶೇ ಬ್ರಹ್ಮಾಂಡಾನಿ ವಿಶೇಷತಃ ॥

ಭೂತಾಕಾಶದಲ್ಲಿ ನಕ್ಷತ್ರಗಳು ಭಿನ್ನ ಭಿನ್ನವಾಗಿ ಹೇಗೆ ತೋರುತ್ತಿಹವ್ರೋ ಹಾಗೆ ಚಿದಾಕಾಶದಲ್ಲಿ ಬ್ರಹ್ಮಾಂಡಗಳೂ ಭಿನ್ನ ಭಿನ್ನವಾಗಿ ಪ್ರಕಾಶಿಸುತ್ತಿಹವೆಂಬುದರ್ಥಂ ॥೭೫॥ ಬಳಿಕೀ ಅರ್ಥವನೆ ವಿಶೇಷಿಸಿ ಮಹಾಕಾಶಸ್ಥಲಮಂ ಮುಗಿಸುತಿರ್ದಪಂ.

ನಿರಸ್ತೋಪಾಧಿಸಂಬಂಧಂ ನಿರ್ಮಲಂ ಸಂವಿದಾತ್ಮಕಮ್
ಪರಾಕಾಶಂ ಜಗಚ್ಚಿತ್ರವಿಲಾಸಾಲಂಬಭಿತ್ತಿಕಃ ॥

ನಿವಾರಿಸಲ್ಪಟ್ಟ ಉಪಾಧಿಸಂಬಂಧವುಳ್ಳ ನಿರ್ಮಲವಾದ ಚಿದ್ರೂಪವಾದ ಮಹಾಕಾಶವು ಜಗತ್ತೆಂಬ ಚಿತ್ರದ ಏಳಿಗೆಗೆ ಆಧಾರಸ್ಥಾನವಾದಂಥಾದೆಂಬುದರ್ಥಂ. ಈ ಪಿಂಡಾಕಾಶಾದಿಲಿಂಗತ್ರಯವ ಶರಣನ ಲಿಂಗತ್ರಯಕ್ಕೆ ಸಂಬಂಧಿಸೂದು ॥೭೬॥

## ೪೬. ಕ್ರಿಯಾಪ್ರಕಾಶಸ್ಥಲ

ಬಳಿಕ ಕ್ರಿಯಾವಂತಃ ಶ್ರೋತ್ರಿಯಾಃ ಬ್ರಹ್ಮನಿಷ್ಠಾ ಎಂಬ ಮುಂಡಕಶ್ರುತ್ಯನುಸಾರದಿಂ

ಮೋಕ್ಷಪ್ರದಂ ಚೈಹಿಂಕ ಸೌಖ್ಯದಂ ಚ ಸರ್ವೋತ್ತರಂ ಶಾಂಕರಕರ್ಮ ಸತ್ಯಮ್ ಎಂಬ ಯೋಗಜಾಗಮ ವಚನಾನುಸಾರದಿಂದಲೂ ಮಹಾಕಾಶಸ್ವರೂಪನಾದ ಶಿವಯೋಗಿಯೆ ತತ್ಸ್ವರೂಪಾನುಸಂಬಂಧರೂಪವಾದ ಕ್ರಿಯಾಪ್ರಕಾಶವುಳ್ಳವನೆಂದು ಪೇಳುತಿರ್ದಪಂ.

ಶಿವಸ್ಯ ಪರಿಪೂರ್ಣಸ್ಯ ಚಿದಾಕಾಶಸ್ವರೂಪಿಣಃ
ಆತ್ಮತ್ವೇನಾನುಸಂಧಾನಾತ್ ಕ್ರಿಯಾದ್ಯೋತನವಾನ್ಯಮೀ ॥

ಮಹಾಕಾಶಸ್ವರೂಪನಾದ ಶಿವಯೋಗಿಯು ಪರಿಪೂರ್ಣಚಿದಾಕಾಶ ಸ್ವರೂಪನಾದ ಶಿವನ ಸ್ವಾತ್ಮನಾಹತನದಿಂದನುಸಂಧಾನಿಸುವ ಕ್ರಿಯೆಯುಳ್ಳವನೆಂಬುದರಿಂ ಕ್ರಿಯಾಪ್ರಕಾಶ ವುಳ್ಳವನೆಂದು ಪೇಳಲ್ಪಡುವನೆಂಬುದರ್ಥಂ ॥೭೭॥ ಬಳಿಕ ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲ ಕ್ರಿಯಾ ಚ ಯೆಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ಜ್ಞಾನ ಕ್ರಿಯಾತ್ಮಿಕಾ ಸ್ವಾಪಿ ಸತ್ತ್ವಾ ನಿತ್ಯೋದಿತಪ್ರಭಾ ಅನ್ಯಾಸ್ಯಾಚ್ಛಿವಾತ್ಸ್ಯೈವ ವಸ್ತುತೋ ಮೂರ್ತಿರೈಶ್ವರೀಯೆಂಬ ಪೌಷ್ಕರವಚನದಿಂದಲೂ ತದನುಸಂಧಾನಕ್ರಿಯೆಯನೆ ಸೂತ್ರತ್ರಯದಿಂ ನಿರೂಪಿಸುತಿರ್ದಪಂ.

ನಿಷ್ಕಲಂಕಚಿದಾನಂದಗಗನೋಪಮರೂಪಿಣಃ
ಶಿವಸ್ಯ ಪರಿಪೂರ್ಣಸ್ಯ ವೃತ್ತಿಶ್ಚೈತನ್ಯರೂಪಿಣೀ ॥

ದೋಷವಿಲ್ಲದ ಪರಿಪೂರ್ಣ ಚಿದಾನಂದಾಕಾಶ ಸ್ವರೂಪನಾದ ಶಿವನ ಅಸ್ಮಿ ಎಂಬ ಕ್ರಿಯಾರೂಪವಾದ ಸ್ಥಿತಿಯು ಶಿವನಂತೆ ಚಿದ್ರೂಪವಾದಂಥಾದೆಂಬುದರ್ಥಂ ॥೭೮॥ ಬಳಿಕ ಶಿವಯೋಗಿಯು ಅನುಸಂಧಾನರೂಪವಾದ ಯಾವುದಾನೊಂದು ಶಕ್ತಿಯುಂಟು. ಅದೇ ಪರಶಿವತೇಜೋರೂಪವಾದಂಥಾದೆಂದು ಪೇಳಲ್ಪಡುತ್ತಿಹದೆಂಬುದರ್ಥಂ ಬಳಿಕ ಅನುಸಂಧಾನದಿಂದೇನು ಪ್ರಯೋಜನವೆಂಬಲ್ಲಿ ಪೇಳುತಿರ್ದಪಂ.

ನಿಷ್ಕಲಂಕೇ ನಿರಾಕಾರೇ ನಿತ್ಯೇ ಪರಮತೇಜಸಿ
ವಿಲೀನಚಿತ್ತವೃತ್ತಸ್ಯ ತಥಾ ಶಕ್ತಿಃ ಕ್ರಿಯೋಚ್ಯತೇ ॥

ನಿಷ್ಕಲಂಕೇ- ನಿರ್ದುಷ್ಟವಾಗಿರ್ದಂಥಾ, ನಿರಾಕಾರೇ- ಆಕಾರಶೂನ್ಯವಾಗಿರ್ದಂಥಾ, ನಿತ್ಯೇ-ಕೇಡಿಲ್ಲದಿರ್ದಂಥಾ, ಪರಮತೇಜಸಿ- ಪರಂಜ್ಯೋತಿಸ್ಸಿನಲ್ಲಿ, ವಿಲೀನಚಿತ್ತವೃತ್ತಸ್ಯ -ಸ್ಥಿರವಾದ ಮನಸ್ಸಿನ ವರ್ತನೆಯುಳ್ಳಂಥಾತಂಗೆ, ಸಾ- ಆವೃತ್ತಿಯು, ಕ್ರಿಯೋಚ್ಯತೇ- ಕ್ರೀ ಎನಿಸುವುದು ॥೭೯॥*

ಸರ್ವಜ್ಞಸ್ಸರ್ವ ಕರ್ತಾ ಚ ಸರ್ವಗಃ ಪರಮೇಶ್ವರಃ
ತದೈಕ್ಯ ಚಿಂತಯಾ ಯೋಗೀ ತಾದೃಶಾತ್ಮಾ ಪ್ರಕಾಶತೇ

ಸರ್ವಜ್ಞಃ ಪಂಚಕೃತ್ಯಸಂಪನ್ನಃ ಸರ್ವೇಶ್ವರಃ ಈಶ್ವರಃ ಹೀಗೆಂಬ ವೃದ್ಧ ಜಾಬಾಲ ಶ್ರುತಿ ಪರಮೇಶ್ವರಂ ಸರ್ವಜ್ಞನು ಸರ್ವಕರ್ತನು ವ್ಯಾಪಕನೆಂದು ತಿಳಿದು ಶಿವಯೋಗೀಶ್ವರಂ

---

*ಈ ಶ್ಲೋಕ ಮತ್ತು ಟೀಕನ್ನು ಅಜ್ಞಾತ ವಿರಚಿತ ಸಿದ್ಧಾಂತ ಶಿಖಾಮಣಿ ವ್ಯಾಖ್ಯೆಯಿಂದ ಸೇರಿಸಿದೆ.

ಸಮಾನ ಸಮರಸೈಕ್ಯ ಧ್ಯಾನದಿಂ ತತ್ತ್ರಕಾರವಾದ ಸ್ವರೂಪವುಳ್ಳವನಾಗಿ ಪ್ರಕಾಶಿಸುತ್ತಿಹನೆಂಬುದರ್ಥಂ ॥೮೦॥ ಬಳಿಕ ಶಿವಯೋಗಿಗೆ ಇಂದ್ರಿಯವ್ಯಾಪಾರವುಂಟಾಗಿರುವುದರಿಂ ಶಿವನೆಂತು ಕಾಂಬನೆಂಬಲ್ಲಿ ಪೇಳುತಿರ್ದಪಂ.

ಸರ್ವೇಂದ್ರಿಯಾಣಾಂ ವ್ಯಾಪಾರೇ ವಿದ್ಯಮಾನೇಽಪಿ ಸಂಯಮೀ
ಪ್ರತ್ಯುನ್ಮುಖೇನ ಮನಸಾ ಶಿವಂ ಪಶ್ಯನ್ಪ್ರಮೋದತೇ ॥

ಸರ್ವೇಂದ್ರಿಯವ್ಯಾಪಾರವಿದ್ದರೂ ಶಿವಯೋಗೀಶ್ವರಂ ಪಶ್ಚಿಮಚಕ್ರಕ್ಕೆ ಅಭಿಮುಖವಾದ ಮನಸ್ಸಿನಿಂದ ಶಿವನಂ ಕಾಣುವಾತನಾಗಿ ಸುಖಿಸುತ್ತಿಹನೆಂಬುದರ್ಥಂ ॥೮೧॥ ಬಳಿಕ ಎಂಥ ಶಿವನೆಂತಾವ ಪ್ರಕಾರದಿಂ ಕಾಣುತ್ತಿಹನೆಂಬಲ್ಲಿ ಪೇಳುತಿರ್ದಪಂ.

ಕೂಟಸ್ಥಮಚಲಂ ಪ್ರಾಜ್ಞಂ ಗುಣಾತೀತಂ ಗುಣೋತ್ತರಮ್
ಶಿವತತ್ತ್ವಂ ಸ್ವರೂಪೇಣ ಪಶ್ಯನ್ಯೋಗೀ ಪ್ರಮೋದತೇ ॥

ಜ್ಞಾನ ವೈರಾಗ್ಯಾದಿ ಗುಣಗಳಿಂ ಶ್ರೇಷ್ಠನಾದ ಕುಶಲಿಯಾದ ತುರ್ಯ್ಯಸಾಕ್ಷಿಕ ಪ್ರತ್ಯಗಾತ್ಮನೆಂದೆಂಬ ಪೆಸರುಳ್ಳ ಮಾಯಿಕಸತ್ವ ರಜಸ್ತಮೋಗುಣಗಳಂ ಮೀರಿದ ಚಲನೆಯಿಲ್ಲದ ಶಿವತತ್ತ್ವಮಂ ಸ್ವಸ್ವರೂಪದಿಂ ನೋಡುವ ಶಿವಯೋಗೀಶ್ವರಂ ಸುಖಿಸುತ್ತಿಹನೆಂಬುದರ್ಥಂ ॥೮೨॥ ಬಳಿಕ ಚಿತ್ಕ್ರಿಯಾಸ್ವರೂಪ ಸಂಪನ್ನನಾದ ಶಿವಯೋಗಿಗೆ ಗಗನದಲ್ಲಿ ತೋರುವ ಗಂಧರ್ವನಗರಿಯಂತೆ ಸಕಲಕ್ರಿಯೆಯೂ ಅಸ್ಥಿರವೆಂದು ಪೇಳುವಾತನಾಗಿ ಕ್ರಿಯಾಪ್ರಕಾಶ ಸ್ಥಲಮಂ ಮುಗಿಸುತಿರ್ದಪಂ.

ಪರಾತ್ಮನಿ ಕ್ರಿಯಾ ಸರ್ವಾ ಗಂಧರ್ವನಗರೀವ ಖೇ
ಪ್ರಕಾಶತ ಇತಿ ಪ್ರೋಕ್ತಂ ಕ್ರಿಯಾಯಾಸ್ತು ಪ್ರಕಾಶನಮ್ ॥

ಶಿವಸ್ವರೂಪನಾದ ಶಿವಯೋಗಿಯ ವಿಷಯದಲ್ಲಿ ಸಕಲಕ್ರಿಯೆಯೂ ಗಗನದಲ್ಲಿ ಗಂಧರ್ವನಗರಿಯಂತೆ ಪ್ರಕಾಶಿಸುತ್ತಿಹುದೆಂದು ಕ್ರಿಯಾಪ್ರಕಾಶನಸ್ಥಲಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೮೩॥

## ೪೭. ಭಾವಪ್ರಕಾಶಸ್ಥಲ

ಬಳಿಕ ಸ್ವದಯಾಪೂರ್ಣಭಾವಸ್ಯ ಸ್ವೇನೈವ ಜ್ಞಾಪಿತಸ್ಯ ಚ ತಸ್ಯೈವ ಭಾಸತೇ ಭಾವೇ ಸೋಽಯಮಾದಿಮಹೇಶ್ವರಃ ಹೀಗೆಂಬ ಯೋಗಜಾಗಮ ವಚನಾನುಸಾರದಿಂದ ಕ್ರಿಯಾಪ್ರಕಾಶಸಂಪನ್ನನಾದ ಶಿವಯೋಗೀಶ್ವರಗೆ ಸುಲಭವಾದ ಭಾವಪ್ರಕಾಶಸ್ಥಲಮಂ ನಿರೂಪಿಸುತಿರ್ದಪಂ.

ತರಂಗಾದ್ಯಾ ಯಥಾ ಸಿಂಧೌ ನ ಭಿದ್ಯಂತೇ ತಥಾಽತ್ಮನಿ
ಭಾವಾ ಬುದ್ಧ್ಯಾದಯಸ್ಸರ್ವೇಯತ್ತದ್ಭಾವಪ್ರಕಾಶನಮ್ ॥

ತೆರೆ ನೊರೆ ಮೊದಲಾದ ಭಾವಗಳು ಸಮುದ್ರದಲ್ಲಿ ಎಂತು ಭಿನ್ನವಾಗುತ್ತಿರುವುದು ಹಾಗೆ ಸಕಲವಾದ ಬುದ್ಧ್ಯಾದಿ ಭಾವಗಳು ಕ್ರಿಯಾಪ್ರಕಾಶಸಂಪನ್ನನಾದ ಶಿವಯೋಗಿಯ ಚೈತನ್ಯದಲ್ಲಿ ಭಿನ್ನವಾಗುತ್ತಿರವೆಂಬದಾವದುಂಟು ಅದು ಭಾವಪ್ರಕಾಶವಾಹದೆಂಬುದರ್ಥಂ ॥೮೪॥ ಬಳಿಕ ಭಾವನೆಯನೈದು ಸೂತ್ರಂಗಳಿಂ ವಿಶೇಷಿಸುತಿರ್ದಪಂ.

ಶಿವ ಏವ ಜಗತ್ಸರ್ವಂ ಶಿವ ಏವ್ಯಾಹಮಿತ್ಯಪಿ
ಭಾವಯನ್ಪರಮೋಯೋಗೀ ಭವದೋಷೈರ್ನ ಬಾಧ್ಯತೇ ॥

ಸಕಲ ಜಗತ್ತು ಶಿವನೆ. ಆ ಕಾರಣದಿಂ ತಾನು ಶಿವನೆಂದು ಭಾವಿಸುವ ಮಹಾ ಶಿವಯೋಗಿಯು ಸಾಂಸಾರಿಕದೋಷಗಳಿಂ ಬಾಧಿಸಲ್ಪಡನೆಂಬುದರ್ಥಂ ॥೮೫॥

ಶಿವಭಾವೇ ಸ್ಥಿರೇ ಜಾತೇ ನಿರ್ಲೇಪಸ್ಯ ಮಹಾತ್ಮನಃ
ಯೇ ಯೇ ಭಾವಾಸ್ಸಮುತ್ಪನ್ನಾಸ್ತೇ ತೇ ಶಿವಮಯಾಸ್ಮೃತಾಃ ॥

ವಿಷಯಂಗಳಲ್ಲಿ ಲೇಪವಿಲ್ಲದ ಮಹಾಶಿವಯೋಗಿಗೆ ಯಾವ ಯಾವ ಭಾವಗಳುಂಟಾಗಿರುವುದು ಅವಷ್ಟು ಶಿವಮಯವೆಂದು ನೆನೆಯಲ್ತಕ್ಕದೆಂಬುದರ್ಥಂ ॥೮೬॥ ಬಳಿಕ ಭಾವಂಗಳಾವವೆಂಬಲ್ಲಿ ಪೇಳುತಿರ್ದಪಂ.

ಅದ್ವಿತೀಯಶಿವಾಕಾರಭಾವಾನಾಧ್ವಸ್ತಕರ್ಮಣಾ
ನ ಕಿಂಚಿದ್ಭಾವ್ಯತೇ ಸಾಕ್ಷಾಚ್ಛಿವಾದನ್ಯನ್ಮಹಾತ್ಮನಾ ॥

ಎರಡಿಲ್ಲದ ಶಿವಾಕಾರಭಾವನೆಯಿಂ ನಷ್ಟವಾದಕರ್ಮವುಳ್ಳ ಮಹಾಪುರುಷನಾದ ಶಿವಯೋಗಿಯಿಂ ಪ್ರತ್ಯಕ್ಷವಾದ ಶಿವನಿಂದನ್ಯವಾಗಿ ಒಂದಿಷ್ಟು ಭಾವಿಸುವುದಿಲ್ಲ. ಸಕಲವೂ ಶಿವಮಯವಾಗಿಯೆ ಭಾವಿಸಲ್ಪಡುತ್ತಿಹುದೆಂಬುದರ್ಥಂ ॥೮೭॥ ಬಳಿಕದೆಂತೆಂದಡೆ ಪೇಳುತಿರ್ದಪಂ.

ಗಲಿತಾಜ್ಞಾನಬಂಧಸ್ಯ ಕೇವಲಾತ್ಮಾನುಭಾವಿನಃ
ಯತ್ರ ಯತ್ರೇಂದ್ರಿಯಾಶಕ್ತಿಸ್ತತ್ರ ತತ್ರ ಶಿವಾತ್ಮತಾ ॥

ಬಚ್ಚ ಬರಿಯ ಆತ್ಮಾನುಭವಿಯಾದ ಆ ಕಾರಣದಿಂದಲೆ ಸಡಿಲಿ ಹೋದ ಅಜ್ಞಾನ ಪಾಶವುಳ್ಳ ಶಿವಯೋಗಿಗೆ ಯಾವ ಯಾವ ಠಾವಿನಲ್ಲಿ ಭಾವರೂಪವಾದ ಇಂದ್ರಿಯಾಸಕ್ತಿ ಯುಂಟಾಗಿರುವುದು ಅಲ್ಲಲ್ಲಿ ಭಾವಮಯ ಶಿವಾತ್ಮತ್ವ ವೆಂಬುದರ್ಥಂ ॥೮೮॥ ಹಾಗಾದಡೆ ರಾಗದ್ವೇಷಾದಿಭಾವಂಗಳ ಬಂಧಕ್ಕೆ ಕಾರಣ ಅದರಿಂದಿವು ಶಿವಮಯವಪ್ಪುದೆಂದಲ್ಲಿ ಪೇಳುತಿರ್ದಪಂ.

ರಾಗದ್ವೇಷಾದಯೋ ಭಾವಾಸ್ಸಂಸಾರಕ್ಲೇಶಕಾರಣಮ್
ತೇಷಾಮುಪರಮೋ ಯತ್ರ ತತ್ರ ಭಾವಃ ಶಿವಾತ್ಮಕಃ ॥

ಯಾವನಾನೊಬ್ಬ ಶಿವಯೋಗಿಯಲ್ಲಿ ಬಂಧಕ್ಕೆ ಕಾರಣವಾದ ರಾಗದ್ವೇಷಾದಿಗಳ ಶಾಂತಿಯುಂಟು ಆ ಶಿವಯೋಗಿಯಲ್ಲಿಯ ಭಾವವು ಶಿವಾತ್ಮಕವೆಂಬುದರ್ಥಂ ॥೮೯॥ ಅದು ಕಾರಣದಿಂ ದೀಪ್ತಾಕಾರವಾದ ಶಿವಯೋಗಿಯಂ ತಾಮಸೀಶಕ್ತಿಯಾಕ್ರಮಿಸಲಾರದೆಂದು ಪೇಳುವಾತನಾಗಿ ಭಾವಪ್ರಕಾಶಸ್ಥಲಮಂ ಮುಗಿಸುತಿರ್ದಪಂ.

ಯಥಾ ಸೂರ್ಯಸಮಾಕ್ರಾಂತೌ ನ ಶಕ್ನೋತಿ ತಮಸ್ಸದಾ
ತಥಾ ಪ್ರಕಾಶಮಾತ್ಮಾನಂ ನಾಽವಿದ್ಯಾಕ್ರಮತಿ ಸ್ವಯಮ್ ॥

ಅಂಧಕಾರವೆಂತು ಸೂರ್ಯನ ಮುಸುಕಲಾರದು ಹಾಗೆ ಪ್ರಕಾಶಾತ್ಮಕನಾದ ಶಿವನಂ ಅಜ್ಞಾನರೂಪವಾದ ತಮಸ್ಸು ಆವರಿಸಲಾರದೆಂಬುದರ್ಥಂ ॥೯೦॥

## ೪೮. ಜ್ಞಾನಪ್ರಕಾಶನಸ್ಥಲ

ತರುವಾಯದಲ್ಲಿ ಗವಾಮನೇಕವರ್ಣಾನಾಂ ಕ್ಷೀರಸ್ಯಾಪ್ಯೇಕವರ್ಣತಾ ಕ್ಷೀರವತ್ಪಶ್ಯತೇ ಜ್ಞಾನಂ ಲಿಂಗಿನಸ್ತು ಗವಾಂ ಯಥಾ ಎಂಬ ಅಮೃತಬಿಂದೂಪನಿಷದ್ವಚನಾನುಸಾರದಿಂದ ಶಿವಾದಿಸ್ಮರಣಂ ಜ್ಞಾನಂ ಜ್ಞಾನಾತ್ಸತ್ತಾ ಪ್ರಕಾಶತೇ ಸತ್ತಯಾನಂದ ಸಂಪ್ರಾಪ್ತಿರಾನಂದಾಚ್ಚೈವ ಸಿದ್ಧಿ ದಮ್ ಹೀಗೆಂಬ ಯೋಗಜಾಗಮ ವಚನಾನುಸಾರದಿಂದಲೂ ಬಭಾಷಾಪ್ರಕಾಶ ಸಂಪನ್ನನಾದ ಶಿವಯೋಗಿಗೆ ಸುಲಭವಾದ ಜ್ಞಾನಪ್ರಕಾಶಮಂ ನಿರೂಪಿಸುತಿರ್ದಪಂ.

ಮುಖ್ಯಾರ್ಥೇಽಸಂಭವೇ ಜಾತೇ ಲಕ್ಷಣಾಯೋಗ ಸಂಶ್ರಯಾತ್
ತದ್ ಜ್ಞಾನಯೋಜನಂ ಯತ್ತದುಕ್ತಂ ಜ್ಞಾನಪ್ರಕಾಶನಮ್ ॥

ಆ ಲಿಂಗಂಗಳಿಗೆ ಮುಖ್ಯಾರ್ಥವು ಕೂಡದೆ ಹೋಗಲಾಗಿ ಕಾರ್ಯಕಾರಣೋಪಾಧಿ ವಿಶಿಷ್ಟವಾದ ಜೀವೇಶ್ವರರೆಂಬ ಅಂಗಲಿಂಗಿಗಳಿಗೆ ಲಕ್ಷಣಾಯೋಗವನಾಶ್ರಯಿಸುವುದರಿಂದಾ ಅಂಗಲಿಂಗನಿಷ್ಠಜ್ಞಾನದ್ವಯಕ್ಕೆ ಸಮಾನ ಸಮರಸಭಾವದಿಂ ಸಂಯೋಜನೆ ಯಾವದುಂಟು, ಅದು ಆ ಭಾವಪ್ರಕಾಶಸಂಪನ್ನನಾದ ಶಿವಯೋಗಿಗೆ ಜ್ಞಾನಪ್ರಕಾಶವೆಂದು ಪೇಳಲ್ಪಟ್ಟಿತೆಂಬುದರ್ಥಂ. ಘಟಾವಚ್ಛಿನ್ನಾಕಾಶ ಮಹಾಕಾಶದಂತೆ ಕೂಟಸ್ಥ ಪದಚೈತನ್ಯಕ್ಕೆ ನಿತ್ಯಸಂಬಂಧವೆ ಲಕ್ಷಣಾರ್ಥವು. ಘಟಜಲಾವಚ್ಛಿನ್ನಾಕಾಶದಂತೆ ಅಂಗಲಿಂಗಗಳಿಗೆ ಉಪಾಧಿಯೆ ಮುಖ್ಯಾರ್ಥವು. ಆ ಚೈತನ್ಯಗಳಿಗೆ ಸಾಮರಸ್ಯಜ್ಞಾನವೆಂಬುದರ್ಥಂ ॥೯೧॥ ಬಳಿಕ ಅದನೆ ಸೂತ್ರತ್ರಯದಿಂ ವಿಶೇಷಿಸುತಿರ್ದಪಂ.

ಮುಕ್ತಸ್ಯ ಜ್ಞಾನಸಂಬಂಧೋ ಜ್ಞೇಯಾಭಾವಸ್ವ ಭಾವತಃ
ಉಪಾಧಿಸಹಿತಂ ಜ್ಞಾನಂ ನ ಭೇದಮತಿವರ್ತತೇ ॥

ಪರಮುಕ್ತನಿಗೆ ಲಕ್ಷಣಾರ್ಥಕವಾದ ಜ್ಞಾನಸಂಬಂಧವು ಸ್ವಭಾವದಿಂ ವೇದ್ಯಶೂನ್ಯವಾದಂಥಾದು. ಆ ಪರಮುಕ್ತನಿಗೆ ಮುಖ್ಯಾರ್ಥವಾದ ಲಿಂಗಾಂಗೋಪಾಧಿ ವಿಶಿಷ್ಟ ಜ್ಞಾನವು ಭೇದವಮೀರದಿರುವುದು. ಉಪಾಧಿನಾಶತಿಜ್ಞಾನಸಾಮರಸ್ಯವೆಂಬುದು ತಾತ್ಪರ್ಯಂ ॥೯೨॥

ಜ್ಞಾನಮಿತ್ಯುಚ್ಯತೇ ಸದ್ಭಿಃ ಪರಿಚ್ಛೇದೋಽಪಿ ವಸ್ತುತಃ
ಪರಾತ್ಮನ್ಯಪರಿಚ್ಛೇದೇ ಕುತೋ ಜ್ಞಾನಸ್ಯ ಸಂಭವಃ ॥

ಲಿಂಗಾಂಗರೂಪವಾದ ವಸ್ತುವಿಗೆ ಖಂಡಿತತ್ವವು ದ್ವೈತಜ್ಞಾನವೆಂದು ಸತ್ಪುರುಷರಿಂ ಪೇಳಲ್ಪಡುವುದು ಅಖಂಡಿತವಾದ ನಿರುಪಾಧಿಕಚೈತನ್ಯದಲ್ಲಿ ದ್ವೈತಜ್ಞಾನಕ್ಕೆ ಉದ್ಭವವಿಲ್ಲವೆಂಬುದು ಪ್ರಸಿದ್ಧವೆಂಬುದರ್ಥಂ ॥೯೩॥

ಜ್ಞಾನಸ್ಯವಿಷಯೋ ತತ್ತ್ವೇ ಶಿವಾಖ್ಯೇ ಚಿತ್ಸುಖಾತ್ಮನಿ
ಆತ್ಮೈಕತ್ವಾನುಸಂಧಾನಂ ಜ್ಞಾನಮಿತ್ಯುಚ್ಯತೇ ಬುಧೈಃ ॥

ಸ್ವಾತಿರಿಕ್ತಜ್ಞಾನಕ್ಕೆ ವಿಷಯವಲ್ಲದ ಚಿದಾನಂದರೂಪನಾದ ಶಿವನೆಂಬ ಪೆಸರುಳ್ಳ ವಸ್ತುವಿನಲ್ಲಿ ಸ್ವಾತ್ಮೈಕತ್ವಾನುಸಂಧಾನವೆ ಜ್ಞಾನವೆಂದು ವಿದ್ವಾಂಸರಿಂ ಪೇಳಲ್ಪಡುವದೆಂಬುದರ್ಥಂ ॥೯೪॥ ಬಳಿಕ ಶಿವಜ್ಞಾನವೆ ಬ್ರಹ್ಮಜ್ಞಾನವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಅಪರಿಚ್ಛಿನ್ನಮಾನಂದಂ ಸತ್ತಾಕಾರಂ ಜಗನ್ಮಯಮ್
ಬ್ರಹ್ಮೇತಿ ಲಕ್ಷಣಂ ಜ್ಞಾನಂ ಬ್ರಹ್ಮಜ್ಞಾನಮಿಹೋಚ್ಯತೇ ॥

ಹರಿ ಹುಂಚಿಲ್ಲದ ಸಚ್ಚಿದಾನಂದ ಸ್ವರೂಪವಾಗಿ ಜಗನ್ಮಯವಾದುದು ಬ್ರಹ್ಮವೆಂಬ ಸ್ವರೂಪಜ್ಞಾನವು ಬ್ರಹ್ಮಜ್ಞಾನವೆಂದು ಜ್ಞಾನಪ್ರಕಾಶಸ್ಥಲದಲ್ಲಿ ಪೇಳಲ್ಪಡುವರೆಂಬುದರ್ಥಂ ॥೯೫॥

ಬ್ರಹ್ಮಜ್ಞಾನೇ ಸಮುತ್ಪನ್ನೇ ವಿಶ್ವೋಪಾಧಿವಿವರ್ಜಿತೇ
ಸರ್ವಂ ಸಂವಿನ್ಮಯಂ ಭಾತಿ ತದನ್ಯಂ ನೈವ ದೃಶ್ಯತೇ ॥

ವಿಶ್ವಭೇದವಿಲ್ಲದ ಬ್ರಹ್ಮಜ್ಞಾನವಾವಿರ್ಭವಿಸಲಾಗಿ ಸಕಲಪ್ರಪಂಚವು ಚಿಚ್ಛಕ್ತಿ ಮಯವಾಗಿ ತೋರುತ್ತಿಹುದು. ತದ್ಭಿನ್ನವಾದಂಥಾದಾಗಿ ಕಾಣದೆಂಬುದರ್ಥಂ ॥೯೬॥

ತಸ್ಮಾದದ್ವೈತವಿಜ್ಞಾನಮಪವರ್ಗಸ್ಯ ಕಾರಣಂ
ಭಾವಯನ್ ಸತತಂ ಯೋಗೀ ಸಂಸಾರೇಣ ನ ಲಿಪ್ಯತೇ ॥

ಅದು ಕಾರಣದಿಂ ಪರಾಪರಮೋಕ್ಷಕ್ಕೆ ಕಾರಣವಾದಂಥಾದು ಶಿವಾದ್ವೈತ ಜ್ಞಾನವೆಂದು ಎಲ್ಲಾಗಳು ಭಾವಿಸುವ ಯೋಗೀಶ್ವರಂ ಸಂಸಾರದೋಷದಿಂದ ಲೇಪಿಸನೆಂಬುದರ್ಥಂ ॥೯೭॥ ಬಳಿಕ ಜ್ಞಾನಪ್ರಕಾಶಸ್ಥಲಮಂ ಮುಗಿಸುತಿರ್ದಪಂ.

ನಿತ್ಯೇ ನಿರ್ಮಲ ಸತ್ವಯೋಗಿಷು ಪರೇ ನಿರ್ವಾಸನೇ ನಿಷ್ಕಲೇ
ಸರ್ವಾತೀತಪದೇ ಚರಾಚರಮಯೇ ಸತ್ತಾತ್ಮನಿ ಜ್ಯೋತಿಷಿ
ಸಂವಿದ್ವ್ಯೋಮ್ನಿ ಶಿವೇವಿಲೀನಹೃದಯಸ್ತದ್ಭೇದವೈಮುಖ್ಯತಃ
ಸಾಕ್ಷಾತ್ಸರ್ವಗತೋ ವಿಭಾತಿ ವಿಗಲದ್ವಿಶ್ವಃ ಸ್ವಯಂ ಸಂಯಮೀ ॥

ಎಲ್ಲಾಗಳು ನಿರ್ಮಲವಾದ ಸತ್ವಗುಣವುಳ್ಳವರಲ್ಲಿ ಪ್ರಾಧಾನ್ಯದಿಂದಿರುವ ವೇದ್ಯ ವಾಸನೆಯೂ ಇಲ್ಲದ ನಿರವಯವಾದ ಸರ್ವೋತ್ತೀರ್ಣ ಸ್ಥಾನವಾದ ಚರಾಚರ ಪ್ರಪಂಚಿಗು ಪಾದಾನ ಕಾರಣವಾದ ಚಿತ್ಕ್ರಿಯಾಮಯ ಚಿದಂಬರ ಶಕ್ತಿ ಸ್ವರೂಪವಾದ ಪಾರಮಾರ್ಥಿಕ ಸತ್ತಾರೂಪದಿಂ ಪ್ರಕಾಶಿಸುವ ಚಿದಾಕಾಶ ರೂಪ ಪರಶಿವನಲ್ಲಿ ಅಡಗಿದ ಚಿತ್ತವೃತ್ತಿಯುಳ್ಳಾತನು ಶಿವನಿಂದನ್ಯವಾದ ಪದಾರ್ಥವುಂಟೆಂಬಲ್ಲಿ ವಿಮುಖನಾಹತನದಿಂ ವಿಶ್ವವ್ಯಾಪಕನಾದ ಶಿವಯೋಗೀಶ್ವರ ಸಡಿಲಿಹೋದ ವಿಶ್ವಭೇದವಿಭವವುಳ್ಳವನಾಗಿ ತಾನು ವಿಶೇಷವಾಗಿ ಪ್ರಕಾಶಿಸುತ್ತಿಹನೆಂಬುದರ್ಥಂ ॥೯೮॥ ಶಿವ ಶರಣರಿಗೆ ಸತಿ ಪತಿ ಭಾವವುಂಟಾಗಿರುವುದರಿಂ ಲಿಂಗತ್ರಯಮಂ ಶರಣನ ಅಂಗಸ್ಥಲಕ್ಕೆ ಸಂಬಂಧಿಸೂದು.

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮಪುರಾಣಾದಿ ಸಾರಭೂತೇ ವೀರಶೈವಧರ್ಮ ನಿರ್ಣಯ ಸಿದ್ಧಾಂತ ಶಿಖಾಮಣೌ ಶರಣಸ್ಥಲವಿಷಯ ದ್ವಾದಶವಿಧಲಿಂಗಪ್ರಸಂಗೋನಾಮೈಕೋನವಿಂಶತೀಯಃ ಪರಿಚ್ಛೇದಃ

## ವಿಂಶತಿತಮಪರಿಚ್ಛೇದ

### ಐಕ್ಯಸ್ಥಲ

ಬಳಿಕ ಅಗಸ್ತ್ಯಂ ಪ್ರಶ್ನೆಯಂ ಮಾಡುತಿರ್ದಪಂ.

ಸ್ಥಲಭೇದಾಸ್ತ್ವಯಾ ಪ್ರೋಕ್ತಾಶ್ಶರಣಸ್ಥಲ ಸಂಶ್ರಿತಾಃ
ಐಕ್ಯಸ್ಥಲಗತಾನ್ ಬ್ರೂಹಿ ಸ್ಥಲಭೇದಾನ್ ಗಣೇಂದ್ರ ಮೇ ॥

ಭೋ ರೇಣುಕಗಣೇಶ್ವರನೆ ಶರಣಸ್ಥಲವನಾಶ್ರಯಿಸಿದ ಸ್ಥಲಭೇದಂಗಳು ಸೂತ್ರತ್ರಯ ದಿಂದುದ್ದೇಶಿಸುತಿರ್ದಪಂ.

ಸ್ಥಲಾನಾಂ ನವಕಂ ಚೈಕ್ಯಸ್ಥಲೇಽಸ್ಮಿನ್ ಪರಿಕೀರ್ತ್ಯತೇ
ತತ್ರಿ ಸ್ವೀಕೃತಪ್ರಸಾದೈಕ್ಯಸ್ಥಲಮಾದೌ ಪ್ರಕೀರ್ತಿತಮ್ ॥

ಶಿಷ್ಟೌದನಸ್ಥಲಂ ಚಾಥ ಚರಾಚರಲಯಸ್ಥಲಮ್
ಭಾಂಡಸ್ಥಲಂ ತತಃ ಪ್ರೋಕ್ತಂ ಭಾಜನಸ್ಥಲಮುತ್ತಮಮ್ ॥

ಅಂಗಾಲೇಪಸ್ಥಲಂ ಪಶ್ಚಾತ್ ಸ್ವಪರಾಜ್ಞಾಸ್ಥಲಂ ತತಃ
ಭಾವಾಭಾವವಿನಾಶಂ ಚ ಜ್ಞಾನಶೂನ್ಯಸ್ಥಲಂ ತತಃ ॥

ತದೇಷಾಂ ಕ್ರಮಶೋ ವಕ್ಷ್ಯೇ ಶ್ರುಣು ತಾಪಸಲಕ್ಷಣಮ್

ಮೊದಲು ಸ್ವೀಕೃತಪ್ರಸಾದೈಕ್ಯಸ್ಥಲವು ಪೇಳಲ್ಪಟ್ಟಿತು ಬಳಿಕ ಶಿಷ್ಟೋದನಸ್ಥಲವು ತದನಂತರದಲ್ಲಿ ಚರಾಚರಲಯಸ್ಥಲವು, ಭಾಂಡಸ್ಥಲವು. ಆಮೇಲೆ ಶ್ರೇಷ್ಠವಾದ ಭಾಜನ ಸ್ಥಲವು ಪೇಳಲ್ಪಟ್ಟಿತ್ತು. ತರುವಾಯದಲ್ಲಿ ಅಂಗಾಲೇಪಸ್ಥಲವು ಆಮೇಲೆ ಸ್ವಪರಾಜ್ಞ ಸ್ಥಲವು ಬಳಿಕ ಭಾವಾಭಾವವಿನಾಶಸ್ಥಲವು ಆಮೇಲೆ ಜ್ಞಾನಶೂನ್ಯಸ್ಥಲವು ಈ ಪ್ರಕಾರವಾದ ಸ್ಥಲಂಗಳ ಅಸಾಧಾರಣದರ್ಥವಚನಮಂ ಉದ್ದೇಶಕ್ರಮದಿಂ ಪೇಳ್ದಪೆ ಭೋ ಅಗಸ್ತ್ಯನೆ ಕೇಳೆಂಬುದರ್ಥಂ॥೫॥

### ೪೯. ಸ್ವೀಕೃತಪ್ರಸಾದಿಸ್ಥಲ

ಬಳಿಕ ಜ್ಞಾನಪ್ರಸಾದೇನ ವಿಶುದ್ಧಸತ್ವ ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ ಹೀಗೆಂಬ ಮುಂಡಕಶ್ರುತ್ಯನುಸಾರದಿಂ ಜ್ಞಾನೋತ್ಪತ್ತಿನಿಮಿತ್ತಂ ತು ಕ್ರಿಯಾಚರ್ಯಾ ಪ್ರಕೀರ್ತಿತಾ ಯೋಗಂ ಸಾಲಂಬನಂ ತ್ಯಕ್ತ್ವಾ ನಿಷ್ಪ್ರಪಂಚಂ ವಿಚಿಂತಯೇತ್ ಚಿದ್ರೂಪನಾ ಹೀಗೆಂಬ ದೇವೀಕಾಲೋತ್ತರ ವಚನದಿಂದಲೂ ಅಜ್ಞಾನಪ್ರಕಾಶಸಂಪನ್ನನಾದ ಶಿವಯೋಗಿಯೆ ಜ್ಞಾನಪ್ರಸಾದಸ್ವೀಕಾರದತ್ತಣಿಂ ಸ್ವೀಕೃತಪ್ರಸಾದಿಯೆಂದು ನಿರೂಪಿಸುತಿರ್ದಪಂ.

ಮುಖ್ಯಾರ್ಥೋ ಲಕ್ಷಣಾರ್ಥಶ್ಚ ಯತ್ರ ನಾಸ್ತಿ ಚಿದಾತ್ಮನಿ
ವಿಶೃಂಖಲತಯಾ ತಸ್ಯ ಪ್ರಸಾದಸ್ವೀಕೃತೋ ಭವೇತ್ ॥

ಚಿದ್ರೂಪನಾದ ಯಾವನಾನೊಬ್ಬ ಜ್ಞಾನಪ್ರಕಾಶಸಂಪನ್ನನಾದ ಶಿವಯೋಗಿಯಲ್ಲಿ ಜೀವೇಶ್ವರವಿಯೋಗರೂಪವಾದ ಮುಖ್ಯಾರ್ಥವು ನಿರುಪಾಧಿಕ ಶಿವಾತ್ಮರ ನಿತ್ಯವಿಯೋಗ

ರೂಪವಾದ ಲಕ್ಷಣಾರ್ಥವೂ ಇಲ್ಲವೋ ಆ ಶಿವಯೋಗೀಶ್ವರಂ ನಿರಂಕುಶನಾದುದರಿಂದವಗೆ ಪೂರ್ಣಜ್ಞಾನ ಪ್ರಸಾದವಾಗಿ ಸ್ವೀಕರಿಸಲ್ಪಟ್ಟುದಾಹದೆಂಬುದರ್ಥಂ ॥೬॥ ಬಳಿಕ ಈ ಅರ್ಥವನೆ ಸೂತ್ರದ್ವಯದಿಂ ವಿಶೇಷಿಸುತಿರ್ದಪಂ.

ಮಾತೃಮೇಯ ಪ್ರಮಾಣಾದಿವ್ಯವಹಾರೇ ವಿಹಾರಿಣೀಮ್
ಸಂವಿತ್ಸಾಕ್ಷಾತ್ಕೃತಿಂ ಲಬ್ಧ್ವಾ ಯೋಗೀ ಸ್ವಾತ್ಮನಿ ತಿಷ್ಠತಿ ॥

ಮಾತೃ ಮಾನ ಮೇಯ ಮೊದಲಾದ ತ್ರಿಪುಟಿಕಮಯ ಪ್ರಪಂಚಿನ ಪ್ರಥಮ ವ್ಯವಹಾರದಲ್ಲಿ ರಮಿಸುವಂಥಾ ಪೂರ್ಣಾಚಿತ್ಪ್ರತ್ಯಕ್ಷಮಂ ಪಡೆದು ಜ್ಞಾನಪ್ರಕಾಶ ಸಂಪನ್ನನಾದ ಶಿವಯೋಗಿಯು ಸ್ವೀಕೃತಪ್ರಸಾದವುಳ್ಳ ಸ್ವಸ್ವರೂಪದಲ್ಲಿ ಇರುವನೆಂಬುದರ್ಥಂ ॥೭॥ ಬಳಿಕೀ ಪ್ರಕಾರವಾದ ಶಿವಯೋಗೀಶ್ವರನಿಗೆ ಪಾಶಬಂಧನವಿಲ್ಲವೆಂದು ಪೇಳುತಿರ್ದಪಂ.

ಅದ್ವೈತಬೋಧ ನಿರ್ಧೂತಭೇದಾವೇಶಸ್ಯ ಯೋಗಿನಃ
ಸಾಕ್ಷಾತ್ಕೃತ ಮಹಾಸಂವಿತ್ಪ್ರಕಾಶಸ್ಯ ಕ್ವ ಬಂಧನಮ್ ॥

ಶಿವಾದ್ವೈತಜ್ಞಾನದಿಂ ನಿವಾರಿಸಲ್ಪಟ್ಟ ಅಂಗಲಿಂಗ ಲಕ್ಷ್ಯಜೀವೇಶ್ವರ ಭೇದಾವೇಶವುಳ್ಳ ಅಪರವಾಗಿ ಮಾಡಲ್ಪಟ್ಟ ನಿರ್ಮಲಚಿತ್ಪ್ರಕಾಶವುಳ್ಳ ಶಿವಯೋಗಿಗೆ ಪಾಶ ಪಂಚಕದಿಂದುಂಟಾದ ಬಂಧನವೆತ್ತಣದು ಇಲ್ಲವೆಂಬುದರ್ಥಂ ॥೮॥ ಬಳಿಕ ಪೂರ್ಣಜ್ಞಾನಿಯಾದ ಶಿವಯೋಗೀಶ್ವರನಿಗೆ ಪ್ರಪಂಚದರ್ಶನವಿಲ್ಲವೆಂದು ಸೂತ್ರತ್ರಯದಿಂ ದೃಷ್ಟಾಂತರ ಪೂರ್ವಕವಾಗಿ ಪೇಳುತಿರ್ದಪಂ.

ಚಿದಾತ್ಮನಿ ಶಿವೇ ನ್ಯಸ್ತಂ ಜಗದೇತಚ್ಚರಾಚರಮ್
ಜ್ಞಾಯತೇ ತನ್ಮಯಂ ಸರ್ವಮಗ್ನೌ ಕಾಷ್ಠಾದಿಕಂ ಯಥಾ ॥

ಅಗ್ನಿಯಲ್ಲಿ ಇರಿಸಲ್ಪಟ್ಟ ಕಾಷ್ಠ ಮೊದಲಾದುದೆಂತು ವಹ್ನಿಮಯವಾಗಿ ತೋರುವುದು ಹಾಗೆ ಶಿವನು ಚಿದಗ್ನಿರೂಪಮಪ್ಪುದರಿಂದಾ ತನ್ನಲ್ಲಿರಿಸಲ್ಪಟ್ಟ ವಿಶ್ವವೂ ಚಿನ್ಮಯವಾಗಿಯೇ ತೋರೂದೆಂಬುದರ್ಥಂ ॥೯॥ ಬಳಿಕ ವಹ್ನಿಯಲ್ಲಿ ಕಾಷ್ಠವು ಮತ್ತೊಬ್ಬ ಪುರುಷನಿಂದಿರಿಸಲ್ಪಟ್ಟಂತೆ ಶಿವನಲ್ಲಿ ವಿಶ್ವವು ಯಾವನಿಂದಲೂ ಇರಿಸಲ್ಪಡಲಿಲ್ಲ ಶಿವನಿಂದಲೆ ಕಲ್ಪಿತವಾದುದರಿಂದದೆಂತು ತನ್ಮಯವಾಗಿ ತೋರೂದೆಂಬಲ್ಲಿ ಪೇಳುತಿರ್ದಪಂ.

ನ ಭಾತಿ ಪೃಥ್ವೀ ನ ಜಲಂ ನ ತೇಜೋ ನೈವ ಮಾರುತಃ
ನಾ ಕಾಶೋ ನ ಪರಂ ತತ್ತ್ವಂ ಶಿವೇ ದೃಷ್ಟೇ ಚಿದಾತ್ಮನಿ ॥

ಮೃತ್ತಿಕೆ ತಿಳಿವುತ್ತಿರಲಾಗಿ ಘಟ ಶರಾವಾದಿಗಳೆಲ್ಲವೂ ಹೇಗೆ ಮೃಣ್ಮಯವೆ ಸರಿ ತದ್ವ್ಯತಿರಿಕ್ತವಲ್ಲವೆಂದು ಹೇಗೆ ತಿಳಿಯಲ್ಪಡುವುದೂ ಹಾಗೆ ಚಿದಾತ್ಮಕನಾದ ಶಿವನು ಕಾಣಲ್ಪಡುತ್ತಿರಲಾಗಿ, ತತ್ಕಾರ್ಯವಾದುದರಿಂ ಭೂಮಿ ಮೊದಲಾದುದೊಂದೂ ತದ್ಭಿನ್ನವಾಗಿ ತೋರೂದು. ತದಾತ್ಮಕವಾಗಿಯೆ ತೋರೂದೆಂಬುದರ್ಥಂ ॥೧೦॥

ಈ ಪ್ರಕಾರದಿಂ ಶಿವಾತ್ಮಕವಾದ ವಿಶ್ವನಲ್ಲಿಯೆ ಲೀನವಾದಂಥಾದನಾಗಿ ಚಿಂತಿಸುವ ಶಿವಯೋಗಿಯು ಲೇಪವ ಪಡೆಯನೆಂದು ಪೇಳುತಿರ್ದಪಂ.

ಜ್ಯೋತಿರ್ಲಿಂಗೇ ಚಿದಾಕಾರೇ ಜ್ವಲತ್ಯಂತರ್ನಿರಂತರಮ್
ವಿಲೀನಂ ನಿಖಿಲಂ ತತ್ತ್ವಂ ಪಶ್ಯನ್ ಯೋಗೀ ನ ಲಿಪ್ಯತೇ ॥

ಹೃದಯರೂಪವಾದ ಅಷ್ಟದಲಕಮಲಮಧ್ಯದಲ್ಲಿ ನಿರಂತರವೂ ಚಿದ್ರೂಪವಾದ ಮಹಾಲಿಂಗವು ಪ್ರಕಾಶಿಸುತ್ತಿರಲಾಗಿ ಆ ಮಹಾಲಿಂಗದಲ್ಲಿ ಶಿವಯೋಗಿಯು ಶಿವಾದಿ ಭೂಮ್ಯಂತರವಾದ ಸಕಲತತ್ತ್ವಮಂ ಲಯವಾದಂಥಾದನಾಗಿ ಕಾಣುತ್ತಿಹನೆಂಬುದರಿಂ ತನು ಕರಣಭುವನಭೋಗರೂಪವಾದ ಮೂವತ್ತಾರುತತ್ತ್ವಂಗಳಿಂ ಲೇಪಿಸಲ್ಪಡನೆಂಬುದರ್ಥಂ ॥೧೧॥ ಬಳಿಕೀ ಅರ್ಥವನೆ ಹೋಮರೂಪದಿಂ ವಿಶೇಷಿಸುತಿರ್ದಪಂ.

ಅಂತರ್ಮುಖೇನ ಮನಸಾ ಸ್ವಾತ್ಮಜ್ಯೋತಿಷಿ ಚಿನ್ಮಯೇ
ಸರ್ವಾನಪ್ಯರ್ಥವಿಷಯಾನ್ ಜುಹ್ವನ್ ಯೋಗೀ ಪ್ರಮೋದತೇ ॥

ಪ್ರತ್ಯಙ್ಮುಖವಾದ ಮನಸ್ಸಿನಿಂದ ಚಿನ್ಮಯವಾದ ಸ್ವಸ್ವರೂಪವಹ್ನಿಪ್ರಕಾಶದಲ್ಲಿ ಸಮಸ್ತ ಪದಾರ್ಥಂಗಳನೂ ತಾದಾತ್ಮ್ಯದಿಂ ಸಮರ್ಪಿಸುವ ಶಿವಯೋಗೀಶ್ವರಂ ಸಂತೋಷಿ ಸುತ್ತಿಹನೆಂಬುದರ್ಥಂ ॥೧೨॥ ಬಳಿಕ ಸ್ವೀಕೃತಪ್ರಸಾದಿಸ್ಥಲಮಂ ಮುಗಿಸುತಿರ್ದಪಂ.

ಸಚ್ಚಿದಾನಂದಜಲಧೌ ಶಿವೇ ಸ್ವಾತ್ಮನಿ ನಿರ್ಮಲಃ
ಸಮರ್ಪ್ಯ ಸಕಲಾನ್ ಭುಙ್ಕ್ತೇ ವಿಷಯಾನ್ತತ್ಪ್ರಸಾದತಃ ॥

ನಿರ್ಮಲನಾದ ಶಿವಯೋಗಿಯು ಸಚ್ಚಿದಾನಂದಂಗಳಿಗೆ ಸಮುದ್ರನಾದ ಸ್ವಪ್ರಕಾಶಾತ್ಮ ಶಿವನಲ್ಲಿ ಶಬ್ದಾದಿ ಸಕಲಪದಾರ್ಥಗಳಂ ಸಮರ್ಪಿಸಿ ತತ್ಪ್ರಸಾದರೂಪದಿಂ ಭುಂಜಿಸುತ್ತಿಹ ನೆಂಬುದರ್ಥಂ ॥೧೩॥

## ೫೦. ಶಿಷ್ಟೌದನಸ್ಥಲ

ಬಳಿಕ ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮೆಂಬ ಶ್ವೇತಾಶ್ವ ತರಶ್ರುತ್ಯನುಸಾರದಿಂ ಗ್ರಂಥಿಜನ್ಯ ಕಲಾಕಾಲ ವಿದ್ಯಾರಾಗ ನ್ಯಮಾತ್ಸರ ಗುಣಾದಿಗರ್ವ ಚಿತ್ತಾಕ್ಷಮಾತ್ರಾಭೂತಾನ್ಯನುಕ್ರಮಾತ್ ಹೀಗೆಂಬ ಮೃಗೇಂದ್ರ ವಚನದಿಂದಲೂ ಆ ಚಿತ್ಪ್ರಸಾದವುಳ್ಳ ಶಿವಯೋಗಿಗೆ ಮಾಯಾತತ್ತ್ವವೇ ಶಿಷ್ಟೌದನವೆಂದು ಸೂತ್ರಚತುಷ್ಟಯದಿ ಪೇಳುತಿರ್ದಪಂ.

ಪ್ರಕಾಶತೇ ಯಾ ಸರ್ವೇಷಾಂ ಮಾಯಾ ಸೈವೌದನಾಕೃತಿಃ
ಲೀಯತೇ ತತ್ರ ಚಿಲ್ಲಿಂಗೇ ಶಿಷ್ಟಂ ತತ್ಪರಿಕೀರ್ತಿತಮ್ ॥

ಮಿಶ್ರಶುದ್ಧಾಧ್ವನಿವಾಸಿಗಳಾದವರಿಗೆ ತನು ಕರಣ ಭುವನ ಭೋಗರೂಪವಾದ ಯಾವುದಾನೊಂದು ಅಧೋಮಾಯೆಯುಂಟು, ಅದೇ ಸಕಲರಿಗೂ ಪ್ರಕಾಶಿಸುತ್ತಿಹುದು. ಲಯವನೂ ಪಡೆವುತ್ತಿಹುದು. ಆ ಕಲಾದೀಕ್ಷಿತ್ಯಂತಮಾದ ಮೂವತ್ಮೂರು ತತ್ತ್ವಂಗಳಿಗೆ ಮೂಲ ಕಾರಣವಾದ ಮಾಯಾತತ್ತ್ವವೆ ಜ್ಞಾನವೆ ಚಿಹ್ನೆಯಾಗಿಯುಳ್ಳ ಸ್ವೀಕೃತಪ್ರಸಾದಿ ವಿಷಯದಲ್ಲಿ ಅವಶಿಷ್ಟೋದಕಾರ ಉಳ್ಳವನೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೧೪॥

ಜಗದಂಗೇ ಪರಿಗ್ರಸ್ತೇ ಮಾಯಾಪಾಶವಿಜೃಂಭಿತೇ
ಸ್ವಾತ್ಮಜ್ಯೋತಿಷಿ ಬೋಧೇನ ತದೇಕಮವಶಿಷ್ಯತೇ ॥

ಕಲಾದೀಕ್ಷಿತ್ಯಂತವಾದ ಮಾಯಾಪಾಶದಿಂ ಕಟ್ಟಲ್ಪಟ್ಟ ವಿಶ್ವಶರೀರವುಳ್ಳ ಸ್ವಾತ್ಮ ಪ್ರಕಾಶವು ಸ್ವಾತ್ಮಜ್ಞಾನದಿಂ ವ್ಯಾಪಿಸುತ್ತಿರಲಾಗಿ ಮಾಯಾತತ್ತ್ವಮೆಂದೆ ತಿಳಿವುದೆಂಬುದರ್ಥಂ ॥೧೫॥ ಬಳಿಕ ಶರೀರಕಸ್ವರೂಪವು ಬೋಧದಿಂದಾಕ್ರಮಿಸಲಾಗಿ ಮಾಯಾತತ್ತ್ವಮಂ ತಿಳಿವುದೆಂಬಲ್ಲಿ ಪೇಳುತಿರ್ದಪಂ.

ಅಖಂಡಸಚ್ಚಿದಾನಂದಪರಬ್ರಹ್ಮಸ್ವರೂಪಿಣಃ
ಜೀವನ್ಮುಕ್ತಸ್ಯ ಧೀರಸ್ಯ ಮಾಯಾ ಕೈಂಕರ್ಯವಾದಿನೀ ॥

ಅಖಂಡಚಿದಾನಂದಬ್ರಹ್ಮವೆ ಯಾವಾತನಿಗೆ ಸ್ವರೂಪವೋ ಅಂಥ ಜಿತೇಂದ್ರಿಯ ನಾದ ಜೀವನ್ಮುಕ್ತನಿಗೆ ಮಾಯೆಯೂ ದಾಸಿಯಾಗಿ ಬಿನ್ನೈಸುತ್ತಿಹಳೆಂಬುದರ್ಥಂ ॥೧೬॥

ವಿಶ್ವ ಸಮ್ಮೋಹಿನೀ ಮಾಯಾ ಬಹುಶಕ್ತಿ ನಿರಂಕುಶಾ
ಶಿವೈಕತ್ವಮುಪೇತಸ್ಯ ನ ಪುರಃಸ್ಥಾತು ಮೀಹತೇಃ ॥

ಈ ಪ್ರಕಾರವಾದ ಸ್ಥಿತಿಯಲ್ಲಿ ಜಗನ್ಮೋಹಿನಿಯಾದ ಮಾಯೆಯು ನಾನಾ ಪ್ರಕಾರ ವಾದ ಶಕ್ತಿಗಳಿಂ ತಡೆಯಿಲ್ಲದಾಯಕನಾದರೂ ಶಿವನಲ್ಲಿ ಸಮಾನ ಸಾಮರಸ್ಯ ಭಾವವ ಪಡೆದ ಶಿವಯೋಗಿಯು ಮುಂದುಗಡೆಯಲ್ಲಿ ಮೋಹಕನಾಗಿ ಇರಲು ಇಚ್ಛೈಸಲಾರದೆಂಬು ದರ್ಥಂ॥೧೭॥ ಬಳಿಕ ವಿಷಯನಾಶಮಂ ಸೂತ್ರತ್ರಯದಿಂ ಪೇಳುತಿರ್ದಪಂ.

ಜ್ಯೋತಿರ್ಲಿಂಗೆ ಚಿದಾಕಾರೆ ನಿಮಗ್ನೇನ ಮಹಾತ್ಮನಾ
ಭುಜ್ಯಮಾನಾ ಯಥಾ ಯೋಗಂ ನಶ್ಯಂತಿ ವಿಷಯಾಸ್ಸ್ವತಃ ॥

ಚಿದಾಕಾರವಾದ ಜ್ಯೋತಿರ್ಲಿಂಗದಲ್ಲಿ ಮುಳುಗಿರುವ ಮಹಾಪುರುಷನಾದ ಶಿವ ಯೋಗಿಯಿಂ ಸಂಬಂಧವಿದ್ದ ಹಾಗೆ ಭುಂಜಿಸಲ್ಪಡ್ಡ ವಿಷಯಂಗಳು ತಾವೆ ನಾಶಮಂ ಪಡೆವವೆಂಬುದರ್ಥಂ ॥೧೮॥ ಬಳಿಕದೆಂತೆಂದಡೆ ಪೇಳುತಿರ್ದಪಂ.

ಶಬ್ದಾದಯೋऽಪಿ ವಿಷಯಾ ಭುಜ್ಯಮಾನಾಸ್ತದಿಂದ್ರಿಯೈಃ
ಆತ್ಮನ್ಯೇವ ವಿಲೀಯಂತೆ ಸರಿತಸ್ಸಾಗರೇ ಯಥಾ ॥

ತತ್ತದಿಂದ್ರಿಯದ್ವಾರದಿಂ ಭುಂಜಿಸುವಂಥಾ ಶಬ್ದಾದಿವಿಷಯಂಗಳು ನದಿಗಳು ಸಮುದ್ರದಲ್ಲಿ ಲಯವಾಗುವಂತೆ ಆತ್ಮನಲ್ಲಿಯೆ ಲಯವ ಪಡೆವುದೆಂಬುದರ್ಥಂ. ಸ್ವೀಕೃತ ಪ್ರಸಾದವು ತೈಲದಂತೆ ಸಾರವಾದ ಚಿದಾನಂದಸ್ವರೂಪವು. ಶಿಷ್ಟೌದನವು ಹಿಂಡಿಬಿಟ್ಟ ಹಿಪ್ಪೆಯಂತೆ ನಿಸ್ಸಾರವಾದ ಮಾಯೆ ಎಂಬುದರಿಂ ತದ್ದೋಷವು ನಿಸ್ಸಾರವಾಗಿ ನಾಶಮಂ ಪಡೆವುದೆಂಬುದರ್ಥಂ ॥೧೯॥ ಬಳಿಕೀ ಪ್ರಕಾರವಾದ ವಿಷಯಸಮೂಹವುಳ್ಳ ಶಿವಯೋಗಿ ಯೆಂತಿರುವನೆಂಬಲ್ಲಿ ಪೇಳುವಾತನಾಗಿ ಶಿಷ್ಟೌದನಸ್ಥಲಮಂ ಮುಗಿಸುತಿರ್ದಪಂ.

ಅರ್ಥಜಾತಮಶೇಷಂ ತು ಗ್ರಸನ್ಯೋಗೀ ಪ್ರಶಾಮ್ಯತಿ
ಸ್ವಾತ್ಮನ್ಯೈವಾ ಸ್ಥಿತೋ ಭಾನುಸ್ತೇಜೋಜಾಲಮಶೇಷತಃ ॥

ಸಮಸ್ತವಾದ ಪದಾರ್ಥಸಮೂಹಮಂ ಸ್ವಸ್ವರೂಪದಿಂ ಸಂಗ್ರಹಿಸುವ ಶಿವ ಯೋಗೀಶ್ವರಂ ಉಳುಮೆ ಇಲ್ಲಮಂಥಾದ್ದು ಹೇಗಿಹುದೋ ಹಾಗೆ ತನ್ನ ಕಿರಣಸಮೂಹಮಂ ತನ್ನಲ್ಲಿಯೆ ಉಪಸಂಹರಿಸುವಾತನಾಗಿ ಅಸ್ತಂಗತನಾಹ ಸೂರ್ಯನಂತೆ ಸ್ವಸ್ಥನಾಗಿರುವನೆಂಬು ದರ್ಥಂ ॥೨೦॥

## ೫೧. ಚರಾಚರಲಯಸ್ಥಲ

ಬಳಿಕ ಸೋsವಿದ್ಯಾ ಗ್ರಂಥಿ ವಿಕಿರತೀ ಹಸೋಮ್ಯೇತಿ ದ್ವಾರದೋನ್ಯ ಶ್ರುತ್ಯನು ಸಾರದಿಂ ವಿಷಸಂಬಂಧಿನೀಶಕ್ತಿರ್ಯಥಾ ಮಂತ್ರೈ ರ್ನಿರುಧ್ಯತೇ ಯಥಾ ನ ತದಿತಿಕ್ಷೀಣಮೇವ ಪುಂಸೋಮ ಲಕ್ಷಯಃ ಹೀಗೆಂಬ ಕಿರಣವಚನಾನುಸಾರದಿಂದಲೂ ಬಚ್ಚಬರಿಯ ಚಿತ್ತಪಾದ ಸ್ವೀಕಾರದಿಂದುಳಿದ ಮಾಯಾಧನವುಳ್ಳ ಶಿವಯೋಗೀಶ್ವರಂ ಚರಾಚರದಲ್ಲಿ ಪ್ರತ್ಯೇಕವಾಗಿ ಪರಿಪಕ್ವಾನುಸಾರದಿಂ ವ್ಯಾಪಿಸಲ್ಪಟ್ಟ ಮಲಶಕ್ತಿಯಂ ಪರಿಪಾಕಾನುಸಾರದಿಂ ವಿನಾಶವ ಮಾಡುವುದರಿಂ ಚರಾಚರವಿನಾಶಕನೆಂದು ಪೇಳುತಿರ್ದಪಂ.

ಲಿಂಗೈಕ್ಯೇ ತು ಸಮಾಪನ್ನೇ ಚರಣಾಚರಣೇ ಗತೇ
ನಿರ್ದೇಹೀ ಸ ಭವೇದ್ಯೋಗೀ ಚರಾಚರವಿನಾಶಕಃ ॥

ಚರಾಚರಪ್ರಪಂಚಗತವಾದ ಮಹಾಲಿಂಗೈಕ್ಯವು ಪ್ರಾಪ್ತವಾಗುತ್ತಿರಲಾಗಿ ಶಿಷ್ಟೋದನ ಸಂಪನ್ನನಾದ ಶಿವಯೋಗಿಯು ನಿರ್ದೇಹಿಯಾಗಿ ಜಂಗಮಸ್ಥಾವರನಿಷ್ಠನಾದ ಮಲಶಕ್ತಿ ವಿನಾಶಕನಾಹದೆಂಬುದರ್ಥಂ ॥೨೧॥ ಬಳಿಕ ಶಿವಯೋಗೀಶ್ವರಂ ಚರಾಚರ ವ್ಯಾಪ್ತ ಮಲಶಕ್ತಿಯಂ ನಿರಾಕರಿಸಿದ ಕಾರಣದಿಂ ಮಾಯಾಪ್ರಪಂಚಮಂ ತಿಳಿಯನೆಂದಾರು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಅನಾದ್ಯವಿದ್ಯಾಮೂಲಾ ಹಿ ಪ್ರತೀತಿರ್ಜಗತಾಮಿಯಮ್
ಸ್ವಾತ್ಮೈಕಬೋಧಾತ್ತನ್ನಾಶೇ ಕುತೋ ವಿಶ್ವಪ್ರಕಾಶನಮ್ ॥

ಇದು ಇಂಥಾದೆಂದು ಪ್ರತಿಭಿನ್ನ ವಿಷಯವೇನ ಪ್ರತೀತಿಯಂ ವಿಲಾಶಕ್ತ್ಯಾನಾದಿ ಕಲ್ಪಿತ ಮಾಯಾ ಮೂಲಕವಾದಂಥಾ ಸ್ವಾತ್ಮಪ್ರಧಾನವಾದ ಜ್ಞಾನದತ್ತಣಿಂದಾ ಮಲಶಕ್ತಿ ನಾಶವಾದಲ್ಲಿ ತನ್ಮೂಲಕವಾದ ಜಗದ್ದರ್ಶನವೆತ್ತಣದು ಇಲ್ಲವೆಂಬುದರ್ಥಂ ॥೨೨॥ ಬಳಿಕೀ ವಿಶ್ವವೆಲ್ಲಿ ಲಯವ ಪಡೆವುತ್ತಿಹದೆಂಬಲ್ಲಿ ಪೇಳುತಿರ್ದಪಂ.

ಯಥಾ ಮೇಘಾಸ್ಸಮುದ್ಭೂತಾಃ ವಿಲೀಯಂತೇ ನಭಸ್ಥಲೇ
ತಥಾsತ್ಮನಿ ವಿಲೀಯಂತೇ ವಿಷಯಾಸ್ಸ್ವಾsನುಭಾವಿನಃ ॥

ನಭಸ್ಥಲದಲ್ಲಿ ಮೇಘಗಳು ಹುಟ್ಟಿ ಹೇಗೆ ಲಯ ಪಡವವು ಹಾಗೆ ಸ್ವ ಸ್ವರೂಪಾನು ಭವವುಳ್ಳ ಶಿವಯೋಗಿಗೆ ಚೈತನ್ಯಾತ್ಮನಲ್ಲಿ ಶಬ್ದಾದಿ ವಿಷಯಂಗಳುಟ್ಟಿ ನಾಶವನೈದುತ್ತಿಹದೆಂಬು ದರ್ಥಂ ॥೨೩॥ ಬಳಿಕ ವಿಶ್ವಂ ಸ್ವಾತ್ಮಬೋಧದಿಂದೆಂತು ನಾಶವ ಪಡವನೆಂಬಲ್ಲಿ ಪೇಳುತಿರ್ದಪಂ.

ಸ್ವಪ್ನೇ ದೃಷ್ಟಂ ಯಥಾವಸ್ತು ಪ್ರಬೋಧೇ ಲಯಮಶ್ನುತೇ
ತಥಾ ಸಾಂಸಾರಿಕಂ ಸರ್ವಮಾತ್ಮಜ್ಞಾನೇ ವಿನಶ್ಯತಿ ॥

ಸ್ವಪ್ನದಲ್ಲಿ ಕಂಡ ವಸ್ತು ಹೇಗೆ ಎಚ್ಚರಿಕೆಯಾಗುತ್ತಿರಲಾಗಿ ನಾಶವನೈದುತ್ತಿಹದು ಹಾಗೆ ಸಂಸಾರಸಂಬಂಧವಾದ ಸಕಲವು ಆತ್ಮಜ್ಞಾನವಾಗಲಾಗಿ ನಾಶವನೈದುವನೆಂಬು ದರ್ಥಂ. ಇಲ್ಲಿ ಸ್ವಪ್ನ ದೃಷ್ಟಾಂತದಿ ವಿಶ್ವಂ ಮಿಥ್ಯೆಯಾಗಲೆಂದು ಶಂಕಿಸಲಾಗದು. ಸ್ವಪ್ನದಿಂ ಫಲಾಫಲಂಗಳುಂಟಾಗಿರುವುದರಿಂ ಸ್ವಪ್ನೇಂದ್ರಿಯದರ್ಶನದಿಂದಲೂ ಮಿಥ್ಯೆಯಲ್ಲವೆಂದು ತಿಳಿವುದು ॥೨೪॥ ಮರಳಿ ಮತ್ತೂ ಒಂದು ಕಾರಣಾಂತರಮಂ ಪೇಳುತಿರ್ದಪಂ.

ಜಾಗ್ರತ್ಸ್ವಪ್ನಸುಷುಪ್ತಿಭ್ಯಃ ಪರಾऽವಸ್ಥಾಮುಪೇಯುಷಃ
ಕಿಂ ವಾ ಪ್ರಮಾಣಂ ಕಿಂ ಜ್ಞೇಯಂ ಕಿಂ ವಾ ಜ್ಞಾನಸ್ಯ ಸಾಧನಮ್ ॥

ತನುತ್ರಯಂಗಳ ಮೀರಿದ ಜಾಗ್ರದಾದ್ಯವಸ್ಥಾತ್ರಯವ ಮೀರಿದ ಖೇಚರೀಮುದ್ರೆಗೆ ಸುಲಭವಾದ ಸರ್ವೋತ್ಕೃಷ್ಟ ತುರೀಯಾವಸ್ಥೆಯನು ಯ್ಯೆದಿದ ಶಿವಯೋಗಿಗೆ ಪ್ರಮಾಣ ವಾವದು ಪ್ರಮೇಯವಾವದು ಜ್ಞಾನಕ್ಕೆ ಸಾಧನವಾವದು ತ್ರಿಪುಟಿಮಯಪ್ರಪಂಚವನೂ ಮೀರಿದ ಕಾರಣದಿಂದಾ ಪ್ರಪಂಚದರ್ಶನವಿಲ್ಲವೆಂಬುದರ್ಥಂ ॥೨೫॥ ಬಳಿಕಾ ತುರ್ಯಾತೀತಸ್ಥಾನಮಂ ವಿವರಿಸುತಿರ್ದಪಂ.

ತುರ್ಯಾತೀತಪದಂ ಯತ್ತದ್ದೂರಂ ವಾಙ್ಮನಸಾಧ್ವನಃ
ಅನುಪ್ರವಿಶ್ಯತದ್ಯೋಗೀ ನ ಭೂಯೋ ವಿಶ್ವಮೀಕ್ಷತೇ ॥

ಯಾವುದಾನೊಂದು ಮೌನಮುದ್ರೆಗೆ ಸುಲಭವಾದ ತುರ್ಯಾತೀತಸ್ಥಾನವು ಸ್ತುತಿ ಧ್ಯಾನಗಳಿಗೆ ಅಗೋಚರವಾದುದಂಥಾದು ಆ ತುರ್ಯಾತೀತಸ್ಥಾನಯೋಗವುಳ್ಳ ಆ ಶಿವಯೋಗಿಯು ಮರಳಿ ವಿಶ್ವಮಂ ಕಾಣನೆಂಬುದರ್ಥಂ ॥೨೬॥ ಅದೆಂತೆಂದಡೆ ಪೇಳುತಿರ್ದಪಂ.

ನಾನ್ಯತ್ಪಶ್ಯತಿ ಯೋಗೀಂದ್ರೋ ನಾನ್ಯಜ್ಜಾನಾತಿ ಕಿಂಚನ
ನಾನ್ಯಚ್ಛೃಣೋತಿ ಸಂದೃಷ್ಟೇ ಚಿದಾನಂದಮಯೇ ಶಿವೇ ॥

ಚಿದಾನಂದಸ್ವರೂಪವಾದ ಶಿವನು ಕಾಣಲ್ಪಡುತ್ತಿರಲಾಗಿ ನಿಜಸ್ವರೂಪದಲ್ಲಿದ್ದ ಶಿವಯೋಗೀಶ್ವರನು ತನ್ನಿಂದನ್ಯವಾದ ರೂಪನು ಕಾಣನು ಅಂಥ ಶಬ್ದವನು ಕೇಳನು. ಮತ್ತೇನನು ತಿಳಿಯನು. ಮಲಶಕ್ತಿ ನಷ್ಟವಾದವರಿಂದ ಮಾಯಿಕರೂಪಾದಿ ದರ್ಶನ ವಿಲ್ಲವೆಂಬುದರ್ಥಂ ॥೨೭॥ ಬಳಿಕೀ ಪೇಳಿದರ್ಥವನೆ ಸ್ಫುಟವಮಾಡುತ ಚರಾಚರ ಮಲನಾಶಸ್ಥಲಮಂ ಮುಗಿಸುತಿರ್ದಪಂ.

ಅಸದೇವ ಜಗತ್ಸರ್ವಂ ಸದಿವ ಪ್ರತಿಭಾಸತೇ
ಜ್ಞಾತೇ ಶಿವೇ ತದಜ್ಞಾನಂ ಸ್ವರೂಪಮುಪಪದ್ಯತೇ ॥

ಸಕಲ ಜಗತ್ತು ಶಿವನಿಂದನ್ಯವಾಗಿ ಇಲ್ಲವೆ ಸರಿ. ಮಲಶಕ್ತಿವಶದಿಂ ತದ್ವ್ಯತಿರಿಕ್ತವಾಗಿ ತೋರುತ್ತದೆ. ಸಚ್ಚಿದಾನಂದಸ್ವರೂಪನಾದ ಶಿವನು ಸಾಕ್ಷಾತ್ಕರಿಸಲಾಗಿ ಭೇದ ಪ್ರತೀತಿಗೆ ಕಾರಣವಾದ ಮೂಲಜ್ಞಾನವು ನಷ್ಟವಾಗಿ ತನಗೆ ಕಾರಣವಾದ ಚಿಚ್ಛಕ್ತ್ಯಾಕಾರವನೈದುತ್ತಿಹ ನೆಂಬುದರ್ಥಂ ॥೨೮॥

## ೫೨. ಭಾಂಡಸ್ಥಲ

ಬಳಿಕ ಊರ್ಧ್ವಮೂಲೋಽವಾಕ್ ಶಾಖಃ ಏಷೋಽಶ್ವತ್ಥಃ ಸನಾತನಃ ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ ಎಂಬ ಕಠವಲ್ಲಿಶ್ರುತಿಯಿಂದಲೂ ಯಾದುಃ ಕುಂಡಲಿನೀಶಕ್ತಿ ಮಾಯಾಕರ್ಮಾ ನುಸಾರಿಣೀ ನಾದಬಿಂದ್ವಾದಿಕ ಕಾರ್ಯಂ ತಸ್ಯಾಂ ಜಗತಸ್ಥಿತಿಃ ಹೀಗೆಂಬ ವಿಶ್ವಸಾರೋತ್ತರ ವಚನಾನುಸಾರದಿಂದಲೂ ಚರಾಚರಮಲಶಕ್ತಿನಾಶಕನಾದ ಶಿವಯೋಗಿಯ ವಿಚಾರ ರೂಪವಾದ ಪರಬಿಂದುವೆ ಭಾಂಡಸ್ಥಲಮಂ ನಿರೂಪಿಸುತಿರ್ದಪಂ.

ಬ್ರಹ್ಮಾಂಡಶತಕೋಟೀನಾಂ ಸರ್ಗಸ್ಥಿತಿಲಯಾನ್ಪ್ರತಿ
ಸ್ಥಾನಭೂತೋ ವಿಮರ್ಶೋ ಯಸ್ತದ್ಭಾಂಡಸ್ಥಲಮುಚ್ಯತೇ ॥

ಅನೇಕ ಕೋಟಿ ಬ್ರಹ್ಮಾಂಡಗಳ ಸೃಷ್ಟಿ ಸ್ಥಿತಿ ಲಯಂಗಳ ಕುರಿತು ಆಧಾರಭೂತಮಾದ ಯಾವುದಾನೊಂದು ಚರಾಚರಮಲಶಕ್ತಿ ನಾಶಕನಾದ ಶಿವಯೋಗಿಯ ಶಬ್ದಬ್ರಹ್ಮ ರೂಪವಾದ ವಿಚಾರವುಂಟು ಅದು ಭಾಂಡಸ್ಥಲವೆಂದು ಪೇಳಲ್ಪಡುವದೆಂಬುದರ್ಥಂ॥೨೯॥ ಬಳಿಕಾ ವಿಮರ್ಶಾಸ್ವರೂಪವನೆ ವಿಸ್ತರಿಸುತಿರ್ದಪಂ.

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವೋದ್ಭಾಸನಕಾರಿಣೀ
ಸಾಕ್ಷಿಣೀ ಸರ್ವಭೂತಾನಾಂ ಸಮಿಂಧೇ ವಿಶ್ವತೋಮುಖೀ ॥

ಷಡಧ್ವರರೂಪವಾದ ಶಬ್ದಾರ್ಥ ಪ್ರಪಂಚಿನ ವಿಚಾರರೂಪಮಾದುದರಿಂ ವಿಮರ್ಶವೆನಿಸಿಕೊಂಬ ಶುದ್ಧಮಾಯೆಯು ತನ್ನ ಕಾರ್ಯರೂಪವಾದ ಜ್ಞಾನಾದಿಗಳಿಂದ ವಿಶ್ವಮಂ ಪ್ರಕಾಶಿಸುತ್ತ ಸರ್ವತತ್ತ್ವಗಳಿಗೂ ಸಾಕ್ಷಿಯಾಗಿ ಸರ್ವತೋಮುಖಿಯಾಗಿ ಶುದ್ಧಾಧ್ವವಾಸಿಗಳಾದವರಿಗೆ ಶಕ್ತಿಸದಾಶಿವೇಶ್ವರ ವಿದ್ಯಾತತ್ತ್ವವೆಂಬ ತನುಕರಣ ಭುವನ ಭೋಗರೂಪದಿಂ ಪ್ರಕಾಶಿಸುವದೆಂಬುದರ್ಥಂ ॥೩೦॥ ಬಳಿಕ ವಿಮರ್ಶಾಕಲೆಯನೆ ವಿಶೇಷಿಸುತಿರ್ದಪಂ.

ವಿಶ್ವಂ ಯತ್ರ ಲಯಂ ಯಾತಿ ವಿಭಾತ್ಯಾತ್ಮಾ ಚಿದಾಕೃತಿಃ
ಸದಾನಂದಮಯಸ್ಸಾಕ್ಷಾತ್ಸಾವಿಮರ್ಶಾಮಯೀ ಕಲಾ ॥

ಸಚ್ಚಿದಾನಂದಾತ್ಮಕನಾದ ಪರಮಾತ್ಮನು ಯಾವ ಸ್ಥಾನದಲ್ಲಿ ಪ್ರಕಾಶಿಸುವನು ವಿಶ್ವವೆಲ್ಲಿ ಲಯ ಪಡುವುದು ಅದು ವಿಮರ್ಶಾಮಯವಾದ ಕಲೆಯೆನಿಸಿಕೊಂಬುದರ್ಥಂ ॥೩೧॥ ಬಳಿಕ ಪಿಂಡಸ್ಥಲಾರ್ಥವ ಸೂಚಿಸುತ್ತ ತತ್ತ್ವಂಪದ ಪ್ರಸಿದ್ಧವಾದ ಲಿಂಗಾಂಗ ರೂಪಮಾ ಶಿವಜೀವರಿಗೆ ಅವಿಮರ್ಶವೆ ಆಶ್ರಯವೆಂದು ಸೂತ್ರದ್ವಯದಿಂ ಪ್ರತಿಪಾದಿಸುತಿರ್ದಪಂ.

ಪರಾಹಂತಾಸಮಾವೇಶ ಪರಿಪೂರ್ಣ ವಿಮರ್ಶವಾನ್
ಸರ್ವಜ್ಞಸ್ಸರ್ವಗಸ್ಸಾಕ್ಷೀ ಸರ್ವಕರ್ತಾ ಮಹೇಶ್ವರಃ ॥

ಪರಮೇಶ್ವರನು ಶಿವಜೀವರಿಗೆ ಸಾಧಾರಣವಾದ ಆತ್ಮತ್ವಾಕ್ರಮಣದಿಂದ ಪರಿಪೂರ್ಣವಿಮರ್ಶವುಳ್ಳವನಾಗಿ ಸರ್ವಜ್ಞನು ಸರ್ವಕರ್ತನು ಸರ್ವಸಾಕ್ಷಿಕನೆನಿಸಿ ಕೊಂಬನು.

ಇಲ್ಲದಿರ್ದಡೆ ಸ್ಫಟಿಕಾದಿಪ್ರಕಾಶದಂತೆ ಜಡನಪ್ಪನೆಂಬುದರ್ಥಂ ॥೩೨॥ ಬಳಿಕಾ ವಿಮರ್ಶಾ ಸ್ವರೂಪಮೆಂತೆನೆ ಪೇಳುತಿರ್ದಪಂ.

ವಿಶ್ವಾಧಾರಮಹಾಸಂವಿತ್ಪ್ರಕಾಶಪರಿಪೂರಿತಮ್
ಪರಾಹಂತಾಮಯಂ ಪ್ರಾಹುರ್ವಿಮರ್ಶಂ ಪರಮಾತ್ಮನಃ ॥

ಅಹಮಸ್ಮಿನ್ ಪ್ರಥಮಜಾ ಋತಾಸ್ಯ ಪೂರ್ವಂ ದೇವೇಭ್ಯೋ ಅಮೃತಸ್ಯ ನಾಭಾ ಈ ಎಂಬ ಶ್ರುತಿಯಿಂ ಪ್ರಕಾಶಾತ್ಮಕನಾದ ಶಿವನಿಗೆ ಮಹಾಚಿತ್ಪ್ರಕಾಶ ಪರಿಪೂರ್ಣವಾದ ವಿಶ್ವಾಧಾರವಾದ ಅಧೋಮಾಯೆಗಾಧಾರವಾದ ಘಟಕ್ಕೆ ಕಂಬುಗ್ರೀವಾದಿಮತ್ವದಂತೆ ತದಭಿನ್ನವಾದ ಅಹಮೋಭಾವಃ ಅಹಂತ್ವಾಯೆಂದು ಪ್ರೂಪಾಲನಃ ಪುರಾಣಯೋಯೆಂಬ ಧಾತುಗತಿಯಿಂ ಅಂಡರಸನ್ಯಾಯದಿಂದ ಶುದ್ಧ ಮಿಶ್ರ ಶುದ್ಧಾಧ್ವ ರೂಪವಾದ ಸಕಲ ವಿಶ್ವದಿಂ ಪೂರ್ಣವಾದ ಜೀವೇಶ್ವರರಿಗೆ ಜೀವನವಾದ ಪರಾಹಂತಾ ಮಾಯೋರ್ಧ್ವ ಮಾಯಾ ರೂಪಮಂ ವಿಮರ್ಶವನಾಗಿ ಶಿವಾದ್ವೈತಪ್ರವೀಣರುತ್ಕೃಷ್ಟದಿಂ ಪೇಳುವರೆಂಬು ದರ್ಥಂ ಪಾದೋಸ್ಯ ವಿಶ್ವ ಭೂತಾನಿ ಎಂಬ ಶ್ರುತಿಯಿಂ ಚರಾಚರ ಪ್ರಪಂಚವೆಲ್ಲಂ ಶಿವನ ಚಿತ್ಕ್ರಿಯಾ ರೂಪ ಚರಣ ವಿಸ್ತಾರ ರೂಪವಾದುದರಿಂ ತತ್ಪ್ರತಿಸ್ಫುರಣ ರೂಪವ ವಿಮರ್ಶಶಕ್ತಿಯ ಘೃತಕೀಟನ್ಯಾಯದಿಂದೇಕದೇಶ ವಿಕಾರಿಯಾಗಿ ವಾಗೀಶ್ವರೀ ಪುರಾ ವಿದ್ಯಾ ಕುಟಿಲಾ ಕುಂಡಲೀ ಪರಾಶುದ್ಧ ಮಾಯೇ ಪರೋ ಭಿದುಃ ಶಬ್ದಬ್ರಹ್ಮೇತಿ ಕಥ್ಯತೇ ಎಂಬ ಪೌಷ್ಕರವಚನ ಪ್ರಸಿದ್ಧ ಪರ್ಯಾಯನಾಮ ಉಳ್ಳಾಯಕನಾಗಿ ಷಡಧ್ವಜನನಿ ಎಂದು ದೇಶಿಕೋಪದೇಶದಿಂ ತಿಳಿಯಲ್ತಕ್ಕದು. ಇದು ಚಿದ್ರೂಪವಾದುದರಿಂ ನಿರಂಶಮಾದರೂ ಅಘಟನಘಟನಾಪಟುತರ ಎಂಬುದರಿಂ ಸ್ವಾತಂತ್ರ್ಯಕಲ್ಪಿತಾಂಶಭೇದವುಂಟಾಹದರಿಂದಾವ ಅನುಪಪತ್ತಿಯೂ ಇಲ್ಲವೆಂಬುದರ್ಥಂ ॥೩೩॥ ಬಳಿಕ ಭಾಂಡಸ್ಥಲಮಂ ಮುಗಿಸುತಿರ್ದಪಂ.

ವಿಮರ್ಶಭಾಂಡವಿನ್ಯಸ್ತವಿಶ್ವತತ್ತ್ವವಿಜೃಂಭಣಃ
ಅನನ್ಯಮುಖಸಂಪ್ರೇಕ್ಷೀ ಮುಕ್ತಃ ಸ್ವಾತ್ಮನಿ ತಿಷ್ಠತಿ ॥

ಮಾಯಾಪಾಶಪಟಲದಿಂ ಬಿಡಲ್ಪಟ್ಟ ಶಿವಯೋಗಿಯು ವಿಮರ್ಶಾಭಾಂಡದಲ್ಲಿ ಇರಿಸಲ್ಪಟ್ಟ ಶಕ್ತ್ಯಾದಿ ಭೂಮ್ಯಂತರ ಸಕಲತತ್ತ್ವಂಗಳೆಂಬ ಗುಳ್ಳೆಗಳುಳ್ಳವಾಗಿ ಸ್ವಾತ್ಮೋನ್ಮುಖ ನಾಗಿ ತನ್ನಲ್ಲಿಯೆ ಇರುವನೆಂಬುದರ್ಥಂ ॥೩೪॥

## ೫೩. ಭಾಜನಸ್ಥಲ

ಬಳಿಕ ಪರಾಽಸ್ಯ ಶಕ್ತಿರ್ವಿಪುಲಾ ವಿತರ್ಕಾ ಸ್ವಾಭಾವಿಕೀ ರುದ್ರ ಸಮಾನಧರ್ಮಿಣೀ ಜ್ಞಾನ ಕ್ರಿಯೇಚ್ಛಾದಿ ಸಹಸ್ರರೂಪಾ ತನ್ಮೇ ಮನಃ ಶಿವಸಂಕಲ್ಪಮಸ್ತು ಎಂಬ ಶಿವಸಂಕಲ್ಪ ಶ್ರುತ್ಯನುಸಾರದಿಂ ಯಾ ಸಾ ಮಾಹೇಶ್ವರೀ ಶಕ್ತಿಃ ಸರ್ವಾನುಗ್ರಾಹಿಕಾ ಶಿವಾ ಧರ್ಮಾನುವರ್ತನಾದೇವ ಪಾಶ ಇತ್ಯುಪಚರ್ಯತೇ ಎಂಬ ಮೃಗೇಂದ್ರವಚನಾನು ಸಾರದಿಂದಲೂ ಆ ಭಾಂಡಸ್ಥಲ ಸಂಪನ್ನನಾದ ಶಿವಯೋಗಿಯ ವಿಮರ್ಶಕ್ಕಾಶ್ರಯವಾದ ತಿರೋಭಾವಶಕ್ತಿಯೆ ಭಾಜನವೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಸಮಸ್ತಜಗದಂಡಾನಾಂ ಸರ್ಗಸ್ಥಿತ್ಯಂತಕಾರಣಮ್
ವಿಮರ್ಶೋ ಭಾಸತೇ ಯತ್ರ ತದ್ಭಾಜನಮಿಹೋಚ್ಯತೇ ॥

ಸಮಸ್ತ ಭುವನಾಂಡಸ್ಥ ವ್ಯಾಧಿಗಳಿಗೆ ಕಾರಣವಾದ ವಿಮರ್ಶವೆಂಬ ಪರಬಿಂದುವು ಯಾವುದಾನೊಂದು ತಿರೋಧಾನರೂಪವಾದ ಶಿವಸಮಾವೇತ ಶಕ್ತಿಯಲ್ಲಿ ತೋರುತ್ತಿಹುದು ಆ ಚಿಚ್ಛಕ್ತಿಸ್ವರೂಪವು ಭಾಂಡಸ್ಥಲ ಸಂಪನ್ನನಾದ ಶಿವಯೋಗಿಯ ವಿಷಯದಲ್ಲಿ ಭಾಜನವೆಂದು ಪೇಳಲ್ಪಡುವದೆಂಬುದರ್ಥಂ. ಪಂಚಕಂಚುಕಯುಕ್ತ ಚೈತನ್ಯಕ್ಕೆ ಪುರುಷನೆಂಬ ಪೆಸರಿನಂತೆ ಪಾಶತ್ರಯಾನುಸಾರಿಯಾದುದರಿಂ ಶಿವಶಕ್ತಿಗೆ ತಿರೋಭಾವವೆಂಬುದು ಉಪಚಾರವು ॥೩೫॥

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ
ಯಸ್ಮಿನ್ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್ ॥

ವಿಶ್ವಚಿತ್ರತೆಗೆ ಕಾರಣವಾದ ವಿಮರ್ಶವೆಂಬ ಪರಾಬಿಂದು ಕುಂಡಲಿನೀಶಕ್ತಿಯು ಯಾವುದಾನೊಂದು ತಿರೋಭಾವ ಶಕ್ತಿಯ ದೃಕ್ಕ್ರಿಯಾ ಸ್ವರೂಪದಲ್ಲಿ ಇರುವುದು. ವಹ್ನ್ಯುಷ್ಣತ್ವ ಶುಕ್ಲಪಟ ನ್ಯಾಯದಿಂ ಸಮವೇತವಾದ ಆ ಈ ಬ್ರಹ್ಮಸ್ವ ತಿರೋಭಾವ ಶಕ್ತಿಯ ದೃಕ್ರಿಯಾಸ್ವ ರೂಪವೆ ವಿಶ್ವಭಾಜನವೆಂಬುದರ್ಥಂ ॥೩೬॥ ಬಳಿಕ ತಿರೋಭಾವ ವಿಮರ್ಶಗಳಿಗೆ ಕಿಂಚಿನ್ಮಿಶ್ರಭಾವಮಂ ಸೂತ್ರದ್ವಯದಿಂ ಪ್ರಕಾಶಿಸುತಿರ್ದಪಂ.

ಅಂತಃಕರಣರೂಪೇಣ ಜಗದಂಕುರರೂಪತಃ
ಯಸ್ಮಿನ್ವಿಭಾತಿ ಚಿಚ್ಛಕ್ತಿರ್ಬ್ರಹ್ಮಭೂತಃ ಸ ಉಚ್ಯತೇ ॥

ಸ್ಥೂಲವೇದ್ಯತಿರೋಭಾವರೂಪವಾದ ಸಮವೇತಶಕ್ತಿಯು ಜಗದಂಕುರಕ್ಕೆ ಕಾರಣವಾದ ಅಂತಃಕರಣವೆಂಬ ಮೂಲಾಹಂಕಾರರೂಪದಿಂ ಯಾವುದಾನೊಂದು ಪರಬಿಂದುವಿನಲ್ಲಿ ಪ್ರಕಾಶಿಸುತ್ತಿಹುದು. ಆ ವಿಮರ್ಶವೆಂದು ಪರಬಿಂದು ಪರಬ್ರಹ್ಮವೆಂಬ ಪರಶಿವನೆನಿಸಿಕೊಂಬುದರ್ಥಂ ॥೩೭॥ ಬಳಿಕ ವಿಮರ್ಶ ಪರಬಿಂದುವು ಅಹಂಕಾರಮಿಶ್ರ ವಾದುದರಿಂ ಮಿಥ್ಯಾಭೂತವೋ ಏನೆಂಬಲ್ಲಿ ಪೇಳುತಿರ್ದಪಂ.

ಯಥಾ ಚಂದ್ರೇ ಸ್ಥಿರಾಜ್ಯೋತ್ಸ್ನಾವಿಶ್ವವಸ್ತುಪ್ರಕಾಶಿನೀ
ತಥಾ ಶಕ್ತಿರ್ವಿಮರ್ಶಾತ್ಮಾ ಪ್ರಕಾಶೇ ಬ್ರಹ್ಮಣಿ ಸ್ಥಿತಾ ॥

ಚಂದ್ರನಲ್ಲಿ ಸ್ಥಿರವಾದ ಚಂದ್ರಿಕೆಯು ಸಮಸ್ತವಾದ ವಿಶ್ವವನೇಕ ದೇಶದಲ್ಲಿಂತು ಪ್ರಕಾಶಿಸುತ್ತಿಹುದು ಹಾಗೆ ದೃಕ್ಕ್ರಿಯಾತ್ಮಕವಾದ ಪರಬ್ರಹ್ಮದಲ್ಲಿ ಸ್ಥಿರವಾಗಿದ್ದ ವಿಮರ್ಶಮ ಯವಾದ ಪರಾಶಕ್ತಿಯು ಸಕಲ ಜಗತ್ತನು ತನ್ನ ಸ್ವತಂತ್ರತೆಯಿಂ ಕಲ್ಪಿಸಲ್ಪಟ್ಟ ಒಂದಂಶದಲ್ಲಿ ಪ್ರಕಾಶಿಸುವದೆಂಬುದರ್ಥಂ. ಇಲ್ಲಿ ಮನವಚನಗಳಿಗೆ ದೂರವಾಹತನದಿಂ ಪಶುಜನರಿಗೆ ಮರೆಯಾದ ಕಾರಣದತ್ತಣಿಂ ತಿರೋಧಾನಶಕ್ತಿಯೆಂದು ಪ್ರಸಿದ್ಧವಾದ ಅಸ್ಮಿನ್ ಎಂಬ ಅಕರ್ಮರೂಪವಾದ ಚಿತ್ಕ್ರಿಯಾಶಕ್ತಿಗೆ ಪರಬ್ರಹ್ಮ ಪರಶಿವಲಿಂಗಾದಿ ನಾಮಗಳು ಮುಖ್ಯವಾದಂಥಾವು ಮಹಾಲಿಂಗಾದಿಗಳಿಗೆ ಕಾರಣವಾದಂಥಾವೆಂಬುದು ವಿವೇಕವು ॥೩೮॥ ಬಳಿಕ ಬಚ್ಚಬರಿಯ ಪ್ರಕಾಶಮಯವಾದ ಪರಬ್ರಹ್ಮವು ಶಕ್ತಿಯೊಡನೆ ಏಕರೂಪವಾಗಿಯೆಂತಿರುವುದೆಂಬಲ್ಲಿ ಪೇಳುತಿರ್ದಪಂ.

ಅಕಾರಃ ಶಿವ ಆಖ್ಯಾತೋ ಹಂಕಾರಃ ಶಕ್ತಿರುಚ್ಯತೇ
ಶಿವಶಕ್ತಿಮಯಂ ಬ್ರಹ್ಮಸ್ಥಿತಮೇಕಮಹಂಪದೇ ॥

ಅಕ್ಷರಾಣಾಂ ಅಕಾರೋऽಸ್ಮಿ ಎಂಬ ಭಗವದುಕ್ತಿಯಿಂದಲೂ ಅಕಾರಾದ್ಯೇ ಸರ್ವವಾಕ್ ಎಂಬ ಶ್ರುತಿಯಿಂದಲೂ ಕೂಡಿ ಏಳನೆದಾದ ಅಕಾರವು ಶಿವನೆಂದು ಪೇಳಲ್ಪಡುವುದು. ಹಕಾರೋಂತ್ಯ ಕಲಾರೂಪ ಎಂಬಾಗಮ ವಚನಾನುಸಾರದಿಂ ಹಕಾರವು ಚೈತನ್ಯ ರೂಪವಾದ ದೃಕ್ಕ್ರಿಯಾಶಕ್ತಿ ಎನಿಸಿಕೊಂಬುದು. ಈ ಪ್ರಕಾರದಿಂ ಶಿವಶಕ್ತಿಮಯವಾದ ಪರಬ್ರಹ್ಮವು ಒಂದಾದಂಥಾಗಿ ಅಹಮೆಂಬ ಸ್ಥಾನದಲ್ಲಿ ಸ್ವರೂಪದಿಂದಿರುವುದೆಂಬುದರ್ಥಂ. ಇದರಿಂದ ಬ್ರಹ್ಮವಹಂರೂಪವಲ್ಲೆಂದು ನುಡಿವ ನೈಯಾಯಿಕರು ಪರಾಜಿತರಾದರೂ ನಿತ್ಯಾಪರೋಕ್ಷಂ ಬ್ರಹ್ಮ ಎಂದಂಗೀಕರಿಸಿದ ಕಾರಣದಿಂದಹಂರೂಪದ್ವ್ಯತಿರಿಕ್ತವಾದ ವಸ್ತು ಯಾವ ಪ್ರಕಾರದಿಂದಲೂ ಕಾಣಲ್ಪಡುವುದಿಲ್ಲವೆಂಬುದರತ್ತಣಿಂದೆಂಬುದರ್ಥಂ ॥೭೯॥ ಬಳಿಕೀ ರೂಪವಾದ ಅಹಂತೆಯಂ ಪಡೆದು ಶಿವಯೋಗೀಶ್ವರಂ ವಿಶ್ವರೂಪನಾಗಿ ಪ್ರಕಾಶಿಸುತ್ತಿಹನೆಂದು ಪೇಳುತಿರ್ದಪಂ.

ಅಹಂತಾಂ ಪರಮಾಂ ಪ್ರಾಪ್ಯ ಶಿವಶಕ್ತಿಮಯೀಂ ಸ್ಥಿರಾಮ್
ಬ್ರಹ್ಮಭೂಯಂ ಗತೋ ಯೋಗೀ ವಿಶ್ವಾತ್ಮಾ ಪ್ರತಿಭಾಸತೇ ॥

ದೇಶಕಾಲಾಕಾರಂಗಳಂ ಮೀರಿದ ಶಿವಾಭಿನ್ನ ಶಕ್ತಿ ಸ್ವರೂಪವಾದ ಸಪ್ತದಶೀಯ ಚಿತ್ಕಲೆಯಂ ಪಡೆದು ಸ್ವಾತ್ಮಾಭೇದದಿಂ ಸ್ಥಿರವಾದುದನಾಗಿ ತಿಳಿದು ಬ್ರಹ್ಮರೂಪವ ಪಡೆದ ಶಿವಯೋಗಿಯು ಜಗದ್ರೂಪನಾಗಿ ಪ್ರಕಾಶಿಸುವನೆಂಬುದರ್ಥಂ ॥೮೦॥ ಬಳಿಕಾ ಶಿವಯೋಗೀಶ್ವರನೆಂತು ವಿಶ್ವರೂಪನಾಗಿ ಪ್ರಕಾಶಿಸುವನೆಂಬಲ್ಲಿ ಯಥಾನ್ಯ ಗೋತ್ರಬೀಜಸ್ಥಿಶಕ್ತಿರೂಪೋ ಮಹಾದ್ರುಮಃ ತಥಾ ಹೃದಯಬೀಜಸ್ಥಂ ಜಗದೇಕ ಚರಾಚರಮ್ ಹೀಗೆಂಬ ತ್ರಿಂಶಿಕಾಶಾಸ್ತ್ರೋಕ್ತ ಪ್ರಕಾರದಿಂ ಪೇಳುವಾತನಾಗಿ ಭಾಜನಸ್ಥಲಮಂ ಮುಗಿಸುತಿರ್ದಪಂ.

ವೃಕ್ಷಸ್ಥಂ ಪತ್ರ ಪುಷ್ಪಾದಿ ವಟಬೀಜ ಸ್ಥಿತಂ ಯಥಾ
ತಥಾ ಹೃದಯಬೀಜಸ್ಥಂ ವಿಶ್ವಮೇ ತತ್ಪರಾತ್ಮನಃ ॥

ವಟವೃಕ್ಷದಲ್ಲಿರುವ ಪತ್ರಪುಷ್ಪಾದಿಗಳೆಲ್ಲವೂ ವಟಬೀಜದಲ್ಲಿ ಹೇಗಿರುವುದು ಹಾಗೆ ಈ ಸಮಸ್ತವಿಶ್ವವೂ ಪರಬ್ರಹ್ಮಸ್ವರೂಪನಾದ ಭಾಜನಸ್ಥಲವುಳ್ಳ ಶಿವಯೋಗೀಶ್ವರನ ಅಹಮಾತ್ಮಕವಾದ ಹೃದಯಬೀಜದಲ್ಲಿ ಅಕಾರದಿಂ ಶಿವತತ್ತ್ವಂ ಹಕಾರದಿಂ ಶಕ್ತ್ಯಾದಿ ವಿದ್ಯಾಂತ ಚತುತ್ವಂ ಮಕಾರದಿಂ ತನುಕರಣ ಭುವನ ಭೋಗರೂಪವಾದ ಮಾಯಾದೀಕ್ಷಿತ್ಯಂತ ಮೂವತ್ತೊಂದು ತದಂತರ್ಲೀನವಾಗಿ ಇರುವುದೆಂಬುದರ್ಥಂ ॥೮೧॥

## ೫೮. ಅಂಗಾಲೇಪಸ್ಥಲ

ಬಳಿಕ ಯಥಾ ಪುಷ್ಕರಪಲಾಶೇ ಆಪೋ ನ ಶ್ಲಿಷ್ಯಂತೇ ಏವಮೇವ ಪಾಪ ಕರ್ಮ ನ ಶ್ಲಿಷ್ಯತೇ ಎಂಬ ಛಾಂದೋಗ್ಯಶ್ರುತ್ಯನುಸಾರದಿಂದಲೂ ಏವಂ ಭೂತಸ್ಯ ಕರ್ಮಾಣಿ ಕ್ರಿಯಮಾಣಾನಿ ಯೋಗಿನಃ ಪ್ರಯಾಂತಿ ನೈವ ಲಿಪ್ಯಂತೇ ಪುಣ್ಯಾಪುಣ್ಯಾನಿ ಸಂಕ್ಷಯಮ್

ಹೀಗೆಂಬ ಯೋಗಜಾಗಮವಚನದಿಂದಲೂ ತಿರೋಭಾವವೆಂಬ ದೃಕ್ಕ್ರಿಯಾಭಾಜನವುಳ್ಳ ಶಿವಯೋಗಿಗೆ ಕರ್ಮವಂಗಲೇಪಕವಲ್ಲವೆಂಬುದರಿಂದಾತನಂಗಾಲೇಪಕನೆಂದು ಸೂತ್ರತ್ರಯದಿಂ ಪೇಳುತಿರ್ದಪಂ.

ದಿಕ್ಕಾಲಾದ್ಯನವಚ್ಛಿನ್ನಂ ಚಿದಾನಂದಮಯಂ ಮಹತ್
ಯಸ್ಯ ರೂಪಮಿದಂ ಖ್ಯಾತಂ ಸೋಽಸಂಗಾಲೇಪ ಇಹೋಚ್ಯತೇ ॥

ದಶದಿಕ್ಕಾಲತ್ರಯದಲ್ಲಿಯೂ ಪರಿಚ್ಛೇದವಿಲ್ಲದಾನಂದ ಸ್ವರೂಪವಾದ ಹವಣಿಸ ಬಾರದ ಪ್ರಾದುರ್ಭವಿಸಿದ ದೃಕ್ಕ್ರಿಯಾರೂಪವು ಯಾವನಾನೊಬ್ಬ ತಿರೋಭಾವಭಾಜನ ಸಂಪನ್ನನಾದ ಶಿವಯೋಗಿಗೆ ಸ್ವರೂಪಮೆಂದು ಪ್ರಸಿದ್ಧವು. ಆ ಭಾಜನಸ್ಥಲ ಸಂಪನ್ನನಾದ ಶಿವಯೋಗಿಯು ಅಂಗದಲ್ಲಿ ಕರ್ಮಲೇಪರಹಿತನೆಂದಿಲ್ಲಿ ಪೇಳಲ್ಪಡುವನೆಂಬುದರ್ಥಂ ॥೪೨॥ ಬಳಿಕಿಲ್ಲಿ ದೃಷ್ಟಾಂತಮಂ ಪೇಳುತಿರ್ದಪಂ.

ಸಮಸ್ತಜಗದಾತ್ಮಾಽಪಿ ಸಂವಿದ್ರೂಪೋ ಮಹಾಮತಿಃ
ಲಿಪ್ಯತೇ ನೈವ ಸಂಸಾರೈರ್ಯಥಾ ಧೂಮಾದಿಭಿರ್ನಭಃ ॥

ಸಕಲಜಗಚ್ಚೈತನ್ಯಾತ್ಮಕನಾಗಿ ಚಿದ್ರೂಪನಾದ ಮಹಾಬುದ್ಧಿಯುಳ್ಳ ಶಿವಯೋಗೀಶ್ವರಂ ಧೂಮಮೇಘಾದಿಗಳಿಂದೆಂತು ಲೇಪಿಸಲ್ಪಡುವುದಿಲ್ಲ ಹಾಗೆ ಸಂಸಾರದಲ್ಲಿ ಪ್ರಾಪ್ತವಾದ ಕರ್ಮಗಳಿಂ ಲೇಪಿಸಲ್ಪಡನೆಂಬುದರ್ಥಂ ॥೪೩॥ ಅದೇನು ಕಾರಣವೆಂಬಲ್ಲಿ ಪೇಳುತಿರ್ದಪಂ.

ನ ವಿಧಿರ್ನ ನಿಷೇಧಶ್ಚ ನ ವಿಕಲ್ಪೋ ನ ವಾಸನಾ
ಕೇವಲಂ ಚಿತ್ಸ್ವರೂಪಸ್ಯ ಗಲಿತಪ್ರಾಕೃತಾತ್ಮನಃ ॥

ಸಡಿಲಿದ ಪ್ರಾಕೃತಕರ್ಮಪ್ರಯತ್ನವುಳ್ಳ ಬಚ್ಚಬರಿಯ ಚಿದ್ರೂಪನಾದ ಶಿವಯೋಗಿಗೆ ವಿಧ್ಯುಕ್ತ ಕರ್ಮವು ಇಲ್ಲ ನಿಷೇಧಿಸುವ ಕರ್ಮವು ಇಲ್ಲ, ಉಂಟೋ ಇಲ್ಲವೋ ಎಂಬ ಕೋಟಿಯಾತ್ಮಕವಾದ ವಿಕಲ್ಪವೂ ಇಲ್ಲ ಆ ವಾಸನೆಯೂ ಇಲ್ಲವೆಂಬುದರ್ಥಂ ॥೪೪॥ ಬಳಿಕ ವಾಸನಾರಹಿತನಾದ ಶಿವಯೋಗಿಯ ಅಭೇದಜ್ಞಾನಮಂ ದೃಷ್ಟಾಂತರ ಪೂರ್ವಕವಾಗಿ ಸೂತ್ರದ್ವಯದಿಂ ವಿಶೇಷಿಸುತಿರ್ದಪಂ.

ಘಟಾದಿಷು ಪೃಥಗ್ಭೂತಂ ಯಥಾಕಾಶಂ ನ ಭಿದ್ಯತೇ
ತಥೋಪಾಧಿಗತಂ ಬ್ರಹ್ಮ ನಾನಾರೂಪಂ ನ ಭಿದ್ಯತೇ ॥

ಘಟಮಠಾದಿಗಳಲ್ಲಿ ಭಿನ್ನವಾದ ನಭವೆಂತು ಭಿನ್ನವಲ್ಲವೋ ಹಾಗೆ ದೇವ ದಾನವಾದ್ಯುಪಾಧಿಯನ್ನೈದಿದ ಬ್ರಹ್ಮವೂ ನಾನಾರೂಪವಾದರೂ ಭಿನ್ನವಲ್ಲವೆಂಬುದರ್ಥಂ ॥೪೫॥

ಅನಶ್ವರಮನಿರ್ದೇಶ್ಯಂ ಯಥಾ ವ್ಯೋಮ ಪ್ರಕಾಶತೇ
ತಥಾ ಬ್ರಹ್ಮಾಪಿ ಚೈತನ್ಯಮತ್ರ ವೈಶೇಷಿಕೀ ಕಲಾ ॥

ವ್ಯೋಮನಾಶರಹಿತನಾದಂಥದಾಗಿ ಹೇಗೆ ಪ್ರಕಾಶಿಸುವದು ಹಾಗೆ ಬ್ರಹ್ಮವು ಪ್ರಕಾಶಿಸುತ್ತಿಹುದು. ಈ ಬ್ರಹ್ಮದಲ್ಲಿ ಕ್ರಿಯಾರೂಪವಾದ ಚೈತನ್ಯವೆ ಜಡವಾದ ಭೂತಾಕಾಶಾಪೇಕ್ಷೆಯಿಂ ವಿಶೇಷವಾದ ಕಲೆ ಎಂದು ಚಿದಾಕಾಶಸ್ವರೂಪವಾದುದು ಬ್ರಹ್ಮವೆಂಬುದರ್ಥಂ.

ಇಲ್ಲಿ ಅನಶ್ವರವೆಂದರೆ ನಿರವಯವವೆಂಬುದು ತಾತ್ಪರ್ಯಂ. ನಿತ್ಯವೆಂದು ಶಂಕಿಸಲಾಗದು ಜಡಮಪ್ಪುದರಿಂ ॥೪೬॥ ಬಳಿಕ ಚಿದಾಕಾಶ ಸ್ವರೂಪವಾದ ಶಿವಯೋಗೀಶ್ವರಂ ಪೂರ್ಣನೆಂದು ನುಡಿದು ಅಂಗಾಲೇಪಸ್ಥಲಮಂ ಮುಗಿಸುತಿರ್ದಪಂ.

ನ ದೇವತ್ವಂ ನ ಮಾನುಷ್ಯಂ ನ ತಿರ್ಯಕ್ತ್ವಂ ನ ಚಾನ್ಯಥಾ
ಸರ್ವಾಕಾರತ್ವಮಾಖ್ಯಾತಂ ಜೀವನ್ಮುಕ್ತಸ್ಯ ಯೋಗಿನಃ ॥

ಜೀವನ್ಮುಕ್ತನಾದ ಶಿವಯೋಗಿಗೆ ಕರ್ಮಪಾಶವಿಲ್ಲದ ಕಾರಣದಿಂ ಪುಣ್ಯಕರ್ಮ ಸಿದ್ಧವಾದ ದೇವತ್ವವು ಇಲ್ಲ, ಪುಣ್ಯಪಾಪ ಮಿಶ್ರಿತೆಯಿಂದುಂಟಾದ ಮನುಷ್ಯತ್ವವೂ ಇಲ್ಲ, ಪಾಪಜನ್ಯವಾದ ತಿರ್ಯಕ್ಯೋನಿತ್ವವೂ ಇಲ್ಲ ತದ್ವ್ಯತಿರೇಕದಿಂ ಮಾಯಾಗರ್ಭದಲ್ಲಿ ಮಲಮೂರ್ಛಿತನಾಗಿ ವಿದ್ಯಮಾನತ್ವವೂ ಇಲ್ಲ, ಮತ್ತೇನೆಂದರೆ ಎಲ್ಲಾ ಕಡೆಯಲ್ಲೂ ಪೂರ್ಣವಾದ ಚಿದಾಕಾಶ ರೂಪತ್ವಂ ಪೇಳಲ್ಪಟ್ಟಿತ್ತು. ನಿತ್ಯಪರಿಪೂರ್ಣಚಿತ್ಪ್ರಸಾದವುಳ್ಳ ಶಿವಯೋಗಿಗೆ ಸಿದ್ಧಾಂತ ಪ್ರಸಿದ್ಧವಾದ ಮಾಯಾಮಲಬಿಂದುತಿರೋಭಾವ ಕರ್ಮರೂಪ ಪಂಚಪಾಶಬಂಧವಿಲ್ಲವೆಂಬುದರ್ಥಂ ॥೪೭॥

## ೫೫. ಸ್ವಪರಾಜ್ಞಸ್ಥಲ

ಬಳಿಕ ಯಥಾ ಪ್ರಿಯಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚ ನ ವೇದನಾಂತರಂ ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸ ಪರಿಷಕ್ತಃ ನ ಬಾಹ್ಯಂ ಕಿಂಚನ ವೇದನಾಂತರಮ್ ಎಂಬ ಬೃಹದಾರಣ್ಯ ಶ್ರುತಿಯಿಂದಲೂ ಸ್ವಯಂ ಸ್ವಸ್ಯ ಪರೋ ನೈವ ನ ಪರಃ ಸ್ವಸ್ಯ ವಿದ್ಯತೇ ಇತಿ ಧಾರ್ಯೇऽಪಿ ಸಂಲೀನೇ ತಸ್ಮಿನ್ ಜ್ಞೇಯಂ ನ ತಸ್ಯ ಹಿ ಎಂಬ ಸರ್ವಜ್ಞಾನೋತ್ತರ ವಚನದಿಂದಲೂ ಅಂಗಾಲೇಪವುಳ್ಳ ಶಿವಯೋಗಿಯು ಮೊದಲಾದವ ಐದು ಸ್ಥಲದಲ್ಲಿ ಪ್ರತಿಪಾದಿಸಲ್ಪಟ್ಟ ಪಾಶಪಂಚಕವಿಲ್ಲದಿಹತನದಿಂ ಸ್ವಯಂ ಪರವನರಿಯನೆಂದು ಪ್ರತಿಪಾದಿಸುತಿರ್ದಪಂ.

ಅಪ್ರಮೇಯೇ ಚಿದಾಕಾರೇ ಬ್ರಹ್ಮಣ್ಯದ್ವೈತವೈಭವೇ
ವಿಲೀನಃ ಕಿಂ ನು ಜಾನಾತಿ ಸ್ವಾತ್ಮಾನಂ ಪರಮೇವ ವಾ ॥

ಅಪರಿಮಿತ ಸ್ಫುರಣರೂಪವಾದ ಏಕಮೇವಾದ್ವಿತೀಯಯೆಂಬ ಬ್ರಹ್ಮ ಎಂಬ ಶ್ರುತಿಯಿಂ ಸ್ವಗತ ಸ್ವಜಾತಿಯ ಭೇದಶೂನ್ಯವಾದ ಪರಬ್ರಹ್ಮದಲ್ಲಿ ಸಾಮರಸ್ಯವನ್ನೈದಿದ ಅಂಗಾಲೇಪನು ತನ್ನನೂ ಪರನನೂ ಅರಿಯದಿರುವನೆಂಬುದರ್ಥಂ ॥೪೮॥ ಬಳಿಕೀ ಅರ್ಥವನೆ ಐದುಸೂತ್ರಂಗಳಿಂ ವಿಶೇಷಿಸುತಿರ್ದಪಂ.

ಯತ್ರ ನಾಸ್ತಿ ಭಿದಾಯೋಗಾದಹಂ ತ್ವಮಿತಿ ವಿಭ್ರಮಃ
ನ ಸಂಯೋಗೋ ವಿಯೋಗಶ್ಚ ನ ಜ್ಞೇಯಜ್ಞಾತೃಕಲ್ಪನಾ ॥

ನ ಬಂಧೋ ನ ಚ ಮುಕ್ತಿಶ್ಚ ನ ದೇವಾದ್ಯಭಿಮಾನಿತಾ
ನ ಸುಖಂ ನೈವ ದುಃಖಂ ಚ ನ ಜ್ಞಾನಂ ಜ್ಞಾನಮೇವ ವಾ ॥

ನೋತ್ಕೃಷ್ಟತ್ವಂ ನ ಹೀನತ್ವಂ ನೋಪರಿಷ್ಟಾನ್ನ ಚಾಪ್ಯಧಃ
ನ ಪಶ್ಚಾನ್ನೈವ ಪುರತೋ ನ ದೂರೇಕಿಂಚಿದಂತರೇ ॥

ಸರ್ವಾಕಾರೇ ಚಿದಾನಂದೇ ಸತ್ಯರೂಪಿಣಿ ಶಾಶ್ವತೇ
ಪರಾಕಾಶಮಯೇ ತಸ್ಮಿನ್ ಪರೇ ಬ್ರಹ್ಮಣಿ ನಿರ್ಮಲೇ ॥

ಏಕೀಭಾವಮುಪೇತಾನಾಂ ಯೋಗಿನಾಂ ಪರಮಾತ್ಮನಾಮ್
ಪರಾಪರ ಪರಿಜ್ಞಾನ ಪರಿಹಾಸಕಥಾ ಕುತಃ ॥

ಅದ್ವೈತವಿಭವವುಳ್ಳ ಪರಬ್ರಹ್ಮದಲ್ಲಿ ನೇತ್ರದ್ವಯದಂತೆ ಸಮಾನ ಸಮರಸ ಯೋಗದತ್ತಣಿಂ ನಾನು ನೀನೆಂಬ ಭೇದ ಭ್ರಾಂತಿಯು ಇಲ್ಲ, ಈ ಎರಡಕ್ಕೂ ನಾನೆಂಬ ಒಂದೇ ಪ್ರತ್ಯಯದಲ್ಲಿ ವಿಶ್ರಾಂತಿಯುಂಟಾಗಿರುವುದರಿಂ ಸಂಯೋಗ ವಿಯೋಗಗಳು ಇಲ್ಲ, ಜ್ಞೇಯಜ್ಞಾತೃಕಲ್ಪನೆಯೂ ಇಲ್ಲ, ಬಂಧವೂ ಇಲ್ಲ, ಮುಕ್ತಿಯೂ ಇಲ್ಲ, ದೇಹತ್ವಾದ್ಯ ಭಿಮಾನವೂ ಇಲ್ಲ, ವೈಷಯಿಕ ಸುಖವೂ ಇಲ್ಲ, ದುಃಖವೂ ಇಲ್ಲ, ಇಂದ್ರಿಯಜನ್ಯ ಜ್ಞಾನವೂ ಇಲ್ಲ, ಅಜ್ಞಾನವೂ ಇಲ್ಲ, ಶ್ರೇಷ್ಠತ್ವವೂ ಇಲ್ಲ, ಉತ್ಕೃಷ್ಟತ್ವವೂ ಇಲ್ಲ, ಉಪರಿಭಾಗವೂ ಇಲ್ಲ, ಅಧೋಭಾಗವೂ ಇಲ್ಲ, ಪಶ್ಚಿಮ ಭಾಗವೂ ಇಲ್ಲ, ಪೂರ್ವಭಾಗವೂ ಇಲ್ಲ, ದೂರವಿಲ್ಲದ ಕಿಂಚಿದ್ದೂರವಾದ ಸರ್ವಸ್ವರೂಪವಾಗಿ ಚಿದಾನಂದಸತ್ಯರೂಪವಾದ ಶಾಶ್ವತವಾದ ನಿರ್ಮಲವಾದ ಪರಾಕಾಶಮಯ ಬ್ರಹ್ಮದಲ್ಲಿ ಏಕೀಭಾವವನೈದಿದ ಆ ಕಾರಣದಿಂದಲೆ ಪರಬ್ರಹ್ಮಸ್ವರೂಪರಾದ ಶಿವಯೋಗಿಗಳಿಗೆ ತನ್ನನೂ ಪರವನೂ ಬಲ್ಲೆನೆಂಬ ಪರಿಹಾಸ ಪ್ರಸಂಗವೆತ್ತಣದು. ವ್ಯಾಪಕವಾಗಿ ಒಂದೆಯಾದ ಕಾರಣದಿಂದೆಂಬುದರ್ಥಂ ॥೫೩॥ ಬಳಿಕೀ ಅರ್ಥವನೆ ವಿಶೇಷಿಸುತ್ತ ಸ್ವಪರಾಜ್ಞ ಸ್ಥಲಮಂ ಮುಗಿಸುತಿರ್ದಪಂ.

ದೇಶಕಾಲಾದ್ಯವಚ್ಛಿನ್ನ ತೇಜೋರೂಪಸಮಾಶ್ರಯಾತ್
ಸ್ವಪರಜ್ಞಾನವಿರಹಾತ್ ಸ್ವಪರಾಜ್ಞಸ್ಥಲಂ ವಿದುಃ ॥

ದೇಶಕಾಲಗಳಿಂ ಪರಿಮಿತ ಇಲ್ಲದಂತೆ ಚಿತ್ಪ್ರಕಾಶವನಾಶ್ರಯಿಸುವುದರಿಂ ಸ್ವಪರಾಜ್ಞಾನವಿಲ್ಲದ ಕಾರಣದಿಂ ಸ್ವಪರಾಜ್ಞ ಸ್ಥಲವೆಂದು ತಿಳಿದಿಹರೆಂಬುದರ್ಥಂ ॥೫೪॥

### ೫೬. ಭಾವಾಭಾವಲಯಸ್ಥಲ

ಬಳಿಕ ಸ್ವಪ್ನಾಂತಂ ಜಾಗರಿತಾಂತಂ ಚೋಭೌ ಯೇನಾನುಪಶ್ಯತಿ ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ಎಂಬ ಕಠವಲ್ಲಿ ಶ್ರುತ್ಯನುಸಾರದಿಂದಲೂ ಭಾವಾಭಾವದ್ವಯಾತೀತಂ ಸ್ವಪ್ನಜಾಗರಣಾತಿಗಮ್ ಮೃತ್ಯುಜೀವನನಿರ್ಮುಕ್ತಂ ತತ್ತ್ವಂ ತತ್ತ್ವವಿದೋ ವಿದುಃ ಹೀಗೆಂಬ ಯೋಗಜಾಗಮ ವಚನಾನುಸಾರದಿಂದಲೂ ಆ ಸ್ವಯ ಪರಜ್ಞಾನ ಶೂನ್ಯನಾದ ಶಿವಯೋಗಿಗೆ ಭಾವಾಭಾವಗಳು ಇಲ್ಲವೆಂದು ನಿರೂಪಿಸುತಿರ್ದಪಂ.

ತ್ವಂತ್ವಾ ಹಂತಾ ವಿನಿರ್ಮುಕ್ತೇ ಶೂನ್ಯಕಲ್ಪೇ ಚಿದಂಬರೇ
ಏಕೀಭೂತಸ್ಯ ಸಿದ್ಧಸ್ಯ ಭಾವಾಭಾವಕಥಾ ಕುತಃ ॥

ಪರಿಚ್ಛಿನ್ನಶರೀರವಿಶಿಷ್ಟತ್ವಮಹಂಭಾವವಿಲ್ಲದ ಶೂನ್ಯಕ್ಕೆ ಸಮಾನವಾದ ಚಿದಾಕಾಶ

ದಲ್ಲಿ ಏಕರಸವಾದ ಸ್ವಯಪರಜ್ಞಾನಶೂನ್ಯನಾದ ಸಿದ್ಧನಿಗೆ ಭಾವಾಭಾವ ಪ್ರಸಂಗವೆತ್ತಣದು ಇಲ್ಲವೆಂಬುದರ್ಥಂ ॥೫೫॥ ಬಳಿಕ ಭಾವಾಭಾವಲಯ ಸ್ವರೂಪಮಂ ಸೂತ್ರದ್ವಯದಿಂ ಪ್ರತಿಪಾದಿಸುತಿರ್ದಪಂ.

ಅಹಂಭಾವಸ್ಯ ಶೂನ್ಯತ್ವಾದಭಾವಸ್ಯ ತಥಾತ್ಮನಃ
ಭಾವಾಭಾವವಿನಿರ್ಮುಕ್ತೋ ಜೀವನ್ಮುಕ್ತೋ ಪ್ರಕಾಶತೇ ॥

ಅಹಂಭಾವವಿಲ್ಲದ ಕಾರಣವೆಂಬ ಅಭಾವ ಈ ರೂಪವಾದ ಭಾವಾಭಾವ ಶೂನ್ಯನಾಗಿ ಸ್ವಸ್ವರೂಪದಿಂ ಪ್ರಕಾಶಿಸುತ್ತಿಹನು. ಸಕಲ ಸುಖದುಃಖಾದಿ ಭೋಕ್ತೃವಾಗಿ ಸುಪ್ತಿಲಯಗಾಮಿಯಾದ ಮೂಲಾಹಂಕಾರ ಉಂಟೆಂಬ ಭಾವದಿಂದಲೂ ಸರ್ವಸಾಕ್ಷಿಕಮಾಗಿ ಅವಸ್ಥಾತ್ರಯದಲ್ಲಿಯೂ ವಿಚ್ಛೇದವಿಲ್ಲದೆ ತೋರುವ ಚೈತನ್ಯವಿಲ್ಲವೆಂಬ ಅಭಾವದಿಂದಲೂ ಶೂನ್ಯವೆಂಬುದರ್ಥಂ ॥೫೬॥

ಸುಖ ದುಃಖಾದಿ ಯೋಗೇಷು ನಾಭಾವೋ ಭಾವ ಏವ ವಾ
ವಿದ್ಯತೇ ಚಿತ್ಸ್ವರೂಪಸ್ಯ ನಿರ್ಲೇಪಸ್ಯ ಮಹಾತ್ಮನಃ ॥

ಪೇಳಲ್ಪಟ್ಟ ಮೂಲಾಹಂಕಾರದ ಲೇಪವಿಲ್ಲದ ಚಿತ್ಸ್ವರೂಪನಾದ ಮಹಾಪುರುಷನಿಗೆ ಸುಖ ದುಃಖಾದಿ ಸಂಬಂಧಗಳಲ್ಲಿ ಅಭಾವವೂ ಇಲ್ಲ ಭಾವವೂ ಇಲ್ಲ, ನಿರ್ಲಿಪ್ತನಾಗಿ ವ್ಯಾಪಕನಾದ ಕಾರಣದಿಂದೆಂಬುದು ತಾತ್ಪರ್ಯಂ ॥೫೭॥ ಈ ಪ್ರಕಾರದಿಂ ಭಾವಾಭಾವ ಶೂನ್ಯವಾದಾತನಿಗೆ ಏನು ಕಾರಣವೆಂದು ಪೇಳುತಿರ್ದಪಂ.

ಯಸ್ಮಿನ್ ಜ್ಯೋತಿಷಿ ಚಿದ್ರೂಪೇ ದೃಶ್ಯತೇ ನೈವ ಕಿಂಚನ
ತದ್ರೂಪಂ ವಾಪ್ಯಸದ್ರೂಪಂ ಭಾವಾಭಾವಂ ವಿಮುಂಚತಃ ॥

ಯಾವುದಾನೊಂದು ಚಿದ್ರೂಪವಾದ ತೇಜಸ್ಸಿನಲ್ಲಿ ಭಾವಾಭಾವ ಬಿಟ್ಟಂಥ ಮಹಾಪುರುಷನೆ ಉಂಟು ಇಲ್ಲವೆಂಬ ಎರಡುರೂಪ ಒಂದಿಷ್ಟು ಕಾಣಲ್ಪಡುವುದಿಲ್ಲವೆಂಬುದರ್ಥಂ ॥೫೮॥ ಬಳಿಕ ಭಾವಾಭಾವಲಯಸ್ಥಲಮಂ ಮುಗಿಸುತಿರ್ದಪಂ.

ಪ್ರತೀಯಮಾನೌ ವಿದ್ಯೇತೇ ಭಾವಾಭಾವೌ ನ ಕುತ್ರಚಿತ್
ಲಿಂಗೈಕ್ಯ ಸತಿ ಯತ್ತಸ್ಮಾದ್ಭಾವಾಭಾವಲಯಸ್ಥಲಮ್ ॥

ಓದುವಂಥ ಭಾವಾಭಾವಗಳು ಶಿವಲಿಂಗದೊಡನೇಕರಸವಾಗದು. ಮಹಾಪುರುಷನ ವಿಷಯದಲ್ಲಿ ಒಂದಿಷ್ಟಾದರೂ ಯಾವ ಕಾರಣದಿಂದಿಲ್ಲವೋ ಆ ಕಾರಣದಿಂ ಭಾವಾಭಾವ ಲಯಸ್ಥಲವೆಂದು ಪೇಳಲ್ಪಟ್ಟಿತ್ತೆಂಬುದರ್ಥಂ ॥೫೯॥

## ೫೭. ಜ್ಞಾನಶೂನ್ಯಸ್ಥಲ

ಬಳಿಕ ಆಪ ಅಪ್ಸು ಅಗ್ನಿಮಗ್ನೌ ವಾಯುಂವಾಯೌ ವ್ಯೋಮ್ನಿ ವ್ಯೋಮ ಲಕ್ಷಯೇತ್ ಏವಮಂತರ್ಗತ ಚಿತ್ತಂ ಪುರುಷೇ ಪ್ರತಿಮುಚ್ಯ ಎಂಬ ಮೈತ್ರೇಯಶ್ರುತ್ಯನುಸಾರದಿಂದಲೂ

ಸರ್ವಶೂನ್ಯಂ ನಿರಾಭಾಸಂ ಸಾಮರಸ್ಯಂ ತಥಾ ಭವೇತ್ ಘೃತೇ ಘೃತಂ ಯಥಾ ನ್ಯಸ್ತಂ ಕ್ಷೀರಂ ಕ್ಷೀರೇ ಯಥೈವ ಚ ಎಂಬ ಸರ್ವಜ್ಞಾನೋತ್ತರ ವಚನಾನುಸಾರದಿಂದಲೂ ಸ್ವಪರಜ್ಞಾನ ಶೂನ್ಯನಾದುದರಿಂದಲೂ ಭಾವಾಭಾವಲಯ ಸಂಪನ್ನನಾದ ಆ ಶಿವಯೋಗಿಗೆ ಅಭೇದಸುಲಭಜ್ಞಾನಶೂನ್ಯಸ್ಥಲಮಂ ಸೂತ್ರದ್ವಯದಿಂ ನಿರೂಪಿಸುತಿರ್ದಪಂ.

ಪರಾಪರಸಮಾಪೇಕ್ಷ ಭಾವಾಭಾವವಿವೇಚನಮ್
ಜ್ಞಾನಂ ಬ್ರಹ್ಮಣಿ ತನ್ನಾಸ್ತಿ ಜ್ಞಾನಶೂನ್ಯಸ್ಥಲಂ ವಿದುಃ ॥

ಪರಾಪರಜ್ಞಾನಾಭಿಲಾಷೆಯುಕ್ತ ಭಾವಾಭಾವವಿವೇಕವುಳ್ಳ ಯಾವ ಜ್ಞಾನವು ಪರಬ್ರಹ್ಮ ಸ್ವರೂಪನಾಗಿ ಭಾವಾಭಾವಲಯಸಂಪನ್ನನಾದ ಶಿವಯೋಗಿಯಲ್ಲಿ ಇಲ್ಲವು ಅದು ಜ್ಞಾನಶೂನ್ಯಸ್ಥಲವೆಂದು ತಿಳಿದಿಹರೆಂಬುದರ್ಥಂ ॥೬೦॥ ಹಾಗಾದರಾ ಯೋಗಿ ಯೆಂತಿಪ್ಪನೆಂಬಲ್ಲಿ ಪೇಳುತಿರ್ದಪಂ.

ಜಲೇ ಜಲಮಿವ ನ್ಯಸ್ತಂ ವಹ್ನೌವಹ್ನಿರಿವಾರ್ಪಿತಮ್
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ॥

ಜಲಮಿಶ್ರವಾದ ಜಲದಂತೆ ವಹ್ನಿಯಲ್ಲಿ ಮಡಗಿದ ವಹ್ನಿಯಂತೆ ಪರಬ್ರಹ್ಮ ಸ್ವರೂಪವಾದ ಮಹಾಲಿಂಗದಲ್ಲಿ ಲಯವಾದ ಭಾವಾಭಾವ ಪ್ರಯತ್ನವುಳ್ಳ ಶಿವಯೋಗಿಯು ಭಿನ್ನಭಾವದಿಂ ಕಾಣಲ್ಪಡದೆ ಇರುವನು. ಜ್ಞಾನಶೂನ್ಯವಾದ ಕಾರಣದಿಂದೆಂಬುದು ತಾತ್ಪರ್ಯಂ ॥೬೧॥

ಸರ್ವಾತ್ಮನಿ ಪರೇ ತತ್ತ್ವೇ ಭೇದಶಂಕಾವಿವರ್ಜಿತೇ
ಜ್ಞಾತ್ರಾದಿ ವ್ಯವಹಾರೋತ್ಥಂ ಕುತೋ ಜ್ಞಾನಂ ವಿಭಾವ್ಯತೇ ॥

ಭೇದಶಂಕೆ ಇಲ್ಲದೆ ಸರ್ವಾಕಾರವಾದ ಪರಬ್ರಹ್ಮತತ್ತ್ವದಲ್ಲಿ ಜ್ಞಾತೃ ಜ್ಞಾನಾದಿ ಗಳಿಂದುಂಟಾದ ಜ್ಞಾನವು ಯಾವ ಕಾರಣದಿಂದುಂಟಾದೀತು ಆಗದೆಂಬುದರ್ಥಂ ॥೬೨॥ ಬಳಿಕದನೆ ಸೂತ್ರತ್ರಯದಿಂ ವಿಶೇಷಿಸುತಿರ್ದಪಂ.

ನಿರ್ವಿಕಾರಂ ನಿರಾಕಾರಂ ನಿತ್ಯಂ ಸೀಮಾವಿವರ್ಜಿತಮ್
ವ್ಯೋಮವತ್ಪರಮಂ ಬ್ರಹ್ಮ ನಿರ್ವಿಕಲ್ಪತಯಾ ಸ್ಥಿತಮ್ ॥

ನ ಪೃಥ್ವ್ಯಾದೀನಿ ಭೂತಾನಿ ನ ಗ್ರಹಾ ನೈವ ತಾರಕಾಃ
ನ ದೇವಾ ನ ಮನುಷ್ಯಾಶ್ಚ ನ ತಿರ್ಯಂಚೋ ನ ಚಾಪರೇ ॥

ತಸ್ಮಿನ್ ಕೇವಲಚಿನ್ಮಾತ್ರೇ ಸತ್ತಾನಂದೈಕಲಕ್ಷಣೇ
ತ್ವಂತ್ವಾಹಂತಾದಿ ಸಂರೂಢಂ ವಿಜ್ಞಾನಂ ಕೇನ ಭಾವ್ಯತೇ ॥

ಮೃಗಾದಿಗಳಂತೆ ವಿಕಾರವಿಲ್ಲದ ನೀಲಪೀತಾದ್ಯಾಕಾರವಿಲ್ಲದ ಅವಧಿಯಿಲ್ಲದ ಪರಬ್ರಹ್ಮವು ವ್ಯೋಮದಂತೆ ಭೇದವಿಲ್ಲದೆ ಇರುವುದು. ಆ ಕಾರಣದಿಂದಲೆ ಭಿನ್ನವಾಗಿತೋರುವ ಭೂಮ್ಯಾದಿ ಭೂತಂಗಳು ಇಲ್ಲ ಆದಿತ್ಯಾದಿ ನವಗ್ರಹರೂ ಇಲ್ಲ

ಅಶ್ವಿನಿ ಮೊದಲಾದ ತಾರಕಿಗಳೂ ಇಲ್ಲ ವಿಷ್ಣ್ವಾದಿ ದೇವರುಗಳೂ ಇಲ್ಲ ಮನುಷ್ಯರೂ ಇಲ್ಲ ತಿರ್ಯಗ್ಜಂತುಗಳೂ ಇಲ್ಲ ಮತ್ತೆ ಯಾರೂ ಇಲ್ಲ. ಅದು ಕಾರಣವಾಗಿ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮದಲ್ಲಿ ನಾನು ನೀನೆಂಬ ವ್ಯವಹಾರದಿಂದುಂಟಾದ ವಿಶೇಷ ಜ್ಞಾನವೆತ್ತ ಣೆಂದುಂಟಾದೀತು ಯಾತರಿಂದಲೂ ಆಗದೆಂಬುದರ್ಥಂ॥೬೫॥ ಬಳಿಕ ಏತದ್ ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃ ಪರಂ ವೇದಿತವ್ಯಂ ಚ ಕಿಂಚಿತ್ ಹೀಗೆಂಬ ಶ್ವೇತಾಶ್ವತರ ಶ್ರುತ್ಯನುಸಾರದಿಂ ಕೇವಲಂ ಜ್ಞೇಯಮಿತ್ಯುಕ್ತಂ ವೇದಿತವ್ಯಂ ನ ಕಿಂಚನ ಎಂಬ ದೇವೀ ಕಾಲೋತ್ತರ ವಚನದಿಂದ ಸ್ವಸ್ವರೂಪ ಜ್ಞಾನಿಗೆ ತ್ರಿಪುಟಿಮಯ ಪ್ರಪಂಚಜ್ಞಾನವಿಲ್ಲವೆಂದೈದು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ಜ್ಞೇಯಾಭಾವಾದ್ವಿಶೇಷೇಣ ಶೂನ್ಯಕಲ್ಪಂ ವಿಭಾವ್ಯತೇ
ಜ್ಞಾತೃಜ್ಞೇಯಾದಿಭಿಶ್ಶೂನ್ಯಂ ಶೂನ್ಯಂ ಜ್ಞಾನಾದಿಭಿರ್ಗುಣೈಃ ॥

ಆದಾವಂತೇ ಚ ಮಧ್ಯೇ ಚ ಶೂನ್ಯಂ ಸರ್ವತ್ರ ಸರ್ವದಾ
ದ್ವಿತೀಯೇನ ಪದಾರ್ಥೇನ ಶೂನ್ಯಂ ಶೂನ್ಯಂ ವಿಭಾವ್ಯತೇ ॥

ಸಕಲ ವಿಷಯಕ ಜ್ಞಾನಶೂನ್ಯವಾದುದರಿಂ ಜ್ಞೇಯಪದಾರ್ಥವಿಲ್ಲದ ಕಾರಣ ಶೂನ್ಯಕ್ಕೆ ಸಮಾನವಾದ ಜ್ಞಾನವೆ ಪ್ರಕಾಶಿಸಲ್ಪಡುತ್ತದೆ. ಅದು ಕಾರಣವಾಗಿ ತ್ರಿಪುಟಿಯ ಪ್ರಪಂಚಶೂನ್ಯವಾದ ಆದ್ಯಂತಮಧ್ಯಗಳಲ್ಲಿ ಎಲ್ಲಾ ಕಡೆಯಲ್ಲೂ ಎಲ್ಲಾಗಳು ದ್ವಿತೀಯ ಪದಾರ್ಥದಿಂ ಶೂನ್ಯವಾದ ಕಾರಣದಿಂ ಶೂನ್ಯಜ್ಞಾನವೆ ಪ್ರಕಾಶಿಸುತ್ತಿಹದೆಂಬುದರ್ಥಂ ॥೬೭॥ ಬಳಿಕ ಜ್ಞಾನಶೂನ್ಯವಾವುದೆಂಬಲ್ಲಿ ಪೇಳುತಿರ್ದಪಂ.

ಕೇವಲಂ ಸಚ್ಚಿದಾನಂದಪ್ರಕಾಶಾದ್ವಯಲಕ್ಷಣಮ್
ಶೂನ್ಯಕಲ್ಪಂ ಪರಾಕಾಶಂ ಪರಬ್ರಹ್ಮ ಪ್ರಕಾಶತೇ ॥

ಬಚ್ಚಬರಿಯ ಸಚ್ಚಿದಾನಂದದ್ವಯ ಶೂನ್ಯಚಿಹ್ನೆಯುಳ್ಳ ಆ ಕಾರಣದಿಂದಲೆ ಶೂನ್ಯಕ್ಕೆ ಸಮಾನವಾದ ಪರಬ್ರಹ್ಮವು ಮಹಾಪ್ರಕಾಶರೂಪವಾಗಿ ಪ್ರಕಾಶಿಸುತ್ತಿಹದೆಂಬು ದರ್ಥಂ॥೬೮॥ ಬಳಿಕೀ ಪ್ರಕಾರವಾದ ಪರಬ್ರಹ್ಮದಲ್ಲಿ ತಾದಾತ್ಮ್ಯಮಂ ಪಡೆದ ಶಿವಯೋಗಿಗೆ ವಿಕಲ್ಪಜ್ಞಾನೋತ್ಪತ್ತಿ ಕೂಡದೆಂದು ಪೇಳುತಿರ್ದಪಂ.

ಶೂನ್ಯಜ್ಞಾನಾದಿಸಂಕಲ್ಪೇ ಶೂನ್ಯಸರ್ವಾರ್ಥಸಾಧನೇ
ಜ್ಯೋತಿರ್ಲಿಂಗೇ ಚಿದಾಕಾರೇ ಸ್ವಪ್ರಕಾಶೇ ನಿರುತ್ತರೇ ॥
ಏಕೀಭಾವಮುಪೇತಸ್ಯ ಕಥಂ ಜ್ಞಾನಸ್ಯ ಸಂಭವಃ

ಶೂನ್ಯಜ್ಞಾನಿಗಿಚ್ಛಾದಿ ಸಂಕಲ್ಪವುಳ್ಳ ಶೂನ್ಯವಾದ ಸಕಲಾರ್ಥಕ್ಕೆ ಸಾಧನವಾದ ತನ್ನಿಂದಧಿಕವಿಲ್ಲದ ಪರಶಿವಜ್ಯೋತಿರ್ಲಿಂಗವೆಂಬ ಚಿದಾಕಾರ ಸ್ವಪ್ರಾಕಾಶದಲ್ಲಿ ಏಕತ್ವವನೈದಿದ ಶಿವಯೋಗಿಗೆ ವೃತ್ತಿಜ್ಞಾನಾವಿರ್ಭಾವವೆಂತಹದು. ದಾವ ಪ್ರಕಾರದಿಂದಲೂ ಆಗದೆಂಬುದರ್ಥಂ॥೬೯॥ ಬಳಿಕ ನೇತಿ ನೇತಿ ಅಸ್ಥೂಲಂ ಅಣು ಹ್ರಸ್ವ ದೀರ್ಘ ಪ್ಲುತಮ್ ಹೀಗೆಂಬ ಬೃಹದಾರಣ್ಯಶ್ರುತ್ಯನುಸಾರದಿಂ ಅನಾಖ್ಯೇತು ನಿರಾಲಂಬೇ ಹ್ಯಗ್ರಾಹ್ಯೇ

ಮಾನವರ್ಜಿತೇ ನಿಸ್ತವೇಯೋ ಜಿತೋ ಮುಕ್ತಃ ಇತಿ ಶಾಸ್ತ್ರಸ್ಯ ನಿಶ್ಚಯಃ ಹೀಗೆಂಬ ನಿಶ್ವಾಸಕಾರಿಕಾ ತಂತ್ರಾನುಸಾರದಿಂ ಜ್ಞಾನಶೂನ್ಯಸ್ಥಲಮಂ ಮುಗಿಸುತಿರ್ದಪಂ.

ಯಸ್ಯ ಕಾರ್ಯದಶಾ ನಾಸ್ತಿ ಕಾರಣತ್ವಮಥಾಪಿ ವಾ
ಶೇಷತ್ವಂ ನೈವ ಶೇಷಿತ್ವಂ ಸ ಮುಕ್ತಃ ಪರ ಉಚ್ಯತೇ ॥

ಸರ್ವಂ ನೇತಿ ನೇತಿ ಎಂದು ನಿವಾರಿಸಿ ತತ್ತ್ವಾತೀತನಾಗಿ ಸ್ವಸ್ವರೂಪ ಸಂಪನ್ನನಾದಾತನಿಗೆ ಕಾರ್ಯಾವಸ್ಥೆಯೂ ಇಲ್ಲ ಅಲ್ಲದಿರ್ದಡೆ ಕಾರಣತ್ವವೂ ಇಲ್ಲ, ಪರಬ್ರಹ್ಮ ಪರಶಿವ ಪರಲಿಂಗವೆಂಬಿವು ಮೊದಲಾದ ಪರ್ಯಾಯ ನಾಮೋಚ್ಚಾರಣೆಯುಳ್ಳ ಯಾವನಾನೊಬ್ಬ ಸ್ವಸ್ವರೂಪ ಸಂಪನ್ನನಿಗೆ ಅವಶೇಷತ್ವವೂ ಇಲ್ಲ, ಶೇಷಮುಂಟಾಹತನವೂ ಇಲ್ಲ, ಆತನು ಮತ್ತೆಂಥವನೆಂದರೆ ನಿತ್ಯ ಪರಿಪೂರ್ಣ ಸಚ್ಚಿದಾನಂದ ಸ್ವರೂಪನಾದ ಪರಮುಕ್ತನೆಂದು ಪೇಳಲ್ಪಡುವನೆಂಬುದರ್ಥಂ. ಈ ಲಿಂಗತ್ರಯವ ಶಿವಲಿಂಗೈಕ್ಯನ ಅಂಶತ್ರಯಕ್ಕೆ ಸಂಬಂಧಿಸೂದು ॥೭೦॥ ಬಳಿಕೀ ಶಾಸ್ತ್ರ ಸಂಗ್ರಹ ಕರ್ತನಾದ ಶಿವಾಚಾರ್ಯಂ ತನ್ನ ಶಿಷ್ಯ ಪ್ರಶಿಷ್ಯರಂ ಕುರಿತು ಈ ಶಾಸ್ತ್ರ ಮುಗಿದ ಪ್ರಕಾರವ ಸೂಚಿಸುವಾತನಿಗೆ ರೇಣುಕ ಗಣೇಶ್ವರಂ ನಿರುತ್ತರನಾಗಿ ಸುಮ್ಮನಾದನೆಂದು ಸೂತ್ರದ್ವಯದಿಂ ಪೇಳುತಿರ್ದಪಂ.

ಏತಾವದುಕ್ತ್ವಾ ಪರಮಪ್ರಬೋಧ
ಮದ್ವೈತಮಾನಂದ ಶಿವಪ್ರಕಾಶಮ್
ದೇವ್ಯೈ ಪುರಾ ಭಾಷಿತಮೀಶ್ವರೇಣ
ತೂಷ್ಣೀಮಭೂದ್ಧ್ಯಾನಪರೋ ಗಣೇಂದ್ರಃ ॥

ರೇಣುಕ ಗಣೇಶ್ವರನು ಪರಮೇಶ್ವರನಿಂ ಪಾರ್ವತಿ ದೇವಿಯರಿಗೆ ಪೂರ್ವದಲ್ಲಿ ರಹಸ್ಯವಾಗಿ ಉಪಕ್ರಮೋಪಸಂಹಾರ ಮಧ್ಯಪರಾಮರ್ಶಗಳಿಂ ಶಿವಾದ್ವೈತರೂಪವಾಗಿ ಪೇಳಿದ ಪರಮಾನಂದಮಯ ಶಿವಸ್ವರೂಪ ಪ್ರಕಾಶಕ ಪಿಂಡಾದಿ ವೃತ್ತಿ ಜ್ಞಾನ ಶೂನ್ಯಾಂತವಾದ ವೀರಶೈವಶಾಸ್ತ್ರವನೀ ಪ್ರಕಾರದಿಂ ಕುಂಭಸಂಭವಂಗುಪದೇಶಿಸಿ ಸ್ವಸ್ವರೂಪ ಧ್ಯಾನಾಸಕ್ತನಾಗಿ ಮೌನಮುದ್ರೆಯೊಳಿದ್ದವನಾದನೆಂಬುದರ್ಥಂ ॥೭೨॥

ಏವಮುಕ್ತ್ವಾ ಸಮಾಸೀನಂ ಶಿವಯೋಗಪರಾಯಣಮ್
ರೇಣುಕಂ ತಂ ಸಮಾಲೋಕ್ಯಂ ಬಭಾಷೇ ಪ್ರಾಂಜಲಿರ್ಮುನಿಃ ॥

ಈ ಪ್ರಕಾರದಿಂ ವೀರಶೈವಶಾಸ್ತ್ರವನುಪದೇಶಂಗೈದು ಶಿವಧ್ಯಾನಯೋಗ ಪರಾಯಣನಾಗಿ ಕುಳಿತಿದ್ದರೆ ರೇಣುಕಗಣೇಶ್ವರನಂ ನೋಡಿ ಅಗಸ್ತ್ಯ ಮುನೀಶ್ವರಂ ಕರಗಳಂ ಮುಗಿದು ಸ್ತುತಿಯನಾರಂಭಿಸಿದನೆಂಬುದರ್ಥಂ ॥೭೨ ॥ ಬಳಿಕೇಳು ಸೂತ್ರಂಗಳಿಂ ರೇಣುಕಾಚಾರ್ಯನ ಸ್ತುತಿ ಮಾಡುತಿರ್ದಪಂ.

ಅಗಸ್ತ್ಯ ಉವಾಚ

ಶಿವಯೋಗವಿಶೇಷಜ್ಞ ಶಿವಜ್ಞಾನಮಹೋದಧೇ
ಸಮಸ್ತವೇದಶಾಸ್ತ್ರಾದಿವ್ಯವಹಾರದುರಂಧರ ॥

ಆಲೋಕಮಾತ್ರನಿರ್ಧೂತಸರ್ವಸಂಸಾರಬಂಧನ
ಸ್ವಚ್ಛಂದಚರಿತೋಲ್ಲಾಸ ಸ್ವಪ್ರಕಾಶಾತ್ಮವಚ್ಛಿವ ॥

ಅವತೀರ್ಣಮಿದಂ ಶಾಸ್ತ್ರಮನವದ್ಯಂ ತ್ವದಾನನಾತ್
ಶೃತ್ವಾ ಮೇ ಮೋದತೇ ಚಿತ್ತಂ ಜ್ಯೋತಿಃ ಪಶ್ಯೇ ಶಿವಾಭಿಧಮ್ ॥

ಶಿವಧ್ಯಾನಯೋಗವಿಶೇಷವ ಬಲ್ಲ ಶಿವಜ್ಞಾನಕ್ಕೆ ಸಮುದ್ರನಾದ ಸಮಸ್ತ ವೇದಾಗಮ ಪುರಾಣಾದಿಶಾಸ್ತ್ರವ್ಯವಹಾರಭಾರವ ಧರಿಸಿದ ತನ್ನ ದರ್ಶನಮಾತ್ರದಿಂ ನಿವಾರಿಸಲ್ಪಟ್ಟ ಸಕಲಜನರ ಸಂಸಾರಬಂಧನವುಳ್ಳ ಸ್ವಚ್ಛಂದಚಾರಿಯಾದ ತನ್ನ ಪ್ರಕಾಶದಿಂದಲೆ ಚೈತನ್ಯವುಳ್ಳ ಶಿವಸ್ವರೂಪವಾದ ಭೋರೇಣುಕಗಣೇಶ್ವರನೆ ನಿನ್ನ ಮುಖದಿಂದಾವಿರ್ಭವಿಸಿದ ದೋಷವಿಲ್ಲದ ವೀರಶೈವಶಾಸ್ತ್ರಮಂ ಕೇಳಿ ನನ್ನ ಮನಸ್ಸು ಸುಖಿಸುತ್ತಿದೆ. ಶಿವನೆಂಬ ಪೆಸರುಳ್ಳ ಜ್ಯೋತಿರ್ಲಿಂಗಮಂ ಕಾಣುತಿರ್ದಪನೆಂಬುದರ್ಥಂ ॥೭೪॥

ಅದ್ಯ ಮೇ ಸಫಲಂ ಜನ್ಮ ಗತೋ ಮೇ ಚಿತ್ತವಿಭ್ರಮಃ
ಸಂಜಾತಾ ಪಾಶವಿಚ್ಛಿತ್ತಿಃ ತಪಾಂಸಿ ಫಲಿತಾನಿ ಮೇ ॥

ಈ ಹೊತ್ತು ತನ್ನ ಉತ್ಪತ್ತಿ ಸಫಲವಾಯಿತು. ತನ್ನ ಚಿತ್ತದೊಳಗಣ ಭ್ರಾಂತಿಯೂ ತನ್ನ ಅಜ್ಞಾನಾದಿ ಪಾಶವೂ ಈ ಹೊತ್ತು ಹರಿದು ಹೋಯಿತು. ತನ್ನ ತಪಸ್ಸುಗಳು ಈ ಹೊತ್ತು ಸಫಲವಾದವೆಂಬುದರ್ಥಂ ॥೭೫॥

ಇದಾನೀಮೇವ ಮೇ ಜಾತಂ ಮುನಿರಾಜೋತ್ತಮೋತ್ತಮಮ್
ಅತಃ ಪರಂ ಮಯಾ ನಾಸ್ತಿಸದೃಶೋ ಭುವನತ್ರಯೇ ॥

ಮುನೀಶ್ವರರೊಳಗೆ ಶ್ರೇಷ್ಠತ್ವವು ಈಗಲೆ ತನಗುಂಟಾಯಿತು. ಇಲ್ಲದ ಮೇಲೆ ಎನಗೆ ಸಮನಾದವ ಮೂರುಲೋಕದಲ್ಲಿಯೂ ಇಲ್ಲವೆಂಬುದರ್ಥಂ ॥೭೬॥

ಶಾಸ್ತ್ರಂ ತವ ಮುಖೋದ್ಗೀರ್ಣಂ ಶಿವಾದ್ವೈತಪರಂಪರಮ್
ಮಾಂ ವಿನಾ ಕಸ್ಯ ಲೋಕೇಷು ಶ್ರೋತುಮಸ್ತಿ ತಪಃ ಶುಭಮ್ ॥

ತಪಸಾಂ ಪರಿಪಾಕೇನ ಶಂಕರಸ್ಯ ಪ್ರಸಾದತಃ
ಆಗತಸ್ತ್ವಂ ಮಹಾಭಾಗ ಮಾಂ ಕೃತಾರ್ಥಯಿತುಂ ಗಿರಾ ॥

ನಿನ್ನ ಮುಖದಿಂ ಪೊರಟ ಶಿವಾದ್ವೈತಪರವಾದ ವೀರಶೈವಶಾಸ್ತ್ರಮಂ ಕೇಳಲೀ ಲೋಕದಲ್ಲಿ ನನ್ನ ಹೊರತಾಗಿ ಯಾವಾತನ ತಪಸ್ಸು ಶುಭವಾಗಿರುವುದು ಯಾರ ಮಾತು ಶುಭವಾಗಿರುವುದೆಂಬುದರ್ಥಂ ॥೭೮॥ ಬಳಿಕ ರೇಣುಕಾಚಾರ್ಯನಗಸ್ತ್ಯನ ಸ್ತುತಿಯ ಮಾಡುತ್ತಿಹನೆಂದು ಪೇಳುತಿರ್ದಪಂ.

ಇತಿ ಸ್ತುವಂತಂ ವಿನಯಾದಗಸ್ತ್ಯಂ ಮುನಿಪುಂಗವಮ್
ಆಲೋಕ್ಯ ಕರುಣಾದೃಷ್ಟ್ಯಾ ಬಭಾಷೇ ಸ ಗಣೇಶ್ವರಃ ॥

ಈ ಪ್ರಕಾರದಿಂ ಭಕ್ತಿಯಿಂದ ಸ್ತುತಿಮಾಡುತಿದ್ದ ಮುನಿಶ್ರೇಷ್ಠನಾದ ಅಗಸ್ತ್ಯನನಾ

ರೇಣುಕಗಣೇಶ್ವರಂ ಸಂಗ್ರಾಹಕನಾದ ಶಿವಯೋಗೀಶ್ವರಂ ಕೃಪಾದೃಷ್ಟಿಯಿಂ ನೋಡಿ ನುಡಿದನೆಂಬುದರ್ಥಂ ॥೬೦॥

ಅಗಸ್ತ್ಯ ಮುನಿಶಾರ್ದೂಲ ತಪಸ್ಸಿದ್ಧಮನೋರಥ
ತ್ವಾಂ ವಿನಾ ಶಿವಶಾಸ್ತ್ರಸ್ಯ ಕಃ ಶ್ರೋತುಮಧಿಕಾರವಾನ್ ॥

ತಪಸ್ಸಿನಿಂ ಸಿದ್ಧವಾದ ಮನೋರಥವುಳ್ಳ ಮುನಿಶ್ರೇಷ್ಠನಾದ ಭೋ ಅಗಸ್ತ್ಯನೆ ನಿನ್ನ ಹೊರತಾಗಿ ಶಿವಶಾಸ್ತ್ರವ ಕೇಳಲಧಿಕಾರವುಳ್ಳವನಾವನುಂಟು. ಯಾವನು ಇಲ್ಲವೆಂಬುದರ್ಥಂ ॥೬೧॥

ಪಾತ್ರಂ ಶಿವಪ್ರಸಾದಸ್ಯ ಭವಾನೇಕೋ ನ ಚಾಪರಃ
ಇತಿ ನಿಶ್ಚಿತ್ಯ ಕಥಿತಂ ಮಯಾ ತೇ ತಂತ್ರಮೀದೃಶಮ್ ॥

ಶಿವಪ್ರಸಾದಕ್ಕೆ ಪಾತ್ರ ನೀನೊಬ್ಬನಲ್ಲದೆ ಬೇರೊಬ್ಬರಿಲ್ಲವೆಂದು ನಿಶ್ಚೈಸಿ ಈ ಪ್ರಕಾರವಾದ ವೀರಶೈವತಂತ್ರವು ನಿನಗೋಸ್ಕರ ನನ್ನಿಂ ಪೇಳಲ್ಪಟ್ಟಿತ್ತೆಂಬುದರ್ಥಂ ॥೬೨॥

ಸ್ಥಾಪ್ಯತಾಂ ಸರ್ವಲೋಕೇಷು ತಂತ್ರಮೇತ ತ್ತ್ವಯಾ ಮುನೇ
ಈದೃಶಂ ಶಿವಬೋಧಸ್ಯ ಸಾಧನಂ ನಾಸ್ತಿ ಕುತ್ರಚಿತ್ ॥

ಅಹೋ ಅಗಸ್ತ್ಯನೆ ಶಿವಜ್ಞಾನಕ್ಕೆ ಈ ಪ್ರಕಾರವಾದ ಉಪಾಯವೆಲ್ಲಿಯೂ ಇಲ್ಲ, ಅದರಿಂದೀ ಶಾಸ್ತ್ರವು ಸಕಲಲೋಕಗಳಲ್ಲಿಯೂ ನಿನ್ನಿಂದ ಪ್ರತಿಪಾದಿಸಲ್ಪಡಲಿ ಎಂದು ಆಜ್ಞಾಪಿಸಿದನೆಂಬುದರ್ಥಂ ॥೬೩॥

ರಹಸ್ಯಮೇತತ್ಸರ್ವಜ್ಞಃ ಸರ್ವಾನುಗ್ರಾಹಕಶ್ಶಿವಃ
ಅವಾದೀತ್ಸರ್ವಲೋಕಾನಾಂ ಸಿದ್ಧಯೇ ಪಾರ್ವತೀಪತಿಃ ॥

ಸರ್ವಜ್ಞನಾಗಿ ಸರ್ವರಿಗೂ ದಯಮಾಡುವ ಪಾರ್ವತೀಪತಿಯಾದ ಶಿವನು ಸಕಲರಿಗೂ ಭೋಗಮೋಕ್ಷಸಿದ್ಧಿಗೋಸ್ಕರ ಈ ವೀರಶೈವಶಾಸ್ತ್ರರಹಸ್ಯವನು ಉಪದೇಶಿಸಿದ ನೆಂಬುದರ್ಥಂ ॥೬೪॥

ತದಿದಂ ಶಿವಸಿದ್ಧಾಂತಸಾರಾಣಾಮುತ್ತಮೋತ್ತಮಮ್
ವೇದವೇದಾಂತ ಸರ್ವಸ್ವಂ ವಿದ್ಯಾಚಾರಪ್ರವರ್ತಕಮ್ ॥

ವೀರಮಾಹೇಶ್ವರಗ್ರಾಹ್ಯಂ ಶಿವಾದ್ವೈತಪ್ರಕಾಶಕಮ್
ಪರೀಕ್ಷಿತೇಭ್ಯೋ ದಾತವ್ಯಂ ಶಿಷ್ಯೇಭ್ಯೋ ನಾನ್ಯಥಾ ಕ್ವಚಿತ್ ॥

ವೀರಶೈವ ಷಟ್‌ಸ್ಥಲ ಶಿವಯೋಗಮಾರ್ಗ ಪ್ರತಿಪಾದಕವಾದ ಆ ಈ ಶಾಸ್ತ್ರವು ಕಾಮಿಕಾದಿ ವಾತುಳಾಂತಮಾದ ಇಪ್ಪತ್ತೆಂಟುದಿವ್ಯಾಗಮ ಸಾರಂಗಳಿಗೆ ಶ್ರೇಷ್ಠವಾದಂಥಾದು. ನಾಲ್ಕುವೇದ ಮೂವತ್ತೆರಡುಉಪನಿಷತ್ತುಗಳ ಸರ್ವಸ್ವವಾದಂಥಾದು. ಜ್ಞಾನಕ್ರಿಯಾ ಪ್ರಕಾಶವಾದಂಥಾದು. ಪರಶಿವಾದ್ವೈತ ಪ್ರಕಾಶವಾದಂಥಾದಾಗಿ ವೀರಶೈವರಿಂದ ಅಂಗೀಕರಿ

ಸಲ್ಲತಕ್ಕದು. ಸ್ವ ಪರೀಕ್ಷಿಸಲ್ಪಟ್ಟ ಶಿಷ್ಯರಿಗೆ ಕೊಡಲು ಯೋಗ್ಯವಾದುದಾದುದು. ಅನಧಿಕಾರಿಗಳಿಗೆ ಒಂದಿಷ್ಟೂ ಕೊಡಲ್ತಕ್ಕದಲ್ಲದೆಂಬುದರ್ಥಂ ॥೮೫॥

ಏತಚ್ಛ್ರವಣಮಾತ್ರೇಣ ಸರ್ವೇಷಾಂ ಪಾಪಸಂಕ್ಷಯಃ
ಅವತೀರ್ಣಂ ಮಯಾ ಭೂಮೌ ಶಾಸ್ತ್ರಸ್ಯಾಸ್ಯ ಪ್ರವೃತ್ತಯೇ ॥

ಪ್ರವರ್ತಯ ಶಿವಾದ್ವೈತಂ ತ್ವಮಪಿ ಜ್ಞಾನಮೀದೃಶಮ್

ಈ ಶಾಸ್ತ್ರವು ವರ್ಣಮಾತ್ರದಿಂ ಸಕಲರಿಗೂ ಸಕಲಪಾಪಕ್ಷಯವೂ ಈ ಶಾಸ್ತ್ರ ಪ್ರಚಾರಾರ್ಥವಾಗಿಯೆ ಶಿವನ ಅಪ್ಪಣೆಯತ್ತಣಿಂ ಎನ್ನಿಂದ ಭೂಮಿಯಲ್ಲಿ ಅವತರಿಸಲ್ಪಟ್ಟಿತ್ತು ನೀನು ಈ ಪ್ರಕಾರವಾದ ಶಿವಾದ್ವೈತಜ್ಞಾನಶಾಸ್ತ್ರಮಂ ಪಸರಿಸು ಎಂಬುದರ್ಥಂ ॥೮೬॥

ಇತಿ ಶ್ರೀ ವೀರಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ಶ್ರೀ ವೀರಶೈವ ಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ಶಿವೈಕ್ಯಸ್ಥಲವಿಷಯ ನವವಿಧಲಿಂಗ ಪ್ರಸಂಗೋನಾಮ ವಿಂಶತೀಯಃ ಪರಿಚ್ಛೇದಃ.

# ಏಕವಿಂಶತೀಯಪರಿಚ್ಛೇದ

## ವಿಭೀಷಣಾಭೀಷ್ಟದಾನಂ

ಬಳಿಕ ರೇವಣಸಿದ್ಧೇಶ್ವರಂ ಕುಂಭಜಂಗೋಸ್ಕರ ಪಿಂಡಾದಿವೃತ್ತಿಜ್ಞಾನ ಶೂನ್ಯಾಂತೋಪದಿಷ್ಟ ವೀರಶೈವಸಂಗ್ರಹಮಂ ಶಿವಯೋಗಿ ಎಂಬ ಶಿವಾಚಾರ್ಯಂ ಸ್ವಶಿಷ್ಯ ಪ್ರಶಿಷ್ಯರಲ್ಲಿ ಪ್ರಖ್ಯಾತಮಂ ಮಾಡಿ ತರುವಾಯದಲ್ಲಿ ರೇಣುಕ ವಿಭೀಷಣ ಸಂವಾದಮಂ ರೇವಣಸಿದ್ಧೇಶ್ವರೈಕ್ಯಮನ್ನೂ ಐವತ್ತೈದುಸೂತ್ರಂಗಳಿಂ ಸಂಗ್ರಹಿಸಿ ಪೇಳುತಿರ್ದಪಂ.

ಇತ್ಯುಕ್ತ್ವಾ ಪಶ್ಯತಸ್ತಸ್ಯ ಪುರಸ್ತಾದೇವ ರೇಣುಕಃ
ಅಂತರ್ದಧೇ ಮಹಾದೇವಂ ಚಿಂತಯನ್ನಂತರಾತ್ಮನಾ ॥

ಈ ಶಾಸ್ತ್ರವಿಚಾರವ ಮಾಡೆಂದು ನುಡಿದು ಶ್ರೀ ರೇಣುಕಾಚಾರ್ಯಂ ತನ್ನಂತ ರಂಗದಲ್ಲಿ ಶಿವನಂ ಧ್ಯಾನಿಸುತ್ತಾ ಅಗಸ್ತ್ಯನ ಮುಂದುಗಡೆಯಲ್ಲಿಯೆ ಅದೃಶ್ಯನಾದನೆಂಬುದರ್ಥಂ ॥೧॥

ಅಂತರ್ಹಿತೇ ತದಾ ತಸ್ಮಿನ್ಮುನಿರಾಶ್ಚರ್ಯಸಂಕುಲಃ
ಸಚ್ಛಾಸ್ತ್ರಶ್ರವಣೋದ್ಭೂತ್ವಾ ಸಮವರ್ತತಸಂಯಮೀ ॥

ಆ ರೇವಣಸಿದ್ಧೇಶ್ವರನದೃಶ್ಯವಾಗಲಾಗಿ ಆಗ ಸಚ್ಛಾಸ್ತ್ರವಾದ ವೀರಶೈವಸಿದ್ಧಾಂತದಲ್ಲಿ ಪ್ರೀತಿಯುಳ್ಳ ಜಿತೇಂದ್ರಿಯನಾದ ಯಮನಿಯಮಾದ್ಯಷ್ಟಾಂಗಯೋಗ ಸಂಪನ್ನನಾದ ಅಗಸ್ತ್ಯ ಮುನೀಶ್ವರನಾಶ್ಚರ್ಯಯುಕ್ತನಾಗಿ ಪರಮಾನಂದದೊಳಿರ್ದನೆಂಬುದರ್ಥಂ ॥೨॥ ಬಳಿಕೀ ಶಾಸ್ತ್ರಶ್ರವಣಕ್ಕೆ ಫಲಮಂ ಪೇಳುತಿರ್ದಪಂ.

ಯ ಇದಂ ಶಿವಸಿದ್ಧಾಂತಂ ವೀರಶೈವಮತಂ ಪರಮ್
ಶೃಣೋತಿ ಶುದ್ಧಮನಸಾ ಸ ಯಾತಿ ಪರಮಾಂ ಗತಿಮ್ ॥

ಯಾವ ಪುರುಷನು ಅಂಗಲಿಂಗ ಷಟ್‌ಸ್ಥಲ ರೂಪನಾಗಿ ವೀರಶೈವಧರ್ಮ ನಿರ್ಣಯಕ್ಕೆ ಸಮ್ಮತವಾದ ಸರ್ವೋತ್ಕೃಷ್ಟವಾದ ಶ್ರುತಿಸಮ್ಮತವಾದ ಶಿವಸಿದ್ಧಾಂತಮಂ ನಿರ್ಮಲಚಿತ್ತದಿಂ ಕೇಳುತ್ತಿಹನು ಆತಂ ಪರಮುಕ್ತಿಯನೈದುವನೆಂಬುದರ್ಥಂ ॥೩॥ ಬಳಿಕ ಅದೃಶ್ಯನಾದ ಶ್ರೀ ರೇಣುಕಾಚಾರ್ಯಂ ಲಂಕಾಪುರಿಯಂ ಪ್ರವೇಶಿಸಿದನೆಂಬುದರ್ಥವ ನುಡಿವುತಿರ್ದಪಂ.

ಸ್ವಚ್ಛಂದಾಚಾರರಸಿಕಃ ಸ್ವೇಚ್ಛಾನಿರ್ಮಿತವಿಗ್ರಹಃ
ಆಸಸಾದ ಪುರೀಂ ಲಂಕಾಂ ರೇಣುಕೋ ಗಣನಾಯಕಃ ॥

ನಿರ್ಮಲವಾದ ಸ್ವೈರಾಚರದಲ್ಲಿ ಪ್ರೀತಿಯುಳ್ಳ ಸ್ವೇಚ್ಛೆಯಿಂದ ಅಂಗೀಕರಿಸಲ್ಪಟ್ಟ ಶರೀರವುಳ್ಳ ರೇಣುಕಗಣೇಶ್ವರಂ ಲಂಕಾಪಟ್ಟಣವನಾಶ್ರಯಿಸಿದನೆಂಬುದರ್ಥಂ ॥೪॥

ತಮಾಗತಂ ಮಹಾಭಾಗಂ ಸರ್ವಾಗಮವಿಶಾರದಮ್
ವಿಭೀಷಣಃ ಸಮಾಲೋಕ್ಯ ಗೇಹಂ ಪ್ರಾವೇಶಯನ್ನಿಜಮ್ ॥

ಬಳಿಕ ಶ್ರೇಷ್ಠನಾದ ಸರ್ವಾಗಮಪ್ರವೀಣನಾದ ಆ ರೇಣುಕಾಚಾರ್ಯನಂ ವಿಭೀಷಣಂ ಕಂಡು ತನ್ನ ಅರಮನೆಗೆ ಕರಕೊಂಡು ಹೋದನೆಂಬುದರ್ಥಂ ॥೫॥

ಭದ್ರಾಸನೇ ನಿಜೇ ರಮ್ಯೇ ನಿವೇಶ್ಯ ಗಣನಾಯಕಮ್
ಅರ್ಘ್ಯಪಾದ್ಯಾದಿಭಿಸ್ಸರ್ವೈರುಪಚಾರೈರಪೂಜಯತ್॥

ಬಿಜಮಾಡಿಸಿಕೊಂಡು ಹೋದ ಶ್ರೀ ರೇಣುಕಗಣೇಶ್ವರನಂ ವಿಭೀಷಣಂ ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾಚಮನ ಮುಂತಾದ ಸಕಲೋಪಚಾರಗಳಿಂದಲೂ ಪೂಜಿಸಿದನೆಂಬುದರ್ಥಂ ॥೬॥ ಬಳಿಕ ವಿಭೀಷಣಂ ನುಡಿವುತಿರ್ದಪಂ.

ಪೂಜಿತೇನ ಪ್ರಸನ್ನೇನ ರೇಣುಕೇನ ನಿರೂಪಿತಃ
ನಿಷಸಾದ ತದಭ್ಯಾಸೇ ಸ ನಿಜಾಸನಮಾಶ್ರಿತಃ ॥

ಆ ವಿಭೀಷಣನೂ ಪೂಜೆಯಿಂದ ಪ್ರಸನ್ನನಾದ ರೇಣುಕಾಚಾರ್ಯನ ಅಪ್ಪಣೆ ಯಿಂದಾತನ ಸಮೀಪದಲ್ಲಿ ತನ್ನದಾದ ಮತ್ತೊಂದಾಸನವನಾಶ್ರಯಿಸಿ ಕುಳಿತನೆಂಬುದರ್ಥಂ ॥೭॥ ಬಳಿಕೀ ವಿಭೀಷಣಂ ನುಡಿವುತಿರ್ದಪಂ.

ಆಬಭಾಷೇ ಗಣೇಂದ್ರಂ ತಂ ಕೃತಾಂಜಲಿ ವಿಭೀಷಣಃ
ಮಾನುಷಾಕಾರಸಂಪನ್ನಂ ಸಾಕ್ಷಾಚ್ಛಿವಮಿವಾಪರಮ್ ॥

ಮನುಷ್ಯಾಧಿಕಾರವುಳ್ಳ ಎರಡನೆಯ ಶಿವನಂತಿರುವ ಆ ರೇಣುಕಗಣೇಶ್ವರನಂ ಮುಗಿಯಲ್ಪಟ್ಟ ಕರಗಳುಳ್ಳದು ಹೇಗಹದು ಹಾಗೆ ಬಿನ್ನಹವಾಕ್ಯಂಗಳಂ ವಿಭೀಷಣಂ ಪ್ರಯೋಗಿಸಿದನೆಂಬುದರ್ಥಂ ॥೮॥

ರೇಣುಕ ತ್ವಾಂ ಗಣಾಧೀಶ ಶಿವಜ್ಞಾನಪರಾಯಣ
ಅವತೀರ್ಣಂ ಮಹೀಮೇನಾಮಿತಿ ಸಮ್ಯಕ್ ಶ್ರುತಂ ಮಯಾ ॥

ಅಹೋ ಶಿವಜ್ಞಾನನಿಷ್ಠನಾದ ಶಿವಗಣಾಧೀಶ್ವರನೆ ಈ ಭೂಲೋಕವ ಕುರಿತು ಅವತರಿಸಿದ ನಿನ್ನಂ ರೇಣುಕನೆಂದು ಚೆನ್ನಾಗಿ ಎನ್ನಿಂ ಕೇಳಲ್ಪಟ್ಟಿತ್ತೆಂಬುದರ್ಥಂ ॥೯॥

ಮದ್ಭಾಗ್ಯಗೌರವಾದದ್ಯ ಸಮಾಯಾಸ್ತ್ವಂಪುರೀಮಿಮಾಮ್
ಕಥಂ ಭಾಗ್ಯವಿಹೀನಾನಾಂ ಸುಲಭಾಸ್ತ್ವಾದೃಶಾಃ ॥

ಭಾಗ್ಯವನ್ನುಳ್ಳಹದಿಂದೀ ಹೊತ್ತೀ ನನ್ನ ಪಟ್ಟಣವ ಕುರಿತು ನೀ ಬಂದೆ ಭಾಗ್ಯ ಹೀನರಿಗೆ ನಿನ್ನಂಥವರೆಲ್ಲಿ ದೊರೆಕಿಯಾರೆಂಬುದರ್ಥಂ ॥೧೦॥ ಬಳಿಕ ರೇಣುಕಾಚಾರ್ಯನ ಆಗಮನದಿಂದ ತನಗೆ ಮಹತ್ವಮಂ ಪೇಳುತಿರ್ದಪಂ.

ಮತ್ಸಮೋ ನಾಸ್ತಿ ಲೋಕೇಷು ಭಾಗ್ಯಾತಿಶಯವತ್ತಯಾ
ಯಸ್ಯ ಗೇಹಂ ಸ್ವಯಂ ಪ್ರಾಪ್ತೋ ಭವಾನ್ ಸಾಕ್ಷಾನ್ಮಹೇಶ್ವರಃ ॥

ಅಹೋ ರೇಣುಕಸಿದ್ಧನೆ ನೀನು ಭೂಲೋಕವನೈದಿದ ಪ್ರತ್ಯಕ್ಷಿಯೂ ಮಹೇಶ್ವರನೂ ನೀನೆ ಯಾವ ನನ್ನ ರಾಜಾಲಯಕ್ಕೆ ಬಂದವನಾದೆ ಅದು ಕಾರಣದಿಂ ಲೋಕಂಗಳಲ್ಲಿ

ಭಾಗ್ಯಾತಿಶಯವುಳ್ಳವನಾಹತನದಿಂ ಎನಗೆ ಸಮಾನವಾದವನೊಬ್ಬನೂ ಇಲ್ಲವೆಂಬುದರ್ಥಂ ॥೧೧॥ ಬಳಿಕಿಷ್ಟು ಮಾತ್ರವೇ ಅಲ್ಲವೆಂದು ನುಡಿವುತಿರ್ದಪಂ.

ಕೃತಾರ್ಥಾ ಮೇ ಪುರೀ ಹ್ಯೇಷಾ ಕೃತಾರ್ಥೋ ರಾಕ್ಷಸಾನ್ವಯಃ
ಜೀವಿತಂ ಚ ಕೃತಾರ್ಥಂ ಮೇ ಯಸ್ಯ ತ್ವಂ ದೃಷ್ಟಿಗೋಚರಃ ॥

ಅಹೋ ರೇಣುಕಾಚಾರ್ಯನೆ ನೀನು ಯಾವನಾನೊಬ್ಬ ನನಗೆ ದೃಷ್ಟಿಗೋಚರ ನಾದೆಯೊ ಆ ಕಾರಣದಿಂ ನನ್ನೀ ಲಂಕಾಪುರಿಯೂ ಕೃತಾರ್ಥವಾದುದಾಯಿತು. ನನ್ನ ರಾಕ್ಷಸರ ಪರಂಪರೆಯೂ ಕೃತಾರ್ಥವಾಯಿತು. ನನ್ನ ಜೀವನವು ಕೃತಾರ್ಥವಾಯಿ ತೆಂಬುದರ್ಥಂ ॥೧೨॥

ಇತಿ ಬ್ರುವಾಣಂ ಕಲ್ಯಾಣಂ ರಾಕ್ಷಸೇಂದ್ರಂ ಗಣೇಶ್ವರಃ
ಬಭಾಷೇ ಸಸ್ಮಿತೋ ವಾಣೀಂ ವಿಶ್ವೋಲ್ಲಾಸಕರೀಂ ಶುಭಾಮ್ ॥

ಈ ಪ್ರಕಾರದಿಂ ಬಿನ್ನೈಸುತಿರ್ದ ರಾಕ್ಷಸೇಶ್ವರನಾದ ಮಂಗಲಸ್ವರೂಪನಾದ ವಿಭೀಷಣನಂ ಮುಗುಳುನಗೆಯೊಡನೆ ಕೂಡಿದ ಶ್ರೀ ರೇಣುಕಗಣೇಶ್ವರಂ ಸಕಲಲೋಕಕ್ಕೂ ಆನಂದಕರವಾದ ವಾಕ್ಯಮಂ ನುಡಿದನೆಂಬುದರ್ಥಂ ॥೧೩॥ ಬಳಿಕಾ ಪ್ರಕಾರವಾದ ನಾಲ್ಕು ಸೂತ್ರಂಗಳಿಂ ಪೇಳುತಿರ್ದಪಂ.

ವಿಭೀಷಣ ಮಹಾಭಾಗ ಜಾನೇ ತ್ವಾಂ ಧರ್ಮಕೋವಿದಮ್
ತ್ವಾಂ ವಿನಾ ಕಸ್ಯ ಲೋಕೇಷು ಜಾಯತೇ ಭಕ್ತಿರೀದೃಶೀ ॥

ಅಹೋ ಭಾಗ್ಯಪುರುಷನಾದ ವಿಭೀಷಣನೆ ನಿನ್ನ ಧರ್ಮಶಾಸ್ತ್ರಗಳಲ್ಲಿ ಕುಶಲನಾದವ ನಾಗಿ ಬಲ್ಲೆನು. ಜನರುಗಳಲ್ಲಿ ನಿನ್ನ ಹೊರತಾಗಿ ಯಾರಿಗಿಂಥಾ ಭಕ್ತಿಯುಂಟಾದೀತು. ಆಗದೆಂಬುದರ್ಥಂ ॥೧೪॥

ಸಮಸ್ತಶಾಸ್ತ್ರಸಾರಜ್ಞಂ ಸರ್ವಧರ್ಮಪರಾಯಣಮ್
ಆಧ್ಯಾತ್ಮವಿದ್ಯಾನಿರತಮಾಹುಸ್ತ್ವಾಂ ರಾಕ್ಷಸೇಶ್ವರ ॥

ಅಹೋ ರಾಕ್ಷಸರಿಗೆ ಅಧಿಪತಿಯಾದ ವಿಭೀಷಣನೆ ನೀನು ಸಕಲ ನಿಗಮಾಗಮಾದಿ ಶಾಸ್ತ್ರಸಾರವ ತಿಳಿದವನಾಗಿ ಸಕಲ ಶಿವಧರ್ಮನಿಷ್ಠನಾಗಿ ಶಿವಾದ್ವೈತಜ್ಞಾನಯೋಗ ರೂಪವಾದ ಅಧ್ಯಾತ್ಮವಿದ್ಯೆಯಲ್ಲಿ ತತ್ಪರನಾಗಿ ಪೇಳುವರೆಂಬುದರ್ಥಂ ॥೧೫॥ ಆ ಕಾರಣದತ್ತಣಿಂ

ತ್ವದೀಯಧರ್ಮಸಂಪತ್ತಿಂ ಶ್ರುತ್ವಾಹಂ ವಿಸ್ಮಿತಾಶಯಃ
ವ್ರಜನ್ಕೈಲಾಸಮಚಲಂ ತ್ವದಂತಿಕಮುಪಾಗತಃ ॥

ಸಂತುಷ್ಟನಾದ ನಾನು ನಿನ್ನ ಧರ್ಮಸಂಪತ್ತಿಯ ಕೇಳಿ ಆಶ್ಚರ್ಯಪಟ್ಟು ನಿನ್ನ ನೋಡಬೇಕೆಂಬ ಬಯಕೆಯಿಂ ನಿನ್ನ ಸಮೀಪಕ್ಕೆ ಬಂದೆನೆಂಬುದರ್ಥಂ ॥೧೬॥

ಪ್ರೀತೋಽಸ್ಮಿ ತವ ಚಾರಿತ್ರೈಃ ಶೋಭನೈರ್ಲೋಕವಿಶ್ರುತೈಃ
ದಾಸ್ಯಾಮಿ ತೇ ವರಂ ಸಾಕ್ಷಾತ್ಪ್ರಾರ್ಥಯಸ್ವ ಯಥೇಪ್ಸಿತಮ್ ॥

ಮಂಗಲವಾದ ಲೋಕಪ್ರಸಿದ್ಧವಾದ ನಿನ್ನ ಚರಿತ್ರಗಳಿಂದ ನಾನು ಸಂತುಷ್ಟನಾದೆನು. ನಿನಗೆ ಬೇಕೆಂಬ ವರ ಬೇಡು ಪ್ರತ್ಯಕ್ಷವಾಗಿ ಕೊಟ್ಟೇನೆಂಬುದರ್ಥಂ ॥೧೭॥

ಇತಿ ಪ್ರಸಾದಸುಮುಖೇ ಭಾಷಮಾಣೇ ಗಣೇಶ್ವರೇ
ಪ್ರಣಮ್ಯ ಪರಯಾ ಪ್ರೀತ್ಯಾ ವ್ಯಾಜಹಾರ ವಿಭೀಷಣಃ ॥

ಹೀಗೆಂದು ಪ್ರಸಾದದಲ್ಲಿ ಸುಮುಖನಾದ ರೇಣುಕಗಣೇಶ್ವರಂ ನಿರೂಪಿಸಲಾಗಿ ವಿಭೀಷಣಂ ಪರಮಭಕ್ತಿಯಿಂ ನಮಸ್ಕರಿಸಿ ಬಿನ್ನಹವಾಕ್ಯಮಂ ಪ್ರಯೋಗಿಸುತಿರ್ದ ನೆಂಬುದರ್ಥಂ ॥೧೮॥ ಬಳಿಕಾ ಪ್ರಕಾರವನಾರುಸೂತ್ರಂಗಳಿಂ ಪ್ರತಿಪಾದಿಸಿ ತನಗೆ ರಾವಣಾಸುರಂ ಪೇಳಿದ ಅಭಿಪ್ರಾಯವನೆಂಟುಸೂತ್ರಂಗಳಿಂ ಸೂಚಿಸುತಿರ್ದಪಂ.

ಆಗಮಾನುಗ್ರಹಾದೇವ ಭವತಃ ಶಿವಯೋಗಿನಃ
ದುರ್ಲಭಾಸ್ಸರ್ವಲೋಕಾನಾಂ ಸಮುಪದ್ಯಂತ ಸಂಪದಃ ॥

ಭೋ ಗಣೇಶ್ವರನೆ ಶಿವಯೋಗಿಯಾದ ನಿನ್ನ ಆಗಮನರೂಪವಾದ ಅನುಗ್ರಹ ದಿಂದಲೆ ಸರ್ವಜನರಿಗೂ ದುರ್ಲಭವಾದ ಸಂಪತ್ತುಗಳು ಪ್ರಾಪ್ತವಾದವೆಂಬುದರ್ಥಂ॥೧೯॥

ತಥಾಪಿ ಪ್ರಾರ್ಥನೀಯಂ ಮೇ ಕಿಂಚಿದಸ್ತಿ ಗಣೇಶ್ವರ
ಸುಕೃತೇ ಪರಿಪಕ್ವೇ ಹಿ ಸ್ವಯಂ ಸಿದ್ಧ್ಯತಿ ವಾಂಛಿತಂ ॥

ಅಹೋ ಗಣೇಶ್ವರನೆ ಹಾಗಾದರೂ ನಿನ್ನಂ ಪ್ರಾರ್ಥಿಸಲ್ತಕ್ಕದು ಒಂದಿಷ್ಟು ಉಂಟು. ಪುಣ್ಯವು ಪರಿಪಾಕವಾಗುತ್ತಿರಲಾಗಿ ಇಷ್ಟಾರ್ಥಂ ತಾನೆ ಸಿದ್ಧಿಸೂದೆಂಬುದರ್ಥಂ ॥೨೦॥

ರಾವಣೋ ಹಿ ಮಮ ಭ್ರಾತಾ ಮಾಹೇಶ್ವರಶಿಖಾಮಣಿಃ
ಅದೃಷ್ಟಶತ್ರುಸಂಬಾಧಂ ಶಶಾಸ ಹಿ ಜಗತ್ತ್ರಯಮ್ ॥

ಶಿವಭಕ್ತರಿಗೆ ಶ್ರೇಷ್ಠನಾದ ರಾವಣೇಶ್ವರನು ತನ್ನ ಅಣ್ಣನು ಮೂರುಲೋಕವನೂ ಕಾಣಲ್ಪಡದೆ ಇದ್ದ ಶತ್ರುಭಾಧೆಯುಳ್ಳಂಥಾದು ಹೇಗಹದು ಹಾಗೆ ಪಾಲಿಸಿದನೆಂಬುದರ್ಥಂ. ॥೨೧॥

ಯಸ್ಯ ಪ್ರತಾಪಮತುಲಂ ಸೋಢುಮಕ್ಷಮಶಕ್ತಯಃ
ಇಂದ್ರಾದಯಸ್ಸುರಾಸ್ಸರ್ವೇ ರಾಜ್ಯಲಕ್ಷ್ಮ್ಯಾ ವಿಯೋಜಿತಾಃ ॥

ಯಾವನಾನೊಬ್ಬ ರಾವಣೇಶ್ವರನ ಪರಾಕ್ರಮವ ಸೈರಿಸುವಲ್ಲಿ ಶಕ್ತಿಯಿಲ್ಲದವರಾಗಿ ಚಂದ್ರ ಮೊದಲಾದವರೂ ರಾಜ್ಯಲಕ್ಷ್ಮಿಯಿಂ ಬಿಡಲ್ಪಟ್ಟವರಾದರೆಂಬುದರ್ಥಂ ॥೨೨॥

ಸ ತು ಕಾಲವಶೇನೈವ ಸ್ವಚಾರಿತ್ರವಿಪರ್ಯಯಾತ್
ರಣೇ ವಿಷ್ಣ್ವವತಾರೇಣ ರಾಮೇಣ ನಿಹತೋ೽ಭವತ್ ॥

ಆ ರಾವಣೇಶ್ವರನು ಇತ್ತಾದಡೆ ಕಾಲವಶದಿಂ ತನ್ನ ಚಾರಿತ್ರ ವಿಪರೀತವಾಗಿ ಇದ್ದಲ್ಲಿ ನಾರಾಯಣನ ಅವತಾರವಾದ ರಾಮನಿಂ ಹತವಾದನೆಂಬುದರ್ಥಂ ॥೨೩॥

ಸ ತು ರಾಮಶರಾವಿದ್ಧಃ ಕಂಠಸ್ಖಲಿತಜೀವಿತಃ
ಅವಶಿಷ್ಟಂ ಸಮಾಲೋಕ್ಯ ಮಾಮವಾದೀತ್ಸುದುಃಖಿತಃ ॥

ಆ ರಾವಣಂ ರಾಮಬಾಣದಿಂ ಗಾಯವಡದು ಕೊರಳಲ್ಲಿ ಗುಟುಗುಟ್ಟುತ್ತಿದ್ದ ಜೀವವುಳ್ಳವನಾಗಿ ಉಳಿದಲ್ಲಿ ಸ್ಥಾಪನೆಯ ಕಂಡು ಅತ್ಯಂತ ದುಃಖಿತನಾಗಿ ತನ್ನ ಕುರಿತು ನುಡಿದನೆಂಬುದರ್ಥಂ ॥೨೪॥ ಬಳಿಕ ರಾವಣೋಕ್ತ ಪ್ರಕಾರವನು ಪ್ರತಿಪಾದಿಸುತಿರ್ದಪಂ.

ವಿಭೀಷಣ ವಿಶೇಷಜ್ಞ ಮಹಾಬುದ್ಧೇ ಸುಧಾರ್ಮಿಕ
ಅವಶಿಷ್ಟೋಽಸಿ ವಂಶಸ್ಯ ರಕ್ಷಸಾಂ ಭಾಗ್ಯಗೌರವಾತ್॥

ಅಹೋ ಮಹಾಬುದ್ಧಿಶಾಲಿಯಾಗಿ ವಿಶೇಷವ ತಿಳಿದು ಧಾರ್ಮಿಕನಾದ ವಿಭೀಷಣನೆ ರಾಕ್ಷಸರ ಭಾಗ್ಯದ ಮಹತ್ತ್ವದಿಂ ವಂಶಕ್ಕೆ ನೀನೊಬ್ಬನುಳಿದೆ ಎಂಬುದರ್ಥಂ ॥೨೫॥

ವಯಮಜ್ಞಾನಸಂಪನ್ನಾ ಮಹತ್ಸು ದ್ರೋಹಕಾರಿಣಃ
ಈದೃಶೀಂ ತು ಗತಿಂ ಪ್ರಾಪ್ತಾಃ ದುಸ್ತರಾ ಹಿ ವಿಧಿಸ್ಥಿತಿಃ ॥

ನಾನು ಅಜ್ಞಾನವುಳ್ಳವನಾಗಿ ಮಹಾಪುರುಷರ ವಿಷಯದಲ್ಲಿ ದ್ರೋಹವ ಮಾಡಿದವನಾಗಿ ಇಂಥಾ ಗತಿಯ ಪಡೆದೆವು. ಹಾಗಹುದಲಾ ದೈವಾಧೀನವೃತ್ತಿಯು ಮೀರಲು ಶಕ್ಯವಲ್ಲದುದಲ್ಲವಲ್ಲ ಎಂಬುದರ್ಥಂ ॥೨೬॥

ನವಕಂ ಲಿಂಗಕೋಟೀನಾಂ ಪ್ರತಿಷ್ಠಾಪ್ಯಮಿಹಸ್ಥಲೇ
ಇತಿ ಸಂಕಲ್ಪಿತಂ ಪೂರ್ವಂ ಮಯಾ ತದವಶಿಷ್ಯತೇ ॥

ಈ ಲಂಕಾಪಟ್ಟಣಸ್ಥಲದಲ್ಲಿ ನವಕೋಟಿಲಿಂಗವ ಪ್ರತಿಷ್ಠೆಯ ಮಾಡಬೇಕೆಂದು ಪೂರ್ವದಲ್ಲಿ ಎನ್ನಿಂ ಸಂಕಲ್ಪಿಸಲ್ಪಟ್ಟಿತ್ತು, ಅದರೊಳಗೆ ಒಂದಿಷ್ಟು ಉಳಿದುದೆ ಎಂಬುದರ್ಥಂ ॥೨೭॥ ಬಳಿಕೆಷ್ಟು ಉಳಿದಿದೆ ಎಂಬಲ್ಲಿ ಪೇಳುತಿರ್ದಪಂ.

ಕೋಟಿಷಟ್ಕಂ ತು ಲಿಂಗಾನಾಂ ಮಯಾ ಸಾಧು ಪ್ರತಿಷ್ಠಿತಮ್
ಕೋಟಿತ್ರಯಂ ತು ಲಿಂಗಾನಾಂ ಸ್ಥಾಪನೀಯಮತಸ್ತ್ವಯಾ ॥

ಆರುಕೋಟಿ ಲಿಂಗವು ವಿಧ್ಯುಕ್ತ ಪ್ರಕಾರದಿಂ ಎನ್ನಿಂ ಸ್ಥಾಪಿಸಲ್ಪಟ್ಟಿತ್ತು. ಆ ಸಂಕಲ್ಪ ಪೂರಣಾರ್ಥವಾಗಿ ಉಳಿದ ಮೂರುಕೋಟಿ ಲಿಂಗವು ನಿನ್ನಿಂದ ಸ್ಥಾಪಿಸಲು ಯೋಗ್ಯ ಮೆಂಬುದರ್ಥಂ ॥೨೮॥

ಇತಿ ತಸ್ಯ ವಚಃ ಶ್ರುತ್ವಾ ದೀನಬುದ್ಧೇರ್ಮರಿಷ್ಯತಃ
ತಥಾ ಸಾಧು ಕರೋಮಿತಿ ಪ್ರತಿಜ್ಞಾತಂ ಮಯಾ ತದಾ ॥

ಹೀಗೆಂಬ ದೀನಬುದ್ಧಿಯುಳ್ಳವನಾಗಿ ಮರಣವನೈದುವ ಆ ರಾವಣೇಶ್ವರನ ವಾಕ್ಯವ ಕೇಳಿ ಒಳಿತು ಹಾಗೆ ಮಾಡೇನೆಂದು ಪ್ರತಿಜ್ಞೆಯ ಮಾಡಲ್ಪಟ್ಟಿತ್ತೆಂಬುದರ್ಥಂ ॥೨೯॥

ಯುಗಪಚ್ಛಿವಲಿಂಗಾನಾಂ ಕೋಟಿತ್ರಯಮನುತ್ತಮಮ್
ಪ್ರತಿಷ್ಠಾಪ್ಯಂ ಯಥಾಶಾಸ್ತ್ರಮಿತಿ ಮೇ ನಿಶ್ಚಯೋಽಭವತ್ ॥

ಒಂದೇ ಸಾರಿ ಶ್ರೇಷ್ಠವಾದ ಮೂರುಕೋಟಿ ಲಿಂಗವು ಶಾಸ್ತ್ರೋಕ್ತ ಪ್ರಕಾರದಿಂ ಪ್ರತಿಷ್ಠೆಯ ಮಾಡುವ ವಿಷಯದಲ್ಲಿ ನಿಶ್ಚಯವಾಯಿತೆಂಬುದರ್ಥಂ ॥೩೦॥

ಲಿಂಗಕೋಟಿತ್ರಯಸ್ಯೇಹ ಯುಗಪತ್ ಸ್ಥಾಪನಾವಿಧೌ
ಅವಿದನ್ನೇಕಮಾಚಾರ್ಯಮಹಮೇವಮವಸ್ಥಿತಃ ॥

ಈ ಲಂಕಾಪಟ್ಟಣದಲ್ಲಿ ಒಂದೇಕಾಲದಲ್ಲಿ ಮೂರುಕೋಟಿ ಲಿಂಗಪ್ರತಿಷ್ಠೆಯ ಮಾಡುವ ವಿಷಯದಲ್ಲಿ ಸಮರ್ಥನಾದ ಆಚಾರ್ಯನಂ ಕಾಣದೆ ಇದ್ದೇಯೆಂಬುದರ್ಥಂ ॥೩೧॥

ಶಿವಶಾಸ್ತ್ರ ವಿಶೇಷಜ್ಞಃ ಶಿವಜ್ಞಾನನಿಧಿರ್ಭವಾನ್
ಆಚಾರ್ಯಭಾವಮಾಸಾದ್ಯ ಮಮ ಪೂರಯ ವಾಂಛಿತಮ್ ॥

ಶಿವಶಾಸ್ತ್ರದಲ್ಲಿ ವಿಶೇಷವ ತಿಳಿದ ಭೋ ರೇವಣಸಿದ್ಧನೆ ನೀನು ಶಿವಜ್ಞಾನಕ್ಕೆ ಸಮುದ್ರನಾದವನು. ಆಚಾರ್ಯನಾಗಿ ಎನ್ನ ಅಭೀಷ್ಟಮಂ ಪೂರೈಸೂದೆಂಬುದರ್ಥಂ ॥೩೨॥ ಬಳಿಕ ರೇಣುಕಾಚಾರ್ಯನು ವಿಭೀಷಣನ ಇಷ್ಟಮಂ ಪೂರೈಸಿ ಅಂತರ್ಹಿತನಾದನೆಂದೈದು ಶ್ಲೋಕಂಗಳಿಂ ಪೇಳುತಿರ್ದಪಂ.

ತಸ್ಯೇತಿ ವಚನಂ ಶ್ರುತ್ವಾ ರಾಕ್ಷಸೇಂದ್ರಸ್ಯ ಧೀಮತಃ
ತಥೇತಿ ಪ್ರತಿಶುಶ್ರಾವ ಸರ್ವಜ್ಞೋ ಗಣನಾಯಕಃ ॥

ರಾಕ್ಷಸಶ್ರೇಷ್ಠನಾಗಿ ಸುಬುದ್ಧಿಯುಳ್ಳ ವಿಭೀಷಣನ ಹೀಗೆಂಬ ವಚನಮಂ ಕೇಳಿ ಹಾಗಾಗಲೆಂದು ಅಂಗೀಕರಿಸಿದನೆಂಬುದರ್ಥಂ ॥೩೩॥

ತತ್ರ ಸಂತುಷ್ಟಚಿತ್ತಸ್ಯ ಪೌಲಸ್ತ್ಯಸ್ಯೇಷ್ಟಸಿದ್ಧಯೇ
ಕೋಟಿತ್ರಯಂ ತು ಲಿಂಗಾನಾಂ ಯಥಾಶಾಸ್ತ್ರಂ ಯಥಾವಿಧಿ ॥

ತ್ರಿಕೋಟ್ಯಾಚಾರ್ಯರೂಪೇಣ ಸ್ಥಾಪಿತಂ ತೇನ ತತ್ಕ್ಷಣೇ

ಆ ಲಂಕಾಪಟ್ಟಣದಲ್ಲಿ ಸಂತುಷ್ಟನಾದ ವಿಭೀಷಣನ ಇಷ್ಟಸಿದ್ಧಿಗೋಸ್ಕರ ಶಾಸ್ತ್ರವಿದ್ದ ಹಾಗೆ ವಿಧಿಯ ಮೀರದೆ ಮೂರುಕೋಟಿ ಆಚಾರ್ಯರೂಪದಿಂದ ಮೂರುಕೋಟಿ ಲಿಂಗವು ಆ ಕ್ಷಣದಲ್ಲಿ ರೇವಣಸಿದ್ಧನಿಂ ಸ್ಥಾಪಿಸಲ್ಪಟ್ಟಿತ್ತೆಂಬುದರ್ಥಂ ॥೩೪॥

ತಾದೃಶಂ ತಸ್ಯ ಮಾಹಾತ್ಮ್ಯಂ ಸಮಾಲೋಕ್ಯ ವಿಭೀಷಣಃ
ಪ್ರಣನಾಮ ಮುಹುರ್ಭಕ್ತ್ಯಾ ಪಾದಯೋಸ್ತಸ್ಯ ವಿಸ್ಮಿತಃ ॥

ವಿಭೀಷಣನಾ ರೇವಣಸಿದ್ಧೇಶ್ವರನ ಆ ಪ್ರಕಾರವಾದ ಮಹತ್ವಮಂ ನೋಡಿ ವಿಸ್ಮಿತನಾಗಿ ಭಕ್ತಿಯಿಂ ಮರಳಿ ಮರಳಿ ಆತನ ಪಾದಗಳಿಗೆ ನಮಸ್ಕರಿಸಿದನೆಂಬುದರ್ಥಂ ॥೩೫॥

ಪ್ರಣತಂ ವಿನಯೋಪೇತಂ ಪ್ರಹೃಷ್ಟಂ ರಾಕ್ಷಸೇಶ್ವರಮ್
ಅನುಗೃಹ್ಯ ಸ್ವಮಾಹಾತ್ಮ್ಯಾದ್ರೇಣುಕೋಽಂತರ್ಹಿತೋ ಭವತ್ ॥

ಭಯಭಕ್ತಿಯಿಂದಾನತನಾಗಿ ಸಂತುಷ್ಟನಾದ ವಿಭೀಷಣನ ಕುರಿತು ಆಶೀರ್ವಾದವ ಮಾಡಿ ತನ್ನ ಮಹತ್ವದಿಂ ರೇಣುಕಾಚಾರ್ಯನದೃಶ್ಯವಾದನೆಂಬುದರ್ಥಂ ॥೩೬॥

ವಿಭೀಷಣೋऽಪಿ ಹೃಷ್ಟಾತ್ಮಾ ರೇಣುಕಸ್ಯ ಪ್ರಸಾದತಃ
ಶಿವಭಕ್ತಿರಸಾಸಕ್ತಃ ಸ್ಥಿರರಾಜ್ಯಮಪಾಲಯತ್ ॥

ರೇಣುಕಸಿದ್ಧನ ಪ್ರಸಾದದಿಂ ಸಂತುಷ್ಟನಾದ ವಿಭೀಷಣನು ಶಿವಭಕ್ತಿ ಎಂಬ ರಸದಲ್ಲಿ ಆಸಕ್ತನಾಗಿ ರಾಮಪ್ರಸಾದದಿಂದ ಸ್ಥಿರವಾದ ರಾಜ್ಯವ ರಕ್ಷಿಸುತಿರ್ದಪನೆಂಬುದರ್ಥಂ ॥೩೭॥ ಬಳಿಕೆಂಟು ದಿಕ್ಕುಗಳಲ್ಲಿಯೂ ಪ್ರಸಿದ್ಧನಾದ ರೇವಣಸಿದ್ಧೇಶ್ವರನ ಮಹತ್ವ ಸಂಗ್ರಹದಿಂದೆಂಟು ಸೂತ್ರಂಗಳಿಂ ಪ್ರತಿಪಾದಿಸುತಿರ್ದಪಂ.

ರೇಣುಕೋऽಪಿ ಮಹಾತೇಜಾಃ ಸಂಚರನ್ ಕ್ಷಿತಿಮಂಡಲೇ
ಪ್ರಚ್ಛನ್ನಶ್ಚ ಪ್ರಕಾಶಶ್ಚ ಪರಮಾದ್ವೈತಭಾವಿತಃ ॥

ಕಾಂಶ್ಚಿದ್ದೃಷ್ಟಿನಿಪಾತೇನ ಕರುಣಾರಸವರ್ಷಿಣಾ
ಅಪರಾನುಪದೇಶೇನ ಶಿವಾದ್ವೈತಾಭಿಮರ್ಶಿನಾ ॥

ಅನ್ಯಾಂಶ್ಚ ಸಹವಾಸೇನ ಸಮಸ್ತಮಲಹಾರಿಣಾ
ಕೃತಾರ್ಥಯನ್ ಜನಾನ್ಸರ್ವಾನ್ ಕೃತಿನಃ ಪಕ್ವಕರ್ಮಿಣಃ ॥

ದರ್ಶಯಿತ್ವಾ ನಿಜಾಧಿಕ್ಯಂ ಶಿವದರ್ಶನಲಾಲಸಃ
ಖಂಡಯಿತ್ವಾ ದುರಾಚಾರಾನ್ ಪಾಷಂಡಾನ್ ಭಿನ್ನದರ್ಶನಾನ್ ॥

ಯಂತ್ರಮಂತ್ರಕಲಾಸಿದ್ಧಾನ್ ವಿಮತಾನ್ ಸಿದ್ಧಮಂಡಲಾನ್
ವಿಜಿತ್ಯ ಸ್ವಪ್ರಭಾವೇನ ಸ್ಥಾಪಯಿತ್ವಾ ಶಿವಾಗಮಾನ್ ॥
ಆಜಗಾಮ ನಿಜಾವಾಸಂ ಕೊಲ್ಲಿಪಾಕ್ಯಭಿಧಂ ಪುರಮ್

ಮಹಾತೇಜಸ್ವಿಯಾದ ರೇಣುಕಾಚಾರ್ಯನೀ ಭೂಮಂಡಲದಲ್ಲಿ ಪರಮಾದ್ವೈತ ಬಾಧಿತನಾಗಿ ಏಳುನೂರು ಸಂವತ್ಸರ ಪರ್ಯಂತಂ ಗುಪ್ತನಾಗಿ ಮರಳಿ ತಾವತ್ಪರ್ಯಂತಂ ಪ್ರಕಟನಾಗಿ ಕೆಲವು ಜನರಂ ಕರುಣಾರಸಭರಿತವಾದ ಕಟಾಕ್ಷದಿಂ ಕೃತಾರ್ಥರಂ ಮಾಡುತ್ತಾ ಮತ್ತೆ ಕೆಲರಂ ಶಿವಾದ್ವೈತಪ್ರಕಾಶಕಮಾದ ಉಪದೇಶದಿಂ ಕೃತಾರ್ಥರಂ ಮಾಡುತ್ತಾ ಮತ್ತೆ ಕೆಲರಂ ಸಮಸ್ತಮಲಮಂ ಕೆಡಿಸುವ ಸಹವಾಸದಿಂ ಕೃತಾರ್ಥರಂ ಮಾಡುತ್ತಾ ಉಳಿದ ಜನರಂ ಸಕಲಕುಶಲರನ್ನಾಗಿಯೂ ಪರಿಪಕ್ವಮಲಮಾಯಾಪಾಶವುಳ್ಳವರನ್ನಾಗಿಯೂ ಕೃತಾರ್ಥರಂ ಮಾಡುತ್ತಾ ಶಿವಸಮಯಲಂಪಟನಾಗಿ ತನ್ನ ಚಿತ್ರವಿಚಿತ್ರವಾದ ನಿಜಮಹತ್ವಮಂ ತೋರಿಸಿ ವೈಷ್ಣವಾದ್ಯನ್ಯದರ್ಶನನಿಷ್ಠರಾದ ಪಾಷಂಡರಂ ಶಂಖಚಕ್ರಾದನ್ಯಲಾಂಛನರಾದ ದುರಾಚಾರಿಗಳಂ ಖಂಡಿಸಿ ಯಂತ್ರ ಮಂತ್ರ ಮೊದಲಾದ ಚತುಷ್ಷಷ್ಟಿಕಲಾ ಸಿದ್ಧಿಯುಳ್ಳ ಕಾಪಾಲಿಕಾದಿ ಪರಮಸಿದ್ಧ ಮಂಡಲಮಂ ಗೋರಕ್ಷಾದಿ ನವಕೋಟಿ ಸಿದ್ಧ ಸಮೂಹಮಂ ತನ್ನ ಸಾಮರ್ಥ್ಯದಿಂ ಜಯಿಸಿ ಕಾಮಿಕಾದಿ ನಿಜಸಿದ್ಧಾಂತಂಗಳಂ ಸ್ಥಾಪಿಸಿ ಕೊಲ್ಲಿಪಾಕವೆಂಬ ಪೆಸರನ್ನುಳ್ಳ ನಿಜಸ್ಥಾನವಾದ ಪುರವನ್ನೈದಿದನೆಂಬುದರ್ಥಂ ॥೪೩॥

ತತ್ರ ಸಂಭಾವಿತಃ ಸರ್ವೈರ್ಜನೈಃ ಶಿವಪರಾಯಣೈಃ
ಸೋಮನಾಥಾಭಿಧಾನಸ್ಯ ಶಿವಸ್ಯ ಪ್ರಾಪ ಮಂದಿರಮ್ ॥

ಆ ಕೊಲ್ಲಿಪಾಕಪುರದಲ್ಲಿ ಶಿವಪರಾಯಣರಾದ ಸಮಸ್ತಜನರಿಂ ಸತ್ಕರಿಸಲ್ಪಟ್ಟಾತನಾಗಿ ಸೋಮನಾಥನೆಂಬ ಪೆಸರುಳ್ಳ ಶಿವಲಿಂಗದ ರಾಜಾಲಯಮಂ ಪೊಕ್ಕನೆಂಬುದರ್ಥಂ ॥೪೪॥

ಪಶ್ಯತಾಂ ತತ್ರ ಸರ್ವೇಷಾಂ ಭಕ್ತಾನಾಂ ಶಿವಯೋಗಿನಾಮ್
ತನ್ವಾನೋ ವಿಸ್ಮಯಂ ಭಾವೈಸ್ತುಷ್ಟಾವ ಪರಮೇಶ್ವರಮ್ ॥

ಆ ಶಿವಾಲಯದಲ್ಲಿ ನೋಡುತ್ತಿದ್ದ ಸಮಸ್ತವಾದ ಶಿವಯೋಗಿಗಳಾದ ಭಕ್ತರಿಗೆ ತನ್ನ ನಿರ್ಮಲಗುಣಗಳಿಂದ ಆಶ್ಚರ್ಯಮಂ ವಿಸ್ತರಿಸುವಾತನಾಗಿ ಪರಮೇಶ್ವರನಂ ಸ್ತುತಿ ಮಾಡಿದನೆಂಬುದರ್ಥಂ ॥೪೫॥ ಬಳಿಕೀಳುಸೂತ್ರಂಗಳಿಂ ಸೋಮೇಶ್ವರನ ಸ್ತುತಿ ಮಾಡುತಿರ್ದಪಂ.

ದೇವದೇವ ಜಗನ್ನಾಥ ಜಗತ್ಕಾರಣಕಾರಣ
ಬ್ರಹ್ಮವಿಷ್ಣುಸುರಾಧೀಶವಂದ್ಯಮಾನಪದಾಂಬುಜ ॥

ಬ್ರಹ್ಮಾದಿ ದೇವರುಗಳಿಗೂ ದೇವನಾದವನೆ ಬ್ರಹ್ಮ ವಿಷ್ಣ್ವೇಂದ್ರರಿಂ ನಮಸ್ಕರಿಸುತ್ತಿದ್ದ ಪಾದಕಮಲಗಳುಳ್ಳವನೆ ಭುವನಂಗಳಿಗೆ ಕಾರಣವಾದ ಬಿಂದು ಮಾಯೆ ಮೊದಲಾದವಕ್ಕೆ ಕಾರಣನಾದವನೆ ಎಂಬುದರ್ಥಂ ॥೪೬॥

ಸಂಸಾರನಾಟಕಭ್ರಾಂತಿಕಲಾನಿರ್ವಹಣಪ್ರದ
ಸಮಸ್ತವೇದವೇದಾಂತಪರಿಬೋಧಿತವೈಭವ ॥

ಸಂಸಾರನಾಟಕಭ್ರಾಂತಿಕಲಾ ಜಯಪ್ರದನೆ ಸಕಲವಾದ ವೇದ ವೇದಾಂತಗಳಿಂ ತಿಳುಹಲ್ಪಟ್ಟ ಮಹೈಶ್ವರ್ಯವುಳ್ಳವನೆಂಬುದರ್ಥಂ ॥೪೭॥

ಸಂಸಾರವೈದ್ಯ ಸರ್ವಜ್ಞ ಸರ್ವಶಕ್ತಿ ನಿರಂಕುಶ
ಸಚ್ಚಿದಾನಂದ ಸರ್ವಸ್ಥ ಪರಮಾಕಾಶವಿಗ್ರಹ ॥

ಆಕಾಶ ಶರೀರಂ ಬ್ರಹ್ಮ ಎಂಬ ಶ್ರುತಿಯಿಂ ಚಿದಾಕಾಶವೆ ಶರೀರವಾಗಿ ಉಳ್ಳವನೆ ಸಂಸಾರವೆಂಬ ರೋಗಕ್ಕೆ ವೈದ್ಯನಾದವನೆ ಸರ್ವಜ್ಞನಾದವನೆ ಸಕಲ ಶಕ್ತಿಯುಳ್ಳನಾದುದರಿಂ ತಡೆಯಿಲ್ಲದವನೆ ಸಚ್ಚಿದಾನಂದಗಳಿಗೆಡೆಯಾದವನೆ ಎಂಬುದರ್ಥಂ ॥೪೮॥

ಸಮಸ್ತಜಗದಾಧಾರ ಜ್ಯೋತಿರ್ಲಿಂಗವಿಜೃಂಭಣ
ಸದಾಶಿವಮುಖಾನೇಕದಿವ್ಯಮೂರ್ತಿಕಲಾಧರ ॥

ಜ್ವಲಲಿಂಗಾಯ ನಮಃ ಎಂಬ ಶ್ರುತಿಯಿಂ ಜ್ಯೋತಿರ್ಲಿಂಗಸ್ವರೂಪದಿಂದುಬ್ಬುವನೆ ಸಕಲ ಜಗತ್ತಿಗೂ ಆಧಾರವಾದವನೆ ಸಕಲ ನಿಷ್ಕಲರೂಪನಾದ ಸದಾಶಿವಾದ್ಯನೇಕ ಮೂರ್ತಿಕಲೆಯ ಧರಿಸಿದವನೆಂಬುದರ್ಥಂ ॥೪೯॥

ಗುಣತ್ರಯಪದಾತೀತ ಮಲತ್ರಯವಿನಾಶನ
ಜಗತ್ರಯವಿಲಾಸಾತ್ಮನ್ ಶ್ರುತಿತ್ರಯವಿಲೋಚನ ॥

ಸತ್ವರಜಸ್ತಮೋಗುಣಂಗಳಿಗೆ ಸ್ಥಾನವಾದ ಪ್ರಕೃತಿತತ್ತ್ವವ ಮೀರಿದವನೆ ಆಣವ ಕಾರ್ಮಿಕ ಮಾಯಿಕವೆಂಬ ಮಲತ್ರಯವ ಕೆಡಿಸುವವನೆ ಸ್ವರ್ಗ ಮರ್ತ್ಯ ಪಾತಾಳರೂಪವಾದ ಜಗತ್ತ್ರಯಂ ಸೃಷ್ಟ್ಯಾದಿಕೃತ್ಯ ಕ್ರೀಡಾವಿಲಾಸೋನ್ಮುಖನೆ ಋಗ್ಯಜುಸ್ಸಾಮಗಳೆಂಬ ಶ್ರುತಿತ್ರಯವೆ ನೇತ್ರವಾಗಿ ಉಳ್ಳವನೆ ಎಂಬುದರ್ಥಂ ॥೫೦॥

ಪಾಹಿ ಮಾಂ ಪರಮೇಶಾನ ಪಾಹಿ ಮಾಂ ಪಾರ್ವತೀಪತೇ
ತ್ವದಾಜ್ಞಯಾ ಮಯ್ಯೈ ತಾವತ್ಕಾಲಮಾತ್ರಂ ಮಹೀತಲೇ ॥

ಆಚಾರಿ ಭವದುಕ್ತಾನಾಮಾಗಮಾನಾಂ ಪ್ರಸಿದ್ಧಯೇ

ಅಹೋ ಪರಮೇಶ ನನ್ನಂ ರಕ್ಷಿಸು ಪಾರ್ವತೀವಲ್ಲಭನೆ ನನ್ನಂ ರಕ್ಷಿಸು. ನಿನ್ನ ಅಪ್ಪಣೆಯಿಂದಲೆ ಇಷ್ಟುಕಾಲಪರ್ಯಂತವಾಗಿ ಭೂಮಂಡಲದಲ್ಲಿ ನಿನ್ನಿಂದುಕ್ತವಾದ ಆಗಮಂಗಳ ಪ್ರಚಾರಕ್ಕೋಸ್ಕರ ನನ್ನಿಂ ಸಂಚರಿಸಲ್ಪಟ್ಟಿತ್ತೆಂಬುದರ್ಥಂ ॥೫೧॥

ಅತಃಪರಂ ಸ್ವರೂಪಂ ತೇ ಪ್ರಾಪ್ತುಕಾಮೋಽಸ್ಮಿ ಶಂಕರ
ಅಂತರಂ ದೇಹಿ ಮೇ ಕಿಂಚಿದನುಕಂಪಾವಿಶೇಷತಃ ॥

ಅಹೋ ಸುಖಕರನಾಹತನದಿಂ ಪ್ರಸಿದ್ಧನಾದ ಪರಮೇಶ್ವರನೆ ಇಲ್ಲಿಂದ ಮೇಲೆ ನಾ ನಿನ್ನ ಸ್ವರೂಪಮಂ ಪಡೆಯಲಿಚ್ಛೆಯುಳ್ಳವನಾದವನು ನನಗೆ ಅವಕಾಶವ ಕೊಡು ಕೃಪೆಯಂ ವಿಶೇಷವಾಗಿ ಮಾಡೆಂಬುದರ್ಥಂ ॥೫೨॥ ಬಳಿಕ ವೃತ್ತತ್ರಯದಿಂ ಶಿವನ ಪ್ರಸನ್ನತಿಕೆಯಂ ರೇವಣಸಿದ್ಧೇಶ್ವರನಿಗೆ ಲಿಂಗೈಕ್ಯವನೂ ಪ್ರತಿಪಾದಿಸುತಿರ್ದಪಂ.

ಇತ್ಯುಕ್ತೇ ಗಣನಾಯಕೇನ ಸಹಸಾ ಲಿಂಗಾತ್ತತಃ ಶಾಂಕರಾತ್
ವತ್ಸಾಗಚ್ಛ ಮಹಾನುಭಾವ ಭವತೋ ಭಕ್ತ್ಯಾ ಪ್ರಸನ್ನೋಽಸ್ಮ್ಯಹಮ್
ಇತ್ಯುಚ್ಚೈರಗದದ್ವಚಸ್ತನುಭೃತಾಮಾಶ್ಚರ್ಯಮಾಸೀತ್ತದಾ
ದಿವ್ಯೋ ದುಂದುಭಿರಾನನಾದ ಗಗನೇ ಪುಷ್ಪಂ ವವರ್ಷುರ್ಗಣಾಃ ॥

ಪ್ರಮಥಗಣಂಗಳಿಗಧಿಪತಿಯಾದ ರೇವಣಸಿದ್ಧೇಶ್ವರನಿಂದ ಈ ಪ್ರಕಾರದಿಂ ಬೇಡಿಕೊಳ್ಳುತ್ತಿರಲಾಗಿ ಆ ಕ್ಷಣದಲ್ಲಿ ಶಿವನ ಸಂಬಂಧವಾದ ಆ ಸೋಮೇಶ್ವರಲಿಂಗದತ್ತಣಿಂ ಅಹೋ ನಿಗಮಾಗಮಂಗಳಲ್ಲಿ ದೊಡ್ಡಿತ್ತಾದ ನಿಶ್ಚಯಬುದ್ಧಿಯುಳ್ಳ ರೇವಣಸಿದ್ಧನೆಂಬ ಪೆಸರುಳ್ಳ ಕುಮಾರನೆ ನಿನ್ನ ನವವಿಧಭಕ್ತಿಯಿಂದ ನಾನು ಪ್ರಸನ್ನನಾದೆನು ಬಾ ಎಂಬ ವಾಕ್ಯಮಂ ಶಿವನುನ್ನತವಾಗಿ ನುಡಿದನು. ಆ ಸಮಯದಲ್ಲಿ ಶರೀರಗಳಿಗೆ ಕೌತುಕವಾಯಿತು. ಗಗನದಲ್ಲಿ ದೇವದುಂದುಭಿ ಸರ್ವತ್ರ ಮೊಳಗಿತು. ಪ್ರಮಥಗಣರೂ ಕುಸುಮವೃಷ್ಟಿಯಂ ಕರೆದರೆಂಬುದರ್ಥಂ ॥೫೩॥

ಶ್ರುತ್ವಾ ಲಿಂಗಾದ್ವಚನಮುದಿತಂ ಶಾಂಕರಂ ಸಾನುಕಂಪಂ
ಸಂಹೃಷ್ಟಾತ್ಮಾ ಗಣಪತಿರಥೋ ಜ್ಯೋತಿಷಾ ದೀಪ್ಯಮಾನಃ
ಜಾತೋತ್ಕಂಠೈಃ ಪರಮನುಚರೈರ್ಯೋಗಿಭಿಸ್ತೂಯಮಾನಃ
ಜ್ಯೋತಿರ್ಲಿಂಗಂ ಪರಮಮನುವಿಶತ್ಸ್ವಪ್ರಕಾಶಂ ತದಾನೀಮ್ ॥

ಪುಷ್ಪವೃಷ್ಟಿಯಾದ ಬಳಿಕ ಸಂತುಷ್ಟಚಿತ್ತನಾದ ಶ್ರೀ ರೇವಣಸಿದ್ಧನು ಶಿವಕಲೆಯಿಂ ಪ್ರಕಾಶಿಸುವಾತನಾಗಿ ಸೋಮೇಶ್ವರಲಿಂಗದತ್ತಣಿಂದುಂಟಾದ ಕೃಪೆಯೊಡನೆ ಕೂಡಿದ ಶಿವನ ಪೂರ್ವೋಕ್ತ ವಚನಮಂ ಕೇಳಿ ಉಂಟಾದ ಆಶ್ಚರ್ಯವುಳ್ಳ ಸಹಚರರಾದ ಶಿವಯೋಗಿಗಳಿಂದ ಧಿಕವಾಗಿ ಸ್ತುತಿಸಿದಾತನಾಗಿ ಆ ಸಮಯದಲ್ಲಿ ಸರ್ವೋತ್ಕೃಷ್ಟವಾದ ನಿಜಪ್ರಕಾಶಮಯ ಜ್ಯೋತಿರ್ಲಿಂಗಮಂ ಸ್ವರೂಪಹಾನಿವೃದ್ಧಿಯಿಲ್ಲದೆ ಸಮಾನ ಸಮರಸ ಭಾವದಿಂ ಪ್ರವೇಶಿಸಿದನೆಂಬುದರ್ಥಂ ||೫೪||

ಲೀನೇ ತಸ್ಮಿನ್ ಶಾಂಕರೇ ಸ್ವಪ್ರಕಾಶೇ
ದಿವ್ಯಾಕಾರೇ ರೇಣುಕೇ ಸಿದ್ಧನಾಥೇ
ಸರ್ವೋ ಲೋಕೋ ವಿಸ್ಮಿತೋऽಭೂತ್ತದಾನೀಮ್
ಶೈವೀಭಕ್ತಿಃ ಸಪ್ರಮಾಣಾ ಬಭೂವ||

ಮನೋಹರವಾದ ಸ್ವರೂಪವುಳ್ಳ ರೇವಣಸಿದ್ಧೇಶ್ವರನು ನಿಜಪ್ರಕಾಶರೂಪನಾದ ಶಿವನ ಸಂಬಂಧಮಾದ ಆ ಸೋಮೇಶ್ವರಲಿಂಗದಲ್ಲಿ ಐಕ್ಯವಾಗುತ್ತಿರಲಾಗಿ ಸಕಲಲೋಕವೂ ಆಶ್ಚರ್ಯಯುಕ್ತವಾದುದಾಯಿತ್ತು. ಆ ಕಾಲದಲ್ಲಿ ಶಿವಸಂಬಂಧವಾದ ಭಕ್ತಿಯು ಪ್ರಮಾಣ ದೊಡನೆ ಕೂಡಿದಂಥಾದಾಯಿತೆಂಬುದರ್ಥಂ ||೫೫|| ಬಳಿಕೀ ಗ್ರಂಥದ ಮಹತ್ವಮಂ ಪೇಳುತಿರ್ದಪಂ.

ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್ಸ್ಥಲೋದ್ಯನ್ಮಣಿಮ್
ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀ ಗೋಪ್ಯಚಿಂತಾಮಣಿಮ್
ಶ್ರೀಸಿದ್ಧಾಂತಶಿಖಾಮಣಿಂ ಲಿಖಯಿತಾ ಯಸ್ತಂ ಲಿಖಿತ್ವಾ ಪರಾನ್
ಶ್ರುತ್ವಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ ಪರಾಮ್ ||

ಮಂಗಲಕರವಾದ ಸಕಲಸಮಯಶಾಸ್ತ್ರೋತ್ತರವಾದ ವೇದಾಗಮಪ್ರತಿಪಾದ್ಯ ವೀರಶೈವಮಾರ್ಗವೆ ಯಾಗವಾಗಿ ಉಳ್ಳ ಮಂಗಲಾತ್ಮಕಮಾದೇಕೋತ್ತರ ಶತಸ್ಥಲ ರೂಪವಾದ ಅಂಗ ಲಿಂಗ ಷಟ್‌ಸ್ಥಲಮಾರ್ಗಪ್ರಕಾಶನವ ಮಾಡುವಲ್ಲಿ ತಪ ಮಾಡಲ್ಪಟ್ಟ ರತ್ನವಾದ ಶೋಭಿಸುವ ಜೀವೇಶ್ವರೈಕ್ಯವೆಂಬ ಕಮಲವನರಳಿಸುವಲ್ಲಿ ಸೂರ್ಯನಾದ ಮಂಗಲಕರ ಶಿವರಹಸ್ಯಾರ್ಥವ ಪ್ರಕಾಶವ ಮಾಡುವಲ್ಲಿ ಚಿಂತಾಮಣಿರತ್ನವಾದ ಶ್ರೀ ಸಿದ್ಧಾಂತಶಿಖಾಮಣಿ ಎಂಬ ವೀರಶೈವಶಾಸ್ತ್ರಮಂ ಯಾವಾತಂ ಬರದು ಪರರಂ ಕುರಿತು ಬರೆಸಿ ಯಾವಾತಂ ಕೇಳಿ ಪರರಿಗೆ ಕೇಳಿಸುವನು ಆತಂ ನಿರ್ಮಲವಾದ ಶಿವಭಕ್ತಿಯಂ ಪರಾಪರಮುಕ್ತಿಯಂ ಪಡೆವನೆಂಬುದರ್ಥಂ ||೫೬||

ಇತಿ ಶ್ರೀ ವೀರಶೈವ ಮಾಹೇಶ್ವರಾಚಾರ್ಯ ಶಿವಯೋಗೀಶ ಸಂಗ್ರಹೀತೇ ವೇದಾಗಮ ಪುರಾಣಾದಿ ಸಾರಭೂತೇ ವೀರಶೈವಧರ್ಮನಿರ್ಣಯ ಸಿದ್ಧಾಂತಶಿಖಾಮಣೌ ರೇಣುಕ ವಿಭೀಷಣ ಸಂವಾದ ರೇಣುಕ ಶಿವಲಿಂಗೈಕ್ಯ ಪ್ರಸಂಗೋನಾಮೈಕವಿಂಶತೀಯಃ ಪರಿಚ್ಛೇದಃ ||ಶ್ರೀ||

## ಅನುಬಂಧ

### ೧. ಉದ್ಧರಣೆಗಳು

ಸುಪ್ರಬೋಧಿನೀಟೀಕಿನಲ್ಲಿ ವೇದ ಉಪನಿಷತ್ತು ಆಗಮ ಮುಂತಾದವುಗಳಿಂದ ಉದ್ಧರಿಸಲ್ಪಟ್ಟಿರುವ ವಾಕ್ಯಗಳ ವರ್ಗೀಕೃತ ಸೂಚಿ.

ವೇದಗಳು

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ (ಸಿದ್ಧಾಂತ ೬-೫೮; ಋಗ್ವೇದ ೫-೭-೩೮)

ಅತಪ್ತತನೂರ್ನ ತದಾಮ ಅಶ್ನುತೇ (ಸಿದ್ಧಾಂತ ೬-೬೦ ಋಗ್ವೇದ ೭-೩-೮)

ಯಾ ತೇ ರುದ್ರ ಶಿವಾತನೂರಘೋರಪಾಪಕಾಶಿನೀ (ಸಿದ್ಧಾಂತ ೬-೬೨ ಯಜುರ್ವೇದ ಶತರುದ್ರೀಯ ಪ್ರಥಮ ಅನುವಾಕ)

ಅಗ್ರಾಹ್ಯಮಗ್ರಾರ್ಕ್ಯೇಣ ವಾಯುಂ ವಾಯವ್ಯೇನ ಸೋಮಂ ಸೌಮ್ಯೇನ ಗ್ರಸತಿ ಸ್ವೇ ನ ತೇಜಸಾ ತಸ್ಮಾದುಪಸಂಹರ್ತೇ ಮಹಾಗ್ರಾಸಾಯ ವೈ ನಮೋ ನಮಃ (ಸಿದ್ಧಾಂತ ೧೪-೩೩ ಅಥರ್ವವೇದ)

ಉಪನಿಷತ್ತುಗಳು

ವಸ್ತು ತತ್ಪರಂ ಬ್ರಹ್ಮ ಸ ಏಕಃ ಸ ಏಕೋ ರುದ್ರಃ ಸ ಈಶಾನಃ ಸ ಭಗವಾನ್ ಸ ಮಹೇಶ್ವರಃ (ಸಿದ್ಧಾಂತ ೧-೮ ; ಅಥರ್ವಶಿರೋಪನಿಷತ್ತು)

ಮಾಯಾಸ್ವರೂಪಾಯೈ ನಮಃ ಮಾಯಾಂತು ಪ್ರಕೃತಿಂ ವಿಂದ್ಯಾನ್ಮಾಯಿನಂ ತು ಮಹೇಶ್ವರಮ್ (ಸಿದ್ಧಾಂತ ೧-೯; ಶ್ವೇತಾಶ್ವತರ ೪-೧)

ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯಂತೇ ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾ ಚ ಸಕಲರೂಪಾತ್ಮನೇ ನಮಃ (ಸಿದ್ಧಾಂತ ೧-೧೧ ಶಿವಸಂಕಲ್ಪೋಪನಿಷತ್ತು

ತತ್ತ್ವಮುಸ್ಯಾದಿ ವೇತ್ತಾ (ಸಿದ್ಧಾಂತ ೧-೧೨ ಛಾಂದೋಗ್ಯೋಪ ನಿಷತ್ತು ೬-೮-೭)

ಆಕಾಶಶರೀರಂ ಬ್ರಹ್ಮ (ಸಿದ್ಧಾಂತ ೧-೨೧ ತೈತ್ತಿರೀಯ ೧-೬-೩)

ಅಸನ್ನೇವ ಸ ಭವತಿ ಅಸದ್ಬ್ರಹ್ಮೇತಿ ವೇದ ಚೇತ್ ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ (ಸಿದ್ಧಾಂತ ೨-೬ ತೈತ್ತಿರೀಯ ೨-೬)

ಸದೇವ ಸೌಮ್ಯೇದಮಗ್ರ ಆಸೀತ್; (ಸಿದ್ಧಾಂತ ೨-೬ ಛಾಂದೋಗ್ಯ ೬-೨-೧

ವಿಶ್ವಾಧಿಕೋ ರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಜನಯಾಮಾಸ ಪೂರ್ವಮ್ (ಸಿದ್ಧಾಂತ ೨-೧೪; ಶ್ವೇತಾಶ್ವತರ ೩-೧೪)

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ (ಸಿದ್ಧಾಂತ ೨-೧೫ ಶ್ವೇತಾಶ್ವತರ ೬-೧೮)

ಏಕಮೇವಾದ್ವಿತೀಯ (ಸಿದ್ಧಾಂತ ೫-೩೪ ಶ್ವೇತಾಶ್ವತರ ೩-೨)

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂತು ಮಾ ಮಹೇಶ್ವರಮ್ (ಸಿದ್ಧಾಂತ೫-೩೫ಶ್ವೇತಾಶ್ವತರ ೪-೧೦)

ಸರ್ವಗಸ್ಸರ್ವಕರ್ತಾಚ ಸರ್ವಜ್ಞಃ ಪಂಚಕೃತ್ಯ ಸಂಪನ್ನಜ್ಞ ಸರ್ವೇಶ್ವರಃ ಈಶಃ (ಸಿದ್ಧಾಂತ ೫-೪೯ ವೃದ್ಧಜಾಬಾಲ-೨)

ಜ್ಞಾಜ್ಞೌದ್ವಾ ವಜಾವೀಶಾನೀಶಾವಜ್ಯೋಹ್ಯೇಕೋ ಭೋಕ್ತೃ ಭೋಗಾರ್ಥಯುಕ್ತಃ ಅನೀಶಶ್ಚಾತ್ಮ ಬಧ್ಯತೇ ಭೋಕ್ತೃಭಾವಾತ್ ಜ್ಞಾತ್ವಾದೇವಂ ಮುಚ್ಯತೇ ಸರ್ವಪಾಶೈಃ (ಸಿದ್ಧಾಂತ ೫-೪೯ ಶ್ವೇತಾಶ್ವತರ ೧-೨)

ತದ್ವಿಜ್ಞಾನಾರ್ಥಂ ಸದ್ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮ ನಿಷ್ಠಮ್ (ಸಿದ್ಧಾಂತ ೬-೧ ಮುಂಡಕ ೬-೨-೧೨)

ಇಷಮೂರ್ಜಂ ತಪಸಾನಿ ಯೋಚ್ಛ (ಸಿದ್ಧಾಂತ ೬-೪೯ ಅಥರ್ವಶಿರ ೫-೩-೮)

ಅಜಾತ ಇತ್ಯೇವ ಕಶ್ಚಿದ್ಭೀರುಃ ಪ್ರಪದ್ಯತೇ ರುದ್ರ ಯತ್ತೇ ದಕ್ಷಿಣಂ ಮುಖಂ ತೇನ ಮಾಂ ಪಾಹಿ ನಿತ್ಯಂ (ಸಿದ್ಧಾಂತ ೬-೪ ಶ್ವೇತಾಶ್ವತರ)

ಸರ್ವ ಏಷ ಪುರುಷೋಽನ್ನ ರಸಮಯಃ (ಸಿದ್ಧಾಂತ ೬-೩೪)

ಅಗ್ನಿರಿತಿ ಭಸ್ಮ (ಸಿದ್ಧಾಂತ ೬-೩೪ ಅಥರ್ವಶಿರಃ ೩-೧-೨)

ವೇದತ್ರಯಧಾರೀ ಭವತಿ ಸ ಸಂತತಂ ತ್ರೇತಾಗ್ನಿರ್ಭವತಿ ಸ ಪುಷ್ಕರತ್ರಯಸ್ನಾತೋ ಭವತಿ ಯಸ್ತ್ರಿಪುಂಡ್ರಧಾರಿಸ್ಸ ರುದ್ರಸ್ಸ ಪರಮೇಷ್ಠಿ ಯೈದಂ ತ್ರಿಪುಂಡ್ರಂಧೃತವಂತಃ ಪುರಷಂಪತಿ ಸರ್ವೇ ಪಾಪೇಭ್ಯೋ ವಿನಿರ್ಮುಕ್ತೋ ಭವತಿ ಸ ಸರ್ವವೇದಾಧ್ಯಯನ ಜನ್ಮ ಫಲವಾನ್ಭವತಿ (ಸಿದ್ಧಾಂತ ೬-೩೯ ವೃದ್ಧ ಜಾಬಾಲ)

ವಿಶ್ವಾಧಿಕೋ ರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ ಸ ನೋ ಬುಧ್ಯಾಶದನ್ಯಾ ಶುಭಯಾ ಸಂಯುನಕ್ತು (ಸಿದ್ಧಾಂತ ೧೦-೭ ಶ್ವೇತಾಶ್ವತರ ೩-೪)

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ (ಸಿದ್ಧಾಂತ ೧೧-೨೩ ಶ್ವೇತಾಶ್ವತರ ೬-೨೩)

ವಿಶ್ವಾಧಿಕೋ ರುದ್ರೋ ಮಹರ್ಷಿಃ ಹಿರಣ್ಯಗರ್ಭಂ ಜನಯಾ ಮಾಸಪೂರ್ವಮ್ ನ ತತ್ಸಮಶ್ಚಾಪ್ಯಧಿಕಶ್ಚ ದೃಶ್ಯತೇ (ಸಿದ್ಧಾಂತ ೧೧-೩೩ ಶ್ವೇತಾಶ್ವತರ ೪-೧೨)

ಭೂತ್ಯೈಃ ನ ಪ್ರಮದಿತವ್ಯಂ (ಸಿದ್ಧಾಂತ ೭-೧ ತೈತ್ತಿರೀಯ ೧-೧೧-೧)

ಭಸ್ಮಧ್ಯಾನಾತ್ಸಂಧಾನಂ ಭವತಿ ಭಸ್ಮಧ್ಯಾನಾತ್ಪಂಚಾಕ್ಷರೀ ಸ್ಮರಣಂ ಭವತೀ ಭಸ್ಮಧ್ಯಾನಾತ್ ಸ್ಥಾಣುತ್ವಂ ಚ ಗಚ್ಛತಿ ಸ ಏಷ ಭಸ್ಮಜ್ಯೋತೀ (ಸಿದ್ಧಾಂತ ೭-೨ ಜಾಬಾಲ)

ಭಸ್ಮಜ್ಯೋತಿರ್ಲಿಂಗಮಯೋ (ಸಿದ್ಧಾಂತ ೭-೨ಜಾಬಾಲ)

ಸದ್ಯೋಜಾತಾದ್ವಿಭೂತಿಶ್ಚ ವಾಮಾದ್ಭಸಿತಮೇವ ಚ ಅಘೋರಾದ್ಭಸ್ಮ ಸಂಜಾತಂ ತತ್ ಪುರುಷಾತ್ ಕ್ಷಾರ ನಾಮ ಚ ॥ ರಕ್ಷಾಚ್ಚೇಶಾನವಕ್ತ್ರಾಚ್ಚ ನಂದಾದಿ ದ್ವಾರತೋ ಭವೇತ್ ॥ (ಸಿದ್ಧಾಂತ ೭-೯ ಬೃಹಜ್ಜಾಬಾಲ)

ಲಿಂಗಮಾಹುಃ ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಚ್ಛತಿ ಮಧ್ಯೇ ವಾಮನಮಾಸೀನಂ ವಿಶ್ವೇದೇವೇ ದೇವಾ ಉಪಾಸತೇ (ಸಿದ್ಧಾಂತ ೧೨-೫ ಕಠವಲ್ಲಿ ೫-೩)

ಯ ತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ಆನಂದಂ ಬ್ರಹ್ಮಣೋ ವಿದ್ವಾನ್ನ ಬಿಭೇತಿ ಕುತಶ್ಚನ್ (ಸಿದ್ಧಾಂತ ೧೯-೮ ಬ್ರಹ್ಮೋಪನಿಷತ್ತು ೨೨)

ಪುರಾ ತ್ರಿಪುರವಧಾಯೋನ್ಮೀಲಿತಾಕ್ಷ್ಣೋಽಹು ತೇ ಭ್ಯೋ ಜಲಬಿಂದವ್ರೋ ಭೂಮೌ ಪತಿತಾಸ್ತೇ ರುದ್ರಾಕ್ಷಾಃಜಾತಾಃ ಸರ್ವಾನುಗ್ರಹಾರ್ಥಾಯ ತೇಷಾಂ ನಾಮೋಚ್ಚಾರಣೇನ ದಶಶತಗೋದಾನ ಫಲಂ ಭವತಿ ; ದರ್ಶನ ಸ್ಪರ್ಶನಾಭ್ಯಾಂ ದ್ವಿಗುಣಂ ತ್ರಿಗುಣಂ ಫಲಂ ಭವತಿ ಅತ ಊರ್ಧ್ವಂ ವಕ್ತುಂ ನ ಶಕ್ಯಮ್ (ಸಿದ್ಧಾಂತ ೭-೪೮ ಅಥರ್ವಶಿಖಾ ಬೃಹಜ್ಜಾಬಾಲ)

ಸರ್ವಮನ್ಯರಿತ್ಯಜ್ಯ ಹೇಯ ವಿಷ್ಣಾಧಿಕಾನ್ ಪುರಾನ್ ಶಿವ ಏವ ಶಿವ ಏವ ಸದಾ ಧ್ಯೇಯಃ ಸರ್ವಂ ಸಂಸಾರನಾಶನಮ್ (ಸಿದ್ಧಾಂತ ೮-೪, ೮-೧೩ ಶರಭೋಪನಿಷತ್ತು ೩೨)

ಯೋಽಸಾ ವಸೌಪುರುಷ ಸೋಽಹಮಸ್ಮಿ (ಸಿದ್ಧಾಂತ ೮-೨೦ ಬೃಹದಾರಣ್ಯಕ ೫-೧೫-೧)

ಸರ್ವ ಸರ್ವಂ ಖಲ್ವಿದಂ ಬ್ರಹ್ಮ (ಸಿದ್ಧಾಂತ ೮-೨೨ ಛಾಂದೋಗ್ಯ ೩-೧೪-೧)

ಅಕಾರ ಬ್ರಹ್ಮಣಿ ನಾಭೌ ಉಕಾರಂ ವಿಷ್ಣು ಹೃದಯೇ ಮಕಾರಂ ರುದ್ರಂ ಭ್ರೂಮಧ್ಯೇ ಓಂಕಾರಂ ಸರ್ವೇಶ್ವರಂ ದ್ವಾದಶಾಂತೇ (ಸಿದ್ಧಾಂತ ೮-೨೨ ನೃಸಿಂಹೋಪನಿಷತ್ತು ೩-೪)

ಶಿವಸ್ವರೂಪೋ ಭವತಿ ಶಿವಸ್ವರೂಪೋ ಭವತಿ (ಸಿದ್ಧಾಂತ ೯-೧೪ ಜಾಬಾಲ)

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ (ಸಿದ್ಧಾಂತ ೯-೫೨ ಶ್ವೇತಾಶ್ವತರ ೬-೨೩)

ಭುಂಜೀಯಾದ್ರುದ್ರ ಭುಕ್ತಾನ್ನಂ ರುದ್ರ ಪೀತಂ ಜಲಂ ಪಿಬೇತ್। ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ (ಸಿದ್ಧಾಂತ ೯-೭೧ ಜಾಬಾಲೋಪನಿಷತು)

ರುದ್ರೇಣೋತ್ತಮಶ್ನತಿ ರುದ್ರೇಣ ಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ (ಸಿದ್ಧಾಂತ ೯-೭೧ ಜಾಬಾಲೋಪನಿಷತು)

ಈಶಾನಸ್ಸರ್ವ ವಿದ್ಯಾನಾಂ (ಸಿದ್ಧಾಂತ ೯–೮೬, ೯–೭೨ ತೈತ್ತಿರೀಯ ಆರಣ್ಯಕ ೧೦–೪೭–೧)

ವಿಶ್ವಂ ನಾರಾಯಣಂ ಹರಿಃ (ಸಿದ್ಧಾಂತ ೧೦–೮ ಮಹಾನಾರಾಯಣೋಪನಿಷತ್ತು ೯–೧)

ಹೃದಯೇ ವೈ ಬ್ರಹ್ಮಸೋಮಸೂರ್ಯಾಗ್ನಿ ಮಂಡಲೇ ನಿವಾತದೀಪೋಪಮಸ್ಥಾಯಿ ಹೃದ್ಯಂತರ್ಜ್ಯೋತಿಃ ಪುರುಷಃ (ಸಿದ್ಧಾಂತ ೧೨–೮ಶ್ರುತಿ ?)

ಸತೋ ಭಾವಸ್ಯ (ಸಿದ್ಧಾಂತ ೧೨–೧೨ ಶ್ರುತಿ ?)

ಆಚಾರ್ಯಃ ಪೂರ್ವರೂಪಮ್ ಅಂತೇವಾಸ್ಯುತ್ತರ ರೂಪಮ್ ವಿದ್ಯಾ ಸಂಧಿಃ (ಸಿದ್ಧಾಂತ ೧೧–೩೪ ತೈತ್ತಿರೀಯ ೧–೩–೫)

ತಸ್ಯಭಾಸಾ ಸರ್ವಮಿದಂ ವಿಭಾತಿ (ಸಿದ್ಧಾಂತ ೧೧–೩೫ ಮುಂಡಕ ೨–೨೧೦)

ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿ ಬ್ರಾಹ್ಮಣೋಽಧಿಪತಿಃ ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವಃ (ಸಿದ್ಧಾಂತ ೧೦–೯ ತೈತ್ತಿರೀಯ ಆರಣ್ಯಕ ೧೦–೪೭–೧)

ಯಂತೇ ಬ್ರಹ್ಮವಿಷ್ಣುರುದ್ರೇಂದ್ರಾಸ್ತೇ ಸಂಪ್ರಸೂತ (ಸಿದ್ಧಾಂತ ೧೦–೧೨ ಅಥರ್ವಶಿರೋಪನಿಷತ್ತು ೨–೩)

ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮತ್ಪರಿತ್ಯಜ್ಯ (ಸಿದ್ಧಾಂತ ೧೦–೭೯ ಅಥರ್ವಶಿರೋಪನಿಷತ್ತು ೨–೨)

ಚಿತ್ತಸ್ಯ ಹಿ ಪ್ರದಾನೇನ ಹಂತಿ ಕರ್ಮ ಶುಭಾಶುಭಂ ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮಕ್ಷಯಮಶ್ನುತೇ (ಸಿದ್ಧಾಂತ ೧೧–೫ ಮೈತ್ರೇಯ ಉಪನಿಷತ್ತು ೧–೧೧)

ಆಹಾರಶುದ್ಧ್ಯಾ ಸತ್ತ್ವ ಶುದ್ಧಿಃ (ಸಿದ್ಧಾಂತ ೧೧–೮ ಛಾಂದೋಗ್ಯ ೭–೨೬–೨)

ಯೋಽಸಾವಸೌ ಪುರುಷಸ್ಸೋಽಹಂ (ಸಿದ್ಧಾಂತ ೧೨–೨೧ ಬೃಹದಾರಣ್ಯಕ ೫–೧೫–೧)

ಗುದವಷ್ಟಭ್ಯಾಧಾರಾದ್ವಾಯುಮುತ್ಥಾಪ್ಯ ಸ್ವಾಧಿಷ್ಠಾನಂ ತ್ರಿಪ್ರದಕ್ಷಿಣೀಕೃತ್ಯ ಮಣಿಪೂರಕಂ ಗತ್ವಾ ಅನಾಹತಮತಿಸ್ತಮ್ಯ ವಿಶುದ್ಧೌ ಪ್ರಾಣಾನ್ನಿರುಧ್ಯಾಜ್ಞಾಮನು ಧ್ಯಾಯನ್ ಬ್ರಹ್ಮರಂಧ್ರಂ ಧ್ಯಾಯನ್ ಧ್ಯಾಯಾತ್ ತ್ರಿಮಾತ್ರೋಽಹಮಿತಿ ಸರ್ವದಾ ಧ್ಯಾಯೇತ್ (ಸಿದ್ಧಾಂತ ೧೨–೨೪ ಹಂಸೋಪನಿಷತ್ತು)

ವಿಶುದ್ಧೌ ಪ್ರಾಣಾನ್ನಿರುಧ್ಯಾಜ್ಞಾಮನು ಧ್ಯಾಯನ್ ಬ್ರಹ್ಮ ರಂಧ್ರಂ ಧ್ಯಾಯನ್ ದ್ವಾಸುಪರ್ಣಾ ಸಯುಜಾಸಖಾಯ (ಸಿದ್ಧಾಂತ ೧೨–೪೪ ಮುಂಡಕ ೩–೧–೧)

ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂತು ಮಹೇಶ್ವರ (ಸಿದ್ಧಾಂತ ೧೨-೩೮ ಶ್ವೇತಾಶ್ವತರ ೪-೧೦)

ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕ ನೇಮಾ ವಿದ್ಯತೋ ಭಾಂತಿ ಕುತೋऽಯಗ್ನಿಂ ತಮೇವ ಭಾಂತಮನುಭಾಂತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ (ಸಿದ್ಧಾಂತ ೧೨-೩೮ ಕಠವಲ್ಲಿ ೫-೧೫)

ಯಥಾ ಪಿ ಯಯಾ ಸಂಪರಿಷ್ವಕ್ತೋ ನ ಬಾಹ್ಯಂ ನ ಕಿಂಚ ನ ವೇದನಾಂತ (ಸಿದ್ಧಾಂತ ೧೩-೨ ಬೃಹದಾರಣ್ಯಕ)

ಪ್ರಜ್ಞಾನಂ ಬ್ರಹ್ಮ (ಸಿದ್ಧಾಂತ ೧೩-೨೫ ಐತರೇಯೋಪನಿಷತ್ತು ೫-೩)

ಏಕಮೇವ ತದ್ಭವತ್ಯವಿಕಲ್ಪೋ ವಾ ವಿಕಲ್ಪೋऽತ್ರ ಕಾಂಚನ ಭಿದಾಸ್ತತ್ರ ನೈವಾತ್ರ ಕಿಂಚನ ಭಿದಾಮಿವ ಮನ್ಯಮಾನಃ ಶತಧಾ ಸಹಸ್ರಧಾ ಭಿನ್ನೋ ಮರ್ತ್ಯಮಾಪ್ನೋತಿ ತದೇಕಮದ್ವಯಂ ಸ್ವಪ್ರಕಾಶಂ (ಸಿದ್ಧಾಂತ ೧೪-೩ ಉತ್ತರ ತಾಪನೀಯ?)

ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ ತಸ್ಯ ಉಪಯಂತಿ ಸುಹೃದಃ ಸಾಧುಕೃತ್ಯಂ ದ್ವಿಷಂತಃ ಪಾಪಕೃತ್ಯಂ ಯಥಾ ಪುಷ್ಕರ ಪಲಾಶಮಾಪಾನ ಶಿಷ್ಯಂ ತ ಸೇವಮೇವ ವಿದ್ಧಿ ಪಾಪಂ ಕರ್ಮ ನ ಶಿಷ್ಯತೇ ಸ ಉತ್ತಮಪುರುಷಃ ಸತೀ ತತ್ತಪರ್ಯೋ ಭವಂತಿ (ಸಿದ್ಧಾಂತ ೧೪-೨೦ ಛಾಂದೋಗ್ಯ ಉಪನಿಷತ್ತು ೬-೧೪-೨)

ಪದವ್ಯಯೀ ಸರ್ವಯೋತೀ ಭವಂತಿ (ಸಿದ್ಧಾಂತ ೧೪-೨೬ ಮುಂಡಕೋಪನಿಷತು)

ಸರ್ವೋ ವೈ ರುದ್ರಃ (ಸಿದ್ಧಾಂತ ೧೪-೨೭ ಮಹಾನಾರಾಯಣ ಉಪನಿಷತ್ತು ೧೦-೧೧)

ಆಶ್ಚರ್ಯೋ ವಕ್ತಾ ಕುಶಲೋಸ್ಯ ಲಬ್ಧ್ವಾ (ಸಿದ್ಧಾಂತ ೧೫-೯ ಕಠವಲ್ಲಿ ೨-೭)

ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮುಚ್ಯತೇ (ಸಿದ್ಧಾಂತ ೧೫-೧೫ ಮಹಾ ನಾರಾಯಣೋಪನಿಷತ್ತು ೯-೩)

ಭಾವಗ್ರಾಹ್ಯಮನೀಡಾಖ್ಯಂ ಭಾವಾಭಾವಕರಂ ಶಿವಂ ಕಲಾ ಸರ್ಗಕರಂ ದೇವಂ ಯೋ ವಿದುಸ್ತೇ ಜುಹುಸ್ತನುಂ (ಸಿದ್ಧಾಂತ ೧೫-೩೭ ಶ್ವೇತಾಶ್ವತರ ೫-೧೪)

ಸಕಲಂ ನಿಷ್ಕಲಂ ಗ್ರಾಹ್ಯಮಿಷ್ಟಲಿಂಗಸ್ಥಲ ಮಹತ್ ಇಷ್ಟಾವಾಪ್ತಿಕರಂ ಸಾಕ್ಷಾದನಿಷ್ಟ ಪರಿಹಾರಕಂ ಇಷ್ಟಮೂರ್ಜಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ ಇಷ್ಟಲಿಂಗಮಿತಿ ಪ್ರಾಹುಃ (ಸಿದ್ಧಾಂತ ೧೫-೩೦ ವಾತುಲೋತ್ತರ)

ಅಚಿಂತ್ಯಂ ಚಾಪ್ರಮೇಯಂ ಚ ವ್ಯಕ್ತಾವ್ಯಕ್ತಂ ಪರಂ ಚ ಯತ್ ಸೂಕ್ಷ್ಮಾತ್ ಸೂಕ್ಷ್ಮ ತರಂ ಜ್ಞೇಯಂ ತನ್ಮೇ ಮನಶ್ಶಿವಸಂಕಲ್ಪಮುಸ್ತು (ಸಿದ್ಧಾಂತ ೧೫-೪೫ ಶಿವಸಂಕಲ್ಪಉಪನಿಷತು)

ಪರಂಜ್ಯೋತಿರುಪಸಂಪದ್ಯಸ್ವೇ ನ ರೂಪೇಣಾಭಿ ನಿಷ್ಪದ್ಯತೇ ಸಃ ಉತ್ತಮಃ ಪುರುಷಃ ತತ್ರಪರ್ಯೇತಿ (ಸಿದ್ಧಾಂತ ೧೫-೫೨ ಛಾಂದೋಗ್ಯ ೮-೩೪)

ಆತ್ಮರತಿರಾತ್ಮಕ್ರೀಡ ಆತ್ಮಮಿಥುನಮಾತ್ಮಾನಂದಃ (ಸಿದ್ಧಾಂತ ೧೫-೫೮ ಛಾಂದೋಗ್ಯ ೭-೨೫-೩)

ತದ್ಬ್ರಹ್ಮಮಿತಿ ಜ್ಞಾತ್ವಾ ಬ್ರಹ್ಮ ಸಂಪದ್ಯತೇ ಪರಮ್ (ಸಿದ್ಧಾಂತ ೧೫-೬೫ ಅಮೃತಬಿಂದೂಪನಿಷತ್ತು ೨-೮)

ನಿರಂಜನಃ ಪರಮಂ ಸಾಮ್ಯಮುಪೈತಿ ದಿವ್ಯಮ್ (ಸಿದ್ಧಾಂತ ೧೫-೭೨ ಮುಂಡಕ ೩-೧೩)

ಯಂ ಯಥೋಪಾಸತೇ ತದೇವ ಭವತಿ ಯದ್ಭಾವಂ ತದ್ಭವತಿ ಯಥಾಕಾರಿ ತಥಾ ಭವತಿ (ಸಿದ್ಧಾಂತ ೧೬-೧೫ ಬೃಹದಾರಣ್ಯ)

ನ ಕರ್ಮಣಾ (ಸಿದ್ಧಾಂತ ೧೬-೨೬ ಮಹಾನಾರಾಯಣೋಪನಿಷತ್ತು ೮-೧೪)

ತರತಿಶೋಕ ಮಾತ್ಮವಿತ್ (ಸಿದ್ಧಾಂತ ೧೬-೨೬ ಛಾಂದೋಗ್ಯ ೭-೧-೩)

ಅಚ್ಛಾಯಮಶರೀರಮ್ (ಸಿದ್ಧಾಂತ ೧೬-೪೨ ಪ್ರಶ್ನೋಪನಿಷತ್ತು ४-೧೦)

ಯದ್ವೇದ ವಿದ್ಯಾಧಿಗಮಃ ಸ್ವಧಸ್ಯಾನುಚರಣಂ ಸ್ವಾಶ್ರಮೇಷ್ವಿವಾನುಕರಣಂ ಸ್ವಧರ್ಮ ಏವ ಸರ್ವಂ ಧತ್ತೇ ಸ್ತಂಭಶಾಖೇವೇತಾರಣ್ಯನೋ ನೋರ್ಧ್ವ ಭಾಗವತನ್ಯಥಾಪತರಿ (ಸಿದ್ಧಾಂತ ೧೬-೫೮ ಮೈತ್ರೇಯ ४-೩)

ಸಕಲಂ ನಿಷ್ಕಲಂ ಗ್ರಾಹ್ಯಮಿಷ್ಟಲಿಂಗಸ್ಥಲ ಮಹತ್ ಇಷ್ಟಾವಾಪ್ತಿಕರಂ ಸಾಕ್ಷಾದನಿಷ್ಟ ಪರಿಹಾರಕಂ ಇಷ್ಟ ಮೂರ್ಜಂ ಸ್ವ ಭಕ್ತಾನಾಮನುಯಚ್ಛೆಃ ಸರ್ವದಾ ಇಷ್ಟಲಿಂಗಮಿತಿ ಪ್ರಾಹುಃ (ಸಿದ್ಧಾಂತ ೧೫-೩೦ ವಾತುಲೋತ್ತರ)

ಯಸ್ಯ ವಿಜ್ಞಾನವಾನ್ಭವತಿ ಯುಕ್ತೇನ ಮನಸಾ ಸದಾ ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ (ಸಿದ್ಧಾಂತ ೧೭-೩೮ ಕಠವಲ್ಲಿ ೩-೫)

ಜ್ಞಾನ ವಿಜ್ಞಾನ ತತ್ಪರಃ (ಸಿದ್ಧಾಂತ ೧೬-೨४ ಅಮೃತಬಿಂದು)

ತ್ರಿರುನ್ನತಂ ಸ್ಥಾಪ್ಯ ಸಮಂ ಶರೀರಂ ಹೃದೀಂದ್ರಿಯಾಣಿ ಮನಸಾ ಸನ್ನಿವೇಶ್ಯ (ಸಿದ್ಧಾಂತ ೧೭-೧೩ ಶ್ವೇತಾಶ್ವತರ ೩-೮)

ಪ್ರಾಣಾನ್ ಪ್ರಪೀಡ್ಯೇಹ ಸಯುಕ್ತ ಚೇಷ್ಟಃ ಕ್ಷೀಣೇ ಪ್ರಾಣೇ ನಾಸಿಕಯೋಚ್ಛ್ವಸೀತ (ಸಿದ್ಧಾಂತ ೧೬-೨४ ಶ್ವೇತಾಶ್ವತರ ೨-೯)

ಇಂದ್ರಿಯಾಣಾಂ ಮನೋ ನಾಥಃ (ಸಿದ್ಧಾಂತ ೧೭-೪೧ ವಾರಾಹೋಪನಿಷತ್ ೨-೮೦)

ಭೋಕ್ತಾ ಭೋಜ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಚೈತತ್ (ಸಿದ್ಧಾಂತ ೧೭-೫೨ ಶ್ವೇತಾಶ್ವತರ ೧-೧೨)

ಐ ತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾತತ್ತ್ವಮಸಿ ಶ್ವೇತಕೇತೋ (ಸಿದ್ಧಾಂತ ೧೭-೬೫ ಛಾಂದೋಗ್ಯ ೬-೮-೭)

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮ ನಿಷ್ಠಮಿತಿ (ಸಿದ್ಧಾಂತ ೧೭-೭೧ ಮುಂಡಕ ೧-೨-೧೨)

ತಸ್ಮೈ ಸ ವಿದ್ವಾನು ಪ್ರಪನ್ನಾಯ ಸಮ್ಯಕ್ಪ್ರಶಾಂತ ಚಿತ್ತಾಯ ಸಮನ್ವಿತಾಯ ಯೇನಾಕ್ಷರಂ ಪುರುಷಂ ವೇದ ಸತ್ಯ ಪ್ರೋವಾಚತಾಂ ತತ್ತ್ವತೋ ಬ್ರಹ್ಮವಿದ್ಯಾಮಿತಿ (ಸಿದ್ಧಾಂತ ೧೭-೭೩ ಮುಂಡಕ ೧-೨-೧೩)

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ಕ್ಷೀಯತೇ ಚಾಸ್ಯ ಕರ್ಮಾಣಿ ತಸ್ಮಿದ್ದೃಷ್ಟೇ ಪರಾವರೇ (ಸಿದ್ಧಾಂತ ೧೭-೮೦ ಮುಂಡಕ ೨-೨-೮)

ಪ್ರಜ್ಞಯಾ ಶರೀರಂ ಸಮಾರುಹ್ಯ (ಸಿದ್ಧಾಂತ ೧೮-೭ ಕೌಷೀತಕೀ ಬ್ರಾಹ್ಮಣೋಪ ನಿಷತ್ತು ೩-೬)

ಆಕಾಶ ಶರೀರಂ ಬ್ರಹ್ಮ (ಸಿದ್ಧಾಂತ ೧೮-೯ ತೈತ್ತಿರೀಯ ೧-೬-೩)

ಸ್ವಸ್ವಕೃತ ಸುಕೃತ ದುಷ್ಕೃತಕರ್ಮಣಾ ಪರಮೇಶ್ವರ ಪ್ರೇರಣಯಾ ಬದ್ಧ ಸಂಸಾರಿಣೋ ಜೀವಂ (ಸಿದ್ಧಾಂತ ೧೮-೧೨ ವೃದ್ಧಜಾಬಾಲ?)

ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ನಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ಏಕಸ್ತಥಾ ಸರ್ವಭೂತಾಂತರಾತ್ಮಾ ನ ಲಿಪ್ಯತೇ ಲೋಕ ಸುಖೇನ ಬಾಹ್ಯ (ಸಿದ್ಧಾಂತ ೧೮-೧೯ ಕಠವಲ್ಲಿ ೫-೧೧)

ಏವಂ ವಿದಿತ್ವಾ ಪರಮಾತ್ಮರೂಪಂ ಗುಹಾಶಯಂ ನಿಷ್ಕಲಮದ್ವಿತೀಯ ಸಮಸ್ತ ಸಾಕ್ಷಿಂ ಸದಸದ್ವಿಹೀನಂ ಪ್ರಯಾತಿ ಶುದ್ಧಂ ಪರಮಾತ್ಮ ರೂಪಮ್ (ಸಿದ್ಧಾಂತ ೧೮-೨೯ ಕೈವಲ್ಯ-೨೩)

ವಾಲಾಗ್ರ ಶತಭಾಗಸ್ಯ ಶತಧಾಕಲ್ಪಿತಸ್ಯ ಚ ಭಾಗೋ ಜೀವಃ ಸ ವಿಜ್ಞೇಯಃ ಸಚಾನಂ ತ್ಯಾಯ ಕಲ್ಪ್ಯತೇ (ಸಿದ್ಧಾಂತ ೧೮-೫ ಶ್ವೇತಾಶ್ವತರ ೪-೯)

ದ್ವಿತೀಯಾದ್ಧಯ ಮೇವ ಪಶ್ಯಂತಿ (ಸಿದ್ಧಾಂತ ೧೮-೫೫ ಬೃಹದಾರಣ್ಯ ೧-೪-೩)

ಅಣೋರಣೀಯಾನ್ಮಹತೋ ಮಹೀಯಾನಾತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋ ತಮಕ್ರತುಂ ವೀತಶೋಕೋಧಾತು ಪ್ರಸಾದಾನ್ಮಹಿಮಾನಮಾತ್ಮನಃ (ಸಿದ್ಧಾಂತ ೧೮-೬೪ ಕಠವಲ್ಲಿ ೨-೨೦)

ಏಷ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಘತ್ಸೋऽಪಿ ಪಾಸಸ್ಸತ್ಯಕಾಮಃ ಸತ್ಯಸಂಕಲ್ಪಃ (ಸಿದ್ಧಾಂತ ೧೮-೪ ಛಾಂದೋಗ್ಯ)

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ (ಸಿದ್ಧಾಂತ ೧೮-೪೯ ತೈತ್ತಿರೀಯ ೨-೪-೫)

ಯಥಾ ಪ್ರಿಯಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚ ನ ವೇದನಾಂತರಂ ಏವಮೇವಾಯಂ ಪುರುಷೋ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚ ನ ವೇದನಾಂತರಂ (ಸಿದ್ಧಾಂತ ೨೦-೪೮ ಬೃಹದಾರಣ್ಯಕ ಉಪನಿಷತು)

ಸ್ವಪ್ನಾಂತಂ ಜಾಗರಿತಾಂತಂ ಚೋಭೌ ಏನಾನುಪಶ್ಯತಿ ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ (ಸಿದ್ಧಾಂತ ೨೦-೫೫ ಕಠವಲ್ಲಿ ೪-೪)

ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್ (ಸಿದ್ಧಾಂತ ೧೮-೫೬ ಶ್ವೇತಾಶ್ವತರ ೧-೧೨)

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೇ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ೃತಿ ತಂ ಹ ದೇವಮಾತ್ಮಬುದ್ಧಿ ಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ (ಸಿದ್ಧಾಂತ ೧೮-೫೮ ಶ್ವೇತಾಶ್ವತರ ೬-೧೮)

ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ ವಿಕಲ್ಪೋ ವಿನಿವರ್ತತೇ ಕಲ್ಪಿತೋ ಯದಿ ಕೇನ ಚಿತ್ ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ (ಸಿದ್ಧಾಂತ ೧೯-೧೨ ಮುಂಡಕ)

ಆಚಾರ್ಯಃ ಪೂರ್ವರೂಪಮ್ ಅಂತೇವಾಸ್ಯುತ್ತರ ರೂಪಮ್ ವಿದ್ಯಾಸಂಧಿಃ (ಸಿದ್ಧಾಂತ ೧೯-೫ ತೈತ್ತಿರೀಯ ೧-೩-೫)

ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್ (ಸಿದ್ಧಾಂತ ೧೯-೫೧ ಅಮೃತಬಿಂದೂ ಪನಿಷತು)

ವಿಜ್ಞಾನಮಾನಂದಂ ಬ್ರಹ್ಮ (ಸಿದ್ಧಾಂತ ೧೯-೧೯ ಮಹೋಪನಿಷತ್ ೨-೯)

ಅಸ್ಯೈವಾನಂದಸ್ಯಾನ್ಯಾನಿಭೂತಾನಿ ಮಾತ್ರಮುಪಜೀವಂತಿ (ಸಿದ್ಧಾಂತ ೧೯-೨೬ ಮುಂಡಕೋಪನಿಷತ್ತು ೨-೧-೧೦)

ಸ ದೇವ ಸೌಮ್ಯ ಇದಮಗ್ರ ಆಸೀತಿತಿ (ಸಿದ್ಧಾಂತ ೧೯-೪೮ ಛಾಂದೋಗ್ಯ ೬-೨-೧)

ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ (ಸಿದ್ಧಾಂತ ೧೯-೪೯ ಶ್ವೇತಾಶ್ವತರ ೬-೮)

ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ಪ್ರತಿರೂಪೋ ಬಹಿಶ್ಚ (ಸಿದ್ಧಾಂತ ೧೯-೬೦ ಕಠವಲ್ಲಿ ೫-೧೦)

ಕ್ರಿಯಾವಂತಂ ಶ್ರೋತ್ರಿಯಂ ಬ್ರಹ್ಮನಿಷ್ಠಮ್ (ಸಿದ್ಧಾಂತ ೧೯-೭೭ ಮುಂಡಕ ೩-೨-೧೦)

ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀಜ್ಞಾನಂ ಬಲಂ ಕ್ರಿಯಾ ಚ (ಸಿದ್ಧಾಂತ ೧೯-೭೭ ಶ್ವೇತಾಶ್ವತರ ೬-೮)

ಸರ್ವಜ್ಞಸ್ಸರ್ವಕರ್ತಾ ಚ ಸರ್ವಗಃ ಪರಮೇಶ್ವರಃ ತದೈಕ್ಯಚಿಂತಯಾ ಯೋಗೀ ತಾದೃಶಾತ್ಮಾ ಪ್ರಕಾಶತೇ ಸರ್ವಜ್ಞಃ ಪಂಚಕೃತ್ಯ ಸಂಪನ್ನಃ ಸರ್ವೇಶ್ವರಃ ಈಶ್ವರಃ (ಸಿದ್ಧಾಂತ ೧೯-೭೯ ವೃದ್ಧಜಾಬಾಲ ೨)

ಸರ್ವಜ್ಞಃ ಪಂಚಕೃತ್ಯಸಂಪನ್ನಃ ಸರ್ವೇಶ್ವರಃ ಈಶ್ವರಃ (ಸಿದ್ಧಾಂತ ೧೯-ವೃದ್ಧ ಜಾಬಾಲ ೨)

ಗವಾಮನೇಕವರ್ಣಾನಾಂ ಕ್ಷೀರಸ್ಯಾಪ್ಯೇಕವರ್ಣತಾ ಕ್ಷೀರವತ್ಪಶ್ಯತೇ ಜ್ಞಾನಂ ಲಿಂಗಿನಸ್ತು ಗವಾಂ ಯಥಾ (ಸಿದ್ಧಾಂತ ೧೯-೯೦ ಅಮೃತಬಿಂದೂಪನಿಷತ್ತು-೧೮)

ಜ್ಞಾನಪ್ರಸಾದೇನ ವಿಶುದ್ಧಸ್ಸತ್ತ್ವಸ್ತತಸ್ತುತಂ ಪಶ್ಯತೇ ನಿಷ್ಕಲಂಧ್ಯಾಯಮಾನಃ (ಸಿದ್ಧಾಂತ ೨೦-೬ ಮುಂಡಕ ೩-೧-೮)

ಸೋಽವಿದ್ಯಾಗ್ರಂಥಿಂ ವಿಕಿರತಿ ಹ ಸೌಮ್ಯೇತಿ ದ್ವಾರದೋಽನ್ಯಶ್ರುತಿ (ಸಿದ್ಧಾಂತ ೨೦-೨೧ ಶ್ರುತಿ ?)

ಊರ್ಧ್ವಮೂಲೋಽ ವಾಕ್ಶಾಖ ಏಷೋಽಶ್ವತ್ಥ ಸನಾತನಃ ತದೇವ ಶುಕ್ಲಂ ತದ್ಬ್ರಹ್ಮ ತದೇವಾಮೃತಮುಚ್ಯತೇ ತಸ್ಮಿನ್ ಲೋಕಾಶ್ರಿತಾಸ್ಸರ್ವೇತದುನಾತ್ಯೇತಿ ಕಶ್ಚನ (ಸಿದ್ಧಾಂತ ೨೦-೨೯ ಕಠವಲ್ಲಿ)

ಪುಷ್ಕರ ಪಲಾಶ ಅಪೋ ನ ಶ್ಲಿಷ್ಯಂತೇ ಏವಮೇವಂ ವಿಧಿಪಾಪಂ ಕರ್ಮ ನ ಶ್ಲಿಷ್ಯತೇ (ಸಿದ್ಧಾಂತ ೨೦-೪೨ ಛಾಂದೋಗ್ಯ ೪-೧೦-೩)

ಆಪ ಅಪ್ಸು ಅಗ್ನಿಮಗ್ನೌ ವಾಯುಂ ವಾಯೌ ವ್ಯೋಮ್ನಿ ವ್ಯೋಮ್ನ ಲಕ್ಷಯೇತ್ ಏವಮಂತರ್ಗತಂ ಚಿತ್ತಂ ಪುರುಷೇ ಪ್ರತಿಮುಚ್ಯತೇ (ಸಿದ್ಧಾಂತ ೨೦-೬೦ ಮೈತ್ರೇಯ ೪-೧-೨)

ಏತತ್ ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃಪರಂ ವೇದಿತವ್ಯಂ ನ ಕಿಂಚನೇ (ಸಿದ್ಧಾಂತ ೨೦-೬೫ ಶ್ವೇತಾಶ್ವತರ ೧-೧೩-೨)

ಆಕಾಶ ಶರೀರಂ ಬ್ರಹ್ಮ (ಸಿದ್ಧಾಂತ ೨೦-೪೮ ತೈತ್ತಿರೀಯ ೧-೬-೩)

## ಆಗಮಗಳು

ವಿಜ್ಞಾನಯೋಗಸಂನ್ಯಾಸೈರ್ಭೋಗಾದ್ವಾ ಕರ್ಮಣಃ ಕ್ಷಯಃ (ಸಿದ್ಧಾಂತ ೫-೫೭ ಶಿವಾಗಮ)

ಅನನ್ಯಾಸ್ಯಚ್ಛಿವಾತ್ಮೈವ ವಸ್ತುತೋ ಮೂರ್ತಿರೈಶ್ವರೀ (ಸಿದ್ಧಾಂತ ೧-೧೩ ಪೌಷ್ಕರ ಆಗಮ)

ಸರ್ವವೇದೇಷು ಯದ್ದೃಷ್ಟಾಂತತ್ಸರ್ವಂತು ಶಿವಾಗಮೇ (ಸಿದ್ಧಾಂತ ೫-೧೩ ವೀರಾಗಮ)

ಅನಾದಿಮಲಸಂಬಂಧಾತ್ಕಿಂಚಿಜ್ಞೋ ಕರ್ಮಚೋದಿತಃ ಅನಾದಿಮಲಯುಕ್ತತ್ವಾತ್ ಸರ್ವಜ್ಞೋऽಸೌ ಶಿವಸ್ಮೃತಃ (ಸಿದ್ಧಾಂತ ೫-೪೯ ಕಿರಣಾಗಮ)

ಲಿಂಗಾರ್ಚನಾರತಾ ನಾರೀ ಸೂತಕೀ ತು ರಜಸ್ವಲಾ ರವಿರಗ್ನಿರ್ಯಥಾ ವಾಯುಸ್ತದ್ವತ್ಕೋಟಿ ಶುಚಿರ್ಭವೇತ್ (ಸಿದ್ಧಾಂತ ೯-೪೬ಶಿವಾಗಮ)

ದರ್ಶನಾದರ್ಚನಾತ್ತಸ್ಯ ತ್ರಿಸಪ್ತಕುಲಸಂಯುತಃ ಜನಾ ಮುಕ್ತಿಪದಂ ಯಾಂತಿ ಕಿಂ ಪುನಸ್ತತ್ಪರಾಯಣಃ (ಸಿದ್ಧಾಂತ ೯-೬೪ ಯೋಗಜಾಗಮ)

ಅಥ ದೇಹದಾನಾತ್ತಸ್ತ್ಯಾ ಸಿದ್ಧಿರರ್ಥದಾನಾಚ್ಚ ನಿರ್ವೃತಿಃ ಪ್ರಾಣದಾನಾತ್ ಜ್ಞಾನಸಿದ್ಧಿ ರೇವಂ ಸರ್ವಸ್ಥಿರಂ ಭವೇತ್ (ಸಿದ್ಧಾಂತ ೯-೭೯ ಯೋಗಜಾಗಮ)

ಯಥಾಹಂ ಸರ್ವಲೋಕಾನಾಂ ಗುರುರಂಬಿಕಯಾ ಸಹಾ (ಸಿದ್ಧಾಂತ ೧೧-೨೧)

ಕ್ರಿಯಾಶಕ್ತ್ಯಾತ್ಮಕಂ ಪೀಠಂ ಜ್ಞಾನಶಕ್ತ್ಯಾತ್ಮನಂ ಪ್ರಭೋ (ಸಿದ್ಧಾಂತ ೧೧-೩೧)

ಸರ್ವತತ್ತ್ವಮಯಃ ಪ್ರಾಣಃ ಸರ್ವಜ್ಞಾನಮಯಃ ಶಿವಃ ಆನಯೋರ್ಯೋಗ ಮೇವೈ ತತ್ಪ್ರಾಣಲಿಂಗಮಿಹೋಚ್ಯತೇ (ಸಿದ್ಧಾಂತ ೧೨-೨ ವೀರಾಗಮ)

ಅಹಃಏಕೋ ನಮೇಕಶ್ಚಿಮನ್ಯಸ್ಯ ನತಂ ಪಶ್ಯಾಮಿ ಯಸ್ಯಾಹಂ ನ ತಂ ಪಶ್ಯಾಮಿಯೋ ಮಯ್ಯೈ (ಸಿದ್ಧಾಂತ ೧೪-೮ ದೇವೀಕಾಲೋತ್ತರ)

ಪ್ರಾಣಾರೂಢೋ ಭವೇಜ್ಜೀವಃ (ಸಿದ್ಧಾಂತ ೧೨-೨೪ ಆಗಮವಚನ)

ದೀಯತೇ ಚ ಯಯಾ ಜ್ಞಾನಂ ಕ್ಷೀಯತೇ ಚ ಮಲತ್ರಯಮ್ ಸಾ ದೀಕ್ಷಾ ಸಂಜ್ಞಿತಾ ತಸ್ಯಾಂ ಗುರುದೀಕ್ಷಾ ಗುರುರ್ಮತಃ (ಸಿದ್ಧಾಂತ ೧೫-೬ ವಾತುಲೋತ್ತರಾಗಮ)

ಜ್ಞಾನಾನ್ಮುಕ್ತಿಂ ದಿಶತಿ ಯೋ ಸ ದೇಶಿಕ ಇತಿ ಸ್ಮೃತಃ (ಸಿದ್ಧಾಂತ ೧೫-೧೦- ಕಾಮಿಕಾಗಮ)

ಬೋಧ್ಯಬೋಧಕಭಾವೇನ ಜ್ಞಾನದ್ವಾರೇಣ ಶಾಸ್ಯತೇ ಶಿಷ್ಯೋ ನಿಯುಕ್ತಾ ಗುರುಣಾರೇಕ್ಷ ಗುರುಚ್ಯತೇ (ಸಿದ್ಧಾಂತ ೧೫-೧೧ ವಾತುಲೋತ್ತರ)

ಯೇನೋಪದಿಶ್ಯತೇ ಮುಮುಕ್ಷುರ್ಮೋಕ್ಷಸಿದ್ಧ್ಯರ್ಥಂ ಜ್ಞಾನಗುರುರುಚ್ಯತೇ (ಸಿದ್ಧಾಂತ ೧೫-೨೧ ವಾತುಲೋತ್ತರ)

ನಿಷ್ಕಲಂ ಭಾವಲಿಂಗಂ ಸ್ಯಾದ್ಭಾವ್ಯಗ್ರಾಹ್ಯಂ ಪರಾತ್ಪರಮ್ (ಸಿದ್ಧಾಂತ ೧೫-೩೭ ವಾತುಲೋತ್ತರ)

ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿ ಲಿಂಗಂ ತದುಚ್ಯತೇ ಭಾವನಾತೀತಮವ್ಯಕ್ತಂ ಪರಂ ಬ್ರಹ್ಮ ಶಿವಾಭಿಧಮ್ (ಸಿದ್ಧಾಂತ ೧೫-೪೫ ವಾತುಲೋತ್ತರ)

ಪ್ರಾಣಲಿಂಗಪರಿಜ್ಞಾನಾನಂದಸ್ಯ ಶಿವಲಾಂಛನಃ ಬಾಹ್ಯಕರ್ಮಪರಿತ್ಯಾಗೀ ಸ ಸ್ವಯಂ ಲಿಂಗಮುಚ್ಯತೇ (ಸಿದ್ಧಾಂತ ೧೫-೫೨ ವಾತುಲೋತ್ತರ)

ಅಹಂ ಮಮ ಶೂನ್ಯತ್ವಾನ್ನಿಜ ಬೋಧೈಕರೂಪದೃಕ್ ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಸ್ಮೃತಃ (ಸಿದ್ಧಾಂತ ೧೫-೫೯ ವಾತುಲೋತ್ತರ)

ಆಪಾತತೋ ವರ್ಣಾಶ್ರಮತ್ವೇನ ಪರಃ ಸ್ಮೃತಃ (ಸಿದ್ಧಾಂತ ೧೫-೬೫ ವಾತುಲೋತ್ತರ)

ಶಿವಭಾವಾನುಸಂಧಾನಾಚ್ಛಿವೋ ಭಾವೇ ಪ್ರಕಾಶತೇ (ಸಿದ್ಧಾಂತ ೧೬-೧೫ ಯೋಗಜಾಗಮ)

ಭ್ರಮದ್ಭ್ರಮರಚಿಂತಾಯಾಂ ಕೀಟೋಪಿ ಭ್ರಮರಾಯತೇ ಶಿವಚಿಂತಾ ಸಮಾಕ್ರಾಂತೋ ಶಿವರೂಪೇಭವೇದ್ಧ್ರುವ (ಸಿದ್ಧಾಂತ ೧೬-೨೧ ವೀರಾಗಮ)

ವೈರಾಗ್ಯೇಣ ವಪುಸ್ತ್ಯಾಗೋ ನೈವ ಕಾರ್ಯೋ ಮನೀಷಿಭಿಃ (ಸಿದ್ಧಾಂತ ೧೬-೪೧ ದೇವೀಕಾಲೋತ್ತರ)

ಜ್ಯೋತಿರೂಪಂ ಶಿವಂ ಪೂರ್ಣಂ ವಿಶ್ವತೇಜೋ ನಿವರ್ತಕಂ (ಸಿದ್ಧಾಂತ ೧೬-೬೭ ಕಾಮಿಕಾಗಮ)

ಯದಾ ಶಿವಾಯ ಸ್ವಾತ್ಮಾನುರತವಾನ್ ದೇಶಿಕಾತ್ಮನೇ ತದಾ ಶೈವೋ ಭವೇದ್ದೇವಿ ನ ತತೋಸ್ತೇಷು ಪುನರ್ಭವಃ (ಸಿದ್ಧಾಂತ ೧೭-೩೩ ಯೋಗಜಾಗಮ)

ತಸ್ಮಾತ್ಪ್ರಪಂಚ ಸಂಬಂಧ ಭಾವಂ ಹಿತ್ವಾ ಶಿವಾತ್ಮಕಮ್ ಭಾವಮಾಶ್ರಿತ್ಯ ಯತ್ನೇನ ಕುರ್ಯಾದ್ವ್ಯಾಪ್ಯತಿಮಿಶ್ವರೇ (ಸಿದ್ಧಾಂತ ೭-೪೯ ಯೋಗಜಾಗಮ)

ಯಥಾ ಸಿದ್ಧರಸಸ್ಪರ್ಶಾತ್ತಾಮ್ರಂ ಭವತಿ ಕಾಂಚನಮ್ ಗುರೂಪದಿಷ್ಟ ಶ್ರವಣಾತ್ ಶಿಷ್ಯಸ್ತತ್ವಮಯಸ್ತಥಾ (ಸಿದ್ಧಾಂತ ೧೭-೫೭ ಯೋಗಜಾಗಮ)

ತಸ್ಮಾದುಪಾಶ್ರಿತಾತ್ಸಹಜಂ ಪ್ರಾಪ್ಯ ಸದ್ಗುರೋಃ ಅನಾಯಾಸೇನ ಸತತಮಾತ್ಮಾಭ್ಯಾಸರತೋ ಭವೇತ್ (ಸಿದ್ಧಾಂತ ೧೭-೬೭ ಯೋಗಜಾಗಮ)

ಕಲಾಸದೃಶಂ ಜ್ಞೇಯಾ ಸ್ವಾಂತರ್ಲೀನ ಚರಾಚರಂ (ಸಿದ್ಧಾಂತ ೧೮-೧೧ ಆಗಮೋಕ್ತಿ)

ವೇದಿತವ್ಯಂ ನ ಕಿಂಚನ (ಸಿದ್ಧಾಂತ ೧೮-೫೬ ಆಗಮವಾಕ್ಯ)

ಆಶ್ರಯೋ ದ್ವಂದಮಿತ್ಯುಕ್ತಂ ದ್ವಂದ್ವತ್ಯಾಗಾತ್ಪರೋ ದಮಃ ಜೀವನ್ಮುಕ್ತಃ ಸದಾ ಯೋಗೀ ದೇಹತ್ಯಾಗಾದ್ವಿಮುಚ್ಯತೇ (ಸಿದ್ಧಾಂತ ೧೮-೩೮ ದೇವೀಕಾಲೋತ್ತರ ಆಗಮ)

ಅಂತ್ಯಃ ಶರೀರ ಏವಾಯಂ ಬಾಹ್ಯ ಏವ ನ ಸಂಸ್ಥಿತಿಃ ಮಹಾನಂದಪ್ರಸಾದೋಽಯಂ ಸರ್ವತ್ರ್ಯೈ ವಾವಭಾಸತೇ (ಸಿದ್ಧಾಂತ ೧೯-೭೭ ಸರ್ವಜ್ಞಾನೋತ್ತರಾಗಮ)

ಅಸ್ಮಾತ್ತತ್ಥಿತತ್ವಂ ಚಾಪರ ಸಂಸ್ಥಾ ನಿರೋಧಕಾತ್ ದೀಕ್ಷೈ ನಂ ಮೋಚಯೇತ್ಪೂರ್ವಂ ಶೈವಂ ಧಾಮ ನ ಯತ್ಯ ಪಿ (ಸಿದ್ಧಾಂತ ೧೯-೫ ಸ್ವಾಯಂಭು ಆಗಮ)

ಅದ್ವೈ ತಭಕ್ತಿಯುಕ್ತಸ್ಯ ಯೋಗಿನಃ ಸಕಲಾ ಕ್ರಿಯಾ ಅಸ್ತಿ ದಗ್ಧಪಟನ್ಯಾಯಾತ್ಕಿ ಯಾ ಮಾತ್ರಾ ಹಿನ ಕ್ರಿಯಾ (ಸಿದ್ಧಾಂತ ೧೯-೨೯ ವೀರತಂತ್ರಾಗಮ)

ಚಿರೇಣ ಸಾಧ್ಯಮಾನಸ್ಯ ಭಾವೈಕ್ಯರ್ವಿಗತಕಲ್ಮಷೈಃ ಸ್ಥಿರಭಾವೋ ಹಿ ಭಾವಸ್ಯ ಭಾವನಿಷ್ಪತ್ತಿರುಚ್ಯತೇ (ಸಿದ್ಧಾಂತ ೧೯-೩೭ ಕಿರಣಾಗಮ)

ಮೋಕ್ಷಪ್ರದಂ ಚೈ ಹಿತಾ ಸೌಖ್ಯದಂ ಚ ಸರ್ವೋತ್ತರಂ ಶಾಂಕರಕರ್ಮ ಸತ್ಯಂ (ಸಿದ್ಧಾಂತ ೧೯-೭೭ ಯೋಗಜಾಗಮ)

ಜ್ಞಾನ ಕ್ರಿಯಾತ್ಮಿಕಾ ಸಾಪಿ ಸಾ ನಿತ್ಯೋದಿತಪ್ರಭಾ ಅನ್ಯಾಸಾಚ್ಛಿವಾಚ್ಛೈ ವ ವಸ್ತುತೋ ಮೂರ್ತಿರೈಶ್ವರೀ (ಸಿದ್ಧಾಂತ ೧೯-೭೭ ಪೌಷ್ಕರಾಗಮ)

ಶಿವಾದಿ ಸ್ಮರಣಂ ಜ್ಞಾನಂ ಜ್ಞಾನಾತ್ಸತ್ತಾ ಪ್ರಕಾಶತೇ ಸತ್ತಾಯಾನಂದಸಂಪ್ರಾಪ್ತಿರಾ ನಂದಚ್ಚೈ ವ ಸಿದ್ಧಿದಮ್ (ಸಿದ್ಧಾಂತ ೧೯-೯೦ ಯೋಗಜಾಗಮ)

ಜ್ಞಾನೋತ್ಪತ್ತಿ ನಿಮಿತ್ತಂ ತು ಕ್ರಿಯಾಚರ್ಯಾ ಪ್ರಕೀರ್ತಿತಾ ಯೋಗಂ ಸಾಲಂಬನ ತ್ಯಕ್ತ್ವಾ ನಿಷ್ಪ್ರಪಂಚಂ ವಿಚಿಂತಯೇತ್ (ಸಿದ್ಧಾಂತ ೨೦-೬ ಪೌಷ್ಕರಾಗಮ)

ಗ್ರಂಥಿಜನ್ಯ ಕಾಲಾಕಾಲ ವಿದ್ಯಾರಾಗ ನೃಮಾತ್ಸರ ಗುಣಾದಿ ಗರ್ವಚಿತಾಕ್ಷರಮಾತ್ರಾ ಭೂತಾನ್ಯನುಕ್ರಮಾನ್ (ಸಿದ್ಧಾಂತ ೨೦-೧೪ ಮೃಗೇಂದ್ರಾಗಮ)

ವಾಗೀಶ್ವರಿ ಪುರಾವಿದ್ಯಾ ಕುಟಿಲಾ ಕುಂಡಲಿ ಪರಾಶುದ್ಧಮಾಯೇ ಪರೋಭಿದುಃ ಶಬ್ದ ಬ್ರಹ್ಮೇತಿ ಕಥ್ಯತೇ (ಸಿದ್ಧಾಂತ ೨೦-೩೩ ಪೌಷ್ಕರಾಗಮ)

ಯಾ ಸಾ ಮಾಹೇಶ್ವರೀಶಕ್ತಿಃ ಸರ್ವಾನುಗ್ರಾ ಹಕಾ ಶಿವಾಧರ್ಮಾನುವರ್ತನಾದೇವ ಪಾಶ ಇತ್ಯುಪಚರ್ಯತೇ (ಸಿದ್ಧಾಂತ ೨೦-೩೫ ಶಿವಸಂಕಲ್ಪ ಆಗಮ)

ಹಕಾರೋತ್ಥ ಕಲಾರೂಪ (ಸಿದ್ಧಾಂತ ೨೦-೩೯ ಆಗಮ)

ನಿತ್ಯಾ ಪರೋಕ್ಷಂ ಬ್ರಹ್ಮ (ಸಿದ್ಧಾಂತ ೨೦-೩೯ ಆಗಮ)

ವಾಗೀಶ್ವರೀ ಪುರಾವಿದ್ಯಾ ಕುಟಿಲಾಕುಂಡಲಿ ಪರಾಶುದ್ಧಮಾಯೇ ಪರೋ ಭಿದುಃ ಶಬ್ದಬ್ರಹ್ಮೇತಿ ಕಥ್ಯತೇ (ಸಿದ್ಧಾಂತ ೨೦-೩೩ ಪೌಷ್ಕರಾಗಮ)

ಸ್ವಯಂ ಸ್ವಸ್ಯ ಪರೋ ನೈವಾ ನಾಪರಃ ಸ್ವಸ್ಯ ವಿದ್ಯತೇ ಧ್ಯಾರ್ಯೇಽಪಿ ಸಂಲೀನೇ ತಸ್ಮಿನ್ ಜ್ಞೇಯಂ ನ ತಸ್ಯಹಿ (ಸಿದ್ಧಾಂತ ೨೦-೪೮ ಸರ್ವಜ್ಞಾನೋತ್ತರ ಆಗಮ)

ಭಾವಾಭಾವದ್ವಯಾತೀತಂ ಸ್ವಪ್ನ ಜಾಗರಾಸೋತಿಗಮ್ ಮೃತ್ಯುಜೀವನ ನಿರ್ಮುಕ್ತಂ ತತ್ತ್ವಂ ತತ್ತ್ವವಿದೋ ವಿದುಃ (ಸಿದ್ಧಾಂತ ೨೦-೫೫ ಯೋಗಜಾಗಮ)

ಗ್ರಂಥಿಜನ್ಯ ಕಾಲಾಕಾಲ ವಿದ್ಯಾರಾಗ ನ್ಯಮಾತ್ಸರ ಗುಣಾದಿ ಗರ್ವಚಿತಾಕ್ಷರ ಮಾತ್ರಾ ಭೂತಾನ್ಯನುಕ್ರಮಾನ್ (ಸಿದ್ಧಾಂತ ೨೦-೧೪ ಮೃಗೇಂದ್ರಾಗಮ)

ಸರ್ವಶೂನ್ಯಂ ನಿರಾಭಾಸಂ ಸಾಮರಸ್ಯಂ ತಥಾ ಭವೇತ್ ಘೃತೇ ಘೃತಂ ಯಥಾ ನ್ಯಸ್ತಂ ಕ್ಷೀರೇ ಕ್ಷೀರಂ ಯಥೈವ ಚ (ಸಿದ್ಧಾಂತ ೨೦-೬೦ ಸರ್ವಜ್ಞಾನೋತ್ತರಾಗಮ)

ಕೇವಲಂ ಜ್ಞೇಯಮಿತ್ಯುಕ್ತಂ ವೇದಿತವ್ಯಂ ನ ಕಿಂಚನ (ಸಿದ್ಧಾಂತ ೨೦-೬೫ ದೇವೀಕಾಲೋತ್ತರಾಗಮ)

## ರಾಮಾಯಣ

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ (ಸಿದ್ಧಾಂತ ೯-೧೪ ರಾಮಾಯಣ ಯುದ್ಧಕಾಂಡ ಸರ್ಗ ೧೦೭-೧೫೦)

## ವ್ಯಾಸವಚನ

ಲಿಂಗಾಂಕಿತಂ ಪಶ್ಯ ಜಗದ್ಭಗಾಂಕಂ (ಸಿದ್ಧಾಂತ ೫-೩೩ ವ್ಯಾಸ ವಚನ)

ಏತಾವಾನಸ್ಯ ಮಹಿಮಾ (ಸಿದ್ಧಾಂತ ೫-೩೯ಪುರುಷಸೂಕ್ತ)

## ಭಗವದ್ಗೀತೆ

ನಾ ಸತೋ ವಿದ್ಯತೇ ಭಾವಃ (ಸಿದ್ಧಾಂತ ೨-೧೩ ಗೀತೆ ೨-೧೬)

ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ (ಸಿದ್ಧಾಂತ೨-೧೩ ಗೀತೆ ೧೫-೭)

ಅಂಶೋನಾನಾವ್ಯಪದೇಶಾತ್ (ಸಿದ್ಧಾಂತ ೪-೧೩)

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ (ಸಿದ್ಧಾಂತ ೫-೪೦ ಗೀತೆ ೧೪-೩)

ತ್ರೇತಾಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣಪುಣ್ಯೇ ಮರ್ತ್ಯಲೋಕಂ ವಿಂಶತಿ (ಸಿದ್ಧಾಂತ ೫-೬೫)

ಪುರುಷಃ ಪ್ರಕೃತಿಸ್ಥೋ ಗುಣಾನ್ ಹಿ ಭುಙ್ಕ್ತೇ ಪ್ರಕೃತಿಜಾ (ಸಿದ್ಧಾಂತ ೭-೨೫ ಗೀತೆ ೧೩-೨೧)

ತ್ರೈಗುಣ್ಯವಿಷಯಾ ವೇದಾನಿಸ್ತ್ರೈಗುಣ್ಯೋಭವಾರ್ಜುನ (ಸಿದ್ಧಾಂತ ೯-೨೫ ಗೀತೆ ೨-೪೫)

ಅತೋಽಸ್ಮಿಲ್ಲೋಕೇ ವೇದೇ ಚ ಪ್ರಸಿದ್ಧಃ ಪುರುಷೋತ್ತಮಃ (ಸಿದ್ಧಾಂತ ೯-೫೯)

ವಿಷ್ಟಭ್ಯಾಹಮಿದಂ ಕೃತಮೇಕಾಂಶೇನ ಸ್ಥಿತೋಜಗತ್ (ಗೀತೆ ೧೫-೭)

ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ (ಸಿದ್ಧಾಂತ ೧೮-೧೦)

ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮ ಸಾ ಕುರುತೇರ್ಜುನ (ಸಿದ್ಧಾಂತ ೧೯-೩೦)

ಅಕ್ಷರಾಣಾಂ ಅಕಾರೋಽಸ್ಮಿ (ಸಿದ್ಧಾಂತ ೨೦-೩೯ಗೀತೆ ೧೦-೩೩)

ಈಶ್ವರಸ್ಸರ್ವ ಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ತ್ವಮೇವ ಶರಣಂ ಗಚ್ಛ ಸರ್ವಭಾವೇನ ಭಾರತ (ಸಿದ್ಧಾಂತ ಶಿಖಾಮಣಿ ೧೦-೯ ಗೀತೆ ೧೮-೬೧, ೬೨)

## ಸೂತಗೀತೆ

ವಿಶ್ವಾಮ್ಯತಿ ಘೃತ ಕಠಿನ್ಯಾವನ್ಮೂರ್ತಿಃ ಸಚ್ಚಿದಾನಂದಲಕ್ಷಣಾ ಶಿವಾದ್ಭೇದೇನ ನೈವಾಸ್ತಿ ಶಿವ ಏವದೇ ಸದ (ಸಿದ್ಧಾಂತ ೧-೭)

ವೇದಾಂತ ವಾಕ್ಯಜಾ ವಿದ್ಯಾ (ಸಿದ್ಧಾಂತ ೫-೧೮)

ಕುಲಂ ಪವಿತ್ರಂ ಜನನೀ ಕೃತಾರ್ಥಂ (ಸಿದ್ಧಾಂತ ೫-೬೪)

ಭೋಕ್ತಾ ಭೋಗ್ಯಂ ಪ್ರೇರಯಿತಾ ಭೋಗೋಪಕರಣಾನಿ ಚ ಸರ್ವಂ ಶಿವಮಯಂ ಭಾತಿ ಪ್ರಸಾದಾತ್ಪರಮೇಶ್ವರಾತ್ (ಸಿದ್ಧಾಂತ ೫-೭೨)

ಅಹಂ ಶಬ್ದಸ್ಯ ರೂಢತ್ವಾಲ್ಲೋಕೇ ಜೀವಾತ್ಮವಸ್ತುನಿ (ಸಿದ್ಧಾಂತ ೧೨-೨೨)

ಸತ್ವಾಸ್ಸುಖಂ ಜ್ಞಾನಂ ಚ ವೈರಾಗ್ಯ ಸೋಖ್ಯಮೇವ ಚಾರುಃ ಖಪ್ರವೃತ್ತಿ ರಾಗೌ ಚಿತಾಹಿತ್ಯಂ ರಜಸೋ ಭವೇತ್ ಮೋಹೋ ಭ್ರಾಂತಿಸ್ತಥಾಲಸ್ಯಂ ಕಾಷ್ಠಂ ಚ ತಮಸೋ ಭವೇತ್ (ಸಿದ್ಧಾಂತ ೧೩-೧೪)

## ಪುರಾಣಗಳು

ಪ್ರಜಾ ಸೃಜೇ ನಿರ್ದಿಷ್ಟಶ್ಚಂದ್ರಮೌಲಿರ್ವಿರಿಂಚಿನಾ ಸಸರ್ಜ ಮನಸಾ ರುದ್ರಾತ್ಮನಾ ತುಲ್ಯಾನ್ಮಹೇಶ್ವರಾನ್ ನೀಲಕಂಠಾನ್ ತ್ರಿಣೇತ್ರಾಂಶ ಜಟಾಮಕುಟ ಮಂಡಿತಾನ್ (ಸಿದ್ಧಾಂತ ೨-೨೬ ಆದಿತ್ಯ ಪುರಾಣ)

ದೇವತಿರ್ಯಗ್ಜ್ಞಾನುಷ್ಯಾದಿ ಜಾತಿ ಭೇದ ವ್ಯವಸ್ಥಿತಃ ದೇವಾಃ ಷೋಡಶಲಕ್ಷಾಣಿ ನವಲಕ್ಷಾಣಿ ಮಾನುಷಾಃ ದಶಭಿರ್ದಭಿಸ್ತದ್ವಜ ಜಲಜಾ ವಿಹಂಗಮಗಾಃ ಸರೀಸೃಪಾಸ್ತು

ಲಕ್ಷಾಣಿ ಏಕಾದಶ ಚರೇತರಾಃ ಅಷ್ಟಾ ಚ ದಶ ಲಕ್ಷಾಣಿಸಪ್ತಜನಾನಿ ಮೂನಿವೈಃ ದೇವಾಃ (ಸಿದ್ಧಾಂತ ೫-೩೫ ಸ್ಕಾಂದಪುರಾಣ)

ವಿದ್ಯಾಸು ಶ್ರುತಿರುತ್ಕೃಷ್ಟಾಕ್ಷರ ರುದ್ರೈಕಾದಶ ಹಿ ಶ್ರುತೌ ತತ್ರೌ ಪಂಚಾಕ್ಷರೀ ತಸ್ಯಾಂ ಶಿವ ಇತ್ಯಕ್ಷರ (ಸಿದ್ಧಾಂತ ೮-೨ ಶಿವಪುರಾಣ)

ನ ವಜ್ರ ಚಕ್ರಾಂಕ ಸರೋರುಹಂ ಲಿಂಗಾಂಕಿತಂ ಪಶ್ಯ ಜಗದ್ಭಾಂಕಂ ಜ್ಞಾನ ಕರ್ಮೇಂದ್ರಿಯೈರ್ವಿಶ್ವಂ ಚಿತ್ಕ್ರಿಯಾ ಲಿಂಗರೂಪತಂ (ಸಿದ್ಧಾಂತ ೧೧-೩೧ ಸ್ಕಾಂದಪುರಾಣ)

ಯಾದುಃ ಕುಂಡಲಿನೀಶಕ್ತಿಮಾಯಾಕರ್ಮಾನುಸಾರಿಣೀ ನಾದಬಿಂದ್ವಾದಿಕ ಕಾರ್ಯಂ ತಸ್ಯಾ ಜಗತ ಸ್ಥಿತಿಃ (ಸಿದ್ಧಾಂತ ೨೦-೨೯ ವಿಶ್ವಸಾರೋತ್ತರ ಪುರಾಣ)

ಅನಂತಕಲ್ಯಾಣಗುಣೈಕನಿಧಿರೀಶ್ವರಃ ಶಿವಃ ಇತ್ಯುಚ್ಯತೇ ಸದ್ಭಿಃ ಶಿವತತ್ತ್ವಾರ್ಥ ವೇದಿಭಿಃ (ಸಿದ್ಧಾಂತ ೫-೩೫)

ಬಾಣಾದಿಲಿಂಗೇ ಸ್ವಯಂಭೂತೇ ಚಂದ್ರಕಾಂತೇ ಹೃದಿಸ್ಥಿತೇ ಸಾಲಗ್ರಾಮ ಶಿಲೋದ್ಭೂತೇ ಶಂಭೋರ್ನೈವೇದ್ಯ ಭಕ್ಷಣಂ (ಸಿದ್ಧಾಂತ ೬-೭೧)

ನಾ ಶಿವಸ್ಯ ಶಿವೋಪಾಸ್ತಿಃ ಶಿವಾ ರುದ್ರೋ ರುದ್ರಮರ್ಚಯೇತ್ (ಸಿದ್ಧಾಂತ ೧೧-೫೫)

ಮಾಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರ ಮಾತ್ರೋಪದೇಶಿನೀ (ಸಿದ್ಧಾಂತ ೧೭-೧೪)

ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ ಇಂದ್ರಿಯಾಣಾಂ ಮನೋನಾಥೋ ಮನೋನಾಥಸ್ತು ಮಾರುತಃ (ಸಿದ್ಧಾಂತ ೧೭-೧೯)

ದೃಷ್ಟಿ ಸ್ಥಿರಾ ಯಸ್ಯ ವಿನೈವ ದೃಶಂ ವಾಯುಸ್ಥಿರೋ ಯಸ್ಯ ವಿನಾ ಪ್ರಯತ್ನಂ ಚಿತ್ತಂ ಸ್ಥಿರಂ ಯಸ್ಯ ವಿನಾವಲಂಬಂ ಸ ಏವ ಯೋಗಿಸ್ಸಗುರುಸ್ಯ ಸೇವಾಃ (ಸಿದ್ಧಾಂತ ೧೭-೮೦)

ಪೂರ್ವಂ ಜಗತ್ಸರ್ವಂ ಪ್ರಲಯೇ ಪರಮೇಶ್ವರ ಮಾಯಾ ಭಿನ್ನೇ ಸ್ವ ಮಾಯಾಖ್ಯ ಕಾರಣಾ ಭೇದ ರೂಪಕಂ ವರ್ತತೇ ವಾಸನಾ ರೂಪಿಣ್ಯೇವ ನಾಭಾವರೂಪತಃ (ಸಿದ್ಧಾಂತ ೧೮-೧೧)

ಜ್ಞಾನಮಾಭಾತಿ ವಿಮಲಂ ಸರ್ವದಾ ಸರ್ವವಸ್ತುಷು (ಸಿದ್ಧಾಂತ ೧೯-೧೯)

ನಾಧ್ಯಕ್ಷ ನಾ ಪಿತಲ್ಲೈಂಗಂ ನ ಶಾಬ್ದಮಪಿ ಶಾಂಕರಂಜ್ಞಾನಮಾಭಾತಿ ವಿಮಲಂ ಸರ್ವದಾ ಸರ್ವವಸ್ತುಷು (ಸಿದ್ಧಾಂತ ೧೯-೧೯)

ಶ್ರೀರುದ್ರ

ಉತ್ತೈನಂ ಗೋಪಾ ಅದೃಶನ್ (ಸಿದ್ಧಾಂತ ೫-೩೪ ಶ್ರೀರುದ್ರ ಪ್ರಥಮೋನುವಾಕ-೭)

ಶಿವರಹಸ್ಯ ವಚನ

ಯದ್ಯದಾತ್ಮಹಿತಂ ವಸ್ತು ತತ್ತದ್ವಸ್ತು ಶಿವಾರ್ಪಿತಮ್ (ಸಿದ್ಧಾಂತ ೧೧-೧೦)

ತದ್ಧ್ಯಾನಂ ಸದ್ಗುರೋರ್ಜ್ಞೇಯಂ ನಾನ್ಯಥಾ ಶಾಸ್ತ್ರಕೋಟಿಭಿಃ (ಸಿದ್ಧಾಂತ ೧೧-೨೮)

ಗುರವಃ ಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ ಶಿಷ್ಯಹೃತ್ತಾಪಹಾರಸ್ತು ಗುರುರೇಕೋsಪಿ ದುರ್ಲಭಃ (ಸಿದ್ಧಾಂತ ೧೩-೨೬)

ಯಥಾ ರವಿಸ್ಸರ್ವರಸಾನ್ ಪ್ರಭುಕ್ತೇ ಹುತಾನಶ್ಚಾಪಿ ಹಿ ಸರ್ವಭಕ್ಷಕಃ ತಥೈವ ಯೋಗೀ ವಿಷಯಾನ್ ಪ್ರಭುಂಕ್ತೇ ನ ಲಿಪ್ಯತೇ ಕರ್ಮ ಶುಭಾಶುಭೈಶ್ಚ (ಸಿದ್ಧಾಂತ ೧೪-೧೫)

ನ ಕ್ರಿಯಾರಹಿತಂ ಜ್ಞಾನಂ ನ ಜ್ಞಾನರಹಿತಾಕ್ರಿಯಾ ಅಪಶ್ಯನ್ನಂಧಕೋ ದಗ್ಧೋ ಗಚ್ಛನ್ನಂಗುಶ್ಚ ದಹ್ಯತೇ (ಸಿದ್ಧಾಂತ ೧೬-೧೦)

ತತ್ತ್ವಪ್ರಕಾಶ ವಚನ

ಶಕ್ತೋ ಯಯಾ ಸ ಶಂಭುರ್ಭೋಕ್ತಾ ಮುಕ್ತಶ್ಚ ಪಶುಗಣಾಸ್ಯಾಸ್ಯ (ಸಿದ್ಧಾಂತ ೧-೯)

ವಾಸಿಷ್ಠವಚನ

ವಿಕಲ್ಪರಹಿತಂ ಜ್ಞಾನಂ ನಿಷೇಧರಹಿತಾ ಕ್ರಿಯಾ ಆಲೋಕ ರಂಜಕಂ ರೂಪಂ ಜೀವನ್ಮುಕ್ತಸ್ಯ ಲಕ್ಷಣ (ಸಿದ್ಧಾಂತ ೧೩-೨೬)

ಶಂಕರಾಚಾರ್ಯವಚನ

ಅಹಂ ಬ್ರಹ್ಮಾಸ್ಮಿ (ಸಿದ್ಧಾಂತ ೫-೪೯)

ಏವಂ ಜೀವಾಃ (ಸಿದ್ಧಾಂತ ೫-೪೯)

ಅಪರಾಧಕ್ಷಮಾಪನ ಸ್ತೋತ್ರ

ಆತ್ಮಾ ತ್ವಂ ಗಿರಿಜಾ ಮತಿಃ ಸಹಚರಾಃ ಪ್ರಾಣಾಃ ಶರೀರಂ ಗೃಹಂ ಪೂಜಾ ತೇ ವಿಷಯೋsಪಿ ಭೋಗರಚನಾ ನಿದ್ರಾ ಸಮಾಧಿಸ್ಥಿತಿಃ ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾಗಿರೌ ಯದ್ಯತ್ಕರ್ಮಕರೋಮಿ ತತ್ತದಖಿಲಂ ಶಂಭೋ ತವಾರಾಧನಂ (ಸಿದ್ಧಾಂತ ೧೪-೨೩ಅಪರಾಧಕ್ಷಮಾಪನ ಸ್ತೋತ್ರ-೧)

ಶಂಕರ ಸಂಹಿತೆ

ಪ್ರಾಣ ರೂಪ ಇಹ ಜೀವಮುಚ್ಯತೇ ಲಿಂಗರೂಪ ಇತಿ ಶಂಕರಸ್ಮೃತಃ ಯಸ್ತದೈಕ್ಯ ಮಿತಿ ವೇದಿಕಾನೋ ಯೋಃ ಪ್ರಾಣಲಿಂಗಾದಸೌ ಶಿವಯೋಗೀ (ಸಿದ್ಧಾಂತ ೧೨-೩೩)

ಸತೀ ಚಾಹಂ ಪತಿರ್ಲಿಂಗಂ ಹೃದಿಯುಕ್ತಃ ಸ್ವಯಂಪ್ರಭುಃ ಪ್ರಾಪಂಚಿಕ ಸುಖಂ ನಾಸ್ತಿ ಶರಣಸ್ಥಲಮುತ್ತಮಮ್ (ಸಿದ್ಧಾಂತ೧೩-೪)

## ಲಿಂಗಸೂತ್ರ

ವರಾ ವಿಷ್ಣುರ್ನಿಮಮಾಜ್ಯಭೂಮ್ ಬ್ರಹ್ಮತ್ವ ಪಾತದಿವಮಾಶು ಹೃದಃ (ಸಿದ್ಧಾಂತ ೧೧-೨೮)

ತಚ್ಛಕ್ತಿರೂಪೋ ಮೇ (ಸಿದ್ಧಾಂತ ೧೨-೨)

## ಶ್ರೀಮದ್ವಿರೂಪಾಕ್ಷ ಪಂಚಾಶಿಕಾಶಾಸ್ತ್ರ

ಪ್ರತ್ಯವಮರ್ಶಾತ್ಮಾ ಸಾ ಚಿತಿಃ ಸರಸಾವಾಹಿನಿ ಪರಾವಾಗ್ಯ ಆದ್ಯಂತ ಪ್ರತ್ಯಾಹತ ವರ್ಗಗಣಾ ಸತ್ಯ ಹಂತಾ ಸಾ (ಸಿದ್ಧಾಂತ ೧೪-೩೮)

ಧೂಮವತ್ಯಾಂ ಪೃಥಿವ್ಯಾಂ ಹ್ಲಾದಾಪ್ಸು ಶುಚೌ ತು ಭಾಸ್ವತಿ ಪ್ರಥತೇ ವಾಯೌ ಸ್ಪಂದಾ ವಿಭ್ವಿನ್ನಭಸಿ ವ್ಯಾಪ್ತಂ ಜಗತಾಭಿಃ ಧೂಮವತ್ಯಾಂ ತಿರೋಧೌ ಭಾಸ್ವತ್ಯವ ಭಾಸನೇಧ್ವನಾಂ ಶಕ್ತಿಃ ಕ್ಷೋಭೇ ಸ್ಪಂದಾ ವ್ಯಾಪ್ತೌ ವಿಭ್ವೀ ಹ್ಲಾದಾ ಚ ಪುಷ್ಟೌ ಸ್ಯಾತ್ (ಸಿದ್ಧಾಂತ ೧೮-೩೬)

## ವಿಶ್ವಾಸಕಾರಿಕಾ

ಯಥಾ ವಾಯುಸ್ಸುಶೀಘ್ರೋ ಅಯೀ ಮುಕ್ತೋ ಶಂ ನ ಗಚ್ಛತಿ (ಸಿದ್ಧಾಂತ ೧೪-೨೧)

ಯಥಾ ಮನಃ ಪರೇ ತತ್ತ್ವೇ ಲಬ್ಧಲಕ್ಷ್ಯೇ ವಿಲೀಯತೇ ತಥಾಹ್ಯಶೇಷ ವಿಜ್ಞಾನಂ ವಿನಾಶಮುಪಗಚ್ಛತಿ (ಸಿದ್ಧಾಂತ ೧೯-೪೪) ಅನಾಭ್ಯೇತು ನಿರಾಲಂ ಜಿಹ್ವಾ ಗ್ರಾಹ್ಯೇ ಮಾನವರ್ಜಿತೇ ನಿಸ್ತತ್ತ್ವೇ ಯೋ ಜಿತೋ ಮುಕ್ತ ಇತಿ ಶಾಸ್ತ್ರಸ್ಯ ನಿಶ್ಚಯಃ (ಸಿದ್ಧಾಂತ ೨೦-೬೯)

## ಶಿವಾದ್ವೈತಶಾಸ್ತ್ರ

ಕಾಯ ವಾಙ್ಮಾನಸ ರೂಪ ಪೂಜಾ ತಪೋ ಜಪಾದ್ಯಾಜ್ಞಾನರೂಪ (ಸಿದ್ಧಾಂತ ೯-೨೫)

ಯಥಾ ನೃಪಃ ಸಾರ್ವಭೌಮಃ ಪ್ರಭಾವ ಮೋದ ಬೃಂಹಿತಃ ಕ್ರೀಡನ್ನರೋತಿಪದಾತಿ ಧರ್ಮಾಸ್ತ ಧರ್ಮ ಧರ್ಮಿತಃ (ಸಿದ್ಧಾಂತ ೧೮-೧೧)

ನ ಕಿಂಚಿದವೇದಿಷತ್ ಸ್ಫುಟತರ ಭಾಸಮಾನಾನಿಲ ಸುಖಾದಿ ಪ್ರಮಾತ್ರನ್ವೇಷಣ ದ್ವಾರಾ ಪಾರಮಾರ್ಥಿಕ ಪ್ರಮಾತೃಲಾಭ ಇಹೋಪದಿಷ್ಯತಿ (ಸಿದ್ಧಾಂತ ೧೫-೨೨)

## ತ್ರಿಂಶಿಕಾಶಾಸ್ತ್ರ

ಯಥಾನ್ಯಗೋತ್ರ ಬೀಜಸ್ಥಃ ಶಕ್ತಿರೂಪೋ ಮಹಾದ್ರುಮಃ ತಥಾ ಹೃದಯ ಬೀಜಸ್ಥಂ ಜಗದೇಕ ಚರಾಚರಮ್ (ಸಿದ್ಧಾಂತ ೨೦-೫೧)

ಪರಾ ಹಂತಾ ಮಾಯೋರ್ಧ್ವಮಾಯಾ (ಸಿದ್ಧಾಂತ ೨೦-೩೩)

ಯೋಗಶಾಸ್ತ್ರ

ಹೃದಯಕಮಲ ಮಧ್ಯೇ ದೀಪವದ್ವೇದಸಾರಂ ಪ್ರಣವ ಮಾಯಮತರ್ಕ್ಯಂ ಯೋಗಿಭಿ ರ್ಧ್ಯಾನಗಮ್ಯಂ (ಸಿದ್ಧಾಂತ ೧೫-೪೨)

ಅಮರಕೋಶ

ವಿಕಾರೋ ಮಾನಸೋ ಭಾವಃ (ಸಿದ್ಧಾಂತ ೧೭-೫೦ ಅಮರ ೧-೨೫೯)

ಚಿತ್ತಂ ತು ಚೇತೋ ಹೃದಯಂ (ಸಿದ್ಧಾಂತ ೧೯-೬೩ ಅಮರ ೧-೧೫೫)

ಸಲಿಲಂ ಕಮಲಂಜಲಂ (ಸಿದ್ಧಾಂತ ೧೯-೬೩ಅಮರ ೧-೨೫೯)

ಅಭಿಯುಕ್ತೋಕ್ತಿ

ಜ್ಞಾನಂ ಪ್ರಧಾನಂ ನ ತು ಕರ್ಮಹೀನಂ ಕರ್ಮಪ್ರಧಾನಂ ನ ತು ಚಿದ್ವಿಹೀನಂ ತಸ್ಮಾದ್ವಯೋರೇವ ಭವೇತ್ಸಿದ್ಧಿರ್ನಹ್ಯೇಕ ಪಕ್ಷೋ ವಿಹಗಃ ಪ್ರಯಾತಿ (ಸಿದ್ಧಾಂತ ೧೬-೧೨)

ಮಹಿಮ್ನಸ್ತೋತ್ರ

ತ್ರಯಿ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ ಪ್ರಭಿನ್ನೇ ಪ್ರಸ್ಥಾನೇ (ಸಿದ್ಧಾಂತ ೫-೪ ಮಹಿಮ್ನಸ್ತೋತ್ರ-೭)

ಶಿವಧರ್ಮವಚನ

ಭವೇತ್ಪ್ರಾಣ ಪರಿತ್ಯಾಗಶ್ಛೇದನಂ ಶಿರಸೋಪಿ ವಾ ನತ್ವಾನಭ್ಯರ್ಚ ಭುಂಜೀಯಾದ್ಭ ಗವಂತಂ ತ್ರಿಯಂಬಕಮ್ (ಸಿದ್ಧಾಂತ ೧೦-೨೧)

ಯೋಗಸೂತ್ರ

ಚಿತ್ತವೃತ್ತಿ ನಿರೋಧೋ ಯೋಗಃ (ಸಿದ್ಧಾಂತ ೧೨-೨೧)

ಪರಾತಂತ್ರವಚನ

ಜ್ಞಾನ ಮೇ ತಚ್ಛೈವ ಸಂಸ್ಥಮ್ (ಸಿದ್ಧಾಂತ ೧೬-೨೪)

ಇತರೆ

ಅಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಮುಪಜೀವಂತಿ (ಸಿದ್ಧಾಂತ ೧-೪)

ಸ್ಥಿರೇ ಭಾರಂಗ್ರೈ ಪುರುರೂಪಮಗ್ರಃ (ಸಿದ್ಧಾಂತ ೧-೬)

ತಸ್ಮೈ ಮಹೇಶ್ವರಾಯ ತಮೀಶ್ವರಾಣಾಂ ಪರಮಂ ಮಹೇಶ್ವರಂ(ಸಿದ್ಧಾಂತ ೧-೭)

ಶ್ರುತಿ ಸತೋ ಭಾವಸ್ಸತಾ (ಸಿದ್ಧಾಂತ ೨-೧೨)

ಐಕ್ಷತಲೋಕಾ ನ ಸೃಜತ ಧಾರಾ ಯಥಾ ಪೂರ್ವಮಕಲ್ಪಯತ್ (ಸಿದ್ಧಾಂತ ೨-೧೪)

ಯಸ್ಯ ನಿಶ್ವಸಿತ ವೇದಾ (ಸಿದ್ಧಾಂತ ೫-೪)

ತದೀಯ ಪರಮಾಶಕ್ತಿಸ್ಸಚ್ಚಿದಾನಂದ ಲಕ್ಷಣಾ ಸಮಸ್ತಲೋಕ ನಿರ್ಮಾಣ ಸಮವಾಯ ಸ್ವರೂಪಿಣೀ (ಸಿದ್ಧಾಂತ ೪-೫೧)

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವಮಸ್ತು ಪ್ರಕಾಶಿನೀ ತಥಾ ಶಕ್ತಿಃ ವಿಮರ್ಶಾತ್ಮಾ ಪ್ರಕಾರೇ ಬ್ರಹ್ಮಣಿ ಸ್ಥಿತಾ (ಸಿದ್ಧಾಂತ ೫-೪೧)

ಭೋಜ್ಯಮಿತ್ಯಭಿಧೀಯತೇ (ಸಿದ್ಧಾಂತ ೫-೪೧)

ತದಸ್ಯ ತೃತೀಯಜನ್ಮ (ಸಿದ್ಧಾಂತ ೫-೫೫, ೫-೫೯)

ಅಹಂ ಪ್ರತ್ಯಯ ವೇದ್ಯತ್ವಾತ್ (ಸಿದ್ಧಾಂತ ೫-೬೦)

ಭೂತ್ಯೈ ನ ಪ್ರಮದಿತವ್ಯ (ಸಿದ್ಧಾಂತ ೭-೧)

ಭಸ್ಮಜ್ಯೋತಿರ್ಲಿಂಗಮಯೋ (ಸಿದ್ಧಾಂತ ೭-೨)

ಅಜಾಯಿತ್ಯೇವ ಧ್ಯಾಯಿತೇಶಾನಾಂ ಪದ್ಯಾಯಿತವ್ಯ ಸರ್ವಮಿದಂ ಬ್ರಹ್ಮ ವಿಷ್ಣು ರುದ್ರೇಂದ್ರಾಸ್ತಿ ಸಂಪ್ರಸೂ (ಸಿದ್ಧಾಂತ ೭-೩ ಶ್ರುತಿ)

ಯದ್ಧಿ ಮನಸಾ ಧ್ಯಾಯತೀ ತದ್ವಾಚಾ ವದತಿ ತತ್ಕರ್ಮಣಾ ಕರೋತಿ (ಸಿದ್ಧಾಂತ ೯-೧೫ ಶ್ರುತಿ ೧೧-೪೪ ಶ್ರುತಿ)

ಬ್ರಹ್ಮವಿದ್ಬ್ರಹ್ಮೇವ ಭವತಿ (ಸಿದ್ಧಾಂತ ೯-೯೨ ಶ್ರುತಿ)

ತತ್ಸಮಶ್ಚಾಭ್ಯಧಿಕಸ್ಸದೃಶ್ಯತೇ (ಸಿದ್ಧಾಂತ ೧೦-೮ ಶ್ರುತಿ)

ತವ ಶ್ರಿಯ ಮರುತೋಮರ್ಜಮಂಯಂತ ರುದ್ರಯಿತ್ತೇಜನಿಮ ಚಾರು ಚಿತ್ತಪದಂ ಯದ್ವಿಷ್ಣೋ ರುಪಮಂ ನಿಧಾಯಿ (ಸಿದ್ಧಾಂತ ೧೧-೩೨)

ಅಸ್ಮದ್ರೂಪಾತ್ಮ ತತ್ತ್ವಾಭಿನ್ನ (ಸಿದ್ಧಾಂತ ೧೧-೩೫ ಶ್ರುತಿ)

ಅಕಾರಃ ಶಿವ ಆಖ್ಯಾತಂ ಹಕಾರಃ ಶಕ್ತಿರುಚ್ಯತೇ (ಸಿದ್ಧಾಂತ ೧೨-೨೩)

ನಿತ್ಯಯಾವಾಚ (ಸಿದ್ಧಾಂತ ೧೩-೨೫ ಶ್ರುತಿ)

ಸರ್ವಜ್ಞತ್ವಂ ಕಿಂಚಿಜ್ಞತ್ವಂ ಮಾಯಾಕಾರ್ಯಕೋಟಿ ಪ್ರದಿಷ್ಟ (ಸಿದ್ಧಾಂತ ೧೪-೨)

ದೇಶಿಕಂ ಅಧ್ವನಾಮಧ್ವಪತೇ ಶ್ರೇಷ್ಠಸ್ವಾಧ್ವನಃ ಪಾರಾಮಶೀಯ (ಸಿದ್ಧಾಂತ ೧೫-೧೦ ಶ್ರುತಿ)

ಆಚಾರ್ಯಃ ಪೂರ್ವರೂಪಮ್ಅಂತೇವಾಸ್ಯುತ್ತರರೂಪಮ್ ವಿದ್ಯಾಸಂಧಿಃ ಆಚಾರ್ಯಾಂತೇ ವಾಸಿನಮನುಶಾಸ್ತಿ (ಸಿದ್ಧಾಂತ ೧೫-೧೩ ಶ್ರುತಿ)

ಸ್ವಸ್ವರಾಟ್ ಚ ಮಠೀತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ (ಸಿದ್ಧಾಂತ ೧೫-೫೮ ಶ್ರುತಿ)

ಯಾನನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ (ಸಿದ್ಧಾಂತ ೧೯-೫ ಶ್ರುತಿ)

ಜ್ಞಾನಾದೇವ ತು ಕೈವಲ್ಯಮ್ (ಸಿದ್ಧಾಂತ ೧೯-೧೦ ವಚನವ್ರಾತ)

ಯಥೇಹ ಕರ್ಮಚಿತೋ ಲೋಕಃ ಕ್ಷೀಯತೇ ಏವಮೇವಾ ಮುಕ್ತ ಪುಣ್ಯಚಿತೋ ಲೋಕಃ ಕ್ಷೀಯತೇ ಜ್ಞಾತ್ವಾದೇವಂ ಮೃತ್ಯುಪಾಶನ್ ಛಿನತ್ತಿ (ಸಿದ್ಧಾಂತ ೧೬-೨೪ ಶ್ರುತಿ)

ಶರೀರಮಾದ್ಯಂ ಖಲು ಧರ್ಮಸಾಧನಂ (ಸಿದ್ಧಾಂತ ೧೬-೪೨)

ನಾಹಮೀಶ್ವರಮ್ (ಸಿದ್ಧಾಂತ ೧೬-೪೭)

ಸರ್ವೈಕ್ಯಾತ್ವರಂ ಬ್ರಹ್ಮಧಾಯ (ಸಿದ್ಧಾಂತ ೧೬-೪೯)

ಮಾಯಾಮಾರ್ಗಾತೀತವರ್ತನಾತ್ (ಸಿದ್ಧಾಂತ ೧೬-೪೯)

ಆತ್ಮಲಾಭಾನ್ನಪರೋವಿದ್ಯೇನೇತಿ ಸಹೃದ್ಯಃ (ಸಿದ್ಧಾಂತ ೧೮-೧೦ ಶ್ರುತಿ)

ಸ ವೈನ್ಯವಂತಸ್ಮಾದೇಕಾಕಿ ನ ರಮತೇ ಸ ದ್ವಿತೀಯಮೈಚ್ಛತ್ ಸ ಯೇತಾವಾನಾ ಸತ್ಸ್ರುಷ್ಟಾತ ದೇವಾನು ಪ್ರಾವಿಶ ಶತದನುಪ್ರವಿಶ್ಯ ಸಚ್ಛತ್ಯಚ್ಛಾ ಭವೇತ್ (ಸಿದ್ಧಾಂತ ೧೮-೧೧ ಶ್ರುತಿ)

ಸೋ ವಿದ್ಯಾಗ್ರಂಥಿಂ ವಿಕಿರ ಹ ಸೋಮ್ಯೇತಿ ದ್ವಾರೋದನ್ಯಶ್ರುತ್ಯನುಸಾರ (ಸಿದ್ಧಾಂತ ೨೦-೨೧ ಶ್ರುತಿ)

ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತಾನಿ ನೋ ಇತರಾಣಿ (ಸಿದ್ಧಾಂತ ೧೬-೫ ಶ್ರುತಿ)

ಜ್ಞಾನಾದೇವ ತು ಕೈವಲ್ಯಮ್ (ಸಿದ್ಧಾಂತ ೧೬-೧೦ ವಚನವ್ರಾತ)

## ಮಂತ್ರಗಳು

ನಮಸ್ಕಾರಾಯ (ಸಿದ್ಧಾಂತ ೮-೧೭ ಶ್ರೀರುದ್ರ ಅಷ್ಟಮೋನುವಾಕ)

ಮೇ ಅಸ್ತು ಸದಾಶಿವೋಂ (ಸಿದ್ಧಾಂತ ೮-೧೭ ಈಶಾನಮಂತ್ರ)

ಸೋಹಂ (ಸಿದ್ಧಾಂತ ೮-೨೩)

ಜ್ವಲಲಿಂಗಾಯ ನಮಃ (ಸಿದ್ಧಾಂತ ೨೧-೪೯ ಶ್ರುತಿ)

## ೨. ನ್ಯಾಯಗಳು

ಸಿದ್ಧಾಂತ ಶಿಖಾಮಣಿಯನ್ನು ಕುರಿತು ಬಂದಿರುವ ಅಜ್ಞಾತ ವಿರಚಿತ ಸುಪ್ರಬೋಧಿನೀ ಎನ್ನುವ ಟೀಕಿನಲ್ಲಿ ಬಳಸಿರುವ ನ್ಯಾಯಗಳನ್ನು ಕುರಿತು ಪರಿಶೀಲಿಸುವಾಗ ನ್ಯಾಯ ಪ್ರಪಂಚದ ವಿಸ್ತಾರ ಮತ್ತು ವೈವಿಧ್ಯದ ಪರಿಚಯವಾಗುತ್ತದೆ. ಬ್ಲೂಲರ್ ಅವರು ನ್ಯಾಯಗಳನ್ನು (Maxims) "infereces From familiar uttarances" ಎಂದಿದ್ದಾರೆ.

ಕರ್ನಲ್ ಜೆ. ಎ. ಜೇಕಬ್ ಅವರು A Hand ful of Popular Maxims ಎನ್ನುವ ಪುಸ್ತಕವನ್ನು ಪ್ರಕಟಿಸಿದ್ದು ಅವುಗಳಲ್ಲಿ ೪೦೦ಕ್ಕೂ ಮೀರಿದ ನ್ಯಾಯಗಳ ವಿವರಗಳಿವೆ. ರಘುನಾಥವರ್ಮ ಅವರು ಲೌಕಿಕನ್ಯಾಯ ಸಂಗ್ರಹ ಎನ್ನುವ ಗ್ರಂಥವನ್ನು ರಚಿಸಿರುವುದು ತಿಳಿದು ಬರುತ್ತದೆ. ತಾರಾನಾಥ ತರ್ಕ ವಾಚಸ್ಪತಿಗಳು ತಮ್ಮ ವಾಚಸ್ಪತ್ಯ ನಿಘಂಟುವಿನಲ್ಲಿ ೧೫೧ನ್ಯಾಯಗಳನ್ನು ಪ್ರಕಟಿಸಿದ್ದಾರೆ. ವಿ. ಎಸ್. ಆಪ್ಟೆ ಅವರ ನಿಘಂಟಿನಲ್ಲಿ ೩೦ ನ್ಯಾಯಗಳ ಉಲ್ಲೇಖವಿದೆ. ಸತ್ಯವ್ರತ ಸಾಮಾಶ್ರಯ ಅವರು ತಮ್ಮ Monograph ನಲ್ಲಿ ೩೬ ನ್ಯಾಯಗಳನ್ನು ಬಳಸಿಕೊಂಡಿರುವುದು ತಿಳಿದುಬರುತ್ತದೆ.

ರಾಮಮಖೀ ಎನ್ನುವವನು ಸಂಸ್ಕೃತದಲ್ಲಿ ರಚಿಸಿದ ೧೦೦ ನ್ಯಾಯಗಳಿಂದ ಕೂಡಿದ ನ್ಯಾಯಶತಕವನ್ನು ಎಚ್. ವಿ. ನಾಗರಾಜರಾವ್ ಅವರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಮೂಲಕ ಇಂಗ್ಲಿಷ್ ಅನುವಾದದೊಡನೆ ಪ್ರಕಟಿಸಿದ್ದಾರೆ.

A Hand ful of Popular Maxim ಕೃತಿಯನ್ನು ಆಧರಿಸಿ ಎನ್. ರಂಗನಾಥಶರ್ಮಾ ಅವರು ಕನ್ನಡ ಭಾಷೆಯಲ್ಲಿ ಲೌಕಿಕ ನ್ಯಾಯಗಳು ಎನ್ನುವ ಕೃತಿಯನ್ನು ರಚಿಸಿದ್ದು ಅದರಲ್ಲಿ ೧೦೨ ನ್ಯಾಯಗಳ ವಿವರಣೆಯಿದೆ. ಈಚೆಗೆ ಕಾವ್ಯಜೀವಿ ಎನ್ನುವವರ ಲೌಕಿಕ ನ್ಯಾಯಗಳು ಎನ್ನುವ ಕೃತಿ ಪ್ರಕಟವಾಗಿದೆ.

ಪ್ರಸ್ತುತ ಸಿದ್ಧಾಂತ ಶಿಖಾಮಣಿಯ ಸುಪ್ರಬೋಧಿನೀ ಟೀಕಿನಲ್ಲಿ ಪ್ರಸ್ತಾಪವಾಗಿರುವ ನ್ಯಾಯಗಳ ವಿವರಣೆಯನ್ನು ಕೊಟ್ಟಿದೆ.

ಅಂಡರಸನ್ಯಾಯ (೧-೫, ೧೪-೩೮, ೨೦-೩೩) (ಮಯೂರಾಂಡ ರಸ ನ್ಯಾಯ ೧೧-೨೮, ಶಿಖಂಡ್ಯಂಡರಸ ನ್ಯಾಯ ೨-೧೩, ೧೮-೧೧)

ಮೊಟ್ಟೆಯಲ್ಲಿ ರಸವಿದೆ. ಅದು ಮೊಟ್ಟೆಯಿಂದಲೇ ಹುಟ್ಟಿದುದು. ಆ ರಸದಿಂದಲೇ ಮುಂದೆ ಮತ್ತೊಂದು ಹಕ್ಕಿ ಹುಟ್ಟುತ್ತದೆ. ಅದು ಮತ್ತೆ ಮೊಟ್ಟೆಯನ್ನು ಹಾಕುತ್ತದೆ. ಅದರಲ್ಲಿ ರಸ ಹುಟ್ಟುತ್ತದೆ. ಆದ್ದರಿಂದ ಮೊಟ್ಟೆಯಿಂದ ರಸವೋ ರಸದಿಂದ ಮೊಟ್ಟೆಯೋ ಹೇಳುವುದಕ್ಕಾಗುವುದಿಲ್ಲ, ಅನಾದಿ, ಅನಿರ್ವಚನೀಯ ಎಂದು ಅರ್ಥ.

ಅಂಧಬಧಿರನ್ಯಾಯ (೧೪-೧)

ಕುರುಡನು ಕಿವುಡನಿಗೆ ಉಪದೇಶಮಾಡುವುದು ವ್ಯರ್ಥ, ಕಿವುಡನು ಕುರುಡನಿಗೆ

ಎಲ್ಲವನ್ನು ತೋರಿಸುತ್ತೇನೆಂದು ಕರೆದೊಯ್ಯುವುದು ವ್ಯರ್ಥ, ಯಾರ್‍ಯಾರಲ್ಲಿ ಯಾವ ಯಾವ ಸಾಮರ್ಥ್ಯವಿದೆಯೋ ಅದನ್ನೇ ಮಾಡಬೇಕು. ಬೇರೇನನ್ನೂ ಮಾಡಲು ಸಾಧ್ಯವಿಲ್ಲ.

ಅಹಿಕುಂಡಲನ್ಯಾಯ (೨-೧೩)

ಅಹಿ ಎಂದರೆ ಹಾವು, ಕುಂಡಲ ಎಂದರೆ ಸುತ್ತಿಕೊಳ್ಳುವಿಕೆ ಉದ್ದವಾದ ಹಾವು ಕುಂಡಲದಂತೆ ಅಥವಾ ಬಳೆಯಂತೆ ಸುತ್ತಿಕೊಂಡು ಮಲಗುವುದು ಅದರ ಸ್ವಾಭಾವಿಕ ಧರ್ಮ. ಕುಂಡಲಾಕಾರದಲ್ಲಿ ಮಲಗಿದ್ದಾಗ ಅದು ಹಾವು ಎಂದು ತಿಳಿಯುವುದೇ ಇಲ್ಲ. ಅದು ತನ್ನ ಮೈಯನ್ನು ವಿಸ್ತರಿಸಿ ಹೆಡೆಬಿಚ್ಚಿದಾಗಲೇ ಹಾವು ಎಂದು ಕಾಣುವುದು. ಅದರಂತೆ ಬ್ರಹ್ಮನು ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿರುವುದು ಸಹಜಧರ್ಮ. ನಾವು ಬ್ರಹ್ಮನ ನೈಜಸ್ವರೂಪವನ್ನು ನೋಡುವುದಕ್ಕೆ ಆಗದು. ಆದರೆ ಅವನಿಂದಾದ ಜೀವಿಗಳ ರೂಪದಿಂದ ನೋಡಬಹುದು ಎನ್ನುವುದು ಇದರ ಅಭಿಪ್ರಾಯ.

ಉಪಕ್ರಮೋಪಸಂಹಾರನ್ಯಾಯ (೧೮-೭೦)

ಉಪಕ್ರಮ ಎಂದರೆ ಆರಂಭ. ಉಪಸಂಹಾರ ಎಂದರೆ ಮುಕ್ತಾಯ. ನಾವು ಯಾವುದೇ ಕೆಲಸವನ್ನು ಯಾವ ಕ್ರಮದಿಂದ ಆರಂಭಿಸಿದೆವೋ ಅದೇ ಕ್ರಮದಲ್ಲಿ ಮುಗಿಸಬೇಕು. ಆಗ ಕೆಲಸ ಉತ್ತಮವಾಗುತ್ತದೆ. ಅದು ಬಿಟ್ಟು ಆರಂಭವೇ ಒಂದು ಕೊನೆಯೇ ಒಂದು ಎಂದಾದರೂ ಯಾವ ಕೆಲಸವೂ ಸರಿಯಾಗಿ ಆಗದೆ ಹಾಳಾಗುತ್ತದೆ.

ಕೂರ್ಮಾಂಗಭಂಗಿನ್ಯಾಯ (೨-೧೩)

ಆಮೆಯು ಮುಂದೆ ಹೋಗುವಾಗ ತನ್ನ ತಲೆ ಕಾಲುಗಳನ್ನೆಲ್ಲ ಚಿಪ್ಪಿನಿಂದ ಹೊರ ಚಾಚುತ್ತದೆ. ಅಪಾಯ ಬರುವುದೆಂದು ಗೊತ್ತಾದಾಗ ಅವಯವಗಳನ್ನೆಲ್ಲ ಒಳಗೆ ಹಾಕಿಕೊಂಡು ತನ್ನನ್ನು ಕಾಪಾಡಿಕೊಳ್ಳುತ್ತದೆ. ಅದರಂತೆ ನಮ್ಮ ನಮ್ಮ ತಿಳಿವಳಿಕೆ, ಜ್ಞಾನಾದಿಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಬೇಕು ಎನ್ನುವುದು ಇದರ ಅರ್ಥ

ಘಟಪಟಾದಿ ಪ್ರಕಾಶನ್ಯಾಯ (೧೪-೧)

ಘಟ-ಪಟ (ಬಟ್ಟೆ) ಮೊದಲಾದ ವಸ್ತುಗಳು ಕತ್ತಲೆಯಲ್ಲಿದ್ದಾಗ ನೋಡುವ ಕಣ್ಣು ಎಚ್ಚರವಾಗಿದ್ದರೂ, ಅವು ಕಾಣುವುದಿಲ್ಲ. ದೀಪದ ಬೆಳಕು ಬಿದ್ದಾಗ ಅವೆಲ್ಲ ಕಾಣುತ್ತವೆ. ಅದೇ ರೀತಿ ವಿವೇಕವೆಂಬ ಬೆಳಕು ನಮಗೆ ವಾಸ್ತವಿಕ ಜೀವನದ ದರ್ಶನವನ್ನು ಮಾಡಿಸಿಕೊಡುತ್ತದೆ.

ಘೃತಕೀಟನ್ಯಾಯ (೧-೩,೨೭, ೧೪-೧೦, ೨೦-೩೩)

ಘೃತ ಎಂದರೆ ತುಪ್ಪ ಇದರಲ್ಲಿ ಜಿಡ್ಡಿನಂಶವಿದೆ. ತುಪ್ಪದಲ್ಲಿ ಬಿದ್ದ ವಸ್ತುಗಳು ಜಿಡ್ಡಿನಿಂದ ಕೂಡಿರುತ್ತವೆ. ತುಪ್ಪದಲ್ಲಿ ಹುಳುಬಿದ್ದರೆ ಅದರ ಮೈಯೆಲ್ಲ ಜಿಡ್ಡಾಗಿ ಹೊರಹೋಗಲು ಆಗದೆ, ಒದ್ದಾಡಿ ಸಾಯಲೂ ಆಗದೆ ಬದುಕಲೂ ಆಗದೆ ಒದ್ದಾಡುತ್ತವೆ

ಅದರಂತೆ ಸಂಸಾರವೆಂಬ ಘೃತದಲ್ಲಿ ಮುಳುಗಿದ ಜೀವಿಗಳು ಬಂಧನವೆಂಬ ಜಿಡ್ಡಿನಿಂದ ಅಂಟಿಕೊಂಡವರಾಗಿ ಹೊರ ಹೋಗಲಾಗದೆ ಪರಿತಪಿಸುತ್ತಾರೆ.

ಜಲಪ್ರವಾಹನ್ಯಾಯ (೧೬-೮)

ನದಿಯ ಪ್ರವಾಹ ಯಾವಾಗ ಬರುತ್ತದೆ. ಎಂದು ಹೇಳುವುದು ಕಷ್ಟ. ಪ್ರವಾಹವು ಬಂದರೆ ಎಲ್ಲವನ್ನೂ ಕೊಚ್ಚಿಹಾಕುತ್ತದೆ, ನಾಶಮಾಡುತ್ತದೆ. ಅದರಂತೆ ಜೀವನದ ಪ್ರವಾಹಗಳಲ್ಲಿ ಸಿಲುಕಿದ ಜೀವಿಗಳು ಎಲ್ಲೆಲ್ಲೋ ಹೋಗುತ್ತಾರೆ. ನಾವು ವಿವೇಕದಿಂದ ಮುನ್ನಡೆಯಬೇಕು ಎನ್ನುವುದು ಒಂದು ಅರ್ಥ.

ಜಲಪ್ರವಾಹವು ಯಾವಾಗಲೂ ಕೆಳಗೆ ಹರಿಯುತ್ತದೆ. ಹರಿದ ನೀರು ಹಿಂದುರಿಗಿ ಬರುವುದಿಲ್ಲ. ಹಾಗೆಯೇ ನೀಚರು ಯಾವಾಗಲೂ ಕೆಟ್ಟ ಹಾದಿಯಲ್ಲೇ ಹೋಗುತ್ತಾರೆ. ಅವರನ್ನು ಹಿಂದಿರುಗಿಸಲು ಸಾಧ್ಯವಿಲ್ಲ. ಕೆಳಗೆ ಹರಿಯುವುದು ನೀರಿನ ಸ್ವಭಾವ. ಹಾಗೆಯೇ ನೀಚತನದಲ್ಲಿ ಹೋಗುವುದೇ ದುಷ್ಟರ ಸ್ವಭಾವ ಎನ್ನುವುದು ಮತ್ತೊಂದು ಅರ್ಥ.

ದಗ್ಧಪಟನ್ಯಾಯ (೧೪-೨೦) ದಗ್ಧರಜ್ಜುನ್ಯಾಯ (೧೯-೩೪)

ಈ ಎರಡು ನ್ಯಾಯಗಳ ಅಭಿಪ್ರಾಯವೂ ಒಂದೆ. ಪಟ ಎಂದರೆ ಬಟ್ಟೆ. ಬಟ್ಟೆಯು ಬೆಂಕಿಯಲ್ಲಿ ಸುಟ್ಟುಹೋದ ಮೇಲೂ ಅದರ ಆಕಾರವು ಸ್ವಲ್ಪ ಕಾಲ ಹಾಗೆಯೇ ಇದ್ದರೂ ಅದಕ್ಕೆ ಶೀತವನ್ನು ಹೋಗಲಾಡಿಸುವ ಗುಣವಿಲ್ಲ. ಅದರಂತೆ ಹಗ್ಗ ಸುಟ್ಟರೂ ಅದರ ಆಕಾರ ಹಾಗೆಯೇ ಇರುತ್ತದೆ. ಆದರೆ ಅದರಿಂದ ಕಟ್ಟಲು ಬರುವುದಿಲ್ಲ.

ಹೀಗೆಯೇ ಒಂದು ವಸ್ತುವು ಪೂರ್ಣವಾಗಿ ಅದು ಇನ್ನು ಇಲ್ಲ ಎಂದು ಗೊತ್ತಾದರೂ, ಅದು ಬುದ್ಧಿಯಲ್ಲಿ ಇದೆ ಎಂದು ತೋರುತ್ತಿದ್ದಾಗ ಈ ನ್ಯಾಯವನ್ನು ಹೇಳುತ್ತಾರೆ.

ಆತ್ಮಜ್ಞಾನಿಗೆ ಅಥವಾ ಜೀವನ್ಮುಕ್ತನಿಗೆ ಭೇದಜ್ಞಾನವು ದಗ್ಧಪಟನ್ಯಾಯದಂತೆ ಮೇಲುನೋಟಕ್ಕೆ ಇರುತ್ತದೆ. ಬಟ್ಟೆಯು ಸುಟ್ಟುಹೋಗಿದ್ದರೂ 'ಇದು ಬಟ್ಟೆ' ಎಂದು ವ್ಯವಹಾರ ಮಾತ್ರ ಉಳಿದಿರುತ್ತದೆ ಎಂದು ವೇದಾಂತಿಗಳು ಹೇಳುತ್ತಾರೆ.

ನ ಹ್ಯೇಕಪಕ್ಷಃ ವಿಹಗಃ ಪ್ರಯಾತಿ ನ್ಯಾಯ (೫-೨೧)

ಪಕ್ಷ ಎಂದರೆ ರೆಕ್ಕೆ. ವಿಹಗ ಎಂದರೆ ಹಕ್ಕಿ. ಹಕ್ಕಿಯು ಒಂದೇ ರೆಕ್ಕೆಯಿಂದ ಆಕಾಶದಲ್ಲಿ ಹಾರಲು ಸಾಧ್ಯವಿಲ್ಲ, ಎರಡು ರೆಕ್ಕೆಗಳು ಬೇಕೇ ಬೇಕು. ಹಾಗೆಯೇ ಜೀವನದಲ್ಲಿ ಒಬ್ಬನೇ ಮನುಷ್ಯನು ಯಾರ ಸಹಾಯವೂ ಇಲ್ಲದೆ ಮುಂದೆ ಬರಲು ಸಾಧ್ಯವೇ ಇಲ್ಲ. ಅವನ ಅಭಿವೃದ್ಧಿಗೆ ಮತ್ತೊಬ್ಬರ ಸಹಾಯ ಬೇಕೇ ಬೇಕು. ಸಂಸಾರವು ಸುಖಮಯವಾಗಲು ಗಂಡ ಹೆಂಡತಿಯರಿಬ್ಬರೂ ಇರಬೇಕು. ಯಾರೊಬ್ಬರಿಲ್ಲದಿದ್ದರೂ ಸಂಸಾರಪಥ ಸರಿಯಾದ ದಾರಿಯಲ್ಲಿ ಮುಂದೆ ಹೋಗುವುದಿಲ್ಲ.

ಪಟಗತಶುಕ್ಲನ್ಯಾಯ (೧-೧೦) ಶುಕ್ಲಪಟನ್ಯಾಯ- (೨-೧೫, ೫-೩೯,೧೨-೨೨)

ಬಟ್ಟೆಯಲ್ಲಿರುವ ಬಿಳಿಯ ಬಣ್ಣದಂತೆ ಕಾರ್ಯದಲ್ಲಿ ಕಾರಣದ ಗುಣವೇ ಬರುತ್ತದೆ. ಬೇರೆ ಬರಲು ಸಾಧ್ಯವಿಲ್ಲ. ನೂಲು ಕಾರಣ ಬಟ್ಟೆ ಕಾರ್ಯ; ಬಟ್ಟೆಯು ನೂಲಿನಿಂದಾದುದು ನೂಲು ಯಾವ ಬಣ್ಣದಲ್ಲಿ ಇರುತ್ತದೋ ಅದೇ ಬಣ್ಣ ಅದರಿಂದಾದ ಬಟ್ಟೆಯಲ್ಲಿ ಬರುತ್ತದೆ ಕಾರಣದಲ್ಲಿನ ಗುಣ ಕಾರ್ಯದಲ್ಲಿ ಬರುತ್ತದೆ. ಕೆಂಪುನೂಲಿನಿಂದ ಬಿಳಿಯ ಬಟ್ಟೆ ಬರಲು ಸಾಧ್ಯವಿಲ, ಹಾಗಾಗಿ ಯಾವ ಯಾವುದರಲ್ಲಿ ಏನೇನು ಕಾರ್ಯ ಆಗುವ ಸಾಮರ್ಥ್ಯವಿದೆಯೋ ಅದದೇ ಆಗಬೇಕು, ಬೇರೆ ಆಗಲು ಸಾಧ್ಯವಿಲ್ಲ ಎಂದು ಇದರ ಅರ್ಥ.

ಬೀಜಾಂಕುರನ್ಯಾಯ (೨-೬)

ಒಳ್ಳೆಯ ಬೀಜವನ್ನು ಹಾಕಿದರೆ ಮೊಳಕೆ ಬರುತ್ತದೆ. ಮೊಳಕೆ ಮುಂದೆ ಗಿಡವಾಗಿ ಮರವಾಗಿ ಹೂವಾಗಿ ಕಾಯಾಗಿ ಹಣ್ಣಾಗಿ ಮತ್ತೆ ಬೀಜವಾಗುತ್ತದೆ. ಅದರಿಂದ ಮತ್ತೊಂದು ಅಂಕುರ. ಹೀಗೆ ಈ ಕ್ರಮಕ್ಕೆ ಕೊನೆಯಿಲ್ಲ, ಜೊತೆಗೆ ಯಾವುದು ಯಾವುದರಿಂದ ಬಂದಿತು ಎಂದು ಹೇಳಲು ಸಾದ್ಯವಿಲ್ಲ.

ಹೀಗೆಯೇ ಅನಾದಿ ಅನಂತ ಎಂದು ಹೇಳುವಾಗ ಈ ನ್ಯಾಯವನ್ನು ಹೇಳುತ್ತಾರೆ. ಜೊತೆಗೆ ಒಳ್ಳೆಯ ವಿಷಯದಿಂದ ಒಳ್ಳೆಯ ಫಲ, ಕೆಟ್ಟ ವಿಷಯದಿಂದ ಕೆಟ್ಟಫಲ ಹಾಗಾಗಿ ಒಳ್ಳೆಯ ಕೆಲಸವನ್ನು ಮಾಡಿ ಒಳ್ಳೆಯ ಫಲವನ್ನು ಪಡೆಯ ಬೇಕೆನ್ನುವುದು ಇದರ ಅಂತರಾರ್ಥ.

ಮಯೂರಾಂಡರಸನ್ಯಾಯ (ನೋಡಿ: ಅಂಡರಸ ನ್ಯಾಯ)

ರಜ್ಜುಭುಜಂಗನ್ಯಾಯ (೧೯-೨೯, ೩೫) ರಜ್ಜು ಸರ್ಪನ್ಯಾಯ (೧೯-೨೯)

ರಜ್ಜು ಎಂದರೆ ಹಗ್ಗ ಭುಜಂಗ ಎಂದರೆ ಹಾವು. ಕತ್ತಲೆಯಲ್ಲಿ ಹಗ್ಗವನ್ನು ತುಳಿದಾಗ ನಾವು ಹಾವೆಂದೇ ಭ್ರಮಿಸಿ ಹೆದರುತ್ತೇವೆ. ಆದರೆ ಬೆಳಕು ತಂದು ನೋಡಿದಾಗ ಹಾವಲ್ಲವೆನ್ನುವುದು ತಿಳಿಯುತ್ತದೆ.

ಹಾಗೆಯೇ ಅಜ್ಞಾನದಿಂದ ನಾವು ವಸ್ತುವಿನ ನಿಜಸ್ವರೂಪವನ್ನು ತಿಳಿಯದೆ ಭ್ರಾಂತರಾಗುತ್ತೇವೆ. ವಿವೇಕವೆಂಬ ಬೆಳಕು ಬಂದಾಗ, ವಸ್ತುವಿನ ನಿಜಸ್ವರೂಪವನ್ನು ತಿಳಿದು ಸಂತೋಷವಾಗುತ್ತದೆ. ನಾವು ಪ್ರಪಂಚದಲ್ಲಿ ಅವಿವೇಕಿಗಳಾಗಿ ಒಂದು ವಸ್ತುವಿನಲ್ಲಿ ಇಲ್ಲದ ಗುಣವನ್ನು ಇದೆ ಎಂದು ಭ್ರಾಂತಿಯಿಂದ ತಿಳಿದು ದುಃಖಿತರಾಗುತ್ತೇವೆ. ಈ ಅಜ್ಞಾನವನ್ನು ವಿವೇಕದಿಂದ ದೂರಮಾಡಿಕೊಳ್ಳಬೇಕು ಎಂದು ಅಭಿಪ್ರಾಯ.

ವೃಕ್ಷಗತಫಲಪುಷ್ಪಾದಿನ್ಯಾಯ (೨-೧೩)

ಮರದಲ್ಲಿ ಹಣ್ಣು ಹೂವು ಎಲೆ ಪರಿಮಳ ಎಲ್ಲವೂ ಇವೆ. ಹಸಿದವನಿಗೆ ಹಣ್ಣು ಉಪಯೋಗವಾಗುತ್ತದೆ. ಕಣ್ಣಿಗೆ ಹೂವು ಆನಂದವನ್ನು ಕೊಡುತ್ತದೆ. ಪರಿಮಳ ಆಹ್ಲಾದವನ್ನುಂಟುಮಾಡುತ್ತದೆ. ಮರದನೆರಳು ಎಲ್ಲರಿಗೂ ಆಶ್ರಯ ಕೊಡುತ್ತದೆ. ಎಲೆ ಮೊದಲಾದುವು ನಾನಾರೀತಿಯಲ್ಲಿ ಉಪಯೋಗಕ್ಕೆ ಬರುತ್ತವೆ. ಎಂದರೆ ನಾವು ಮರದ

ಹಣ್ಣು ಹೂವು ಎಲೆ ಮೊದಲಾದವುಗಳ ಹಾಗೆ ಬೇರೆಯವರಿಗೆ ಉಪಕಾರಿಗಳಾಗಬೇಕು ಎನ್ನುವುದು ಇದರ ಭಾವ.

ಶಿಖಂಡ್ಯಂಡರಸನ್ಯಾಯ (ನೋಡಿ: ಅಂಡರಸನ್ಯಾಯ)

ಶುಕ್ಲಪಟನ್ಯಾಯ (ನೋಡಿ: ಪಟಗತ ಶುಕ್ಲನ್ಯಾಯ)

ಶುಕ್ತಿರಜತನ್ಯಾಯ (೧೯-೩೭)

ಶುಕ್ತಿ ಎಂದರೆ ಕಪ್ಪೆ ಚಿಪ್ಪು, ರಜತ ಎಂದರೆ ಬೆಳ್ಳಿ. ಬಿಸಿಲಿನಲ್ಲಿ ಬಿದ್ದಿರುವ ಕಪ್ಪೆಚಿಪ್ಪನ್ನೇ ನಾವು ಬೆಳ್ಳಿಯೆಂದು ತಿಳಿದು ಭ್ರಾಂತರಾಗುತ್ತೇವೆ. ಹಾಗೆಯೇ ನಾವು ನಿಜಜೀವನದಲ್ಲಿ ವ್ಯಕ್ತಿಯ ಸ್ವರೂಪವನ್ನು ತಿಳಿಯದೆ ಮೇಲು ನೋಟಕ್ಕೆ ಮರುಳಾಗಿ ಮೋಸಹೋಗಿ ತೊಂದರೆಯನ್ನು ಅನುಭವಿಸುತ್ತೇವೆ. ಆದ್ದರಿಂದ ಯಾವುದನ್ನೇ ಆದರೂ ಮೊದಲು ಪರೀಕ್ಷಿಸಿ ತಿಳಿದು ನಂತರ ಮುನ್ನುಗ್ಗಬೇಕು ಎನ್ನುವುದು ಈ ನ್ಯಾಯದ ಅರ್ಥ. ಹಾಗೆಯೇ ಒಂದು ವಸ್ತುವಿನಲ್ಲಾಗಲಿ, ವ್ಯಕ್ತಿಯಲ್ಲಾಗಲಿ ಇಲ್ಲದ ಧರ್ಮವನ್ನಾಗಲಿ ಗುಣವನ್ನಾಗಲಿ ಇದೆ ಎಂದು ತಿಳಿದು ಮೋಸಹೋಗಬಾರದು.

ಸ್ವರ್ಣಕುಂಡಲನ್ಯಾಯ (೮-೧೬)

ಚಿನ್ನವನ್ನು ಕರಗಿಸಿ ಅದನ್ನು ಹದಮಾಡಿ ತಟ್ಟಿ ಕಿವಿಗೆ ಹಾಕುವ ಕುಂಡಲವನ್ನು ಮಾಡುತ್ತಾರೆ. ಕುಂಡಲವು ಆಭರಣ ರೂಪವನ್ನು ತಾಳಿದ್ದರೂ ಅದು ಚಿನ್ನವೇ ಹೊರತು ಬೇರೆಯಾಗಿರಲು ಸಾಧ್ಯವಿಲ್ಲ. ಕುಂಡಲವನ್ನು ಮತ್ತೆ ಕರಗಿಸಿದರೆ ಅದು ಚಿನ್ನದ ಗಟ್ಟಿಯೇ ಆಗುತ್ತದೆ. ಬೆರೆಯಾಗುವುದು ಸಾಧ್ಯವಿಲ್ಲ. ಆದರಂತೆ ಲೋಕದಲ್ಲಿ ಯಾವ ಯಾವ ಕಾರಣಗಳಿಂದ ಕಾರ್ಯಗಳು ಆಗಬೇಕೋ ಆ ಕಾರ್ಯಗಳಾಗುತ್ತವೆಯೇ ಹೊರತು, ಬೇರೆಯಾಗಲು ಸಾಧ್ಯವಿಲ್ಲ. ಅಲ್ಲದೆ ಪ್ರತಿಯೊಂದು ಕಾರ್ಯವು ತನ್ನ ಮೊದಲಿನ ಕಾರಣದ ರೂಪವನ್ನೇ ತಾಳುತ್ತದೆ. ಬೇರೆಯಾಗಲು ಸಾಧ್ಯವಿಲ್ಲ ಎನ್ನುವುದು ಇದರ ಭಾವ.

ಸಾಗರತರಂಗನ್ಯಾಯ (೧೬-೭೨,೧೭-೭೮)

ಸಮುದ್ರದಲ್ಲಿ ಅಲೆಗಳು ಅಲೆ ಅಲೆಯಾಗಿ ಒಂದಾದ ಮೇಲೊಂದರಂತೆ ಬರುತ್ತಲಿ ಇರುತ್ತವೆ. ಆದರೆ ಆ ಎಲ್ಲ ಅಲೆಗಳೂ ಸಮುದ್ರದಿಂದಲೆ ಹುಟ್ಟುತ್ತವೆ, ಸಮುದ್ರದಲ್ಲೇ ಲೀನವಾಗುತ್ತವೆ. ಸಮುದ್ರದಿಂದ ಅಲೆಗಳು ಹುಟ್ಟುತ್ತವೆಯೆ ಹೊರತು ಅಲೆಗಳಿಂದ ಸಮುದ್ರವು ಹುಟ್ಟುವುದಿಲ್ಲ. ಅಲ್ಲದೆ, ಅಲೆಗಳು ಸಮುದ್ರವೇ ಹೊರತು ಬೇರೆಯಲ್ಲ. ಹಾಗೆಯೆ ನಾವು ಈ ಪ್ರಪಂಚದಲ್ಲಿ ಹುಟ್ಟಿದ್ದೇವೆಯೆ ಹೊರತು ಪ್ರಪಂಚ ನಮ್ಮಿಂದ ಹುಟ್ಟಿಲ್ಲ. ನಾವು ಪ್ರಪಂಚವನ್ನು ನಿರ್ಮಾಣಮಾಡಲು ಸಾಧ್ಯವೂ ಇಲ್ಲ. ಆದ್ದರಿಂದ ನಾವು ಈ ಜಗತ್ತಿನಲ್ಲಿದ್ದು ದಿನ ನಿತ್ಯದ ಸಂಸಾರದ ವ್ಯವಹಾರಗಳಲ್ಲಿ ತೇಲಿಹೋಗಬೇಕೇ ಹೊರತು, ಅವುಗಳನ್ನು ನಿಯಂತ್ರಿಸುತ್ತೇವೆ ಎಂದು ಹೋಗುವುದು ಸರಿಯಲ್ಲ. ಆಗುವುದೂ ಇಲ್ಲ.

## ೨. ಶ್ಲೋಕಗಳ ಅಕಾರಾದಿ

ಮೊದಲನೆಯ ಸಂಖ್ಯೆ ಪರಿಚ್ಛೇದವನ್ನು ಎರಡನೆಯ ಸಂಖ್ಯೆ ಶ್ಲೋಕವನ್ನು ಸೂಚಿಸುತ್ತದೆ.


ಅಂಗಲಿಂಗೀ ಜ್ಞಾನ ೧೩-೨
ಅಂಗೇ ಲಿಂಗಂ ಸಮಾರೂಢಂ ೧೨-೪೫
ಅಂತಃಕರಣರೂಪೇಣ ೨೦-೨೭
ಅಂತಃಕ್ರಿಯಾ ರತಸ್ಯಾಸ್ಯ ೧೨-೨೧
ಅಂತಃಪವನ ಸಂಸ್ಪೃಷ್ಟೇ ೧೨-೧೪
ಅಂತಃಪ್ರಕಾಶಮಾನಸ್ಯ ೧೬-೭೧
ಅಂತರಾಕಾಶ ಬಿಂಬಸ್ಥಂ ೧೯-೫೮
ಅಂತರೇಣ ಗುರುಂ ಸಿದ್ಧಂ ೧೩-೨೪
ಅಂತರ್ಗತಂ ಚಿದಾಕಾರಂ ೧೨-೧೩
ಅಂತರ್ಬಹಿಶ್ಚ ಸರ್ವತ್ರ ೧೬-೧೮
ಅಂತರ್ಮುಖೀನ ಮನಸಾ ೨೦-೧೨
ಅಂತರ್ಲಿಂಗಾನುಸಂಧಾನಂ ೬-೪೧
ಅಂತರ್ಹಿತೇ ತದಾ ೨೧-೨
ಅಂತಷ್ಷಟ್ಚಕ್ರ ರೂಢಾನಿ ೧೨-೨೫
ಅಂತಸ್ಥಿತಂ ಪರಾಕಾಶಂ ೧೯-೫೩
ಅಂತಸ್ಥಿತಂ ಲಿಂಗಂ ೧೨-೯
ಅಂಧಪಂಗುವದನ್ಯೋನ್ಯ ೧೬-೧೧
ಅಂಧೋ ಯಥಾ ಪುರಸ್ಥಾನಿ ೧೬-೩೨
ಅಕರ್ತಾಹಮವೇತ್ತಾಹ ೧೮-೫೪
ಅಕಾರಣಮಕಾರ್ಯಂ ೧೯-೪೯
ಅಕಾರ್ಶ್ಯೈವ ಆಖ್ಯಾತೋ ೨೦-೩೯
ಅಖಂಡಂ ಯೇನ ಚೈತನ್ಯಂ ೧೫-೧೧
ಅಖಂಡ ಪರಮಾನಂದ ೧೫-೩೯
ಅಖಂಡ ಸಂವಿದಾಕಾರಂ ೧೮-೪೨
ಅಖಂಡ ಸಚ್ಚಿದಾನಂದ ೨೦-೧೬
ಅಖಂಡಾನಂದ ಸಂವಿತ್ತಿ ೧೯-೪೭
ಅಖಂಡಾರಾತಿದೋರ್ದಂಡ ೩-೬೭
ಅಗಸ್ತ್ಯ ಖಲು ಸಿದ್ಧಾಂತಾ ೫-೩
ಅಗಸ್ತ್ಯ ಮುನಿಶಾರ್ದೂಲ ೫-೨
ಅಗಸ್ತ್ಯ ಮುನಿಶಾರ್ದೂಲ ೨೦-೮೧
ಅಗ್ನಿಹೋತ್ರಂ ತ್ರಯೋವೇದಾಃ ೮-೪೩
ಅಘೋರಾ ಪಾಪಕಾಶೀತಿ ೬-೬೨
ಅಚಲಂ ಧ್ರುವಮಾತ್ಮಾನ ೧೫-೬೯
ಅಚಿನೋತಿ ಚ ೧೫-೯
ಅಚ್ಛಿದ್ರ ಕನಕ ಪ್ರಖ್ಯಂ ೭-೫೨
ಅಚೇತನತ್ವಾತ್ ಪೃಥ್ವ್ಯಾತ್ ೧೦-೫೫
ಅಜಂಗಮಂ ತು ಯಲ್ಲಿಂಗಂ ೯-೬೧
ಅಜಗಾಮ ನಿಜಾವಾಸಂ ೨೧-೪೨
ಅಜಾಂತೇ ಭವತಾ ಪೂರ್ವಂ ೪-೪೧
ಅಜ್ಞಾನತಿಮಿರೋದ್ರಿಕ್ತಾ ೧೪-೧೨
ಅಜ್ಞಾನ ಮಲಿನಂ ೧೩-೨೫
ಅಜ್ಞಾನ ಮೇಘ ೧೯-೨೧
ಅಜ್ಞಾನಮೇವ ಸರ್ವೇಷಾಂ ೧೭-೧೨
ಅಜ್ಞಾನ ರಾಕ್ಷಸೇ ೧೨-೩೧
ಅಣಿಮಾದಿಕಮೈಶ್ವರ್ಯಂ ೩-೪೭
ಅತಃ ಪರಂ ಸ್ವರೂಪಂ ೨೧-೫೨
ಅತಪ್ತ ತನುರಜ್ಞೋ ೬-೬೧
ಅತ್ಯಂತಗೂಢ ಚೈತನ್ಯಂ ೫-೪೪
ಅತ್ಯಂತ ತಾಮಸೋಪಾಧಿಃ ೫-೪೧
ಅತ್ಯಂತಪಾಪಕರ್ಮಾಪಿ ೧೧-೪೯
ಅತ್ರ ದಾನತ್ರಯಂ ಪ್ರೋಕ್ತಂ ೫-೩೦
ಅತ್ರ ಪ್ರೇರಯಿತಾ ಶಂಭುಃ ೪-೪೩
ಅಥ ತ್ರಿಲಿಂಗವಿಷಯೇ ೪-೧
ಅಥವಾ ಪಾದಶಬ್ದೇನ ೧೯-೭
ಅಥಾಗಸ್ತ್ಯವಚಶ್ಶ್ರುತ್ವಾ ೫-೧
ಅದ್ಯ ಮೇ ಸಫಲಂ ಜನ್ಮ ೨೦-೭೫

| | |
|---|---|
| ಅದಾತ್ಯ ದಾತ್ಯ ದೇಯಾನಾಂ | ೯-೮೪ |
| ಅದ್ವಿತೀಯ ಶಿವಾಕಾರ | ೧೯-೮೭ |
| ಅದ್ವೈತಬೋಧ ನಿರ್ಧೂತ | ೨೦-೮ |
| ಅದ್ವೈತ ಪರಮಾನಂದ | ೧೭-೭೩ |
| ಅದ್ವೈತಭಾವನಾ | ೧೪-೧೪ |
| ಅದ್ವೈತವಾಸನಾವಿಷ್ಟ | ೧೮-೫೩ |
| ಅಧಮೇಚೋತ್ತಮೇ | ೯-೪ |
| ಅಧರ್ಮಂ ನಸ್ಪೃಶೇತ್ | ೧೬-೬೧ |
| ಅನಂತ ಪರಮಾನಂದ | ೩-೧೩ |
| ಅನ್ನಜಾತೇ ತು ಭಕ್ತೇನ | ೯-೭೫ |
| ಅನ್ನಶುದ್ಧಾ ಹಿ ಸರ್ವೇಷಾಂ | ೧೧-೧೦ |
| ಅನಶ್ವರಮನಿರ್ದೇಶ್ಯಂ | ೨೦-೪೬ |
| ಅನಾತ್ಮವಿದಿತಂ ಬಾಹ್ಯಂ | ೯-೨೦ |
| ಅನಾದಿ ನಿಧನಂ ಲಿಂಗಂ | ೧೨-೪೯ |
| ಅನಾದಿಮುಕ್ತೋ ಭಗವಾನ್ | ೧೦-೧೨ |
| ಅನಾದ್ಯವಿದ್ಯಾಮೂಲಾ | ೨೦-೨೨ |
| ಅನಾದ್ಯವಿದ್ಯಾ ಸಂಬಂಧಾತ್ | ೫-೩೫ |
| ಅನಾದ್ಯವಿದ್ಯಾ ವಿಚ್ಛಿತ್ತಿ | ೧೯-೨೪ |
| ಅನಿರ್ದೇಶ್ಯಮನೌಪಮ್ಯಮ್ | ೧೯-೬೮ |
| ಅನುಗತ ಸ ಕಲಾರ್ಥೇ | ೧-೩೨ |
| ಅನುಗೃಹ್ಣಾತಿ ಯಲ್ಲೋಕಾನ್ | ೧೭-೫ |
| ಅನೇಕಜನ್ಮ ಶುದ್ಧಸ್ಯ | ೧೮-೫೯ |
| ಅನೇಕಜನ್ಮ ಶುದ್ಧಾನಾಂ | ೯-೧೩ |
| ಅನೇನ ಪಂಚಯಜ್ಞೇನ | ೯-೨೯ |
| ಅನೇನ ಮೂಲಮಂತ್ರೇಣ | ೮-೩೪ |
| ಅನ್ಯತ್ರ ಶಂಭೋ ರತಿ | ೧೦-೭೯ |
| ಅನ್ಯಾಂಶ್ಚ ಸಹವಾಸೇನ | ೨೧-೪೦ |
| ಅನ್ಯೇಪಿ ಬಹವೋ ಮಂತ್ರಾ | ೮-೪೦ |
| ಅನ್ಯೈರಾಪಾದಿತಂ ಭಸ್ಮಾ | ೭-೧೮ |
| ಅಪರಿಚ್ಛಿನ್ನಮಾನಂದಂ | ೧೯-೯೫ |
| ಅಪಗಚ್ಛತು ಸರ್ವಸ್ವಂ | ೧೦-೨೨ |
| ಅಪರಿಚಿನ್ನಮವ್ಯಕ್ತಂ | ೬-೩೫ |
| ಅಪರಿಚ್ಛೇದ್ಯಮಾತ್ಮಸ್ಥಂ | ೧೮-೭೪ |
| ಅಪರಿಚ್ಛೇದ್ಯಮಾತ್ಮಾನಂ | ೧೮-೪೧ |
| ಅಪರೋಕ್ಷ ಪರಾನಂದ | ೧೯-೨೭ |
| ಅಪರೋಕ್ಷಿತ ತತ್ತ್ವಸ್ಯ | ೧೩-೨೬ |
| ಅಪ್ರತ್ಯಕ್ಷೇ ಮಹಾದೇವಃ | ೯-೫೩ |
| ಅಪ್ರಮೇಯೇ ಚಿದಾಕಾರೇ | ೨೦-೪೮ |
| ಅಪ್ರಾಕೃತ ಗುಣಾಧಾರ | ೨-೧೨ |
| ಅಪ್ರಾಕೃತೈರ್ಗುಣೈಃ | ೧೫-೬೨ |
| ಅಬಭಾಷೇ ಗಣೇಂದ್ರಂ | ೨೧-೮ |
| ಅಬ್ಭಕ್ಷಾ ವಾಯುಭಕ್ಷಾಶ್ಚ | ೮-೩೬ |
| ಅಭಜಂತ ಮಹಾದೇವ | ೩-೫೪ |
| ಅಭಿಷಿಚ್ಯ ಗುರುಶಿಷ್ಯಮಾಸೀನಂ | ೬-೨೦ |
| ಅಮುಂಚತಾ ಸದಾ | ೩-೬೨ |
| ಅಮೃತಾರ್ಥಂ ಪ್ರಪನ್ನಾನಾಂ | ೧-೧೨ |
| ಅಯಂ ಶಿವೋ ಗುರುಶ್ಚೈಷ | ೧೪-೩೬ |
| ಅಯಥಾರ್ಥ ಪ್ರಪಂಚೇಯಂ | ೧೭-೨೨ |
| ಅರ್ಥಜಾತಮಶೇಷಂ | ೨೦-೨೦ |
| ಅರ್ಥಹೀನಾ ಯಥಾವಾಣೀ | ೧೬-೧೯ |
| ಅರ್ಪಿತೇ ನಾನ್ನ ಪಾನೇನ | ೧೦-೨೫ |
| ಅರ್ಪಯಿತ್ವಾ ನಿಜೇಲಿಂಗೇ | ೯-೭೨ |
| ಅವತೀರ್ಣ ಮಿದಂ | ೨೦-೭೪ |
| ಅವಾಂತರ ಸ್ಥಲಾನ್ಯತ್ರ | ೫-೨೭ |
| ಅವ್ಯಕ್ತಂ ಲಿಂಗಮಿತ್ಯಾಹುಃ | ೧೨-೩೮ |
| ಅವಿಚಾರೇಣ ಮದ್ಭಕ್ತೋ | ೩-೭೯ |
| ಅವಿದ್ಯಾರ್ಧಾಹು ನಿರ್ಮುಕ್ತೋ | ೧೯-೨೦ |
| ಅವಿಶುದ್ಧೇ ವಿಶುದ್ಧೇ | ೧೮-೫೦ |
| ಅಶರೀರೋಪಿ ಸರ್ವತ್ರ | ೧೮-೯ |
| ಅಶುದ್ಧೋಪಾಧಿರಪ್ಯೇವ | ೫-೪೬ |
| ಅಶುದ್ಧೋ ವಾ ವಿಶುದ್ಧೋ ವಾ | ೮-೩೮ |
| ಅಶೇಷ ಜಗತಾಂ ಹೇತುಃ | ೬-೫ |

| | | | |
|---|---|---|---|
| ಅಷ್ಟಕೃತ್ವಾಥಮೂಲೇನ | ೭-೨೧ | ಆತ್ಮಶಕ್ತಿವಿಕಾಸೇನ | ೧೦-೬೮ |
| ಅಷ್ಟತ್ರಿಂಶತ್ಪ್ರಭೇದೇನ | ೭-೪೯ | ಆತ್ಮಸ್ವರೂಪವಿಜ್ಞಾನಂ | ೧೮-೧೦ |
| ಅಸದೇವ ಜಗತ್ಸರ್ವಂ | ೨೦-೨೮ | ಆತ್ಮಾಂತರಾಲ | ೧೮-೨೧ |
| ಅಸ್ತಿ ಸಚ್ಚಿತ್ಸುಖಾಕಾರ | ೧-೩ | ಆತ್ಮಾನಂದ ಪರಿಸ್ಫೂರ್ತಿ | ೨-೩೧ |
| ಅಸ್ಯ ಜ್ಞಾನ ಸಮಾಚಾರೋ | ೧೬-೭೬ | ಆತ್ಮಾನಂದೇನ ತೃಪ್ತಸ್ಯ | ೧೯-೧೬ |
| ಅಸ್ಯ ಮಾಹೇಶ್ವರಸ್ಯೋಕ್ತಂ | ೧೦-೨೧ | ಆತ್ಮಾನಮಖಿಲಂ ವಸ್ತು | ೧೬-೭೫ |
| ಅಸ್ವತಂತ್ರಾಶ್ಚ ಕಿಂಚಿಜ್ಞಾಃ | ೧೮-೧೫ | ಆತ್ಮಾಽಪಿ ಸರ್ವಭೂತಾನಾಂ | ೧೮-೭ |
| ಅಹಂಕಾರಮದೋದ್ರಿಕ್ತ | ೧೭-೪೧ | ಆತ್ಮಾರಣಿ ಸಮುತ್ಥೇನ | ೧೨-೨೯ |
| ಅಹಂಕಾರಸ್ಥ ಸಂಬಂಧಾನ್ | ೧೮-೨೨ | ಆದಾವಂತೇ ಚ ಮಧ್ಯೇ | ೨೦-೬೭ |
| ಅಹಂತಾಂ ಪರಮಾಂ | ೨೦-೪೦ | ಆದ್ಯತಂ ಬ್ರಹ್ಮವಿಷ್ಣ್ವಾದ್ಯೈ | ೧೧-೧೬ |
| ಅಹಂ ಬ್ರಹ್ಮೇತಿ ಭಾವಸ್ಯ | ೧೮-೪೭ | ಆರ್ದ್ಯಂತು ಪ್ರಕೃತಿಂ ವಿಂದ್ಯಾತ್ | ೭-೨೬ |
| ಅಹಂಭಾವಸ್ಯ ಶೂನ್ಯತ್ವಾತ್ | ೨೦-೫೬ | ಆದಿತಃ ಕ್ರಮಶೋವಕ್ಷ್ಯೇ | ೧೦-೭ |
| ಅಹಂ ಭೃತ್ಯಶ್ಶಿವಸ್ವಾಮೀ | ೧೪-೩೭ | ಆದಿತಃ ಪರಿಶುದ್ಧತ್ವಾನ್ | ೮-೮ |
| ಅಹಂ ಶಿವೋಗುರುಶ್ಚಾಹ | ೧೪-೩೯ | ಆದಿತ್ಯಾ ವಸವೋ ರುದ್ರಾ | ೩-೫೪ |
| ಅಹಮೇವ ಮುನೀಂದ್ರಾಣಾಂ | ೪-೪೭ | ಆದಿಪ್ರಸಾದ ನಾಮಾಥ | ೧೮-೪ |
| ಅಹಿಂಸಾ ಸತ್ಯಮಸ್ತೇಯಂ | ೧೬-೫೯ | ಆದೌ ನವಸ್ಥಲಾನೀಹ | ೧೫-೪ |
| ಆಕಾಂಕ್ಷತೇ ಪದಂ ಯೇಷಾಂ | ೩-೫೦ | ಆದೌ ಭಕ್ತಸ್ಥಲಂ | ೫-೨೪ |
| ಆಗಮಾನುಗ್ರಹಾತ್ | ೨೧-೧೯ | ಆಧಾರವಹ್ನೌ ಚಿದ್ರೂಪೇ | ೧೪-೪೦ |
| ಆಗಮಾ ಬಹುಧಾ ಪ್ರೋಕ್ತಾ | ೫-೯ | ಆಧಾರೇ ಕನಕಪ್ರಖ್ಯಂ | ೬-೩೯ |
| ಆಗ್ನೇಯಂ ಭಸ್ಮನಾ ಸ್ನಾನಂ | ೭-೨೫ | ಆಧಾರೇ ಹೃದಯೇ ವಾಪಿ | ೬-೩೮ |
| ಆಚರೇ ಮಂತ್ರಸಂಸ್ಕಾರಾತ್ | ೯-೬೨ | ಆಧ್ಯಾತ್ಮಿಕಂ ತು ಪ್ರಥಮಂ | ೫-೭೧ |
| ಆಚಾರ ಏವ ಸರ್ವೇಷಾಂ | ೧೬-೧೩ | ಆಧ್ಯಾತ್ಮಿಕಂ ದ್ವಿಧಾ ಪ್ರೋಕ್ತಂ | ೫-೭೨ |
| ಆಚಾರ್ಯಸ್ಸಮ ಮೃತ್ಸ್ವಿತಿ | ೬-೧೯ | ಆಧಿದೈವಿಕಮಾಖ್ಯಾತಂ | ೫-೭೪ |
| ಆಚಾರ್ಯಾಸ್ಯಾವಮಾನೇನ | ೧೧-೨೨ | ಆಪ್ತಾಧಿಕಾರಿಣಃ ಕೇಚಿತ್ | ೩-೪೪ |
| ಆಚ್ಛಾದತೇ ಯಥಾ ಚಂದ್ರೋ | ೧೮-೨೫ | ಆರೇ ರೇಣುಕ ನಿರ್ಬುದ್ಧೇ | ೩-೭೧ |
| ಆತ್ಮಜ್ಞಾನಾವಸಾನಂ | ೧೬-೫೬ | ಆರೋಗ್ಯ ಕಾರಣಂ ಪುಂಸಾಂ | ೧೧-೧೩ |
| ಆತ್ಮಚ್ಯೋತಿಷಿ ಚಿದ್ರೂಪೇ | ೧೭-೪೮ | ಆಲೋಕಮಾತ್ರ ನಿರ್ಧೂತ | ೨೦-೭೩ |
| ಆತ್ಮಜ್ಯೋತಿಷಿ ಸರ್ವೇಷಾಂ | ೧೬-೭೨ | ಆಲೋಕ್ಯ ಶೈವತಂತ್ರಾಣಿ | ೧-೨೫ |
| ಆತ್ಮಭೋಗಾಯ ನಿಹಿತಂ | ೧೧-೧೧ | ಆಸಂಜನಂ ಸಮುಸ್ತಾನಾಂ | ೧೭-೩೯ |
| ಆತ್ಮಮೀಶ್ವರತ್ವಂ ಚ | ೫-೩೭ | ಆಸ್ಪದತ್ವಾಶೇಷಾಣಾಂ | ೮-೯ |
| ಆತ್ಮವತ್ಸರ್ವಭೂತಾನಿ | ೧೬-೬೨ | ಆಸೀದಾಚಾರಸಿದ್ಧಾ | ೧-೧೩ |


12A

| | | | |
|---|---|---|---|
| ಇಂದ್ರಿಯಪ್ರೀತಿ ಹೇತೂನಿ | ೧೭-೩೬ | ಇದಾನೀಮೇವ ಮೇ | ೨೦-೭೬ |
| ಇಂದ್ರಿಯಾಣಾಂ ತಥಾತ್ಮ | ೫-೫೬ | ಈಶ್ವರಸ್ಸರ್ವ ಭೂತಾನಾಂ | ೧೦-೧೦ |
| ಇಂದ್ರಿಯಾಣಾಂ ಬಹಿರ್ವೃತ್ತಿಃ | ೧೭-೧೬ | ಉಕ್ತಾಖಿಲಾಚಾರ | ೯-೯೫ |
| ಇಂದ್ರಿಯಾಣಾಂ ವಶೀಕಾರೇ | ೧೭-೪೩ | ಉಕ್ತ್ವಾ ಭವನ್ ಸಕಲಲೋಕ | ೪-೫೬ |
| ಇಂದ್ರಿಯಾಣಾಂ ಸಮಸ್ತಾ | ೧೭-೧೫ | ಉಕ್ತೋ ಮಾಹೇಶ್ವರಸ್ಸಾಕ್ಷಾತ್ | ೧೧-೧ |
| ಇಂದ್ರಿಯಾಣಾಂ ಸಮಸ್ತಾನಾಂ | ೧೭-೪೨ | ಉತ್ತಮಾಂ ಗತಿಮಾಶ್ರಿತ್ಯ | ೯-೪೧ |
| ಇಂದ್ರಿಯಾಣಿ ಮನೋವೃತ್ತಿಃ | ೧೬-೫೨ | ಉತ್ತಮಾಂಗೇ ಲಲಾಟೇಚ | ೭-೩೨ |
| ಇಂದ್ರಯಾಣಿ ಸಮಸ್ತಾನಿ | ೧೭-೪೯ | ಉದಾರಗುಣ | ೩-೧೧ |
| ಇಂದ್ರಿಯೇರ್ರೈವ | ೧೭-೪೫ | ಉಪದಿಷ್ಟೋಪದೇಶಾನಾಂ | ೧೫-೨೧ |
| ಇಂದೀವರ ಜ್ಯೋತಿ | ೪-೨೧ | ಉಪಮನ್ಯುಂ ಪುರಾಯೋಗಿ | ೮-೪೬ |
| ಇಚ್ಛಾ ಜ್ಞಾನ ಕ್ರಿಯಾ | ೩-೨೫ | ಉಪಮನ್ಯು ಭೃಗು ವ್ಯಾಸ | ೩-೫೬ |
| ಇಚ್ಛಾ ಜ್ಞಾನಾದಿ ರೂಪೇಣ | ೧-೧೧ | ಉಪಾಧಿಃ ಪುನರಾಖ್ಯಾತಃ | ೫-೪೫ |
| ಇತಿ ತಸ್ಯ ವಚಃ ಶ್ರುತ್ವಾ | ೨೧-೨೯ | ಉಪಾಧಿವಿಹಿಂತಾ ಭೇದಾ | ೧೮-೪೩ |
| ಇತಿ ತಸ್ಯ ವಚಃ ಶ್ರುತ್ವಾ | ೪-೪೬ | ಉಪಾಯಂ ವದಮೇ | ೨-೨೦ |
| ಇತಿ ಪಂಚಪ್ರಕಾರೋಽಯಂ | ೯-೨೫ | ಉಪಾಯ ವಿಶ್ವರೇಣೋಕ್ತಂ | ೨-೨೨ |
| ಇತಿ ಪ್ರಶ್ನೀಕೃತೇ ಪೂರ್ವಂ | ೧೭-೭೫ | ಉಪೈತಿ ಲೋಕವಿಖ್ಯಾತಃ | ೬-೨ |
| ಇತಿ ಪ್ರಸಾದಸುಮುಖೇ | ೨೧-೧೮ | ಉಮಯಾ ಸಮಾಸೀನಂ | ೩-೩೬ |
| ಇತಿ ಬ್ರುವಾಣಾಂ ಕಲ್ಯಾಣಾಂ | ೨೧-೧೩ | ಉಮಾಖ್ಯಯಾ ಮಹಾ | ೧೨-೨೩ |
| ಇತಿ ಯಶ್ಚಿಂತಯೇನ್ನಿತ್ಯಂ | ೧೦-೫೬ | ಋಗಿತ್ಯಾಹ ಪವಿತ್ರಂತೇ | ೬-೫೦ |
| ಇತಿ ಶುದ್ಧೇನ ಶಿಷ್ಯೇಣ | ೬-೧೦ | ಋಜುಶ್ಶ್ವೇತಮನುವ್ಯಾಪ್ತಂ | ೭-೩೮ |
| ಇತಿ ಸಂಪ್ರಾರ್ಥಿತಃ | ೨-೨೧ | ಏಕ ಏವ ಶಿವಃ | ೧೬-೬೩ |
| ಇತಿ ಸಂಪ್ರಾರ್ಥಿತೋ ದೇವ್ಯೋ | ೩-೮೬ | ಏಕ ಏವ ಶಿವಸ್ಸಾ | ೯-೫೯ |
| ಇತಿ ಸಂಬೋಧಿತಶ್ಶಿಷ್ಯೋ | ೬-೨೭ | ಏಕ ಏವ ಶಿವಸ್ಸಾಕ್ಷಾತ್ | ೫-೩೪ |
| ಇತಿ ಸ್ತುವಂತಂ ವಿನಯಾತ್ | ೨೦-೮೦ | ಏಕ ಏವ ಯಥಾ ಸೂರ್ಯಂ | ೧೯-೬೫ |
| ಇತ್ಯುಕ್ತಃ ಪರಮೇಶೇನ | ೩-೮೦ | ಏಕಭಾವನಿರೂಢಸ್ಯ | ೧೮-೪೮ |
| ಇತ್ಯುಕ್ತೇ ಗಣನಾಯಕೇನ | ೨೧-೫೩ | ಏಕೀಕೃತೇ ಶಿವೇ ಭಾವೇ | ೧೯-೪೨ |
| ಇತ್ಯುಕ್ತ್ವಾ ಪರಮೇಶ್ವರಃ | ೩-೬೨ | ಏಕೀಭಾವಮುಪೇತಾನಾಂ | ೨೦-೫೩ |
| ಇತ್ಯುಕ್ತ್ವಾ ಪಶ್ಯತಸ್ತಸ್ಯ | ೨೧-೧ | ಏಕೀಭಾವಮುಪೇತಸ್ಯ | ೨೦-೬೯ |
| ಇತ್ಯುಕ್ತ್ವಾ ಪಶ್ಯತಾಂ | ೪-೧೩ | ಏಕೀಭೂತೇ ನಿಜಾಕಾರೇ | ೧೮-೫೬ |
| ಇತ್ಯೇವಂ ಪ್ರಾರ್ಥಿತಃ | ೨-೨೭ | ಏಕೋ ವಶೀಕೃತಸ್ಸಂವಿತ್ | ೧೬-೬೪ |
| ಇದಂ ಮುಖ್ಯಮಿದಂ | ೧೫-೬೦ | ಏತಚ್ಛ್ರವಣ ಮಾತ್ರೇಣ | ೨೦-೮೬ |

ಏತಚ್ಛಿವಪುರಂ ಪ್ರೋಕ್ತಂ ೧೯-೫೬
ಏತನ್ನಾಮಾವಲಂಬೇನ ೮-೧೧
ಏತಾನಿ ಶಿವಭಕ್ತಸ್ಯ ೫-೩೧
ಏತಾವದುಕ್ತ್ವಾ ಪರಮ ೨೦-೭೧
ಏತೇಷಾ ದೇಹಿನಾಂ ಸಾಕ್ಷೀ ೫-೫೧
ಏತೇಷ್ವೇಕತಮ ಮಾದಾಯ ೭-೧೯
ಏತೇಷ್ವೇ ತೇನ ವಿಧಿನಾ ೮-೩೩
ಏವಂ ನವವಿಧಾಭಕ್ತಿಃ ೯-೩
ಏವಂ ಪ್ರಬೋಧಿತ
ಏವಂ ರುದ್ರಾಕ್ಷಧಾರೀ ೭-೫೯
ಏವಂ ವಿಧಂ ವಿಭೂತ್ಯಾ ೭-೪೦
ಏವಂ ವಿಧಾನಾಂ ಚಿತ್ತಾನಾಂ ೪-೪೨
ಏವಮಾಚಾರ ಸಂಯುಕ್ತೋ ೯-೫೧
ಏವಮುಕ್ತ್ವಾ ಸಮಾಸೀನಃ ೨೦-೭೨
ಏಷ ಮಂತ್ರೋ ಮಹಾ ೮-೪೧
ಏಷಾಮಾದಿಮಮುತ್ಸೃಷ್ಟಂ ೭-೧೩
ಐಕ್ಯಸ್ಥಲಮಿದಂ ಪ್ರೋಕ್ತಂ ೧೪-೩
ಐಹಿಕೇ ಕ್ಷಣಿಕೇ ಸೌಖ್ಯೇ ೫-೬೬
ಓಂಕಾರಪೂರ್ವೋ ೮-೧೭
ಔಪಚಾರಿಕದೇಹಿತ್ವಾತ್ ೧೬-೪೩
ಕಂಠನಾಲಜಿತಾನಂಗ ೩-೩೦
ಕಟಾಕ್ಷ ಚಂದ್ರಮಾ ೧೫-೨೬
ಕಟಾಕ್ಷ ಲೇಶಮಾತ್ರೇಣ ೧೫-೨೮
ಕಟೀ ತಟೀ ಪಟೀ ಭೂತ ೪-೪
ಕರ್ತಾರಂ ಸರ್ವಲೋಕಾನಾಂ ೨-೧೪
ಕದಾಚಿದಥ ಕೈಲಾಸೇ ೩-೧
ಕಪಿಲಾ ಕೃಷ್ಣಾ ಚ ಧವಲಾ ೭-೭
ಕರ್ಮ ಕಾಲಾದಿ ಕಾರ್ಪಣ್ಯಾ ೩-೫೧
ಕರ್ಮ ಜ್ಞಾನಾಗ್ನಿನಾ ೧೬-೮೨
ಕರ್ಮಣಾ ಕಿಂ ಕೃತೇನಾಪಿ ೧೯-೩೧
ಕರ್ಮಮೂಲೇನ ದುಃಖೇನ ೫-೭೦
ಕರಣೈಸ್ಸಹಿತಂ ೧೭-೨೨
ಕರಿಪೋತಕರಾಕೃಷ್ಟ ೪-೧೫
ಕಲಂಕವಾನಸೌ ಚಂದ್ರಃ ೧೫-೨೩
ಕಲ್ಪಂ ತದ್ಭಸ್ಮ ವಿಜ್ಞೇಯ ೭-೧೬
ಕಲ್ಪಿತಾನಿ ಹಿ ರೂಪಾಣಿ ೧೫-೪೯
ಕಾಂಶ್ಚಿದ್ವೃಷ್ಟಿ ನಿಪಾತೇನ ೨೧-೩೯
ಕಾಮ ಕ್ರೋಧಮಹಾಮೋಹ ೧೩-೧೭
ಕಾಮ ಕ್ರೋಧಾದಿ ನಿರ್ಮುಕ್ತಃ ೧೫-೫೯
ಕಾಯಂ ವಿನಾ ಸಮಸ್ತಾನಾಂ ೧೬-೩೬
ಕಾರಣಂ ಸರ್ವಲೋಕಾನಾಂ ೧೧-೨೭
ಕಾಲಾತೀತಂ ಕಲಾತೀತಂ ೧೯-೬೯
ಕಾಷ್ಠಂ ವಿನಾ ಯಥಾ ೧೬-೩೮
ಕಿಂಚಿತ್ಕರ್ತಾ ಚ ಕಿಂಚಿಜ್ಞೋ ೫-೪೮
ಕಿಂ ತತ್ತ್ವಂ ಪರಮಂ ೧೭-೭೪
ಕಿಂ ಯಜ್ಞೈರಗ್ನಿ ೧೫-೩೫
ಕಿಂ ವೇದೈಃ ಕಿಂ ತತ ಶಾಸ್ತ್ರೈಃ ೧೧-೪೭
ಕಿಂ ಸತ್ಯಂ ಕಿಂ ನು ವಾ ೧೭-೬೯
ಕಿನ್ನರೀಗೀತಮಾಧುರ್ಯ ೩-೪
ಕಿಮನ್ಯೈಃ ಧರ್ಮಕಲಿಲೈಃ ೧೦-೨೪
ಕಿಮಿಹ ಬಹುಭಿರುಕ್ತೈಃ ೮-೪೮
ಕ್ರಿಯಾ ಯಥಾ ಲಯಂ ೧೫-೩೭
ಕ್ರಿಯಾ ರೂಪಾ ತು ಯಾ ೧೫-೪೪
ಕುಂಕುಮ ಸ್ತಬಕಾಮೋದ ೩-೩
ಕುಂಕಮಂಡಲಿಕೋಪೇತಾ ೬-೧೫
ಕುತೋ ಬ್ರಹ್ಮಾ ಕುತೋ ವಿಷ್ಣುಃ ೧೯-೨೬
ಕುಲಕ್ರಮಾಗತಾಚಾರಂ ೬-೪
ಕುಸುಂಭ ಕುಸುಮ ೩-೩೩
ಕುಸುಮಾಯುಧ ಕೋದಂಡ ೩-೨೯
ಕೂಟಸ್ಥಮಚಲಂ ೧೯-೮೨
ಕೃತಾರ್ಥ ಮೇ ಪುರೀ ೨೧-೧೨
ಕೃತಾಶ್ವಮೇಧೋ ೩-೭೬

| | | | |
|---|---|---|---|
| ಕೃತೋದ್ಯೋಗೋಽಪಿ | ೨-೧೭ | ಗುರುಮಾಹಾತ್ಮ್ಯ | ೧೧-೨೪ |
| ಕೃಷ್ಣಾ ದಶವಿಧಾ ಜಾತಾ | ೭-೫೧ | ಗುರುರೇವಃ ಪರಂ | ೧೮-೭೩ |
| ಕೇನ ಚಿತ್ಕಾರಣೇನಾಹಂ | ೪-೧೧ | ಗುರುರೇವ ಪರಂ ತತ್ತ್ವಂ | ೧೩-೨೩ |
| ಕೇವಲಂ ಕರ್ಮ ಮಾತ್ರೇಣ | ೧೬-೨೬ | ಗುರುರೇವ ಶಿವಂ | ೧೭-೬೧ |
| ಕೇವಲಂ ಸಚ್ಚಿದಾನಂದ | ೨೦-೯೮ | ಗುರುರೇವಾತ್ರ ಸರ್ವೇಷಾಂ | ೧೧-೧೯ |
| ಕೇವಲೇ ನಿಷ್ಪ್ರಪಂಚೌಘೇ | ೧೮-೪೦ | ಗುರುಲಿಂಗಾದಿ ಮಾಹಾ | ೧೧-೫೬ |
| ಕೇವಲೇ ಸಹಜೇ ದಾನೇ | ೧೦-೨ | ಗುರುಲಿಂಗಾದಿ ಮಾಹಾತ್ಮ್ಯ | ೧೧-೬೬ |
| ಕೈವಲ್ಯಕಲ್ಪತರವೋ | ೧೩-೨೭ | ಗುರುವಾಕ್ಯಾಮೃತ ಸ್ವಾದಾತ್ | ೧೭-೮೧ |
| ಕೈಲಾಸೇ ಮಂದರೇ ಚೈವಾ | ೧೦-೭೪ | ಗುರುಶಿಷ್ಯಮಯಂ | ೧೯-೧೨ |
| ಕೋಟಿ ಷಟ್ಕಂ ತು | ೨೧-೨೮ | ಗುರುಶಿಷ್ಯ ಸಮಾರೂಢ | ೧೧-೩೪ |
| ಕ್ಷಣಂ ಸ ಶಂಭುರ್ದೇವಾನಾಂ | ೩-೫೮ | ಗುರೂಪದಿಷ್ಟೇ ವಿಜ್ಞಾನೇ | ೧೭-೮೨ |
| ಕ್ಷಣಮಂತಶ್ಶಿವಂ | ೧೭-೧೭ | ಗುರೋರಭ್ಯರ್ಚನೇ | ೯-೫೨ |
| ಕ್ಷೀರಾಬ್ಧಿರಿವ ಸಿಂಧೂನಾಂ | ೧೩-೨೭ | ಗುರೋರಾಜ್ಞಾಂ ನ ಲಂಘೇತ | ೯-೫೭ |
| ಗಂಡಮಂಡಲ ಪರ್ಯಂತ | ೩-೧೯ | ಗುರೋರಾಲೋಕ ಮಾತ್ರೇಣ | ೬-೧೩ |
| ಗಂಧರ್ವಪುರವದ್ವ್ಯೋಮ್ನಿ | ೧೦-೭೧ | ಗುರೋರ್ಲಿಂಗಸ್ಯ ಮಾಹಾತ್ಮ್ಯ | ೧೧-೪೪ |
| ಗಂಧಸ್ಸಮಾಧಿಸಂಪತ್ತಿ | ೧೨-೧೭ | ಗುರೋರ್ವಿಜ್ಞಾನ | ೧೫-೩೦ |
| ಗಚ್ಛನ್ ತಿಷ್ಠನ್ ಸ್ವಪನ್ | ೧೪-೨೩ | ಗುರೋಶ್ಶಿವಸ್ಯ ಶಿಷ್ಯಸ್ಯ | ೧೪-೩೪ |
| ಗಚ್ಛನ್ ತಿಷ್ಠನ್ ಸ್ವಪನ್ನಾಪಿ | ೧೯-೩೫ | ಗುರೋರಾದೇಶ | ೧೬-೯ |
| ಗಣೇಶ್ವರೌ ರೇಣುಕ | ೨-೩೫ | ಗುರೋಃ ಕಟಾಕ್ಷವೇಧೇನ | ೧೭-೬೪ |
| ಗರ್ಭಸ್ಥೋ ಜಾಯಮಾನೋ | ೧೧-೭೧ | ಗುರೋರ್ಲಬ್ಧ್ವಾ ಮಹಾಜ್ಞಾನಂ | ೧೭-೬೭ |
| ಗಲಿತಾಜ್ಞಾನಬಂಧಸ್ಯ | ೧೯-೮೮ | ಗುರ್ವಾದಿ ಜ್ಞಾನ | ೧೫-೩ |
| ಗಲಿತಾಹಂಕೃತಿ ಗ್ರಂಥಿಃ | ೧೭-೧೩ | ಗೃಹೇ ಯಸ್ಮಿನ್ ಪ್ರಸೂತಾ | ೯-೪೯ |
| ಗಲಿತೇ ಮಮತಾ ಹಂತೇ | ೧೮-೩೯ | ಗೌರೀಪಯೋಧರಾಶ್ಲೇಷ | ೩-೨೧ |
| ಗವಾಂ ಕೋಟಿ ಪ್ರದಾನಸ್ಯ | ೭-೬೩ | ಘಂಟಾಕರ್ಣಃ ಪುಷ್ಪದಂತಃ | ೩-೪೬ |
| ಗುಣತ್ರಯ ಪದಾತೀತ | ೨೧-೫೦ | ಘಟಾದಿಷು ಪೃಥಗ್ಭೂತಂ | ೨೦-೪೫ |
| ಗುಣತ್ರಯ ವಿಭೇದೇನ | ೫-೩೮ | ಘಟೋಪಾಧಿರ್ಯಥಾಕಾಶಃ | ೧೯-೫೨ |
| ಗುಣತ್ರಯಾತ್ಮಿಕಾ ಶಕ್ತಿಃ | ೫-೩೯ | ಘೋರ ಸಂಸಾರ ತಿಮಿರ | ೧೧-೩೭ |
| ಗುಣಾತೀತಂ ಗುಕಾರಂ | ೧೫-೮ | ಘೋರ ಸಂಸಾರ ಸರ್ಪಸ್ಯ | ೧೪-೧೦ |
| ಗುರುತ್ವಾತ್ಸರ್ವಭೂತಾನಾಂ | ೯-೭೩ | ಚಂದ್ರಕಾಂತೇ ಯಥಾ ತೋಯಂ | ೫-೩೬ |
| ಗುರುಪ್ರಸಾದ ಚಂದ್ರೇಣ | ೧೯-೧೮ | ಚಂದ್ರಬಿಂಬಾಯತ | ೩-೧೫ |
| ಗುರುಭಕ್ತಿ ವಿಹೀನಸ್ಯ | ೧೧-೨೩ | ಚಂದ್ರಸ್ಯ ಮೇಘಸಂಬಂಧಾತ್ | ೧೯-೩೨ |

| | | | |
|---|---|---|---|
| ಚಂದ್ರಾರ್ಧಶೇಖರಂ | ೨-೧೦ | ಜಪಾದಿ ವಾಚಿಕೇ ಸೇವಾ | ೯-೧೬ |
| ಚಕ್ರ ನೇಮಿ ಕ್ರಮೇಣೈವ | ೫-೫೦ | ಜಪಾಯೋಗಾದ್ಯಥಾರಾಗಃ | ೧೮-೮ |
| ಚತುರ್ದಶಮುಖಂ ಯಜ್ಞ | ೭-೫೮ | ಜಲೇ ಜಲಮಿವ ನ್ಯಸ್ತ | ೨೦-೬೧ |
| ಚರ್ಮಪಾತ್ರೇ ಜಲಂ ತೈಲಂ | ೯-೪೩ | ಜಾಗ್ರತ್ಸ್ವಪ್ನ ಸುಷುಪ್ತಿಭ್ಯಃ | ೨೦-೨೫ |
| ಚಲಚ್ಚಾಮರಿತೌ | ೩-೪೦ | ಜಾತಸ್ಯ ಧ್ರುವೋ ಮೃತ್ಯುಃ | ೫-೬೭ |
| ಚಕ್ಷುರ್ಹೀನೋ ಯಥಾ | ೧೬-೧೯ | ಜಾನಂತ್ಯತಿಶಯಾದ್ಯೇ | ೧೧-೩೫ |
| ಚಾಮರಾಣಾಂ ವಿಲೋಲಾ | ೩-೪೧ | ಜಿಜ್ಞಾಸಾ ಶಿವತತ್ತ್ವಸ್ಯ | ೧೩-೨೯ |
| ಚಿತ್ತದ್ರವ್ಯಂ ಸಮಾದಾಯ | ೧೭-೪೭ | ಜಿತಕಾಮಾ ಜಿತಕ್ರೋಧಾ | ೧೧-೩೮ |
| ಚಿತ್ತಸ್ಥ ಸಕಲಾರ್ಥಾನಾಂ | ೧೭-೫೧ | ಜೀವತ್ವ ದುಃಖ ಸರ್ವಸ್ವಂ | ೧೮-೧೮ |
| ಚಿತ್ತವೃತ್ತಿಷು ಲೀನಾಸು | ೧೭-೯ | ಜೀವಭಾವಂ ಪರಿತ್ಯಜ್ಯ | ೧೮-೫ |
| ಚಿತ್ತವೃತ್ತಿ ಸಮಾಲೀನ | ೧೪-೧೫ | ಜ್ಯೋತಿರ್ಮಯಂ ಪರಂ | ೧೨-೪೧ |
| ಚಿತ್ಪ್ರಕಾಶಯತೇ | ೧೪-೩೨ | ಜ್ಯೋತಿರ್ಮಯಮನಿರ್ದೇಶ್ಯಂ | ೧೧-೨೮ |
| ಚಿದಾಕಾರೇ ಪರಾಕಾಶೇ | ೧೪-೪೧ | ಜ್ಯೋತಿರ್ಲಿಂಗೇ ಚಿದಾ | ೨೦-೧೧ |
| ಚಿದಾತ್ಮನಿ ಶಿವೇ ನ್ಯಸ್ತಂ | ೨೦-೯ | ಜ್ಯೋತಿರ್ಲಿಂಗೇ ಚಿದಾಕಾರೇ | ೨೦-೧೮ |
| ಚಿದಾನಂದ ಪರಾಕಾಶ | ೧-೨೧ | ಝುಣತ್ಕಂಕಣ ಜಾತೇನ | ೩-೩೯ |
| ಚಿದಾನಂದಮಯಃ | ೧೨-೩೪ | ಜ್ಞಾತಾಪ್ಯಹಂ ಜ್ಞೇಯಂ | ೧೯-೫೦ |
| ಚಿದ್ರೂಪಂ ಪರಮಂ ಲಿಂಗಂ | ೬-೩೦ | ಜ್ಞಾತ್ವಾ ಯಸ್ಸತತಂ | ೧೨-೪೯ |
| ಚಿದ್ರೂಪಂ ಹಿ ಪರಂ ತತ್ತ್ವಂ | ೬-೩೧ | ಜ್ಞಾತೇ ಪಂಚಾಕ್ಷರೀಮಂತ್ರೇ | ೮-೩ |
| ಚಿದ್ವಿಲಾಸ ಪರಿಸ್ಫೂರ್ತಿ | ೧೭-೩೨ | ಜ್ಞಾನಂ ಪರಶಿವಾದ್ವೈತ | ೧೬-೩೦ |
| ಚಿದೇಕಭಾಜನಂ ಯಸ್ಯ | ೧೪-೩೧ | ಜ್ಞಾನಂ ಮುಕ್ತಿಪ್ರದಂ | ೧೬-೮೧ |
| ಚಿನ್ಮಯೇ ಶಾಂಕರೇ ಲಿಂಗೇ | ೧೦-೨೬ | ಜ್ಞಾನಂ ವಸ್ತುಪರಿಚ್ಛೇದೋ | ೧೬-೧೭ |
| ಚಿಲ್ಲಿಂಗಂ ಚೇತಸಿ ಧ್ಯಾತ್ವಾ | ಪೀಠಿಕೆ | ಜ್ಞಾನಚಂದ್ರ ಸಮುದ್ಭೂತಾಂ | ೧೯-೧೪ |
| ಚೂಡಾಲಂ ಸೋಮಕಲಯಾ | ೩-೧೬ | ಜ್ಞಾನಚಂದ್ರೋದಯೇ | ೧೯-೨೨ |
| ಚೂತ ಪ್ರವಾಳ ಸುಷುಮಾ | ೩-೩೪ | ಜ್ಞಾನಮಂಗಮಿತಿ | ೧೨-೪೪ |
| ಚೋದಿತಾಃ ಪರಮೇಶೇನ | ೧೮-೧೬ | ಜ್ಞಾನಮಿತ್ಯುಚ್ಯತೇ | ೧೯-೯೩ |
| ಜಂತುರಂತಶ್ಶರೀರೋ | ೫-೫೯ | ಜ್ಞಾನಶಕ್ತಿಃ ಪರಾ ವಿಷಾಂ | ೩-೪೯ |
| ಜಂತುರಂತ್ಯ ಶರೀರೋಽಸೌ | ೫-೫೫ | ಜ್ಞಾನಸ್ಯ ವ್ಯವಹಾರೇಪಿ | ೧೯-೪೪ |
| ಜಗದಂಗೇ ಪರಿಗ್ರಸ್ತೋ | ೨೦-೧೫ | ಜ್ಞಾನಸ್ಯ ವಿಷಯೇ | ೧೯-೯೪ |
| ಜಪಃ ಪಂಚಾಕ್ಷರಾಭ್ಯಾಸಃ | ೯-೨೩ | ಜ್ಞಾನಹೀನಂ ಸದಾ | ೧೬-೨೭ |
| ಜಪತಿ ಪರಮಭಕ್ತ್ಯಾ | ೮-೪೯ | ಜ್ಞಾನಾಗಮಸ್ಥಲಂ | ೧೬-೩ |
| ಜಪಸ್ತು ತ್ರಿವಿಧಃ ಪ್ರೋಕ್ತೋ | ೮-೨೩ | ಜ್ಞಾನಾದಾಧಿಕ್ಯ ಸಂಪತ್ತಿಃ | ೧೭-೮೩ |

ಜ್ಞಾನಾಮೃತಮಪಿ ೧೯-೧೧
ಜ್ಞಾನಾಮೃತೇನ ತೃಪ್ತಸ್ಯ ೧೮-೭೭
ಜ್ಞಾನಾಮೃತೇನ ತೃಪ್ತೋऽಪಿ ೧೬-೬೫
ಜ್ಞಾನಿನಾಂ ಯೋಗಯುಕ್ತಾನಾಂ ೧೨-೮
ಜ್ಞಾನಿನೋ ಯಾನಿ ಕರ್ಮಾಣಿ ೧೯-೩೦
ಜ್ಞಾನೀ ಕರ್ಮನಿರೂಢೋಽಪಿ ೧೯-೬೩
ಜ್ಞಾನೇನ ಹೀನಃ ಪುರುಷಃ ೧೬-೮೩
ಜ್ಞಾನೇನಾಚಾರ ಯುಕ್ತೇನ ೧೬-೧೪
ಜ್ಞಾನೇ ಸಿದ್ಧೇಽಪಿ ವಿದುಷಾಂ ೧೬-೧೨
ಜ್ಞಾಯತೇ ಲಿಂಗಮೇವ ೧೨-೪೭
ಜ್ಞೇಯಾ ಭಾವಾದ್ವಿಶೇಷೇಣ ೨೦-೭೬
ತಂತ್ರೀ ಝುಂಕಾರ ಶಾಲಿನ್ಯಾ ೩-೩೮
ತ್ವಂತಾ ಹಂತಾ ವಿನಿರ್ಮುಕ್ತೇ ೨೦-೫೫
ತಟಿತ್ಪಿಂಗ ಜಟಾಭಾರೈ ೪-೨೬
ತಟಿತ್ಸುವೀಚಿಮಾಲ ೫-೭೬
ತತೋ ನಂದೀ ಮಹಾಕಾಲ ೩-೪೫
ತತೋ ನಿರ್ದೇಶಮುದ್ದಿಷ್ಟಂ ೧೩-೪
ತತೋ ಭಕ್ತಸ್ಯ ಮಾಹಾತ್ಮ್ಯಂ ೧೧-೫
ತತೋ ವಿವೇಕಸಂಪನ್ನೋ ೬-೧
ತತ್ಕುಲಂ ಹಿ ಸದಾ ೧೧-೬೫
ತತ್ಪುಚ್ಛರೀರಯೋಗೇನ ೧೮-೧೨
ತತ್ರ ಕುತ್ರ ಚಿದಾಭೋಗ ೧-೭
ತತ್ರ ಪ್ರಾಣಾನ್ವಿಹಾಯಾಪಿ ೯-೩೬
ತತ್ರ ಲೀನಮಭೂತ್ಪೂರ್ವಂ ೪-೧೭
ತತ್ರ ಸಂತುಷ್ಟಚಿತ್ತಸ್ಯ ೨೧-೩೪
ತತ್ರ ಸಂಭಾವಿತಃ ಸರ್ವೈಃ ೨೧-೪೪
ತತ್ರ ಸನ್ನಿಹಿತಂ ೧೯-೫೭
ತತ್ಸಂಪ್ರದಾಯ ಸಿದ್ಧೇನ ೧-೨೯
ತಥಾಪಿ ಪ್ರಾರ್ಥನೀಯಂ ೨೧-೨೦
ತದ್ಭಾವ ಜ್ಞಾಪಕಂ ಜ್ಞಾನಂ ೧೫-೪೬
೧೫-೫೨
ತದಿದಂ ಶಿವಸಿದ್ಧಾಂತ ೨೦-೮೫
ತದೀಯಾಯುಧ ೩-೪೩
ತದೇಕತಾನತಾ ಸಿದ್ಧಿಃ ೧೨-೨೩
ತದೇವ ತು ಸ್ವಸಂವೇದ್ಯ ೯-೨೦
ತದೇವ ಸರ್ವಕಾಲಂತು ೧೧-೧೦
ತದೈಕ್ಯ ಸಂಪದಾನಂದ ೧೯-೧೯
ತನ್ಮುಖಾಚ್ಛ್ರೋತುಮಿಚ್ಛಾಮಿ ೪-೫೩
ತಪಸಾಂ ಪರಿಪಾಕೇನ ೨೦-೭೮
ತಪೋ ಹಿ ಮೂಲಂ ಸರ್ವಾಸಾಂ ೧೬-೪೨
ತಮ ಪೃಚ್ಛನ್ ಜನಾಸ್ಸರ್ವೇ ೪-೯
ತಮಾಗತಂ ಮಹಾಭಾಗಂ ೨೧-೫
ತಮಾಗತಂ ಮಹಾಸಿದ್ಧಂ ೪-೩೪
ತಮಾಲೋಕ್ಯ ವಿಭೂಸ್ತತ್ರ ೩-೭೦
ತಮಾಸ್ಥಾನಗತಂ ೩-೧೦
ತಮೋಮೂಲಾ ಹಿ ೧೩-೨೦
ತರಂಗಾದ್ಯಾ ಯಥಾ ಸಿಂಧೌ ೧೯-೮೪
ತರಂಗಾದಿ ಯಥಾ ಸಿಂಧೋಃ ೧೯-೭೩
ತಲ್ಲಿಂಗಂ ತಸ್ಯ ತು ಪ್ರಾಣೇ ೬-೨೪
ತಸ್ಮಾಚ್ಛಿವಮಯಂ ಸರ್ವಂ ೧೦-೬೯
ತಸ್ಮಾತ್ತಪಾಂಸಿ ಯಜ್ಞಶ್ಚ ೮-೭೭
ತಸ್ಮಾತ್ಸರ್ವ ಪ್ರಯತ್ನೇನ ೯-೯೩
ತಸ್ಮಾದ್ದ್ವೈತಭಾವಸ್ಯ ೧೪-೧೩
ತಸ್ಮಾದದ್ವೈತವಿಜ್ಞಾನಂ ೧೯-೯೭
ತಸ್ಮಾದ್ಗುರುಂ ಮಹಾದೇವ ೯-೯೭
ತಸ್ಮಾಲ್ಲಿಂಗಂ ಪರಂ ೧೨-೪೩
ತಸ್ಮಾಲ್ಲಿಂಗಮಿತಿ ಖ್ಯಾತಂ ೬-೩೭
ತಸ್ಮಿನ್ ಕೇವಲ ಚಿನ್ಮಾತ್ರೇ ೨೦-೬೫
ತಸ್ಮೈ ಪ್ರಥಮಪುತ್ರಾಯ ೨-೧೫
ತಸ್ಯ ದಕ್ಷಿಣಕರ್ಣೇತು ೬-೨೧
ತಸ್ಯ ಮಧ್ಯೇ ಸಮಾಸೀನಂ ೪-೨೫
ತಸ್ಯ ವಂಶೇ ಸಮುತ್ಪನ್ನೋ ೧-೧೫
ತಸ್ಯ ವೀರಶೈವಾಚಾರ್ಯ ೧-೨೦

| | | | |
|---|---|---|---|
| ತಸ್ಯಾನುಭಾವಂ ವಿಜ್ಞಾಯ | ೪-೩೫ | ದೀಯತೇ ಚ ಶಿವಜ್ಞಾನಂ | ೬-೧೧ |
| ತಸ್ಮಾನ್ಮುಖ್ಯತರಂ ನಾಮ | ೮-೧೧ | ದೀಯತೇ ಪರಮಂ | ೧೫-೭ |
| ತಸ್ಯಾಭಿಧಾನಮಂತ್ರೋ | ೮-೬ | ದೀಕ್ಷಯೋಪಗತದ್ವೈತಂ | ೧೯-೬ |
| ತಸ್ಯಾಸೀನ್ನಂದನ | ೧-೧೭ | ದೀಕ್ಷಾಗುರುರಸೌ | ೧೫-೧೨ |
| ತಸ್ಯೇತಿ ವಚನಂ ಶ್ರುತ್ವಾ | ೨೧-೩೩ | ದೀಕ್ಷಾಗುರುಸ್ಥಲಂ | ೧೫-೫ |
| ತಸ್ಯೈವ ಪರಕಾಯಸ್ಯ | ೧೬-೫೮ | ದೀಕ್ಷಾಪಾದೋದಕಂ | ೧೯-೩ |
| ತ್ರಯೋದಶಮುಖಾನ್ | ೭-೫೭ | ದೀಕ್ಷಾಲಿಂಗದ್ಯುತಿಶ್ಚೈವ | ೫-೨೮ |
| ತ್ವದೀಯ ಧರ್ಮ | ೨೧-೧೬ | ದುಃಖೈರೇತೈರುಪೇತಸ್ಯ | ೫-೭೫ |
| ತಾದೃಶಂ ತಸ್ಯಮಾಹಾತ್ಮ್ಯಂ | ೨೧-೩೫ | ದುರ್ಲಭಂ ಮಾನುಷಂ | ೧೧-೬೪ |
| ತ್ರಿಕೋಟ್ಯಾಚಾರ್ಯರೂಪೇಣ | ೨೧-೩೪ | ದುರ್ಲಭಂ ಹಿ ಶಿವಜ್ಞಾನಂ | ೧೧-೪೦ |
| ತಾಮಸ ತ್ಯಾಗ ಸಂಬಂಧಾ | ೧೪-೧ | ದುರ್ಲಭಂ ಹಿ ಶಿವೇ | ೧೧-೪೬ |
| ತ್ರಿಪುಂಡ್ರಂ ಧಾರಯೇನ್ನಿತ್ಯಂ | ೭-೩೧ | ದ್ರುಮಾಣಾಮಿವ ಭದ್ರಶ್ರೀಃ | ೧೩-೨೮ |
| ತ್ರಿಪುಂಡ್ರ ಮುಕ್ತಸ್ಥಾನೇಷು | ೭-೩೫ | ದೃಷ್ಟೇ ತಸ್ಮಿನ್ಪರಾನಂದೇ | ೧೯-೧೫ |
| ತ್ರಿಮೂರ್ತಿಭೇದ ನಿರ್ಮುಕ್ತಂ | ೧೫-೪೭ | ದೇವ ತಿರ್ಯಙ್ಮನುಷ್ಯಾದಿ | ೧೮-೬೫ |
| ತ್ರೈಲೋಕ್ಯ ಸಂಪದಾಲೇಖ್ಯ | ೧-೧ | ದೇವ ದೇವ ಜಗನ್ನಾಥ | ೨೧-೪೬ |
| ತುರ್ಯಾತೀತ ಪದಂ | ೨೦-೨೬ | ದೇವ ದೇವ ಮಹಾದೇವ | ೨-೨೩ |
| ತೇಷು ಪ್ರಮಥವರ್ಗೇಷು | ೨-೨೯ | ದೇಶಕಾಲಾದ್ಯವಚ್ಛೇದ | ೧೯-೧೦ |
| ತೇಷು ಶೈವಂ ಚತುರ್ಭೇದಂ | ೫-೧೦ | ದೇಶಕಾಲಾನವಚ್ಛಿನ್ನ | ೨೦-೫೪ |
| ತೇಷ್ವಾಗಮೇಷು | ೧-೨೮ | ದೇಹದ್ವಾರೇಣ ಯದ್ಯತ್ | ೧೭-೩೮ |
| ತೇ ಸಾರೂಪ್ಯಪದಂ | ೩-೫೨ | ದೇಹಸ್ಥಿತ್ವತು ವಾ | ೧೬-೫೫ |
| ದಗ್ಧಂ ಚೈನಾನುಕಲ್ಪಾಖ್ಯಂ | ೭-೧೭ | ದೇಹಸ್ಥಿತೋಪ್ಯಯಂ | ೧೮-೨೦ |
| ದಗ್ಧಂ ಪ್ರಾಗುಕ್ತವಿಧಿನಾ | ೭-೧೭ | ದೇಹಾಭಿಮಾನ | ೧೬-೫೭ |
| ದದಾತಿ ಯಃ ಪತಿಜ್ಞಾನಂ | ೧೫-೧೫ | ದೇಹಾಭಿಮಾನ ಹೀನಸ್ಯ | ೧೬-೪೬ |
| ದರ್ಶನಾತ್ಪರಕಾಯಸ್ಯ | ೧೭-೧೪ | ದೇಹಿನಾಂ ಪ್ರೇರಕಶ್ಶಂಭುಃ | ೫-೫೨ |
| ದರ್ಶನಾತ್ಸ್ಪರ್ಶನಾತ್ | ೧೭-೩೭ | ದೇಹಿನೋಪಿ ಪರಾತ್ಮತ್ವ | ೧೮-೩೮ |
| ದರ್ಶನಾಸ್ಪರ್ಶನಾಚ್ಚೈವ | ೭-೬೧ | ಧರ್ಮಾ ಏವ ಸಮಸ್ತಾನಾಂ | ೧೬-೬೪ |
| ದರ್ಶಯಿತ್ವಾ ನಿಜಾಧಿಕ್ಯಂ | ೨೧-೪೧ | ಧರ್ಮಾಚಾರಸ್ಥಲಂ | ೧೬-೪ |
| ದಾನಂ ಚ ತ್ರಿವಿಧಂ ಪ್ರೋಕ್ತಂ | ೯-೮೧ | ಧಾರಣೀಯಂ ಸಮಸ್ತಾನಾಂ | ೭-೪೩ |
| ದಾನಾತ್ ಸ್ವರ್ಣಸಹಸ್ರಸ್ಯ | ೯-೮೬ | ಧಾರಯೇ ಧವನಾನೇನ | ೬-೫೦ |
| ದಿಕ್ಕಾಲಾದ್ಯನವಚ್ಛಿನ್ನಂ | ೨೦-೪೨ | ಧಾರಯೇನ್ನಿತ್ಯ ಕಾರ್ಯೇಷು | ೭-೧೦ |
| ದೀಪಂ ವಿನಾ ಯಥಾ ಗೇಹೇ | ೧೬-೩೪ | ಧ್ಯಾನಂ ಶಿವಸ್ಯ ರೂಪಾದಿ | ೯-೨೫ |

| | | | |
|---|---|---|---|
| ಧ್ಯಾನಂ ಶ್ರೈವಂ ತಥಾ ಜ್ಞಾನಂ | ೧೫-೫೭ | ನ್ಯ ಕೃತ ಪ್ರಾಕೃತಾಹಂತಂ | ೪-೩೨ |
| ಧೃತ ಶ್ರೀಭೂತಿ ರುದ್ರಾಕ್ಷಃ | ೮-೧ | ನಾರ್ಚಯೇದನ್ಯದೇವಾ | ೯-೩೨ |
| ನಂದಾದೀನಾಂ ತುಯೇ ವರ್ಣಾಃ | ೭-೧೨ | ನಾನ್ನತೋಯ ಸಮಂ | ೯-೪೯ |
| ನಂದಾ ಭದ್ರಾಚ ಸುರಭಿಃ | ೭-೬ | ನಾನ್ಯತ್ಪಶ್ಯತಿ ಯೋಗೀಂದ್ರೋ | ೨೦-೨೭ |
| ನ ಕರ್ಮಬಂಧೇ | ೧೮-೭೮ | ನಾನಾ ಕರ್ಮ ವಿಪಾಕಾಶ್ಚ | ೧೮-೧೩ |
| ನ ಕಿಂಚಿದಪಿ ಮುಕ್ತಸ್ಯ | ೧೮-೬೯ | ನಾನಾ ಪ್ರಥಮಹಾಶ್ಯೈವ | ೨-೭೨ |
| ನ ಚಾಸ್ತಿ ದೇಹಸಂಬಂಧೋ | ೧೮-೧೧ | ನಾನಾ ಮಾರ್ಗಸಮಾರೂಢಾ | ೧೮-೧೩ |
| ನ ಜರಾ ಮರಣಂ ನಾಸ್ತಿ | ೧೭-೧೯ | ನಾಭಿಸ್ಥಾನಾವಲಂಬಿನ್ಯಾ | ೩-೨೨ |
| ನ ತಸ್ಯ ಸೂತಕಂ ಕಿಂಚಿತ್ | ೯-೪೪ | ನಾಭೇರಧಸ್ತಾಲ್ಲಿಂಗಸ್ಯ | ೬-೫೨ |
| ನ ದೇವತ್ವಂ ನ ಮಾನುಷ್ಯಂ | ೨೦-೪೩ | ನಾವಮನ್ಯೇತ ಕುತ್ರಾಪಿ | ೯-೬೫ |
| ನ ಪ್ರಪಂಚೇ ನಿಜೇ ದೇಹೇ | ೧೫-೬೩ | ನಾಸೌದೇವೋ ನ ಗಂಧರ್ವೋ | ೧೮-೧೨ |
| ನ ಪೃಥ್ವ್ಯಾದೀನಿ | ೨೦-೬೪ | ನಾಸ್ತಿಕೋ ಭಿನ್ನಮರ್ಯಾದೋ | ೭-೪೪ |
| ನ ಬಂಧೋ ನ ಚ ಮುಕ್ತಿಶ್ಚ | ೨೦-೫೦ | ನಾಹ್ವಾನಂ ನ ವಿಸರ್ಜನಂ | ೧೦-೪೯ |
| ನ ಬಾಹ್ಯಕರ್ಮ ತಸ್ಯಾಸ್ತಿ | ೧೮-೭೯ | ನಿತ್ಯಂ ಭಾತಿ ತ್ವದೀಯೇಷು | ೧೦-೭೬ |
| ನ ಬಿಭೇತಿ ಜರಾ ಮೃತ್ಯೋಃ | ೧೮-೫೫ | ನಿತ್ಯಂ ಭಾಸಿ ತದೀಯಸ್ತ್ವಂ | ೧೦-೬೧ |
| ನ ಬುದ್ಧ್ಯತಿ ಗುರೋರ್ವಾಕ್ಯಂ | ೧೭-೭೧ | ನಿತ್ಯಂ ಸಂತೋಷಯುಕ್ತಾನಾಂ | ೧೦-೭೮ |
| ನ ಭಾತಿ ಪೃಥ್ವೀ ನ ಜಲಂ | ೨೦-೧೦ | ನಿತ್ಯ ಸಿದ್ಧೇನ ದೇವೇನ | ೧೧-೧೨ |
| ನ ಭಾವೇನ ವಿನಾಜ್ಞಾನಂ | ೧೯-೪೩ | ನಿತ್ಯಸಿದ್ಧೌ ನಿರಾತಂಕೌ | ೨-೩೩ |
| ನಮಶ್ಶಬ್ದಂ ವದೇತ್ಪೂರ್ವಂ | ೮-೭ | ನಿತ್ಯಾನಂದ ಚಿದಾಕಾರಂ | ೫-೭೮ |
| ನಮಃ ಶಿವಾಯೇತಿ | ೭-೨೯ | ನಿತ್ಯಾನಂದಪದೇ ನಿರಾಕೃತ | ೫-೮೩ |
| ನಮಸ್ತೇ ದೇವ ದೇವೇಶ | ೨-೧೯ | ನಿತ್ಯಾನಂದೇ ನಿಜಾಕಾರೇ | ೧೯-೨೫ |
| ನ ಯಥಾ ವಿಧಿಲೋಪಸ್ಯಾ | ೧೬-೭ | ನಿತ್ಯಾನಿ ಕಾಮ್ಯಾನಿ | ೭-೬೬ |
| ನ ಯೋನಿಯಂತ್ರ ಪೀಡಾ | ೯-೧೫ | ನಿತ್ಯಾನಿತ್ಯವಿವೇಕಿನಃ | ೫-೮೨ |
| ನ ಲಂಘಯೇದ್ಗುರೋರಾಜ್ಞಾಂ | ೧೭-೬೫ | ನಿತ್ಯೇ ನಿರ್ಮಲಭಾವನೇ | ೧೫-೭೨ |
| ನವಕಂ ಲಿಂಗ ಕೋಟೀನಾಂ | ೨೧-೨೭ | ನಿತ್ಯೇ ನಿರ್ಮಲ ಸತ್ಯ | ೧೯-೯೮ |
| ನವ ಚಂದನ ಕಾಂತಾರ | ೪-೧೪ | ನಿರ್ದಗ್ಧ ಕರ್ಮಬೀಜಸ್ಯ | ೧೪-೨೧ |
| ನವ ಪಲ್ಲವಾಸೋಭಿ | ೪-೨೭ | ನಿರ್ಧೂತಮಲಸಂಬಂಧೋ | ೧೪-೫ |
| ನ ವಿಧಿರ್ನನಿಷೇಧಶ್ಚ | ೨೦-೪೪ | ನಿರ್ಧೂತೇ ತತ್ತ್ವಬೋಧೇನ | ೧೮-೩೦ |
| ನಶ್ವರಾಣಿ ಶರೀರಾಣಿ | ೫-೬೩ | ನಿರ್ಮಮೋ ನಿರಹಂಕಾರೋ | ೧೦-೧೭ |
| ನ ಸನ್ಮಾನೇಷು ಸಂಪ್ರೀತಿಂ | ೧೫-೬೧ | | ೧೮-೨೬ |
| ನ ಸೂರ್ಯೋ ಭಾತಿ | ೧೨-೪೦ | ನಿರ್ಮಲಂ ಹಿ ಶಿವಜ್ಞಾನಂ | ೧೬-೭೮ |

ನಿರ್ಮಾಲ್ಯ ನಿರ್ಮಲಂ ಶುದ್ಧಂ ೯-೭೬
ನಿರಂಕುಶ ಮಹಾಸತ್ತ್ವ ೩-೪೬
ನಿರಸ್ತ ದೋಷ ಸಂಬಂಧಂ ೨-೯
ನಿರಸ್ತ ಭೇದ ಜಲ್ಪಸ್ಯ ೧೮-೫೫
ನಿರಸ್ತ ಮದನೋನ್ಮೇಷೇ ೧೦-೧೮
ನಿರಸ್ತ ಮಲಸಂಬಂಧಂ ೧೮-೩೫
ನಿರಸ್ತ ವಿಶ್ವಸಂಬಾಧೇ ೧೪-೪೨
ನಿರಸ್ತ ವಿಶ್ವಸಂಭೇದಂ ೧೫-೨೨
ನಿರಸ್ತ ಹೃತ್ಕಲಂಕಸ್ಯ ೫-೬೫
ನಿರಸ್ತೋಪಾಧಿಸಂಬಂಧಂ ೧೯-೭೬
ನಿರಸ್ತೋಪಾಧಿಸಂಬಂಧೇ ೧೯-೩೪
ನಿರಾಕೃತ್ಯ ತಮೋಭಾಗಂ ೧೩-೨೨
ನಿರಾಧಾರಃ ಶಿವಸ್ಸಾಕ್ಷಾತ್ ೧೭-೨೯
ನಿರುಪಾಧಿಕ ಚಿದ್ರೂಪ ೯-೯೪
ನಿರೋದ್ಧುಂ ನ ಕ್ಷಮಂ ೧೧-೫೨
ನಿವರ್ತ್ಯ ಜನ್ಮಜಂ ದುಃಖಂ ೧೯-೪೦
ನಿವಾರಣ ಸಮುದ್ಯೋಗೀ ೧೦-೧೯
ನಿರ್ವಿಕಲ್ಪೇ ಪರೇಧಾಮ್ನಿ ೧೬-೮೦
ನಿರ್ವಿಕಾರಂ ನಿರಾಕಾರಂ ೨೦-೬೩
ನಿರ್ವಿಘ್ನಂ ವರ್ತಸೇ ೪-೩೯
ನಿಷ್ಕಲಂಕಂ ಚಿದಾನಂದ ೧೯-೭೮
ನಿಷ್ಕಲಂಕಂ ನಿರಾಕಾರಂ ೧೬-೨೩
ನಿಷ್ಕಲಂಕೇ ನಿರಾಕಾರೇ ೧೯-೭೯
ನಿಷ್ಕಲಸ್ಸಂವಿದಾಕಾರ ೮-೨೨
ನಿಷ್ಕಲೋ ಹಿ ಮಹಾದೇವೋ ೧೧-೨೦
ನಿಷ್ಕಲೋಹಿ ಮಹಾದೇವಃ ೧೬-೪೦
ನಿಷೇತುಸ್ತಸ್ಯ ನೇತ್ರೇಭ್ಯೋ ೭-೪೮
ನೀಡಸ್ಥಿತಾ ಯಥಾ ಪಕ್ಷೀ ೧೮-೨೪
ನೇಂದ್ರಿಯಾಣಾಂ ನ ದೇಹಸ್ಯ ೫-೬೧
ನೇತ್ರಾತ್ತ್ವೂರ್ಯಾತ್ಮನಶ್ಶಂಭೋಃ ೭-೫೦
ನೇದಂ ರಜತಮಿತ್ಯುಕ್ತೇ ೧೭-೧೦
ನೈರ್ಮಲ್ಯಂ ಮನಸೋ ಲಿಂಗಂ ೧೧-೬
ನೈರಂತರ್ಯೇಣ ಸಂಪನ್ನೇ ೧೬-೨೨
ನೋತ್ಕೃಷ್ಟತ್ವಂ ನ ಹೀನತ್ವಂ ೨೦-೫೧
ಪಂಚಧಾ ಕಥ್ಯತೇ ಸದ್ಭಿಃ ೯-೨೧
ಪಂಚಧಾ ಪಂಚಧಾ ಯಾನಿ ೮-೧೬
ಪಂಚಬ್ರಹ್ಮಾಣಿ ಪಂಚಾಪಿ ೮-೧೫
ಪಂಚಭೂತಾನಿ ಸರ್ವಾಣಿ ೮-೧೪
ಪಂಚಾಕ್ಷರೀಂ ಸಮುಚ್ಚಾರ್ಯ ೮-೪೨
ಪಂಚಾಕ್ಷರೀಮಿಮಾಂ ೮-೨೪
ಪಂಚಾಕ್ಷರೋಪದೇಶೀ ೯-೪೨
ಪಟೀರದಲ ಪರ್ಯಂತ ೪-೧೬
ಪತ್ರಂ ಪುಷ್ಪಂ ಫಲಂ ೧೧-೧೭
ಪತ್ರ ಶಾಖಾದಿ ರೂಪೇಣ ೧೦-೭೨
ಪತಿಂ ವಿನಾ ಯಥಾ ಸ್ತ್ರೀಣಾಂ ೧೩-೩೪
ಪತಿವ್ರತಾಯಾ ಯಚ್ಛೀಲಂ ೧೩-೩೩
ಪತಿಸ್ಸಾಕ್ಷಾನ್ಮಹಾದೇವಃ ೧೦-೪೨
ಪದೇನ ಮಣಿ ಮಂಜೀರ ೩-೨೩
ಪರಂ ಪವಿತ್ರಮಮಲಂ ೧೧-೨೬
ಪರಕಾಯೇ ಕ್ರಿಯಾಪತ್ತಿಃ ೧೯-೨೯
ಪರತತ್ತ್ವಮಯೋಪಾಧಿಃ ೫-೪೦
ಪರಬ್ರಹ್ಮ ಮಹಾಲಿಂಗಂ ೬-೩೩, ೧೬-೨೪
ಪರಬ್ರಹ್ಮವಪುರ್ಯಸ್ಯ ೧೬-೫೦
ಪರಮಾಕಾಶಮವ್ಯಕ್ತಂ ೧೯-೭೧
ಪರಮಾತ್ಮಮನುರ್ಜ್ಞೇಯ ೮-೨೦
ಪರಮಾತ್ಮಸ್ಥಲಂ ೧೮-೩
ಪರಮಾದ್ವೈತ ವಿಜ್ಞಾನ ೧೫-೨೦
ಪರಮಾನಂದ ಏವೋಕ್ತಃ ೧೯-೮
ಪರ ಲಿಂಗೇ ವಿಲೀನಸ್ಯ ೧೬-೪೫
ಪರ ಸಂವಿತ್ಪ್ರಕಾಶಾತ್ಮ ೧೯-೯
ಪರಸ್ತ್ರೀಸಂಗನಿರ್ಮುಕ್ತಃ ೧೦-೧೫

| | |
|---|---|
| ಪರಸ್ಯ ಜ್ಞಾನಚಿಹ್ನಾನಿ | ೧೬-೨೪ |
| ಪರಸ್ಯ ದೇಹಂ ಯೋಽಗೇ | ೧೬-೪೪ |
| ಪರಸ್ಯ ಯಾ ತನುರ್ಜ್ಞೇಯಾ | ೧೬-೩೫ |
| ಪರಾಕಾಶ ಸ್ವರೂಪೇಣ | ೧೯-೫೫ |
| ಪರಾತ್ಪರಂ ತು ಯದ್ಬ್ರಹ್ಮ | ೧೫-೫೦ |
| ಪರಾತ್ಮನಿ ಕ್ರಿಯಾ ಸರ್ವಾ | ೧೯-೮೩ |
| ಪರಾನಂದ ಚಿದಾಕಾರಂ | ೧೫-೩೧ |
| ಪರಾಽತ್ರ ಸಮಾಪೇಕ್ಷ | ೨೦-೬೦ |
| ಪರಾಹಂತಾಮನುಪ್ರಾಪ್ಯ | ೧೬-೫೩ |
| ಪರಾಹಂತಾಮಯೀ | ೧೪-೩೮ |
| ಪರಾಹಂತಾ ಸಮಾವೇಶಾ | ೨೦-೩೨ |
| ಪರಿಚ್ಛೇದ ಕಥಾ ಶೂನ್ಯಂ | ೧-೪ |
| ಪರಿಜ್ಞಾತೇ ಶಿವೇ | ೧೩-೬ |
| ಪರಿತ್ಯಜ್ಯ ಕ್ರಿಯಾಸ್ಸರ್ವಾ | ೧೫-೩೩ |
| ಪರಿಪೂರ್ಣ ಪ್ರಬೋಧೇಪಿ | ೧೯-೩೯ |
| ಪರಿಪೂರ್ಣ ಮಹಾಜ್ಞಾನಂ | ೧೬-೭೯ |
| ಪರಿಪೂರ್ಣ ಮಹಾನಂದ | ೧೯-೩೬ |
| ಪರಿಪೂರ್ಣ ಮಹಾನಂದೇ | ೧೯-೪೬ |
| ಪರಿಭ್ರಮಂತಿ ಸಂಸಾರೇ | ೫-೪೯ |
| ಪಶುತ್ವಂ ಚ ಪತಿತ್ವಂ | ೧೪-೯ |
| ಪಶ್ಯತಾಂ ತತ್ರ ಸರ್ವೇಷಾಂ | ೨೧-೪೫ |
| ಪಶ್ಯನ್ಸರ್ವಾಣಿ ಭೂತಾನಿ | ೧೫-೫೬ |
| ಪ್ರಕಾಶಮಾನೇ ಚಿದ್ವಹ್ನೌ | ೧೭-೪೬ |
| ಪ್ರಕಾಶತೇ ಯಾ ಸರ್ವೇಷಾಂ | ೨೦-೧೪ |
| ಪ್ರಕಾಶತೇ ಯಥಾನಾಗ್ನಿ | ೧೬-೬ |
| ಪ್ರಕಾಶಿತೇ ಶಿವಾನಂದೇ | ೧೯-೪೧ |
| ಪ್ರಕೃಷ್ಟ ಮಣಿಸೋಪಾನೈಃ | ೪-೨೩ |
| ಪ್ರಣತಂ ವಿನಯೋಪೇತಂ | ೨೧-೩೬ |
| ಪ್ರಣವೇನೈಕವರ್ಣೇನ | ೮-೧೯ |
| ಪ್ರಣವೇನೈವಮಂತ್ರೇಣ | ೮-೨೧ |
| ಪ್ರತೀಯಮಾಸೌ ವಿದ್ಯೇತೇ | ೨೦-೫೯ |
| ಪ್ರತ್ಯುವಾಚ ಶಿವಾದ್ವೈತ | ೪-೧೦ |
| ಪ್ರಧ್ವಸ್ತವಾಸನಾ | ೧೭-೩೩ |
| ಪ್ರಧ್ವಸ್ತಾಶ್ರಮವರ್ಣಧರ್ಮ | ೧೫-೭೩ |
| ಪ್ರಪನ್ನ ಪಾರಿಜಾತಸ್ಯ | ೧೧-೬೨ |
| ಪ್ರಪನ್ನಾರ್ತಿಹರೇ | ೧೩-೩೦ |
| ಪ್ರಪನ್ನಾನಾಂ ಮಹಾದೇವಂ | ೧೧-೬೩ |
| ಪ್ರಬೋಧ ಪರಮಾನಂದ | ೨-೨೮ |
| ಪ್ರವರ್ತಯ ಶಿವಾದೇಶಾತ್ | ೨೦-೮೭ |
| ಪ್ರಸನ್ನಂ ಪರಮಾಚಾರ್ಯಂ | ೬-೮ |
| ಪ್ರಸನ್ನೇ ಸತೀ ಮುಕ್ತೋ | ೯-೧೪ |
| ಪ್ರಸಾದಪೂರ್ವಿಕಾ | ೯-೧೨ |
| ಪ್ರಸಾದಮೂಲಾ ಸರ್ವೇಷಾಂ | ೧೧-೭೦ |
| ಪ್ರಸಾದಾದೇವ ಸಾ ಭಕ್ತಿಃ | ೯-೧೧ |
| ಪಸಾದಿಸ್ಥಲಮಾದೌ | ೧೧-೪ |
| ಪ್ರಸಾದಿಸ್ಥಲಮಿತ್ಯೇತ | ೧೧-೩ |
| ಪ್ರಸಾದಿಸ್ಥಲ ಸಂಬಂಧಾಃ | ೧೮-೧ |
| ಪ್ರಸಾದೇ ಶಾಂಭವೇ | ೧೧-೭೩ |
| ಪ್ರಸಾದೋಽಪಿ ಮಹೇಶಸ್ಯ | ೧೧-೬೮ |
| ಪಾಂಚರಾತ್ರಸ್ಯ ಸಾಂಖ್ಯಸ್ಯ | ೫-೬ |
| ಪಾತ್ರಂ ಶಿವಪ್ರಸಾದಸ್ಯ | ೨೦-೮೨ |
| ಪಾದಾಗ್ರರೇಣವೋ | ೧೧-೪೨ |
| ಪಾದೋದಕಂ ಯಥಾ ಭಕ್ತ್ಯಾ | ೯-೬೭ |
| ಪಾಹಿ ಮಾಂ ಪರಮೇಶಾನ | ೨೧-೫೧ |
| ಪಾರ್ಶ್ವಸ್ಥ ತಿಮಿರಂ ಹಂತಿ | ೧೫-೨೪ |
| ಪಾರ್ಶ್ವಸ್ಥ ಪರಿವಾರಾಣಾಂ | ೩-೫೭ |
| ಪಾರ್ಶ್ವಸ್ಥೈರಶ್ರುತ | ೮-೨೯ |
| ಪ್ರಾಕೃತೈಶ್ವರ್ಯ ಸಂಪತ್ತಿ | ೧೫-೬೪ |
| ಪ್ರಾಣ ಏವ ಮನುಷ್ಯಾಣಾಂ | ೧೭-೨೮ |
| ಪ್ರಾಣಲಿಂಗಂ ತು ತತ್ಸೂಕ್ಷ್ಮಂ | ೬-೪೮ |
| ಪ್ರಾಣಲಿಂಗಾದಿ ಯೋಗೇನ | ೧೪-೨ |
| ಪ್ರಾಣಲಿಂಗಿಸ್ಥಲಂ | ೧೨-೪ |

ಪ್ರಾಣವದ್ಧಾರಣೀಯಂ ೬-೨೫
ಪ್ರಾಣಾನುಗ್ರಹಣಂ ೧೭-೩
ಪ್ರಾಣಾಪಾನ ಸಮಾಘಾತಾತ್ ೧೨-೬
ಪ್ರಾಣಾಯಾಮ ತ್ರಯಂ ೮-೨೫
ಪ್ರಾಣೋ ಯತ್ರ ಲಯಂ ೧೨-೭
ಪ್ರಾಣೋ ಯಸ್ಯ ಲಯಂ ೧೭-೨೫
ಪ್ರಾತಃಕಾಲೇ ಚ ಮಧ್ಯಾಹ್ನೇ ೭-೩೯
ಪ್ರಾತಸ್ಸಂಪುಲ್ಲ ಕಮಲ ೩-೧೮
ಪ್ರಾದುರ್ಭೂತಂ ತಮಾಲೋಕ್ಯ ೪-೨
ಪ್ರಾಪ್ತವಿದ್ಯೋ ಮಹಾದೇವಾ ೨-೧೬
ಪ್ರೇರಕಂ ಶಂಕರಂ ಬುಧ್ವಾ ೧೦-೪೧
ಪಿಂಡಾಂಡಸ್ಥಂ ಯಥ್ವಾಕಾಶಂ ೧೯-೬೬
ಪೀಠಿಕಾ ಪರಮಾಶಕ್ತಿಃ ೧೧-೩೧
ಪ್ರೀತೋಽಸ್ಮಿ ತವ ೨೧-೧೭
ಪುಂಡರೀಕಾಕೃತಿ ಸ್ವಚ್ಛಂ ೩-೩೭
ಪುನಸ್ತ ಪ್ರಾರ್ಥಯಾಮಾಸ ೨-೨೨
ಪುನಃ ಕರ್ಮಾವಶೇಷೇಣ ೧೮-೧೭
ಪುರಾ ತ್ರಿಪುರಸಂಹಾರೇ ೭-೪೭
ಪುರಾ ಸಾನಂದಯೋಗೀಂದ್ರಃ ೮-೪೪
ಪುರಾ ಹೈಮವತೀಸೂನು ೪-೪೪
ಪೂಜನಾಚ್ಛಿವಭಕ್ತಸ್ಯ ೯-೨೭
ಪೂಜ್ಯ ಪೂಜಕಯೋರ್ಲಿಂಗ ೧೦-೩೯
ಪೂಜಾದಿ ವ್ಯವಹಾರಸ್ಯಾತ್ ೧೦-೪೫
ಪೂಜಾವಿಧೌ ನಿಯಮ್ಯತ್ವಾತ್ ೧೦-೬೪
ಪೂಜಿತೇನ ಪ್ರಸನ್ನೇನ ೨೧-೭
ಪೂರ್ವಪಕ್ಷಂ ಸಮಾದಾಯ ೧೫-೧೬
ಪೂರ್ವಾಶ್ರಯ ನಿರಾಸಾಚ್ಚ ೧೦-೫
ಪೃಥಿವ್ಯಾದ್ಯಷ್ಟಮೂರ್ತಿತ್ವಂ ೧೦-೫೧
ಪೃಥಿವ್ಯಾದಾತ್ಮಪರ್ಯಂತ ೧೦-೫೩
ಪೃಥ್ವ್ಯಾದಿಕಮಿದಂ ಸರ್ವಂ ೧೦-೫೨
ಫಲಂ ಕ್ರಿಯವತಾಂ ೧೬-೨೮
ಫಲಾಭಿಸಂಧಿ ನಿರ್ಮುಕ್ತಂ ೯-೮೩
ಫಲಾಭಿಸಂಧಿ ಸಂಯುಕ್ತಂ ೯-೮೨
ಬದ್ಧೇಂದ್ರಿಯ ನವದ್ವಾರೇ ೧೨-೧೫
ಬಹಿರ್ವಾಸನಯಾ ವಿಶ್ವಂ ೧೨-೨೮
ಬಹಿಸ್ತಿಮಿರ ವಿಚ್ಛೇತ್ತಾ ೧೫-೨೭
ಬಹುಜನ್ಮಕೃತೈಃ ಪುಣ್ಯೈಃ ೫-೩೨
ಬಹುನಾತ್ರ ಕಿಮುಕ್ತೇನ ೯-೧೦
೧೧-೭೫
೧೨-೩೬
೧೩-೩೫
ಬಾಹುಯುಗ್ಮೇ ಕಕುದ್ದೇಶೇ ೭-೩೩
ಬಾಹ್ಯಕ್ರಿಯಾಂ ಪರಿತ್ಯಜ್ಯ ೧೫-೫೧
ಬಾಹ್ಯಪೀಠಾರ್ಚನಾ ೬-೫೪
ಬಾಹ್ಯಮಾಭ್ಯಂತರಂ ೯-೧೭
ಬೋಧಕೋಽಯಂ ೧೫-೧೩
ಬೋಧ್ಯಮಾನಸ್ಯ ೧೭-೬೮
ಬ್ರಹ್ಮಜ್ಞಾನೇ ಸಮುತ್ಪನ್ನೇ ೧೯-೯೬
ಬ್ರಹ್ಮಣಾ ವಿಷ್ಣುನಾ ಪೂರ್ವಂ ೧೧-೩೦
ಬ್ರಹ್ಮ ವಿಷ್ಣ್ವಾದಯಃ ೧೫-೩೬
ಬ್ರಹ್ಮ ವಿಷ್ಣ್ವಾದಯೋ ದೇವಾ ೬-೫೫
ಬ್ರಹ್ಮ ವಿಷ್ಣ್ವಾದಯೋ ದೇವಃ ೧೨-೩೩
ಬ್ರಹ್ಮ ವಿಷ್ಣುಶ್ಚ ರುದ್ರಶ್ಚ ೬-೪೩
ಬ್ರಹ್ಮಾಂಡ ಕುಂಡಿಕಾ ೩-೧೪
ಬ್ರಹ್ಮಾಂಡ ಬುದ್ಬುದಸ್ತೋಮಾ ೧೮-೩೨
ಬ್ರಹ್ಮಾಂಡಬುದ್ಬುದೋ ೧೪-೭
೧೭-೬೩
ಬ್ರಹ್ಮಾಂಡ ಶತಕೋಟೀನಾಂ ೨೦-೨೯
ಬ್ರಹ್ಮ ಹಾ ಮದ್ಯಪಾಯೀ ೭-೬೦
ಬ್ರಹ್ಮಾದಯ ಸುರಾಃ ೧೧-೩೨
ಬ್ರಹ್ಮಾದ್ಯಾ ದೇವತಾಸ್ಸರ್ವಾ ೧೬-೪೧
ಬ್ರಹ್ಮಾದ್ಯಾ ವಿಬುಧಾಸ್ಸರ್ವೇ ೭-೨೭
೧೧-೭೨

ಬ್ರಹ್ಮಾದ್ಯಾಃ ಕಿಂ ನು ೧೫-೭೦
ಬ್ರಹ್ಮಾದಿ ದೇವತಾಜಾಲಂ ೧೦-೧೧
ಬ್ರಹ್ಮಾದಿ ವಿಬುಧಾನ್ ೧೧-೫೭
ಬ್ರಹ್ಮಾದೀನಾಂ ಚ ದೇವಾನಾಂ ೮-೪೮
ಬ್ರಹ್ಮಾದ್ಯೈರ್ಮಲಿನಪ್ರಾಯ್ಯೈ ೧೦-೯
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ೭-೪೧
ಬ್ರಹ್ಮಾ ವಿಷ್ಣ್ವಾದಿಭಿರ್ದೇವೈಃ ೩-೫೯
ಬ್ರಹ್ಮೇತಿ ಲಿಂಗಮಾಖ್ಯಾತಂ ೬-೬೦
ಬ್ರಹ್ಮೇತಿ ವ್ಯಪದೇಶಸ್ಯ ೧-೨
ಬ್ರಹ್ಮೋಪೇಂದ್ರ ಮಹೇಂದ್ರಾ ೩-೫೩
ಬ್ರಾಹ್ಮಣೋ ವಾಂತ್ಯಜೋ ೭-೬೨
ಬ್ರಾಹ್ಮಣಾಃ ಕ್ಷತ್ರಿಯೇ ೧೧-೫೩
ಭಕ್ತಮಾರ್ಗಕ್ರಿಯಾ ಚೈವ ೫-೨೯
ಭಕ್ತಸ್ಥಲಂ ಪ್ರವಕ್ಷ್ಯಾಮಿ ೫-೨೫
ಭಕ್ತಸ್ಥಲಂ ಸಮಾಖ್ಯಾತಂ ೧೦-೧
ಭಕ್ತಾದಿರ್ನಾಮಾಪರ ೧೪-೪೪
ಭಕ್ತಾದ್ಯೈಕ್ಯಾವಸಾನಾಃ ೧೫-೨
ಭಕ್ತ್ಯಾಪಂಚಾಕ್ಷರೇಣೈವ ೮-೩೫
ಭಕ್ತಿಃ ಶೈವೀ ಮಹಾಘೋರ ೪-೪೫
ಭಕ್ತಿಃ ಸ್ಥಿರೀಕೃತಾ ಯಸ್ಮಿನ್ ೯-೫
ಭಕ್ತೇರ್ಯದಾ ಸಮುತ್ಕರ್ಷೋ ೧೦-೩
ಭಕ್ತೋ ಮಾಹೇಶ್ವರಃ ೧೨-೧
೧೨-೨
ಭದ್ರಾಸನೇ ನಿಜೇ ರಮ್ಯೇ ೨೧-೬
ಭವದಾಹ್ವಾನ ಸಂಭ್ರಾಂತ್ಯಾ ೩-೮೧
ಭವ ಶರ್ವ ಮಹೇಶಾನ ೨-೨೪
ಭವಾದೃಶಾನಾಂ ಸಿದ್ಧಾನಾಂ ೪-೫೨
ಭಸ್ಮಧಾರಣ ಸಂಯುಕ್ತಃ ೭-೧
ಭಸ್ಮನಾ ವಿಹಿತ ಸ್ನಾನಃ ೭-೪೫
ಭಸ್ಮನಾ ವಿಹಿತಂ ಸ್ನಾನಂ ೭-೨೩
ಭಸ್ಮಸ್ನಾನಯುತಾಸ್ಸರ್ವೇ ೭-೨೮
ಭಸ್ಮಸ್ನಾನವತಾಂ ಪುಂಸಾಂ ೭-೨೪
ಭಸ್ಮಾಲಂಕೃತ ಸರ್ವಾಂಗಂ ೪-೩೦
ಭಸ್ಮೋತ್ಪಾದನಮುದ್ದಿಷ್ಟಂ ೭-೧೩
ಭಸ್ಮೋದ್ಧೂಳಿತ ಸರ್ವಾಂಗಂ ೪-೩
ಭಸ್ಮೋದ್ಧೂಳಿತ ಸರ್ವಾಂಗಾ ೭-೬೫
ಭಸ್ಮೋದ್ಧೂಳಿನ ನಿಷ್ಣಾತಂ ೬-೫
ಭಾಂಡಸ್ಥಲಂ ತತಃ ೨೦-೪
ಭಾವಃ ಪ್ರತೀಯಮಾನೋ ೧೯-೩೭
ಭಾವ ಏವಸ್ಯ ಸರ್ವೇಷಾಂ ೧೬-೬೭
ಭಾವ ಏವ ಹಿ ಜಂತೂನಾಂ ೧೭-೫೨
ಭಾವ ಚಿಹ್ನಾನಿ ವಿದುಷೋ ೧೬-೧೫
ಭಾವ್ಯತೇ ವರ್ಣರೂಪೇಣ ೮-೨೯
ಭಾವನಾತೀತಮವ್ಯಕ್ತಂ ೬-೪೯
ಭಾವನಾ ವಿಹಿತಂ ಕರ್ಮ ೧೬-೬೮
ಭಾವಯಿತ್ವಾ ಸದಾಕಾಲಂ ೧೨-೧೫
ಭಾವಯೇತ್ಸರ್ವ ಕರ್ಮಾಣಿ ೧೬-೭೩
ಭಾವಲಿಂಗಸ್ಥಲಂ ೧೫-೬
ಭಾವಶುದ್ಧೇನ ಮನಸಾ ೧೬-೨೧
ಭಾವಸ್ಯ ಶುದ್ಧಿರಾಖ್ಯಾತಾ ೧೭-೫೩
ಭಾವಾ ಭಾವವಿನಾಶಂ ೨೦-೫
ಭಾವೇನ ಕಿಂ ಫಲಂ ೧೬-೨೫
ಭಾವೇನ ಗೃಹ್ಯತೇ ದೇವೋ ೧೫-೩೮
ಭಾವೇನ ನಾಸ್ತಿ ಸಂಬಂಧಃ ೧೯-೩೮
ಭಾವೇನ ಹಿ ಮನಶ್ಶುದ್ಧಿಃ ೧೬-೬೯
ಭಾವೋ ಯಸ್ಯ ಸ್ಥಿರೋ ೧೭-೫೯
ಭ್ರಾಂತಿಮೂಲ ಪ್ರಪಂಚಸ್ಯ ೧೨-೧೮
ಭಿಕ್ಷಾಮಾತ್ರಪ್ರದಾನೇನ ೯-೯೧
ಭುಂಜೀಯಾದ್ರುದ್ರಭುಕ್ತಾನ್ನಂ ೯-೭೧
ಭೂತ್ವಾಕರ್ಮವಶಾಜ್ಜಂತುಃ ೫-೬೯
ಭೂತಿ ರುದ್ರಾಕ್ಷ ಸಂಯುಕ್ತೋ ೯-೧
ಭೃಗೋಶ್ಚ ಶಂಕುಕರ್ಣಸ್ಸ ೩-೭೪

ಭೇದಬುದ್ಧಿಸ್ಸಮಸ್ತಾನಾಂ ೧೮-೪೪
ಭೇದಬುದ್ಧಿ ಸಮುತ್ಪನ್ನ ೧೪-೧೧
ಭೇದಸ್ಯ ಕರ್ಮಹೇತುತ್ವಾತ್ ೧೦-೪೪
ಭೇದಶೂನ್ಯೇ ಮಹಾಬೋಧೇ ೧೮-೫೨
ಭೋ ಕಲ್ಯಾಣ ಮಹಾಭಾಗ ೬-೯
ಭೋಕ್ತಾ ಭೋಜ್ಯಂ ಪ್ರೇರಯಿತಾ ೫-೪೨
ಭೋಕ್ತಾ ಭೋಜ್ಯಂ ಭೋಜಯಿತಾ ೧೭-೫೪
ಭೋಕ್ತೃ ಭೋಜ್ಯ ಪರಿತ್ಯಾಗಾತ್ ೧೮-೨೭
ಭೋಜ್ಯಮವ್ಯಕ್ತಮಿತ್ಯುಕ್ತಂ ೫-೪೪
ಭ್ರಮಂತಿ ಘೋರಸಂಸಾರೇ ೧೮-೧೭
ಭ್ರೂಮಧ್ಯಾದೂರ್ಧ್ವಭಾಗೇ ೧೨-೨೬
ಮಂಡಲೇ ಸ್ಥಾಪಯೇಚ್ಛಿಷ್ಯ ೬-೧೮
ಮಾಂತ್ರದೀಕ್ಷೇತಿ ಸಾಪ್ರೋಕ್ತಾ ೬-೧೪
ಮಂತ್ರಪೂತೇ ಕಲಾಂ ಶೈವೀಂ ೬-೨೩
ಮಂತ್ರನ್ಯಾಸಾದಿಭೂತೇನ ೮-೧೮
ಮಂತ್ರೇಣ ತಮಸೇವಂತ ೩-೪೨
ಮಂದಾರ ಚಂದನ ಪ್ರಾಯೈ ೪-೧೮
ಮಂದಾರು ಬಕುಲಾಶೋಕ ೩-೨
ಮಣಿಕಂಕಣ ಕೇಯೂರ ೩-೨೦
ಮಣಿತಾಟಂಕ ರಂಗಾಂತ ೩-೨೮
ಮತ್ಸ್ಯ ಕೂರ್ಮ ವರಾಹಾಂಗೈಃ ೫-೬೮
ಮಥಿತಾಚ್ಛಾಸ್ತ್ರ ಜಲಧೇಃ ೧೯-೧೩
ಮದದ್ವೈತಪರಂ ಶಾಸ್ತ್ರ ೩-೯೦
ಮದ್ಭಕ್ತೇನ ದಧೀಚೇನ ೩-೭೫
ಮದ್ಭಾಗ್ಯಗೌರವಾತ್ ೨೧-೧೦
ಮತ್ಸಮೋ ನಾಸ್ತಿ ಲೋಕೇಷು ೨೧-೧೧
ಮದೀಯ ಲಿಂಗಸಂಭೂತಂ ೩-೮೯
ಮಧ್ಯಮಾನಾಮಿಕಾಂಗುಷ್ಠೈ ೭-೭೭
ಮಧ್ಯಾಂಗುಲಿತ್ರಯೇಣೈವ ೭-೩೬
ಮನಃಪ್ರಸಾದಸಿದ್ಧ್ಯರ್ಥಂ ೧೧-೮
ಮನುಷ್ಯೇ ನ ನ ದೇವ್ಯೋ ೧೬-೪೮
ಮನೋ ಮಹೇಶಧ್ಯಾನಾರ್ಥ್ಯಂ ೯-೧೮
ಮನೋ ಯತ್ರ ಪ್ರವರ್ತೇತ ೧೭-೨೦
ಮಮ ಪ್ರತಾಪಮತುಲಂ ೩-೬೧
ಮಮ ಭಕ್ತಮವಜ್ಞಾಯ ೩-೭೩
ಮಲಕೋಶೇ ಶರೀರೇ ೫-೭೭
ಮಹತಾಂ ಶಿವ ತಾತ್ಪರ್ಯ ೧೧-೪೩
ಮಹಾಕಾಶಸ್ಥಲಂ ೧೯-೪
ಮಹಾಭಸ್ಮೇತಿ ಸಂಚಿಂತ್ಯ ೭-೨
ಮಹಾಸತ್ತಾ ಮಹಾಸಂವಿತ್ ೧೮-೫೭
ಮಾಣಿಕ್ಯದೀಪಾ ಕಲಿತಾ ೩-೬
ಮಾತೃಮೇಯ ಪ್ರಮಾಣಾದಿ ೨೦-೭
ಮುಖ್ಯಾರ್ಥೋ ಲಕ್ಷಣಾರ್ಥ ೨೦-೬
ಮಾನುಷಂ ಯೋನಿಮಾಸಾದ್ಯ ೩-೮೨
ಮಾಯಾರಜನ್ಯಾ ವಿರಮೇ ೧೯-೨೩
ಮಾಯಾದಿ ಕಲ್ಪಜಂ ವಿಶ್ವಂ ೧೨-೧೧
ಮಾಯಾಶಕ್ತಿ ತಿರೋಧಾನಾತ್ ೧೪-೮
ಮಾಯಾಶಕ್ತಿ ವಶಾದೀಶೋ ೫-೪೭
ಮಾಯೀ ಮಾಹೇಶ್ವರಸ್ತೇಷಾಂ ೫-೩೫
ಮಾಹಾತ್ಮ್ಯಂ ವಾಚಿತಸ್ಸ್ಯೇ ೮-೩೧
ಮಾಹೇಶ್ವರಸ್ಥಲಂ ವಕ್ಷ್ಯೇ ೧೦-೪
ಮಾಹೇಶ್ವರಸ್ಥಲೇ ೧೬-೨
ಮಾಹೇಶ್ವರಾಸ್ಸಮಾಖ್ಯಾತಃ ೫-೨೧
ಮಾಹೇಶ್ವರಃ ಪ್ರಸಾದಿ ೧೩-೧
ಮಿಥ್ಯೇತಿ ಭಾವಯನ್ವಿಶ್ವಂ ೧೭-೫೫
ಮುಕ್ತಸಂಶಯಪಾಶತಃ ೧೭-೮೬
ಮುಕ್ತಾತಾರಕಿತೋದಾರ ೩-೭
ಮುಕ್ತಾವಲಯ ಸಂಬದ್ಧ ೩-೧೭
ಮುಕ್ತಿರೂಪಮಿದಂ ೧೨-೪೭
ಮುಕ್ತಿರೇವ ಪರಾ ೧೮-೭೮
ಮುಖ್ಯಾರ್ಥೇಽಸಂಭವೇ ೧೯-೯೧
ಮುಕ್ತಸ್ಯ ಜ್ಞಾನಸಂಬಂಧೋ ೧೯-೯೨

ಮುದ್ಧಾನಾತ್ಸರ್ವಜಂತೂನಾಂ ೧-೧೬
ಮುನಿಕನ್ಯಾಕರಾನೀತ ೪-೧೯
ಮುಕ್ತಾ ತ್ಮನ್ಯೈವ ೧೬-೩೯
ಮೂರ್ಧ್ನಿ ವಾ ಕಂಠದೇಶೇ ೬-೫೧
ಮೂಲಂ ವಿದ್ಯಾ ಶಿವಶ್ಶೈವಂ ೮-೨೩
ಮೂಲಾಧಾರೇ ಚ ಹೃದಯೇ ೬-೩೪
ಮೂಲಾಧಾರೇಽಥವಾ ೧೫-೪೨
ಮೃಚ್ಛಿಲಾ ವಿಹಿತಾತ್ ೧೫-೪೦
ಮೃಣಾಲವಲ್ಲರೀತಂತು ೩-೩೨
ಮೃತ್ಯುಕಾಲೇ ಚ ೭-೬೪
ಮೋಹಾಂಧಕಾರ ತಪನಂ ೪-೩೩
ಯಂತ್ರ ಮಂತ್ರ ಕಲಾಸಿದ್ಧಾನ್ ೨೧-೪೨
ಯ ಇದಂ ಶಿವಸಿದ್ಧಾಂತ ೨೧-೩
ಯಜ್ಞಾದಯಃ ಕ್ರಿಯಾ ೧೫-೩೪
ಯಜ್ಞಾ ಸ್ತಪಾಂಸಿ ೧೧-೬೬
ಯತ್ಕಟಾಕ್ಷಕಲಾಮಾತ್ರಾತ್ ೯-೫೫
ಯತ್ಕಿಂಚಿದ್ಭಾಷಿತಂ ೧೪-೨೬
ಯತ್ಫಲಂ ಲಭತೇ ಜಂತುಃ ೯-೬೪
ಯತ್ರ ಕುತ್ರಾ ಪಿ ವಾ ೧೩-೧೮
ಯತ್ರ ನಾಸ್ತಿ ಭಿಧಾಯೋಗಾತ್ ೨೦-೪೯
ಯತ್ರ ಚಾಚಾರ ನಿಂದಾಸ್ತಿ ೮-೩೮
ಯತ್ರ ವಿಶ್ರಾಮ್ಯತೀಶ್ವತ್ವಂ ೧-೭
ಯತ್ರ ಸ್ಥಾವರಲಿಂಗಾನಾಂ ೯-೩೫
ಯತ್ಸೂಕ್ತಿದರ್ಪಣೇ ೧೫-೧೮
ಯಥಾಕಾಶಮವಿಚ್ಛಿನ್ನಂ ೧೮-೬೮
ಯಥಾಕಾಶೋ ವಿಭುಃ ೧೯-೫೯
ಯಥಾ ಗುರೌ ಯಥಾ ಲಿಂಗೇ ೯-೫೮
ಯಥಾ ಚಂದ್ರೇಸ್ಥಿರಾ ೨೦-೩೮
ಯಥಾ ಜ್ಯೋತೀಂಷಿ ೧೯-೭೫
ಯಥಾ ತಥಾ ನ ಭಿದ್ಯಂತೇ ೫-೨೦
ಯಥಾ ತಂತುಭಿರುತ್ಪನ್ನಃ ೧೦-೬೭
ಯಥಾತ್ಮ ಶಿವಯೋರೈಕ್ಯಂ ೧೦-೫೦
ಯಥಾ ದೇವೇ ಜಗನ್ನಾಥೇ ೯-೫೩
ಯಥಾ ನ ಭಿನ್ನಮಾಕಾಶಂ ೧೯-೬೭
ಯಥಾನಾದಿರ್ಮಹಾದೇವ ೮-೧೩
ಯಥಾ ಪದ್ಮಪಲಾಶಸ್ಯ ೧೮-೨೩
ಯಥಾ ಪಿಂಡಸ್ಥ ಆಕಾಶಃ ೧೯-೫೧
ಯಥಾ ಪುಷ್ಪ ಪಲಾಶಾದಿ ೧೯-೭೪
ಯಥಾ ಮೇಘಾಸ್ಸಮುದ್ಭೂತಾ ೨೦-೨೩
ಯಥಾ ಮೇ ಮಾನುಷೋ ೩-೮೫
ಯಥಾವಹ್ನಿರಮೇಯಾತ್ಮಾ ೧೯-೬೨
ಯಥಾ ವ್ಯಾಪ್ಯ ಜಗತ್ಸರ್ವಂ ೧೮-೩೬
ಯಥಾ ವಿಧಿ ಯಥಾ ಯೋಗಂ ೬-೧೭
ಯಥಾಶಾಸ್ತ್ರೋಕ್ತವಿಧಿನಾ ೭-೧೪
ಯಥಾ ಶಿವಪ್ರಸಾದಾನ್ನಂ ೧೧-೧೮
ಯಥಾ ಶಿವೋಽನುಗೃಹ್ಣಾತಿ ೧೭-೬
ಯಥಾ ಸ್ವಪ್ನಕೃತಂ ೧೭-೧೧
ಯಥಾ ಸ್ಥಾನಂ ಯಥಾ ವಕ್ತ್ರಂ ೭-೫೩
ಯಥಾ ಸೂರ್ಯಸಮಾಕ್ರಾಂತೌ ೧೯-೯೦
ಯಥ್ಯೇಕೋ ವಾಯುರಾಖ್ಯಾತ ೧೯-೬೧
ಯದಾ ನಿರಸ್ತಂ ಜೀವತ್ವಂ ೧೮-೧೯
ಯದಾ ಶಿವಕಲಾಯುಕ್ತಂ ಲಿಂಗಂ ೧೦-೪೭
ಯದಿ ಪ್ರಮಾದಾತ್ಪತಿತೇ ೬-೨೯

ಯದೃಚ್ಛಾಲಾಭ ಸಂತುಷ್ಟೋ ೧೫-೫೫
ಯದ್ಗ ತ್ಯಹೇಷ್ಟನ್ಯದೇವೋ ೯-೩೩
ಯದ್ಯತ್ಪಶ್ಯತಿ ಸಾಮೋದಂ ೧೪-೨೪
ಯದ್ಯತ್ಪಶ್ಯನ್ ದೃಶಾ ೧೭-೨೧
ಯದಾ ದೀಕ್ಷಾಪ್ರವೇಶಸ್ಸ್ಯಾ ೯-೨೯
ಯದಾ ಯೋಗೀ ನಿಜಂ ೧೭-೩೫
ಯದ್ಭಾಸಾ ಭಾಸತೇ ವಿಶ್ವಂ ೧-೪
ಯದ್ಯಚ್ಚಿಂತಯತೇ ೧೪-೨೫
ಯದ್ಯತ್ಕರಮಾಲಂಬ್ಯ ೧೭-೪೦
ಯನ್ಮಾತ್ರಾ ಸಹಿತಂ ೧೯-೨೮
ಯಮಾದಿ ಯೋಗತಂತ್ರಜ್ಞಂ ೪-೭
ಯಯಾ ಮಹೇಶ್ವರ ೧-೯
ಯಶ್ಶಿವಸ್ಯ ಗುರುಜ್ಞೇಯೋ ೧೧-೨೧
ಯಸ್ಮಾದತಸ್ಸದಾಜಪ್ಯೋ ೮-೧೨
ಯಸ್ಮಾದೇತತ್ಸಮುತ್ಪನ್ನಂ ೧೦-೬೫
ಯಸ್ಮಿನ್ ಜ್ಯೋತಿಗಣಾಃ ೧೮-೩೩
ಯಸ್ಮಿನ್ ಜ್ಯೋತಿಷಿ ೨೦-೫೮
ಯಸ್ಮಿನ್ ಸಮಸ್ತವಸ್ತೂನಿ ೧೮-೩೪
ಯಸ್ಮಿನ್ನಪ್ರಾಪ್ತ ಕಲ್ಲೋಲೇ ೧೯-೧೭
ಯಸ್ಯ ಕಾರ್ಯದಶಾ ೨೦-೭೦
ಯಸ್ಯ ಜ್ಞಾನಂ ತಮೋ ಮಿಶ್ರಂ ೧೩-೧೪
ಯಸ್ಯ ಪ್ರತಾಪಮತುಲಂ ೨೧-೨೨
ಯಸ್ಯಾಚಾರ್ಯಕುಲಾಜ್ಞಾತ ೧-೧೯
ಯಸ್ಯೋರ್ಮಿ ಬುದ್ಬುದಾಭಾಸಃ ೧-೩
ಯಸ್ಸರ್ವಭೂತಾದಿ ಪತಿಂ ೯-೩೯
ಯಾಮಾಹುಃ ಸರ್ವಲೋಕಾನಾಂ ೧-೮
ಯಾವಂತಃ ಕರ್ಮಯಜ್ಞಾದ್ಯಾ ೮-೩೦
ಯುಗಪಚ್ಛಿವಲಿಂಗಾನಾಂ ೨೧-೩೦
ಯೇ ಧಾರಯಂತಿ ಹೃದಯೇ ೬-೪೦
ಯೇನ ರಕ್ಷಾವತೀ ಜಾತಾ ೧-೨೩
ಯೇ ಪಶ್ಯಂತಿ ಜಗಜ್ಜಾಲಂ ೧೧-೩೬
ಯೇ ಪ್ರಪನ್ನಾ ಮಹಾದೇವಂ ೧೧-೬೦
ಯೇ ಭಜಂತಿ ಮಹಾದೇವಂ ೧೧-೪೫
ಯೇ ಲಿಂಗಧಾರಿಣೋ ಲೋಕೇ ೯-೭೪
ಯೇವಂ ವಿಧೈರ್ಭಾವ ೧೨-೨೦
ಯೇವಮನ್ಯೇಪಿ ಬಹವೋ ೩-೭೮
ಯೇ ದ್ವೇಷ್ಟಿ ಸಕಲಾನ್ ೧೩-೧೯
ಯೇ ಲಿಂಗಧಾರೀ ನಿಯತಾಂತ ೬-೬೩
ಯಃ ಪ್ರಾಣಲಿಂಗಾರ್ಚನ ೧೨-೫೦
ರಕ್ಷಣಾತ್ ಸರ್ವಭೂತೇಭ್ಯೋ ೭-೫
ರಕ್ಷಾ ಚೇಶಾನ ವಕ್ತ್ರಾಚ್ಚ ೭-೯
ರಜ್ಜೌ ಸರ್ಪವದ್ಭಾತಿ ೧೦-೭೦
ರಹಸ್ಯಮೇ ತತ್ಸರ್ವಜ್ಞಃ ೨೦-೮೪
ರಾಗದ್ವೇಷಾದಿ ಸಂಪನ್ನಂ ೫-೭೩
ರಾಗದ್ವೇಷಾದಯೋ ೧೯-೮೯
ರಾವಣೋ ಹಿ ಮಮ ೨೧-೨೧
ರುದ್ರನೇತ್ರಸಮುತ್ಪನ್ನಾ ೭-೪೮
ರುದ್ರಾಕ್ಷಧಾರಣಾದೇವ ೭-೪೬
ರುದ್ರಾಕ್ಷಧಾರಣಾದೇವಾ ೭-೬೦
ರೇಣುಕ ತ್ವಾಂ ಗಣಾಧೀಶ ೨೧-೯
ರೇಣುಕ ತ್ವಾಂ ವಿಜಾನಾಮಿ ೪-೫೧
ರೇಣುಕೋಪಿಮಹಾತೇಜಾಃ ೨೧-೩೮
ಲಂಘನಂ ಮಮ ಭಕ್ತಾನಾಂ ೩-೭೨
ಲಯಂ ಗಚ್ಛತಿ ಯತ್ರೈವ ೬-೩೬

ಲಯಸ್ಸರ್ವಪದಾರ್ಥಾನಾಂ ೧೮-೬೪
ಲಕ್ಷ್ಮ್ಯಾದಿಶಕ್ತಿಯಸ್ಸರ್ವ ೬-೫೬
ಲಿಂಗಂ ಚ ದ್ವಿವಿಧಂ ಪ್ರೋಕ್ತಂ ೯-೬೦
ಲಿಂಗಂ ಚಿದಾತ್ಮಕಂ ೧೨-೩
ಲಿಂಗಂ ತು ತ್ರಿವಿಧಂ ಪ್ರೋಕ್ತಂ ೬-೪೭
ಲಿಂಗಕೋಟಿ ತ್ರಯಸ್ಯೈವ ೨೧-೩೧
ಲಿಂಗಧಾರಣಮಾಖ್ಯಾತಂ ೬-೨೯
ಲಿಂಗಧಾರಣ ಸಂಯುಕ್ತಂ ೬-೬
ಲಿಂಗಧಾರೀ ಸದಾ ಶುದ್ಧೋ ೬-೫೩
ಲಿಂಗನಿಷ್ಠಸ್ಯ ಕಿಂ ತಸ್ಯ ೧೦-೨೮
ಲಿಂಗನಿಷ್ಠಾದಿ ಭಾವೇನ ೧೧-೨
ಲಿಂಗನಿಷ್ಠಾಪರಂ ಶಾಂತಂ ೧೦-೨೯
ಲಿಂಗಪೂಜಾಮಕೃತ್ವಾತು ೧೦-೨೩
ಲಿಂಗಮೇವ ಪರಂಜ್ಯೋತಿಃ ೧೫-೩೨
ಲಿಂಗಸ್ಯ ಧಾರಣಂ ಪುಣ್ಯಂ ೬-೨೮
ಲಿಂಗಾಂಗಸ್ಥಲಭೇದಜ್ಞಂ ೬-೬
ಲಿಂಗಾರ್ಚನ ಪರಃ ಶುದ್ಧಃ ೧೦-೪೬
ಲಿಂಗಾರ್ಚನರತಯಾಶ್ಚ ೯-೪೫
ಲಿಂಗಾನ್ನಾಸ್ತಿ ಪರಂ ೧೨-೪೨
ಲಿಂಗೇ ಪ್ರಾಣಂ ಸಮಾಧಾಯ ೯-೮
ಲಿಂಗೇ ಯಸ್ಯ ಮನೋಲೀನಂ ೧೦-೨೭
ಲಿಂಗೈಕನಿಷ್ಠ ಹೃದಯಃ ೧೦-೩೦
ಲಿಂಗೈಕ್ಯೇ ತು ಸಮಾಪನ್ನೇ ೨೦-೨೧
ಲಿಂಗೈಶ್ಶಿವಸ್ಯ ಚೋದ್ದಿಷ್ಟೈ ೯-೧೯
ಲೀನೇ ತಸ್ಮಿನ್ ಶಾಂಕರೇ ೨೧-೫೫
ಲೋಪಾಮುದ್ರಾಕರಾ ೪-೩೬
ವಂದಾರುದೇವ ಮುಕುಟ ೩-೯
ವಡಬಾಗ್ನಿಶಿಖಾಜ್ವಾಲ ೪-೩೧
ವರ್ಣಾಶ್ರಮ ಸದಾಚಾರ ೧೫-೬೭
ವರ್ಣಾಶ್ರಮ ಸದಾಚಾರೈ ೧೪-೨೦
ವರ್ಣಾಶ್ರಮಾದಿ ಧರ್ಮಾಣಾಂ ೧೦-೩೫
ವಯಮಜ್ಞಾನಸಂಪನ್ನಾ ೨೧-೨೬
ವಶಿಷ್ಠ ವಾಮದೇವಾದ್ಯಾ ೮-೪೭
ವಶೀಕೃತ್ವಾತ್ಪ್ರಕೃತೇ ೧೬-೪೯
ವಸಿಷ್ಠಾದ್ಯಾ ಮಹಾಭಾಗಾ ೭-೪೨
ವಸಿಷ್ಠೋ ವಾಮದೇವಾಶ್ಚ ೩-೫೫
ವ್ಯತಿರೇಕಾತ್ಸ್ವರೂಪಸ್ಯ ೧೮-೪೬
ವ್ಯಾಸಾದೀನಾಂ ಕ್ಷಣಂ ೩-೬೦
ವಾಚಕ ಸ್ಸ ತು ವಿಜ್ಞೇಯಃ ೮-೨೮
ವಾಚಿಕಾತ್ತದುಪಾಂಶೋಶ್ಚ ೮-೩೨
ವಾಮಪಾರ್ಶ್ವ ನಿವಾಸಿನ್ಯಾ ೩-೨೪
ವಾಮಹಸ್ತತಲೇ ಭಸ್ಮಕ್ಷಿಪ್ತಾ ೭-೩೪
ವಾಲಾಗ್ರ ಶತಭಾಗೇನ ೧೮-೬
ವೀರಮಾಹೇಶ್ವರ ಗ್ರಾಹ್ಯಂ ೨೦-೮೫
ವೀರಶೈವ ಮಹಾತಂತ್ರಮ್ ೧-೩೦
ವಿದ್ಯಾಯಾಂ ರಮತೇ ಯಸ್ಮಾತ್ ೫-೧೭
ವಿದ್ಯಾಯಾಂ ಶಿವರೂಪಾಯಾಂ ೫-೧೫
ವಿದ್ಯಾವೈಶದ್ಯಕಾರಣಂ ೧೧-೧೪
ವಿಂಧ್ಯೋ ನಿರುಧ್ಯೋ ಭವತಾ ೪-೪೦
ವಿಧಾತುಮಖಿಲಾನ್ ೨-೧೮
ವಿಧಿಶ್ಶಿವನಿಯೋಗೇಯಂ ೧೬-೮
ವಿನಾಪ್ರಸಾದಮೀಶಸ್ಯ ೧೮-೬೨
ವಿಭೀಷಣ ಮಹಾಭಾಗ ೨೧-೧೪
ವಿಭೀಷಣ ವಿಶೇಷಜ್ಞ ೨೧-೨೫

ವಿಭೀಷಕೋಽಪಿ ೨೧-೩೭
ವಿಭೂತಿಪಟ್ಟಂ ದತ್ವಾ ೬-೧೯
ವಿಭೂತಿರ್ಭಸಿತಂ ಭಸ್ಮಂ ೭-೪
ವಿಭೂತಿರ್ಭೂತಿ ಹೇತುತ್ವಾತ್ ೭-೫
ವಿಮರ್ಶಾಖ್ಯಾ ಪರಾಶಕ್ತಿಃ ೨೦-೩೦
೨೦-೩೬
ವಿಮುಕ್ತಭೋಗಲಾಲಸ್ಯೋ ೧೧-೫೯
ವಿವೇಕಿನೋ ವಿರಕ್ತಸ್ಯ ೫-೮೧
ವಿವೇಕೀ ಶುದ್ಧ ಹೃದಯೋ ೫-೭೯
ವಿಮರ್ಶಭಾಂಡ ವಿನ್ಯಸ್ತ ೨೦-೩೪
ವಿಶುದ್ಧ ಜ್ಞಾನಕರಣಂ ೨-೧೧
ವಿಶುದ್ಧ ಭಸ್ಮ ಕೃತಯಂ ೪-೨೯
ವಿಶುದ್ಧಾಃ ಪ್ರಾಕೃತಾಶ್ಚೇತಿ ೧೦-೨೪
ವಿಶುದ್ಧೇಶು ವಿರಕ್ತೇಷು ೧೦-೭೭
ವಿಶ್ವಂ ಯತ್ರ ಲಯಂ ೨೦-೩೧
ವಿಶ್ವಂ ಶಿವಮಯಂ ಚೇತಿ ೧೪-೨೮
ವಿಶ್ವತೋ ಭಾಸಮಾನೋ ೧೮-೩೭
ವಿಶ್ವಸ್ಮಾದಧಿಕೋರುದ್ರೋ ೧೦-೮
ವಿಶ್ವಾತೀತಂ ಪರಂ ೧೫-೬೮
ವಿಶ್ವಾಧಾರ ಮಹಾ ಸಂವಿತ್ ೨೦-೩೩
ವಿಶ್ವಾಧಿಕತ್ವಮಿಾಶಸ್ಯ ೧೧-೩೩
ವಿಷಯಭ್ರಾಂತಿ ರಾಹಿತ್ಯ ೧೨-೧೯
ವಿಷಯಾನಂದ ಕಣಿಕಾ ೧೪-೪
ವಿಷಯಾಸಕ್ತ ಚಿತ್ತೋಽಪಿ ೧೭-೮೫
ವಿಹಾಯ ತ್ವತ್ಪದಾಂಭೋಜ ೩-೮೪
ವಿಹಾಯ ಬಾಹ್ಯ ಲಿಂಗಾನಿ ೧೫-೪೧
ವೀರಶೈವ ಶಿಖಾರತ್ನಂ ೧-೧೮
ವೀರಶೈವಾಸ್ತು ಷಡೇಧಾಃ ೫-೨೨
ವೀರಸಿದ್ಧಾಂತ ನಿರ್ವಾಹಕೃತ ೪-೮
ವೀ ಶಬ್ದೇ ನೋಚ್ಯತೇ ೫-೧೬
ವೃಕ್ಷಸ್ಥ ಪತ್ರ ಪುಷ್ಪಾದಿ ೨೦-೪೧
ವೃತ್ತಿಶೂನ್ಯೇ ಸ್ವಹೃದಯೇ ೧೪-೩೩
ವೇದ ಧರ್ಮಾಭಿಧಾಯಿತ್ವಾತ್ ೫-೧೨
ವೇದಮಾರ್ಗಾವಿರೋಧೇನ ೧-೨೬
ವೇದಶಾಸ್ತ್ರ ಪುರಾಣೇಷು ೬-೫೭
ವೇದಸಿದ್ಧಾಂತಯೋರೈಕ್ಯ ೫-೧೩
ವೇದಾಂತ ಜನ್ಯಂ ಯದ್ಜ್ಞಾನಂ ೫-೧೮
ವೇದಾಂತ ವಾಕ್ಯಜಾಂ ೧೨-೩೭
ವೇದೈಕ ದೇಶವರ್ತಿಭ್ಯಃ ೫-೭
ವೇದಃ ಪ್ರಧಾನಂ ಸರ್ವೇಷಾಂ ೫-೫
ವೈರಾಗ್ಯ ಜ್ಞಾನ ಯುಕ್ತಾನಾಂ ೬-೪೨
ವೈರಾಗ್ಯ ಸಂಪದೋ ಮೂಲಂ ೧೧-೧೫
ಶಂಭೋರಾಹ್ವಾನ ೩-೬೯
ಶಂಭೋರೇಕತ್ವ ೧೪-೧೮
ಶಂಭೋಃ ಶಿವಪ್ರಸಾದೇನ ೧೮-೬೧
ಶಕ್ತಿಃ ಪ್ರಧಾನಂ ವಾಮಾಖ್ಯಂ ೫-೧೧
ಶಬ್ದ ಸ್ಪರ್ಶಾದಿ ಸಂಪನ್ನೇ ೧೦-೧೪
ಶಬ್ದಾದಯೋಽಪಿ ವಿಷಯಾ ೨೦-೧೯
ಶಮೋ ದಮೋ ವಿವೇಕ ೧೩-೧೫
ಶರಣಸ್ಥಲಮಾಖ್ಯಾತಂ ೫-೨೪
ಶರಣಸ್ಥಲಮಾಶ್ರಿತ್ಯ ೧೯-೨
ಶರಣಸ್ಸರ್ವಭೂತಾನಾಂ ೧೧-೫೮
ಶರೀರಭೂತಾದೇತ ೧೦-೫೪
ಶರೀರಮೇವ ಚಾರ್ವಾಕೈಃ ೫-೫೫
ಶರೀರಾತ್ಪೃಥಗಾತ್ಮಾ ೫-೬೪

| | | | |
|---|---|---|---|
| ಶರೀರಾತ್ಮವಿವೇಕೇನ | ೫-೬೦ | ಶಿವಪ್ರಸಾದ ಸಂಪತ್ತ್ಯಾ | ೧೮-೬೦ |
| ಶರೀರೇಂದ್ರಿಯ ಬುದ್ಧಿಭ್ಯೋ | ೫-೬೨ | ಶಿವಪ್ರಸಾದೇ ಸತಿ | ೧೧-೭೬ |
| ಶ್ರವಣಂ ಕೀರ್ತನಂ ಶಂಭೋ | ೯-೨ | ಶಿವಭಕ್ತಿ ವಿಹೀನಸ್ಯ | ೧೧-೪೮ |
| ಶಾಂತತ್ವಾತ್ಪ್ರಾಣವೃತ್ತೀನಾಂ | ೧೭-೨೭ | ಶಿವಭಕ್ತಿ ವಿಹೀನಾ | ೯-೭೦ |
| ಶಾಂತೋ ದಾಂತಸ್ತಪಃ | ೧೭-೬೦ | ಶಿವಭಕ್ತಿ ವಿಹೀನಾನಾಂ | ೯-೭೭ |
| ಶಾಸನೀಯೋ ಭವೇದ್ಯಸ್ತು | ೧೭-೫೮ | ಶಿವಭಕ್ತಿ ಸಮಾವೇಶೇ | ೧೧-೫೪ |
| ಶಾಸ್ತ್ರಂ ತವ ಮುಖೋ | ೨೦-೭೭ | ಶಿವಭಕ್ತಿ ಸುಧಾಸಿಂಧು | ೧-೧೪ |
| ಶಾಸ್ತ್ರಂ ತು ವೀರಶೈವಾನಾಂ | ೫-೨೩ | ಶಿವಭಕ್ತಿಃ ಪರೇ | ೧೩-೧೬ |
| ಶಾಸ್ತ್ರಾಭ್ಯಾಸಾದಿ | ೧೬-೨೯ | ಶಿವಭಕ್ತೋ ಮಹಾತೇಜಾಃ | ೯-೨೮ |
| ಶಿಖಾಯಾಮೇಕಾಸ್ಯಂ | ೭-೫೪ | ಶಿವಭಾವನಯಾ | ೧೭-೮ |
| ಶಿರಸಾ ಧಾರಯೋದ್ಯಸ್ತು | ೯-೬೯ | ಶಿವಭಾವನಯಾ ಸರ್ವಂ | ೧೬-೭೦ |
| ಶಿವಂ ಭಾವಯ ಚಾತ್ಮಾನಂ | ೧೭-೭೯ | ಶಿವಭಾವೇ ಸ್ಥಿರೇ | ೧೯-೮೬ |
| ಶಿವಂ ವಿಶ್ವಂ ಗುರುಂ | ೧೪-೩೫ | ಶಿವಯೇವ ಪರಂ ಪಾತ್ರಂ | ೯-೮೮ |
| ಶಿವ ಇತ್ಯಕ್ಷರ ದ್ವಂದ್ವ | ೮-೧೦ | ಶಿವಯೇವ ಸಮಸ್ತಾನಾಂ | ೧೩-೧೦ |
| ಶಿವ ಏವ ಜಗತ್ಸರ್ವಂ | ೧೯-೮೪ | ಶಿವಯೋಗ ವಿಶೇಷಜ್ಞ | ೨೦-೭೩ |
| ಶಿವ ಏವ ಪರಂ ತತ್ತ್ವಂ | ೧೭-೭೬ | ಶಿವಯೋಗಿನಿ ಯದ್ದತ್ತಂ | ೯-೬೩ |
| ಶಿವ ಕ್ಷೇತ್ರೋತ್ಸವ | ೯-೪೮ | ಶಿವಯೋಗೀಶಿವಸ್ಸಾಕ್ಷಾತ್ | ೯-೬೬ |
| ಶಿವಜ್ಞಾನಂ ಮಹಾಘೋರ | ೯-೫೪ | ಶಿವಯೋಗೀ ಸಾಕ್ಷಾಚ್ಛಿವ | ೯-೮೯ |
| ಶಿವಜ್ಞಾನ ಸಮಾಪನ್ನ | ೧೪-೨೨ | ಶಿವಯೋಗೀ ಮಹತ್ಪಾತ್ರಂ | ೯-೯೦ |
| ಶಿವಜ್ಞಾನೇ ಸಮುತ್ಪನ್ನೇ | ೧೩-೧೧ | ಶಿವಯೋಗಿನಿ ಸಂತೃಪ್ತೇ | ೯-೯೨ |
| | ೧೩-೨೧ | ಶಿವಯೋಗ ಸಮಾಧಿಸ್ಥ | ೧೨-೫ |
| ಶಿವಜ್ಞಾನೈಕ ನಿಷ್ಠಸ್ಯ | ೧೬-೪೭ | ಶಿವ ರುದ್ರ ಮಹಾದೇವ | ೧-೬ |
| ಶಿವತತ್ತ್ವಾತ್ಪರಂ ನಾಸ್ತಿ | ೮-೨ | ಶಿವಲಿಂಗ ಪ್ರಸಾದಸ್ಯ | ೯-೭೮ |
| ಶಿವತತ್ತ್ವಾತ್ಸಮುತ್ಪನ್ನಂ | ೧೦-೬೬ | ಶಿವಲಿಂಗೇ ಶಿವಾಚಾರ್ಯೇ | ೯-೮೦ |
| ಶಿವನಿಂದಾಕರಂ ದೃಷ್ಟ್ವಾ | ೯-೩೭ | ಶಿವವೇಧಕರೇ ಜ್ಞಾನೇ | ೧೫-೨೯ |
| ಶಿವಪೂಜಾಪರೋಭೂತ್ವಾ | ೯-೪೦ | ಶಿವಶಕ್ತಿ ಸಮುತ್ಪನ್ನೇ | ೫-೩೩ |
| ಶಿವಪ್ರಸಾದಂ ಯದ್ದ್ರವ್ಯಂ | ೧೧-೭ | ಶಿವಶ್ಶರೀರ ಯೋಗೇಪಿ | ೧೭-೭ |

ಶಿವಶಾಸ್ತ್ರ ವಿಶೇಷಜ್ಞಃ ೨೧-೩೨
ಶಿವಸಂಸ್ಕಾರ ಯುಕ್ತೇಷು ೧೦-೩೩
ಶಿವಸಂಸ್ಕಾರ ಯೋಗೇ ೧೦-೨೨
ಶಿವಸಂಸ್ಕಾರ ಯೋಗೇನ ೧೦-೩೨
ಶಿವಸ್ಯ ದರ್ಶನಾತ್ಪುಂಸಾಂ ೧೬-೩೩
ಶಿವಸ್ಯ ಪರಿಕಾಯಸ್ಯ ೧೭೨೪
ಶಿವಸ್ಯಪರರೂಪಸ್ಯ ೧೭೩೪
ಶಿವಸ್ಯ ಪರಿಪೂರ್ಣಸ್ಯ ೧೯-೭೭
ಶಿವಸ್ಯ ಬೋಧಲಿಂಗಂ ೧೧-೨೫
ಶಿವಸ್ಸರ್ವಗತಶ್ಚಾ ಪಿ ೧೦-೫೯
ಶಿವಸ್ಯ ಸರ್ವಗತ್ವೇಽಪಿ ೧೦-೬೩
ಶಿವಸ್ತುತಿ ರಸಾಸ್ವಾದ ೧೦-೧೬
ಶಿವಸ್ಥಾನಾನಿ ತೀರ್ಥಾನಿ ೯-೪೭
ಶಿವಸಿದ್ಧಾಂತ ತತ್ತ್ವಜ್ಞಂ ೬-೭
ಶಿವಾಖ್ಯಂ ಪರಮಂ ೧೯-೭೦
ಶಿವಾಗಮ ಪರಿಜ್ಞಾನ ೧-೨೨
ಶಿವಾಗಮ ಸುಧಾಸಿಂಧು ೪-೬
ಶಿವಾಗಾರಮಿದಂ ಪ್ರೋಕ್ತಂ ೧೯-೫೪
ಶಿವಾಚಾರೇ ಶಿವಧ್ಯಾನೇ ೧೭-೬೨
ಶಿವಾಜ್ಞಾದಿ ಸಮುತ್ಪನ್ನಂ ೬-೩
ಶಿವಾತ್ಮಕಮಿದಂ ಸರ್ವಂ ೧೬-೩೧
ಶಿವಾತ್ಮ ಬೋಧೈಕ ೧೩-೩೬
ಶಿವಾತ್ಮೈಕ್ಯ ಮಹಾಬೋಧ ೪-೫೫
ಶಿವಾರ್ಥೇ ದೇಹಸಂತೋಷ ೯-೨೨
ಶಿವಾದನ್ಯಜ್ಜಗನ್ಮಿಥ್ಯಾ ೧೭-೬೬
ಶಿವಾದನ್ಯತ್ರ ವಿಜ್ಞಾನೇ ೧೩-೩೨
ಶಿವಾದ್ಯಾದಿ ಸಮುತ್ಪನ್ನಾ ೧-೧೦
ಶಿವಾದ್ವೈತಪರಂ ೧೬-೭೭
ಶಿವಾದ್ವೈತ ಪರಾನಂದ ೪-೪೩
ಶಿವಾದ್ವೈತ ಪರಿಜ್ಞಾನ ೧೮-೭೦
ಶಿವಾದ್ವೈತ ಪರಿಜ್ಞಾನೇ ೧೪-೧೭
ಶಿವಾನಂದಂ ಸಮಾಸಾದ್ಯ ೧೩-೭
ಶಿವಾಪಕರ್ಷ ಸಂಪ್ರಾಪ್ತೌ ೧೦-೨೦
ಶಿವಾಭಿದಂ ಪರಂ ಬ್ರಹ್ಮ ೨-೮
ಶಿವಾಯ ಶಿವೈಭಕ್ತಾಯ ೯-೮೬
ಶಿವಾಶ್ರಿತಾನಾಂ ಜಂತೂನಾಂ ೧೧-೫೧
ಶಿವಾಸಕ್ತ ಪರಾನಂದ ೧೩-೧೩
ಶಿವೇನ ವಿಹಿತೋ ಯಸ್ಮಾತ್ ೧೬-೬೦
ಶಿವೇ ನಿಶ್ಚಲಭಾವೇನ ೧೭-೫೦
ಶಿವೇನೈಕ್ಯಂ ಸಮಾಪನ್ನ ೧೪-೬
ಶಿವೇ ಪ್ರಾಣೋವಿಲೀನೇಽಪಿ ೧೭-೩೦
ಶಿವೇ ವಿಶ್ವಮಿದಂ ಸರ್ವಂ ೧೪-೩೦
ಶಿವೈಕಜ್ಞಾನಯುಕ್ತಸ್ಯ ೧೬-೩೭
ಶಿವೈಕಭಾವನಾಪನ್ನ ೧೪-೧೬
ಶಿವೋಕ್ತ ಧರ್ಮನಿಷ್ಠಾ ೧೦-೩೬
ಶಿವೋಹಮಿತಿ ಬಾವಸ್ಯ ೧೭-೭೮
ಶಿವೋಹಮಿತಿ ಭಾವೇನ ೧೭-೭೮
ಶಿವೋಹಮಿತಿ ಭಾವ್ಯೋಽಪಿ ೧೬-೧೬
ಶಿವೋಹಮಿತಿ ಯಸ್ಯಾಸ್ತಿ ೧೮-೪೫
ಶಿವೋ ಹಿ ಪರಮಃ ೧೬-೫
ಶಿಷ್ಯಸ್ಥಲಂ ತತಃ ೧೭-೪
ಶಿಷ್ಯಸ್ಯ ಪ್ರಾಣಮಾದಾಯ ೬-೨೪

ಶಿಷ್ಯೌದನಸ್ಥಲಂ ೨೦-೩
ಶಿಷ್ಯಾಣಾಂ ಹೃದಯಾಲೇಖ್ಯಂ ೧೫-೧೯
ಶೀಲಂ ಶೀವೈಕ ವಿಜ್ಞಾನಂ ೧೩-೩೧
ಶ್ರೀ ವೇದಾಗಮ ವೀರಶೈವ ೨೧-೫೬
ಶ್ರೀಶೈಲಸ್ಯೋತ್ತರೇಭಾಗೇ ೩-೮೭
ಶ್ರುತ್ವಾ ಲಿಂಗಾದ್ವಚನ ೨೧-೫೪
ಶುದ್ಧಾಂತಃಕರಣೇ ೫-೫೪
ಶುದ್ಧಾಂತಃಕರಣೇ ಜೀವೇ ೫-೫೮
ಶುದ್ಧಾಚಾರೋ ಶುದ್ಧ ಭಾವೋ ೧೬-೮೪
ಶುದ್ಧಾ ನಿಯಮ ಸಂಯುಕ್ತಾಃ ೧೧-೫೫
ಶುಭಮಾಸೇ ಶುಭತಿಥೌ ೬-೧೬
ಶೂನ್ಯಜ್ಞಾನಾದಿ ಸಂಕಲ್ಪೇ ೨೦-೬೯
ಶೂನ್ಯೇ ಚಿದಂಬರೇಸ್ಥಾನೇ ೧೮-೪೯
ಶ್ವೇತಸ್ಯ ಮಮ ಭಕ್ತಸ್ಯ ೩-೭೭
ಶೈವತಂತ್ರಮಿತಿ ಪ್ರೋಕ್ತಂ ೫-೮
ಶೈವಮಾರ್ಹೇಶ್ವರಶ್ಚೈವ ೫-೧೯
ಶೈವಾಗಮೇಷು ವೇದೇಷು ೭-೪೩
ಶೈವಿಭಕ್ತಿಃ ಸಮುತ್ಪನ್ನಾ ೫-೨೬
ಶೋಷಯೇತ್ಪುರುಷೇಣೈವ ೭-೧೫
ಸಂಚರತ್ತಮಥ ಶ್ರೇಣೀ ೩-೮
ಸಂದೇಹವನಸಂದೋಹ ೧೫-೧೭
ಸಂಪೂಜ್ಯ ತಂ ಯಥಾಶಾಸ್ತ್ರಂ ೪-೩೭
ಸಂಪೂರ್ಣ ಚಂದ್ರ ಸೌಭಾಗ್ಯ ೩-೨೭
ಸಂಭಾವಯಂ ಸ್ತಥಾ ೩-೬೩
ಸಂವಿದೇವ ಪರಾಕಾಷ್ಠಾ ೧೯-೭೨
ಸಂವಿದ್ವ್ಯೋಮ್ನಿ ೧೯-೯೯
ಸಂವಿಲ್ಲಿಂಗ ಪರಾಮರ್ಶಿ ೧೨-೧೦
ಸಂಸಾರಚಕ್ರ ನಿರ್ವಾಹ ೧೧-೭೪
ಸಂಸಾರತಿಮಿರಚ್ಛೇದೇ ೧೩-೮
ಸಂಸಾರತಿಮಿರೋನ್ಮಾಥಿ ೧೫-೧೪
ಸಂಸಾರ ನಾಟಕಭ್ರಾಂತಿ ೨೧-೪೭
ಸಂಸಾರ ವಿಷಕಾಂತಾರ ೩-೨೬
೧೭-೪೪
ಸಂಸಾರವಿಷಮೂರ್ಛಾಲು ೩-೧೨
ಸಂಸಾರವಿಷವೃಕ್ಷಸ್ಯ ೧೨-೩೦
ಸಂಸಾರವೈದ್ಯ ಸರ್ವಜ್ಞ ೨೧-೪೮
ಸಂಸಾರಸರ್ಪದಷ್ಟಾನಾಂ ೪-೪೯
ಸಂಸಾರಾರ್ತ ಶ್ಶಿವಂ ೧೭-೯
ಸಂಸ್ಕಾರೇಷು ಲಿಂಗೇಷು ೧೦-೪೮
ಸಕೃದುಚ್ಚಾರಮಾತ್ರೇಣ ೮-೩೯
ಸ ಚಾಭ್ಯಾಸವಶಾದ್ಭೂಯಃ ೧೭-೩೧
ಸಚ್ಚಿದಾನಂದ ಜಲಧೌ ೨೦-೧೩
ಸಚ್ಚಿದಾನಂದರೂಪಾಯ ೨-೧
ಸತ್ತಾತ್ಮನಾನುವೃತ್ತಂ ೧೯-೪೮
ಸತ್ತಾನಂದ ಪರಿಸ್ಫೂರ್ತಿ ೬-೩೨
ಸತ್ತಾ ಪ್ರಾಣಮಯಿ ೧೨-೧೨
ಸತೀವ ರಮಣೇ ಯಸ್ತು ೧೩-೫
ಸತು ಕಾಲವಶೇ ನೈವ ೨೧-೨೩
ಸತು ರಾಮಶರಾವಿದ್ಧಃ ೨೧-೨೪
ಸದ್ಯಸ್ಸಿದ್ಧಿಕರಂ ಪುಂಸಾಂ ೪-೫೪

| | |
|---|---|
| ಸದ್ಯಸ್ಸಿದ್ಧಿಕರಂ ಪುಂಸಾಂ | ೪-೫೪ |
| ಸದಾಚಾರ ಪ್ರಿಯಶ್ಶಂಭುಃ | ೧೬-೬೬ |
| ಸದಾಲಿಂಗೈಕನಿಷ್ಠಾನಾಂ | ೧೧-೬೭ |
| ಸದಾಶಿವಮುಖಾಶೇಷ | ೧-೫ |
| | ೨-೨ |
| ಸದಾಶಿವಾರ್ಚನೋಪಾಯ | ೧೬-೧೦ |
| ಸದಾಶಿವೈಕನಿಷ್ಠಾನಾಂ | ೯-೩೪ |
| ಸದ್ಯೋಜಾತಾದ್ವಿ ಭೂತಿಶ್ವ | ೭-೮ |
| ಸಪ್ತಕೋಟಿಷು ಮಂತ್ರೇಷು | ೮-೪ |
| ಸಭಾಂತರಗತಂ ತಂತ್ರಂ | ೩-೬೮ |
| ಸಮರ್ಥೌ ಸರ್ವಕಾರ್ಯೇಷು | ೨-೩೪ |
| ಸಮಶ್ಯ ತ್ರೌ ಚ ಮಿತ್ರೇಚ | ೧೧-೩೯ |
| ಸಮಸ್ತ ಜಗದಂಡಾನಾಂ | ೨೦-೩೫ |
| ಸಮಸ್ತ ಜಗದಾತ್ಮಾಽಪಿ | ೧೦-೭೩ |
| ಸಮಸ್ತ ಜಗದಾಧಾರ | ೨೧-೪೯ |
| ಸಮಸ್ತ ದೇವ ಕೈಂಕರ್ಯ | ೩-೮೩ |
| ಸಮಸ್ತ ಭುವನಾಧೀಶ | ೩-೬೪ |
| ಸಮಸ್ತ ಲೋಕನಿರ್ಮಾಣ | ೨-೧೩ |
| ಸಮಸ್ತಲೋಕ ಸಂದಾಹ | ೪-೫೦ |
| ಸಮಸ್ತ ಶಾಸ್ತ್ರ ಸಾರಜ್ಞಂ | ೨೧-೧೫ |
| ಸಮಹಾವೀರಶೈವಾನಾಂ | ೧-೨೪ |
| ಸಮ್ಯಕ್ ಜ್ಞಾನಾಗ್ನಿ | ೧೬-೫೧ |
| ಸಮಾಸೀನ ಮುನಿವರಂ | ೪-೩೮ |
| ಸಮುಜ್ವಲ ಜಟಾಜಾಲೈ | ೪-೨೮ |
| ಸರ್ವಾಂ ಗೋದ್ಧೂಲನಂ ಚಾಪಿ | ೭-೩೦ |
| ಸರ್ವಾತ್ಮ ನಿ ಪರೇ ತತ್ತ್ವೇ | ೨೦-೬೨ |
| ಸರ್ವಾಕಾರೇ ಚಿದಾನಂದೇ | ೨೦-೫೨ |
| ಸರ್ವೇಂದ್ರಿಯಾಣಾಂ ವ್ಯಾಪಾರೇ | ೧೯-೮೧ |
| ಸರ್ವಜ್ಞಸ್ಸರ್ವ ಕರ್ತಾ ಚ | ೧೯-೮೦ |
| ಸರ್ವೇಷಾಂ ದೇಹಿನಾಂ | ೧೯-೬೩ |
| ಸರ್ವಾನುಗ್ರಾಹಕ ಶ್ಶಂಭುಃ | ೧೮-೬೩ |
| ಸರ್ವಾಧಿಷ್ಠಾತೃಕಃ | ೧೮-೫೮ |
| ಸರ್ವೇಷಾಮಾತ್ಮಭೇದೇನಾಮ್ | ೧೮-೩೧ |
| ಸರ್ವೇಷಾಂ ಪ್ರೇರಕತ್ವೇನ | ೧೮-೨೮ |
| ಸರ್ವೇಂದ್ರಿಯಗತಂ ಸೌಖ್ಯಂ | ೧೭-೫೭ |
| ಸರ್ವಂ ಕರ್ಮಾರ್ಚನಂ | ೧೭-೫೬ |
| ಸರ್ವೇಂದ್ರಿಯ ಪ್ರವೃತ್ತ್ಯಾ | ೧೭-೨೩ |
| ಸರ್ವೇಂದ್ರಿಯ ನಿರೂಢ್ಯೋಽಪಿ | ೧೭-೧೮ |
| ಸರ್ವಾರ್ಥಸಾಧಕ | ೧೫-೨೫ |
| ಸರ್ವತತ್ತ್ವೋಪರಿಗತಂ | ೧೨-೨೨ |
| ಸರ್ವೇಷಾಮಪಿ ಯಜ್ಞಾನಾಂ | ೧೧-೬೧ |
| ಸರ್ವಾತ್ಮಾಽಪಿ ಪರಿಚ್ಛಿನ್ನೋ | ೧೦-೭೫ |
| ಸರ್ವಗತಂ ಮಹೇಶಸ್ಯ | ೧೦-೬೦ |
| ಸರ್ವಗತನಿರಾಸಶ್ಚ | ೧೦-೬ |
| ಸರ್ವಾದ್ವೈತವಿಚಾರಸ್ಯ | ೧೦-೪೦ |
| ಸರ್ವಗತ್ವೇ ಮಹೇಶಸ್ಯ | ೧೦-೫೭ |
| ಸರ್ವಗೋಽಪಿಸ್ಥಿತಃ | ೧೦-೫೮ |
| ಸರ್ವಮಂಗಲಮಾಂಗಲ್ಯಂ | ೯-೬೮ |
| ಸರ್ವಾಲಂಕಾರ ಸರಿಯುಕ್ತಂ | ೮-೨೬ |
| ಸರ್ವೇ ಚ ಜ್ಞಾನಯೋಗೇನ | ೬-೪೪ |
| ಸರ್ವಲಕ್ಷಣ ಸಂಪನ್ನೇ | ೬-೨೩ |
| ಸರ್ವವಿದ್ಯಾವಿಶೇಷಜ್ಞಾ | ೨-೩೦ |

ಸರ್ವೇಷಾ ಶೈವತಂ ಪ್ರಾಣಾಮ್ ೧-೩೧
ಸರ್ವಸ್ವಂ ವೀರಶೈವಾನಾಂ ೧-೨೭
ಸ ಶಂಭುರ್ಭಗವಾನ್ ೨-೧೪
ಸಹಜಂದಾನಮುತ್ಸೃಷ್ಟಂ ೯-೮೫
ಸಹಭೋಜನಮಿತ್ಯೇಷಾಂ ೧೪-೩
ಸ್ಥಲಭೇದಾ ನವಪ್ರೋಕ್ತಾಃ ೧೭-೨
ಸ್ಥಲಭೇದಾಸ್ತ್ರ ಯಾ ೨೦-೧
ಸ್ಥಲಭೇದಾಸ್ಸಮಾಖ್ಯಾತಾಃ ೧೯-೧
ಸ್ಥಲಮೇ ತತ್ಸಮಾಖ್ಯಾತಂ ೧೩-೩
ಸ್ಥಲಾನಾಂ ನವಕಂ ೧೬-೧
೧೮-೨
೨೦-೨
ಸ್ಥಲಾನಿ ತಾನಿ ಭೋಕ್ತಾನಿ ೧೭-೧
ಸ್ವಕರ್ಮ ಪರಿಪಾಕೇನ ೫-೫೩
೫-೫೭
ಸ್ವಚ್ಛಂದ ಚಾರೀ ಲೋಕೇಸ್ಮಿನ್ ೪-೧೨
ಸ್ವಚ್ಛಂದಾಚಾರ ರಸಿಕಃ ೨೧-೪
ಸ್ವಚ್ಛಂದಾಚಾರ ಸಂತುಷ್ಟೋ ೧೫-೫೩
ಸ್ವಜಾತಿಕುಲಜಾನ್ ಧರ್ಮಾನ್ ೧೦-೩೧
ಸ್ವತಂತ್ರಃ ಸರ್ವಕೃತ್ಯೇಷು ೧೫-೬೬
ಸ್ವಪ್ನಜಾತಂ ಯಥಾಜ್ಞಾನಂ ೧೯-೪೫
ಸ್ವಪ್ನೇದೃಷ್ಟಂ ಯಥಾವಸ್ತು ೨೦-೨೪
ಸ್ವಪ್ರಕಾಶವಿರಾಜಂತ ೧-೫
ಸ್ವಮಾರ್ಗಾಚಾರವರ್ತಿಭ್ಯ ೯-೫೦
ಸ್ವಮಾರ್ಗಾನಿರತಾಚಾರ ೯-೩೧
ಸ್ವಯಮೇವ ಸ್ವಯಂ ೧೫-೬೫
ಸ್ವರೂಪಂ ಪೃಥಗೇ ೧೯-೫
ಸ್ವರೂಪಜ್ಞಾನ ಸಂಪನ್ನೋ ೧೫-೫೮
ಸ್ವಸ್ಯ ಸರ್ವಸ್ಯ ಲೋಕಸ್ಯ ೧೪-೨೯
ಸ್ವಸ್ವರೂಪಂ ಚಿದಾಕಾರಂ ೧೬-೫೪
ಸಾಂಖ್ಯಂ ಯೋಗ ಪಾಂಚರಾತ್ರಂ ೫-೪
ಸಾ ದೀಕ್ಷಾ ತ್ರಿವಿಧಾ ಪ್ರೋಕ್ತಾ ೬-೧೨
ಸಾ ಪುನರ್ಭಿದ್ಯತೇ ತ್ರೇಧಾ ೯-೧೬
ಸಾ ಭಕ್ತಿರ್ದ್ವಿವಿಧಾ ಜ್ಞೇಯಾ ೯-೬
ಸಾಭ್ಯಂತರಾಭಕ್ತಿರಿತಿ ೯-೯
ಸ್ಥಾಪ್ಯತಾಂ ಸರ್ವಲೋಕೇಷು ೨೦-೮೩
ಸ್ನಾನಕಾಲೇ ಕರೌಪಾಕಾ ೭-೨೦
ಸ್ಫಾಟಿಕಂ ಶೈಲಜಂ ವಾಪಿ ೬-೨೨
ಸ್ವಾಂತಸ್ಥ ಶಿವಲಿಂಗಸ್ಯ ೧೨-೩೨
ಸ್ವಾನುಭೂತಿ ಪ್ರಮಾಣೇನ ೧೫-೪೩
ಸ್ವಾಭಾವಿಕ ಮಹೈ ಶ್ವರ್ಯ ೩-೬೬
ಸಾಕ್ಷಾತ್ಮತಂ ಪರಂತತ್ತ್ವಂ ೧೦-೪೩
ಸಾಕ್ಷಾತ್ಪೃತೇ ಪರೇ ೧೮-೬೬
ಸಿದ್ಧಾಂತಾಖ್ಯೆ ಮಹಾತಂತ್ರೇ ೫-೧೪
ಸಿದ್ಧಾ ಪಂಚಾಕ್ಷರಾಸ್ವಾಸ್ಸ ೮-೪೫
ಸಿಂಹಾಸನೇ ಶುದ್ಧದೇಶೇ ೯-೭
ಸ್ಥಿರಮಧ್ಯ ಶಿವಜ್ಞಾನಂ ೪-೪೮
ಸ್ಥಿರಯೌವನ ಲಾವಣ್ಯ ೩-೩೧
ಸುಕೃತಂ ದುಷ್ಕೃತಂ ಚಾಪಿ ೧೧-೫೦
ಸುಕೃತೀ ದುಷ್ಕೃತೀ ೧೪-೧೯

| | |
|---|---|
| ಸುಖದುಃಖಾದಿ ಭಾವೇಷು | ೨೦-೫೭ |
| ಸುಷುಪ್ತಸ್ಯ ಯಥಾವಸ್ತು | ೧೮-೬೭ |
| ಸುಹೃತ್ಸು ಬಂಧು ವರ್ಗೇಷು | ೫-೮೦ |
| ಸೂರ್ಯಸ್ಯೋದಯ | ೧೭-೭೨ |
| ಸ್ಥೂಲೇಕ್ರಿಯಾಸಮಾಪತ್ತಿಃ | ೧೫-೪೮ |
| ಸೂಕ್ಷ್ಮರಂಧ್ರಂ ವಿಜಾನೀಯಾತ್ | ೧೨-೨೭ |
| ಸೃಷ್ಟಿಂ ವಿಧೇಹಿ ಭಗವಾನ್ | ೨-೨೫ |
| ಸ್ವೇಚ್ಛಯಾ ಸಂಚರೇತ್ | ೧೫-೭೧ |
| ಸ್ವೇಚ್ಛಾವಿಗ್ರಹ ಯುಕ್ತಾಯ | ೧-೬ |
| ಸೇವೇತಪರಮಾಚಾರ್ಯಂ | ೬-೭ |
| ಸೇವ್ಯೋಗುರುಸ್ಸ್ಮೃತ್ಯೋ | ೧೮-೭೨ |
| ಸೇವ್ಯೋ ಗುರುಸ್ಸಮಸ್ತಾನಾಂ | ೧೮-೭೧ |
| ಸೈಷಾ ವಿದ್ಯಾ ಪರಾ | ೧೪-೪೩ |
| ಸೋಮೇಶ್ವರಾಭಿದಾನಸ್ಯ | ೩-೮೮ |
| ಹಸ್ತಪಾದ್ಯಾದಿ ಸಾಮ್ಯೇನ | ೧೧-೨೧ |
| ಹಾರನೀಹಾರ ಕರ್ಪೂರ | ೪-೨೨ |
| ಹಾರ ನೂಪುರ ಕೇಯೂರ | ೨-೩೫ |
| ಹಾಸ್ಯ ನೃತ್ಯಂ ಕ್ಷಣಂ | ೩-೬೧ |
| ಹಿತ ಮೇವಾಚರೇನ್ನಿತ್ಯಂ | ೯-೫೬ |
| ಹೂಯಮಾನಾಗ್ನಿ ಸಂತಾನ | ೪-೨೪ |
| ಹೃತ್ಪ್ರದೇಶಮಘೋರೇಣ | ೭-೨೨ |
| ಹೇಮಾರವಿಂದ ಕಲಿಕಾ | ೩-೫ |
| ಹೇಮಾರವಿಂದ ನಿಷ್ಯಂದ | ೪-೨೦ |
| ಷಟ್ಸ್ಥಲೋಕ್ತ ಸದಾಚಾರ | ೧೫-೧ |
| ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ | ೭-೫೫ |
| | ೭-೫೬ |
| ಷಡಧ್ವಾತೀತಯೋಗೇನ | ೧೫-೧೦ |
| ಕ್ಷಮಾಭಿಷೇಕ ಸಲಿಲಂ | ೧೨-೧೬ |
| ಕ್ಷಯಾತಿಶಯಸಂಯುಕಾ | ೧೦-೧೩ |


— ೦ —